प्रसूतितन्त्रम्, स्त्रीरोगाः, कौमारभृत्यञ्च

ಪ್ರಸೂತಿತನ್ತ್ರಮ್, ಸ್ತ್ರೀರೋಗಾಃ, ಕೌಮಾರಭೃತ್ಯಂ ಚ

संग्राहकः

ल. न. भट्टाचार्यः

आयुर्वेदविद्वान् (मैसूरु), आयुर्वेदरत्नम् (अयोध्या)

सहसंपादकः

यल्. अश्वत्थनारायणः आ. वि.

COMPILED AND TRANSLATED INTO KANNADA

BY

PANDIT N. L. BHATTACHARYA, A. V. & A. RATNA

Retired Junior Pandit & Lecturer

Govt. Ay. & U. College, Mysore

ASSISTED BY

L. ASWATHANARAYAN, A.V. & L.A.M.S.

Bharadwaja Vaidyasala, V. V. Mohalla, Mysore.

... राजकीय शाखामुद्रणयन्त्रालये सम्मुद्र्य प्रकाश्य च विजयतेतराम्

१९५७

Price Rs. 3-12-0

प्रसूतितन्त्रम्, स्त्रीरोगाः, कौमारभृत्यञ्च

ಪ್ರಸೂತಿತನ್ತ್ರಮ್, ಸ್ತ್ರೀರೋಗಾಃ, ಕೌಮಾರಭೃತ್ಯಂ ಚ

संग्राहकः

ल. न. भट्टाचार्यः

आयुर्वेदविद्वान् (मैसूरु), आयुर्वेदरत्नम् (अयोध्या)

सहसंपादकः

यल्. अश्वत्थनारायणः आ. वि.

COMPILED AND TRANSLATED INTO KANNADA

BY

PANDIT N. L. BHATTACHARYA, A. V. & A. RATNA

Retired Junior Pandit & Lecturer

Govt. Ay. & U. College, Mysore

ASSISTED BY

L. ASWATHANARAYAN, A.V. & L.A.M.S.

Bharadwaja Vaidyasala, V. V. Mohalla, Mysore.

इदं पुस्तुकं महीशूरु राजकीय शाखामुद्रणयन्त्रालये सम्मुद्रय प्रकाश्य च विजयतेतराम्

१९५७

प्रथममुद्रणम् २००० प्रतयः

ಪ್ರಸ್ತಾವನೆ

ಈ ಸುಂದರವಾದ ಮೈಸೂರು ಪಟ್ಟಣದಲ್ಲಿ ೧೯೦೮ನೆಯ ಸಾಲಿನ ಜನವರಿ ಮಾಹೆ ಎರಡನೆಯ ತಾರೀಖಿನಲ್ಲಿ ಉದ್ಘಾಟಿಸಲ್ಪಟ್ಟ ಆಯುರ್ವೇದ ಮಹಾಪಾಠಶಾಲೆಯಲ್ಲಿ ವ್ಯಾಸಂಗ ಮಾಡಲು ಸುಸಂಘಟಿತರಾದ ಪ್ರಪ್ರಥಮ ವಿದ್ಯಾರ್ಥಿವೃಂದದವರಲ್ಲೊಬ್ಬನಾದ ನಾನು ಪ್ರಧಾನಾಧ್ಯಾಪಕರಾದ ಸುಪ್ರಸಿದ್ಧರಾಗಿ ದಿವಂಗತರಾದ ಶ್ರೀ ಕೆಂಪುರಾಮಾ ಪಂಡಿತರವರ ಮತ್ತು ವೇದಾನ್ತಾಯುರ್ವೇದೋಭಯಶಾಸ್ತ್ರಪ್ರವೀಣರಾದ ದಿವಂಗತ ಶ್ರೀ ಅಂಬಳೇ ಸುಬ್ರಾಯಪಂಡಿತರವರ ಉದಾರ ಕೃಪಾಕಟಾಕ್ಷಗಳಿಂದ ಸಮಗ್ರವಾದ ಆಯುರ್ವೇದಶಾಸ್ತ್ರವನ್ನೂ, ದಿವಂಗತ ಡಾಕ್ಟರ್ ಎಸ್. ವೆಂಕೋಬರಾವ್, ಬಿ.ಎ. ಅಪಾಥಕೆರಿಯವರಲ್ಲಿ ಅನಾಟಮಿ, ಫಿಜಿಯಾಲಜಿ, ಮಿಡ್‌ವೈಫೆರಿ ಮೊದಲಾದ ಪಾಶ್ಚಾತ್ಯ ವೈದ್ಯಶಾಸ್ತ್ರಭಾಗಗಳನ್ನೂ ಐದು ವರ್ಷಗಳು ಅಧ್ಯಯನ ಮಾಡಿ ಪ್ಯಾಲೆಸ್ ಡಿಸ್ಪೆನ್ಸರಿ, ಜನರಲ್ ಆಸ್ಪತ್ರೆ ಮೊದಲಾದ ರಾಜಧಾನಿಯಲ್ಲಿರುವ ವೈದ್ಯಶಾಲೆಗಳಲ್ಲೂ, ಮುನಿಸಿಪಲ್ ಆಯುರ್ವೇದ ಆಸ್ಪತ್ರೆಯಲ್ಲೂ ಕರ್ಮಾಭ್ಯಾಸವನ್ನು ಮಾಡಿ ಅನೇಕ ವಿಧ ಶಸ್ತ್ರಕ್ರಿಯೆಗಳನ್ನೂ, ಶವಚ್ಛೇದನ ವಿಧಾನಗಳನ್ನೂ ಪ್ರತ್ಯಕ್ಷೀಕರಿಸಿ ೧೯೧೪ನೆಯ ಇಸವಿಯಲ್ಲಿ ಜರುಗಿದ ಆಯುರ್ವೇದ ವಿದ್ವತ್ ಪರೀಕ್ಷೆಯಲ್ಲಿ ಸಮರ್ಪಕವಾಗಿ ಉತ್ತೀರ್ಣನಾಗಿ "ಆಯುರ್ವೇದ ವಿದ್ವಾನ್" ಎಂಬ ಪ್ರಶಸ್ತಿಪತ್ರವನ್ನು ಪಡೆದು ಸ್ವತಂತ್ರವಾಗಿ ರೋಗ ಚಿಕಿತ್ಸೆಯನ್ನು ಮಾಡುತ್ತಾ ಇದ್ದು ೧೯೨೯ನೆಯ ಇಸವಿಯ ಜುಲೈ ಮಾಹೆಯಲ್ಲಿ ಮೇಲ್ಕಂಡ ಮಹಾಪಾಠಶಾಲೆಯಲ್ಲಿ ಅಧ್ಯಾಪಕನಾಗಿಯೂ ಮತ್ತು ಚಿಕಿತ್ಸಕನಾಗಿಯೂ ನಿಯೋಜಿತನಾಗಿ ಅಲ್ಲಿನ ವಿವಿಧ ಶಾಖೆಗಳಲ್ಲಿಯೂ ಯಥಾಶಕ್ತಿಯಾಗಿ ಜನಸೇವೆಯನ್ನು ಸಲ್ಲಿಸಿರುತ್ತೇನೆ. ಮಹಾಪಾಠಶಾಲೆಯ ನಿಯಮಾವಳಿಗನುಸಾರವಾಗಿ ಉಚ್ಚಶ್ರೇಣಿಯ ವಿದ್ಯಾರ್ಥಿಗಳಿಗೆ ಪ್ರಸೂತಿಶಾಸ್ತ್ರವನ್ನು ಬೋಧಿಸುವ ಸದವಕಾಶ ಲಭಿಸಿದ್ದರಿಂದಲೂ, ಪಾಶ್ಚಾತ್ಯ ವೈದ್ಯಕದಲ್ಲಿರುವಂತೆ ಆಯುರ್ವೇದಭಾಗಗಳಲ್ಲಿ ಪ್ರಸೂತಿತನ್ತ್ರವೆಂಬ ಸ್ವತಂತ್ರ ಗ್ರಂಥವು ದೊರಕದಿದ್ದುದರಿಂದಲೂ, ಚರಕ, ಸುಶ್ರುತ, ಅಷ್ಟಾಙ್ಗಹೃದಯ ಸಂಹಿತೆ ಮೊದಲಾದ ಆರ್ಷಗ್ರಂಥಗಳಿಂದಲೂ, ಪ್ರತ್ಯಕ್ಷಶಾರೀರ, ಅಷ್ಟಾಙ್ಗಶಾರೀರ ಮೊದಲಾದ ಆಧುನಿಕ ಗ್ರಂಥಗಳಿಂದಲೂ ವಿಷಯ ಸಂಗ್ರಹಣ ಮಾಡಿ ಬೋಧಿಸುತ್ತಿರುವ ಸಂದರ್ಭಗಳಲ್ಲಿ ಸಹೃದಯರಾದ ಸಹಾಧ್ಯಾಪಕರಿಂದಲೂ ಮತ್ತು ಸಚ್ಛಿಷ್ಯರುಗಳಿಂದಲೂ ಪ್ರೇರಿತನಾದ ನಾನು ಪ್ರಸೂತಿತನ್ತ್ರ, ಸ್ತ್ರೀರೋಗ ಮತ್ತು ಕೌಮಾರಭೃತ್ಯಗಳೆಂಬ ಮೂರು ಭಾಗಗಳನ್ನೊಳಗೊಂಡಿರುವ ಈ ಸಣ್ಣ ಸಂಕಲನ ಗ್ರಂಥವನ್ನು ರಚಿಸಿ ಸುಲಭವಾಗಿ ಬೋಧೆಯಾಗಲು ಕರ್ಣಾಟಕ ಭಾಷೆಯಲ್ಲಿ ದೀಪಿಕೆಯನ್ನು ಬರೆದಿರುತ್ತೇನೆ. ಇದು ಕೇವಲ ವೈದ್ಯರಿಗೆ ಮಾತ್ರವೇ ಅಲ್ಲದೆ ಜನಸಾಮಾನ್ಯರಿಗೂ ಮುಖ್ಯವಾಗಿ ಸ್ತ್ರೀಯರಿಗೂ, ಬಾಲಕರ ಪೋಷಕರಿಗೂ ಅತ್ಯನ್ತ ಪ್ರಯೋಜಕವಾಗಿರುತ್ತದೆ.

ಈ ಗ್ರಂಥವನ್ನು ಪರಿಶೀಲಿಸಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದುದಲ್ಲದೆ ಈ ಪುಸ್ತಕವನ್ನು ಮುದ್ರಣಗೊಳಿಸಿ ಸದರಿ ಕಾಲೇಜಿನ ನಿಯಮಾವಳಿಯಲ್ಲಿ ಪಠ್ಯಪುಸ್ತಕವನ್ನಾಗಿ ಮೊಕರೂರ್ ಮಾಡುವಂತೆ ಮೈಸೂರು ಸರ್ಕಾರಕ್ಕೆ ಶಿಫಾರಸ್ ಮಾಡಿದ ಸೆಂಟ್ರಲ್ ಬೋರ್ಡ್ ಆಫ್ ಇಣ್ಡಿಯನ್ ಮೆಡಿಸಿನ್ ಸಂಸ್ಥೆಯ ಕಮಿಟಿ ಮೆಂಬರುಗಳು ಮುಖ್ಯವಾಗಿ ನನ್ನ ಸಹಾಧ್ಯಾಯಿಗಳೂ ಆಪ್ತಮಿತ್ರರೂ ಆದ ಆಯುರ್ವೇದ ವಿದ್ವಾನ್ ಭಿಷಕ್ ಚೂಡಾಮಣಿ ಡಾಕ್ಟರ್ ಶ್ರೀ ವೈ. ಲಕ್ಷ್ಮೀನರಸಿಂಹಶಾಸ್ತ್ರೀ, ಎಲ್.ಎಮ್.ಪಿ.; ಸುಪ್ರಸಿದ್ಧರಾದ ಆಯುರ್ವೇದ ವಿದ್ವಾನ್ ಭಿಷಗ್ರತ್ನ ಶ್ರೀ ಬಿ. ವಿ. ಪಂಡಿತ್, ಸದ್ವೈದ್ಯಶಾಲಾ, ನಂಜನಗೂಡು; ಆಯುರ್ವೇದ ಕಾಲೇಜಿನ ಪ್ರಾಧ್ಯಾಪಕರಾಗಿದ್ದ

*

ಡಾಕ್ಟರ್ ಶ್ರೀ ಸಿ. ದ್ವಾರಕಾನಾಥ್, ಎಲ್.ಐ.ಎಮ್. ಎಂಡ್ ಜೆಡ್.ಟಿ. (ಹ್ಯಾಂಬರ್ಗ್) ಮತ್ತು ಮೈಸೂರು ಗೌರ್ನಮೆಂಟ್ ಆಯುರ್ವೇದಿಕ್ ಎಂಡ್ ಯೂನಾನಿ ಕಾಲೇಜಿನ ಪದವೀಧರರ ಸಂಸ್ಥೆಯ ಅಧ್ಯಕ್ಷರಾದ ಡಾಕ್ಟರ್ ಶ್ರೀ ಎನ್. ಗುಂಡಪ್ಪ, ಎಲ್.ಎ.ಎಂ.ಎಸ್. ಎಲ್.ಎಂ.ಪಿ. ಇವರುಗಳ ಸಲಹೆಗಳನ್ನು ಮನ್ನಣೆ ಮಾಡಿ ಈ ಗ್ರಂಥದ ಮುದ್ರಣಕಾರ್ಯ ವನ್ನು ಘನ ಮೈಸೂರು ಸರ್ಕಾರವೇ ಕೈಗೊಂಡು ಮುದ್ರಣಾಧಿಕಾರವನ್ನು ಸ್ವಾಯತ್ತೀ, ಕರಿಸಿರುವುದಲ್ಲದೆ ಇದಕ್ಕೆ ಪ್ರತಿಫಲವಾಗಿ ಗ್ರಂಥಕರ್ತನಾದ ನನಗೆ ೧೦೦೦ ರೂಪಾಯಿ ಗಳನ್ನೂ, ೨೫೦ ಮುದ್ರಣಪ್ರತಿಗಳನ್ನೂ ಬಹುಮಾನರೂಪವಾಗಿ ದಯೆಪಾಲಿಸಿರುತ್ತಾರೆ. ಈ ಔದಾರ್ಯಕ್ಕಾಗಿ ನಾನು ಘನ ಮೈಸೂರು ಸರ್ಕಾರಕ್ಕೆ ತುಂಬಾ ಕೃತಜ್ಞನಾಗಿರು ತ್ತೇನೆ. ಮೇಲ್ಕಂಡ ಕಮಿಟಿಯ ಮೆಂಬರುಗಳಿಗೆಲ್ಲಾ ನನ್ನ ಹೃತ್ಪೂರ್ವಕವಾದ ವಂದನೆಗಳು.

ಈ ಗ್ರಂಥರಚನೆಯು ಮತ್ತು ಪ್ರೂಫ್‌ರೀಡಿಂಗ್ ಮೊದಲಾದ ಕಾರ್ಯಗಳಲ್ಲಿ ಅತ್ಯಂತ ಶ್ರದ್ಧೆಯಿಂದ ಸಹಕರಿಸಿ ಸಹಾಯಮಾಡಿದ ಮೂಲಿಕಾ ವೈದ್ಯಗ್ರಂಥಕರ್ತನಾದ ನನ್ನ ಮಗ ಆಯುರ್ವೇದ ವಿದ್ವಾನ್ ಟಿ॥ ಎಲ್. ಅಶ್ವತ್ಥನಾರಾಯಣ, ಎಲ್.ಎ.ಎಂ.ಎಸ್., ಇವರನ್ನು ಈ ಗ್ರಂಥದ ಸಹಸಂಪಾದಕನನ್ನಾಗಿ ಪರಿಗಣಿಸಿರುತ್ತೇನೆ.

ಈ ಗ್ರಂಥರಚನೆಯಲ್ಲಿ ಸೂಕ್ತ ಸಲಹೆಗಳನ್ನಿತ್ತ ನನ್ನ ಸಚ್ಛಿಷ್ಯರೂ ಮತ್ತು ಮಿತ್ರರೂ ಆದ ಗೌರ್ನಮೆಂಟ್ ಆಯುರ್ವೇದಿಕ್ ಎಂಡ್ ಯೂನಾನಿ ಕಾಲೇಜಿನ ಅಧ್ಯಾಪಕರು ಗಳಾದ ಆಯುರ್ವೇದ ವಿದ್ವಾನ್ ಡಾಕ್ಟರ್ ಎನ್. ಲಕ್ಷ್ಮೀನಾರಾಯಣ, ಯಲ್.ಎ.ಯಂ. ಯಸ್., ಯಂ.ಎ.ಯಂ.ಯಸ್., ಎಂಡ್ ಯಲ್.ಯಂ.ಎಫ್. ಮತ್ತು ಆಯುರ್ವೇದ ವಿದ್ವಾನ್ ಡಾಕ್ಟರ್ ಎಮ್. ಮಹಾದೇವಶಾಸ್ತ್ರೀ, ಯಲ್.ಎ.ಯಂ.ಯಸ್., ಇವರುಗಳ ಉಪಕಾರವನ್ನು ಸ್ಮರಿಸುತ್ತೇನೆ.

ಈ ಗ್ರಂಥವನ್ನು ಮುದ್ರಿಸಿಕೊಡುವುದಾಗಿ ಒಪ್ಪಿಗೆಯನ್ನಿತ್ತ ಸರ್ಕಾರಕ್ಕೆ ಸಲಹೆ ಮಾಡಿದ ನಮ್ಮ ಮಿತ್ರರಾದ ಶ್ರೀ ಡಿ. ಯಸ್. ಗುರುಬಸವಪ್ಪ, ಬಿ.ಯಸ್‌ಸಿ., ಡೈರೆಕ್ಟರ್, ಗೌರ್ನಮೆಂಟ್ ಪ್ರಿಟಿಂಗ್ ಸ್ಟೇಷನರಿ ಎಂಡ್ ಪಬ್ಲಿಕೇಷನ್ಸ್, ಬೆಂಗಳೂರು, ಇವರ ಉಪ ಕೃತಿಯನ್ನೆಂದಿಗೂ ಮರೆಯಲಾರೆ. ಈ ಗ್ರಂಥಮುದ್ರಣದ ೧ನೆಯ ಫಾರಮ್ಮನ್ನು ಖುದ್ದು ನಿಂತು ಮುದ್ರಣಮಾಡಿಸಿ ಬಲು ಶೀಘ್ರದಲ್ಲೇ ಈ ಗ್ರಂಥದ ಮುದ್ರಣಕಾರ್ಯವನ್ನು ಪರಿ ಪೂರ್ತಿ ಮಾಡಲು ಭರವಸೆಯನ್ನಿತ್ತು ಸ್ವಲ್ಪ ದಿನಗಳಲ್ಲೇ ನಿರ್ವಾಣವನ್ನು ಪಡೆದ ಮೈಸೂರು ಗೌರ್ನಮೆಂಟ್ ಬ್ರಾಂಚ್ ಪ್ರೆಸ್ಸಿನ ಸೀನಿಯರ್ ಅಸಿಸ್ಟೆಂಟ್ ಡೈರೆಕ್ಟರಾಗಿದ್ದ ಶ್ರೀವಿಜಯಪಾಲ್ಮೈಯ್ಯ ಇವರಿಗೆ ಹೃತ್ಪೂರ್ವಕವಾಗಿ ನೇತ್ರಾಶ್ರುಪೂರಿತ ಪರಿತಾಪವನ್ನು ಸೂಚಿಸಿ ಇವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇನೆ. ಮತ್ತು ಈ ಗ್ರಂಥವನ್ನು ಅಂದವಾಗಿ ಮುದ್ರಣಗೊಳಿಸಿ ಶೀಘ್ರವಾಗಿ ಪ್ರಚಾರವಾಗುವಂತೆ ಸಹಾಯ ಮಾಡಿದ ಶ್ರೀ ಎಂ. ಎ. ಶ್ರೀರಾಮು, ಎಂ.ಎಸ್‌ಸಿ., ಸೀನಿಯರ್ ಅಸಿಸ್ಟೆಂಟ್ ಡೈರೆಕ್ಟರ್, ಗೌರ್ನಮೆಂಟ್ ಬ್ರಾಂಚ್ ಪ್ರೆಸ್, ಮೈಸೂರು, ಇವರಿಗೂ ಈ ಕಾರ್ಯದಲ್ಲಿ ಸಹಕರಿಸಿದ ಇವರ ಅಧಿಕಾರವರ್ಗದವರಿಗೂ ಅನಂತ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಮೈಸೂರು, **ಯನ್. ಲಕ್ಷ್ಮೀನೃಸಿಂಹಭಟ್ಟಾಚಾರ್ಯಃ,**

ಶ್ರೀ ದುರ್ಮುಖಿ ಸಂ। ಶ್ರಾವಣ ಶು।೧೪ ಆಯುರ್ವೇದ ವಿದ್ವಾನ್ (ಮೈಸೂರು),

ಸೋಮವಾರ ತಾ। ೨೪-೮-೧೯೫೬ ಆಯುರ್ವೇದ ರತ್ನ (ಅಯೋಧ್ಯ),

ಮೈಸೂರು ರಾಜಕೀಯ ಆಯುರ್ವೇದ ಮಹಾಪಾಠ

ಶಾಲೆಯ ನಿವೃತ್ತ ಅಧ್ಯಾಪಕ ಮತ್ತು ಚಿಕಿತ್ಸಕ.

प्रसूतितन्त्र स्त्रीरोग कौमारभृत्येषु प्रमाणतयोद्धृतानामादर्शग्रन्थानां सूची

ಪ್ರಸೂತಿತನ್ತ್ರ ಸ್ತ್ರೀರೋಗ ಕೌಮಾರಭೃತ್ಯೇಷು ಪ್ರಮಾಣತಯೋ-ದ್ಧೃತಾನಾಮಾದರ್ಶಗ್ರನ್ಥಾನಾಂ ಸೂಚೀ

संज्ञा	ग्रन्थनाम	ಸಂಜ್ಞಾ	ಗ್ರನ್ಥನಾಮ
च। सं।	चरकसंहिता.	ಚ। ಸಂ।	ಚರಕಸಂಹಿತಾ.
सु। सं।	सुश्रुतसंहिता.	ಸು। ಸಂ।	ಸುಶ್ರುತಸಂಹಿತಾ.
अ। सं।	अष्टाङ्गसङ्ग्रहः.	ಅ। ಸಂ।	ಅಷ್ಟಾಂಗಸಂಗ್ರಹಃ.
अ। हृ।	अष्टाङ्गहृदयम्.	ಅ। ಹೃ।	ಅಷ್ಟಾಙ್ಗಹೃದಯಮ್
भा। प्र।	भावप्रकाशः.	ಭಾ। ಪ್ರ।	ಭಾವಪ್ರಕಾಶಃ.
चक्र।	चक्रदत्तः.	ಚಕ್ರ।	ಚಕ್ರದತ್ತಃ.
भै। र।	भैषज्यरत्नावली.	ಭೈ। ರ।	ಭೈಷಜ್ಯರತ್ನಾವಳೀ.
यो। कौ।	योनिव्यापत्प्रसूतिकौमारतन्त्रम्.	ಯೋ। ಕೌ।	ಯೋನಿವ್ಯಾಪತ್ಪ್ರಸೂತಿ ಕೌಮಾರತನ್ತ್ರಮ್
रस। र।	रसरत्नाकरः.	ರಸ। ರ।	ರಸರತ್ನಾಕರಃ.
रस। स।	रसरत्नसमुच्चयः.	ರಸ। ಸ।	ರಸರತ್ನಸಮುಚ್ಚಯಃ.
हारीतः।	हारीतसंहिता.	ಹಾರೀತಃ।	ಹಾರೀತಸಂಹಿತಾ.
का। सं।	काश्यपसंहिता. (वृद्धजीवकीयतन्त्रम्)	ಕಾ। ಸಂ।	ಕಾಶ್ಯಪಸಂಹಿತಾ. (ವೃದ್ಧಜೀವಕೀಯತನ್ತ್ರಮ್)
च। चि।	चमत्कारचिन्तामणिः.	ಚ। ಚಿ।	ಚಮತ್ಕಾರಚಿನ್ತಾಮಣಿಃ.
हितो।	हितोपदेशः.	ಹಿತೋ।	ಹಿತೋಪದೇಶಃ.
योग।	योगरत्नाकरः.	ಯೋಗ।	ಯೋಗರತ್ನಾಕರಃ.
शार्ङ्ग।	शार्ङ्गधरसंहिता.	ಶಾರ್ಙ್ಗ।	ಶಾರ್ಙ್ಗಧರಸಂಹಿತಾ.
बाला।	बालातङ्कहारी. (श्री चापेड्करकृतः)	ಬಾಲಾ।	ಬಾಲಾತಙ್ಕಹಾರೀ. (ಶ್ರೀ ಚಾಪೇಡಕರಕೃತಃ)

पारिभाषिकपदानामाङ्ग्लभाषायां सांकेतिकनामानि

ಪಾರಿಭಾಷಿಕಪದಾನಾಮಾಙ್ಗ್ಲಭಾಷಾಯಾಂ ಸಾಂಕೇತಿಕನಾಮಾನಿ

अकालदन्त:	ಅಕಾಲದನ್ತಃ	Premature teething
आर्तवरक्त:	ಆರ್ತವರಕ್ತಃ	Menstrual blood
आक्षेपक:	ಆಕ್ಷೇಪಕಃ	Convulsions
अस्थि	ಅಸ್ಥಿ	Bone
अपूर्णमासप्रसूति:	ಅಪೂರ್ಣಮಾಸಪ್ರಸೂತಿಃ	Premature Labour
अपस्मार:	ಅಪಸ್ಮಾರಃ	Epilepsy
अन्ननलिका	ಅನ್ನನಳಿಕಾ	Aesophagus
अन्त:फल:	ಅನ್ತಃಫಲಃ	Ovary
अनाहार:	ಅನಾಹಾರಃ	Starvation
अण्डाकृति:	ಅಣ್ಡಾಕೃತಿಃ	Oval shaped
अणुवीक्षणयन्त्रम्	ಅಣುವೀಕ್ಷಣಯನ್ತ್ರಮ್	Microscope
अज्ञातगर्भा	ಅಜ್ಞಾತಗರ್ಭಾ	Doubtful Pregnancy
अर्श:	ಅರ್ಶಃ	Congenital Haemorrhoids
अश्मरी	ಅಶ್ಮರೀ	Vesical Calculus
अजगल्लिका	ಅಜಗಲ್ಲಿಕಾ	Sebaceous Cyst
अहिपूतना	ಅಹಿಪೂತನಾ	Pruritis Anii, Napkin-rash
अपरा	ಅಪರಾ	Placenta
आर्तव:	ಆರ್ತವಃ	Liquor folliculi
आर्तवबीजम्	ಆರ್ತವಬೀಜಮ್	Ovum
आशया:	ಆಶಯಾಃ	Reservoirs
आमाशय:	ಆಮಾಶಯಃ	Stomach
अन्त्राणि	ಅನ್ತ್ರಾಣಿ	Intestines
अग्न्याशय:	ಅಗ್ನ್ಯಾಶಯಃ	Deodenum
क्लोम	ಕ್ಲೋಮ	Right Lung

अन्ननाडी	ಅನ್ನನಾಡೀ	Alimentary Canal
अपकर्षणम्	ಅಪಕರ್ಷಣಮ್	Taking out
आर्तवबीजम् (यौवतम्)	ಆರ್ತವಬೀಜಮ್ (ಯೌವತಮ್)	Ovum
अपरायुः	ಅಪರಾಯುಃ	Amnion
आव्यः	ಆವ್ಯಃ	Labour Pains
अर्दितम्	ಅರ್ದಿತಮ್	Facial Paralysis
आक्षेपकः	ಆಕ್ಷೇಪಕಃ	Toximia, Eclampsia, Convulsions
अपतन्त्रकः	ಅಪತನ್ತ್ರಕಃ	Eclampsiac Convulsions
अतीसारः	ಅತೀಸಾರಃ	Diarrhoea
आध्मानः	ಆಧ್ಮಾನಃ	Flatulence
उत्कर्षणम्	ಉತ್ಕರ್ಷಣಮ್	Putting up
उत्कर्तनम्	ಉತ್ಕರ್ತನಮ್	Vertical cuts
उत्फुल्लरोगः	ಉತ್ಫುಲ್ಲರೋಗಃ	Peritonitis
उपविष्टकः	ಉಪವಿಷ್ಟಕಃ	Uterine tumour
उल्बः	ಉಲ್ಬಃ	Vernix Caseosa
उदरगुहा (कुक्षिः)	ಉದರಗುಹಾ (ಕುಕ್ಷಿಃ)	Abdomenal cavity
उपदंशः	ಉಪದಂಶಃ	Soft chancre
उपशीर्षकः	ಉಪಶೀರ್ಷಕಃ	Fatty tumour
ऋतुः	ಋತುಃ	Menstruation
ऋतुकालः	ಋತುಕಾಲಃ	Duration of time fit for conception
ऋजूकरण	ಋಜೂಕರಣ	Putting in the proper place
कटीगुहा	ಕಟೀಗುಹಾ	Pelvic cavity
कटीसक्तः	ಕಟೀಸಕ್ತಃ	Impacted breech
कर्णपाली / कर्णशष्कुली	ಕರ್ಣಪಾಳೀ / ಕರ್ಣಶಷ್ಕುಲೀ	External ear
कर्णपीठः	ಕರ್ಣಪೀಠಃ	Pinna of the ear
कर्मेन्द्रियाणि	ಕರ್ಮೇನ್ದ್ರಿಯಾಣಿ	Motor organs
कुरण्डः	ಕುರಣ್ಡಃ	Architis

कुकूणकः	ಕುಕೂಣಕಃ	Ulcerative blepharitis.
कालातीतस्थायिगर्भः	ಕಾಲಾತೀತಸ್ಥಾಯಿಗರ್ಭಃ	Prolonged pregnancy.
कोशपातुकी	ಕೋಶಪಾತುಕೀ	Deidue reflexa.
कर्णकुहरम्	ಕರ್ಣಕುಹರಮ್	External auditary meatus
कपोलः	ಕಪೋಲಃ	Cheek.
कनीनिका	ಕನೀನಿಕಾ	Pupil.
करतलम्	ಕರತಲಮ್	Palm of the hand.
कामोन्मादः	ಕಾಮೋನ್ಮಾದಃ	Satyriasis.
कृच्छ्रार्तवः	ಕೃಚ್ಛ್ರಾರ್ತವಃ	Dysmenorrhoea
कोथः	ಕೋಥಃ	Putrifaction.
कोशः	ಕೋಶಃ	Cell.
कललम्	ಕಲಲಮ್	Monula.
कण्डूः	ಕಣ್ಡೂಃ	Pruritis.
गर्भाशयः	ಗರ್ಭಾಶಯಃ	Uterus.
गर्भगतयः	ಗರ್ಭಗತಯಃ	Foetal movements.
गर्भपातः	ಗರ್ಭಪಾತಃ	Miscarriage.
गर्भस्रावः	ಗರ್ಭಸ್ರಾವಃ	Abortion.
गर्भाधानम्	ಗರ್ಭಾಧಾನಮ್	Conception.
गर्भोदरमलम्	ಗರ್ಭೋದರಮಲಮ್	Meconium.
गर्भनाडी	ಗರ್ಭನಾಡೀ	Umbilical cord.
गुदम्	ಗುದಮ್	Anus.
गुदपाकः	ಗುದಪಾಕಃ	Anal abscess.
गुदकुट्टः	ಗುದಕುಟ್ಟಃ	Pruritis, Napkinrash.
गलितच्युतः	ಗಳಿತಚ್ಯುತಃ	Detached and expelled
ग्रन्थिः	ಗ್ರನ್ಥಿಃ	Gland, tumour.
ग्रीवा	ಗ್ರೀವಾ ನಳಿಕಾ	Trachea.
गोळानि	ಗೋಳಾನಿ	Glands.
गात्रम्	ಗಾತ್ರಮ್	Body.
गात्रशोषः	ಗಾತ್ರಶೋಷಃ	Marasmus.
गर्भाशयनाडी	ಗರ್ಭಾಶಯನಾಡೀ	Uterine tube.
गर्भाशयधमनी	ಗರ್ಭಾಶಯಧಮನೀ	Uterine artery.

ग्रहणी	ಗ್ರಹಣೀ	Chronic diarrhoea, spru
घुर्घुरश्वास:	ಘುರ್ಘುರಶ್ವಾಸಃ	Stertarous breathing.
चिह्नम्	ಚಿಹ್ನಮ್	Sign.
चूचुका:	ಚೂಚುಕಾಃ	Nipples.
चोरकरोग:	ಚೋರಕರೋಗಃ	
चौर्योन्माद:	ಚೌರ್ಯೋನ್ಮಾದಃ	Kleptomania.
जरायु:	ಜರಾಯುಃ	Placenta.
जरायुदोषा:	ಜರಾಯುದೋಷಾಃ	Diseases of the decidua or amniotic membrane
जलपरीक्षा	ಜಲಪರೀಕ್ಷಾ	Hydrostatic test.
जलमज्जन	ಜಲಮಜ್ಜನ	Drowning.
जलौका:	ಜಲೌಕಾಃ	Leeches.
जीवनयन्त्रम्	ಜೀವನಯನ್ತ್ರಮ್	Vital organ.
तालु	ತಾಲು	Palate.
तालुकण्टक: (पात:)	ತಾಲುಕಣ್ಟಕಃ (ಪಾತಃ)	Polypuson hardpalate, pharyngitis, Inflammation of uvula.
तुण्डी	ತುಣ್ಡೀ	Strangulated Umbilical hernia.
त्रिधातव:	ತ್ರಿಧಾತವಃ	The three vital principles or the three component parts of the body.
त्वरणाख्या	ತ್ವರಣಾಖ್ಯಾ	Quickening.
दन्तोद्भेद:	ದನ್ತೋದ್ಭೇದಃ	Teething.
दन्तपात:	ದನ್ತಪಾತಃ	Falling of the teeth.
दारण	ದಾರಣ	Tearing.
दाहक	ದಾಹಕ	Corrosive.
दुर्घटना	ದುರ್ಘಟನಾ	Accident.
दुष्टव्रण:	ದುಷ್ಟವ್ರಣಃ	Cancer.
दौहृदम्	ದೌಹೃದಮ್	Morning sickness, cravings of a pregnant woman.
दोषा:	ದೋಷಾಃ	The three pathological principles of the body.

धातवः	ಧಾತವಃ	Nutritive fluids or tissues.
धृवविग्रहः	ಧೃವವಿಗ್ರಹಃ	Polar body.
धमनी	ಧಮನೀ	Pulse.
धमनीग्रन्थिः	ಧಮನೀಗ್ರಂಥಿಃ	Anurism.
ध्वंसकः	ಧ್ವಂಸಕಃ	Corrosive.
नपुंसकः	ನಪುಂಸಕಃ	Impotent.
नाभिपाकः	ನಾಭಿಪಾಕಃ	Imflammation of the navel.
नाभिकूपः	ನಾಭಿಕೂಪಃ	Navel.
निदानम्	ನಿದಾನಮ್	Pathology.
निर्णयः	ನಿರ್ಣಯಃ	Diagnosis.
नीलिमा	ನೀಲಿಮಾ	Lividity.
नरषण्डः	ನರಷಣ್ಣಃ	Eunuch (male)
नारीषण्डः	ನಾರೀಷಣ್ಡಃ	Eunuch (Female)
नेत्रगोलकः	ನೇತ್ರಗೋಳಕಃ	Eyeball.
नन्दनामा	ನನ್ದನಾಮಾ	Albuminuria.
नागोदरः	ನಾಗೋದರಃ	Fleshy mole, fibroids, Mal-development of the fœtus.
पारिगर्भिकः	ಪಾರಿಗರ್ಭಿಕಃ	Pining.
परपातुकी	ಪರಪಾತುಕೀ	Decidue Veera.
परायुः	ಪರಾಯುಃ	Charon.
परिघः	ಪರಿಘಃ	Transverse presentation
पाण्डुरोगः	ಪಾಣ್ಡುರೋಗಃ	Anæmia.
प्रतिखुरः	ಪ್ರತಿಖುರಃ	Head and feet presentation.
पशुमैथुनम्	ಪಶುಮೈಥುನಮ್	Beastiality.
पुरुषमैथुनम्	ಪುರುಷಮೈಥುನಮ್	Sodomy.
पूर्वप्रवर्तकः	ಪೂರ್ವಪ್ರವರ್ತಕಃ	Predisposing cause.
प्रकृतिः	ಪ್ರಕೃತಿಃ	Nature.
प्रथमप्रसवः	ಪ್ರಥಮಪ್ರಸವಃ	Primiparae.
प्रसारणम्	ಪ್ರಸಾರಣಮ್	Expansion.

प्रसारितम्	ಪ್ರಸಾರಿತಮ್	Dilated.
प्राणायतनानि	ಪ್ರಾಣಾಯತನಾನಿ	Seats of life.
प्रसूत्यनन्तर आक्षेपकः	ಪ್ರಸೂತ್ಯನನ್ತರ ಆಕ್ಷೇಪಕಃ	Eclampsia.
प्लीहा	ಪ್ಲೀಹಾ	Spleen.
फुफ्फुसः	ಫುಪ್ಫುಸಃ	Lungs.
फुफ्फुसधमनी	ಫುಪ್ಫುಸಧಮನೀ	Pulmonary artery.
पटलानि	ಪಟಲಾನಿ	Layers.
बन्धनस्नायुः	ಬನ್ಧನಸ್ನಾಯುಃ	Ligament.
बन्धनी	ಬನ್ಧನೀ	Ligature.
बस्त्याशयः	ಬಸ್ತ್ಯಾಶಯಃ	Bladder.
बालहत्या	ಬಾಲಹತ್ಯಾ	Infanticide.
बालरोगः	ಬಾಲರೋಗಃ	Infantile diseases.
बाष्पः	ಬಾಷ್ಪಃ	Gas, tears.
बाह्यपदार्थः	ಬಾಹ್ಯಪದಾರ್ಥಃ	Foreign body.
बाह्यः	ಬಾಹ್ಯಃ	External.
बीजकः	ಬೀಜಕಃ	Presentation of the head with both hands.
बीजस्रोतसी	ಬೀಜಸ್ರೋತಸೀ	Fallopian-tubes.
भगः	ಭಗಃ	Vagina.
भगसमस्फीतिः	ಭಗಸಮಸ್ಫೀತಿಃ	Symphasis pubis.
भगतोरणिका	ಭಗತೋರಣಿಕಾ	Vault of vagina.
बीजकोशः	ಬೀಜಕೋಶಃ	Ovaries.
बृहदन्त्रम्	ಬೃಹದನ್ತ್ರಮ್	Colon.
मक्कल्लः	ಮಕ್ಕಲ್ಲಃ	Pains after labour.
माया	ಮಾಯಾ	Illusion.
मलाशयः	ಮಲಾಶಯಃ	Rectum.
मस्तिष्कम्	ಮಸ್ತಿಷ್ಕಮ್	Brain.
महाधमनी	ಮಹಾಧಮನೀ	Aorta.
मांसपिण्डः	ಮಾಂಸಪಿಣ್ಡಃ	Fleshy mole.
मांसपेशी	ಮಾಂಸಪೇಶೀ	Muscle.
मूत्रलम्	ಮೂತ್ರಲಮ್	Diuretic.
मूत्रमार्गः	ಮೂತ್ರಮಾರ್ಗಃ	Urethra.

महापद्मविसर्पः	ಮಹಾಪದ್ಮ ವಿಸರ್ಪಃ	Cellulitis.
मसूरिका	ಮಸೂರಿಕಾ	Small Pox.
मूकत्वम्	ಮೂಕತ್ವಮ್	Aphonia.
मृतगर्भिणीबालकोद्धारः	ಮೃತಗರ್ಭಿಣೀ ಬಾಲಕೋದ್ಧಾರಃ	Post-mortem Caesarian section.
मौखिकः	ಮೌಖಿಕಃ	Oral.
मस्तुलुङ्गः	ಮಸ್ತುಲುಙ್ಗಃ	Nervous tissue, brain matter.
मेदोपकर्षकः	ಮೇದೋಪಕರ್ಷಕಃ	Fatty degeneration.
मृत्युकालः	ಮೃತ್ಯುಕಾಲಃ	Fatal period.
मूढगर्भः	ಮೂಢಗರ್ಭಃ	Mal-presentations.
मूत्रपिण्डविकारः	ಮೂತ್ರಪಿಣ್ಡವಿಕಾರಃ	Anuria, scanty urine.
मर्मरशब्दः	ಮರ್ಮರಶಬ್ದಃ	Uterine soufle.
मूर्धा	ಮೂರ್ಧಾ	Vertex.
योनिछदः	ಯೋನಿಛದಃ	Hymen.
योनिव्यापत्	ಯೋನಿವ್ಯಾಪತ್	Diseases of the Vagina
योनिकन्दः	ಯೋನಿಕನ್ದಃ	Vaginal polypus.
योनिसंवरणम्	ಯೋನಿಸಂವರಣಮ್	Contraction of the Vagina.
रान्ता	ರಾನ್ತಾ	Abnormal implantation of the ovum.
रक्तगुल्मः	ರಕ್ತಗುಲ್ಮಃ	Bloody-mole.
रक्तप्रदरः	ರಕ್ತಪ್ರದರಃ	Menorrhagia.
रक्तग्रन्थिः	ರಕ್ತಗ್ರನ್ಥಿಃ	Embolism.
रक्तस्रावः	ರಕ್ತಸ್ರಾವಃ	Hæmorrhage.
रक्ताधिकता	ರಕ್ತಾಧಿಕತಾ	Hyperimia, Congestion of blood.
लक्षणम्	ಲಕ್ಷಣಮ್	Symptoms.
लीनगर्भः	ಲೀನಗರ್ಭಃ	Undeveloped featus
यकृत्	ಯಕೃತ್	Liver.
योनिस्पन्दनम्	ಯೋನಿಸ್ಪನ್ದನಮ್	Vaginal pulsations.
योनिक्षालनम्	ಯೋನಿಕ್ಷಾಳನಮ್	Douche.
योषापस्मारः	ಯೋಷಾಪಸ್ಮಾರಃ	Hysteria.

योन्यञ्जलिः	ಯೋನ್ಯಂಜಲಿಃ	Forechette.
वर्णविकृतिः	ವರ್ಣವಿಕೃತಿಃ	Discolouration.
वर्णवैचित्र्यम्	ವರ್ಣವೈಚಿತ್ರ್ಯಮ್	Mottling.
वार्धक्यम्	ವಾರ್ಧಕ್ಯಮ್	Old age.
वायुपूर्णकोशः	ವಾಯುಪೂರ್ಣಕೋಶಃ	Alvedic.
विटपः	ವಿಟಪಃ	Perineum.
वृक्कः	ವೃಕ್ಕಃ	Kidney.
विसर्पः	ವಿಸರ್ಪಃ	Erysipelas.
विष्कम्भकः (विष्टम्भगर्भः)	ವಿಷ್ಕಮ್ಭಕಃ (ವಿಷ್ಟಮ್ಭಗರ್ಭಃ)	Intra-uterine death of the foetus
शुक्रम्	ಶುಕ್ರಮ್	Semen.
शुक्रबीजम् (पौरुषम्)	ಶುಕ್ರಬೀಜಮ್ (ಪೌರುಷಮ್)	Spermatozoon
श्वयथुः	ಶ್ವಯಥುಃ	Oedema.
शिरःकपालानि	ಶಿರಃಕಪಾಲಾನಿ	Cranial bones.
शिरोविदारणविधिः	ಶಿರೋವಿದಾರಣವಿಧಿಃ	Craneotomy.
श्वेतप्रदरः	ಶ್ವೇತಪ್ರದರಃ	Leucorrhoea.
वन्ध्यात्वम्	ವನ್ಧ್ಯಾತ್ವಮ್	Sterility, barrenness.
सिराः	ಸಿರಾಃ	Veins.
शिरच्छेदः	ಶಿರಚ್ಛೇದಃ	Decapitation.
शवच्छेदः	ಶವಚ್ಛೇದಃ	Post-mortem.
शिशुः	ಶಿಶುಃ	Foetus (after 3 months).
पोतः	ಪೋತಃ	Embryo (before 3 months).
बालः	ಬಾಲಃ	Child (after delivery).
शिरस्यतिजलसंचयः	ಶಿರಸ್ಯತಿಜಲಸಂಚಯಃ	Hydrocephalus.
सूतिकारोगः	ಸೂತಿಕಾರೋಗಃ	Puerperal fever.
स्तन्यदुष्टिः	ಸ್ತನ್ಯದುಷ್ಟಿಃ	Diseased milk.
स्तनरोगः	ಸ್ತನರೋಗಃ	Mammary inflammation
स्तन्यजननानि	ಸ್ತನ್ಯಜನನಾನಿ	Galactogogues.
स्तन्यातिवृद्धिः	ಸ್ತನ್ಯಾತಿವೃದ್ಧಿಃ	Galactorrhoea.

स्तनचूचुकः	ಸ್ತನಚೂಚುಕಃ	Nipple.
स्तनबहिःपरिवेषः	ಸ್ತನಬಹಿಃಪರಿವೇಷಃ	Secondary arolia
संकीलकः	ಸಂಕೀಲಕಃ	Vertex presentation.
स्तन्योत्थज्वरः	ಸ್ತನ್ಯೋತ್ಥಜ್ವರಃ	Fever of lactation.
स्नायु (मांस) गुल्मः	ಸ್ನಾಯು (ಮಾಂಸ) ಗುಲ್ಮಃ	Fibroids.
संकुचितश्रोणिगुहा	ಸಂಕುಚಿತಶ್ರೋಣಿಗುಹಾ	Contracted pelvis.
संकोचनम्	ಸಂಕೋಚನಮ್	Rigidity.
सन्धिवातः	ಸನ್ಧಿವಾತಃ	Rheumatism.
संन्यासः	ಸಂನ್ಯಾಸಃ	Apoplexy.
सम्मोहनम्	ಸಮ್ಮೋಹನಮ್	Trance.
सूतिकोन्मादः	ಸೂತಿಕೋನ್ಮಾದಃ	Puerperal mania.
स्तनः	ಸ್ತನಃ	Mammae.
स्तम्भनः	ಸ್ತಮ್ಭನಃ	Suspension.
स्त्रीमैथुनम्	ಸ್ತ್ರೀಮೈಥುನಮ್	Tribadism.
बलात्कारमैथुनम्	ಬಲಾತ್ಕಾರಮೈಥುನಮ್	Rape.
हृदयस्वनाः	ಹೃದಯಸ್ವನಾಃ	Heart beats.
क्षीणार्तवा	ಕ್ಷೀಣಾರ್ತವಾ	Amenorrhoea.
छर्दिः	ಛರ್ದಿಃ	Vomitting.
गर्भातिवृद्धिः	ಗರ್ಭಾತಿವೃದ್ಧಿಃ	Pregnancy oedematus.
गर्भविदारणविधिः	ಗರ್ಭವಿದಾರಣವಿಧಿಃ	Embryotomy.

ವಿಷಯಾನುಕ್ರಮಣಿಕಾ

ಪ್ರಸೂತಿತನ್ತ್ರಮ್

ಪ್ರಥಮೋಽಧ್ಯಾಯಃ

ದ್ವಿತೀಯೋಽಧ್ಯಾಯಃ

ತೃತೀಯೋಽಧ್ಯಾಯಃ

ಚತುರ್ಥೋಽಧ್ಯಾಯಃ

ಪಂಚಮೋಽಧ್ಯಾಯಃ

ಷಷ್ಠೋಽಧ್ಯಾಯಃ

ವಿಷಯಃ ... ಪೃಷ್ಠಸಂಖ್ಯಾ

ಸಪ್ತಮೋಽಧ್ಯಾಯಃ

ಅಷ್ಟಮೋಽಧ್ಯಾಯಃ

ನವಮೋಽಧ್ಯಾಯಃ

ದಶಮೋಽಧ್ಯಾಯಃ

ಇತಿ ಪ್ರಸೂತಿತನ್ತ್ರಮ್

ಸ್ತ್ರೀರೋಗಾಃ

ಇತಿ ಸ್ತ್ರೀರೋಗಾಃ

ಕೌಮಾರಭೃತ್ಯಮ್

ಪ್ರಥಮೋಽಧ್ಯಾಯಃ

ದ್ವಿತೀಯೋಽಧ್ಯಾಯಃ

ತೃತೀಯೋಽಧ್ಯಾಯಃ

प्रसूतितन्त्र–स्त्रीरोग–कौमारभृत्यानां विषयसूची

(संस्कृतभागः)

प्रसूतितन्त्रम्

कौमारभृत्यम्

ಪ್ರಸೂತಿತನ್ತ್ರಸ್ಯ ಶುದ್ಧಾಶುದ್ಧವಿವರಣಮ್

ಪುಟ	ಪಙ್ತಿ	ಅಶುದ್ಧ	ಶುದ್ಧ
೧	೮	ಶ್ರೀತ್ರಿಕೂಟೇ	(ತ್ರಿಮಕೂಟೇ)
೨೦	೨೮	ಕಪೆಟ್ಟಿ	ಕಪ್ಪಟಿ
೨೩	೩೩	ಪ್ರಿತ್ರ್ಯ	ಪಿತ್ರ್ಯ
೨೭	೧೩	ಮಲಗಬೇಕು	ಮಲಗಿರಬೇಕು
೨೯	೩೪	ತತ್ತ	ತತ್ತು
೩೨	೧೪	ರವ್ಭಃ	ರಮ್ಭಃ
೪೧	೨೦	ವ್ಯರ್ಥೀಕೃತಾ	(ವೃಥೀಕೃತಾ) ವ್ಯರ್ಥೀಕೃತಾ
೪೪	೨೧	ನಿಶ್ವಾಸ	ನಿಶ್ಶ್ವಾಸ
೭೯	೮	ಸಡಲಿರುವ	ಸಡಿಲಿರುವ
೯೧	೫	ವೇಷ್ಟಿತೋಲ್ಪ	ವೇಷ್ಟಿತೋ ಉಲ್ಬ
೧೦೧	೨೯	ಪಿಷ್ಟೇ	ಪಿಷ್ಟೈಃ
೧೦೨	೪	ಪಿಷ್ಟ್ವಾ	ಪಿಷ್ಟ್ವಾವ
೧೦೩	೨೪	ದ್ರವ್ಯವು	ದ್ರವವು
೧೦೪	೨೭	ಅನಕ	ಅನ್ತಕ
೧೧೫	೧	ಪ್ರಸವಪ್ರಥಮ	ಪ್ರಸವಸ್ಯೋತ್ತಮ
೧೧೭	೨೭	ಹರಣಮಿಪರೇ	ಹರಣಮಿತ್ಯಪರೇ
೧೧೮	೨೭	ಭವತಿ	ಮೂಢಗರ್ಭೋ ಭವತಿ
೧೨೩	೨೮	ಹಾಸಯೇತ್	ಹಾಪಯೇತ್
೧೩೧	೪	ಕುಳತ್ಥಾಮ	ಕುಳತ್ಥಾಮ್ಲ
೧೩೨	೩೭	ತೇಗನೂ	ತೇಗನ್ನೂ
೧೨೪	೨೪	ಗರಣೆಯಾಗಿ	ಗರಣೆಗರಣೆಯಾಗಿ
೧೨೪	೨೫	ಗರಣೆಸ್ರಾವ	ಸ್ರಾವ
೧೫೧	೩೩	ವಳೀ	ವಳ್ಳೀ
೧೮೦	೩೧	ಸಮವಃ	ಸಮ್ಭವಃ
೧೮೨	೩೫	ಸಿದ್ಧಮ್	ಸಿದ್ಧಾಮ್
೧೮೪	೪	ಪಥಾ	ಪಥ್ಯಾ
೧೮೭	೨೧	(ಅ।ಹೃ।ಉ।ಅ।೨)	(ಕಾ।ಸ।ಅ।೨೦)
೨೧೦	೮	ಕಾಂಚನ್ಯೈಃ	ಕಾಂಜನ್ಯೈಃ
೨೧೨	೭	ದೌತೋನು	ಧೌತೋನು
೨೨೦	೩೧	ಸೋಷ್ಣಸ್ತ	ಸೋಷ್ಣಸ್ತು
೨೨೩	೫	ಪಾಣಿಚಾನು	ಪಾಣಿಜಾನು
೨೨೫	೧	ಅಗ್ನಿಮಾಂದ್ಯ	ಅಗ್ನಿಮಾಂದ್ಯದಿಂದ
೨೩೨	೫	ದ್ವೇನ್ತನ	ದ್ವೇಗಸ್ತನ
೨೩೮	೩	ಸಿದ್ಧಾರ್ಥೈಧೂಪ	ಸಿದ್ಧಾರ್ಥೈರ್ಧೂಪ

प्रसूतितन्त्रे शुद्धाशुद्धपत्रम्

पुटे	पङ्क्तौ	अशुद्धम्	शुद्धम्
೨೨೫	೧	ಅಗ್ನಿಮಾಂದ್ಯ	ಅಗ್ನಿಮಾಂದ್ಯದಿಂದ
೨೩೨	೫	ದೇಗಂತನ	ದೆಗಸ್ತನ
೨೩೮	೩	ಸಿದ್ಧಾರ್ಥಧೂಪ	ಸಿದ್ಧಾರ್ಥೈರ್ಧೂಪ
२५०	२०	संभूतयो	सम्भूतयो
२५१	२६	शेषस्वाप्या	शेषेस्वाप्या
२५३	२२	आर्तवहं	आर्तववहं
२६६	१७	प्रप्यूर्ध्वं	प्रत्यूर्ध्वं
२७२	२२	दाम्नात	दाम्रात
२७३	२७	भवन्ती	भवती
२८०	१२	गभस्यअसं	गभस्यासं
२८०	१६	मगर्ण्याम	मगण्यमि
२८१	२७	मासस्य	मासेऽस्य
२८२	६	स्थलो	स्थूलो
२८३	७	लवणै रूक्षा	लवणैरूक्षा
२८५	१	गर्भपरिवृद्धिक्रमः	गर्भिण्या वर्ज्यानि
२८९	१	प्रसवालक्ष	प्रसवायालक्ष
२९४	८	कालमध्येन	कालं मद्येन
२९७	७	भाराद्विषमाच्छसनादपि	वापिभाराद्विषमशायिनः
३२०	२	जराय्युक्तै	जैरावय्वृक्त
३१८	२६	श्वेष्म	श्लेष्म
३१९	७	अन्नं	अन्ने
३२८	६	मुत्पाती	मुत्पादयती
३३७	१०	तत्सन्यं	तत्सैन्यं
३४२	१४	पत्रिक	षष्ठिक
३४८	६	पत्या	पथ्या
३५१	१८	सराक्तं	सरक्तं
३५३	१४	कामला	कामिला
३५६	१८	पहाम्	पहान्

पृष्ठे	पङ्क्तौ	अशुद्धम्	शुद्धम्
३५७	५	चिकित्सा	लक्षणम्
३५८	१८	दयम्	द्वयम्
३५०	२४	क्षुद्रबिल्व	क्षुद्राबिल्व
३५९	८	सर्पिभ्या	सर्पिर्भ्या
३५९	१३	माज्यास्य	माज्यस्य
३६०	२१	खण्डूक्षि	कण्डूक्षि
३६२	२०	मुखपाशः	मुखपाकः
३६३	४	सरिवा	सारिवा
३६३	१०	प्रथमे	प्रभवे
३६३	२३	जलाको	जलौको
३६४	८	द्रक्षां	द्राक्षां
३६४	९	पर्युसितं	पर्युक्षितं
३६६	१७	तन्द्रका	तन्द्राका
३६८	१६	फक्कमा	फक्कत्वमा
३८०	७	शङ्गिनी	शङ्खिनी

ಓಂ ನಮೋ ಧನ್ವನ್ತರಯೇ

ಪ್ರಸೂತಿತನ್ತ್ರಮ್

ಮಂಗಳಮ್

ಧನ್ವನ್ತರಿಂ ನಮಸ್ಕೃತ್ಯ ವೇದಾಚಾರ್ಯಾನ್ಗುರೂಂಸ್ತಥಾ ।
ಪ್ರಸೂತಿತನ್ತ್ರಂ ವಕ್ಷ್ಯಾಮಿ ಯಥಾಗಮಪರಿಸ್ಫುಟಮ್ ॥ ॥೧॥

ಪ್ರಸೂತಿತನ್ತ್ರದೀಪಿಕಾ

ಶ್ರೀಕಣ್ಠಂ ಗಿರಿಜಾಪತಿಂ ಸುರವರಂ ನತ್ವಾಶ್ವಿನಾವತ್ರಿಜಮ್
ವೇದಾಚಾರ್ಯಬಹುಶ್ರುತಂ ಚ ಚರಕಂ ಭಕ್ತ್ಯಾ ತಥಾ ಸದ್ಗುರೂನ್
ಗ್ರನ್ಥಸ್ಯ ಪ್ರಸವಾಭಿದಸ್ಯ ವಿವೃತಿಃ ಕರ್ಣಾಟಭಾಷಾಮಯೀ
ದೀಪಾಖ್ಯಾ ಲಲಿತೈರ್ವಚೋಭಿರಧುನಾ ಶಾಸ್ತ್ರಾನುಗಾ ಕಥ್ಯತೇ ॥೧॥
ಶ್ರೀತ್ರಿಕೂಟೇ (ತಿರುಮುಕ್ಕೂಡಲ್) ಪುರೇಽವಾತ್ಸೀದ್ವಿಪ್ರೋ ನಂಜುಂಡದೀಕ್ಷಿತಃ ।
ಭಾರದ್ವಾಜಾನ್ವಯಸ್ಸಾಮವೇದಜ್ಯೋತಿಷಯೋರ್ಬುಧಃ ॥೨॥
ತತ್ಪುತ್ರಃ ಶ್ರೀನೃಸಿಹ್ಮಾಖ್ಯೋ ಭಟ್ಟಾಚಾರ್ಯೋಪನಾಮಕಃ ।
ಸಮವಾಪ್ತಸುಶಾಸ್ತ್ರಾರ್ಥೋ ಗುರುಪಾದಕೃಪಾವಶಾತ್ । ॥೩॥
ಮಹೀಶೂರಪುರೀಯಾಯಾಂ ಪೂರ್ಣಾಯಾಂ ಕೃಪಯಾ ಪ್ರಭೋಃ ।
ಆಯುರ್ವೇದೀಯಶಾಲಾಯಾಂ ಛಾತ್ರಾಣಾಂ ಪಾಠಕಶ್ಚಿರಾತ್ ॥೪॥
ಪ್ರಸೂತಿತನ್ತ್ರವಿವೃತಿಂ ಕುರುತೇ ತನ್ತ್ರದೀಪಿಕಾಮ್ ।

ಅರ್ಥ—ನಿರ್ವಿಘ್ನವಾಗಿ ಗ್ರನ್ಥಪರಿಸಮಾಪ್ತಿಯಾಗಬೇಕೆಂಬ ಕುತೂಹಲ ದಿಂದ ಶಿಷ್ಟಾಚಾರಪರಂಪರೆಗಳನ್ನು ಅನುಸರಿಸಿ ಗ್ರನ್ಥಾದಿಯಲ್ಲಿ ಇಷ್ಟದೇವರು ಆಚಾರ್ಯರು ಮತ್ತು ವಿದ್ಯಾಗುರುಗಳನ್ನು ವಂದಿಸಿ ಆಯುರ್ವೇದ ಶಾಸ್ತ್ರಗಳಲ್ಲಿ ವಿವರಿಸಿರುವ ಪ್ರಸೂತಿ ವಿಷಯಗಳನ್ನು ಸಂಗ್ರಹಿಸಿ ಶಿಷ್ಯರಿಗೆ ಸುಲಭವಾಗಿ ತಿಳಿಯಪಡಿಸಬೇಕೆಂದೂ ಗೀರ್ವಾಣಭಾಷೆಯ ಪರಿಚಯವಿಲ್ಲದ ಕೇವಲ ಕನ್ನಡ ಭಾಷಾಭಿಜ್ಞರಿಗೂ ಉಪಯೋಗವಾಗಲೆಂದೂ ಆಶಿಸಿ ಈ ಪ್ರಸೂತಿತನ್ತ್ರವನ್ನು ಕನ್ನಡಕ್ಕೆ ಪರಿವರ್ತಿಸಿರುತ್ತೇನೆ.

ಅವತರಣಿಕಾ—ತನ್ತ್ರಸ್ಯೋದ್ದೇಶಃ

ಮೂಲ—ಅಥ ಖಲು ಪ್ರಸೂತಿತನ್ತ್ರಂ ನಾಮ—

ಗರ್ಭೋತ್ಪತ್ತಿಕರಾಣಾಂ ಶುಕ್ರಶೋಣಿತಾದೀನಾಂ ಭಾವವಿಶೇಷಾಣಾಂ ಪ್ರಾಕೃತವೈಕೃತಲಕ್ಷಣಾನಿ ವೈಕೃತಾನಾಂ ಪ್ರಕೃತ್ಯವಸ್ಥಾಪನಾರ್ಥಂ ಸಾಧನ-ಪ್ರಕಾರಾಣಿ ಶರೀರಾವಯವಾದೀನಾಂ ಜ್ಞಾನೋಪಾಯಾಃ ಋತುನಿರೂಪಣಂ ಋತುಮತ್ಯಾ ನಿಯಮಾಃ ನಿಯಮಾನಪಾಲನೇ ದೋಷಾಃ ಗರ್ಭಾಧಾನೇ ಯೋಗ್ಯ-ಸ್ತ್ರೀಪುರುಷಲಕ್ಷಣಾನಿ ನಿಷಿದ್ಧಕಾಲಃ ಸ್ತ್ರೀಪುಂಸಾಮವಸ್ಥಾನಂ ವಿಕೃತಗರ್ಭೋ-ತ್ಪತ್ತೌ ಹೇತುಃ ಗರ್ಭೋತ್ಪತ್ತಿಕಥನಂ ಗರ್ಭೋತ್ಪತ್ತೇರಾಪ್ರಸೂತಿಪರ್ಯನ್ತಂ ಸ್ತ್ರೀಣಾಂ ಯಥಾಕಾಲಮಾಸೇವ್ಯಮಾನಾನ್ಯಾಹಾರವಿಹಾರನಿಯಮವಿಶೇಷಾಣಿ

ತತ್ರ ಮಿಥ್ಯಾಪ್ರಯುಕ್ತಜಾತಾನಾಂ ವ್ಯಾಧೀನಾಂ ಲಕ್ಷಣಪೂರ್ವಕಚಿಕಿತ್ಸಿತಾನಿ ಗರ್ಭಸ್ರಾವಪಾತನಿರ್ಣಯಸ್ತಚ್ಚಿಕಿತ್ಸಿತಂ ಚ ಮೂಢಗರ್ಭವಿವೇಚನಪುರಸ್ಸರಂ ಶಲ್ಯತನ್ತ್ರಶಸ್ತ್ರಾವಚಾರಣಕಥನಂ ಸುಖಪ್ರಸವವಿಚಾರಾಃ ಸೂತಿಕಾಗಾರ-ನಿರ್ಮಾಣಕಥನಂ ಪ್ರಸೂತಿಸಾಮಗ್ರ್ಯುಪಕರಣಸಂಭಾರಾಃ ಗರ್ಭವಿಕಾರಾಸ್ತ-ಚ್ಚಿಕಿತ್ಸಿತಾನಿ ಸೂತಿಕೋಪಚಾರಕಥನಂ ತಜ್ಜನ್ಯವ್ಯಾಧೀನಾಂ ನಿವಾರಣೋ-ಪಾಯಾಶ್ಚ ಯಸ್ಮಿನ್ ವ್ಯಾಖ್ಯಾಸ್ಯನ್ತೇ ತತ್ಪ್ರಸೂತಿತನ್ತ್ರಮ್ ॥೨॥

ತನ್ತ್ರದ ಉದ್ದೇಶವು

ದೀಪಿಕೆ—

ಗರ್ಭೋತ್ಪತ್ತಿಗೆ ಕಾರಣಗಳಾದ ಶುಕ್ರಾರ್ತವಗಳ ಶುದ್ಧ ಅಥವಾ ಸ್ವಭಾವ ಲಕ್ಷಣಗಳೂ, ದುಷ್ಟ ಅಥವಾ ವಿಕೃತಲಕ್ಷಣಗಳೂ, ದುಷ್ಟವಾದ ಶುಕ್ರ ಶೋಣಿತಗಳನ್ನು ಶುದ್ಧಿಮಾಡುವ ವಿಧಾನಗಳೂ, ಗರ್ಭಾವಯವಗಳ ವಿಚಾರವೂ, ಋತುನಿರೂಪಣೆ, ಋತುಮತಿಯಾದ ಸ್ತ್ರೀಯರು ಅನುಸರಿಸಬೇಕಾದ ಆಹಾರ ವಿಹಾರಗಳ ನಿಯಮಗಳೂ, ನಿಯಮದಂತೆ ನಡೆದುಕೊಳ್ಳದಿದ್ದರೆ ಉಂಟಾಗುವ ತೊಂದರೆಗಳೂ, ಗರ್ಭಾಧಾನಕ್ಕೆ ಅರ್ಹರಾದ ಸ್ತ್ರೀಪುರುಷರ ಲಕ್ಷಣಗಳೂ, ಗರ್ಭಾಧಾನಕ್ಕೆ ಯೋಗ್ಯವಾದ ಕಾಲನಿರ್ಣಯ, ಸ್ತ್ರೀಪುರುಷರು ಮಿಳಿತವಾಗುವ ವಿಧಾನ, ವಿಕೃತಗರ್ಭವುಂಟಾಗಲು ಕಾರಣ, ಗರ್ಭೋತ್ಪತ್ತಿ ವರ್ಣನೆ, ಗರ್ಭಧಾರಣೆಯ ಕಾಲದಿಂದ ಪ್ರಸವದವರೆಗೂ ಗರ್ಭಿಣಿಯರು ಕಾಲಕಾಲಕ್ಕೆ ಅನುಸರಿಸತಕ್ಕ ಆಹಾರವಿಹಾರನಿಯಮಗಳೂ, ವಿರುದ್ಧಾಹಾರ ವಿಹಾರಗಳ ಸೇವನೆಯಿಂದ ಗರ್ಭಿಣಿಯರಿಗೆ ಬರತಕ್ಕ ರೋಗಗಳೂ, ಅವುಗಳಿಗೆ ತಕ್ಕ ನಿವಾರಣೋಪಾಯಗಳೂ, ಗರ್ಭಸ್ರಾವಪಾತಗಳಿಗೆ ಕಾರಣಗಳೂ ಚಿಕಿತ್ಸೆಗಳೂ, ಮೂಢಗರ್ಭವಿವರಣೆ ಮತ್ತು ಅವುಗಳನ್ನು ಸರಿಪಡಿಸುವ ವಿಧಾನಗಳೂ, ಶಲ್ಯ ಮತ್ತು ಶಸ್ತ್ರಗಳನ್ನು ಪ್ರಯೋಗಮಾಡುವ ಕ್ರಮಗಳೂ, ಸುಖಪ್ರಸವ ವಿಚಾರ, ಹೆರಿಗೆಯಮನೆಯ ನಿರ್ಮಾಣವಿಧಾನ, ಪ್ರಸವಕ್ಕೆ ಸಿದ್ಧಪಡಿಸಬೇಕಾದ ಸಾಮಗ್ರಿ ಸಲಕರಣೆಗಳೂ, ಗರ್ಭವಿಕಾರಗಳೂ ಅವುಗಳ ನಿವಾರಣೋಪಾಯಗಳೂ, ಹೆರಿಗೆಯಾದ ಮೇಲೆ ಬಾಣಂತಿಯರಿಗೆ ಮಾಡಬೇಕಾದ ಉಪಚಾರಗಳೂ, ಬಾಣಂತಿಯರ ರೋಗಗಳೂ ಅವುಗಳನ್ನು ನಿವಾರಿಸತಕ್ಕ ವಿಧಾನ—ಈ ಎಲ್ಲ ವಿಚಾರಗಳನ್ನೂ ಸಂಗ್ರಹವಾಗಿ ತಿಳಿಸುವ ಗ್ರಂಥಕ್ಕೆ ಪ್ರಸೂತಿತನ್ತ್ರವೆಂದು ಹೆಸರು.

ಮೂಲ—ಆಯುರ್ವೇದೇ ಪ್ರಸೂತಿತನ್ತ್ರಸ್ಯ ಸ್ಥಾನಮ್—

ಅಷ್ಟಾಙ್ಗಾಯುರ್ವೇದಸ್ಯೈಕಾಙ್ಗಭೂತಬಾಲತನ್ತ್ರವರ್ಣನಾವಸರೇ ಪ್ರಸೂ-ತ್ಯನನ್ತರಮೇವ ಬಾಲೋಪಚಾರತದ್ವ್ಯಾಧೀನಾಂ ಚ ವಿವರಣಸ್ಯಾವಶ್ಯಕತ್ವಾತ್ ಪ್ರಥಮಂ ತಾವತ್ ಉಪೋದ್ಘಾತಸಙ್ಗತ್ಯಾ ಪ್ರಸೂತಿವಿಚಾರೋ ವ್ಯಾಖ್ಯಾತುಂ ಯುಜ್ಯತ ಏವ। ಪ್ರಸೂತೇರ್ಗರ್ಭಾಧಾನಮೂಲತ್ವಾತ್ ಗರ್ಭಾಧಾನಮೂಲಭೂತ ಶುಕ್ರಶೋಣಿತಾದೀನಾಂ ಭಾವವಿಶೇಷಾಣಾಮಧುನಾ ವಿಚಾರಃ ಕ್ರಿಯತೇ॥೩॥

ತದ್ಯಥಾ—

ದೀಪಿಕೆ—ಆಯುರ್ವೇದ ಶಾಸ್ತ್ರದಲ್ಲಿ ಪ್ರಸೂತಿ ತನ್ತ್ರಕ್ಕಿರುವ ಸ್ಥಾನವು—

ಕಾಯಚಿಕಿತ್ಸೆ, ಬಾಲಚಿಕಿತ್ಸೆ, ಗ್ರಹಚಿಕಿತ್ಸೆ, ಊರ್ಧ್ವಾಂಗಚಿಕಿತ್ಸೆ (ಕತ್ತಿನ ಮೇಲ್ಭಾಗದಲ್ಲಿರುವ ಕಣ್ಣು, ಕಿವಿ, ಮೂಗು, ಬಾಯಿ ಮೊದಲಾದ ಅಙ್ಗಗಳ), ಶಲ್ಯಚಿಕಿತ್ಸೆ (ಶರೀರದಲ್ಲಿ ಚುಚ್ಚಿಕೊಂಡಿರುವ ಮುಳ್ಳು, ಕಲ್ಲು ಮೊದಲಾದುವನ್ನು ಹೊರಕ್ಕೆ ತೆಗೆಯುವ ವಿಧಾನ), ದಂಷ್ಟ್ರಾಚಿಕಿತ್ಸೆ (ಹಾವು, ಚೇಳು ಮೊದಲಾದ ವಿಷಪ್ರಾಣಿಗಳ ಕಚ್ಚುವಿಕೆಯಿಂದುಂಟಾಗುವ ವಿಷಗಳನ್ನು ನಿವಾರಿಸುವ ವಿಧಾನ), ಜರಾಚಿಕಿತ್ಸೆ (ವೃದ್ಧರಿಗೆ ರಸಾಯನಾದಿ ವಿಧಾನಗಳಿಂದ ಗಳಿತವಾದ ಅಙ್ಗಗಳನ್ನು ಪುನರುಜ್ಜೀವಿತಗಳನ್ನಾಗಿ ಮಾಡುವ ಕ್ರಮ), ವೃಷ್ಯಚಿಕಿತ್ಸೆ (ಶುಕ್ರವೃದ್ಧಿಯನ್ನುಂಟುಮಾಡಿ ಗರ್ಭೋತ್ಪಾದಕಶಕ್ತಿಯನ್ನು ಪಡೆಯುವ ವಿಧಾನ)—ಈ ರೀತಿಯಾದ ಎಂಟು ವಿಧ ಚಿಕಿತ್ಸಾಕ್ರಮಗಳಲ್ಲಿ ಎರಡನೆಯದಾದ ಬಾಲಚಿಕಿತ್ಸೆಯನ್ನು ವರ್ಣಿಸಬೇಕಾದರೆ ಪ್ರಸವವಾದಮೇಲೆಯೇ ಬಾಲಕೋಪಚಾರ ಬಾಲಕರಿಗೆ ಬರುವ ರೋಗನಿವಾರಣೋಪಾಯಗಳನ್ನು ವಿವರಿಸಬೇಕಾಗುತ್ತದೆಯಾಗಿ ಪ್ರಸವದ ವಿಚಾರವನ್ನು ತಿಳಿಯುವುದು ಅವಶ್ಯಕವು. ಆ ಪ್ರಸವಕ್ಕೆ ಗರ್ಭಧಾರಣೆಯೇ ಮೂಲವಾದದ್ದು. ಗರ್ಭಧಾರಣೆಗೆ ಮುಖ್ಯ ಕಾರಣಗಳಾದ ಶುಕ್ರಶೋಣಿತಗಳ ವಿಚಾರವನ್ನು ತಿಳಿಯಬೇಕಾದದ್ದು ಎಲ್ಲಕ್ಕಿಂತಲೂ ಮೊದಲು ಅವಶ್ಯಕವಾದದ್ದು ॥೩॥

---

*

ಪ್ರಥಮೋಽಧ್ಯಾಯಃ

ಶುಕ್ರಶೋಣಿತವಿಚಾರಃ.

ಮೂಲ— ಶುಕ್ರಶೋಣಿತಾದೀನಾಂ ಪ್ರಾಕೃತವೈಕೃತಲಕ್ಷಣಾನಿ :—

ಶುದ್ಧಶುಕ್ರಲಕ್ಷಣಮ್—
ಸ್ಫಟಿಕಾಭಂ ದ್ರವಂ ಸ್ನಿಗ್ಧಂ ಮಧುರಂ ಮಧುಗನ್ಧಿ ಚ ।
ಶುಕ್ರಮಿಚ್ಛನ್ತಿ ಕೇಚಿತ್ತು ತೈಲಕ್ಷೌದ್ರೋಪಮಂ ತಥಾ ॥೪॥
ಅನ್ಯಚ್ಚ—
ಶುಕ್ರಂ ಶುಕ್ಲಂ ಗುರು ಸ್ನಿಗ್ಧಂ ಮಧುರಂ ಬಹುಳಂ ಬಹು ।
ಘೃತಮಾಕ್ಷಿಕತೈಲಾಭಂ ಸದ್ಗರ್ಭಾಯ ಪ್ರವರ್ತತೇ ॥೫॥

೧ನೆಯ ಅಧ್ಯಾಯ

ದೀಪಿಕೆ—ಶುಕ್ರಮತ್ತು ಆರ್ತವಾದಿಗಳ ಸಹಜವಾದ ಮತ್ತು ದುಷ್ಟವಾದ ಲಕ್ಷಣಗಳು—(ಸು। ಶಾ। ಅ। ೨)

ಶುದ್ಧಶುಕ್ರಲಕ್ಷಣ—ಸ್ಫಟಿಕಮಣಿಯಂತೆ ಸ್ವಚ್ಛವಾಗಿಯೂ, ದ್ರವವಾಗಿಯೂ, ಅಂಟಾಗಿಯೂ, ಸಿಹಿಯಾಗಿಯೂ, ಜೇನುತುಪ್ಪದ ವಾಸನೆಯುಳ್ಳುದ್ದಾಗಿಯೂ ಇದ್ದರೆ ಶುಕ್ರವು ಶುದ್ಧವಾದುದೆಂದೂ, ಎಳ್ಳೆಣ್ಣೆ ಜೇನುತುಪ್ಪಗಳ ಬಣ್ಣಗಂತಿರಬೇಕೆಂದೂ ಕೆಲವರು ವೈದ್ಯರು ಅಭಿಪ್ರಾಯಪಡುತ್ತಾರೆ ॥೪॥

ಮತಾಂತರವು—ಬಿಳುಪಾಗಿಯೂ, ಭಾರವಾಗಿಯೂ, ಅಂಟಾಗಿಯೂ, ಸಿಹಿಯಾಗಿಯೂ, ದಟ್ಟವಾಗಿಯೂ, ಅಧಿಕಪ್ರಮಾಣವುಳ್ಳುದ್ದಾಗಿಯೂ ತುಪ್ಪ, ಜೇನುತುಪ್ಪ, ಎಳ್ಳೆಣ್ಣೆಗಳ ಬಣ್ಣವುಳ್ಳ ಶುಕ್ರವು ಸತ್ಪ್ರಜೋತ್ಪಾದನೆಗೆ ಸಹಕರಿಸುತ್ತದೆಂದು ಮತ್ತೆ ಕೆಲವು ವೈದ್ಯರ ಅಭಿಪ್ರಾಯವು. ಶ್ಲೇಷ್ಮ, ಪಿತ್ತ ಮತ್ತು ವಾತಪ್ರಕೃತಿ ಪುರುಷರ ಶುಕ್ರಗಳು ಕ್ರಮವಾಗಿ ತುಪ್ಪ, ಜೇನುತುಪ್ಪ, ಎಳ್ಳೆಣ್ಣೆಗಳನ್ನು ಹೋಲುತ್ತವೆಯೆಂದು ಅಭಿಪ್ರಾಯವು ॥೫॥

ಮೂಲ — ಶುದ್ಧರಕ್ತಲಕ್ಷಣಮ್—(ಅ।ಹೃ।)

ಮಧುರಂ ಲವಣಂ ಕಿಂಚಿದಶೀತೋಷ್ಣಮಸಂಹತಮ್ ।
ಪದ್ಮೇನ್ದ್ರಗೋಪಹೇಮಾವಿಶಶಲೋಹಿತಲೋಹಿತಮ್ ।
ಲೋಹಿತಂ ಪ್ರವದೇಚ್ಛುದ್ಧಂ ತನೋಸ್ತೇನೈವ ಚ ಸ್ಥಿತಿಃ ॥೬॥

ದೀಪಿಕೆ—ಶುದ್ಧರಕ್ತದ ಲಕ್ಷಣ—(ಅ।ಹೃ।)

ಸಿಹಿಯಾಗಿಯೂ, ಉಪ್ಪಾಗಿಯೂ ಸ್ಪರ್ಶಮಾಡಿದರೆ ಸಮಶೀತೋಷ್ಣವುಳ್ಳುದಾಗಿಯೂ ತೆಳುವಾಗಿಯೂ (ಗಡ್ಡೆ ಕಟ್ಟದಿರುವುದು) ಕುರಿಯ ಅಥವಾ ಮೊಲದ ರಕ್ತದ ಬಣ್ಣವುಳ್ಳುದಾಗಿಯೂ (ಸ್ವಲ್ಪ ನೀಲಮಿಶ್ರವಾದ ಕೆಂಪು ಬಣ್ಣ) ಇದ್ದರೆ ಶುದ್ಧರಕ್ತವೆಂದು ತಿಳಿಯಬೇಕು. ತಾವರೆದಳದಂತೆಯಾಗಲೀ ಇಂದ್ರಗೋಪವೆಂಬ ಹುಳುವಿನ ಮೈಬಣ್ಣದಂತೆಯಾಗಲೀ ಇರುವುದು ಶುದ್ಧ

ರಕ್ತದ ಬಣ್ಣವು (ಮಳೆಗಾಲದಲ್ಲಿ ನೆಲದಮೇಲೆ ರೈಲುಗಾಡಿಯಂತೆ ಹರಿದು ಹೋಗುವ ಅನೇಕ ಕಾಲುಗಳುಳ್ಳ ಎರಡುಮೂರು ಅಂಗುಲಗಳಷ್ಟು ಉದ್ದವಾಗಿಯೂ ಮಕ್ಕಳ ಕಿರುಬೆರಳಿನಷ್ಟು ದಪ್ಪವಾಗಿಯೂ ಕರಿಬಣ್ಣ ಕೆಂಪುಬಣ್ಣ ಮಿಶ್ರವಾದ ಶರೀರದ ಸಣ್ಣಹುಳುವನ್ನು ಇಂದ್ರಗೋಪವೆಂದು ಕರೆಯುತ್ತಾರೆ.) ಈ ವಿಧವಾದ ರಕ್ತದಿಂದಲೇ ಶರೀರವು ಜೀವಿಸಿರುತ್ತದೆ.

ಮೂಲ—(ಸು।ಶಾ।ಅ।೨)

ಶುದ್ಧಾರ್ತವಲಕ್ಷಣಮ್—
ಶಶಾಸೃಕ್ಪ್ರತಿಮಂ ಯತ್ತು ಯದ್ವಾ ಲಾಕ್ಷಾರಸೋಪಮಮ್ ॥೭॥
ತದಾರ್ತವಂ ಪ್ರಶಂಸನ್ತಿ ಯದ್ವಾಸೋ ನ ವಿರಂಜಯೇತ್ ।
ಅನ್ಯಚ್ಚ—
ಮಾಸಾನ್ನಿಷ್ಪಿಚ್ಛದಾಹಾರ್ತಿ ತ್ರಯೋರಾತ್ರಾನುಬನ್ಧಿ ಯತ್ । ॥೮॥
ನೈವಾತಿಬಹುಳಾತ್ಯಲ್ಪಮಾರ್ತವಂ ಶುದ್ಧಮಾದಿಶೇತ್ ।

ದೀಪಿಕೆ—ಶುದ್ಧಾರ್ತವಲಕ್ಷಣ—(ಸು।ಶಾ।ಅ।೨)

ಮೊಲದರಕ್ತದ ಅಥವಾ ಅರಗಿನ ಕಷಾಯದಂತೆ ಬಣ್ಣವಿದ್ದು ಬಟ್ಟೆಗೆ ಅಂಟಿದಮೇಲೆ ಬಟ್ಟೆಯನ್ನು ನೀರಿನಿಂದ ತೊಳೆದರೆ ಕಲೆ ನಿಲ್ಲದಿದ್ದರೆ ಅಂಥ ಆರ್ತವವು ಶುದ್ಧವಾದುದೆಂದು ತಿಳಿಯಬೇಕು ॥೭॥

ಮತಾಂತರದಲ್ಲಿ—ಪ್ರತಿ ತಿಂಗಳ ಋತುಕಾಲದಲ್ಲೂ ಮೊದಲಿನ ಮೂರು ದಿನಗಳಲ್ಲಿ ನೊರೆ, ಉರಿ, ನೋವುಗಳಿಲ್ಲದೆ ಆರ್ತವವು ಸ್ರವಿಸುತ್ತಿದ್ದು ನಾಲ್ಕನೆಯ ದಿನ ರಜಸ್ಸ್ರಾವ ನಿಂತರೆ ಮತ್ತು ಮೊದಲಿನ ಮೂರು ದಿನಗಳಲ್ಲೂ ಅತಿಯಾಗಿಯಾಗಲೀ ಅತ್ಯಲ್ಪವಾಗಿಯಾಗಲೀ ಸ್ರಾವವಿರದೆ ಸಮಪ್ರಮಾಣದಿಂದ ಆರ್ತವಸ್ರಾವವಾಗುತ್ತಿದ್ದರೆ ಆ ಸ್ತ್ರೀಯು ಶುದ್ಧಾರ್ತವವುಳ್ಳವಳೆಂದು ತಿಳಿಯಬೇಕು.

ಮೂಲ—ಜೀವರಕ್ತ ಶುದ್ಧಾರ್ತವಯೋರ್ವಿಶೇಷಾಃ—(ಸು।ಶಾ।ಅ।೨)

ಜೀವತುಲ್ಯಂ ರಕ್ತಂ ಜೀವರಕ್ತಮ್ ! ಜೀವಚ್ಛರೀರೇ ರಕ್ತದರ್ಶನಾನ್ಮೃತ ಶರೀರೇ ಚಾದರ್ಶನಾತ್ । ಸ ಖಲು ಆಪ್ಯೋ ರಸಧಾತುರ್ಯಕೃತ್ಪ್ಲೀಹಾನೌ ಪ್ರಾಪ್ಯ ರಾಗಮುಪೈತಿ ರೋಹಿತತ್ವಂ ಚ ಗಚ್ಛತಿ ॥೯॥
ಉಕ್ತಂ ಚ—
ರಂಜಿತಾಸ್ತೇಜಸಾತ್ವಾಪಃ ಶರೀರಸ್ಥೇನ ದೇಹಿನಾಮ್ ।
ಅವ್ಯಾಪನ್ನಾಃ ಪ್ರಸನ್ನೇನ ರಕ್ತಮಿತ್ಯಭಿಧೀಯತೇ ॥೧೦॥
ಪಾಂಚಭೌತಿಕಮಪರೇ ಜೀವರಕ್ತಮಾಹುರಾಚಾರ್ಯಾಃ ।
ಯಥಾ—
ವಿಸ್ರತಾ ದ್ರವತಾ ರಾಗಃ ಸ್ಪನ್ದನಂ ಲಘುತಾ ತಥಾ ।
ಭೂಮ್ಯಾದೀನಾಂ ಗುಣಾ ಹ್ಯೇತೇ ದೃಶ್ಯನ್ತೇ ಚಾತ್ರ ಶೋಣಿತೇ ॥೧೧॥

ವ್ಯಾಖ್ಯಾ—
ಆಮಗನ್ಧಿತಾ, ದ್ರವಭಾವಃ, ರಕ್ತ (ವರ್ಣ) ತಾ, ಕಿಂಚಿಚ್ಚಲನಂ, ಅಗುರುತ್ವಂ ಚೇತಿ ಭೂಮ್ಯಾದಿಪಂಚಭೂತಾನಾಂ ಗುಣಾಃ ಅತ್ರಶೋಣಿತೇ ದೃಶ್ಯನ್ತೇ ತಸ್ಮಾದ್ರಕ್ತಂ ಪಾಂಚಭೌತಿಕಮ್ ॥

ದೀಪಿಕೆ—ಜೀವರಕ್ತ ಮತ್ತು ಶುದ್ಧಾರ್ತವಗಳಿಗಿರುವ ವ್ಯತ್ಯಾಸ—(ಸು।ಶಾ)

ಪ್ರಾಣಿಗಳು ಬದುಕಿರುವಾಗ ಅವರ ದೇಹದೊಳಗೆ ರಕ್ತಧಾತುವಿರುತ್ತದೆ; ಅವು ಸತ್ತಮೇಲೆ ಕಾಣಿಸುವುದಿಲ್ಲವಾದ ಕಾರಣ ಈ ರಕ್ತಕ್ಕೆ ಜೀವರಕ್ತವೆಂಬ ಹೆಸರು ಬಂದಿರುತ್ತದೆ; ರಸಧಾತುವು ಸಂಚರಿಸುತ್ತಾ ಯಕೃತ್ಪ್ಲೀಹಗಳಿಗೆ ತಲಪಿ ಅಲ್ಲಿ ಕೆಂಪುಬಣ್ಣವನ್ನು ಹೊಂದಿದ ಮೇಲೆ ರಕ್ತವೆಂಬ (ಸಂಜ್ಞೆಯನ್ನು) ಹೆಸರನ್ನು ಪಡೆಯುತ್ತದೆ. ಅಂದರೆ ಪ್ರಾಣಿಗಳ ಶರೀರದಲ್ಲಿರುವ ನಿರ್ಮಲ ದ್ರವರೂಪವಾದ ಅಬ್ಧಾತುವು ರಂಜಕ ಪಿತ್ತದಿಂದ ಪಾಕಮಾಡಲ್ಪಟ್ಟು ರಕ್ತಧಾತು ವೆಂದು ವ್ಯವಹರಿಸಲ್ಪಡುತ್ತದೆ ॥೧೦॥

ಮತ್ತೆ ಕೆಲವರು ವೈದ್ಯಾಚಾರ್ಯರು ಜೀವರಕ್ತವು ಪಂಚಮಹಾಭೂತ ಗಳಿಂದ ಉತ್ಪನ್ನವಾಗಿರುತ್ತದೆಂದು ಹೇಳುತ್ತಾರೆ. ಏಕೆಂದರೆ—ಪೃಥಿವ್ಯಾದಿ ಪಂಚಭೂತಗಳ ಪ್ರತ್ಯೇಕ ಗುಣಗಳಾದ ದುರ್ಗನ್ಧತ್ವ, ದ್ರವತ್ವ, ರಕ್ತವರ್ಣತ್ವ, ಚಲನೆ, ಹಗುರವಾಗಿರೋಣ ಈ ಗುಣಗಳು ರಕ್ತದಲ್ಲೂ ಕಂಡುಬರುತ್ತವೆ ॥೧೧॥

ಮೂಲ—ಆರ್ತವಸ್ವರೂಪಮ್—(ಸು।ಶಾ।)

ಆಪ್ಯೋ ರಸಧಾತುರ್ಮಾಸೇನ ಶುಕ್ರಂ ಭವತಿ ಪುಂಸಾಂ ಸ್ತ್ರೀಣಾಂ ಚಾರ್ತವಮ್ । ರಸಾದೇವ ಸ್ತ್ರಿಯಾ ರಕ್ತಂ ರಜಸ್ಸಂಜ್ಞಂ ಪ್ರಪದ್ಯತೇ । ಆಪ್ಯೋ ರಸಧಾತೂರಾಗ ಮುಪೈತಿ ಲೋಹಿತತ್ವಂ ಚ ಗಚ್ಛತಿ । ಏತಚ್ಚ ರಜೋರೂಪಂ ರಕ್ತಂ ರಸಜನ್ಯಮಪಿ ಧಾತುಶೋಣಿತವನ್ನ ಶೀಘ್ರಂ ಜಾಯತೇ ಕಿನ್ತು ಶುಕ್ರವನ್ಮಾಸೇನೈವ। ಸೋಮ ಗುಣಭೂಯಿಷ್ಠರಸಸಮ್ಭವಾದಪಿ ಆರ್ತವಶೋಣಿತನ್ತ್ವಾಗ್ನೇಯಮ್ । ಜೀವ ರಕ್ತನ್ತು ಸಮಶೀತೋಷ್ಣ ಗುಣಮ್ । ರಕ್ತಲಕ್ಷಣಮಾರ್ತವಂ ಗರ್ಭಕೃಚ್ಚ॥೧೨॥

ದೀಪಿಕೆ—ಆರ್ತವದ ವಿವರಣೆ—

ಅಬ್ಭೂತಾಧಿಕವಾದ ರಸಧಾತುವು ಒಂದು ತಿಂಗಳಿಗೆ ಪುರುಷರಲ್ಲಿ ಶುಕ್ರ ವಾಗಿಯೂ ಸ್ತ್ರೀಯರಲ್ಲಿ ಆರ್ತವವಾಗಿಯೂ ಪರಿಣಾಮವಾಗುತ್ತದೆ. ಆದರೆ ಧಾತುರಕ್ತದಂತೆ ಶೀಘ್ರವಾಗಿ ಪರಿಣಮಿಸುವುದಿಲ್ಲ. ಶೀತಗುಣಪ್ರಧಾನವಾದ ರಸ ಧಾತುವಿನ ಪರಿಣಾಮವಾದರೂ ಆರ್ತವವು ಉಷ್ಣಗುಣಾಧಿಕವಾದದ್ದು; ಜೀವ ರಕ್ತವು ಸಮಶೀತೋಷ್ಣ ಗುಣವುಳ್ಳದ್ದು: ಆರ್ತವವು ರಕ್ತಲಕ್ಷಣಗಳುಳ್ಳದ್ದು ಮತ್ತು ಗರ್ಭವುಂಟಾಗಲು ಕಾರಣವಾದದ್ದು. ॥೧೨॥

ಮೂಲ—ಶೋಣಿತಗರ್ಭಬೀಜವಿಜ್ಞಾನಮ್—(P.S. ವಾರಿಯರ್)

ಆರ್ತವಂ ಋತುಕಾಲಜಂ ಶೋಣಿತಮ್; ರಜೋದರ್ಶನಂ ಋತುಸಂಜ್ಞಾ ಅಪತ್ಯ ಜನಕಕಾಲಃ । ಕೇಚಿತ್ತು ಆರ್ತವಂ—ಸ್ತ್ರೀಣಾಂ ವೃಷಣಯೋಃ ಮಾಸಿಮಾಸ್ಯುಪ-

ಚೀಯಮಾನದ್ರವವಿಶೇಷ ಇತಿ ಬ್ರುವತೇ; ಶುಕ್ರಂ ಅನ್ತ್ಯಧಾತೋಃ ಪರಿಪಕ್ವಾಂಶ ಇತಿ ಚ; ಶುಕ್ರಬೀಜಂ-ಪೌರುಷಂ; ಆರ್ತವಬೀಜಂ—ಯೌವತಮಿತಿ। ಕೈಶ್ಚಿತ್ತು ಶುಕ್ರಂ ಚಾರ್ತವಂ ಚ ಶುಕ್ರಾರ್ತವಮಿತಿ ಸಮಾಸಃ ಕ್ರಿಯತೇ। ತತ್ಪಕ್ಷೇ ಆರ್ತವಂ ದ್ವಿವಿಧಂ—ಶುಕ್ರಾರ್ತವಂ, ರಕ್ತಾರ್ತವಮಿತಿ। ಶುಕ್ರಾರ್ತವಂ ಪೂರ್ವೋಕ್ತಮ್। ರಕ್ತಾರ್ತವಂ—ರಜಸ್ವಲಾರಕ್ತಮಿತಿ ಭೇದಃ। ಉಭಯೋರಪಿ ಋತುಕಾಲೋತ್ಪನ್ನತ್ವಾದಿಯಂ ಸಂಜ್ಞಾ ಅನುಗತಾರ್ಥಾ। ಅತ್ರ ತು ಆರ್ತವಶಬ್ದೇನ ಶುಕ್ರಾರ್ತವಮೇವ ವ್ಯವಹ್ರಿಯತೇ। ರಕ್ತಾರ್ತವನ್ತು ರಜಶ್ಶಬ್ದೇನ ಕದಾಚಿತ್ ಪುಷ್ಪಶಬ್ದೇನ ಚೇತಿ ನ ಕ್ವಚಿದಪಿ ಭ್ರಮಾವಕಾಶಃ ॥೧೩॥

ದೀಪಿಕೆ—ಶೋಣಿತ-ಗರ್ಭಬೀಜಗಳ ವಿವರಣೆ—(P.S. ವಾರಿಯರ್)

ಆರ್ತವ—ಋತುಕಾಲದಲ್ಲಿ ಸ್ರವಿಸುವ ರಕ್ತವಿಶೇಷವು; ರಜೋದರ್ಶನಕ್ಕೆ "ಋತು" ಎಂದು ಸಂಜ್ಞೆ—ಗರ್ಭವು ಉತ್ಪತ್ತಿಯಾಗುವ ಕಾಲವೆಂದರ್ಥ. ಸ್ತ್ರೀಯರ ಅಂಡಕೋಶಗಳಿಂದ ಪ್ರತಿತಿಂಗಳಲ್ಲೂ ಅಭಿವೃದ್ಧಿಯಾಗಿ ಹೊರಕ್ಕೆ ಹರಿದು ಬರುವ ದ್ರವವಿಶೇಷವನ್ನು ಆರ್ತವವೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಕೊನೆಯ ಧಾತುವಿನ ಪರಿಪಕ್ವಾಂಶವೇ ಶುಕ್ರವು; ಶುಕ್ರಧಾತುವಿನ ಬೀಜಾಣುವಿಗೆ ಪೌರುಷವೆಂದೂ ಆರ್ತವದ ಬೀಜಾಣುವಿಗೆ ಯೌವತವೆಂದೂ ಸಂಜ್ಞೆ; ಕೆಲವರು ಶುಕ್ರ ಮತ್ತು ಆರ್ತವಗಳ ಮಿಶ್ರಣಕ್ಕೆ ಶುಕ್ರಾರ್ತವವೆನ್ನುತ್ತಾರೆ; ಅವರ ಮತದಲ್ಲಿ ಶುಕ್ರಾರ್ತವ, ರಕ್ತಾರ್ತವಗಳೆಂದು ಆರ್ತವದಲ್ಲಿ ಎರಡು ವಿಧಗಳುಂಟು; ಹಿಂದೆ ಹೇಳಿದಂತೆ ಶುಕ್ರ ಮತ್ತು ಆರ್ತವಗಳ ಮಿಶ್ರಣವೇ ಶುಕ್ರಾರ್ತವವು. ರಕ್ತಾರ್ತವವೇ ರಜಸ್ವಲಾರಕ್ತವು. ಇವೆರಡೂ ಋತುಕಾಲದಲ್ಲಿ ಉತ್ಪತ್ತಿಯಾಗುವುದರಿಂದ ಇವೆರಡಕ್ಕೂ ಈ ಹೆಸರು ವ್ಯವಹರಿಸಲ್ಪಟ್ಟಿರುತ್ತದೆ. ಆದರೆ ಆರ್ತವಶಬ್ದದಿಂದ ಶುಕ್ರಾರ್ತವವು ವ್ಯವಹರಿಸಲ್ಪಡಬೇಕು. ರಕ್ತಾರ್ತವವನ್ನು ರಜಸ್ಸು, ಪುಷ್ಪಶಬ್ದಗಳಿಂದ ವ್ಯವಹರಿಸುತ್ತಾರೆ. ಆದಕಾರಣ ಈ ಉಭಯಪದಗಳ ವ್ಯವಹಾರದಲ್ಲಿ ಭ್ರಮೆಪಡಲು **ಅವಕಾಶವಿರುವುದಿಲ್ಲ.**

ಮೂಲ—ರಕ್ತಾರ್ತವಯೋಃ ಸ್ವಭಾವಭೇದಃ—(ಸು। ಶಾ। ಅ। ೨)

ರಕ್ತಾರ್ತವಯೋಃ ಸೌಮ್ಯರಸಸಮುದ್ಭವತಯೋರಪಿ ಆರ್ತವಶೋಣಿತಮಾಗ್ನೇಯಮ್। ಕುತಃ? ಅಗ್ನೀಷೋಮೀಯತ್ವಾದ್ಗರ್ಭಸ್ಯ। ಸೌಮ್ಯಂ ಶುಕ್ರಮಾರ್ತವಮಾಗ್ನೇಯಮ್। ತಾಭ್ಯಾಮಗ್ನೀಷೋಮೀಯೋ ಗರ್ಭೋ ಭವತಿ। ಯದಿ ಅಗ್ನೀಷೋಮೀಯತ್ವಾದ್ಗರ್ಭಸ್ಯೇತ್ಯತ್ರ ಆರ್ತವಶೋಣಿತಯೋಃ ಸ್ವಭಾವಭೇದಃ ತದಾ ಆರ್ತವಸ್ಯ ಆಗ್ನೇಯತ್ವೇ ಉಕ್ತೇ ಶೋಣಿತಸ್ಯಾಪಿ ಆಗ್ನೇಯತ್ವಮುಕ್ತಮೇವೇತಿ ॥೧೪॥

ದೀಪಿಕೆ—ರಕ್ತಾರ್ತವಗಳ ಸ್ವಭಾವಭೇದಗಳು—(ಸು। ಶಾ।)

ರಕ್ತವೂ ಮತ್ತು ಆರ್ತವವೂ ಸೌಮ್ಯವಾದ ರಸಧಾತುವಿನಿಂದಲೇ ಉತ್ಪನ್ನವಾದರೂ ಆರ್ತವ ರಕ್ತವು ಆಗ್ನೇಯಗುಣವುಳ್ಳದ್ದು; ಶುಕ್ರವು ಸೌಮ್ಯ

ಗುಣವುಳ್ಳದ್ದು ; ಆರ್ತವವು ಆಗ್ನೇಯಗುಣವುಳ್ಳದ್ದು. ಏಕೆಂದರೆ—ಶುಕ್ರಾರ್ತವಗಳ ಸಂಯೋಗದಿಂದಉತ್ಪನ್ನವಾದ ಗರ್ಭವೂ ಅಗ್ನೀಷೋಮೀಯ (ಸೌಮ್ಯಾಗ್ನೇಯ) ಗುಣವುಳ್ಳದ್ದೇ ಆಗಿರುತ್ತದೆ; ಗರ್ಭೋತ್ಪತ್ತಿಗೆ ಅಗ್ನಿಸೋಮಗುಣಗಳೇ ಮುಖ್ಯ ಕಾರಣವೆಂದು ಹೇಳುವುದಾದರೆ ಆರ್ತವ ಮತ್ತು ಆರ್ತವಶೋಣಿತಗಳಿಗೆ ಸ್ವಭಾವ ಭೇದಗಳುಂಟಾಗುತ್ತವೆ; ಆಗ ಆರ್ತವಕ್ಕೆ ಆಗ್ನೇಯತ್ವವನ್ನು ಹೇಳಿದರೆ ರಕ್ತಕ್ಕೂ ಆಗ್ನೇಯತ್ವವನ್ನು ಹೇಳಿದಂತೆಯೇ ಆಯಿತು ॥ ೧೪ ॥

ಮೂಲ—ಅಶುದ್ಧಶುಕ್ರಶೋಣಿತಯೋರ್ಲಕ್ಷಣಚಿಕಿತ್ಸಿತೇ—(ಸು। ಶಾ। ಅ। ೨)

ವಾತಪಿತ್ತಶ್ಲೇಷ್ಮಶೋಣಿತಕುಣಪಗ್ರನ್ಥಿಪೂತಿಪೂಯಕ್ಷೀಣಮೂತ್ರಪುರೀಷರೇತಸಃ ಪ್ರಜೋತ್ಪಾದನೇ ನ ಸಮರ್ಥಾ ಭವನ್ತಿ ॥ ೧೫ ॥

ತೇಷು ವಾತವರ್ಣವೇದನಂ ವಾತೇನ, ಪಿತ್ತವರ್ಣವೇದನಂ ಪಿತ್ತೇನ, ಶ್ಲೇಷ್ಮವರ್ಣವೇದನಂ ಶ್ಲೇಷ್ಮಣಾ, ಶೋಣಿತವರ್ಣವೇದನಂ ಕುಣಪಗನ್ಧ್ಯನಲ್ಪಂ ಚ ರಕ್ತೇನ, ಗ್ರನ್ಥಿಭೂತಂ ಶ್ಲೇಷ್ಮವಾತಾಭ್ಯಾಂ, ಪೂತಿಪೂಯನಿಭಂ ಪಿತ್ತಶ್ಲೇಷ್ಮಭ್ಯಾಂ ಕ್ಷೀಣಂ ಪ್ರಾಗುಕ್ತಂ ಪಿತ್ತಮಾರುತಾಭ್ಯಾಂ, ಮೂತ್ರಪುರೀಷಗನ್ಧಿ ಸನ್ನಿಪಾತೇನೇತಿ। ತೇಷು ಕುಣಪಗ್ರನ್ಥಿಪೂತಿಪೂಯಕ್ಷೀಣರೇತಸಃ ಕೃಚ್ಛ್ರಸಾಧ್ಯಾಃ, ಮೂತ್ರಪುರೀಷರೇತಸಸ್ತ್ವಸಾಧ್ಯಾಃ ಸಾಧ್ಯಮನ್ಯಚ್ಚೇತಿ ॥೧೬॥

ಆರ್ತವಮಪಿ ತ್ರಿಭಿರ್ದೋಷೈಶ್ಶೋಣಿತಚತುರ್ಥೈಃ ಪೃಥಗ್ದ್ವನ್ದ್ವೈಸ್ಸಮಸ್ತೈಶ್ಚೋಪಸೃಷ್ಟಮಬೀಜಂ ಭವತಿ। ತದಪಿ ದೋಷವರ್ಣವೇದನಾದಿಭಿರ್ವಿಜ್ಞೇಯಮ್; ತೇಷು ಕುಣಪಗ್ರನ್ಥಿಪೂತಿಪೂಯಕ್ಷೀಣಮೂತ್ರಪುರೀಷಪ್ರಕಾಶಮಸಾಧ್ಯಂ ಸಾಧ್ಯಮನ್ಯಚ್ಚೇತಿ ॥೧೭॥

ತತ್ರ ವಾತದೋಷೇಣ ದೂಷಿತಯೋಶ್ಶುಕ್ರಶೋಣಿತಯೋರರುಣಕೃಷ್ಣೌ ವರ್ಣೌ ತೋದಭೇದಾದಿವಾತವೇದನಾಶ್ಚ ಭವನ್ತಿ। ಪಿತ್ತೇನ ದೂಷಿತಯೋಃ ಪೀತನೀಲೇ ವರ್ಣೇ ಕುಣಪಗನ್ಧ ಊಷಚೋಷಾದಿ ಪಿತ್ತವೇದನಾಃ। ಕಫದೂಷಿತಯೋಶ್ಶುಕ್ಲವರ್ಣಃ ವಿಸ್ರಗನ್ಧಃ ಕಣ್ಡ್ವಾದಿಕಫವೇದನಾಃ। ರಕ್ತೇನ ದೂಷಿತಯೋಃ ಕುಣಪಗನ್ಧಃ। ಕಫವಾತಾಭ್ಯಾಂ ದೂಷಿತೇ ಶುಕ್ರಾರ್ತವೇ ಗ್ರನ್ಥಿಸದೃಶೇ ಭವತಃ। ವಾತಪಿತ್ತಾಭ್ಯಾಂ ಕ್ಷೀಣೇ ಭವತಃ। ಪಿತ್ತಕಫಾಭ್ಯಾಂ ಪೂತಿಪೂಯನಿಭೇ, ಸನ್ನಿಪಾತೇನ ಮೂತ್ರಪುರೀಷಗನ್ಧಿನೀ ಭವತಃ ॥೧೮॥

ದೀಪಿಕೆ—ಅಶುದ್ಧಶುಕ್ರಾರ್ತವಗಳ ಲಕ್ಷಣಗಳು—(ಸು।ಶಾ।ಅ।೨)

ವಾತ ಪಿತ್ತ ಕಫ ರಕ್ತಗಳಿಂದ ಕೆಡಿಸಲ್ಪಟ್ಟ, ಹೆಣದ ವಾಸನೆಯುಳ್ಳ, ದುರ್ಗಂಧವುಳ್ಳ ಕೀವಿನಂತಿರುವ, ಕ್ಷಯಹೊಂದಿದ (ಅತ್ಯಲ್ಪಪ್ರಮಾಣದ) ಮೂತ್ರ ಪುರೀಷ ಗಂಧವುಳ್ಳ ಶುಕ್ರದಿಂದ ಪ್ರಜೋತ್ಪಾದನೆಯುಂಟಾಗುವುದಿಲ್ಲ. ಆರ್ತವವೂ ಕೂಡ ತ್ರಿದೋಷಗಳ ಮತ್ತು ರಕ್ತಗಳಲ್ಲಿ ಪ್ರತಿಯೊಂದರ ಎರಡೆರಡರ ಅಥವಾ ಎಲ್ಲವುಗಳೊಡನೆ ಮಿಶ್ರಣವಾಗಿದ್ದರೆ ನಿಷ್ಫಲವಾಗುತ್ತದೆ; ಅಂದರೆ ಪ್ರಜೋತ್ಪಾದನೆಯಾಗುವುದಿಲ್ಲ; ಅವುಗಳ ಪೈಕಿ ವಾತದೋಷದಿಂದ ಪೀಡಿತವಾದ ಶುಕ್ರಾರ್ತವಗಳು ಕೆಂಪುಮಿಶ್ರವಾದ ಕರಿಯ ಬಣ್ಣವುಳ್ಳುವಾಗಿಯೂ ಇರಿಯುವುದು, ಚುಚ್ಚುವುದು ಮೊದಲಾದ ವಾತವೇದನೆಗಳಿಂದ ಕೂಡಿಯೂ ಇರುತ್ತವೆ.

ಪಿತ್ತದುಷ್ಟವಾದರೆ ನೀಲಿ ಮತ್ತು ಹಳದಿ ಬಣ್ಣ, ಹೆಣದವಾಸನೆ, ಉರಿ ಚುರುಕು ಮೊದಲಾದ ಪಿತ್ತವೇದನೆಗಳಿಂದ ಕೂಡಿರುತ್ತವೆ. ಕಫದುಷ್ಟವಾದರೆ ಬೆಳ್ಳಗೂ, ಮಾಂಸದ ವಾಸನೆಯುಳ್ಳುವಾಗಿಯೂ, ಕಡಿತ ಶೋಥ ಮೊದಲಾದ ಕಫ ವೇದನೆಗಳಿಂದ ಕೂಡಿಯೂ, ರಕ್ತದಿಂದ ದುಷ್ಟವಾದರೆ ಹೆಣದ ವಾಸನೆಯುಳ್ಳು ವಾಗಿಯೂ, ವಾತಕಫಗಳಿಂದ ದೂಷಿತಗಳಾದರೆ ಗಂಟುಗಂಟಾಗಿಯೂ, ವಾತ ಪಿತ್ತಗಳಿಂದದೂಷಿತಗಳಾದರೆ ಅತ್ಯಲ್ಪಪ್ರಮಾಣವುಳ್ಳುವಾಗಿಯೂ, ಪಿತ್ತಕಫಗಳಿಂದ ದೂಷಿತಗಳಾಗಿದ್ದರೆ ಕೊಳೆತ ಕೀವಿನಂತೆಯೂ, ತ್ರಿದೋಷಗಳಿಂದ ದುಷ್ಟಗಳಾಗಿದ್ದರೆ ಮೂತ್ರ ಪುರೀಷಗಳ ವಾಸನೆಯುಳ್ಳವಾಗಿಯೂ ಇರುತ್ತವೆ. ಇವುಗಳ ಪೈಕಿ ಹೆಣದ ವಾಸನೆಯುಳ್ಳ, ಗಂಟುಗಂಟಾಗಿರುವ, ಕೊಳೆತ ಕೀವಿನಂತಿರುವ, ಅತಿಕ್ಷೀಣ ವಾದ, ಮೂತ್ರ ಪುರೀಷಗಂಧವುಳ್ಳ ಶುಕ್ರಾರ್ತವಗಳು ಚಿಕಿತ್ಸೆಗೆ ಅಸಾಧ್ಯಗಳು ; ಉಳಿದವು ಸಾಧ್ಯಗಳು ॥೧೮॥

ಮೂಲ—ಶುಕ್ರದೋಷಾಣಾಂ ಚಿಕಿತ್ಸಾವಿಧಾನಮ್—(ಸು।ಶಾ।ಅ೨।)

ತೇಷ್ವಾದ್ಯಾನ್ ಶುಕ್ರದೋಷಾಂಸ್ತ್ರೀನ್ ಸ್ನೇಹಸ್ವೇದಾದಿಭಿರ್ಜಯೇತ್।
ಕ್ರಿಯಾವಿಶೇಷೈರ್ಮತಿಮಾನ್ ತಥಾ ಚೋತ್ತರಬಸ್ತಿಭಿಃ ॥೧೯॥
ಪಾಯಯೇತ ನರಂ ಸರ್ಪಿರ್ಭಿಷಕ್ ಕುಣಪರೇತಸಿ ।
ಧಾತಕೀಪುಷ್ಪಖದಿರದಾಡಿಮಾರ್ಜುನಸಾಧಿತಮ್ ॥೨೦॥
ಪಾಯಯೇದಥವಾ ಸರ್ಪಿಃ ಶಾಲಸಾರಾದಿಸಾಧಿತಮ್ ।
ಗ್ರನ್ಥಿಭೂತೇ ಶಠೀಸಿದ್ಧಂ ಪಾಲಾಶೇ ವಾಪಿ ಭಸ್ಮನಿ ॥೨೧॥
ಪರೂಷಕವಟಾದಿಭ್ಯಾಂ ಪೂಯಪ್ರಖ್ಯೇ ಚ ಸಾಧಿತಮ್।
ಪ್ರಾಗುಕ್ತಂ ವಕ್ಷ್ಯತೇ ಯಚ್ಚ ತತ್ ಕಾರ್ಯಂ ಕ್ಷೀಣರೇತಸಿ ॥೨೨॥
ವಿಟ್ಪ್ರಭೇ ಪಾಯಯೇತ್ ಸಿದ್ಧಂ ಚಿತ್ರಕೋಶೀರಹಿಙ್ಗುಭಿಃ ।
ಸ್ನಿಗ್ಧಂ ವಾನ್ತಂ ವಿರಿಕ್ತಂ ಚ ನಿರೂಢಮನುವಾಸಿತಮ್ ॥೨೩॥
ಯೋಜಯೇಚ್ಛುಕ್ರದೋಷಾರ್ತಂ ಸಮ್ಯಗುತ್ತರಬಸ್ತಿನಾ ।

ದೀಪಿಕೆ—ಶುಕ್ರದೋಷಗಳನ್ನು ಶುದ್ಧಿಪಡಿಸುವ ಕ್ರಮವು—(ಸು। ಶಾ। ಅ। ೨)

ಬುದ್ಧಿವಂತನಾದ ವೈದ್ಯನು ಮೊದಲನೆಯ ಮೂರು ದೋಷಗಳಿಂದ ದುಷ್ಟ ವಾದ ಶುಕ್ರವುಳ್ಳ ಪುರುಷನಿಗೆ ಸ್ನೇಹಸ್ವೇದವಮನ ವಿರೇಚನ ಆಸ್ಥಾಪನ, ಅನ್ವಾಸನ ಬಸ್ತಿಗಳನ್ನೂ ಉತ್ತರ ಬಸ್ತಿಯನ್ನೂ ಪ್ರಯೋಗಮಾಡಿ ನಿವಾರಣೆ ಮಾಡಬೇಕು; ಹೆಣದ ವಾಸನೆಯುಳ್ಳ ಶುಕ್ರದೋಷವುಳ್ಳವನಿಗೆ ಹಿಂದಿನ ಕ್ರಿಯಾಪ್ರಯೋಗ ಗಳನ್ನು ಮಾಡಿಸಿದ ಮೇಲೆ ಧಾತಕೀಕುಸುಮ, ಕಗ್ಗಲಿ ತೊಗಟೆ, ದಾಳಿಂಬೆ ಸಿಪ್ಪೆ, ಮತ್ತಿ ಗಿಡದ ತೊಗಟೆಗಳನ್ನು ಸೇರಿಸಿ ತಯಾರಿಸಿದ ತುಪ್ಪವನ್ನು ಪಾನ ಮಾಡಿಸಬೇಕು ; ಅಥವಾ ತೇಗದ ಮರದ ನಿರ್ಯಾಸದಿಂದ ತಯಾರಿಸಿದ ತುಪ್ಪ ವನ್ನಾಗಲೀ ಕುಡಿಸಬೇಕು ; ಶುಕ್ರವು ಗಂಟುಗಂಟಾಗಿದ್ದರೆ ಕಚೋರವನ್ನು ಸೇರಿಸಿ ತಯಾರಿಸಿದ ತುಪ್ಪವನ್ನಾಗಲೀ ಮುತ್ತುಗದ ಭಸ್ಮದಿಂದ ತಯಾರಿಸಿದ ತುಪ್ಪವನ್ನಾಗಲೀ ಕುಡಿಸಬೇಕು ; ಕೀವಿನಂತೆ ಸ್ರವಿಸುವ ಶುಕ್ರದೋಷದಲ್ಲಿ

ಖರ್ಜೂರ, ಆಲದ ಬಿಳಲುಗಳನ್ನು ಸೇರಿಸಿ ತಯಾರಿಸಿದ ತುಪ್ಪವನ್ನು ಕುಡಿಸ ಬೇಕು ; ಕ್ಷೀಣಶುಕ್ರವುಳ್ಳ ಪುರುಷನಿಗೆ ಶುಕ್ರವೃದ್ಧಿಕರಗಳಾದ ಆಹಾರವಿಹಾರಗಳು ಹಿತಕರಗಳು ; ಮೂತ್ರಪುರೀಷಗಳಂತೆ ವಾಸನೆಯುಳ್ಳ ಶುಕ್ರದೋಷದವನಿಗೆ ಚಿಕಿತ್ಸೆಯು ಅಸಾಧ್ಯವೆಂದು ಹೇಳಿದರೂ ಈ ವ್ಯಾಧಿಯು ಯಾಪ್ಯವಾದ ಕಾರಣ ಅಂಥ ರೋಗಿಗೆ ಸ್ನೇಹಸ್ವೇದಾದಿ ಅನ್ವಾಸನಾನ್ತ ಕರ್ಮಗಳನ್ನೂ ಮಾಡಿಸಿ ಅನಂತರ ಚಿತ್ರಮೂಲದ ತೊಗಟೆ ಲಾಮಂಚದ ಬೇರು, ಹಿಙ್ಗು ಇವುಗಳನ್ನು ಸೇರಿಸಿ ತಯಾರಿಸಿದ ಘೃತವನ್ನು ಪಾನಮಾಡಿಸಬೇಕು.

ಮೂಲ—ಆರ್ತವಶುದ್ಧ್ಯುಪಾಯಾಃ—(ಸು। ಶಾ। ಅ। ೨)।)

ವಿಧಿಮುತ್ತರಬಸ್ತ್ಯನ್ತಂ ಕುರ್ಯಾದಾರ್ತವಶುದ್ಧಯೇ ॥೨೪॥
ಸ್ತ್ರೀಣಾಂ ಸ್ನೇಹಾದಿಯುಕ್ತಾನಾಂ ಚತಸೃಷ್ವಾರ್ತವಾರ್ತಿಷು।
ಕುರ್ಯಾತ್ಕಲ್ಕಾನ್ ಪಿಚೂಂಶ್ಚಾಪಿ ಪಥ್ಯಾನ್ಯಾಚಮನಾನಿ ಚ ॥೨೫॥
ಗ್ರನ್ಥಿಭೂತೇ ಪಿಬೇತ್ಪಾಠಾಂ ತ್ರ್ಯೂಷಣಂ ವೃಕ್ಷಕಾಣಿಚ।
ದುರ್ಗನ್ಧೇ ಪೂಯಸಙ್ಕಾಶೇ ಮಜ್ಜತುಲ್ಯೇ ತಥಾರ್ತವೇ ॥೨೬॥
ಪಿಬೇದ್ಭದ್ರಶ್ರಿಯಃ ಕ್ವಾಥಂ ಚನ್ದನಕ್ವಾಥಮೇವ ಚ।
ಶುಕ್ರದೋಷಹರಾಣಾಂ ಚ ಯಥಾಸ್ವಮವಚಾರಣಮ್ ॥೨೭॥
ಯೋಗಾನಾಂ ಶುದ್ಧಿಕರಣಂ ಶೇಷಾಸ್ವಪ್ಯಾರ್ತವಾರ್ತಿಷು।
ಅನ್ನೇ ಶಾಲಿಯವಂ ಮದ್ಯಂ ಹಿತಂ ಮಾಂಸಂ ಚ ಪಿತ್ತಲಮ್ ॥೨೮॥

ದೀಪಿಕೆ—ಆರ್ತವವು ಶುದ್ಧಿಯಾಗಲು ಅನುಸರಿಸಬೇಕಾದ ಉಪಾಯಗಳು— (ಸು। ಶಾ। ಅ। ೨)

ಆರ್ತವ ದೋಷವುಳ್ಳ ಸ್ತ್ರೀಯರಿಗೆ ಸ್ನೇಹಸ್ವೇದ ವಿಧಾನಗಳನ್ನೂ ವಮನ ವಿರೇಚನ ಆಸ್ಥಾಪನ ಅನ್ವಾಸನ ಬಸ್ತಿವಿಧಾನಗಳನ್ನೂ ಉತ್ತರಬಸ್ತಿ ವಿಧಾನವನ್ನೂ ಮಾಡಿಸಿ ಶುದ್ಧವಾದ ದೇಹಕ್ಕೆ ದೋಷ ಹರಗಳಾದ ಕಲ್ಕಗಳನ್ನೂ ಪಿಚುಗಳನ್ನೂ (ಔಷಧಿ ಮಿಶ್ರಮಾಡಿದ ಹತ್ತಿಯ ಮುದ್ದೆ ಯಾ ಉಂಡೆ) ಯೋನಿಯೊಳಗೆ ಇಟ್ಟು ಅನಂತರ ದೋಷಹರಗಳಾದ ಕಷಾಯಗಳಿಂದ ಯೋನಿಕ್ಷಾಳನವನ್ನು ಮಾಡಿಸಬೇಕು. ಆರ್ತವವು ಗಂಟು ಗಂಟಾಗಿ ಸ್ರವಿಸುತ್ತಿದ್ದರೆ ಅಗಳುಶುಂಠಿ, ತ್ರಿಕಟು, ಮತ್ತು ಕೊಡಶಿಗೆ ತೊಗಟೆಗಳ ಕಷಾಯವನ್ನು ಕುಡಿಸಬೇಕು ; ಮಜ್ಜಧಾತುವಿನಂತೆಯೂ ಕೀವಿನಂತೆಯೂ ದುರ್ಗನ್ಧಸ್ರಾವವಾಗುವ ಆರ್ತವದೋಷದಲ್ಲಿ ಶ್ರೀಗಂಧದ ಅಥವಾ ರಕ್ತಗಂಧದ ಕಷಾಯವನ್ನು ಕುಡಿಸಬೇಕು. ಉಳಿದ ಆರ್ತವವಿಕಾರಗಳಲ್ಲಿ ಅದೇ ವಿಧದ ಶುಕ್ರವಿಕಾರದವರಿಗೆ ನಿವಾರಿಸಲು ಹೇಳಿರುವ ಕಷಾಯಯೋಗಗಳನ್ನೇ ತಯಾರಿಸಿ ಉಪಯೋಗಿಸಬೇಕು ; ಕೆಂಪುಶಾಲಿ ಮತ್ತು ಯವೆಗಳನ್ನು ಆಹಾರಕ್ಕೂ ಮದ್ಯವನ್ನು ಪಾನಕ್ಕೂ ಉಪಯೋಗಿಸಬಹುದು. ಪಿತ್ತಕರಗಳಾದ ಮಾಂಸವೂ ಹಿತಕರವಾದದ್ದು.

ಮೂಲ—ಅಸೃಗ್ದರಲಕ್ಷಣಚಿಕಿತ್ಸಿತೇ ಸ್ತ್ರೀರೋಗೇ ದ್ರಷ್ಟವ್ಯೇ—

ಕ್ಷೀಣಾರ್ತವಲಕ್ಷಣಚಿಕಿತ್ಸಿತೇ— (ಸು।ಶಾ।ಅ। ೨)
ದೋಷೈರಾವೃತಮಾರ್ಗತ್ವಾದಾರ್ತವಂ ನಶ್ಯತಿ ಸ್ತ್ರೀಯಾಃ ।
ತತ್ರ ಮತ್ಸ್ಯಕುಳತ್ಥಾಮ್ಲತಿಲಮಾಷ ಸುರಾ ಹಿತಾಃ ॥೨೯॥
ಪಾನೇ ಮೂತ್ರಮುದಶ್ವಿಚ್ಚ ದಧಿಶುಕ್ತಂ ಚ ಭೋಜನೇ ।
ಕ್ಷೀಣಂ ಪ್ರಾಗೀರಿತಂ ರಕ್ತಂ ಸಲಕ್ಷಣಚಿಕಿತ್ಸಿತಮ್ ॥೩೦॥
ತಥಾಪ್ಯತ್ರ ವಿಧಾತವ್ಯಂ ವಿಧಾನಂ ನಷ್ಟರಕ್ತವತ್ ।

ದೀಪಿಕೆ--ಅಸೃಗ್ದರಲಕ್ಷಣಚಿಕಿತ್ಸೆಗಳನ್ನು ಸ್ತ್ರೀರೋಗದಲ್ಲಿ ವಿವರಿಸಿರುತ್ತೇವೆ.

ಕ್ಷೀಣಾರ್ತವಲಕ್ಷಣ ಚಿಕಿತ್ಸೆಗಳು--(ಸು। ಶಾ। ಅ। ೨)

ಪ್ರಕುಪಿತಗಳಾದ ಕಫ ಮತ್ತು ವಾತಕಫ ದೋಷಗಳು (ಪಿತ್ತದೋಷವು ಆರ್ತವವೃದ್ಧಿಯನ್ನುಂಟುಮಾಡುತ್ತಾಗಿ ಕ್ಷೀಣಾರ್ತವಕ್ಕೆ ಕಾರಣವಾಗುವುದಿಲ್ಲ.) ಸ್ತ್ರೀಯರ ಆರ್ತವವಾಹಿಸಿರೆಗಳನ್ನಾಶ್ರೈಸಿ ಆರ್ತವವನ್ನು ನಾಶಗೊಳಿಸುತ್ತವೆ. ಈವಿಧ ದೋಷವುಳ್ಳ ಸ್ತ್ರೀಯರಿಗೆ ಮೀನು, ಹುರಳಿ, ಹುಳಿಕಲಗಚ್ಚು, ಎಳ್ಳು, ಉದ್ದು, ಸುರೆಯೆಂಬ ಮದ್ಯ ಇವುಗಳು ಹಿತಕರಗಳು; ಗೋಮೂತ್ರವನ್ನು ಪಾನ ಮಾಡಿಸಬೇಕು ; ಅರ್ಧನೀರುಬೆರೆಸಿದ ಮೊಸರು, ಬರಿಯಮೊಸರು, ಶುಕ್ತ (ಕಂದಮೂಲ ಫಲಗಳನ್ನು ಸೇರಿಸಿ ತಯಾರಿಸಿದ ಪಾನವಿಶೇಷ) ಇವು ಹಿತಕರ ಗಳು. ಕ್ಷೀಣಾರ್ತವದ ಚಿಕಿತ್ಸೆಯನ್ನೂ ಕ್ಷೀಣವಾದ ಧಾತುರಕ್ತದ ಚಿಕಿತ್ಸೆ ಯಂತೆಯೇ ಮಾಡಬೇಕು.

ಮೂಲ—ಆರ್ತವವಿಸರ್ಪಣೇ ಹೇತುಃ—(ಸು। ಶಾ। ಅ। ೨)

ಘೃತಪಿಣ್ಡೋ ಯಥೈವಾಗ್ನಿಮಾಶ್ರಿತಃ ಪ್ರವಿಲೀಯತೇ ।
ವಿಸರ್ಪತ್ಯಾರ್ತವಂನಾರ್ಯಾಸ್ತಥಾ ಪುಂಸಾಂ ಸಮಾಗಮೇ ॥೩೧॥

ಅಸ್ಯಾರ್ಥಃ—

ಅಗ್ನಿಮಾಶ್ರಿತೋ ಘೃತಪಿಣ್ಡೋ ಯಥಾ ಪ್ರವಿಲೀಯತೇ ಪೂರ್ವಾವಕಾಶ-ಸ್ಯಾಪರ್ಯಾಪ್ತತಯಾ ತಮುಲ್ಲಙ್ಘ್ಯ ಬಹಿರ್ಗಚ್ಛತಿ ತಥಾರ್ತವಂ ಸ್ಫೋಟಕಾನ್ತರ್ಗತಂ ಮೈಥುನಾದಿಕೃತೋಷ್ಮಣಾ ವಿಲಯನೇ ಸ್ಫೋಟಕಾನ್ತರ್ಭಗಾತ್ ಬಹಿರ್ನಿಸ್ಸರ-ತೀತಿ ಭಾವಃ ।

ದೀಪಿಕೆ--ಆರ್ತವಸ್ರಾವಕ್ಕೆ ಕಾರಣ—(ಸು। ಶಾ। ಅ। ೨)

ಗಡ್ಡೆಯಾದ ತುಪ್ಪವು ಅಗ್ನಿಯ ಹತ್ತಿರವಿದ್ದರೆ ಕರಗಿ ಮೊದಲಿದ್ದ ಸ್ಥಳ ಕ್ಕಿಂತ ಹೆಚ್ಚುಸ್ಥಳಕ್ಕೆ ಹರಡಿ ಹೊರಹೊಮ್ಮುವಂತೆಯೇ ಸ್ತ್ರೀಪುರುಷರ ಸಮಾಗಮ ಕಾರಣದಿಂದ ಪರಸ್ಪರ ದೇಹಗಳ ಘರ್ಷಣೆಯಿಂದ ಉತ್ಪನ್ನವಾಗುವ ಶಾಖದಿಂದ ಜಿನುಗಿದ ಆರ್ತವವು ಗರ್ಭಾಶಯದ ಮೂಲಕ ಭಗದ ಮುಖಕ್ಕೆ ಹರಿದು ಬರುತ್ತದೆಂದು ಅಭಿಪ್ರಾಯವು.

ದ್ವಿತೀಯೋಽಧ್ಯಾಯಃ

ಜನನೇನ್ದ್ರಿಯವಿಜ್ಞಾನಮ್.

ಮೂಲ—

ಗರ್ಭಾಶಯಸಹವರ್ತಿನಾಂ ಶರೀರಾವಯವಾದೀನಾಂ ಸಾಮಾನ್ಯವಿವರಣಮ್—(ಸು। ಶಾ। ಅ। ೫)

ಕಟೀಗುಹಾ—ಅಸ್ಥೀನಿ—ಶ್ರೋಣ್ಯಾಂ ಪಞ್ಚಾಸ್ಥೀನಿ ಭವನ್ತಿ । ತೇಷಾಂ ಗುದಭಗನಿತಮ್ಬೇಷು ಚತ್ವಾರಿ, ತ್ರಿಕಸಂಶ್ರಿತಮೇಕಮ್।ನಿತಮ್ಬೇ ಕಪಾಲಸಂಜ್ಞಕಾನ್ಯಸ್ಥೀನಿ–ದ್ವೇ ಶ್ರೋಣೀಫಲಕೇ ಏಕಂ ಭಗಾಸ್ಥಿ ಸ್ತ್ರೀಣಾಮ್ । (ಪುಂಸಾಂ ಮೇಢ್ರಾಸ್ಥಿ).

ಸನ್ಧಯಃ—ತ್ರಯಸ್ಸನ್ಧಯಃ ಕಟೀಕಪಾಲೇಷು । ಗುದಭಗನಿತಮ್ಬೇಷು ಸಾಮುದ್ಗಾಃ (ಸನ್ಧಯಃ)। ಕಟೀಕಪಾಲೇಷು ತುನ್ನಸೇವನ್ಯಃ

ಸ್ನಾಯವಃ—ಸ್ನಾಯೂನಾಂ ಕಟ್ಯಾಂ ಷಷ್ಟಿಃ ।

ಎರಡನೆಯ ಅಧ್ಯಾಯ

ಜನನೇನ್ದ್ರಿಯವರ್ಣನೆ.

ದೀಪಿಕೆ—(ಸು। ಶಾ। ಅ। ೫.)

ಗರ್ಭಕೋಶ ಮತ್ತು ಅದರ ಸಮೀಪದಲ್ಲಿರುವ ಇತರ ಅವಯುವಗಳು—ಸೊಂಟ (ನಡುವಿನ ಭಾಗ)–ನಡುವಿನಲ್ಲಿ ಹೆಂಚಿನಂತೆ ಅಗಲವಾದ ಎರಡು ಮೂಳೆ(ಎಲಬು)ಗಳು, ಒಂದು ಭಗದ ಮೂಳೆ, ಒಂದು ಗುದದ ಮೂಳೆ, ಒಂದು ತ್ರಿಕದ ಮೂಳೆ ಅಂತು ಇವ್ವೈದು ಮೂಳೆಗಳಿಂದ ಕೂಡಿದ ಅಗಲವಾದ ಮತ್ತು ಆಳವಾದ ಗುಂಡಾದ ತೊಟ್ಟಿಯ ಆಕಾರದ ಪ್ರದೇಶವಿದೆ ॥೧॥

ಅಸ್ಥಿಸನ್ಧಿಗಳು ಮೂರು—ಗುದ, ಭಗ, ಸೊಂಟಗಳಲ್ಲಿ ಭರಣಿಯ ಮುಚ್ಚಳದ ಜೋಡಣೆಯಂತಿರುವ ಸಂಧಿಗಳೆರಡು ; ನಡುವಿನ ಮೂಳೆಗಳೂ ಬೆನ್ನು ಮೂಳೆಗಳೂ ಸೇರಿ ಗರಗಸದ ಹಲ್ಲುಗಳ ಆಕಾರದ ಸನ್ಧಿಯೊಂದು ಇದಕ್ಕೆ ತುನ್ನ ಸೇವನೀ ಎಂದು ಹೆಸರು ॥೨॥

ಸ್ನಾಯುಗಳು (ದಪ್ಪನರಗಳು)—ಸೊಂಟದಲ್ಲಿ ಅರವತ್ತು ನರಗಳಿವೆ ॥೩॥

ಮೂಲ—(ಸು। ಶಾ। ಅ। ೨)

ಆಶಯಾಃ—ಅಧೋಭಾಗೋ ಗುರುಃ ಸ್ತ್ರೀಣಾಮೂರ್ಧ್ವಂ ಪುಂಸಾಂ ತಥಾ ಗುರುಃ । ಪುರುಷಾಪೇಕ್ಷಯಾ ನಾರೀಣಾಮಾಶಯಾಸ್ತ್ರಯ ಅಧಿಕಾಃ—ಏಕೋ ಗರ್ಭಾಶಯಃ ದ್ವೌ ಸ್ತನ್ಯಾಶಯೌ ಚ। ಸ್ತ್ರೀಣಾನ್ತು ಬಸ್ತಿಪಾರ್ಶ್ವಗತೋ ಗರ್ಭಾಶಯಃ ಬಸ್ತಿಪಕ್ವಾಶಯಾನ್ತರೇ ವರ್ತತೇ ॥೪॥

ತಥಾ ಚ—

ಭಗಸ್ಯಾಧಃ ಸ್ತ್ರಿಯೊ ಬಸ್ತಿರೂರ್ಧ್ವಂ ಗರ್ಭಾಶಯಸ್ಥಿತಃ ।
ಶಙ್ಖನಾಭ್ಯಾಕೃತಿರ್ಯೋನಿಸ್ತ್ರ್ಯಾವರ್ತಾ ಸಾ ಪ್ರಕೀರ್ತಿತಾ ॥೫॥
ತಸ್ಯಾಸ್ತೃತೀಯೇತ್ವಾವರ್ತೇ ಗರ್ಭಶಯ್ಯಾ ಪ್ರತಿಷ್ಠಿತಾ ।
ಯಥಾ ರೋಹಿತ ಮತ್ಸ್ಯಸ್ಯ ಮುಖಂ ಭವತಿ ರೂಪತಃ ॥೬॥

ತತ್ಸಂಸ್ಥಾನಾಂ ತಥಾರೂಪಾಂ ಗರ್ಭಶಯ್ಯಾಂ ವಿದುರ್ಬುಧಾಃ। ಗರ್ಭಶಯ್ಯಾಯಾಂ ಗರ್ಭಸ್ತಿಷ್ಠತಿ । ಯೋನಿಶಬ್ದೇನ ಭಗೋಪಸ್ಥೌ ಯೋನಿಮಾರ್ಗೋ ಗರ್ಭಾಶಯಶ್ಚ ಲಕ್ಷ್ಯತೇ ಸಾಕಲ್ಯೇನ ಪೃಥಕ್ತ್ವೇನ ವಾ ॥ ದ್ವಾದಶಾಙ್ಗುಳಾನಿ ಭಗವಿಸ್ತಾರಃ। ತಥಾ ಸ್ತನಯೋರನ್ತರಮಿತಿ । ಪುರುಷೋರಃಪ್ರಮಾಣವಿಸ್ತೀರ್ಣಾ ಸ್ತ್ರೀಶ್ರೋಣಿಃ । ಅಷ್ಟಾದಶಾಙ್ಗುಳವಿಸ್ತಾರಮುರಃ । ದೇಹಃ ಸ್ವೈರೇವಾಙ್ಗುಳೈರ್ಯಥಾವದನುಕೀರ್ತಿತಃ । ನಿಗೂಢರೋಮಾ ಯೋನಿಃ ॥೭॥

ದೀಪಿಕೆ—ಆಶಯಗಳು—ಸ್ತ್ರೀಯರಿಗೆ ದೇಹದ ಕೆಳಭಾಗವು (ಹೊಕ್ಕಳಿಂದ ಕೆಳಗೆ) ಗುರು (ಭಾರ) ವಾಗಿರುತ್ತದೆ ; ಗಂಡಸರಿಗೆ ಹೊಕ್ಕಳ ಮೇಲ್ಭಾಗವು ಗುರುವು ; ಗಂಡಸರಿಗಿರುವ ಏಳು ಆಶಯಗಳು ಸ್ತ್ರೀಯರಿಗೂ ಇರುತ್ತವೆಯಲ್ಲದೆ ಅವರಿಗೆ ಒಂದು ಗರ್ಭಾಶಯವೂ ಸ್ತನ್ಯಕ್ಕೆ ಆಶ್ರಯಗಳಾದ ಎರಡು ಸ್ತನಗಳೂ ಸೇರಿ ಮೂರು ಆಶಯಗಳೂ ಹೆಚ್ಚಾಗಿವೆ. ಸ್ತ್ರೀಯರಿಗೆ ಮೂತ್ರಾಶಯದ ಬಲಗಡೆ ಬಸ್ತ್ಯಾಶಯ ಪಕ್ವಾಶಯಗಳ ಮಧ್ಯದಲ್ಲಿ ಗರ್ಭಾಶಯವಿದೆ ॥೪॥

ವೈತರಣರಮತ—ಸ್ತ್ರೀಯರಿಗೆ ಭಗದ ಕೆಳಭಾಗದಲ್ಲಿ ಬಸ್ತ್ಯಾಶಯದ ಮೇಲೆ ಗರ್ಭಾಶಯವಿರುತ್ತದೆ ॥೫॥

ಯೋನಿಯ ವಿವರಣೆ—ಗರ್ಭಾಶಯಕ್ಕೆ ಶಂಖದ ಒಳಭಾಗದಲ್ಲಿರುವಂತೆ ಮೂರು ಪದರಗಳಿರುತ್ತವೆ ; ಮತ್ತು ಮೂರನೆಯ ಪದರದಲ್ಲಿಯೇ ಗರ್ಭವು ನಿಂತು ಬೆಳೆಯುತ್ತದೆ. ಹೊಟ್ಟೆಯು ಗುಂಡಾಗಿ ದಪ್ಪವಾಗಿಯೂ, ಮುಖವು ಸಣ್ಣದಾಗಿಯೂ ಇರುವ "ರೋಹಿತ" ವೆಂಬ ಜಾತಿ ಮೀನಿನ ಆಕಾರದಂತೆ ಗರ್ಭಾಶಯದ ಸ್ವರೂಪವಿರುತ್ತದೆ ॥೬॥

ಯೋನಿಯೆಂದರೆ ಭಗದ ಹೊರಗಡೆ ಕಾಣುವ ಮಾಂಸಪೇಶಿಗಳೂ ಅಪತ್ಯಮಾರ್ಗವೂ ಮತ್ತು ಗರ್ಭಾಶಯವೂ ಈ ಮೂರು ಅವಯವಗಳ ಒಟ್ಟಿಗೆ ಅಥವಾ ಇವುಗಳಲ್ಲೊಂದು ಅವಯವವೆಂದರ್ಥವು.

ಭಗದ ಅಗಲ ಹನ್ನೆರಡು ಅಂಗುಳಿಗಳು ; ಎರಡು ಸ್ತನಗಳ ಮಧ್ಯಭಾಗವೂ ಇಷ್ಟೇ (೧೨ ಅಂ.) ಇರುತ್ತದೆ; ಪುರುಷರ ಎದೆಯ ಅಡ್ಡಳತೆಯಷ್ಟೇ ಸ್ತ್ರೀಯರ ನಡುವಿನ ಸುತ್ತಳತೆ ಇರುತ್ತದೆ; ಅಂದರೆ ಪುರುಷರ ಎದೆಯ ಅಗಲ ಹದಿನೆಂಟು ಅಂಗುಳಿಗಳಷ್ಟು; ಅವರವರ ಕೈಬೆರಳುಗಳಿಂದಲೇ ಮೇಲ್ಕಂಡ ಪ್ರದೇಶಗಳನ್ನು ಅಳತೆ ಮಾಡಬೇಕು; ಯೋನಿಯು ಕೂದಲಿನಿಂದ ಆವೃತವಾಗಿರುತ್ತದೆ ॥೭॥

ಮೂಲ—ಸ್ರೋತಾಂಸಿ—(ಸು। ಶಾ। ಅ। ೫)

ಪುರುಷಾಪೇಕ್ಷಯಾ ಸ್ತ್ರೀಣಾಮಪರಾಣಿ ಚಾಧಿಕಾನಿ ತ್ರೀಣಿ ಸ್ರೋತಾಂಸಿ— ದ್ವೇ ಸ್ತನಯೋರೇಕಮಧಸ್ತಾದ್ರಕ್ತವಹಂ ಚ। ಸ್ಮರಾತಪತ್ರಸ್ಯಾಧೋ ವರ್ತತೇ ಆರ್ತವವಹಂ ಸ್ರೋತಃ । ಸ್ಮರಾತಪತ್ರಂ—ಭಗಸ್ಯೋಪರಿತನೋ ಭಾಗೋ ರೋಮ್ಣಾಚ್ಛಾದಿತಃ ॥೮॥

ದೀಪಿಕೆ—ಸ್ರೋತಸ್ಸುಗಳು—(ಸು। ಶಾ। ಅ। ೫) ಪುರುಷರ ದೇಹದಲ್ಲಿರುವುದಕ್ಕಿಂತ ಸ್ತ್ರೀಯರ ದೇಹದಲ್ಲಿ ಮೂರು ಸ್ರೋತೋಮಾರ್ಗಗಳು ಹೆಚ್ಚಾಗಿವೆ. ಸ್ತನಗಳಲ್ಲೆರಡು, ಕೆಳಗಡೆಗೆ ರಜೋವಾಹಿಯು ಒಂದು; ಈ ರಜೋವಾಹಿ ಸ್ರೋತಸ್ಸು ರೋಮಗಳಿಂದ ಆಚ್ಛಾದಿತವಾದ ಭಗಪ್ರದೇಶದಲ್ಲಿ ಮೂತ್ರವಾಹಿ ಸ್ರೋತಸ್ಸಿನ ಕೆಳಗಿರುತ್ತದೆ ॥೮॥

ಮೂಲ—ಪೇಶ್ಯಃ—(ಸು। ಶಾ। ಅ। ೫)

ಪುರುಷಾಪೇಕ್ಷಯಾ ಸ್ತ್ರೀಣಾಮ್ ವಿಂಶಾಧಿಕಾಃ ಪೇಶ್ಯಃ । ದಶ ತಾಸಾಂ ಸ್ತನಯೋರೇಕೈಕಸ್ಮಿನ್ ಪಂಚ ಪಂಚ ಯೌವನೇ ತಾಸಾಂ ಪರಿವೃದ್ಧಿಃ। ಅಪತ್ಯಪಥೇ ಚತಸ್ರಃ ತಾಸಾಂ ಪ್ರಸೃತೇಽಭ್ಯನ್ತರತೋ ದ್ವೇ ಮುಖಾಶ್ರಿತೇ ಬಾಹ್ಯೇ ವೃತ್ತೇ ಚ ದ್ವೇ। ಗರ್ಭಚ್ಛಿದ್ರಸಂಶ್ರಿತಾಸ್ತಿಸ್ರಃ । ಶುಕ್ರಾರ್ತವಪ್ರವೇಶಿನ್ಯಸ್ತಿಸ್ರ ಏವ ॥೯॥

ದೀಪಿಕೆ—(ಸು।ಶಾ।ಅ। ೫)

ಮಾಂಸಖಂಡಗಳು—ಪುರುಷರಿಗಿಂತ ಸ್ತ್ರೀಯರ ದೇಹದಲ್ಲಿ ೨೦ ಮಾಂಸಖಂಡಗಳು ಅಧಿಕವಾಗಿವೆ; ಯೌವನದಲ್ಲಿ ವೃದ್ಧಿಹೊಂದಿ ಕಾಣಬರುವ ಸ್ತನಗಳೊಂದೊಂದರಲ್ಲಿ ಐದೈದರಂತೆ ಆಗುವ ಹತ್ತು ಮಾಂಸಖಂಡಗಳು; ಯೋನಿಯೊಳಗಡೆ ಪ್ರಸಾರವಾಗಿ ಮೂತ್ರಸ್ರೋತೋರೂಪದಿಂದ ಕಾಣಬರುವುವು ಎರಡು ಮಾಂಸಖಂಡಗಳು; ಯೋನಿಯ ಹೊರಗಡೆ ಹೊರಟುಬಂದಿರುವ ಗುಂಡಾದ (ಎರಡು ಪಕ್ಕಗಳಲ್ಲೂ ಇರುವ) ಎರಡು ಮಾಂಸಖಂಡಗಳು; ಗರ್ಭಾಶಯದ ಒಳಗೆ ಮೂರು ಪದರಾಗಿ ಕಾಣಬರುವುವು ಮೂರು ಮಾಂಸಖಂಡಗಳು, ಶುಕ್ರಾರ್ತವಗಳನ್ನು ಗರ್ಭಾಶಯದೊಳಗೆ ಪ್ರವೇಶಿಸುವಂತೆ ಸಹಕರಿಸುವುವು ಮೂರು; ಈ ರೀತಿ ೨೦ ಮಾಂಸಖಂಡಗಳು ಅಧಿಕವಾಗಿವೆ. ॥೯॥

ಮೂಲ—ಧಮನ್ಯಃ—(ಸು।ಶಾ।ಅ। ೯)

ದ್ವೇ ಸ್ತನ್ಯಂ ಸ್ತ್ರಿಯಾ ವಹತಃ ಸ್ತನಸಂಶ್ರಿತೇ । ತೇ ಏವ ನರಸ್ಯ ಶುಕ್ರಂ ಸ್ತನಾಭ್ಯಾಮಭಿವಹತಃ ಶುಕ್ರವಹೇ ದ್ವೇ । ದ್ವೇ ಶುಕ್ರವಿಸರ್ಗಾಯ ತೇ ಏವ ರಕ್ತಮಭಿವಹತೋ ವಿಸೃಜತಶ್ಚ ನಾರೀಣಾಮಾರ್ತವಸಂಜ್ಞೇ ।।೧೦॥

ಉಕ್ತಂ ಚ:—ಅಧೋಗಮಾಸ್ತು ವಾತಮೂತ್ರ ಪುರೀಷಶುಕ್ರಾರ್ತವಾದೀನ್ಯಧೋ ವಹನ್ತಿ। ಏತಾಭಿರಧೋನಾಭೇಃ ಪಕ್ವಾಶಯಕಟೀಮೂತ್ರಪುರೀಷಗುದಬಸ್ತಿಮೇಢ್ರ-ಸಕ್ಥೀನಿ ಧಾರ್ಯನ್ತೇ ಯಾಪ್ಯನ್ತೇ ಚ ।।೧೦।।

ದೀಪಿಕೆ—ಧಮನಿಗಳು—(ಸು।ಶಾ।ಅ।೯)

ಸ್ತ್ರೀಯರಿಗೆ ಸ್ತನಗಳಿಗೆ ಹಾಲನ್ನು ತಂದೊಯ್ಯುವುದಕ್ಕೆ ಎರಡು ಧಮನಿಗಳೂ ಗರ್ಭಾಶಯದಿಂದ ಯೋನಿಗೆ ರಜಸ್ಸನ್ನು ತೆಗೆದುಕೊಂಡು ಹೋಗುವುದಕ್ಕೆ ಎರಡು ಧಮನಿಗಳೂ ಉಂಟು; ಇದೇ ರೀತಿಯಾಗಿ ಪುರುಷರಿಗೆ ಸ್ತನಗಳಿಂದ ವೃಷಣಗಳಿಗೆ ಶುಕ್ರವನ್ನು ತೆಗೆದುಕೊಂಡು ಹೋಗಲು ಎರಡು ಧಮನಿಗಳೂ

ಮತ್ತು ವೃಷಣಗಳಿಂದ ಮೂತ್ರವಾಹಿಸ್ರೋತಸ್ಸಿಗೆ ಶುಕ್ರವನ್ನು ಹೊರಚೆಲ್ಲಲು ಎರಡು ಧಮನಿಗಳೂ ಇವೆ. ಪುರುಷರ ಧಮನಿಗಳಿಗೆ ಶುಕ್ರವಹಗಳೆಂದೂ ಸ್ತ್ರೀಯರ ಧಮನಿಗಳಿಗೆ ಆರ್ತವವಹಗಳೆಂದೂ ಸಂಜ್ಞೆಯು ॥೧೦॥

ಅಧೋವಾಹಿ ಧಮನಿಗಳು ವಾತ ಮೂತ್ರ ಪುರೀಷ ಶುಕ್ರಾರ್ತವಾದಿಗಳನ್ನು ನಾಭಿಯಕೆಳಭಾಗದಲ್ಲಿರುವ ಪಕ್ವಾಶಯ ನಡು (ಸೊಂಟ), ಮೂತ್ರವಾಹಿಸ್ರೋತಸ್ಸು, ಪುರೀಷವಹಅನ್ತ್ರ (ಗುದ), ಬಸ್ತ್ಯಾಶಯ, ಶಿಶ್ನ, ತೊಡೆ ಇವುಗಳಿಗೆ ತೆಗೆದುಕೊಂಡುಹೋಗುತ್ತವೆ ಮತ್ತು ಆಯಾಯ ಅವಯವಗಳು ಕಾರ್ಯನಿರ್ವಹಣೆಮಾಡಲು ಸಹಾಯಕಗಳಾಗಿವೆ ॥೧೧॥

ಮೂಲ—ಸಿರಾಃ—(ಸು।ಶಾ।ಅ। ೭)

ದ್ವಾತ್ರಿಂಶಚ್ಛ್ರೋಣ್ಯಾಮ್ ।

ಸ್ರೋತಾಂಸಿ—(ಸು।ಶ।ಅ। ೯)

ಆರ್ತವವಹೇ ದ್ವೇ ಸ್ರೋತಸೀ । ತಯೋರ್ಮೂಲಂ ಗರ್ಭಾಶಯ ಆರ್ತವವಾಹಿನ್ಯಶ್ಚ ಧಮನ್ಯಃ ॥೧೨॥

ದೀಪಿಕೆ—ಸಿರೆಗಳು—(ಸು।ಶಾ।ಅ। ೭)

ನಡುವಿನಲ್ಲಿ ಮುವ್ವತ್ತೆರಡು ಸಿರೆಗಳಿವೆ. ಎರಡು ಆರ್ತವವಾಹಿ ಸ್ರೋತಸ್ಸುಗಳೂ ಉಂಟು. ಇವು ಗರ್ಭಾಶಯವನ್ನೂ ಆರ್ತವವಾಹಿ ಧಮನಿಗಳನ್ನೂ ಜೋಡಿಸುತ್ತವೆ.

ಮೂಲ—ಮರ್ಮಾಣಿ—(ಸು।ಶಾ।ಅ। ೬)

ಮರ್ಮಾಣ್ಯಷ್ಟಾವಸಂಬುದ್ಧ್ಯ ಸ್ರೋತೋಜಾನಿ ಶರೀರಿಣಾಮ್ ।
ವ್ಯಾಪಾದಯೇದ್ಬಹೂನ್ ಮರ್ತ್ಯಾನ್ ಶಸ್ತ್ರಕರ್ಮಾಪಟುರ್ಭಿಷಕ್ ॥೧೩॥
ಸೇವನೀ ಶುಕ್ರಹರಿಣೀ ಸ್ರೋತಸೀ ಫಲಯೋರ್ಗುದಮ್ ।
ಮೂತ್ರಸೇಕಂ ಮೂತ್ರವಹಂ ಯೋನಿರ್ಬಸ್ತಿಸ್ತಥಾಷ್ಟಮಃ ॥೧೪॥

ಏತೇಷಾಂ ಸ್ರೋತಸಾಂ ಮೂತ್ರವಹೇ ದ್ವೇ ; ತಯೋರ್ಮೂಲಂ ಬಸ್ತಿರ್ಮೇಢ್ರಂ ಚ । ಪುರೀಷವಹೇ ದ್ವೇ—ತಯೋರ್ಮೂಲಂ ಪಕ್ವಾಶಯೋ ಗುದಂ ಚ । ಶುಕ್ರವಹೇ ದ್ವೇ । ತಯೋರ್ಮೂಲಂ ಸ್ತನೌ ವೃಷಣೌ ಚ । ಆರ್ತವವಹೇ ದ್ವೇ । ತಯೋರ್ಮೂಲಂ ಗರ್ಭಾಶಯ ಆರ್ತವವಾಹಿನ್ಯಶ್ಚ ಧಮನ್ಯಃ । ಮೂತ್ರಮಾರ್ಗಯೋನಿಮಾರ್ಗಭಿನ್ನತ್ವಾತ್ ಮೂತ್ರವಹಸ್ರೋತಾಂಸ್ಯಧೋ ವಹನ್ತಿ । ತಥಾಹ ಹಾರಾಣಚನ್ದ್ರಃ—ಉತ್ತರಬಸ್ತಿಯನ್ತ್ರಾಣಿ ಸ್ತ್ರೀಣಾಂ ದ್ವೇ ; ಮೂತ್ರಾಪತ್ಯಮಾರ್ಗೋಪಯೋಗಿತ್ವಭೇದಾತ್ ॥೧೫॥

ದೀಪಿಕೆ—ಮರ್ಮಗಳು—(ಸು।ಶಾ।ಅ। ೬)

ಶಸ್ತ್ರಕರ್ಮದಲ್ಲಿ ತಿಳುವಳಿಕೆಯಿಲ್ಲದ ವೈದ್ಯನು ಈ ಕೆಳಗೆ ವಿವರಿಸುವ ಎಂಟು ಸ್ರೋತೋಮರ್ಮಗಳ ಸ್ಥಾನಗಳನ್ನು ತಿಳಿಯದೆ ಶಸ್ತ್ರಕ್ರಿಯೆಯನ್ನು ಮಾಡುವುದಾದರೆ ಅನೇಕರನ್ನು ಕೊಲ್ಲುತ್ತಾನೆ. ಅವುಗಳ್ಯಾವುವೆಂದರೆ:

ಸೇವನೀ ಶುಕ್ರವಾಹಿಸ್ರೋತಸ್ಸು (ಅಂಡಕೋಶದಿಂದ ಮೂತ್ರಸ್ರೋತಸ್ಸಿಗೆ ಶುಕ್ರವನ್ನು ತೆಗೆದೊಯ್ಯುವ ಎರಡು ಸ್ರೋತಸ್ಸುಗಳು; ಗುದವೆಂಬ ಮರ್ಮ ಒಂದು; ವೃಕ್ಕದಿಂದ ಮೂತ್ರಾಶಯಕ್ಕೆ (ಬಸ್ತಿಗೆ) ಮೂತ್ರವನ್ನು ತೆಗೆದುಕೊಂಡು ಹೋಗುವ ಮೂತ್ರಸೇಕವೆಂಬ ಒಂದು ಸ್ರೋತಸ್ಸು; ಮೂತ್ರವಾಹಿ ಸ್ರೋತಸ್ಸೊಂದು; ಯೋನಿಯೊಂದು; ಬಸ್ತಿಯೊಂದು—ಈ ರೀತಿಯಾಗಿ ಎಂಟು ಸ್ರೋತೋ ಮರ್ಮಸ್ಥಾನಗಳಿವೆ. ಇವುಗಳಲ್ಲಿ ಮೂತ್ರವಹಗಳೆರಡು; ಅವುಗಳ ಮೂಲಸ್ಥಾನಗಳು ಮೂತ್ರಾಶಯ ಮತ್ತು ಶಿಶ್ನ; ಪುರೀಷವಹಗಳೆರಡು, ಅವುಗಳ ಮೂಲಗಳು ಪಕ್ವಾಶಯ ಮತ್ತು ಗುದ; ಶುಕ್ರವಹಗಳೆರಡು; ಅವುಗಳ ಮೂಲ ಸ್ತನಗಳು ಮತ್ತು ವೃಷಣಗಳು; ಆರ್ತವವಹಗಳೆರಡು ಅವುಗಳ ಮೂಲ ಗರ್ಭಾಶಯ ಮತ್ತು ಆರ್ತವವಹ ಧಮನಿಗಳು; ಮೂತ್ರಮಾರ್ಗ ಯೋನಿ ಮಾರ್ಗಗಳು ಬೇರೆಬೇರೆಯಾದವುಗಳಾದ ಕಾರಣ ಮೂತ್ರವಾಹಿಗಳು ಕೆಳ ಮುಖವಾಗಿ ಹರಡಿವೆ; ಸ್ತ್ರೀಯರಿಗೆ ಮೂತ್ರಮಾರ್ಗ ಯೋನಿಮಾರ್ಗಗಳ ಉಪಯೋಗಕ್ಕಾಗಿ ಎರಡು ವಿಧಗಳಾದ ಉತ್ತರ ಬಸ್ತಿಯನ್ತ್ರಗಳ ನಿರ್ಮಾಣ ವನ್ನು ವಿವರಿಸಿರುತ್ತದೆಂದು ಹಾರಾಣಚಂದ್ರನ ಅಭಿಪ್ರಾಯವು.

ತೃತೀಯೋಽಧ್ಯಾಯಃ

ಋತುನಿರೂಪಣಮ್.

ಮೂಲ—(ಅ।ಸಂ।)

ನಾರೀ ತು ಷೋಡಶೇ ವರ್ಷೇ ಸಮತ್ವಾಗತವೀರ್ಯಾ ಭವತಿ। ರಸಾದಿಧಾತು
ಪರಿಪೂರ್ತ್ಯಾ ವೀರ್ಯಪೂರ್ತಿಃ ॥೧॥
ಮಾಸಿ ಮಾಸಿ ರಜಃ ಸ್ತ್ರೀಣಾಂ ರಸಜಂ ಸ್ರವತಿ ತ್ರ್ಯಹಮ್।
ರಜಃಸ್ರುತಿರಿಯಂ ಸ್ತ್ರೀಣಾಂ ಬೀಜೋಪಚಯಬೋಧಿನೀ ॥೨॥
ದ್ವಾದಶಾದ್ವತ್ಸರಾದೂರ್ಧ್ವಮಾಪಂಚಾಶತ್ಸಮಾಃ ಸ್ತ್ರಿಯಾಃ।
ಮಾಸಿ ಮಾಸಿ ಭಗದ್ವಾರಾತ್ ಪ್ರಕೃತ್ಯೈವಾರ್ತವಂ ಸ್ರವೇತ್ ॥೩॥
ಅನ್ಯಚ್ಚ—(ಸು।ಶಾ।ಅ।೩)
ಮಾಸೇನೋಪಚಿತಂ ಕಾಲೇ ಧಮನೀಭ್ಯಾಂ ತದಾರ್ತವಮ್।
ಈಷತ್ಕೃಷ್ಣಂ ವಿಗನ್ಧಂ ಚ ವಾಯುರ್ಯೋನಿಮುಖಂ ನಯೇತ್ ॥೪॥
ಪರಿಗರ್ಭಾಶಯಂ ಮಾಸಾತ್ ಧಮನೀಭಿಶ್ಚಿತಂ ರಜಃ।
ಈಷತ್ಕೃಷ್ಣಂ ವಿಗನ್ಧಂ ಚ ತ್ರ್ಯಹಂ ಯೋನ್ಯಾ ಬಹಿಃ ಸ್ರವೇತ್ ॥೫॥
ತದ್ವರ್ಷಾದ್ದ್ವಾದಶಾತ್ ಸ್ತ್ರೀಣಾಂ ವರ್ತಮಾನಮಸೃಕ್ ಪುನಃ।
ಜರಾಪಕ್ವಶರೀರಾಣಾಂ ಯಾತಿ ಪಂಚಾಶತಃ ಕ್ಷಯಮ್ ॥೬॥

ರಸಜಮಿತ್ಯತ್ರ ಋತುಕಾಲೀನಮಾರ್ತವಂ ರಕ್ತರೂಪಂ ರಸಮಲಭೂತ-ಕಫಮಿಶ್ರಂ ಚೇತ್ಯರ್ಥಃ। ಉಭಯೋರಪಿ ರಸಜನ್ಯತ್ವಾತ್ ದೃಶ್ಯತೇ ಹಿ ರಜಸ್ವಲಾ ರಕ್ತೇ ಕಫಮಿಶ್ರತಾ। ಸ್ರವತಿ—ಯೋನ್ಯಾ ಬಹಿರ್ಗಚ್ಛತಿ. ॥೭॥

೩ನೆಯ ಅಧ್ಯಾಯ

ಋತುವಿವರಣೆ

ದೀಪಿಕೆ,—(ಅ। ಸಂ.)

ಸ್ತ್ರೀಯರಿಗೆ ಹದಿನಾರನೆಯ ವರ್ಷದ ಹೊತ್ತಿಗೆ ರಸಾದಿ ಸಕಲಧಾತು ಗಳೂ ಪರಿಪೂರ್ಣವಾಗುವುದರಿಂದ ಸಕಲ ಅವಯುವಗಳೂ ಪುಷ್ಟಿಗೊಳ್ಳುತ್ತವೆ; ದೇಹಶಕ್ತಿಯೂ ಹೆಚ್ಚುತ್ತದೆ ॥೧॥

ರಸಧಾತುವಿನಿಂದ ಉತ್ಪನ್ನವಾಗುವ ಆರ್ತವವು ಪ್ರತಿ ತಿಂಗಳಲ್ಲೂ ಮೂರು ದಿವಸಗಳವರೆಗೆ ಸ್ತ್ರೀಯರ ಭಗದ್ವಾರದಿಂದ ಸ್ರವಿಸುತ್ತದೆ. ಈ ವಿಧ ವಾದ ರಜಃಸ್ರಾವವು ಸ್ತ್ರೀ ಬೀಜದವೃದ್ಧಿಯನ್ನು ಸೂಚಿಸುತ್ತದೆ. ಗರ್ಭಾ ಶಯದಲ್ಲಿ ತಿಂಗಳವರೆಗೂ ಶೇಖರಿಸಲ್ಪಡುವ ಆರ್ತವವನ್ನು ಅಪಾನವಾಯುವು ಆರ್ತವವಾಹಿಸಿರೆಗಳ ಮೂಲಕ ಗರ್ಭಾಶಯದಿಂದ ಹೊರಗಡೆಗೆ ಭಗದ್ವಾರಕ್ಕೆ ತಳ್ಳುತ್ತದೆ. ಈ ರೀತಿಯಾಗಿ ಸ್ರಾವವಾಗುವ ರಜಸ್ಸು (ಆರ್ತವವು) ಸ್ವಲ್ಪ ಕಪ್ಪು ಬಣ್ಣವುಳ್ಳದ್ದಾಗಿಯೂ ವಾಸನೆಯಲ್ಲಿ ಬದಲಾವಣೆಯನ್ನು ಹೊಂದಿಯೂ ಮೂರು ದಿನಗಳವರೆಗೆ ಹೊರಕ್ಕೆ ಸ್ರವಿಸುತ್ತಿರುತ್ತದೆ. ಈ ಸ್ರಾವವು ಸ್ತ್ರೀಯರಿಗೆ ಹನ್ನೆರಡನೆಯ ವರ್ಷದಲ್ಲಿ ಪ್ರಾರಮ್ಭಿಸಿ ಜರೆಯಿಂದ ದೇಹವು ಗಳಿತವಾಗಿ ಅವ ರಿಗೆ ಐವತ್ತು ವರ್ಷಗಳು ಪೂರೈಸುವವರೆಗೂ ಇದ್ದು ಅನಂತರ ನಿಂತುಬಿಡು ತ್ತದೆ. ಈ ರೀತಿಯಾಗುವ ರಜಃಸ್ರಾವವು ಸ್ವಾಭಾವಿಕವಾದದ್ದು ॥೨-೬॥

ರಜಸ್ವಲೆಯರಾದ ಸ್ತ್ರೀಯರಿಗೆ ರಜಸ್ಸು ರಸಧಾತುವಿನ ಮಲವಾದ ಕಫ ದೊಡನೆ ಮಿಶ್ರವಾಗಿಯೇ ಸ್ರವಿಸುತ್ತದೆ. ರಸಜನ್ಯವಾದರೂ ಋತುಕಾಲದಲ್ಲಿ ಸ್ರವಿಸುವ ಆರ್ತವವು ರಕ್ತದಂತೆ ಕೆಂಪು ಬಣ್ಣ ವುಳ್ಳದ್ದಾಗಿಯೂ ರಸಧಾತುವಿನ ಮಲವಾದ ಕಫದೊಡನೆ ಮಿಶ್ರವಾಗಿಯೂ ಸ್ರವಿಸುತ್ತೆಂದು ಅರ್ಥವು ॥೭॥

ಮೂಲ—ಋತುಃಕಾಲಃ (ಸು। ಶಾ। ಅ। ೨) (ಅ. ಸಂ).

ಋತುಸ್ತು ದ್ವಾದಶರಾತ್ರಂ ಭವತಿ ದೃಷ್ಟಾರ್ತವಃ
ಉಕ್ತಂಚ–ದ್ವಾದಶಾದ್ವತ್ಸರಾದೂರ್ಧ್ವಮಾಪಂಚಾಶತ್ಸಮಾಃ ಸ್ತ್ರೀಯಾಃ । ।೮॥
ಮಾಸಿ ಮಾಸಿ ಭಗದ್ವಾರತ್ ಪ್ರಕೃತ್ಯೈವಾರ್ತವಂ ಸ್ರವೇತ್ ॥೯॥
ಆರ್ತವಸ್ರಾವದಿವಸಾತ್ ಋತುಃ ಷೋಡಶರಾತ್ರಯಃ ।
ಗರ್ಭಗ್ರಹಣಯೋಗ್ಯಸ್ತು ಸ ಏವ ಸಮಯಸ಼್ತಃ ।೧೦।

ಸ್ನಾನದಿವಸಾದೂರ್ಧ್ವಂ ದ್ವಾದಶರಾತ್ರಾವಧಿ ಬ್ರಾಹ್ಮಣ್ಯಾಃ, ದಶರಾತ್ರಾವಧಿ ಕ್ಷತ್ರಿಯಾಯಾಃ, ಅಷ್ಟರಾತ್ರಾವಧಿ ವೈಶ್ಯಾಯಾಃ, ಷಡ್ರಾತ್ರಾವಧಿ ಶೂದ್ರಾಯಾಃ, ಗರ್ಭಧಾರಣೇ ಯೋಗ್ಯಕಾಲಃ ।೧೧।

ದೀಪಿಕೆ—ಋತುಕಾಲ (ಸು।ಶಾ।ಅ. ೨). ಆರ್ತವಸ್ರಾವವಾಗುವ ಸ್ತ್ರೀಯ ರಿಗೆ ರಜೋದರ್ಶನವಾದ ದಿನದಿಂದ ಹದಿನಾರು ದಿವಸಗಳವರೆಗೆ ಋತುಕಾಲ

ವೆಂದು ಹೆಸರು; ಅಥವಾ ಋತುಸ್ನಾನಮಾಡಿದ ದಿವಸದಿಂದ ಬ್ರಾಹ್ಮಣ ಸ್ತ್ರೀಯರಿಗೆ ಹನ್ನೆರಡು ದಿವಸಗಳೂ, ಕ್ಷತ್ರಿಯ ಸ್ತ್ರೀಯರಿಗೆ ಹತ್ತು ದಿವಸಗಳೂ, ವೈಶ್ಯ ಸ್ತ್ರೀಯರಿಗೆ ಎಂಟು ದಿವಸಗಳೂ, ಶೂದ್ರ ಸ್ತ್ರೀಯರಿಗೆ ಆರು ದಿವಸಗಳೂ ಋತುಕಾಲವೆಂದು ಕೆಲವು ಶಾಸ್ತ್ರಕಾರರ ಅಭಿಮತವು॥೧೧॥

ಈ ದಿವಸಗಳೇ ಗರ್ಭಧಾರಣೆಗೆ ಯೋಗ್ಯವಾದ ಕಾಲವೆಂದು ಅಭಿಪ್ರಾಯವು.

ಮೂ.—ರಜಃಕಾರ್ಯಮ್—(ಡಲ್ಹಣಃ)—

ರಜಃಪ್ರಸೇಕಾನ್ನಾರೀಣಾಂ ಮಾಸಿ ಮಾಸಿ ವಿಶುದ್ಧ್ಯತಿ।
ಸರ್ವಂ ಶರೀರಂ ದೋಷಾಶ್ಚ ನ ಪ್ರಮೇಹನ್ತ್ಯತಃ ಸ್ತ್ರಿಯಃ ॥೧೩॥
ವಿದೇಹಃ—ಅತ್ಯನ್ತಸುಕುಮಾರಾಙ್ಗ್ಯೋ ರಜೋ ದುಷ್ಟಂ ಸ್ರವನ್ತಿ ಚ।
ಅವ್ಯಾಯಾಮರತಾ ಯಸ್ಮಾತ್ ತಸ್ಮಾನ್ನ ಖಲತಿಃ ಸ್ತ್ರಿಯಃ ॥೧೪॥

ಇನ್ದ್ರಲುಪ್ತಸ್ತು ಸ್ತ್ರೀಣಾಂ ನ ಭವತಿ। ಅವ್ಯಾಯಾಮಾತ್ ವಾತಪಿತ್ತಯೋರಕೋಪೇನ ನಾತಿರೋಮಚ್ಯುತಿಃ। ರಜಃಸ್ರಾವೇಣ ಚ ಸ್ರೋತೋರೋಧಾಭಾವಾತ್ ಚ್ಯುತಾನಾಮಪಿ ರೋಮ್ಣಾಂ ಪುನರ್ವಿರೋಹಃ। ಕಿನ್ತು ಸ್ತ್ರೀಷ್ವಪಿ ಖಲತಿದರ್ಶನಾತ್ ಪ್ರಾಯಿಕಂ ವಿದೇಹವಚನಾತ್। ಏತೇಷಾಮಾಚಾರ್ಯಾಣಾಂ ಮತೇ ಸಹಜಂ ಲಕ್ಷ್ಮ ಸ್ತ್ರೀಪುಂಸಯೋರಙ್ಗಭೇದೇನ ಶುಭಾಽಶುಭಫಲಪ್ರದೋ ಭವತಿ॥೧೫॥

ಭಾರದ್ವಾಜಸಂಹಿತಾಯಾಮ್—ಪ್ರಥಮೇಽಹನಿ ಚಣ್ಡಾಲೀ ದ್ವಿತೀಯೇ ಬ್ರಹ್ಮಘಾತಿನೀ। ತೃತೀಯೇ ರಜಕೀ ಪ್ರೋಕ್ತಾ ಚತುರ್ಥೇಽಹನಿ ಶುದ್ಧ್ಯತಿ ॥೧೬॥
ಪಞ್ಚಮೇಽಹನಿ ಯೋಗ್ಯಾ ಸ್ಯಾದ್ದೈವೇ ಪಿತ್ರ್ಯೇ ಚ ಕರ್ಮಣಿ।
ಚರಕೇ— ಷೋಡಶದಿವಸಾ ಋತುಕಾಲಃ ॥೧೭॥

ಹಾರೀತೇ—ರಜಃ ಸಪ್ತದಿನಂ ಯಾವದೃತುಶ್ಚ। ಸಪ್ತರಾತ್ರಾದ್ಯೋನಿ ಶುದ್ಧಿಃ। ತಸ್ಮಾದೃತುಮತೀ ಭವೇತ್। ಷೋಡಶದಿವಸಾನ್ಯೃತುಕಾಲಃ ॥೧೮॥

ವಿದೇಹಃ—ಸ್ತ್ರೀಣಾಂ ಋತುರ್ಭವತಿ ಷೋಡಶವಾಸರಾಣಿ ॥೧೯॥

ವಾಗ್ಭಟಃ—ಸ್ತ್ರೀಣಾಮಾರ್ತವಕಾಲೇ ತು ಯೋನಿಗೃಹ್ಣಾತ್ಯಪಾವೃತೇಃ। ಪೂರ್ವಾಸ್ತಿಸ್ರಶ್ಚ ನಿನ್ದಿತಾಃ। ಏಕಾದಶೀಯಾಃ। ಚಶಬ್ದಾ ಥೋಽತ್ರಾಽನುಕ್ತಾಯಾಸ್ತ್ರಯೋದಶ್ಯಾಸ್ಸಮುಚ್ಚಯಾರ್ಥಃ ॥೨೦॥

(ಅ।ಸಂ।)—ಶುದ್ಧಯೋನಿಗರ್ಭಾಶಯಾರ್ತವಾಯ ಋತುಕಾಲಂ ಮಾಸಮಪಿ ಕೇಚಿತ್ ॥೨೧॥

(ಸು।ಶಾ।ಅ।೨)—ಋತುಸ್ತು ದ್ವಾದಶರಾತ್ರಂ ಭವತಿ ದೃಷ್ಟಾರ್ತವಃ। ದ್ವಾದಶರಾತ್ರಮಿತಿ ಷೋಡಶವಾಸರೇಷು ಮಧ್ಯೇ ಆದ್ಯಂ ದಿನತ್ರಯಂ ಅನ್ತಿಮಂ ಚ ಷೋಡಶಂ ಯೋನಿಸಂಕೋಚದಿನಂ ನ ಗಣನೀಯಮ್ ॥೨೨॥

ವಾತಪಿತ್ತಕಫೈರಧಃಪ್ರಸೃತೈರಷ್ಟಧಾರ್ತವದೂಷಕೈರಸೃಗ್ದರರೂಪತಯಾಕೃತಂ ಕೃತ್ರಿಮಂ ನ ಗರ್ಭಕೃದ್ಭವತಿ ॥೨೩॥

ದೀಪಿಕೆ—ರಜಸ್ಸಿನ ಕಾರ್ಯವು :—

ಡಲ್ಹಣ—ಪ್ರತಿ ತಿಂಗಳಲ್ಲೂ ಈ ರೀತಿ ರಜಃಸ್ರಾವವುಂಟಾಗುವುದರಿಂದ ಸ್ತ್ರೀಯರ ಶರೀರವೆಲ್ಲವೂ ದೋಷಗಳಿಂದ ಬೇರ್ಪಟ್ಟು ಪರಿಶುದ್ಧವಾಗುತ್ತದೆ ಮತ್ತು ಪ್ರಮೇಹ ರೋಗವುಂಟಾಗುವುದಿಲ್ಲ ॥ ೧೩ ॥

ವಿದೇಹ—ಅತ್ಯಂತ ಸುಕುಮಾರದೇಹವುಳ್ಳವರಾದ್ದರಿಂದಲೂ ಪ್ರತಿ ತಿಂಗಳಲ್ಲೂ ದುಷ್ಟರಜಃಸ್ರಾವವಾಗುವುದರಿಂದಲೂ ವ್ಯಾಯಾಮ ಮಾಡುವುದಿಲ್ಲವಾದ ಕಾರಣದಿಂದಲೂ ಸ್ತ್ರೀಯರಿಗೆ ಖಲತಿಯು (ಪಟ್ಟುತಲೆಯು) ಉಂಟಾಗುವುದಿಲ್ಲ ॥೧೪॥

ವ್ಯಾಯಾಮ ಮಾಡದಿರುವುದರಿಂದ ವಾತಪಿತ್ತಗಳು ಪ್ರಕುಪಿತಗಳಾಗುವುದಿಲ್ಲ. ಆದರಿಂದ ಕೂದಲು ಉದರುವುದಿಲ್ಲ. ರಜಃಸ್ರಾವವಾಗುವುದರಿಂದ ಸ್ರೋತೋ ಮುಖಗಳಲ್ಲಿ ತಡೆಯುಂಟಾಗುವುದಿಲ್ಲ. ತಲೆಗೂದಲು ಉದುರಿದರೂ ಪುನಃ ಅವು ಬೇಗನೇ ಹೊಸಹೊಸವಾಗಿ ಹುಟ್ಟುತ್ತವೆ. ಸ್ತ್ರೀಯರಲ್ಲೂ ಪಟ್ಟುತಲೆಯುಳ್ಳವರನ್ನು ಕೆಲವುಕಡೆಗಳಲ್ಲಿ ನೋಡುತ್ತೇವೆಯಾಗಿ ಪ್ರಾಯಿಕವಾಗಿ ಪಟ್ಟುತಲೆಯುಂಟಾಗುವುದಿಲ್ಲವೆಂದು ಅರ್ಥಮಾಡಬೇಕು. ಈ ವೈದ್ಯಾಚಾರ್ಯರ ಮತದಲ್ಲಿ ಸ್ತ್ರೀಪುರುಷರ ಅಂಗಭೇದದಿಂದ ಅವರವರ ಸಹಜವಾದ ದೇಹಲಕ್ಷಣಗಳು ಶುಭಾಽಶುಭಫಲಕೊಡುವುವೆಂದು ತಿಳಿಯಬೇಕು. ॥೧೫॥

ಭಾರದ್ವಾಜಸಂಹಿತೆ—ಋತುಸ್ರಾವವಾದ ಮೊದಲನೆಯದಿನ ಚಂಡಾಲಸ್ತ್ರೀಗೆ ಸಮಾನಳೆಂದೂ ಎರಡನೆಯ ದಿನ ಬ್ರಹ್ಮಹತ್ಯಪಾತಕದವಳಿಗೆ ಸಮಾನಳೆಂದೂ ಮೂರನೆಯ ದಿನ ಅಗಸಗಿತ್ತಿಗೆ ಸಮಾನಳೆಂದೂ ನಾಲ್ಕನೆಯ ದಿನ ಶರೀರ ಶುದ್ಧಿಯಾಗುತ್ತದೆಂದೂ ಐದನೆಯ ದಿನ ದೇವ ಪಿತೃ ಕರ್ಮಗಳಲ್ಲಿ ಸಹಕರಿಸಲು ಯೋಗ್ಯಳಾಗುತ್ತಾಳೆಂದೂ ಹೇಳಿರುತ್ತಾರೆ. ಅಂದರೆ ಈ ದಿನಗಳಲ್ಲಿ ರಜಃಸ್ರಾವವಾಗುವುದರಿಂದ ರಜಸ್ಸಿನಲ್ಲಿ ವಿಷಸಂಪರ್ಕವಿರುತ್ತೆಂದು ಅಭಿಪ್ರಾಯ ॥೧೬॥

ಚರಕ—ಋತುಕಾಲವು ರಜಃಸ್ರಾವದಿನದಿಂದ ಹದಿನಾರು ದಿನಗಳವರೆಗೆ.

ಹಾರೀತ—ಏಳು ದಿನಗಳವರಗೆ ರಜಃಸ್ರಾವವಿರುತ್ತದೆ. ಏಳುದಿನಗಳ ಮೇಲೆ ರಜೋದರ್ಶನವಾಗುವುದಿಲ್ಲವಾದಕಾರಣ ಯೋನಿ ಶುದ್ಧಿಯಾಗುತ್ತದೆ. ಹದಿನಾರು ದಿನಗಳು ಋತುಕಾಲ ॥೧೭॥

ವಿದೇಹ—ಸ್ತ್ರೀಯರಿಗೆ ಹದಿನಾರು ದಿನಗಳು ಋತುಕಾಲವು ॥೧೮॥

ವಾಗ್ಭಟ—ಸ್ತ್ರೀಯರಿಗೆ ಋತುಕಾಲದಲ್ಲಿ ಯೋನಿಯ ಮುಖವು ಅಗಲವಾಗುತ್ತದೆ. ಆ ಕಾಲದಲ್ಲಿ ಪುರುಷರೊಡನೆ ಸಮಾಗಮ ಮಾಡಿದರೆ ಅವರ ಶುಕ್ರವು ಸ್ತ್ರೀಯರ ಯೋನಿಯೊಳಕ್ಕೆ ಹರಿದು ಬರಲು ತಡೆಯಿರುವುದಿಲ್ಲ. ಗರ್ಭೋತ್ಪತ್ತಿಯಾಗುತ್ತದೆ. ರಜೋದರ್ಶನದ ದಿನದಿಂದ ಮೂರು ದಿನಗಳೂ ಹನ್ನೊಂದನೆಯ ದಿನವೂ ಅನಂಗದಿನವಾದ ಹದಿಮೂರನೆಯ ದಿನವೂ ಮೈಥುನಕ್ಕೆ ನಿಂದಿತಗಳಾದುವು ॥೧೯॥

ಅ।ಸಂ—ಶುದ್ಧವಾದ ಯೋನಿ ಗರ್ಭಾಶಯ ರಜಸ್ಸು ಉಳ್ಳ ಸ್ತ್ರೀಯರಿಗೆ ಒಂದು ತಿಂಗಳೂ ಋತುಕಾಲವೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ॥೨೦॥

(ಸು।ಶಾ।ಅ.೨) ಆರ್ತವ ಸ್ರಾವವಾಗುವ ಸ್ತ್ರೀಯರಿಗೆ ಹನ್ನೆರಡು ದಿನಗಳು ಋತುಕಾಲವು, ಹದಿನಾರು ದಿನಗಳ ಪೈಕಿ ಮೊದಲಿನ ಮೂರು ದಿನಗಳೂ

ಯೋನಿ ಸಂಕೋಚವಾಗುವ ಹದಿನಾರನೆಯ ದಿನವೂ ಸೇರಿ ನಾಲ್ಕು ದಿನಗಳನ್ನು ವರ್ಜ್ಯ ಮಾಡಿದರೆ ಹನ್ನೆರಡು ದಿವಸಗಳಾಗುತ್ತವೆಂದು ಡಲ್ಹಣನ ಮತವು ‖೨೧‖

ವಾತಪಿತ್ತ ಕಫಗಳ ಪ್ರಕೋಪದಿಂದ ದೂಷಿತವಾದ ಆರ್ತವವು ಅತಿ ಪ್ರಮಾಣದಿಂದ ಸ್ರಾವವಾಗಿ ಅಸೃಗ್ದರವಾಗಿ ಪರಿಣಾಮ ಹೊಂದಿದರೆ ಗರ್ಭ ಧಾರಣೆಗೆ ಯೋಗ್ಯವಾಗುವುದಿಲ್ಲ.

ಈ ಕೃತ್ರಿಮ ರಜಃಸ್ರಾವದಲ್ಲಿ ಋತುಕಾಲವೆಂಬ ವ್ಯವಹಾರವುಂಟಾಗುವುದಿಲ್ಲ. ಗರ್ಭಧಾರಣೆಯೂ ಉಂಟಾಗುವುದಿಲ್ಲ. ‖೨೨‖

ಮೂಲ—ರಜಃಸ್ವಲಾನಿಯಮಃ—(ಸು।ಶಾ।ಅ. ೨)

ಋತೌ ಪ್ರಥಮದಿವಸಾತ್ಪ್ರಭೃತಿ ಬ್ರಹ್ಮಚಾರಿಣೀ ದಿವಾಸ್ವಪ್ನಾಂಜನಾಶ್ರುಪಾತ-ಸ್ನಾನಾನುಲೇಪನಾಭ್ಯಙ್ಗನಖಚ್ಛೇದನಪ್ರಧಾವನಹಸನಕಥನಾತಿಶಬ್ದಶ್ರವಣಾವ - ಲೇಖನಾನಿಲಾಯಾಸಾನ್ ಪರಿಹರೇತ್ ‖೨೩‖ ಕಿಂ ಕಾರಣಮ್?

ನಿಯಮಾನಪಾಲನೇ ದೋಷಾಃ—

ದಿವಾಸ್ವಪನ್ತ್ಯಾಃ ಸ್ವಾಪಶೀಲಃ ಅಂಜನಾದನ್ಧೋ ರೋದನಾದ್ವಿಕೃತದೃಷ್ಟಿಃ ಸ್ನಾನಾನುಲೇಪನಾದ್ದುಃಖಶೀಲಃ ತೈಲಾಭ್ಯಙ್ಗಾತ್ಕುಷ್ಠೀ, ನಖಾಪಕರ್ತನಾತ್ ಕುನಖೀ ಪ್ರಧಾವನಾಚ್ಚಂಚಲಃ ಹಸನಾಚ್ಛ್ಯಾವದನ್ತೋಷ್ಠತಾಲುಜಿಹ್ವಃ ಪ್ರಲಾಪೀ ಚಾತಿಕಥನಾದತಿಶಬ್ದಶ್ರವಣಾದ್ಬಧಿರೋಽವಲೇಖನಾತ್ಖಲತಿರ್ಮಾರುತಾಯಾಸ ಸೇವನಾದುನ್ಮತ್ತೋ ಗರ್ಭೋ ಭವತೀತ್ಯೇವಮೇತಾನ್ಪರಿಹರೇತ್ ‖೨೪‖

ದೀಪಿಕಾ.—ರಜಸ್ವಲೆಯು ಅನುಸರಿಸಬೇಕಾದ ನಿಯಮಗಳು:—

(ಸು।ಶಾ ಅ. ೨) ರಜಸ್ವಲೆಯಾದ ದಿವಸದಿಂದ ಬ್ರಹ್ಮಚಾರಿಣಿಯಾಗಿ (ಪುರುಷರ ಸಂಗವನ್ನು ಬಿಡಬೇಕು), ಹಗಲು ನಿದ್ದೆ, ಕಣ್ಣಿಗೆ ಕಪ್ಪು ಬಳಿಯುವುದು, ಅಳುವುದು (ಕಣ್ಣೀರು ಸುರಿಸುವುದು), ಸ್ನಾನ, ಶರೀರಕ್ಕೆ ಗಂಧವನ್ನು ಲೇಪಿಸುವುದು, ತೈಲಾಭ್ಯಂಗ, ಉಗುರುಗಳನ್ನು ಕತ್ತರಿಸುವುದು, ಓಡುವುದು, ನಗುವುದು, ಹರಟೆ ಮಾತಾಡುವುದು, ಗಟ್ಟಿಯಾದ ಶಬ್ದವನ್ನು ಕೇಳುವುದು ತಲೆಯನ್ನು ಬಾಚಿಕೊಳ್ಳುವುದು, ಗಾಳಿಯಲ್ಲಿ ಶ್ರಮಪಟ್ಟು ಕೆಲಸ ಮಾಡುವುದು ಇವುಗಳನ್ನು ಮಾಡಬಾರದು ‖೨೩‖ ಏಕೆಂದರೆ—ಮೇಲಿನ ನಿಯಮಗಳಂತೆ ನಡೆದುಕೊಳ್ಳದಿದ್ದರೆ ಉಂಟಾಗುವ ಕೇಡುಗಳು —

(ಸು।ಶಾ। ಅ. ೨) ಹಗಲು ನಿದ್ದೆ ಮಾಡುವವಳಿಗೆ ಸದಾ ನಿದ್ರಿಸುವ ಮಗುವೂ, ಕಣ್ಣಿಗೆ ಕಪ್ಪಚ್ಚಿಕೊಂಡರೆ ಕುರುಡನೂ, ಅಳುವವಳಿಗೆ ದೃಷ್ಟಿವಿಕಾರವುಳ್ಳವನೂ, ಸ್ನಾನಗಂಧಲೇಪಗಳನ್ನು ಮಾಡಿದರೆ ಸದಾ ದುಃಖಿಯಾದವನೂ ತೈಲಾಭ್ಯಙ್ಗ ಮಾಡುವವಳಿಗೆ ಕುಷ್ಠರೋಗ ಪೀಡಿತನಾದವನೂ, ಉಗುರು ಕತ್ತರಿಸಿದರೆ ಕುನಖವುಳ್ಳವನೂ, (ಹುಳುಕು ಉಗುರು) ಓಡುವವಳಿಗೆ ಚಿತ್ತಚಾಂಚಲ್ಯವುಳ್ಳವನೂ, ನಗುವವಳಿಗೆ ಕಪ್ಪು ಬಣ್ಣದ ಹಲ್ಲು, ತುಟಿ, ಅಂಗಳು, ನಾಲಿಗೆಗಳುಳ್ಳವನೂ, ಅತಿಯಾಗಿ ಮಾತನಾಡಿದರೆ ಅತಿಯಾಗಿ ಮಾತಾಡುವವನೂ (ಪ್ರಲಾಪಿಯಾದವನೂ) ಗಟ್ಟಿಯಾದ ಶಬ್ದವನ್ನು ಕೇಳಿದರೆ ಕಿವುಡನೂ, ತಲೆಬಾಚಿಕೊಂಡರೆ

ಪಟ್ಟು ತಲೆಯವನೂ (ಕೂದಲು ಉದರಿದ ತಲೆಯುಳ್ಳವನೂ), ಗಾಳಿಯಲ್ಲಿ ಆಯಾಸಪಟ್ಟು ಕೆಲಸ ಮಾಡಿದರೆ ಹುಚ್ಚನಾದವನೂ ಹುಟ್ಟುತ್ತಾನೆ. ಆದಕಾರಣ ಋತುಮತಿ ಸ್ತ್ರೀಯು ಋತುವಾಗಿರುವ ಕಾಲದಲ್ಲಿ ಮೇಲೆ ವಿವರಿಸಿದ ವ್ಯಾಪಾರ ಗಳನ್ನು ಬಿಡಬೇಕು. ‖೨೪‖

ಮೂಲ.—ರಜಸ್ವಲಾಚಾರಾಃ—(ಸು।ಶಾ।ಅ।೨)

ದರ್ಭಸಂಸ್ತರಶಾಯಿನೀಂ ಕರತಲಶರಾವಪರ್ಣಾನ್ಯತಮಭೋಜಿನೀಂ ಹವಿಷ್ಯಂ ತ್ರ್ಯಹಂ ಭರ್ತುಃ ಸಂರಕ್ಷೇತ್ ‖೨೫‖
ತತಃ ಪುಷ್ಪೇಕ್ಷಣಾದೇವ ಕಲ್ಯಾಣಧ್ಯಾಯಿನೀ ತ್ರ್ಯಹಮ್ ।
ಮೃಜಾಲಙ್ಕಾರರಹಿತಾ ದರ್ಭಸಂಸ್ತರಶಾಯಿನೀ ‖೨೬‖
ಕ್ಷೈರೇಯಂ ಯಾವಕಂ ಸ್ತೋಕಂ ಕೋಷ್ಠಶೋಧನಕರ್ಷಣಮ್ ।
ಪರ್ಣೇ ಶರಾವೇ ಹಸ್ತೇ ವಾ ಭುಂಜೀತ ಬ್ರಹ್ಮಚಾರಿಣೀ ‖೨೭‖
ಮೃಜಾಲಙ್ಕಾರರಹಿತಾ (ಹೀನಾ ಚ) ಸ್ಥಾತವ್ಯಾಯಂ ದಿನತ್ರಯಮ್ ।

ದೀಪಿಕೆ—ರಜಸ್ವಲೆಯು ಅನುಸರಿಸಬೇಕಾದ ಆಚಾರಗಳು:—(ಅ।ಹೃ।ಶಾ।ಅ೨).

ದರ್ಭೆಯಿಂದ ಮಾಡಿದ ಆಸನದಲ್ಲಿ ಮಲಗುತ್ತಾ, ಹವಿಸ್ಸನ್ನು ಕೈಯ್ಯಲ್ಲಾ ಗಲೀ, ಮಣ್ಣಿನ ಶ್ರಾವೆಯಲ್ಲಾಗಲೀ, ಎಲೆಯಲ್ಲಾಗಲೀ ಇಟ್ಟುಕೊಂಡು ಭೋಜನ ಮಾಡಬೇಕು. ಪುರುಷರ ಸಹವಾಸ ಬಿಡಬೇಕು. ಈ ರೀತಿ ಮೂರು ದಿನಗಳ ವರೆಗೂ ಆಚರಿಸಬೇಕು ‖೨೫‖

ಋತುವಾದ ದಿನದಿಂದ ಮೂರು ದಿವಸಗಳವರೆಗೆ ಮಂಗಳವಾಗಲೆಂದು ಬಯಸುತ್ತಾ ಸ್ನಾನ ಅಲಂಕಾರಗಳನ್ನು ಮಾಡಿಕೊಳ್ಳದೆ ದರ್ಭೆಯಿಂದ ಮಾಡಿದ ಹಾಸಿಗೆಯಲ್ಲಿ ಮಲಗುತ್ತಲೂ ಕೋಷ್ಠಶುದ್ಧಿಗಾಗಿಯೂ ಶರೀರಕೃಶವಾಗುವುದಕ್ಕೂ ಹಾಲುಮಿಶ್ರಮಾಡಿದ ಯವೆಯ ಅನ್ನವನ್ನು ಸ್ವಲ್ಪವಾಗಿ ಎಲೆ, ಶ್ರಾವೆ, ಕೈಗಳಲ್ಲಿ ಟ್ಟುಕೊಂಡು ಭುಜಿಸಬೇಕು. ಪತಿಸಂಪರ್ಕ (ಪುರುಷರ ಸಂಪರ್ಕ) ವನ್ನು ಬಿಡ ಬೇಕು ‖೨೬–೨೭‖

ಮೂಲ—ಶುದ್ಧಸ್ನಾತಾಯಾ ಋತುಮತ್ಯಾ ನಿಯಮಾಃ—(ಸು।ಶಾ।ಅ।೨)

ಚತುರ್ಥೇಽಹನಿ ಶುದ್ಧಸ್ನಾತಾಮಹತವಾಸಸಾಂ ಸಮಲಙ್ಕೃತಾಂ ಕೃತಮಙ್ಗಳ ಸ್ವಸ್ತಿವಾಚನಾಂ ಭರ್ತಾರಂ ದರ್ಶಯೇತ್ ‖೨೮‖
ತತ್ಕಸ್ಯ ಹೇತೋಃ ?—
ಪೂರ್ವಂ ಪಶ್ಯೇದೃತುಸ್ನಾತಾ ಯಾದೃಶಂ ನರಮಙ್ಗನಾ ।
ತಾದೃಶಂ ಜನಯೇತ್ಪುತ್ರಂ ಭರ್ತಾರಂ ದರ್ಶಯೇದತಃ ‖೨೯‖
ಬೃಹತ್ಸಂಹಿತಾಯಾಮ್—
ಚಿತ್ತೇನ ಭಾವಯತಿ ದೂರಗತಾಽಪಿ ಯಂ ಸ್ತ್ರೀ ಗರ್ಭಂ ಬಿಭರ್ತಿ ಸದೃಶಂ ಪುರುಷಸ್ಯ ತಸ್ಯ ‖೩೦‖
ಚರಕೇ—ಇಚ್ಛೇತಾಂ ಯಾದೃಶಂ ಪುತ್ರಂ ತದ್ರೂಪಚರಿತಾಂಶ್ಚ ತೌ ।
ಚಿನ್ತಯೇತಾಂ ಜನಪದಾಂಸ್ತದಾಚಾರಪರಿಚ್ಛದೌ ‖೩೧‖

ದೀಪಿಕೆ—ಋತುಸ್ನಾನಮಾಡಿ ಶುದ್ಧಳಾದ ಋತುಮತಿಯ ನಿಯಮಗಳು :—
(ಸು।ಶಾ।೮।೨)

ಋತುದರ್ಶನವಾದಮೇಲೆ ನಾಲ್ಕನೆಯ ದಿವಸ ಸ್ನಾನಮಾಡಿ ಶುದ್ಧಳಾದ ಮೇಲೆ ಶುಭ್ರವಸ್ತ್ರವನ್ನುಟ್ಟು ಅಲಂಕೃತಳಾಗಿ ಮಂಗಳಕರವಾದ ಸ್ವಸ್ತಿಪುಣ್ಯಾಹ ವಾಚನಗಳನ್ನು ಮಾಡಿಸಿದಮೇಲೆ ಅವಳಿಗೆ ತನ್ನ ಗಂಡನನ್ನು ತೋರಿಸಬೇಕು ॥೨೮॥

ಏಕೆಂದರೆ ಋತುಸ್ನಾನಮಾಡಿದನಂತರ ಋತುಮತಿಯು ಯಾವ ಪುರುಷನನ್ನು ದರ್ಶನವಾಡುತ್ತಾಳೆಯೋ ಆ ಪುರುಷನಿಗೆ ಸದೃಶವಾದ ಆಕಾರವುಳ್ಳ ಮಗುವನ್ನು ಹೆರುತ್ತಾಳೆ; ಆದಕಾರಣ ಋತುಸ್ನಾನವಾದಮೇಲೆ ಅವಳಿಗೆ ಅವಳ ಪತಿಯನ್ನೇ ದರ್ಶನಮಾಡಿಸಬೇಕು ॥೨೯॥

ಬೃಹತ್ಸಂಹಿತೆ—ಋತುಮತಿಯು ದೂರದೇಶದಲ್ಲಿರುವ ಯಾವ ಪುರುಷನನ್ನು ಮನಸ್ಸಿನಲ್ಲಿ ಯೋಚಿಸುತ್ತಾಳೆಯೋ ಆತನಿಗೆ ಸಮಾನವಾದ ಆಕಾರವುಳ್ಳ ಮಗುವನ್ನು ಗರ್ಭದಲ್ಲಿ ಧರಿಸುತ್ತಾಳೆ ॥೩೦॥

(ಚ।ಸಂ।) ದಂಪತಿಗಳು ಯಾವ ವಿಧವಾದ ಮಕ್ಕಳನ್ನು ಪಡೆಯಲು ಇಚ್ಛಿಸುತ್ತಾರೆಯೋ ಆ ದೇಶದ ಜನರಂತೆ ಉಡಿಗೆ ತೊಡಿಗೆಗಳನ್ನೂ ಆಚಾರಗಳನ್ನೂ ಅನುಕರಣೆಮಾಡಬೇಕು ॥೩೧॥

೧೮—ಪುರುಷಸ್ಯಾಪಿ ನಿಯಮಾಃ—(ಸು। ಶಾ। ೮। ೨)

ತತೋಽಪರಾಹ್ಣೇ ಪುಮಾನ್ ಮಾಸಂ ಬ್ರಹ್ಮಚಾರೀ ಸರ್ಪಿಃಸ್ನಿಗ್ಧಃ ಸರ್ಪಿಃಕ್ಷೀರಾಭ್ಯಾಂ ಶಾಲ್ಯೋದನಂ ಭುಕ್ತ್ವಾ ಮಾಸಂ ಬ್ರಹ್ಮಚಾರಿಣೀಂ ತೈಲಸ್ನಿಗ್ಧಾಂ ತೈಲಮಾಷೋತ್ತರಾಹಾರಾಂ ನಾರೀಮುಪೇಯಾದ್ರಾತ್ರೌ ಸಾಮಾದಿಭಿರಭಿವಿಶ್ವಾಸ್ಯ ॥೩೨॥

(ಬೃ।ನಿ।ರ।)—

ಸ್ನಾತಶ್ಚನ್ದನಲಿಪ್ತಾಙ್ಗಃ ಸುಗನ್ಧಸುಮನೋಽರ್ಚಿತಃ।
ಭುಕ್ತವೃಷ್ಯಃ ಸುವಸನಃ ಸುವೇಷಸ್ಸಮಲಙ್ಕೃತಃ ॥೩೩॥
ತಾಮ್ಬೂಲವದನಸ್ತಸ್ಯಾಮನುರಕ್ತೋಽಧಿಕಸ್ಮರಃ।
ಪುತ್ರಾರ್ಥೀ ಪುರುಷೋ ನಾರೀಮುಪೇಯಾಚ್ಛಯನೇ ಶುಭೇ ॥೩೪॥
ಸಾನ್ತ್ವಯಿತ್ವಾ ತತೋಽನ್ಯೋನ್ಯಂ ಸಂವಿಶೇತಾಂ ಮುದಾನ್ವಿತೌ ॥೩೫॥

ದೀಪಿಕೆ—ಪುರುಷನಿಗೂ ನಿಯಮವುಂಟು :—

ಪುರುಷನು ತನ್ನ ಭಾರ್ಯೆಯು ಋತುವಾಗುವುದಕ್ಕೆ ಮುಂಚಿನ ಒಂದು ಮಾಸದಿಂದಲೂ ಬ್ರಹ್ಮಚರ್ಯವನ್ನು ಪಾಲಿಸುತ್ತಾ ತುಪ್ಪದಿಂದ ಸ್ನಿಗ್ಧನಾಗಿ ಹಾಲುತುಪ್ಪ ಮಿಶ್ರಮಾಡಿದ ಶಾಲ್ಯನ್ನವನ್ನು ಊಟಮಾಡುತ್ತಿದ್ದು ತನ್ನಂತೆಯೇ ಒಂದು ಮಾಸದವರಿವಿಗೆ ಬ್ರಹ್ಮಚಾರಿಣಿಯಾಗಿ (ಪುರುಷನ ಸಮಾಗಮವಿಲ್ಲದೆ) ತೈಲದಿಂದ ಸ್ನಿಗ್ಧವಾದ ದೇಹವುಳ್ಳವಳಾಗಿ ತೈಲ, ಉದ್ದು ಇವು ಅಧಿಕ ಪ್ರಮಾಣದಿಂದ ಸೇರಿದ ಆಹಾರವನ್ನು ಭೋಜನಮಾಡಿ ಪುಷ್ಪಳಾದ ತನ್ನ ಭಾರ್ಯೆಯು ಋತು

ಸ್ನಾನಮಾಡಿದ (ಋತುಸ್ರಾವವು ಪ್ರಾರಬ್ಧಿಸಿದ ಮೇಲೆ ನಾಲ್ಕನೆಯ) ದಿವಸ ಪ್ರಾತಃಕಾಲದಲ್ಲಿ ಪುಣ್ಯಾಹವಾಚನ ಕರ್ಮದಿಂದ ಶುದ್ಧನಾಗಿ ಮಧ್ಯಾಹ್ನದಲ್ಲಿ ತನ್ನ ಇಷ್ಟಬಂಧುಮಿತ್ರರೊಡನೆ ಭೋಜನಮಾಡಿ ಸಂತೋಷಚಿತ್ತದಿಂದಿದ್ದು ರಾತ್ರಿಯ ಮೊದಲನೆಯ ಯಾಮದ ಕಡೆಯಲ್ಲಿ ಪತ್ನಿಯೊಡನೆ ಸುಖಶಯನದಲ್ಲಿ ಕುಳಿತು ದಂಪತಿಗಳು ಸಲ್ಲಾಪಗಳನ್ನಾಡುತ್ತಾ ಸಂತೋಷಚಿತ್ತರಾಗಿ ಗರ್ಭಾಧಾನ (ಮೈಥುನ ಕ್ರಿಯೆಯನ್ನು) ಕ್ರಿಯೆಯನ್ನಾಚರಿಸಬೇಕು. (೩೩–೩೪–೩೫).

ಮೂಲ—ಅದೃಷ್ಟಾರ್ತವಾಯಾ ಋತುಮತ್ಯಾ ಲಕ್ಷಣಾನಿ—(ಸು।ಶಾ।ಅ।೩)

ಪೀನಪ್ರಸನ್ನವದನಾಂ ಪ್ರಕ್ಲಿನ್ನಾತ್ಮಮುಖದ್ವಿಜಾಮ್ ।
ನರಕಾಮಾಂ ಪ್ರಿಯಕಥಾಂ ಸ್ರಸ್ತಕುಕ್ಷ್ಯಕ್ಷಿಮೂರ್ಧಜಾಮ್ ॥೩೬॥
ಸ್ಫುರತ್ಭುಜಕುಚಶ್ರೋಣಿನಾಭ್ಯೂರುಜಘನಸ್ಫಿಚಾಮ್ ।
ಹರ್ಷೌತ್ಸುಕ್ಯಪರಾಂ ಚಾಪಿ ವಿದ್ಯಾದೃತುಮತೀಂ ಭಿಷಕ್ ॥೩೭॥

ದೀಪಿಕೆ—ಋತುರಕ್ತಸ್ರಾವವಿಲ್ಲದ ಋತುಮತಿಯ ಲಕ್ಷಣವು :—(ಸು।ಶಾ।ಅ।೩)

ಮುಖವು ಉಬ್ಬಿ ಪ್ರಸನ್ನವಾಗಿಯೂ ದೇಹವೂ, ಮುಖವೂ ಹಲ್ಲುಗಳೂ ಹೊಳೆಯುತ್ತಲೂ ಪುರುಷರ ಸಮಾಗಮದಲ್ಲಿ ಆಸೆಯುಳ್ಳವಳಾಗಿಯೂ ತನ್ನ ಪ್ರಿಯನ ವಿಚಾರವಾದ ಪ್ರಸಂಗಗಳಲ್ಲಿ ಆಸಕ್ತಳಾಗಿಯೂ ಹೊಟ್ಟೆ, ಕಣ್ಣುಗುಡ್ಡೆಗಳೂ, ಕೇಶಗಳೂ ಕೆಳಕ್ಕೆ ಜಗ್ಗಿದಂತೆಯೂ, ಸ್ತನಗಳೂ, ಭುಜಗಳೂ, ಸೊಂಟವೂ, ಹೊಕ್ಕಳೂ, ತೊಡೆಗಳೂ, ಪಿರ್ರೆಗಳೂ, ಗುಹ್ಯಪ್ರದೇಶವೂ ಉಬ್ಬಿದಂತೆಯೂ, ಸದಾ ಸಂತೋಷ ಕುತೂಹಲಗಳಿಂದ ಕೂಡಿಯೂ ಇರುವ ಸ್ತ್ರೀಯು ರಜಸ್ರಾವವಿಲ್ಲದಿದ್ದರೂ ಋತುಮತಿಯೆಂದೇ ವ್ಯವಹರಿಸಲ್ಪಡುತ್ತಾಳೆ. ॥೩೬–೩೭॥

ಮೂಲ—ಗರ್ಭಾಧಾನಾರ್ಹಸ್ತ್ರೀಪುಂಸಾಂ ವಯೋಲಕ್ಷಣಾನಿ—(ಚ।ಸಂ।)

ಚತಸ್ರೋsವಸ್ಥಾಃ ಶರೀರಸ್ಯ। ಯಥಾ—ವೃದ್ಧಿರ್ಯೌವನಂ ಸಂಪೂರ್ಣತಾ ಕಿಂಚಿತ್ಪರಿಹಾಣಿಶ್ಚೇತಿ । ಆಷೋಡಶಾದ್ವೃದ್ಧಿರಾಪಂಚವಿಂಶತೇರ್ಯೌವನಮಾಚತ್ವಾರಿಂಶತಸ್ಸಮ್ಪೂರ್ಣತಾ । ತತಃ ಕಿಂಚಿತ್ಪರಿಹಾಣಿಶ್ಚೇತಿ ॥೩೮॥

(ಅ।ಸಂ।)—
ತಸ್ಮಾದ್ದ್ವಾದಶವರ್ಷೀಯಾಮೇಕವಿಂಶತಿಕಃ ಪುಮಾನ್ ।
ಉದ್ವಹೇದ್ವಿಧಿನಾ ಕನ್ಯಾಮನುರೂಪಗುಣಾನ್ವಿತಾಮ್ ॥೩೯॥
ತತಷ್ಷೋಡಶವರ್ಷೀಯಾಂ ಪಂಚವಿಂಶತಿಕಃ ಪತಿಃ ।
ಸನ್ತತ್ಯರ್ಥಂ ಯತೇತೈಷ ಕಾಲಃ ಸತ್ಪುತ್ರಸಿದ್ಧಿದಃ ॥೪೦॥

ಪ್ರಮಾಣಾನ್ತರಾಣಿ—(ಅ।ಹೃ।)
ಪಂಚವಿಂಶೇ ತತೋ ವರ್ಷೇ ಪುಮಾನ್ ನಾರೀ ತು ಷೋಡಶೇ ।
ಸಮತ್ವಾಗತವೀರ್ಯೌ ತೌ ಜಾನೀಯಾತ್ಕುಶಲೋ ಭಿಷಕ್ ॥೪೧॥

(ಅ।ಸಂ।).
ಪಂಚವಿಂಶತಿವರ್ಷೀಯೋ ದ್ವಾದಶವಾರ್ಷಿಕೀಮುದ್ವಹೇತ್ ಪಿತ್ರ್ಯಧರ್ಮಾರ್ಥಕಾಮಪ್ರಜಾಪ್ರಾಪ್ತ್ಯರ್ಥಮ್ ॥೪೨॥

(ಧ್ವಾ। ಸಿ ೧।)—
ಪೂರ್ಣಷೋಡಶವರ್ಷಾ ಸ್ತ್ರೀ ಪೂರ್ಣವಿಂಶೇನ ಸಙ್ಗತಾ।
ಶುದ್ಧೇ ಗರ್ಭಾಶಯೇ ಮಾರ್ಗೇ ರಕ್ತೇ ಶುದ್ಧೇಽನಿಲೇ ಹೃದಿ ।।
ವೀರ್ಯವನ್ತಂ ಸುತಂ ಸೂತೇ ತತೋ ನ್ಯೂನಾಬ್ದಯೋಃ ಪುನಃ।
ರೋಗ್ಯಲ್ಪಾಯುರಧನ್ಯೋ ವಾ ಗರ್ಭೋ ಭವತಿ ನೈವ ವಾ ॥೪೪॥
ಮನುಃ—
ತ್ರೀಣಿ ವರ್ಷಾಣ್ಯುದೀಕ್ಷೇತ ಕುಮಾರ್ಯೃತುಮತೀ ಸತೀ।
ಊರ್ಧ್ವನ್ತು ಕಾಲಾದೇತಸ್ಮಾದ್ವಿನ್ದೇತ ಸದೃಶಂ ಪತಿಮ್ ॥೪೫॥

ದೀಪಿಕೆ—ಗರ್ಭಾಧಾನಕ್ಕೆ ಅರ್ಹರಾದ ಸ್ತ್ರೀಪುರುಷರ ವಯೋಲಕ್ಷಣಗಳು :—
(ಚ।ಸಂ।)—

ಶರೀರಕ್ಕೆ ನಾಲ್ಕು ಅವಸ್ಥೆಗಳುಂಟು—ವೃದ್ಧಿ, ಯೌವನ, ಸಮ್ಪೂರ್ಣತೆ ಮತ್ತು ಕ್ಷೀಣತೆ. ಜನನ ಮೊದಲು ಹದಿನಾರು ವರ್ಷಗಳು ತುಂಬುವವರೆಗೆ ಬಾಲ್ಯವು; ಈ ಅವಸ್ಥೆಯಲ್ಲಿ ಬೇಗಬೇಗನೆ ಶರೀರವು ಬೆಳೆಯುತ್ತದೆ. ಆ ಲಾಗಾಯ್ತು ಇಪ್ಪತ್ತೈದು ವರ್ಷಗಳವರೆಗೆ ಯೌವನವು; ಅನಂತರ ನಲವತ್ತು ವರ್ಷಗಳವರೆಗೆ ಪೂರ್ಣಾವಸ್ಥೆ; ಅನಂತರ ಶರೀರವು ಕ್ಷೀಣವಾಗುತ್ತಾ ಬಂದು ಕ್ರಮವಾಗಿ ವೃದ್ಧಾಪ್ಯವುಂಟಾಗುತ್ತದೆ. ಸ್ತ್ರೀಯರಿಗೆ ಹದಿನಾರು ವರ್ಷಗಳು ಪೂರೈಸಿದನಂತರವೂ ಪುರುಷರಿಗೆ ಇಪ್ಪತ್ತೈದು ವರ್ಷಗಳು ಪೂರೈಸಿದ ಮೇಲೂ ಸರ್ವಾಂಗಗಳೂ ಪುಷ್ಟಿಯಾಗಿ ಪ್ರಾಪ್ತವಯಸ್ಕರೆನಿಸುತ್ತಾರೆ. ಈ ಕಾರಣದಿಂದ ಅನುರೂಪಳಾದ ಹನ್ನೆರಡು ವಯಸ್ಸಿನ ಹುಡುಗಿಯನ್ನು ಇಪ್ಪತ್ತೊಂದು ವರ್ಷವಯಸ್ಸಿನ ತರುಣನು ಶಾಸ್ತ್ರಾನುಸಾರವಾಗಿ ಮದುವೆ ಮಾಡಿಕೊಂಡು ಹದಿನಾರು ವರ್ಷಪೂರ್ತಿಯಾಗಿ ಪ್ರಾಯಸ್ಥಳಾದಾಗ ಇಪ್ಪತ್ತೈದು ವರ್ಷ ಮುಗಿದು ಪ್ರಾಯಸ್ಥನಾದ ಪುರುಷನು ಸತ್ಸನ್ತಾನವನ್ನು ಪಡೆಯಲು ಭೋಗಿಸಬೇಕು. ಸತ್ಪ್ರಜೋತ್ಪಾದನೆಯುಂಟಾಗಲು ಇದು ಸ್ತ್ರೀಪುರುಷರ ಯೋಗ್ಯ ಕಾಲವು ॥೪೧॥

(ಸು।ಶಾ।) ಹದಿನಾರು ವರ್ಷಗಳು ತುಂಬಿದ ಯುವತಿಯೂ ಇಪ್ಪತ್ತೈದು ವರ್ಷಗಳು ತುಂಬಿದ ಪ್ರಾಯದವನೂ ಸಂಭೋಗಮಾಡಿದರೆ ಧರ್ಮಾರ್ಥ ಕಾಮಗಳನ್ನು ಪಡೆದು ಪಿತೃಋಣವನ್ನು ಪರಿಹರಿಸುವ ಸತ್ಪುತ್ರನು ಹುಟ್ಟುತ್ತಾನೆ. ॥೪೩॥

ಬೃ।ನಿ।ರ—ಗರ್ಭಾಶಯ, ಯೋನಿಮಾರ್ಗ, ಶುಕ್ರಾರ್ತವಗಳು ಶುದ್ಧ ವಾಗಿರಬೇಕು. ಇಬ್ಬರ ಮನಸ್ಸೂ ಕಾಮೇಚ್ಛೆಯಿಂದ ಕೂಡಿರಬೇಕು. ಹದಿನಾರು ವರ್ಷ ಪೂರ್ತಿಯಾದ ಸ್ತ್ರೀಯು ಇಪ್ಪತ್ತು ವರ್ಷ ಪೂರ್ತಿಯಾದ ಪುರುಷನೂ ಸೇರಿ ರಮಿಸಿದರೆ ವೀರ್ಯವಂತನಾದ ಪುತ್ರನು ಹುಟ್ಟುತ್ತಾನೆ. ಈ ವಯಸ್ಸುಗಳ ಪ್ರಮಾಣಕ್ಕಿಂತಲೂ ಕಡಮೆ ವಯಸ್ಸಿನ ಸ್ತ್ರೀಪುರುಷರು ಭೋಗಿಸಿದರೆ ರೋಗಿಷ್ಠನೂ ಅಲ್ಪಾಯುವೂ ಅಧನ್ಯನೂ (ಅವಯವಗಳ

ಬೆಳವಣಿಗೆ ಕಡಮೆಯಾದವನೂ) ಆದ ಪುತ್ರನು ಹುಟ್ಟುತ್ತಾನೆ. ಅಥವಾ ಗರ್ಭೋತ್ಪತ್ತಿಯೇ ಉಂಟಾಗುವುದಿಲ್ಲ ‖೪೩-೪೪‖

ಮನು—ಕೌಮಾರಾವಸ್ಥೆಯು ಕಳೆದನಂತರ ಋತುಮತಿಯಾದವಳು ಮೂರು ವರ್ಷಗಳವರೆಗೆ ಜಿತೇನ್ದ್ರಿಯಳಾಗಿದ್ದು ತನ್ನ ಬಂಧು ಬಳಗದ ಜನರು ಅನುರೂಪನಾದ ವರನನ್ನು ಗೊತ್ತುಮಾಡಿ (ಲಗ್ನ) ವಿವಾಹವನ್ನು ಮಾಡದಿದ್ದರೆ ಆ ಕಾಲಾನಂತರ ತಾನೇ ಸ್ವತಃ ಅನುರೂಪನಾದ ಪತಿಯನ್ನು ವರಿಸಬಹುದು ‖೪೫‖

ಮೂಲ—ಗರ್ಭಾಧಾನೇ ನಿನ್ದಿತಸ್ತ್ರೀಪುರುಷೌ (ಅನರ್ಹೌ)—(ಸು।ಶಾ।ಅ।೨)

> ಅತಿವೃದ್ಧಾಯಾಂ ದೀರ್ಘರೋಗಿಣ್ಯಾಮನ್ಯೇನ ವಾ ವಿಕಾರೇಣೋಪಸೃಷ್ಟಾಯಾಂ ಗರ್ಭಾಧಾನಂ ನೈವ ಕುರ್ವೀತ । ಪುರುಷಸ್ಯಾಪ್ಯೇವಂವಿಧಸ್ಯ ತ ಏವ ದೋಷಾಸ್ಸಮ್ಭವನ್ತಿ ।।೪೬।।
> ಉಕ್ತಂ (ಚ—ಅ।ಸಂ)
> ಊನಷೋಡಶವರ್ಷಾಯಾಮಪ್ರಾಪ್ತಃ ಪಂಚವಿಂಶತಿಮ್ ।
> ಯದ್ಯಾಧತ್ತೇ ಪುಮಾನ್ ಗರ್ಭಂ ಕುಕ್ಷಿಸ್ಥಸ್ಸ ವಿಪದ್ಯತೇ ।।೪೭।।
> ಜಾತೋ ವಾ ನ ಚಿರಂಜೀವೇಜ್ಜೀವೇದ್ವಾ ದುರ್ಬಲೇನ್ದ್ರಿಯಃ ।
> ತಸ್ಮಾದತ್ಯನ್ತಬಾಲಾಯಾಂ ಗರ್ಭಾಧಾನಂ ನ ಕಾರಯೇತ್ ।।೪೮।।

ದೀಪಿಕೆ—ಗರ್ಭಾಧಾನಕ್ಕೆ ಅನರ್ಹರಾದ ಸ್ತ್ರೀ ಪುರುಷರು :—(ಸು।ಶಾ।ಅ।೨)

ಅತಿ ವೃದ್ಧಳೂ, ಬಲು ದಿವಸಗಳಿಂದ ರೋಗಪೀಡಿತಳಾಗಿರುವವಳೂ, ಮತ್ಯಾವುದಾದರೂ ರೋಗವಿಕಾರವುಳ್ಳವಳೂ ಆದ ಸ್ತ್ರೀಯಲ್ಲಿ ಗರ್ಭಾಧಾನ ಮಾಡಕೂಡದು. ಅದೇ ರೀತಿಯಾಗಿ ರೋಗದಿಂದ ನರಳುವ ಪುರುಷನಲ್ಲೂ ದೋಷಪ್ರಕೋಪವಿರುವುದರಿಂದ ಅಂತಹ ಪುರುಷನೂ ಗರ್ಭಾಧಾನಮಾಡಲು ಅನರ್ಹನು ‖೪೬‖

ಅ.ಸಂ.—ಹದಿನಾರು ವರ್ಷಗಳಿಗೆ ಕಡಮೆ ವಯಸ್ಸಿನ ಸ್ತ್ರೀಯಲ್ಲಿ ಇಪ್ಪತ್ತೈದು ವರ್ಷಗಳಿಗಿಂತ ಕಡಮೆ ವಯಸ್ಸುಳ್ಳ ಪುರುಷನು ಗರ್ಭಾಧಾನ ಮಾಡಿದರೆ ಹುಟ್ಟುವ ಶಿಶುವು ಪ್ರಸವಕ್ಕೆ ಮುಂಚೆಯೇ ಗರ್ಭಾಶಯದೊಳಗೇ ಸಾಯುತ್ತದೆ. ಹುಟ್ಟಿದರೂ ಬಲುಕಾಲದವರೆಗೆ ಬದುಕಿರುವುದಿಲ್ಲ. ಒಂದು ವೇಳೆ ಬದುಕಿದರೂ ದುರ್ಬಲವಾದ ಇಂದ್ರಿಯಗಳುಳ್ಳವನಾಗುತ್ತಾನೆ. ಆದಕಾರಣ ಅತ್ಯಂತ ಬಾಲಕಿಯಲ್ಲಿ ಗರ್ಭಾಧಾನ ಮಾಡಬಾರದು, ಹೀಗೆಯೇ ಅತಿ ಚಿಕ್ಕವಯಸ್ಸಿನ ಗಂಡಸೂ ಸ್ತ್ರೀಯೊಡನೆ ಸಂಭೋಗ ಮಾಡಬಾರದು. ಕೆಲವು ವೈದ್ಯರು ಊನ ಷೋಡಶವೆಂದರೆ ಪಾದೋನ ಷೋಡಶ ಅಂದರೆ ಹನ್ನೆರಡು ವರ್ಷವೆಂದು ಅರ್ಥ ಮಾಡುತ್ತಾರೆ. ಇವರ ಅರ್ಥದ ಮೇಲೆ 13, 14, 15ನೆಯ ವರ್ಷ ವಯಸ್ಸಿನ ಸ್ತ್ರೀಯೊಡನೆ 21, 22, 23, 24 ವರ್ಷಗಳುಳ್ಳ ಪುರುಷರು ಕ್ರಮವಾಗಿ ಗರ್ಭೋತ್ಪತ್ತಿ ಮಾಡಿದರೂ ಅಥವಾ ಸ್ತ್ರೀಯು 16 ವರ್ಷಗಳಿಗೆ ಕಡಮೆಯಾಗಿದ್ದು ಪುರುಷನಿಗೆ 25 ವರ್ಷ ಪೂರ್ತಿಯಾಗಿದ್ದರೂ ಅಥವಾ

ಸ್ತ್ರೀಯಳಿಗೆ 16 ವರ್ಷಗಳು ಪೂರ್ತಿಯಾಗಿ ಪುರುಷನಿಗೆ 25 ವರ್ಷಗಳಿಗಿಂತ ಕಡಮೆಯಾಗಿದ್ದರೂ ಅವರಿಬ್ಬರ ಸಂಭೋಗದಿಂದ ಹುಟ್ಟಿದ ಮಗುವಿಗೆ ಮೇಲೆ ಹೇಳಿದ ರೀತಿಯಾಗಿ ವಿಕಾರಗಳುಂಟಾಗುತ್ತವೆಯೆಂದು ಊಹಿಸಬೇಕು. ||೪೭–೪೮||

ಮೂಲ—ಗರ್ಭಗ್ರಹಣೇ ಸ್ತ್ರೀವೃತ್ತಮ್—(ಬೃ।ಸಿ।ರ।)

ಉತ್ತಾನಾ ತನ್ಮನಾ ಯೋಷಿತ್ತಿಷ್ಠೇದಙ್ಗೈಸ್ಸುಸಂಯತೈಃ ।
ತಥಾ ಹಿ ಬೀಜಂ ಗೃಹ್ಣಾತಿ ದೋಷೈಃ ಸ್ವಸ್ಥಾನಸಂಸ್ಥಿತೈಃ ||೪೯||

ನ ಚಾಸಾವಧಸ್ತಿಷ್ಠೇತ್ । ತದಾ ಹಿ ಸ್ತ್ರೀಚೇಷ್ಟಿತಃ ಪುರುಷೋ ಜಾಯತೇ । ಪುಂಚೇಷ್ಟಾ ವಾ ಸ್ತ್ರೀ । ನ ಚ ನ್ಯುಬ್ಜಾಂ ಪಾರ್ಶ್ವಗತಾಂ ವಾ ಸೇವೇತ । ನ್ಯುಬ್ಜಾಯಾಂ ವಾತೋ ಬಲವಾನ್ ಸ ಯೋನಿಂ ಪೀಡಯತಿ । ದಕ್ಷಿಣಪಾರ್ಶ್ವಗಾಯಾಃ ಶ್ಲೇಷ್ಮಾ ಪೀಡಿತಃ ಚ್ಯುತೋ ಪಿದಧಾತಿ ಗರ್ಭಾಶಯಮ್ । ವಾಮಪಾರ್ಶ್ವಗಾಯಾಸ್ತತ್ಪಿತ್ತಂ ವಿದಹತಿ ರಕ್ತಶುಕ್ರೇ । ತಸ್ಮಾದುತ್ತಾನಾ ಬೀಜಂ ಗೃಹ್ಣೀಯಾತ್। ತಸ್ಯಾ ಹಿ ಯಥಾಸ್ಥಾನಮವತಿಷ್ಠನ್ತೇ ದೋಷಾಃ; ಪರ್ಯಾಪ್ತೇ ಚೈನಾಂ ಶೀತೋದಕೇನ ಪರಿಷಿಂಚೇತ್ ||೫೦||

ಉಕ್ತಂ ಚ—ಅ।ಸಂ.

ಪುರುಷಸ್ಯ ಗುಣೈರ್ಯುಕ್ತಾ ವಿಹಿತಾ ನ್ಯೂನಭೋಜನಾ ।
ನಾರೀ ಋತುಮತೀ ಪುಂಸಾ ಸಙ್ಗಚ್ಛೇತು ಸುತಾರ್ಥಿನೀ ||೫೧||

ಅನ್ಯಚ್ಚ—(ಬೃ।ಸಿ।ರ।)

ಮನೋಭವಾಗಾರಮುಖೇಬಲಾನಾಂ ತಿಸ್ರೋ ಭವನ್ತಿ ಪ್ರಮದಾಜನಾನಾಮ್ । ಸಮೀರಣಾ ಚಾನ್ದ್ರಮುಖೀ ಚ ಗೌರೀ ವಿಶೇಷಮಾಸಾಮುಪವರ್ಣಯಾಮಿ ||೫೨||

ಪ್ರಧಾನಭೂತಾ ಮದನಾತಪತ್ರೇ ಸಮೀರಣಾ ನಾಮ ವಿಶೇಷನಾಡೀ ।
ತಸ್ಯಾ ಮುಖೇ ಯತ್ಪತಿತಂ ತು ವೀರ್ಯಂ ತನ್ನಿಷ್ಫಲಂ ಸ್ಯಾದಿತಿ ಚನ್ದ್ರಮೌಳಿಃ ||೫೩||

ಯಾ ಚಾಪರಾ ಚಾನ್ದ್ರಮುಖೀ ಚ ನಾಡೀ ಕನ್ದರ್ಪಗೇಹೇ ಭವತಿ ಪ್ರಧಾನಾ।
ಸಾ ಸುನ್ದರೀ ಯೋಷಿತಮೇವ ಸೂತೇ ಸಾಧ್ಯಾ ಭವೇದಲ್ಪರತೋತ್ಸವೇಷು ||೫೪||

ಗೌರೀ ತು ನಾಡೀ ಯದುಪಸ್ಥಗರ್ಭೇ ಪ್ರಧಾನಭೂತಾ ಭವತಿ ಸ್ವಭಾವಾತ್ ।
ಪುತ್ರಂ ಪ್ರಸೂತೇ ಬಹುಧಾಙ್ಗನಾ ಸಾ ಕಷ್ಟೋಪಭೋಗ್ಯಾ ಸುರತೋಪಪಿಷ್ಟಾ ||೫೫||

ದೀಪಿಕೆ—ಗರ್ಭಧಾರಣೆಗೆ ಯೋಗ್ಯಳಾದ ಸ್ತ್ರೀಯಳ ಶರೀರ ವಿನ್ಯಾಸ:—(ಬೃ।ಸಿ।ರ।)

ಸುರತಕಾಲದಲ್ಲಿ ಸ್ತ್ರೀಯು ಮುಖವನ್ನು ಮೇಲಾಗಿಯೂ ಅಂಗಗಳನ್ನು ಬಿಗಿಹಿಡಿಯುದೆಯೂ ಕಾಲು ಚಾಚಿಕೊಂಡು ಮಲಗಬೇಕು. ಈ ಸ್ಥಿತಿಯಲ್ಲಿ ಸಂಭೋಗ ಮಾಡಿದರೆ ದೋಷಗಳು ತಮ್ಮ ತಮ್ಮ ಸ್ಥಾನಗಳಲ್ಲಿರುತ್ತವೆಯಾಗಿ ಪುರುಷನ ಶುಕ್ರವು ಸ್ತ್ರೀಯಳ ಯೋನಿಯ ಮೂಲಕ ಮುಂದೆ ನುಗ್ಗಿ ಸ್ತ್ರೀ ಬೀಜ

ದೊಡನೆ ಸೇರಿ ಗರ್ಭಾಶಯದೊಳಕ್ಕೆ ಪ್ರವೇಶಿಸಲು ಅನುಕೂಲವಾಗುತ್ತದೆ. ಪುರುಷನು ಕೆಳಭಾಗದಲ್ಲಿದ್ದು ಸ್ತ್ರೀಯಳು ಅವನ ಮೇಲೆ ಮಲಗಿ ರಮಿಸಬಾರದು. ಒಂದುವೇಳೆ ಈ ರೀತಿಯ ಸಂಭೋಗದಿಂದ ಗರ್ಭಧಾರಣೆಯಾದರೆ ಸ್ತ್ರೀ ಚೇಷ್ಟೆಯನ್ನು ಮಾಡುವ ಗಂಡು ಮಗುವಾಗಲೀ ಪುಂಚೇಷ್ಟೆಯುಳ್ಳ ಹೆಣ್ಣು ಮಗುವಾಗಲೀ ಹುಟ್ಟುತ್ತದೆ. ಸ್ತ್ರೀಯು ಮುಖವನ್ನು ಕೆಳಮಾಡಿಕೊಂಡು (ಬೋರಲಾಗಿ) ಮಲಗಿರುವಾಗ ಸಂಭೋಗಮಾಡಿದರೆ ವಾತಪ್ರಕೋಪವುಂಟಾಗಿ ಯೋನಿಯು ಸಂಕುಚಿತವಾಗಿ ಪೀಡಿಸಲ್ಪಡುವುದರಿಂದ ಶುಕ್ರಶೋಣಿತಗಳು ಗರ್ಭಾಶಯಕ್ಕೆ ಪ್ರವೇಶವಾಗಲು ಅಡ್ಡಿಯಾಗುತ್ತದೆ. ಸ್ತ್ರೀಯು ಬಲಪಕ್ಕದಲ್ಲಿ ಮಲಗಿರುವಾಗ ಸಂಭೋಗಮಾಡಿದರೆ ಶ್ಲೇಷ್ಮವು ಪ್ರಕೋಪಗೊಂಡು ಸ್ವಸ್ಥಾನದಿಂದ ಚ್ಯುತವಾಗಿ ಗರ್ಭಾಶಯವನ್ನು ಮುಚ್ಚಿ ಬಿಡುತ್ತದೆ. ಸ್ತ್ರೀಯು ಎಡಪಕ್ಕದಲ್ಲಿ ಮಲಗಿರುವಾಗ ಸಂಭೋಗಮಾಡಿದರೆ ಪಿತ್ತವು ಪ್ರಕುಪಿತವಾಗಿ ಆರ್ತವ ಮತ್ತು ಶುಕ್ರಗಳನ್ನು ನಾಶಪಡಿಸುತ್ತದೆ. ಆದಕಾರಣ ಸಂಭೋಗ ಕಾಲದಲ್ಲಿ ಸ್ತ್ರೀಯಳು ಅಂಗತಂಗಲಾಗಿ (ಮೇಲ್ಮುಖವಾಗಿ) ಮಲಗಿರಬೇಕು. ಆಗ ದೋಷಗಳು ಸ್ವಸ್ಥಾನಗಳಲ್ಲಿದ್ದು ಗರ್ಭಧಾರಣೆಯುಂಟಾಗಲು ಸಹಕರಿಸುತ್ತವೆ; ಸುರತ ಕ್ರಿಯೆ ಮುಗಿದಮೇಲೆ ಯೋನಿಯ ಮೇಲ್ಭಾಗಕ್ಕೆ ತಣ್ಣೀರನ್ನು ಚುಮುಕಿಸಬೇಕು. ಪುತ್ರಾರ್ಥಿನಿಯಾದ ಋತುಮತಿಯು ತನ್ನ ಪತಿಯ ಗುಣಗಳಿಗೆ ತಕ್ಕ ಗುಣವುಳ್ಳವಳಾಗಿ ಸ್ವಲ್ಪಕಡಮೆ ಪ್ರಮಾಣದಿಂದ ಭೋಜನ ಮಾಡಿ ಅನಂತರ ಸಂಭೋಗ ಸುಖವನ್ನು ಹೊಂದಬೇಕು.

ಟಿಪ್ಪಣಿ—ಸ್ತ್ರೀಯರ ಯೋನಿ ಮುಖದಲ್ಲಿ ಸಮೀರಣಾ, ಚಾಂದ್ರಮುಖೀ ಮತ್ತು ಗೌರೀ ಎಂಬ ಮೂರು ನಾಡಿಗಳು ಸಂಬದ್ಧವಾಗಿರುತ್ತವೆ. ಸಮೀರಣಾ ನಾಡಿಯು ಯೋನಿ ಮುಖದಲ್ಲಿ ಪ್ರಧಾನವಾಗಿರುವ ವೇಳೆ ರತಿಕ್ರಿಯೆ ನಡೆದು ಪುರುಷನ ಶುಕ್ರವು ಆ ನಾಡಿಯ ಮುಖದಲ್ಲಿ ಬಿದ್ದರೆ ಗರ್ಭಧಾರಣೆಯಾಗುವುದಿಲ್ಲ, ಎಂದು ಚಂದ್ರ ಮೌಳಿಯ ಮತವು; ಚಾಂದ್ರಮುಖಿಯೆಂಬ ನಾಡಿಯ ಮುಖದಲ್ಲಿ ರೇತಸ್ಸು ಬಿದ್ದರೆ ಗರ್ಭಧಾರಣೆಯಾಗಿ ಹೆಣ್ಣುಮಗುವು ಜನಿಸುತ್ತವೆ; ಈ ಸ್ತ್ರೀಯು ಸ್ವಲ್ಪ ರತಿಕ್ರಿಯೆಯಿಂದಲೇ ಆನಂದಪರಳಾಗುತ್ತಾಳೆ; ಗೌರೀ ಎಂಬ ನಾಡಿಯು ಯೋನಿಮುಖದಲ್ಲಿ ಪ್ರಧಾನವಾಗಿರುವಾಗ ಪುರಷನ ರೇತಸ್ಸು ಪತನವಾದರೆ ಗಂಡುಮಗುವನ್ನೇ ಹೆರುತ್ತಾಳೆ. ಇವಳಿಗೆ ಸುರತದಲ್ಲಿ ಬೇಗತೃಪ್ತಿಯಾಗುವುದಿಲ್ಲ. ಸುರತಕ್ರಿಯೆಯಲ್ಲಿ ಸುಲಭವಾಗಿ ಪುರುಷನ ವಶಳಾಗುವುದಿಲ್ಲ.

ಮೂಲ—ಗರ್ಭಾಧಾನೇ ನಿಷಿದ್ಧಕಾಲಃ—(ಸು।ಶಾ।ಅ। ೨)

ತತ್ರ ಪ್ರಥಮೇ ದಿವಸೇ ಋತುಮತ್ಯಾಂ ಮೈಥುನಗಮನಮನಾಯುಷ್ಯಂ ಪುಂಸಾಂ ಭವತಿ। ಯಚ್ಚ ತತ್ರಾಧೀಯತೇ ಗರ್ಭಃ ಸ ಪ್ರಸವಮಾನೋ ವಿಮುಚ್ಯತೇ। ದ್ವಿತೀಯೇಽಪ್ಯೇವಂ ಸೂತಿಕಾಗೃಹೇ ವಾ। ತೃತೀಯೇಽಪ್ಯೇವಮಸಮ್ಪೂರ್ಣಾಂಗೋಽಲ್ಪಾಯುರ್ವಾ ಭವತಿ।... ಚತುರ್ಥೇ ತು ಸಂಪೂರ್ಣಾಂಗೋ ದೀರ್ಘಾಯುಶ್ಚ ಭವತಿ। ನ ಚ ಪ್ರವರ್ತಮಾನೇ ರಕ್ತೇ ಬೀಜಂ ಪ್ರವಿಷ್ಟಂ ಗುಣಕರಂ ಭವತಿ। ಯಥಾ ನದ್ಯಾಂ ಪ್ರತಿಸ್ರೋತಃ ಪ್ಲಾವಿದ್ರವ್ಯಂ

ಪ್ರಕ್ಷಿಪ್ತಂ ಪ್ರತಿನಿವರ್ತತೇ ನೋರ್ಧ್ವಂ ಗಚ್ಛತಿ ತದ್ವದೇವ ದ್ರಷ್ಟವ್ಯಮ್; ತಸ್ಮಾನ್ನಿಯಮವತೀಂ ತ್ರಿರಾತ್ರಂ ಪರಿಹರೇತ್। ಚತುರ್ಥೇ ತು ದಿವಸೇ ಸಮ್ಪೂರ್ಣಾಙ್ಗೋ ದೀರ್ಘಾಯುಶ್ಚ ಭವತಿ। ಚತುರ್ಥ್ಯಾದಿದಿವಸೇಽಪಿ ರಜೋನಿವೃತ್ತೌ ಸ್ತ್ರೀ ಪತ್ಯಾ ಸಹ ಸಙ್ಗಚ್ಛೇತ್। ನ ತು ರಜೋಽನಿವೃತ್ತೌ ॥೫೬॥

ಋತಾವಾದ್ಯಾಸ್ತ್ರಯ ಅನ್ತಿಮಃ ಷೋಡಶೀಯಃ (ಯೋನಿಸಂಕೋಚದಿನಃ) ಉತ ತ್ರಯೋದಶೀ (ಋತುಸ್ತು ಸ್ನಾನಾದೂರ್ಧ್ವಂ ದ್ವಾದಶರಾತ್ರಯ ಇತಿ ಬ್ರುವತಾಂ ಮತೇ) ಪ್ರಭೃತಯೋ ನಿನ್ದ್ಯಾಃ ॥೫೭॥

ದೀಪಿಕೆ---ಗರ್ಭಾಧಾನಕ್ಕೆ ನಿಷಿದ್ಧವಾದ ಕಾಲಗಳು :—(ಸು। ಶಾ। ಅ। ೨)

ರಜೋದರ್ಶನ ದಿನದಿಂದ ಮೂರು ದಿನಗಳವರೆಗೆ ಋತುಮತಿಯೊಡನೆ ರಮಿಸುವ ಪುರುಷನಿಗೆ ಆಯುರ್ವೃದ್ಧಿಯುಂಟಾಗುವುದಿಲ್ಲ. ಒಂದು ವೇಳೆ ಆಗ ಗರ್ಭಧಾರಣೆಯುಂಟಾದರೆ ಹೆರಿಗೆಯಾಗುವ ಕಾಲದಲ್ಲೇ ಮಗುವು ಸತ್ತು ಹೋಗುತ್ತದೆ. ಎರಡನೆಯ ದಿವಸ ಸಂಭೋಗಮಾಡಿದರೂ ಅದೇ ರೀತಿಯಾಗುತ್ತದೆ. ಗರ್ಭಧಾರಣೆಯಾಗಿ ಪ್ರಸವವುಂಟಾದರೂ ಆ ಮಗು ಹೊಲೆ ಮನೆಯಲ್ಲಿಯೇ ಸಾಯುತ್ತದೆ. ಮೂರನೆಯ ದಿನವೂ ಹೀಗೆಯೇ ಆಗುತ್ತದೆ; ಜನಿಸುವ ಮಗುವಿಗೆ ಅಂಗಗಳು ಪೂರ್ತಿಯಾಗಿ ಬೆಳೆದಿರುವುದಿಲ್ಲ ಮತ್ತು ಅಲ್ಪಾಯು ವಾಗಿಯೇ ಸಾಯುತ್ತದೆ. ರಕ್ತವು ಸ್ರಾವವಾಗುತ್ತಿರುವಾಗ ಪುಂಬೀಜವು ಯೋನಿಯೊಳಕ್ಕೆ ಪ್ರವೇಶಿಸಿದರೆ ಅದು ಸ್ರಾವವಾಗುತ್ತಿರುವ ರಕ್ತದೊಡನೆ ದೇಹದ ಹೊರಗಡೆಗೇ ಹರಿದು ಬರುತ್ತದೆ. ಗರ್ಭಾಶಯದ ಕಡೆಗೆ ಹರಿದುಕೊಂಡು ಹೋಗಲಾರದು. ಹೇಗೆಂದರೆ ನದಿಯ ಪ್ರವಾಹಕ್ಕೆ ತೇಲಿಬಿಟ್ಟ ಹಗುರವಾದ ವಸ್ತುವು ಪ್ರವಾಹವನ್ನನುಸರಿಸಿ ಕೆಳಮುಖವಾಗಿ ಹರಿದು ಹೋಗುತ್ತದೆಯಲ್ಲದೆ ಪ್ರವಾಹಕ್ಕೆ ಎದುರಾಗಿ ಮುನ್ನುಗ್ಗುವುದಿಲ್ಲ. ಇದರಂತೆಯೇ ಪುಂಬೀಜವೂ ರಕ್ತಸ್ರಾವದೊಡನೆಯೇ ಸ್ತ್ರೀ ಯೋನಿಯಿಂದ ಹೊರಕ್ಕೆ ಕೊಚ್ಚಿ ಹರಿದು ಬರುತ್ತದೆಂದು ತಿಳಿಯಬೇಕು. ನಾಲ್ಕನೆಯ ದಿವಸ ಋತುಮತಿಯೊಡನೆ ಪುರುಷನು ಸಂಭೋಗ ಮಾಡಿದರೆ ಆಯುರ್ವೃದ್ಧಿಯುಂಟಾಗುತ್ತದೆ; ಆಗ ಗರ್ಭಧಾರಣೆಯಾಗಿ ಜನಿಸುವ ಮಗುವು ಸಂಪೂರ್ಣಾಙ್ಗವುಳ್ಳದ್ದಾಗಿ ದೀರ್ಘಾಯುವಾಗಿ ಬದುಕುತ್ತದೆ. ನಾಲ್ಕನೆಯ ದಿವಸದಿಂದ ರಜಸ್ರಾವವಿಲ್ಲದಿದ್ದರೆ ಸಂಭೋಗ ಮಾಡಬೇಕು, ರಜಸ್ರುತಿಯಿದ್ದರೆ ಕೂಡದೆಂದು ತಾತ್ಪರ್ಯವು; ಋತುಸ್ರಾವವುಂಟಾದ ಲಾಗಾಯ್ತು ಮೂರುದಿನಗಳೂ ಋತುವಾದ ಹದಿನಾರನೆಯ ದಿನದಿಂದ ಪುನಃ ಋತುಸ್ರಾವವಾಗುವವರೆಗೂ ಗರ್ಭಾಧಾನಕ್ಕೆ ಯೋಗ್ಯಕಾಲವಲ್ಲವು. ಹದಿಮೂರನೆಯ ದಿವಸದಿಂದ ಅಯೋಗ್ಯವಾದ ಕಾಲವೆನ್ನುವವರು ಋತುಸ್ನಾನ ದಿನದಿಂದ ಹನ್ನೆರಡು ದಿನಗಳು ಋತುಕಾಲವೆನ್ನುತ್ತಾರೆ. ॥೫೬–೫೭॥

ಮೂಲ—ಗರ್ಭಾಧಾನೇ ಯೋಗ್ಯಕಾಲಃ---(ಸು। ಶಾ। ಅ। ೨)

ಏಕಲ್ಪ್ಯೇವಂ ಚತುರ್ಥ್ಯಾಂ ಷಷ್ಠ್ಯಾಮಷ್ಟಮ್ಯಾಂ ದಶಮ್ಯಾಂ ದ್ವಾದಶ್ಯಾಂ ಚೋಪೇಯಾತ್ಪುತ್ರಕಾಮಃ ಪಂಚಮ್ಯಾಂ ನವಮ್ಯಾಮೇಕಾದಶ್ಯಾಂ ಚ ಸ್ತ್ರೀಕಾಮಃ ॥೫೮॥

ಉಕ್ತಂ ಚ—ವಿಷೂತ್ತರೋತ್ತರಂ ವಿದ್ಯಾದಾಯುರಾರೋಗ್ಯಮೇವ ಚ ।
ಪ್ರಜಾಸೌಭಾಗ್ಯಮೈಶ್ವರ್ಯಂ ಬಲಂ ಚ ದಿವಸೇಷು ವೈ ॥೫೯॥
ಶುಕ್ರಬಾಹುಳ್ಯಾತ್ಪುಮಾನಾರ್ತವಬಾಹುಳ್ಯಾತ್ ಸ್ತ್ರೀ ಉಭಯೋಸ್ಸಾಮ್ಯಯೋರ್ನಪುಂಸಕಮಿತಿ ॥೬೦॥
(ಬೃ।ನಿ।ರ।)—ಯುಗ್ಮೇಷು ದಿವಸೇಷ್ವಾಸಾಂ ಭವತ್ಯಲ್ಪತರಂ ರಜಃ ।
ಸಂಯೋಗಂ ತತ್ರ ಯಾ ಗಚ್ಛೇತ್ ಸಾ ಪುಮಾಂಸಂ ಪ್ರಸೂಯತೇ ॥೬೧॥
ಅಯುಗ್ಮೇಷು ದಿನೇಷ್ವಾಸಾಂ ಭವೇದ್ಬಹುತರಂ ರಜಃ।
ಸಂಯೋಗಂ ತತ್ರ ಯಾ ಗಚ್ಛೇತ್ ಸಾ ತು ಕನ್ಯಾಂ ಪ್ರಸೂಯತೇ ॥೬೨॥
ಅತಶ್ಚತುರ್ಥೀ ಷಷ್ಠೀ ಸ್ಯಾದಷ್ಟಮೀ ದಶಮೀ ತಥಾ ।
ದ್ವಾದಶೀ ವಾಪಿ ಯಾ ರಾತ್ರಿಸ್ತಸ್ಯಾನ್ತಾಂ ವಿಧಿನಾ ವ್ರಜೇತ್ ॥೬೩॥

ದೀಪಿಕೆ—ಗರ್ಭಾಧಾನಕ್ಕೆ ಯೋಗ್ಯವಾದ ಕಾಲಗಳು—(ಸು।ಶಾ।ಅ। ೨)

ಋತುಸ್ರಾವವು ಪ್ರಾರಂಭವಾದಮೇಲೆ ನಾಲ್ಕನೆಯ, ಆರನೆಯ, ಎಂಟನೆಯ, ಹತ್ತನೆಯ, ಹನ್ನೆರಡನೆಯ ದಿನಗಳ ಪೈಕಿ ಯಾವುದಾದರೊಂದು ದಿವಸ ಸ್ತ್ರೀಪುರುಷರು ಸಂಭೋಗಮಾಡಿ ಗರ್ಭೋತ್ಪತ್ತಿಯಾದರೆ ಗಂಡುಮಗುವೂ ಐದನೆಯ, ಏಳನೆಯ, ಒಂಭತ್ತನೆಯ, ಹನ್ನೊಂದನೆಯ ದಿನಗಳಪೈಕಿ ಯಾವುದಾದರೊಂದು ದಿನವಾದರೆ ಹೆಣ್ಣುಮಗುವೂ ಹುಟ್ಟುತ್ತದೆ ॥೫೯॥

ಮುಂದುಮುಂದಿನ ದಿನಗಳು ಆಯುರಾರೋಗ್ಯೈಶ್ವರ್ಯಬಲವರ್ಧಕಗಳು ॥೬೦॥

ಶುಕ್ರಾಧಿಕವಾದರೆ ಗಂಡುಮಗುವೂ ರಜಸ್ಸು ಅಧಿಕವಾದರೆ ಹೆಣ್ಣುಮಗುವೂ ಹುಟ್ಟುತ್ತವೆ. ಶುಕ್ರಶೋಣಿತಗಳು ಸಮಭಾಗದಲ್ಲಿದ್ದರೆ ನಪುಂಸಕನು ಹುಟ್ಟುತ್ತಾನೆ. ಸಮದಿನಗಳಲ್ಲಿ ರಜಸ್ಸು ಕಡಮೆಯಾಗಿಯೂ ವಿಷಮದಿವಸಗಳಲ್ಲಿ ಹೆಚ್ಚಾಗಿಯೂ ಉತ್ಪತ್ತಿಯಾಗುತ್ತದೆ. ಪುರುಷರಿಗೆ ಶುಕ್ರೋತ್ಪತ್ತಿಯಾಗುವುದರಲ್ಲಿ ಈ ಭೇದವಿರುವುದಿಲ್ಲ ॥೬೧–೬೩॥

ಮೂಲ—ಕುತೋ ತ್ರಯೋದಶೀಪ್ರಭೃತಯೋ ಗರ್ಭಾಧಾನೇ ನಿನ್ದಿತಾ ಸ್ಯುಃ ? (ಸು।ಶಾ।ಅ।೨)

ನಿಯತಂ ದಿವಸೇಽತೀತೇ ಸಙ್ಕುಚತ್ಯಮ್ಬುಜಂ ಯಥಾ ।
ಋತೌ ವ್ಯತೀತೇ ನಾರ್ಯಾಸ್ತು ಯೋನಿಸ್ಸಂವ್ರಿಯತೇ ತಥಾ ॥೬೪॥
ಋತಾವತೀತೇ ಯೋನಿಃ ಸ್ಯಾದ್ಬೀಜಂ ನಾತಃ ಪ್ರತೀಚ್ಛತಿ।

ಅಸ್ಯಾರ್ಥಃ—ಋತುಕಾಲೇ ಸ್ತ್ರೀಬೀಜಸ್ಯ ಗರ್ಭಾಶಯಂ ಪ್ರತ್ಯಾಗಮನಾಯ ಗರ್ಭಾಶಯನಾಡ್ಯಾ ಮುಖದ್ವಾರಂ ವಿಕಸಿತಂ ಭವತಿ। ಅತಸ್ತದ್ದ್ವಾರಾ ಪುಂಬೀಜಸ್ಯಾಪಿ ತನ್ನಾಡ್ಯನ್ತಃಪ್ರವೇಶೋಽಪಿ ಸುಕರೋ ಭವಿಷ್ಯತಿ; ಬಾಹುಳ್ಯೇನ ಸ್ತ್ರೀಪುಂಬೀಜಯೋರನ್ಯೋನ್ಯಮೇಳನಂ ಗರ್ಭಾಶಯನಾಡ್ಯನ್ತರ್ಭಾಗೇ ಸಮ್ಭವತಿ ಅಪಿ ಚ ಅನೃತುಕಾಲೇ ಪ್ರಾಯಶೋ ಗರ್ಭಾಶಯಸ್ಯ ಬಾಹ್ಯಾಸ್ಯಂ ಕಫೇನ ನಿರುದ್ಧಂ ಭವತಿ। ತತ ರಜಃಸ್ರವಣಾವಸರೇ ತದ್ವೇಗಾದ್ವಿವೃತಂ ಸಮ್ಪದ್ಯತೇ ಅತಃ ಪುಂಬೀಜಸ್ಯ ವೇಗಾದ್ಗರ್ಭಾಶಯಾನ್ತಃಪ್ರವೇಶೋಽಪಿ ಸುಶಕಃ ಸ್ಯಾದಿತಿ

ಭಾವಃ ; ಅತಃ ಪರಂ (ಯೋನಿಸಂಕೋಚನಾದನನ್ತರಂ) ಮಾಸಾದುಪೇಯಾತ್ ||೬೫-೬೬||

(ಬೃ।ಸಿ।ರ।)—ಏವಂ ತಾಮುಪಸಙ್ಗಮ್ಯ ಪುನರ್ಮಾಸಾದ್ವ್ರಜೇದಸೌ। ಮಾಸಾ-ದೂರ್ಧ್ವಮಿತಿ ಶೇಷಃ । ಅರ್ವಾಗ್ಗಮನೇನ ಗರ್ಭದ್ವಾರವಿಘಟ್ಟನಾದ್ಗರ್ಭಚ್ಯುತಿ-ಪ್ರಸಙ್ಗಃ ಸ್ಯಾತ್।ಕೇಚಿತ್ತು ಪುನಃ ಪುಷ್ಪದರ್ಶನೇನ ಗರ್ಭಾನ್ನಲಾಭವಿನಿಶ್ಚಯೇ ಮಾಸಾದೂರ್ಧ್ವಂ ಗಚ್ಛೇಲ್ಲಬ್ಧಗರ್ಭಾಂ ನ ಗಚ್ಛೇದಿತಿ ||೬೭||

ದೀಪಿಕೆ:—

ಋತುಸ್ರಾವದಿಂದ ಹದಿನಾರು ದಿನಗಳು ಅಥವಾ ಋತುಸ್ನಾನ ದಿವಸ ದಿಂದ ಹದಿಮೂರು ದಿನಗಳು ಕಳೆದನಂತರ ಪುನಃ ಋತುಸ್ರಾವವಾಗುವವರೆಗೆ ಗರ್ಭಾಧಾನಕ್ಕೆ ಪ್ರಶಸ್ತಕಾಲವಲ್ಲ. ಏತಕ್ಕೆ ?

(ಸು।ಶಾ।ಅ। ೩) ಹಗಲು ಮುಗಿದನಂತರ (ಸೂರ್ಯನು ಅಸ್ತವಾದ ಮೇಲೆ) ಕಮಲಗಳು ಮುಚ್ಚಿಕೊಳ್ಳುವುದು ನಿಯತವಾಗಿರುವಂತೆಯೇ ಋತುಕಾಲ ಮುಗಿದರೆ ಗರ್ಭಾಶಯದ ಮುಖವು ಸಂಕೋಚವಾಗುತ್ತದೆ. ಋತುಕಾಲ ಮುಗಿದಮೇಲೆ ಯೋನಿಯ ಮೂಲಕ ಪುಂಬೀಜವು ಗರ್ಭಾಶಯಕ್ಕೆ ಪ್ರವೇಶ ಮಾಡಲು ಅವಕಾಶವಾಗುವುದಿಲ್ಲ ||೬೪||

ಋತುಕಾಲದಲ್ಲಿ ಸ್ತ್ರೀ ಬೀಜವು ಗರ್ಭಾಶಯವನ್ನು ಪ್ರವೇಶಿಸಲು ಅನು ಕೂಲಿಸುವಂತೆ ಗರ್ಭಾಶಯದ ನಾಡಿಯ ಮುಖವು ತೆರೆದಿರುತ್ತದೆಯಾಗಿ ಈ ನಾಡಿಯ ಮುಖದಿಂದಲೇ ಶುಕ್ರಾಣುವೂ ಗರ್ಭಾಶಯದೊಳಕ್ಕೆ ಸುಲಭವಾಗಿ ಪ್ರವೇಶಿಸಬಹುದು. ಪ್ರಾಯಿಕವಾಗಿ ಸ್ತ್ರೀಪುಂಬೀಜಗಳು ಗರ್ಭಾಶಯನಾಡಿಯ ಒಳಗಡೆಯಲ್ಲೇ ಮಿಳಿತವಾಗುತ್ತವೆ. ಆದರೆ ಋತುಕಾಲವು ಮುಗಿದಮೇಲೆ ಗರ್ಭಾಶಯದ ಹೊರಮುಖವು ಕಫದಿಂದ ಮುಚ್ಚಲ್ಪಟ್ಟಿರುತ್ತದೆ. ಈ ಕಫವು ರಜಸ್ಸ್ರಾವದ ವೇಗದಿಂದ ರಜೋರಕ್ತದೊಡನೆಯೇ ಹೊರಕ್ಕೆ ಹರಿದುಬರುವುದ ರಿಂದ ಗರ್ಭಾಶಯದ ಮುಖವು ಅಗಲವಾಗುತ್ತದೆ. ಆಗ ಪುಂಬೀಜವು ಯೋನಿ ಮಾರ್ಗದ ಮೂಲಕವಾಗಿ ಗರ್ಭಾಶಯದೊಳಭಾಗಕ್ಕೆ ಸುಲಭವಾಗಿ ಪ್ರವೇಶಿಸ ಬಹುದೆಂದು ಅಭಿಪ್ರಾಯವು. ಯೋನಿಮುಖವು ಸಂಕೋಚವಾದಮೇಲೆ ಒಂದು ತಿಂಗಳು ಮುಗಿದನಂತರ ಪುನಃ ಸ್ತ್ರೀಸಂಗವನ್ನು ಮಾಡಬೇಕು ||೬೫||

(ಬೃ।ಸಿ।ರ)—ಹಿಂದೆ ವಿವರಿಸಿರುವಂತೆ ಗರ್ಭಾಧಾನಕ್ಕೆ ಯೋಗ್ಯವಾದ ಒಂದು ದಿನ ಸ್ತ್ರೀಸಂಗವನ್ನು ಮಾಡಿ ಅನಂತರ ತಿಂಗಳು ಮುಗಿದಮೇಲೆ ಪುನಃ ಸಂಭೋಗಮಾಡಬೇಕು. ತಿಂಗಳು ಪೂರ್ತಿಯಾಗುವ ಮೊದಲೇ ಪುನಃ ಸಂಭೋಗಮಾಡಿದರೆ ಗರ್ಭಾಶಯದ ಮುಖಕ್ಕೆ ಪೆಟ್ಟುಬಿದ್ದು ಗರ್ಭಚ್ಯುತಿ ಯುಂಟಾಗಬಹುದು. ಮತ್ತೆ ಕೆಲವರು—"ಪುನಃ ಋತುಸ್ರಾವವಾದರೆ ಗರ್ಭ ಧಾರಣೆಯುಂಟಾಗಿಲ್ಲವೆಂದು ನಿರ್ಧರವಾಗುವುದರಿಂದ ತಿಂಗಳಾದಮೇಲೆ ಮುಂದಿನ ಋತುಕಾಲದಲ್ಲಿ ಸಂಭೋಗಮಾಡಬಹುದೆಂದೂ ಗರ್ಭಧಾರಣೆಯಾಗಿ ರುವ ಸಂಗತಿಯು ನಿರ್ಧರವಾದರೆ ಪುನಃ ಸಂಭೋಗಮಾಡಬಾರದೆಂದೂ" ಅಭಿಪ್ರಾಯಪಡುತ್ತಾರೆ ||೬೬-೬೭||

ಚತುರ್ಥೋಽಧ್ಯಾಯಃ

ಗರ್ಭೋತ್ಪತ್ತಿ ಪ್ರಕರಣಮ್

ಗರ್ಭನಿರೂಪಣಮ್—(ಸು।ಶಾ।ಅ। ೫)

ಶುಕ್ರಶೋಣಿತಂ ಗರ್ಭಾಶಯಸ್ಥಂ ಆತ್ಮಪ್ರಕೃತಿವಿಕಾರಸಮ್ಮೂರ್ಛಿತಂ ಗರ್ಭ ಇತ್ಯುಚ್ಯತೇ। ಶುಕ್ರಶೋಣಿತಜೀವಸಂಯೋಗೇ ಸತಿ ಗರ್ಭಾಶಯೇ ಗರ್ಭಸಂಜ್ಞಾಂ ಲಭತೇ ॥೧॥

ತತ್ರ ಸ್ತ್ರೀಪುಂಸಯೋಸ್ಸಂಯೋಗೇ ತೇಜಃ ಶರೀರಾದ್ವಾಯುರುದೀರಯತಿ। ತತಸ್ತೇಜೋಽನಿಲಸನ್ನಿಪಾತಾಚ್ಛುಕ್ರಂ ಚ್ಯುತಂ ಯೋನಿಮಭಿಪ್ರತಿಪದ್ಯತೇ ಸಂಸೃಜ್ಯತೇ ಚಾರ್ತವೇನ। ತತೋಽಗ್ನೀಷೋಮಸಂಯೋಗಾತ್ಸಂಸೃಜ್ಯಮಾನೋ ಗರ್ಭಾಶಯಮನುಪ್ರತಿಪದ್ಯತೇ ದೈವಸಂಯೋಗಾತ್ ಭೂತಾತ್ಮನಾ ಸಹಾನ್ವಕ್ಷಂ ಸತ್ವರಜಸ್ತಮೋಭಿರ್ದೇವಾಸುರೈರಪರೈಶ್ಚ ಭಾವೈರ್ವಾಯುನಾಽಭಿಪ್ರೇರ್ಯಮಾಣೋ ಗರ್ಭಾಶಯಮನುಪ್ರವಿಶ್ಯಾವತಿಷ್ಠತೇ ॥೨॥

(ಬ್ಯ।ನಿ।ರ।)—

ಋತೌ ಸ್ತ್ರೀಪುಂಸಯೋರ್ಯೋಗೇ ಮಕರಧ್ವಜವೇಗತಃ।
ಮೇಢ್ರಯೋನ್ಯಭಿಸಂಘರ್ಷಾಚ್ಛರೀರೋಷ್ಮಾಽನಿಲಾಹತಃ ॥೩॥
ಪುಂಸಸ್ಸರ್ವಶರೀರಸ್ಥಂ ರೇತೋ ದ್ರಾವಯತೇಽಥ ತತ್।
ವಾಯುರ್ಮೇಹನಮಾರ್ಗೇಣ ಪಾತಯತ್ಯಙ್ಗನಾಭಗೇ ॥೪॥
ತತ್ಸಂಶ್ರಿತವ್ಯಾತ್ತಮುಖಂ ಯಾತಿ ಗರ್ಭಾಶಯಂ ಪ್ರತಿ।
ತತ್ರ ಶುಕ್ರವದಾಯಾತೇನಾರ್ತವೇನ ಯುತಂ ಭವೇತ್ ॥೫॥
ಕಾಮಾನ್ಮಿಥುನಸಂಯೋಗೇ ಶುದ್ಧಶೋಣಿತಶುಕ್ರಜಃ।
ಗರ್ಭಃ ಸಮ್ಪದ್ಯತೇ ನಾರ್ಯಾಃ ಸ ಜಾತೋ ಬಾಲ ಉಚ್ಯತೇ ॥೬॥

(ಅ।ಹೃ।)—

ಶುದ್ಧೇ ಶುಕ್ರಾರ್ತವೇ ಸತ್ವಃ ಸ್ವಕರ್ಮಕ್ಲೇಶಚೋದಿತಃ।
ಗರ್ಭಃ ಸಮ್ಪದ್ಯತೇ ಯುಕ್ತಿವಶಾದಗ್ನಿರಿವಾರಣೌ ॥೭॥

ವ್ಯಾಖ್ಯಾ (ಪ.ಸ. ವಾರಿಯರ)—

ಶುದ್ಧೇ—ವಾತಾದಿದೋಷೈರನುಪಹತೇ ಉತ್ಸೃಷ್ಟಧ್ರುವವಿಗ್ರಹೇ ಚ। ಅಣ್ಡಕೋಶತೋ ಬಹಿರ್ಗತಂ ಸ್ತ್ರೀಬೀಜಂ ಸ್ವದೇಹಾತ್ ದ್ವೇ ಸೂಕ್ಷ್ಮಗೋಳೇ ಉತ್ಸೃಜತೀತಿ ಸ್ವಭಾವಃ। ಅನಯೋರ್ಗೋಳಯೋಃ ಪ್ರತ್ಯೇಕಂ ಧ್ರುವವಿಗ್ರಹಮಿತಿ ಸಂಜ್ಞಾ ಗೋಳಯೋರೇಕಂ ಪ್ರಥಮಮುತ್ಸೃಜ್ಯತೇ ಕ್ಷಣಾನ್ತರೇ ದ್ವಿತೀಯಂ ಚ ದ್ವಿತೀಯೋತ್ಸರ್ಜನಕಾಲೇನ ಪ್ರಥಮಗೋಲಂ ಭೂಯೋ ದ್ವಿಧಾ ವಿಭಜ್ಯತ ಇತಿ ಸುಪರೀಕ್ಷಿತಂ ಭವತಿ। ಏವಮುತ್ಸೃಷ್ಟಧ್ರುವವಿಗ್ರಹದ್ವಯಸ್ಯ ಸ್ತ್ರೀಬೀಜಾವಶೇಷಸ್ಯ ಸಿದ್ಧಯೌವತಮಿತಿ ಸಂಜ್ಞಾ। ಸಿದ್ಧಯೌವತೇನ ಪುಂಬೀಜಸ್ಯ ಸಂಗಮ ಏವ ಗರ್ಭೋತ್ಪತ್ತೇಃ ಸಮ್ಭವಃ। ಏವಂ ಪುಂಬೀಜಸ್ಯಾಪಿ ಧ್ರುವವಿಗ್ರಹೋತ್ಸರ್ಜನಂ ಭವತ್ಯೇವ। ತತ್ತು ಶುಕ್ರಾಶಯಾದ್ಬಹಿರ್ನಿಸ್ಸರಣತಃ ಪೂರ್ವಮೇವ ಕ್ರಿಯತ ಇತಿ ಭೇದಃ। ತಸ್ಮಿನ್ ಕುಕ್ಷೇರನ್ತರ್ಮಿಥಸ್ಸಂಯುಕ್ತೇ ಶುಕ್ರಾರ್ತವಾಂಶರೂಪೇ ಬೀಜಯುಗ್ಮೇ ಯುಕ್ತಿವಶಾತ್-ಯೋಗಾದ್ಧೇತೋಃ ಜೀವಾತ್ಮಾ ಸತ್ವಃ ಸೂಕ್ಷ್ಮಶರೀರೋಪಲಕ್ಷಿತಃ ಗರ್ಭತ್ವೇನ ಪರಿಣಮತಿ ॥೮॥

ಸೂಕ್ಷ್ಮಶರೀರಲಕ್ಷಣನ್ತು—

ಪಞ್ಚಪ್ರಾಣಮನೋಬುದ್ಧಿದಶೇನ್ದ್ರಿಯಸಮನ್ವಿತಮ್।
ಅಪಞ್ಚೀಕೃತಭೂತೋತ್ಥಂ ಸೂಕ್ಷ್ಮಾಙ್ಗಂ ಭೋಗಸಾಧನಮ್ ॥೯॥

ಜೀವಪ್ರಮಾಣನ್ತು ವೈಷ್ಣವಾಗಮೇ—
ವಾಲಾಗ್ರಶತಭಾಗಸ್ಯ ಶತಧಾ ಕಲ್ಪಿತಸ್ಯ ಚ।
ಭಾಗೋ ಜೀವಸ್ಸ ವಿಜ್ಞೇಯಃ ಸ ಚಾನನ್ತ್ಯಾಯ ಕಲ್ಪತೇ ಇತಿ ॥೧೦॥

ದೃಷ್ಟಾನ್ತಮಾಹ—

ಅರಣ್ಯಾ ಯುಕ್ತಿವಶಾದಗ್ನಿಸ್ಸಮ್ಪದ್ಯತೇ। ಅರಣೇಃ ಸ್ವತಃ ಪರಿಶುದ್ಧತ್ವಸ್ಯಾಗ್ನಿಗರ್ಭತ್ವಸ್ಯ ಚ ಪ್ರಸಿದ್ಧ್ಯಾ ತಸ್ಯೋಪಮಾನಕಲ್ಪನೇನಾತ್ರ ಸಜೀವಶುದ್ಧಶುಕ್ರಾರ್ತವಯೋರ್ಜೀವಸ್ಯ ಯೋಗಾದೇವ ಗರ್ಭೋತ್ಪತ್ತಿರಿತಿ ಸೂಚ್ಯತೇ। ಅಪಿ ಚ ಗರ್ಭತ್ವೇನ ಪರಿಣತಸ್ಯ ಜೀವಸ್ಯಾಗ್ನಿಸಾದೃಶ್ಯಕಥನೇನ ಅಗ್ನೀನ್ಧನಯೋರ್ಯಾದೃಶೋಽನ್ಯೋನ್ಯಸಂಬನ್ಧಃ ಶುಕ್ರಾರ್ತವೇ ಜೀವಾತ್ಮನಸ್ತಾದೃಶಸಂಬನ್ಧೇನೈವ ಗರ್ಭಸಮ್ಭವ ಇತಿ ದ್ಯೋತ್ಯತೇ। ಜೀವಾತ್ಮನಃ ಸರ್ವವ್ಯಾಪಿತಯಾ ಸರ್ವಸ್ಮಿನ್ನಪಿ ದ್ರವ್ಯೇ ಯಃ ಕಶ್ಚನ ಸಮ್ಬನ್ಧಸ್ಸರ್ವದಾಪಿ ಭವತಿ। ಅಪಿ ತ್ವೇತಾದೃಶಸ್ಸಮ್ಬನ್ಧಃ ತಸ್ಯ ಸ್ವಕರ್ಮಕ್ಲೇಶಚೋದಿತಸ್ಯೈವ ಸಮ್ಭವತಿ। ಯಥಾಗ್ನಿರಿನ್ಧನಂ ಪ್ರವಿಷ್ಟಸ್ತದ್ದಹತಿ ಏವಂ ಜೀವಾತ್ಮಾ ಯದಾ ಗರ್ಭಬೀಜಂ ಪ್ರವಿಶತಿ ತದಾಪ್ರಭೃತಿ ತಸ್ಯ ಪಚನಾದಪ್ಯಃ ಪುನಃ ಪೋಷಣಸ್ಯ ಆವಶ್ಯಕತಾ ಚ ಭವತೀತಿ ಭಾವಃ ॥೧೧॥

೪ನೆಯ ಅಧ್ಯಾಯ

ಗರ್ಭೋತ್ಪತ್ತಿವಿವರಣೆ

ದೀಪಿಕೆ—ಗರ್ಭವಿವರಣೆ—(ಸು। ಶಾ। ಅ। ೫)

ಸ್ತ್ರೀಪುರುಷರು ಪರಸ್ಪರ ಪ್ರೇಮದಿಂದ ಕಾಮಪರವಶರಾಗಿ ಸುರತ ಕ್ರೀಡೆಯಲ್ಲಿರುವಾಗ ಶುಕ್ರ, ಶೋಣಿತ, ಜೀವ, ಪ್ರಕೃತಿ ಮತ್ತು ವಿಕಾರಗಳು ಮಿಶ್ರವಾಗಿ ಗರ್ಭಾಶಯದೊಳಕ್ಕೆ ಬಂದು ನಿಂತರೆ ಗರ್ಭವೆಂಬ ಸಂಜ್ಞೆಯುಂಟಾಗುತ್ತದೆ. ॥೧॥

ಸ್ತ್ರೀಪುರುಷರ ರತಿಕ್ರೀಡೆಯಲ್ಲಿ ಅವರಿಬ್ಬರ ದೇಹಗಳ ಪರಸ್ಪರ ಘರ್ಷಣೆಯಿಂದುಂಟಾಗುವ ತೇಜಸ್ಸನ್ನು (ಶಾಖವನ್ನು) ವಾಯುವು ಕೆರಳಿಸುತ್ತದೆ. ಈ ವಾಯು ತೇಜಸ್ಸುಗಳು ಶರೀರವನ್ನೆಲ್ಲಾ ವ್ಯಾಪಿಸಿರುವ ಪುರುಷನ ಶುಕ್ರಧಾತುವನ್ನು ಕರಗಿಸಿ ಆತನ ಜನನೇನ್ದ್ರಿಯದ ಮೂಲಕ ಸ್ತ್ರೀಯಳ ಯೋನಿಯೊಳಕ್ಕೆ ಸುರಿಯುವಂತೆ ಮಾಡುತ್ತದೆ. ಅದೇ ರೀತಿಯಲ್ಲಿ ಸ್ತ್ರೀಯ ದೇಹದಿಂದ ಕರಗಿ ಗರ್ಭಾಶಯದೊಳಕ್ಕೆ ಹರಿದುಬರುವ ಆರ್ತವವು ಮೇಲೆ ವಿವರಿಸಿದಂತೆ ಪುರುಷನ ಶುಕ್ರವನ್ನು ಸ್ವೀಕರಿಸಿ ಗರ್ಭಾಶಯದೊಳಭಾಗಕ್ಕೆ ಬಂದು ನಿಲ್ಲುತ್ತದೆ. ಅಗ್ನಿಸೋಮಾತ್ಮಕಗಳಾದ ಈ ಆರ್ತವಶುಕ್ರಗಳು ಮಿಳಿತವಾಗುವ ಕಾಲದಲ್ಲೇ ಜೀವನೂ ಸತ್ವರಜಸ್ತಮೋಗುಣಗಳಿಗೆ ತಕ್ಕಂತೆಯೇ ದೇವಮಾನುಷ ರಾಕ್ಷಸಭಾವಗಳಿಂದ ವಾಯುರೂಪಿಯಾಗಿ ಅವುಗಳೊಡನೆ ಬೆರೆಯುತ್ತಾನೆ. ಹೀಗೆ ಮಿಶ್ರಣಗೊಂಡ ಶುಕ್ರಾರ್ತವಗಳ ಪಿಂಡವು ಗರ್ಭಾಶಯದಲ್ಲಿ ಬಂದು ನಿಲ್ಲುತ್ತದೆ. ಇದಕ್ಕೇ ಗರ್ಭವೆಂದು ಹೆಸರು ॥೨॥

(ಬೃ।ನಿ।ರ।)—

ಋತುಕಾಲದಲ್ಲಿ ಸ್ತ್ರೀಪುರುಷರು ಕಾಮಪರವಶರಾಗಿ ರತಿಕ್ರೀಡೆಯಲ್ಲಿರುವಾಗ ಅವರ ಶಿಶ್ನಭಗಗಳ ಪರಸ್ಪರ ಘರ್ಷಣೆಯಿಂದುಂಟಾಗುವ ಉಷ್ಣವನ್ನು ವಾಯುವು ಅವರ ಸಕಲ ದೇಹಕ್ಕೂ ವ್ಯಾಪಿಸುವಂತೆ ಮಾಡಿ ಪುರುಷನ ಸರ್ವದೇಹವ್ಯಾಪಿಯಾದ ಶುಕ್ರಧಾತುವನ್ನು ಜಿನುಗಿಸಿ ಅವನ ಜನನೇಂದ್ರಿಯದ ಮೂಲಕ ಸ್ತ್ರೀಯಳ ಯೋನಿಯೊಳಕ್ಕೆ ಸುರಿಯುವಂತೆ ಮಾಡುತ್ತದೆ. ಇದೇ ರೀತಿಯಾಗಿ ಸ್ತ್ರೀಯಳ ದೇಹದಿಂದ ಜಿನುಗಿ ಗರ್ಭಾಶಯದ ನಾಡಿಗಳ ಮೂಲಕ ಹರಿದುಬರುವ ಆರ್ತವದೊಡನೆ ಮಿಶ್ರವಾದ ಪುರುಷನ ಶುಕ್ರವು ಆಕೆಯು ಗರ್ಭಾಶಯದೊಳಕ್ಕೆ ಹೋಗಿ ನಿಲ್ಲುತ್ತದೆ ಮತ್ತು ಕ್ರಮವಾಗಿ ಅಭಿವೃದ್ಧಿಯಾಗಿ ಹುಟ್ಟುವ ಮಗುವು ಬಾಲಕನೆನಿಸಿಕೊಳ್ಳುತ್ತಾನೆ ॥೩॥

(ಅ।ಹೃ।)--

ಅರಣಿ (ಯಜ್ಞಶಾಲೆಯಲ್ಲಿ ಬೆಂಕಿಯನ್ನುಂಟುಮಾಡಲು ಉಪಯೋಗಿಸುವ ಕಾಷ್ಠಗಳು) ಯನ್ನು ಕಡೆದು ಅಗ್ನಿಯನ್ನು ಉತ್ಪತ್ತಿಮಾಡುವಂತೆ ತನ್ನ ಪೂರ್ವಜನ್ಮದ ಕರ್ಮವಾಸನೆಯಿಂದ ಪ್ರೇರಿತನಾದ ಜೀವನು ಶುದ್ಧಶುಕ್ರಾರ್ತವಗಳೊಡನೆ ಮಿಶ್ರಣವಾಗಿ ಗರ್ಭರೂಪಿಯಾಗಿ ಪರಿಣಮಿಸುತ್ತಾನೆ ॥೪॥

(ಪಾ।ಸ।) ವಾರಿಯರ ಅನುವಾದ--

ವಾತಾದಿ ದೋಷಗಳಿಂದ ಕೆಡಿಸಲ್ಪಡದೆ ಸ್ತ್ರೀಪುರುಷರ ಶುಕ್ರಾರ್ತವ ಬೀಜಗಳಿಂದ ಕೂಡಿದ ದ್ರವವಿಶೇಷಗಳಿಗೆ ಶುದ್ಧ ಶುಕ್ರಾರ್ತವಗಳೆಂದು ಹೆಸರು. ಸ್ತ್ರೀಯರ ಅಂಡಕೋಶದಿಂದ ಹೊರಕ್ಕೆ ಬಂದ ಸ್ತ್ರೀಬೀಜವು ತನ್ನ ದೇಹದಿಂದ ಎರಡು ಅತಿಸೂಕ್ಷ್ಮಗಳಾದ ಗೋಳಾಕಾರದ ಕಣಗಳನ್ನು ಹೊರಕ್ಕೆ ಬಿಡುತ್ತದೆ. ಈ ಗೋಳಾಕಾರದ ಪ್ರತಿಯೊಂದು ಕಣಕ್ಕೂ ಧ್ರುವವಿಗ್ರಹವೆಂಬ ಸಂಜ್ಞೆ. ಇವೆರಡರ ಪೈಕಿ ಮೊದಲು ಒಂದು ಸೂಕ್ಷ್ಮಗೋಳವೂ ಸ್ವಲ್ಪಕಾಲದ ಮೇಲೆ ಮತ್ತೊಂದು ಸೂಕ್ಷ್ಮಗೋಳವೂ ಸ್ತ್ರೀಬೀಜದಿಂದ ಹೊರಕ್ಕೆ ಬಂದುಬಿಡುತ್ತದೆ. ಎರಡನೆಯ ಗೋಳವು ಹೊರಕ್ಕೆ ಬರುವುದಕ್ಕೆ ಮೊದಲೇ ಒಂದನೆಯ ಗೋಳವು ಮತ್ತೆರಡು ಭಾಗಗಳಾಗಿ ಬೇರ್ಪಡುವುದೆಂದು ಸಿದ್ಧಾಂತ ಮಾಡಿರುತ್ತಾರೆ. ಹೀಗೆ ಸ್ತ್ರೀಬೀಜವು ಹೊರಗೆ ಬಂದು ಪರಿಣಾಮವಾದಮೇಲೆ ಸಿದ್ಧಯೌವತವೆಂಬುದಾಗಿ ವ್ಯವಹರಿಸಲ್ಪಡುತ್ತದೆ. ಈ ಸಿದ್ಧಯೌವತದೊಡನೆ ಪುಂಬೀಜವು ಸಂಯೋಗವಾಗೋಣವೇ ಗರ್ಭೋತ್ಪಾದನೆಯು; ಸ್ತ್ರೀಬೀಜದಂತೆಯೇ ಪುಂಬೀಜದಿಂದಲೂ ಧ್ರುವವಿಗ್ರಹಗಳೆರಡು ಹೊರಕ್ಕೆ ಬರುತ್ತವೆ; ಆದರೆ ಪುಂಬೀಜವು ಶುಕ್ರಾಶಯದಿಂದ ಹೊರಕ್ಕೆ ಬರುವುದಕ್ಕಿಂತ ಮೊದಲೇ ಎರಡಾಗಿ ವಿಭಾಗವಾಗುತ್ತದೆಂಬ ವಿಚಾರವನ್ನು ಗಮನಿಸಬೇಕು ॥೫॥

ಗರ್ಭಾಶಯದೊಳಭಾಗದಲ್ಲಿ ಶುಕ್ರಶೋಣಿತಗಳು ಮಿಶ್ರಣವಾಗುವ ಸಮಯದಲ್ಲೇ ಅತ್ಯಂತ ಸೂಕ್ಷ್ಮಶರೀರವುಳ್ಳ ಜೀವಾತ್ಮನೂ ಸೇರಿಕೊಂಡು ಗರ್ಭರೂಪವಾಗಿ ಪರಿಣಾಮಹೊಂದುತ್ತಾನೆ ॥೬॥

ಪಂಚಪ್ರಾಣಗಳು, ಮನಸ್ಸು, ಬುದ್ಧಿ, ಪಂಚಜ್ಞಾನೇನ್ದ್ರಿಯಗಳು, ಪಂಚ ಕರ್ಮೇನ್ದ್ರಿಯಗಳು, ಮೂಲರೂಪದಲ್ಲಿರುವ ಪಂಚಭೂತಗಳೂ ಸೇರಿ ಹಿಂದಿನ ಜನ್ಮದಲ್ಲಿ ಸಂಚಿತವಾದ ಪುಣ್ಯಪಾಪಕರ್ಮಗಳ ಫಲವನ್ನು ಅನುಭವಿಸಲು ಅರ್ಹವಾದ ಶರೀರಕ್ಕೆ ಸೂಕ್ಷ್ಮ ಅಥವಾ ಲಿಂಗದೇಹವೆಂದು ಹೆಸರು ॥೭॥

ಜೀವನಪ್ರಮಾಣ—ವೈಷ್ಣವಾಗಮದಲ್ಲಿ—

ತಲೆಕೂದಲೊಂದನ್ನು ಉದ್ದವಾಗಿ ನೂರುಪಾಲಾಗಿ ಶೀಳಿ ಅದರ ಒಂದು ಪಾಲನ್ನು ಪುನಃ ನೂರು ಪಾಲಾಗಿ ಶೀಳಿದರೆ ಬರುವ ಒಂದು ಪಾಲಿನ ತುದಿ ಭಾಗವು ಸೋಕುವಷ್ಟು ಪ್ರದೇಶವೇ ಜೀವನ ಪ್ರಮಾಣವು. ಇಷ್ಟು ಅಣುಪರಿ ಮಾಣವುಳ್ಳ ಜೀವನು ಶರೀರಗತನಾಗಿ ಶರೀರವು ಅನನ್ತರೂಪವಾಗಿ ವೃದ್ಧಿ ಗೊಳ್ಳಲು ಸಹಕರಿಸುತ್ತಾನೆ ॥೮॥

ಇದಕ್ಕೆ ದೃಷ್ಟಾನ್ತವು—

ಯಜ್ಞದಲ್ಲಿ ಅಗ್ನಿಮಥನಕಾಷ್ಠಗಳನ್ನು ಸೇರಿಸಿ ಬಲವಾಗಿ ಕಡೆದು ಬೆಂಕಿ ಬೀಳುವುದನ್ನು ನೋಡಬಹುದು. ಅಗ್ನಿಮಥನ ಕಾಷ್ಠ ಅಥವಾ ಅರಣಿಯು ಸ್ವತಃ ಪರಿಶುದ್ಧವಾದದ್ದು, ಅದರಲ್ಲಿ ಅಗ್ನಿಯಿರುವುದೂ ಪ್ರಸಿದ್ಧವಾದದ್ದು. ಇದರ ದೃಷ್ಟಾನ್ತದಿಂದ ಪರಿಶುದ್ಧಗಳಾದ ಸಜೀವಶುಕ್ರಾರ್ತವಗಳೊಡನೆ ಜೀವನು ಸೇರಿದರೆ ಗರ್ಭೋತ್ಪತ್ತಿಯುಂಟಾಗುತ್ತದೆಂದು ಸೂಚನೆಯಾಗುತ್ತದೆ. ಮತ್ತು ಗರ್ಭರೂಪಿಯಾಗಿ ಪರಿಣಮಿಸಿದ ಜೀವನಿಗೆ ಅಗ್ನಿಯ ಸಾಮ್ಯವನ್ನು ಹೇಳುವುದ ರಿಂದ ಅಗ್ನಿ ಮತ್ತು ಕಾಷ್ಠಗಳಿಗೆ ಹೇಗೆ ಪರಸ್ಪರ ಸಂಬನ್ಧವಿದೆಯೋ ಹಾಗೆಯೇ ಶುಕ್ರಾರ್ತವಗಳೊಡನೆ ಜೀವಾತ್ಮನಿಗೆ ಉಂಟಾಗುವ ಅಂಥಾ ಪರಸ್ಪರ ಸಂಬನ್ಧ ದಿಂದಲೇ ಗರ್ಭೋತ್ಪತ್ತಿಯುಂಟಾಗುತ್ತದೆಂದು ತಿಳಿಯಬರುತ್ತದೆ. ಆದರೆ ಶುಕ್ರಶೋಣಿತಗಳೊಡನೆ ಜೀವಾತ್ಮನಿಗಿರುವ ಗರ್ಭರೂಪಿಯಾಗಿ ಪರಿಣಾಮ ವಾಗುವ ಸಂಬನ್ಧವು ಜೀವನು ತನ್ನ ಪೂರ್ವಜನ್ಮದ ಕರ್ಮಗಳ ಕ್ಲೇಶದಿಂದ ಪ್ರೇರಿತನಾಗುವುದರಿಂದಲೇ ಉಂಟಾಗುತ್ತದೆ. ಅಗ್ನಿಯು ಕಾಷ್ಠವನ್ನಾಶ್ರಯಿಸಿ ಹೇಗೆ ಅದನ್ನು ಸುಡುವುದಕ್ಕೆ ಮೊದಲು ಮಾಡುತ್ತದೆಯೋ ಹಾಗೆಯೇ ಜೀವಾತ್ಮನೂ ಗರ್ಭಬೀಜಗಳನ್ನು ಪ್ರವೇಶಿಸಿದಕೂಡಲೇ ಅವುಗಳ ಪಾಕಾರಂಭವೂ ಪುನಃ ಪುನಃ ಗರ್ಭಪೋಷಣೆಗೆ ಅವಶ್ಯಕತೆಯೂ ಉಂಟಾಗುತ್ತದೆಂದು ಅಭಿಪ್ರಾಯವು ॥೯—೧೧॥

ಮೂಲ—ಸದ್ಯೋಗೃಹೀತಗರ್ಭಲಿಙ್ಗಾನಿ (ಸೂ।ಶಾ।ಅ।೩)—

ಶ್ರಮೋ ಗ್ಲಾನಿಃ ಪಿಪಾಸಾ ಸಕ್ಥಿಸದನಂ ಶುಕ್ರಶೋಣಿತಯೋರವಬನ್ಧಃ ಸ್ಫುರಣಂ ಚ ಯೋನೇಃ ॥೧೨॥

(ಬೃ।ನಿ।ರ।)—ಲಿಙ್ಗನ್ತು ಸದ್ಯೋಗರ್ಭಾಯಾ ಯೋನ್ಯಾಂ ಬೀಜಸ್ಯ ಸಙ್ಗ್ರಹಃ।
ತೃಪ್ತಿರ್ಗುರುತ್ವಂ ಸ್ಫುರಣಂ ಶುಕ್ರಸ್ಯಾಪ್ಯನುಬನ್ಧನಮ್ ॥೧೩॥
ಹೃದಯಸ್ಪನ್ದನಂ ತನ್ದ್ರಾ ತೃಡ್ಗ್ಲಾನಿರ್ಲೋಮಹರ್ಷಣಮ್ ।
ಸಕ್ಥಿಸಾದಃ ಪಿಪಾಸಾ ಚ ಸ್ಫೂರ್ತ್ಯಸ್ರಾವೌ ಭಗೇ ಶ್ರಮಃ ॥೧೪॥

ಮೂಲ—ವ್ಯಕ್ತಗರ್ಭಲಿಙ್ಗಾನಿ (ಸು।ಶಾ।೪। ೩)—

ಸ್ತನಯೋಃ ಕೃಷ್ಣಮುಖತಾ ರೋಮರಾಜ್ಯುದ್ಗಮಸ್ತಥಾ।
ಅಕ್ಷಿಪಕ್ಷ್ಮಾಣಿ ಚಾಪ್ಯಸ್ಯಾಸ್ಸಮ್ಮೀಲ್ಯನ್ತೇ ವಿಶೇಷತಃ ॥೧೫॥
ಅಕಾಮತಶ್ಛರ್ದಯತಿ ಗನ್ಧಾದುದ್ವಿಜತೇ ಶುಭಾತ್।
ಪ್ರಸೇಕಸ್ಸದನಂ ಚಾಪಿ ಗರ್ಭಿಣ್ಯಾ ಲಿಙ್ಗಮುಚ್ಯತೇ ॥೧೬॥

(ಬೃ।ನಿ।ರ।)—

ಕ್ರಮೇಣ ವ್ಯಕ್ತಗರ್ಭಾಯಾ ಲಕ್ಷಣಾನ್ಯತಿನಿದ್ರತಾ।
ಕ್ಷಾಮತಾ ಗರಿಮಾ ಕುಕ್ಷೇರ್ಮೂರ್ಧಾಚ್ಛರ್ದಿರರೋಚಕಃ ॥೧೭॥
ಜೃಮ್ಭಾ ಪ್ರಸೇಕಸ್ಸದನಂ ರೋಮರಾಜ್ಯಾಃ ಪ್ರಕಾಶನಮ್।
ಅಮ್ಲೇಷ್ಟತಾ ಸ್ತನೌ ಪೀನೌ ಸಸ್ತನ್ಯೌ ಕೃಷ್ಣಚೂಚುಕೌ ॥೧೮॥
ಪಾದಶೋಫೋ ವಿದಾಹೋಽನ್ಯೇ ಶ್ರದ್ಧಾಶ್ಚ ವಿವಿಧಾತ್ಮಿಕಾಃ।

ಬೃಹಚ್ಛಾರೀರೇ—

ನವೀನೈಸ್ತು ಗರ್ಭಿಣ್ಯಾಂ ದೃಶ್ಯಮಾನಾನಿ ಲಕ್ಷಣಾನ್ಯಪಿ ಸಪ್ತಾಹಾನುಸಾರೇಣ ಚ ವರ್ಣಿತಾನಿ ಭವನ್ತಿ ॥೧೯॥ ಯಥಾ—

೧. ಚತುರ್ಥಸಪ್ತಾಹಾನ್ತಪರಿಮಿತೇ ಪ್ರಥಮೇ ಮಾಸೇ—ಸ್ವಾಭಾವಿಕಾಯಾ ರಜಃಪ್ರವೃತ್ತೇರ್ನಿರೋಧೋ ಗರ್ಭಾಶಯಗ್ರೀವಾಯಾ ಈಷನ್ಮೃದುತ್ವಂ ಚ ಸಮ್ಭವತಿ ॥೨೦॥

೨. ದ್ವಿತೀಯಮಾಸೇ—

ಗರ್ಭಾಶಯಾಧರಖಣ್ಡಸ್ಯ ಸಮ್ಪೀಡನಕ್ಷಮತಾ ಭಗತೋರಣಿಕಾಯಾಂ ನಾಡೀಸ್ಪನ್ದನಂ ಹೃಲ್ಲಾಸಛರ್ದ್ಯಾದಯೋ ವಿಕಾರಾ ಔದರಿಕ್ಯಃ ಪುನಃ ಪುನರ್ಮೂತ್ರಣಂ ಸ್ತನಯೋರ್ವರ್ಣಭೇದಾದಿ ವಿಕಾರಾರವ್ಭೋ ಗರ್ಭಾಶಯಸ್ಯ ಪರಿಣಾಹವೃದ್ಧಿಶ್ಚ ಸ್ಫುಟೀಭವನ್ತಿ ॥೨೧॥

೩. ತೃತೀಯಮಾಸೇ—

ಗರ್ಭಾಶಯಗ್ರೀವಾಯಾ ಮೃದುತ್ವಾಧಿಕ್ಯಮುದರವಿಕಾರಾಃ (ಹೃಲ್ಲಾಸಛರ್ದ್ಯಾದಯಃ) ಸ್ತನಯೋರ್ವಿಕಾರಾಶ್ಚಾನುಬಧ್ನನ್ತಿ। ಗರ್ಭಾಶಯಾಕೃತೌ ಪರಿಣಾಹೇ ಚ ಭೇದಃ। ಪೋತಶಿರಸ್ಸಮಾನಪರಿಣಾಹೋ ಸ್ವಾದುನಾರಙ್ಗಪರಿಣಾಹೋ ವಾ ಗರ್ಭಾಶಯೋ ಗೋಳಾಕೃತಿಶ್ಚಾವಗನ್ತುಂ ಶಕ್ಯತೇ ॥೨೨॥

೪. ಚತುರ್ಥಮಾಸೇ—

ಗರ್ಭಾಶಯಮೂಲಸ್ಯ ಕಟೀಗುಹಾಯಾಃ ಕುಕ್ಷಿಗುಹಾಂ ಪ್ರತ್ಯೂರ್ಧ್ವಗಮನಾರಮ್ಭಃ। ಕುಕ್ಷೇರಧಿಕಾ ವೃದ್ಧಿಃ ಸ್ತನಯೋರ್ವಿಕಾರಾಶ್ಚ ವರ್ಧನ್ತೇ; ಉದರವಿಕಾರಾಃ ಪ್ರಾಯಶ್ಶಾಮ್ಯನ್ತೇ; ಮಾಸಾನ್ತೇ ಪೋತಹೃದಯಸ್ಪನ್ದಾಃ ಕದಾಚಿಚ್ಛ್ರೂಯನ್ತೇ ಗರ್ಭಾಶಯೇ ಮರ್ಮರಶಬ್ದಶ್ಚ ಶ್ರೂಯತೇ। ಗರ್ಭಿಣೀ ಕದಾಚಿತ್ ಸ್ಫುರಣಾಖ್ಯಂ ಪೋತಚಲನಾರಮ್ಭಂ ಜಾನಾತಿ। ಪರೀಕ್ಷಕೈಃ ಪೋತಚಲನಾನಿ ಗರ್ಭಾಶಯಸಂಕೋಚಶ್ಚ ಕೃಚ್ಛ್ರಾದವಗನ್ತುಂ ಶಕ್ಯತೇ। ಭಗಾನ್ತರ್ಭಾಗೇ ಅಙ್ಗುಳ್ಯಾ ಗರ್ಭೋಪಲಬ್ಧಿರಪಿ ಕಥಂಚಿಚ್ಛಕ್ಯತೇ ॥೨೩॥

೫. ಪಂಚಮೇ ಮಾಸೇ—

ಕುಕ್ಷೇರ್ವೃದ್ಧಿರಧಿಕಾ, ಸ್ಫುರಣಂ ಚಾಧಿಕಂ ಸ್ಫುಟಂ ಭವತಿ। ಸ್ತನಯೋರ್ವಿಕಾರಾ ವರ್ಧನ್ತೇ। ಸ್ತನಮುಖಯೋರ್ಬಹಿಃ ಪರಿವೇಷೌ ಚೋತ್ಪದ್ಯೇತೇ। ಗರ್ಭೋಪಲಬ್ಧಿರಧಿಕಂ ಸುಕರಾ ಭವತಿ। ಹೃದಯಸ್ಪನ್ದಾಶ್ಶ್ರೋತುಂ ಶಕ್ಯನ್ತೇ॥೨೪॥

೬. ಷಷ್ಠೇ ಮಾಸೇ--
ಪೋತಹೃದಯಸ್ಪನಾಃ ಪೋತಚಲನಾನಿ ಚಾಧಿಕಂ ವ್ಯಕ್ತೀಭವನ್ತಿ ; ಕುಕ್ಷಿತ್ವಟಿ ರಾಜಯಃ ಪ್ರತ್ಯಕ್ಷೀಭವನ್ತಿ ॥೨೫॥
೭. ಸಪ್ತಮೇ ಮಾಸೇ--
ಗರ್ಭೋಪಲಬ್ಧಿರದ್ಯಾಪಿ ದೃಶ್ಯೇತ । ತ್ವಗ್ರಾಜಯೋ ವರ್ಧನ್ತೇ ॥೨೬॥
೮. ಅಷ್ಟಮೇ ಮಾಸೇ--
ಗರ್ಭೋಪಲಬ್ಧಿಃ ಕೃಚ್ಛ್ರಸಾಧ್ಯಾ ಭವಿಷ್ಯತಿ। ಕುಕ್ಷಿರತೀವ ವೃದ್ಧಾ। ಪೋತಾಙ್ಗಾದಯಃ ಪೃಥಕ್ ಸ್ಫುಟಮುಪಲಭ್ಯನ್ತೇ ॥೨೭॥
೯. ನವಮೇ ಮಾಸೇ--
ಗರ್ಭೋಪಲಬ್ಧಿರಸಾಧ್ಯಾ ॥೨೮॥

ದೀಪಿಕೆ—ಗರ್ಭಧಾರಣೆಯಾದ ಕೂಡಲೇ ಕಂಡುಬರುವ ಚಿಹ್ನೆಗಳು:-- (ಸು।ಶಾ। ಅ। ೩) ದೇಹಮನಸ್ಸುಗಳಲ್ಲಿ ಆಯಾಸ, ಬಾಯಾರಿಕೆ, ತೊಡೆಗಳು ಸಣ್ಣಗಾಗುವುದು, ಶುಕ್ರಾರ್ತವಗಳು ಯೋನಿಯೊಳಗೇ ನಿಂತುಬಿಡುವುದು, ಯೋನಿಯು ಅದರುವುದು ಇವು ಗರ್ಭಧಾರಣೆಯಾದ ಕೂಡಲೇ ಕಾಣಬರುತ್ತವೆ.

(ಬೃ।ನಿ।ರ।)—ಯೋನಿಯೊಳಗೆ ಶುಕ್ರಾರ್ತವಗಳು ನಿಂತುಬಿಡುವುದು, ಸ್ತ್ರೀಗೆ ಸುರತಾಭಿಲಾಷೆಯು ಪೂರ್ತಿಗೊಳ್ಳುವುದು, ಯೋನಿಯು ಭಾರವಾದಂತೆ ತೋರುವುದು ಮತ್ತು ಅದರುವುದು, ಹೃದಯವು ಅದರುವುದು, ತೂಕಡಿಕೆ, ಬಾಯಾರಿಕೆ, ಆಯಾಸ, ರೋಮಾಂಚನವಾಗುವುದು, ತೊಡೆಗಳು ಸಣ್ಣಗಾಗುವುದು, ಬಲಹಾನಿ ಇವು ಗರ್ಭಧಾರಣೆಯಾಗಿರುವುದಕ್ಕೆ ಚಿಹ್ನೆಗಳು

ದೀಪಿಕೆ—ಗರ್ಭಿಣಿಯ ಶರೀರದಲ್ಲಿ ಕಾಣುವ ಸ್ಪಷ್ಟ ಚಿಹ್ನೆಗಳು :-- (ಸು।ಶಾ।ಅ। ೩) ಸ್ತನಗಳ ತುದಿಗಳು ಕಪ್ಪಾಗಿರುತ್ತವೆ; ಹೊಕ್ಕಳ ಕೆಳಗಡೆ ರೋಮಗಳು ಸಾಲಾಗಿ ಎದ್ದುನಿಲ್ಲುತ್ತವೆ ; ರೆಪ್ಪೆಗಳು ವಿಶೇಷವಾಗಿ ಮುಚ್ಚಿಕೊಂಡಿರುತ್ತವೆ; ಸುಮ್ಮನೆ ವಾಂತಿಯಾಗುತ್ತದೆ; ಸುವಾಸನೆ ಬಂದರೂ ಅಸಹ್ಯಪಡುತ್ತಾಳೆ ; ಸದಾ ಬಾಯಿಯಿಂದ ನೀರು ಸುರಿಯುತ್ತಲೇ ಇರುತ್ತದೆ; ಶರೀರವು ಸಣ್ಣಗಾಗುತ್ತದೆ. (ಬೃ।ನಿ।ರ।) —ಗರ್ಭವೃದ್ಧಿಯಾದಂತೆ ಈ ಕೆಳಗೆ ವಿವರಿಸುವ ಚಿಹ್ನೆಗಳೂ ಕ್ರಮವಾಗಿ ಸ್ಪಷ್ಟವಾಗಿ ಕಾಣುತ್ತಾ ಬರುತ್ತವೆ--ಅತಿನಿದ್ರೆ, ದೇಹದಲ್ಲಿ ಕ್ಷೀಣತೆ, ಹೊಟ್ಟೆಯು ದಪ್ಪನಾಗುತ್ತಾ ಬರುವುದು, ವಮನ, ಅರೋಚಕತೆ, ಆಕಳಿಕೆ, ಬಾಯಿಯಲ್ಲಿ ಚಿಲಚಿಲನೆ ನೀರುತುಂಬುವುದು, ರೋಮಾಂಚವಾಗುವುದು, ಹುಳಿಪದಾರ್ಥಗಳಲ್ಲಿ ಪ್ರೀತಿ, ಸ್ತನಗಳು ದಪ್ಪನಾಗುವುದು, ಸ್ತನದ ತೊಟ್ಟು ಕಪ್ಪಾಗುವುದು, ಕಾಲುಗಳು ಊದಿಕೊಳ್ಳುವುದು, ಎದೆಯುರಿ, ನಾನಾತರದ ಬಯಕೆಗಳುಂಟಾಗುವುದು ॥೧೫-೧೮॥

ಬೃಹಚ್ಛಾರೀರ—ಈಚಿನ ವೈದ್ಯರು ಗರ್ಭಿಣಿಯರಲ್ಲಿ ಕಂಡುಬರುವ ಗರ್ಭಲಕ್ಷಣಗಳನ್ನು ವಾರವಾರಗಳಿಗೆ ಅನುಸಾರವಾಗಿಯೂ ತಿಂಗಳು ತಿಂಗಳುಗಳಿಗೆ ಅನುಸಾರವಾಗಿಯೂ ವಿವರಿಸುತ್ತಾರೆ ॥೧೯॥

೧. ವಾರವಾರಕ್ಕೆ ಅನುಸಾರವಾಗಿ ಮೊದಲನೆಯ ತಿಂಗಳ ನಾಲ್ಕು ವಾರಗಳಲ್ಲಿ ಸ್ವಭಾವವಾದ ಮಾಸಿಕರಜಃಸ್ರಾವವು ನಿಂತುಬಿಡುತ್ತದೆ; ಗರ್ಭಾಶಯದ ಮುಖವು ಸ್ವಲ್ಪ ಮೆತ್ತಗಿರುತ್ತದೆ ॥೨೦॥

೨. ಎರಡನೆಯ ತಿಂಗಳಲ್ಲಿ ಗರ್ಭಾಶಯದ ಕೆಳಭಾಗವನ್ನು ಸ್ಪರ್ಶ ಮಾಡಲು ಸಾಧ್ಯವು; ಯೋನಿಯಲ್ಲಿ ಬೆರಳಿಟ್ಟರೆ ನಾಡಿಯ ಸ್ಪಂದನವು ತಿಳಿಯಬರುತ್ತದೆ; ಬಾಯಿನೀರು ಜಿನುಗುವುದು ವಮನ ಮೊದಲಾದ ವಿಕಾರಗಳು, ಪದೇಪದೇ ಮೂತ್ರಸ್ರಾವ, ಸ್ತನಗಳ ಬಣ್ಣ ಬದಲಾಗುವುದು, ಗರ್ಭಾಶಯವು ದಪ್ಪವಾಗುವುದು ಇವು ವ್ಯಕ್ತವಾಗುತ್ತವೆ ॥೨೧॥

೩. ಮೂರನೆಯ ತಿಂಗಳಲ್ಲಿ—ಗರ್ಭಾಶಯದ ಮುಖವು ಹೆಚ್ಚಾಗಿ ಮೆತ್ತಗೆ ಶಿಕ್ಕುತ್ತದೆ, ಸ್ತನಗಳ ಬಣ್ಣವು ಬದಲಾಗುವುದಲ್ಲದೆ ಓಕರಿಕೆ, ವಮನ ಮೊದಲಾದ ವಿಕಾರಗಳು ಹೆಚ್ಚುತ್ತವೆ; ಗರ್ಭಾಶಯದ ಆಕಾರ ದಪ್ಪಗಳಲ್ಲಿ ವ್ಯತ್ಯಾಸ ಕಾಣುತ್ತವೆ; ಗರ್ಭಾಶಯವು ಶಿಶುವಿನ ತಲೆಯಷ್ಟು ಅಥವಾ ಸಿಹಿ ಕಿತ್ತಳೆಹಣ್ಣಿನ ಗಾತ್ರದಷ್ಟು ಉಬ್ಬುತ್ತದೆ; ಮತ್ತು ಗುಂಡಾಗಿರುತ್ತದೆ ॥೨೨॥

೪. ನಾಲ್ಕನೆಯ ತಿಂಗಳಲ್ಲಿ—ಗರ್ಭಾಶಯದ ಬುಡವು ಸೊಂಟದಿಂದ ಹೊಟ್ಟೆಯ ಕಡೆಗೆ ದಪ್ಪನಾಗುತ್ತಾ ಬರುತ್ತದೆ; ಹೊಟ್ಟೆಯು ದಪ್ಪನಾಗುತ್ತದೆ; ಸ್ತನಗಳ ಬಣ್ಣವು ಹೆಚ್ಚು ಬದಲಾಗುತ್ತದೆ; ಓಕರಿಕೆ, ವಮನಗಳು ನಿಂತುಬಿಡುತ್ತವೆ; ತಿಂಗಳ ಕಡೆಯಲ್ಲಿ ಕೆಲವು ಸಂದರ್ಭದಲ್ಲಿ ಗರ್ಭಹೃದಯದ ಶಬ್ದವನ್ನು ಕೇಳಬಹುದು; ಗರ್ಭಾಶಯದಲ್ಲಿ ಮುರ್‌ಮುರ್ ಧ್ವನಿಯು ಕೇಳಬರುತ್ತದೆ; ಕೆಲವು ಗರ್ಭಿಣಿಯರಿಗೆ ಮಗು ತಿರುಗುವುದೂ ಅನುಭವಕ್ಕೆ ಬರುತ್ತದೆ; ಮಗುವು ಚಲಿಸುವುದೂ ಗರ್ಭಾಶಯವು ಸಂಕೋಚಿಸುವುದೂ ಪರೀಕ್ಷಕರಿಗೆ ಸ್ವಲ್ಪ ಕಷ್ಟದಿಂದ ತಿಳಿಯಬರುತ್ತದೆ; ಯೋನಿದ್ವಾರದಲ್ಲಿ ತರ್ಜನಿ ಮತ್ತು ಮಧ್ಯಮ ಬೆರಳುಗಳನ್ನು ತೂರಿಸಿ ಗರ್ಭವಿರುವುದನ್ನು ತಿಳಿಯಬಹುದು ॥೨೩॥

೫. ಐದನೆಯ ತಿಂಗಳಲ್ಲಿ—ಹೊಟ್ಟೆಯು ಹೆಚ್ಚು ದಪ್ಪನಾಗುತ್ತದೆ; ಮಗುವು ಚಲಿಸುವುದು ಚನ್ನಾಗಿ ತಿಳಿಯಬರುತ್ತದೆ; ಸ್ತನಗಳ ಬಣ್ಣವು ಹೆಚ್ಚಾಗಿ ಬದಲಾಯಿಸುತ್ತದೆ; ಸ್ತನಗಳ ಸುತ್ತಲೂ ಗುಂಡಾದ ಪರಿವೇಷ (ಸರ) ವಿದ್ದಂತೆ ಚರ್ಮದ ಬಣ್ಣ ಬದಲಾಯಿಸುತ್ತದೆ; ಮಗುವಿನ ಚಲನೆಯೂ ಮತ್ತು ಹೃದಯದ ಬಡಿತವೂ ಚನ್ನಾಗಿ ತಿಳಿಯಬರುತ್ತವೆ ॥೨೪॥

೬. ಆರನೆಯ ತಿಂಗಳಲ್ಲಿ ಮಗುವು ಚಲಿಸುವುದೂ ಅದರ ಹೃದಯದ ಬಡಿತವೂ ಸ್ಪಷ್ಟವಾಗಿ ತಿಳಿಯಬರುತ್ತವೆ; ಹೊಟ್ಟೆಯ ಚರ್ಮದಮೇಲೆ ಗೀರುಗಳಿರುತ್ತವೆ ॥೨೫॥

೭. ಏಳನೆಯ ತಿಂಗಳಲ್ಲಿ—ಗರ್ಭ ಚಲನೆಯು ತಿಳಿಯಬರುತ್ತದೆ; ಚರ್ಮದ ಮೇಲ್ಭಾಗದಲ್ಲಿ ಗೀರುಗಳು ಹೆಚ್ಚಾಗುತ್ತವೆ ॥೨೬॥

೮. ಎಂಟನೆಯ ತಿಂಗಳಲ್ಲಿ—ಬಲು ಕಷ್ಟದಿಂದ ಗರ್ಭಚಲನೆಯನ್ನು ತಿಳಿಯಬಹುದು; ಹೊಟ್ಟೆಯು ಅತ್ಯಂತ ದಪ್ಪನಾಗುತ್ತದೆ; ಮಗುವಿನ ಪ್ರತಿ ಅವಯವಗಳನ್ನೂ ವಿಂಗಡವಾಗಿ ತಿಳಿಯಬಹುದು ॥೨೭॥

೯. ಒಂಭತ್ತನೆಯ ತಿಂಗಳಲ್ಲಿ ಗರ್ಭಚಲನೆಯನ್ನು ತಿಳಿಯಲಾಗುವುದೇ ಇಲ್ಲ ॥೨೮॥

ಮೂಲ—ಗರ್ಭಿಣ್ಯಾ ರಜೋದರ್ಶನಾಭಾವೇ ಹೇತುಃ—(ಸು। ಶಾ। ಅ। ೩)

ಗೃಹೀತಗರ್ಭಾಣಾಮಾರ್ತವವಹಾನಾಂ ಸ್ರೋತಸಾಂ ವರ್ತ್ಮಾನ್ಯವರುಧ್ಯನ್ತೇ ಗರ್ಭೇಣ ; ತಸ್ಮಾದ್ಗೃಹೀತಗರ್ಭಾಣಾಮಾರ್ತವಂ ನ ದೃಶ್ಯತೇ। ತತಸ್ತದಧಃ ಪ್ರತಿಹತಮೂರ್ಧ್ವಮಾಗತಮುಪಚೀಯಮಾನಮಪರೇತ್ಯಭಿಧೀಯತೇ । ಶೇಷಞ್ಚೋರ್ಧ್ವತರಮಾಗತಂ ಪಯೋಧರಾವಭಿಪ್ರತಿಪದ್ಯತೇ। ತಸ್ಮಾದ್ಗರ್ಭಿಣ್ಯಃ ಪೀನೋನ್ನತಪಯೋಧರಾ ಭವನ್ತಿ ॥೨೯॥

(ಬ। ನಿ। ರ।)—

ಯಲ್ಲೋಹಿತಮಗರ್ಭಿಣ್ಯಾ ರಜಸ್ತ್ವೇನ ಪ್ರವರ್ತತೇ ।
ತದಾಧಾನಾತ್ಪರಂ ಮಾರ್ಗಸಂರೋಧಾನ್ನ ಬಹಿಃ ಸ್ರವೇತ್ ॥೩೦॥

ದೀಪಿಕೆ—ಗರ್ಭಿಣಿಯರಿಗೆ ಮಾಸಿಕ ರಕ್ತಸ್ರಾವವಾಗದಿರುವುದಕ್ಕೆ ಕಾರಣ—(ಸು। ಶಾ। ಅ। ೩)

ಗರ್ಭಧಾರಣೆಯಾದಮೇಲೆ ಆರ್ತವವಹಸ್ರೋತಸ್ಸುಗಳ ಮುಖಗಳನ್ನು ಗರ್ಭಪಿಂಡವು ಮುಚ್ಚಿ ರಜಸ್ರಾವವನ್ನು ತಡೆಯುವ ಕಾರಣ ಗರ್ಭಿಣಿಯರಿಗೆ ಮಾಸಿಕರಜಸ್ರಾವವುಂಟಾಗುವುದಿಲ್ಲ. ಹೀಗೆ ತಡೆಯಲ್ಪಟ್ಟ ರಜಸ್ಸು (ಆರ್ತವವು) ಗರ್ಭಪಿಂಡದ ಮೇಲ್ಗಡೆಗೆ ನುಗ್ಗಿ ಅಪರ (ಜರಾಯು) ವನ್ನುಂಟುಮಾಡುತ್ತದೆ. ಉಳಿದ ರಜೋಭಾಗವು ಸ್ತನ್ಯಾಶಯಗಳಿಗೆ ಹೋಗಿ ಸ್ತನಗಳನ್ನು ದಪ್ಪವನ್ನಾಗಿ ಮಾಡುವುದರಿಂದ ಗರ್ಭಿಣಿಯರ ಸ್ತನಗಳು ದಪ್ಪವಾಗಿಯೂ ಎತ್ತರವಾಗಿಯೂ ಆಗುತ್ತವೆ ॥೨೯॥

(ಬೃ। ನಿ। ರ।)—ಸ್ತ್ರೀಯರಿಗೆ ಪ್ರತಿಮಾಸದಲ್ಲೂ ಸ್ರಾವವಾಗುವ ರಜಸ್ಸು ಅವರಿಗೆ ಗರ್ಭಧಾರಣೆಯಾದಮೇಲೆ ಗರ್ಭಪಿಂಡವು ಆರ್ತವವಾಹಿ ಸಿರೆಗಳ ಮುಖಗಳನ್ನು ತಡೆದು ರಜಸ್ರಾವವಾಗದಂತೆ ಮಾಡುವ ಕಾರಣ ಹೊರಕ್ಕೆ ಬರುವುದಿಲ್ಲ ॥೩೦॥

ಮೂಲ – ಪುಂಸವನಮ್—ಗರ್ಭಸ್ಥಿರೀಕರಣೋಪಾಯಃ—(ಸು। ಶಾ। ಅ। ೩)

ಲಬ್ಧಗರ್ಭಾಯಾಃ ಲಕ್ಷ್ಮಣಾವಟಶುಙ್ಗಾ ಸಹದೇವಾ ವಿಶ್ವದೇವಾನಾಮನ್ಯತಮಂ ಕ್ಷೀರೇಣಾಭಿಷುತ್ಯ ತ್ರೀಂಶ್ಚತುರೋ ವಾ ಬಿನ್ದೂನ್ದದ್ಯಾದ್ದಕ್ಷಿಣೇ ನಾಸಾಪುಟೇ ಪುತ್ರಕಾಮಾಯೈ ವಾಮೇ ದುಹಿತೃಕಾಮಾಯೈ। ನ ಚ ತಾನ್ನಿಷ್ಠೀವೇತ್ ॥೩೧॥

(ಅ। ಹೃ।)—

ಶುದ್ಧಂ ಶುಕ್ರಾರ್ತವಂ ಸ್ವಸ್ಥಂ ಸಂರಕ್ತಂ ಮಿಥುನಂ ಮಿಥಃ ।
ಸ್ನೇಹ್ಯೈಃ ಪುಂಸವನೈಃ ಸ್ನಿಗ್ಧಂ ಶುದ್ಧಂ ಶೀಲಿತಬಸ್ತಿಕಮ್ ॥೩೨॥
ಗರ್ಭಪುಂಸವನಾನ್ಯತ್ರ ಪೂರ್ವಂ ವ್ಯಕ್ತೇಃ ಪ್ರಯೋಜಯೇತ್ ।
ದೈವಂ ಪುರುಷಕಾರೇಣ ದುರ್ಬಲಂ ಹ್ಯುಪಹನ್ಯತೇ ॥೩೩॥

ದೈವೇನ ಚೇತರತ್ಕರ್ಮ ಪ್ರಕೃಷ್ಟೇನೋಪಹನ್ಯತೇ ।

ಲಕ್ಷ್ಮಣಾಮೂಲಸ್ವರೂಪಮ್—

ತತ್ರ ಕಾಕಾರಿರಕ್ತಾಲ್ಪಬಿನ್ದುಭಿರ್ಲಕ್ಷಿತಚ್ಛದಾ ॥೩೪॥
ಲಕ್ಷ್ಮಣಾ ಪುತ್ರಜನನೀ ಬಸ್ತಗನ್ಧಾಕೃತಿರ್ಭವೇತ್ ।

ತತ್ಸಙ್ಗ್ರಹಣವಿಧಿಃ—

ತಾಂ ಶರತ್ಕಾಲೇ ಪುಷ್ಪಫಲೋಪೇತಾಂ ದೃಷ್ಟ್ವಾ ಶನಿದಿನೇ ಸನ್ಧ್ಯಾಯಾಂ ತಸ್ಯಾಶ್ಚತುರ್ಭಾಗೇಷು ಖದಿರಕೀಲಕಾನ್ನಿಖಾದ್ಯಾಪರೇದ್ಯುರ್ಹಸ್ತಮೂಲಪುಷ್ಯೈತ್ರಿಯೋರ್ಗಙ್ಗತೇ ಸವಿತರಿ ಮನ್ತ್ರವದ್ಗೃಹೀತ್ವಾ ಸಮಾನವರ್ಣವತ್ಸಗೋಕ್ಷೀರೇಣ ಯಥಾವಿಧಿ ನಸ್ಯಂ ದದ್ಯಾತ್ ॥೩೫॥

ಅತ್ರ ತದ್ಗ್ರಹಣಕಾಲೇ ಮನ್ತ್ರಃ—

ಆಯುರ್ಬಲಂ ಯಶೋ ವರ್ಚಃ ಪ್ರಜಾಃ ಪಶು ವಸೂನಿ ಚ ।
ಬ್ರಹ್ಮಪ್ರಜ್ಞಾಂ ಚ ಮೇಧಾಂ ಚ ತ್ವಂ ನೋ ದೇಹಿ ವನಸ್ಪತೇ ॥೩೬॥

ದೀಪಿಕೆ—ಪುಂಸವನಕರ್ಮ—ಗರ್ಭಸ್ಥಿರೀಕರಣಮಾಡುವ ಉಪಾಯ—(ಸು।ಶಾ। ಅ।೩)—

ಗರ್ಭಧಾರಣೆಯಾಗಿದೆಯೆಂದು ಗೊತ್ತಾದಮೇಲೆ ೨ನೆಯ ಅಥವಾ ೩ನೆಯ ತಿಂಗಳ ಆದಿಯಲ್ಲಿ ಶುಭದಿವಸ ಪ್ರಾತಃಕಾಲದಲ್ಲಿ ಗರ್ಭಿಣಿಗೆ ಸ್ನಾನ ಮಾಡಿಸಿ ಶುಭ್ರವಸ್ತ್ರಾಭರಣಗಳಿಂದ ಅಲಂಕೃತಳನ್ನಾಗಿ ಮಾಡಿ ಸುಖಾಸನದಲ್ಲಿ ಪೂರ್ವಾಭಿಮುಖಳನ್ನಾಗಿ ಕುಳ್ಳಿರಸಬೇಕು. ಲಕ್ಷ್ಮಣ (ಬಿಳಿಹೂವುಳ್ಳ ಗುಳ್ಳದ ಗಿಡ) ಆಲದಮೊಗ್ಗು ಸಹದೇವ ವಿಶ್ವದೇವ (ಇವು. . . . ಕಳ್ಳಂಗಡಲೆಗಿಡ . . . . ದ ಭೇದ) ಈ ಪೈಕಿ ಯಾವುದಾದರೊಂದರ ಸಮೂಲವನ್ನು ಹಾಲಿನಲ್ಲಿ ಅರೆದು ಗಂಡು ಮಗುವನ್ನು ಹೆರಲು ಇಷ್ಟಪಟ್ಟರೆ ಬಲದಮೂಗಿನ ಹೊಳ್ಳೆಗೂ ಹೆಣ್ಣು ಮಗುವನ್ನು ಹೆರಲು ಇಷ್ಟಪಟ್ಟರೆ ಎಡಭಾಗದ ಮೂಗಿನ ಹೊಳ್ಳೆಗೂ ಮೇಲ್ಕಂಡ ಕಲ್ಕವನ್ನು ಹಿಂಡಿ ಬರುವ ೪-೫ ತೊಟ್ಟು ರಸವನ್ನು ತುಂಬಬೇಕು. ಆಕೆಯು ಅದನ್ನು ಕ್ಯಾಕರಿಸಿ ಉಗುಳದೆ ಗಂಟಲೊಳಗೆ ಬರಮಾಡಿ ಗುಟುಗಿಸಿಕೊಂಡು ಕುಡಿದು ಬಿಡಬೇಕು ॥೩೧॥

(ಅ।ಹೃ।)—

ಆರೋಗ್ಯವುಳ್ಳ ಸ್ತ್ರೀಪುರುಷರು ಸಂಭೋಗ ಮಾಡುವಾಗ ಸ್ರವಿಸುವ ಶುಕ್ರಾರ್ತವಗಳು ಸ್ತ್ರೀಯಳ ಗರ್ಭಾಶಯವನ್ನು ಸೇರಿ ಗರ್ಭವಾಗಿ ಪರಿಣಮಿಸಿತೆಂದು ನಿರ್ಧರವಾದಮೇಲೆ ಪುಂಸವನ ಕರ್ಮದಲ್ಲಿ ಹೇಳುವ ರೀತಿಯಲ್ಲ ಘೃತಪಾನಮಾಡಿಸಿ ಸ್ನಿಗ್ಧಳಾದ ಸ್ತ್ರೀಯು ಗಂಡುಮಗುವನ್ನೇ ಹೆರುತ್ತಾಳೆ. ಪೂರ್ವಜನ್ಮದಲ್ಲಿ ಮಾಡಿದ ಪುರುಷಕರ್ಮವನ್ನೇ ದೈವವೆಂದು ವ್ಯವಹರಿಸುತ್ತಾರೆ. ಅದು ದುರ್ಬಲವಾಗಿದ್ದರೆ ಈ ಜನ್ಮದಲ್ಲಿ ಉತ್ಕೃಷ್ಟವಾದ ಪೌರುಷಶಕ್ತಿಯಿಂದ ಅದನ್ನು ಜೈಸಬಹುದು. ದೈವವೇ ಬಲಶಾಲಿಯಾಗಿದ್ದರೆ ಅಲ್ಪವಾದ ಪುರುಷ ಶಕ್ತಿಯಿಂದ ಅದನ್ನು ಜೈಸಲು ಸಾಧ್ಯವಾಗುವುದಿಲ್ಲ; ಎರಡನೆಯ ಅಥವಾ ಮೂರನೆಯ ತಿಂಗಳ ಮೊದಲುಭಾಗದಲ್ಲಿ ಗರ್ಭಪಿಂಡದಲ್ಲಿ ಪುಂಸ್ತ್ರೀಲಕ್ಷಣಗಳು ಸ್ಪಷ್ಟವಾಗಿ ಉಂಟಾಗಿರುವುದಿಲ್ಲ. ಆ ಕಾಲದಲ್ಲಿ ಪುಂಸವನ ಕ್ರಿಯೆಯನ್ನು

ಮಾಡಿಸಿದರೆ ಗಂಡು ಮಗುವು ಜನಿಸಲು ಅನುಕೂಲವುಂಟಾಗುತ್ತದೆ. ಅಂದರೆ ಗರ್ಭಪಿಂಡದಲ್ಲಿ ಪುಂಪ್ರಜೆಯುಂಟಾಗಲು ಕಡಮೆಯಾಗಿರುವ ಭಾಗಗಳೊದಗಿಸಲ್ಪಡುತ್ತವೆ.

ಲಕ್ಷ್ಮಣಾಮೂಲಿಕೆಯ ಸ್ವರೂಪವು--

ಇದರ ಎಲೆಯು ನಾರಂಬೇಳೆಯ ಎಲೆಯ ಆಕಾರವುಳ್ಳದಾಗಿಯೂ ಎಲೆಯಮೇಲೆ ಗೂಬೆಯ ರಕ್ತದಂತೆ ಕಪ್ಪು ಮಿಶ್ರವಾದ ಕೆಂಪು ಬಣ್ಣದ ಚುಕ್ಕಿಗಳುಳ್ಳದ್ದಾಗಿಯೂ ಇರುತ್ತದೆ ‖೩೨‖

ಅದನ್ನು ಶೇಖರಿಸುವ ಕ್ರಮ--

ಶರದೃತುವಿನಲ್ಲಿ ಹೂವು ಕಾಯಿಗಳುಳ್ಳ ಈ ಲಕ್ಷಣವೆಂಬ ಮೂಲಿಕೆಯನ್ನು ಹುಡುಕಿ ಗೊತ್ತುಮಾಡಿ ಶನಿವಾರ ಸಾಯಂಕಾಲದಲ್ಲಿ ಕಗ್ಗಲಿಮರದ ಗೂಟದಿಂದ ಆ ಗಿಡದ ಸುತ್ತಲೂ ನೆಲವನ್ನು ಕೆದಕಿ ಬೇರನ್ನು ಸಡಿಲಗೊಳಿಸಿರಬೇಕು. ಹಸ್ತ, ಮೂಲ, ಪುಷ್ಯ ನಕ್ಷತ್ರಗಳಿಂದ ಕೂಡಿದ ಭಾನುವಾರ ಪ್ರಾತಃಕಾಲದಲ್ಲಿ ಸ್ನಾನ ಮಾಡಿ ಶುಚಿರ್ಭೂತನಾದ ವೈದ್ಯನು ಆ ಗಿಡದ ಬಳಿ ಸೂರ್ಯಾಭಿಮುಖನಾಗಿ ನಿಂತು ನಮಸ್ಕರಿಸಿ ಮಂತ್ರವನ್ನು ಹೇಳುತ್ತಾ ಆ ಮೂಲಿಕೆಯನ್ನು ಬೇರುಸಹಿತವಾಗಿ ಕಿತ್ತುತರಬೇಕು. ಒಂದೇ ಬಣ್ಣದ ಕರುವುಳ್ಳ ಹಸುವಿನ ಹಾಲಿನಿಂದ ಮೂಲಿಕೆಯನ್ನು ಚೆನ್ನಾಗಿ ಅರೆದು ಕಲ್ಕಮಾಡಿ ಹಿಂದೆ ಹೇಳಿದ ರೀತಿಯಲ್ಲಿ ಗರ್ಭಿಣಿಗೆ ಕುಡಿಸಬೇಕು ‖ ೩೩-೩೬ ‖

ಆ ಮೂಲಿಕೆಯನ್ನು ಕೀಳುವಾಗ ಹೇಳುವ ಮಂತ್ರದ ಅರ್ಥವು:— ಆಯುಸ್ಸು, ಬಲ, ಯಶಸ್ಸು, ಶರೀರಕಾನ್ತಿ, ಸಂತಾನ, ಪಶುಧನ, ಬ್ರಹ್ಮಜ್ಞಾನ, ಬುದ್ಧಿಕುಶಲತೆ ಇವುಗಳನ್ನು ಮುಂದೆ ಜನಿಸುವ ಮಗುವಿಗೆ ಅನುಗ್ರಹಮಾಡಿ ಕೊಡಬೇಕೆಂದು ಆ ಮೂಲಿಕೆಯನ್ನು ಪ್ರಾರ್ಥಿಸಬೇಕು ‖ ೩೭ ‖

ಮೂಲ—ಅಪರೋತ್ಪತ್ತಿನಿರೂಪಣಮ್—P. S. Warrier

ಕಲಲೇ ವಿಧಿವಜ್ಜಾತೇ ಸಾ ಗರ್ಭಾಶಯಭಿತ್ತಿತಃ ।
ಕ್ರಮೋತ್ಕ್ರಮಾತ್ ಪೃಥಗ್ಗರ್ಭಂ ಭಜತೇ ದೃಢತಾಮಪಿ ‖೩೮‖
ಆವೃಣೋತಿ ತತೋ ಗರ್ಭಂ ಪಟಲೇ ದ್ವೇ ಸಮನ್ತತಃ ।
ಅಥ ತೇ ಚ ಮಿಥಃ ಶ್ಲಿಷ್ಟೇ ಸ್ಯಾತಾಂ ಮಾಸತ್ರಯೋತ್ತರಮ್ ‖೩೯‖
ಪರಿತಃ ಕಲಲಸ್ಥಾನಾತ್ ಪ್ರಸೃತಾ ಚರ್ಮಕೋಶವತ್ ।
ಆಚ್ಛಾದಯತಿ ಯಾ ಗರ್ಭಂ ಸೋಚ್ಯತೇ ಕೋಶಪಾತುಕೀ ‖೪೦‖
ತಲ್ಲಗ್ನಭಿತ್ತಿಭಾಗಸ್ಥಾ ಮತಾ ಸಾ ಮೂಲಪಾತುಕೀ ।
ಪರತಸ್ಸರ್ವತೋ ವ್ಯಾಪ್ತಾಮೂಹುಸ್ತಾಂ ಪರಪಾತುಕೀಮ್ ‖೪೧‖
ಅಥಾವಶಿಷ್ಟೇ ದ್ವೇ ಪಟಲೇ ಭ್ರೂಣಭಾಗಾಚ್ಚ ರೋಹತಃ ।
ತಯೋರ್ಬಾಹ್ಯಃ ಪರಾಯುಸ್ಸ್ಯಾದಾನ್ತರಸ್ತ್ವಪರಾಯುಕಃ ‖೪೨‖

ಅತ್ರ ಪರಾಯೋರನೇಕೇ ಕುಡ್ಮಲಾಕಾರಾಃ ಪ್ರರೋಹಾಸ್ಸನ್ತಿ। ಅಪರೋತ್ಪತ್ತೇಃ ಪ್ರಾಕ್ ತದ್ದ್ವಾರಾ ಗರ್ಭಃ ಮಾತುರಾಹಾರಜನ್ಯಪೋಷಕಾಂಶಂ ಸ್ವೀಕರೋತೀತಿ ಸುಪರೀಕ್ಷಿತಂ ಭವತಿ। ಸರ್ವಮಪ್ಯೇತತ್ಪಟಲಚತುಷ್ಟಯಮುತ್ತರಕಾಲ ಏವ ಭವತಿ। ಅತಃ ಪ್ರಸವಕಾಲೇ ಪೃಥಙ್ನೋಪಲಭ್ಯತೇ ।೪೩‖

ಉಕ್ತಂ ಚ :—

ಅಪರಂ ಚಾಪರಂ ಚಾತ್ರ ರಕ್ತಂ ಗರ್ಭಾಶಯೇ ಕ್ವಚಿತ್ ।
ಸಂಚೀಯತೇ ವಿಶೇಷಾತ್ತತ್ತಸ್ಥಾನಮಪರಾಂ ವಿದುಃ ॥೪೪॥
ಅಪರಾ ವರ್ತುಲಾ ಸ್ಥೂಲಮಧ್ಯಾ ಮಧ್ಯಸ್ಥಲೇ ಕ್ವಚಿತ್ ।
ನಾಭಿನಾಡೀ ಲಗತ್ಯಸ್ಯಾಃ ಕದಾಪ್ಯನ್ತಸ್ಥಲೇಽಪಿ ವಾ ॥೪೫॥
ಸ್ಯಾತಾಂ ತಸ್ಯಾ ಉಭಾವಂಶೌ ತತ್ರೈಕೋ ಮಾತೃಭಾಗತಃ ।
ಪರೋಂಶೋ ಗರ್ಭತಶ್ಚೇತಿ ತಯೋರ್ಯೋಗಾತ್ತದುದ್ಭವಃ ॥೪೬॥
ಯಚ್ಛಿಷ್ಟಂ ರಕ್ತಮೂರ್ಧ್ವಂ ತದ್ಗಚ್ಛಂಸ್ತನ್ಯತ್ವಮಾಪ್ನುಯಾತ್ ।
ಕಫೋಪರಂಜಿತಂ ಕಿಂಚ ಕಪೋಲಸ್ತನಪೀನತಾ ॥೪೭॥
ಕೃಷ್ಣೋಷ್ಠಚೂಚುಕತ್ವಂ ಚ ತಸ್ಮಾದೇವ ಪ್ರಜಾಯತೇ ।
ಪ್ರಸೂತಾಯಾಃ ಪುನಸ್ತನ್ಯಂ ಪುಷ್ಯತ್ಯಾಹಾರಸಾರತಃ ॥೪೮॥
ರಜೋದರ್ಶನಪರ್ಯನ್ತಂ ತಚ್ಚಾರೋಹತಿ ಪೂರ್ವವತ್ ।

ಜರಾಯುಃ—ಗರ್ಭಾವರಣೀ ಕಲಾ—ಅಸ್ಯಾ ಆದೌ ಚತ್ವಾರಿ ಪಟಲಾನಿ। ಭವನ್ತಿ । ತತ್ರ ದ್ವೇ ಮಾತುರ್ಗರ್ಭಾಶಯಕಲಾಯಾ ಉತ್ಪದ್ಯೇತೇ ॥೪೯॥

ತದುಕ್ತಂ ಬೃಹಚ್ಛಾರೀರೇ ಯಥಾ—

ಗರ್ಭಾಶಯಾಭ್ಯನ್ತರಗಾ ಕ್ರಮಾತ್ತ್ವಕ್ ಸ್ಥೂಲೀಭವೇದ್ಬೀಜವಿಪಾಕಕಾಲೇ ।
ರಕ್ತಂಚ ತಸ್ಯಾ ಚಯಮೇತಿ ಪಶ್ಚಾದ್ಗರ್ಭೋದ್ಭವೇ ತತ್ಪರಿಪೋಷಣಾರ್ಥಮ್ ॥೫೦॥
ಅನುದ್ಭವೇ ವಾ ಕಲಲಸ್ಯ ನಾಡ್ಯಾಃ ಸಮಾಗತೇ ಕೇವಲಯೌವತೇ ವಾ ।
ವ್ಯರ್ಥಂ ತದಸ್ರಂ ಸ್ರವತಿ ಸ್ತ್ರಿಯಾಸ್ತದ್ರಜಸ್ಸ್ರುತಿಂ ಮಾಸಭವಾಮುಶನ್ತಿ ॥೫೧॥
ಗರ್ಭಾಶಯಸ್ಯಾವರಣೀಕಲೈವಂ ವ್ಯರ್ಥೀಕೃತಾಧಾನವಿಘಾತಹೇತೋಃ ।
ಪತೇದ್ಧಿ ನಿರ್ಮೋಕವದಸ್ರಮಿಶ್ರಾ ತತ್ಪಾತುಕೀಮಾಹುರಿಮಾಮಭಿಜ್ಞಾಃ ॥೫೨॥

ದೀಪಿಕೆ—ಅಪರವು (ಗರ್ಭದಲ್ಲಿರುವ ಮಗುವಿನ ದೇಹವನ್ನೊಳಗೊಂಡಿರುವ ಮಾಂಸದ ಚೀಲ) ಉಂಟಾಗುವ ಕ್ರಮ—

ಗರ್ಭಧಾರಣೆಯಾದ ಏಳು ದಿನಗಳಲ್ಲಿ ಗರ್ಭವು ಸಿಂಬಳದ ಉಂಡೆಯಂತಾಗಿ ಗರ್ಭಾಶಯದ ಪಕ್ಕದಲ್ಲೊಂದು ಕಡೆ ಅಂಟುಕೊಂಡು ವೃದ್ಧಿಯಾಗುತ್ತದೆ. ಕ್ರಮಕ್ರಮವಾಗಿ ಗರ್ಭಾಶಯದಿಂದ ಬೇರೆಯಾಗಿ ಗಟ್ಟಿಯಾಗುತ್ತದೆ. ಆಗ್ಯೆ ತೆಳುವಾದ ಮಾಂಸದ ಪದರಗಳೆರಡು ಗರ್ಭದ ಸುತ್ತಲೂ ಬೆಳೆದು ಅದನ್ನು ಮುಚ್ಚಿಕೊಳ್ಳುತ್ತವೆ. ಮೂರು ತಿಂಗಳಮೇಲೆ ಅವೆರಡೂ ಒಟ್ಟಿಗೆ ಸೇರಿ ಕಲಲವಿದ್ದ ಸ್ಥಳದಿಂದ ಹಬ್ಬುತ್ತಾ ಚರ್ಮದ ಚೀಲದಂತಾಗಿ ಗರ್ಭವನ್ನು ಮುಚ್ಚಿಕೊಳ್ಳುತ್ತವೆ. ಇದಕ್ಕೆ ಕೋಶಪಾತುಕೀ ಎಂದು ಸಂಜ್ಞೆ. ಅನಂತರ ಮಗುವಿನ ಭಾಗದಿಂದ ಮತ್ತೆರಡು ಪದರಗಳು ಬೆಳೆಯುತ್ತವೆ. ಹೊರಗಿನ ಪದರಕ್ಕೆ ಪರಾಯುವೆಂದೂ ಒಳಪದರಕ್ಕೆ ಅಪರಾಯುವೆಂದೂ ಹೆಸರು. ಹೊರಗಿನ ಪದರದಲ್ಲಿ ಹೂವಿನ ಮೊಗ್ಗಿನಂತೆ ಅನೇಕ ಮಾಂಸಾಂಕುರಗಳು ಉದ್ಭವಿಸುತ್ತವೆ. ಅಪರವುಂಟಾಗುವುದಕ್ಕೆ ಮೊದಲು ಈ ಮಾಂಸಾಂಕುರಗಳ ಮೂಲಕ ತಾಯಿಯ ಆಹಾರ ರಸವು ಮಗುವಿಗೆ ಒದಗಿಸಲ್ಪಡುತ್ತಿದ್ದುದರಿಂದ

ಮಗುವು ಬೆಳೆಯುತ್ತಿತ್ತು. ಪ್ರಸವಕಾಲಕ್ಕೆ ಈ ನಾಲ್ಕು ಪದರಗಳೂ ಒಟ್ಟು ಗೂಡಿ ಒಂದೇ ಆಗುತ್ತದೆಯಾಗಿ ಹೆರಿಗೆಯ ಕಾಲದಲ್ಲಿ ಇವು ಬೇರೆಬೇರೆ ಕಾಣುವುದಿಲ್ಲ ॥೩೮–೪೩॥

ಗರ್ಭಧಾರಣೆಯಾದಮೇಲೆ ರಜಸ್ಸು ಹೊರಕ್ಕೆ ಸ್ರಾವವಾಗದೇ ಗರ್ಭಾಶಯದ ಒಳಪಕ್ಕದಲ್ಲೊಂದು ಕಡೆಗೆ ರಕ್ತವು ಜಮಾವಣೆಯಾಗುತ್ತಾ ಬಂದು ಮಧ್ಯಭಾಗವು ದಪ್ಪವಾಗಿಯೂ ಗುಂಡಾಗಿಯೂ ಇರುವ ಮಾಂಸಪೇಶಿಯೊಂದು ಏರ್ಪಟ್ಟು ಸ್ಥಿರವಾಗಿ ಅಂಟಿಕೊಂಡು ಬೆಳೆಯುತ್ತದೆ. ಇದಕ್ಕೆ ಅಪರವೆಂದು ಹೆಸರು. ಇದರ ಒಳಗಡೆಯಿಂದ ಗರ್ಭನಾಳವೊಂದು ಉತ್ಪನ್ನವಾಗಿ ವೃದ್ಧಿಗೊಳ್ಳುತ್ತದೆ. ಈ ನಾಳದ ಒಂದಂಶವು ಮಾತೃದೇಹದಿಂದಲೂ ಮತ್ತೊಂದು ಗರ್ಭದಿಂದಲೂ ಕೂಡಿ ವೃದ್ಧಿಗೊಳ್ಳುತ್ತವೆ. ಉಳಿದ ರಜೋರಕ್ತವು ಮೇಲ್ಮುಖವಾಗಿ ಸ್ತನಗಳಿಗೆ ಹೋಗಿ ಕಫಮಿಶ್ರವಾದ ಸ್ತನ್ಯವಾಗಿ ಪರಿಣಮಿಸುತ್ತದೆ. ಆದಕಾರಣ ಗರ್ಭಿಣಿಯರಿಗೆ ಕೆನ್ನೆಗಳೂ ಸ್ತನಗಳೂ ದಪ್ಪವಾಗುತ್ತವೆ. ತುಟಿಗಳೂ ಸ್ತನಚೂಚುಕಗಳೂ (ಎದೆತೊಟ್ಟುಗಳೂ) ಕಪ್ಪಾಗಿರುತ್ತವೆ. ಪ್ರಸವವಾದಲಾಗಾಯ್ತು ಪುನಃ ಮಾಸಿಕ ಸ್ರಾವವುಂಟಾಗುವವರೆಗೂ ಮಾತೃವಿನ ಆಹಾರ ರಸದಿಂದ ಸ್ತನ್ಯವೃದ್ಧಿಯಾಗುತ್ತದೆ ॥೪೪–೪೮॥

ಗರ್ಭಸ್ಥ ಶಿಶುದೇಹವನ್ನು ಆವರಿಸುವ ತೆಳುವಾದ ಪೊರೆಗೆ ಜರಾಯುವೆಂದು ಹೆಸರು. ಮೊದಲು ಇದು ನಾಲ್ಕು ಪದರಗಳಿಂದ ಕೂಡಿರುತ್ತದೆ. ಅವುಗಳಲ್ಲೆರಡು ಪದರಗಳು ಮಾತೃವಿನ ಗರ್ಭಾಶಯದ ಒಳಭಾಗದ ಕಲೆಗಳಿಂದಲೂ ಮತ್ತೆರಡು ಗರ್ಭಶರೀರದಿಂದಲೂ ಉಂಟಾಗಿ ಪ್ರಸವದ ವೇಳೆಗೆ ಒಟ್ಟಿಗೆ ಸೇರಿ ಒಂದೇ ಪದರವಾಗುತ್ತದೆ ॥೪೯॥

ಬೃಹಚ್ಛಾರೀರದಲ್ಲಿ—ರಜಸ್ವಲೆಯರಿಗೆ ಅಂಡಕೋಶದಿಂದ ಹೊರಕ್ಕೆ ಬರುವ ಸ್ತ್ರೀಬೀಜವು ಪಾಕವಾಗುವಾಗ ಗರ್ಭಾಶಯದ ಒಳಭಾಗದ ಪೊರೆಯು ಋತುರಕ್ತದಿಂದ ವೃದ್ಧಿಯಾಗಿ ದಪ್ಪವಾಗುತ್ತದೆ. ಈ ರೀತಿ ವೃದ್ಧಿಯಾದ ರಕ್ತವು ಗರ್ಭಧಾರಣೆಯಾದಾಗ ಗರ್ಭವೃದ್ಧಿಗೆ ಸಹಾಯಕವಾಗುತ್ತದೆ. ಒಂದು ವೇಳೆ ಗರ್ಭಧಾರಣೆಯಾಗದೆ ಗರ್ಭನಾಡಿಯು ಉತ್ಪತ್ತಿಯಾಗದಿದ್ದರೆ ಆ ಪಕ್ವವಾದ ಸ್ತ್ರೀಬೀಜವು ರಜಃಸ್ರಾವದೊಡನೆ ಹೊರಕ್ಕೆ ಬಂದು ವ್ಯರ್ಥವಾಗುತ್ತದೆ. ಈ ಸ್ರಾವಕ್ಕೆ ಮಾಸಿಕ ರಜಃಸ್ರಾವವೆಂದು ಹೆಸರು. ಮತ್ತು ವ್ಯರ್ಥವಾಗಿ ರಜಸ್ಸ್ರಾವದೊಡನೆ ಹೊರಕ್ಕೆ ಬರುವ ಗರ್ಭಾಶಯದ ಒಳಭಾಗದ ಕಲೆಯನ್ನು ವೈದ್ಯಶ್ರೇಷ್ಠರು ಮೂಲಪಾತುಕೀ ಎಂದು ಕರೆಯುತ್ತಾರೆ ॥೫೦–೫೨॥

ಮೂಲ— ಗರ್ಭವೃದ್ಧೇರುಪಾಯಃ – (ಸು|ಶಾ|ಅ|೨)

ಗರ್ಭಸ್ಯ ರಸನಿಮಿತ್ತಾ ಮಾರುತಾಧ್ಮಾನನಿಮಿತ್ತಾ ಪರಿವೃದ್ಧಿರ್ಭವತಿ ॥೫೩॥

ಉಕ್ತಂ ಚ:—

ಗರ್ಭಸ್ಯ ನಾಭಿಮಧ್ಯೇ ತು ಜ್ಯೋತಿಸ್ಥಾನಂ ಧ್ರುವಂ ಸ್ಮೃತಮ್ ।
ತದಾಧಮತಿ ವಾತಶ್ಚ ದೇಹಸ್ತೇನಾಸ್ಯ ವರ್ಧತೇ ॥೫೪॥

ಊಷ್ಮಣಾ ಸಹಿತಶ್ಚಾಪಿ ದಾರಯತ್ಯಸ್ಯ ಮಾರುತಃ ।
ಊರ್ಧ್ವಂ ತಿರ್ಯಗಧಸ್ತಾಚ್ಚ ಸ್ರೋತಾಂಸಿ ತು ಯಥಾ ತಥಾ ॥೫೫॥

ದೀಪಿಕೆ—ಗರ್ಭವೃದ್ಧಿಕ್ರಮ__(ಸು। ಶಾ। ಅ। ೨)

ಮಾತೃವಿನ ರಸಧಾತುವಿನಿಂದಲೂ ವಾತವು ಶರೀರದೊಳಗೆ ಸೇರಿ ಉಬ್ಬುವಂತೆ ಮಾಡುವುದರಿಂದಲೂ ಗರ್ಭದೇಹವು ಸರ್ವತೋಮುಖವಾಗಿ ವೃದ್ಧಿಯಾಗುತ್ತದೆ ॥೫೩॥

ಗರ್ಭದ ನಾಭಿಪ್ರದೇಶದಲ್ಲಿ (ಮಧ್ಯ ಶರೀರದಲ್ಲಿ) ಜ್ಯೋತಿಸ್ಥಾನವಿರುವುದು ಸರ್ವರಿಗೂ ಗೊತ್ತಾದ ವಿಚಾರವು. ವಾತದೋಷವು ಈ ಮಧ್ಯ ದೇಹವನ್ನು ಪ್ರವೇಶಿಸಿ ಉಷ್ಣದಿಂದ ಕೂಡಿ ದೇಹದಲ್ಲಿ ಯಾವ ರೀತಿಯಲ್ಲಿ ಸ್ರೋತೋಮಾರ್ಗಗಳುಂಟಾಗಬೇಕೋ ಹಾಗೆ ಗರ್ಭದೇಹವನ್ನು ಮೇಲಕ್ಕೂ ಕೆಳಕ್ಕೂ ಅಡ್ಡಲಾಗಿಯೂ ಹಿಗ್ಗಲಿಸಿ ದಪ್ಪವಾಗುವಂತೆ ಮಾಡುತ್ತದೆ ॥೫೪–೫೫॥

ಮೂಲ—ಗರ್ಭಪೋಷಣೇ ಹೇತುಃ—(ಸು।ಶಾ।ಅ।೩)

ಮಾತುಸ್ತು ಖಲು ರಸವಹಾಯಾಂ ನಾಡ್ಯಾಂ ಗರ್ಭನಾಭಿನಾಡೀ ಪ್ರತಿಬದ್ಧಾ। ಸಾಸ್ಯ ಮಾತುರಾಹಾರರಸವೀರ್ಯಮಭಿವಹತಿ । ತೇನೋಪಸ್ನೇಹೇನಾಸ್ಯಾಭಿವೃದ್ಧಿರ್ಭವತಿ । ಅಸಂಜಾತಾಙ್ಗಪ್ರತ್ಯಙ್ಗವಿಭಾಗಮಾನಿಷೇಕಾತ್ಪ್ರಭೃತಿ ಸರ್ವಶರೀರಾವಯವಾನುಸಾರಿಣೀನಾಂ ರಸವಹಾನಾಂ ತಿರ್ಯಗ್ಗತಾನಾಂ ಧಮನೀನಾಮುಪಸ್ನೇಹೋ ಜೀವಯತಿ ॥೬೧॥

ಭೋಜಃ—

ಗರ್ಭೋ ರುಣದ್ಧಿ ಸ್ರೋತಾಂಸಿ ರಸರಕ್ತವಹಾನಿ ವೈ ।
ರಕ್ತಾಜ್ಜರಾಯುರ್ಭವತಿ ನಾಡೀ ಚೈವ ರಸಾತ್ಮಿಕಾ ॥೬೨॥
ಸಾ ನಾಡೀ ಗರ್ಭಮಾಪ್ನೋತಿ ತಥಾ ಗರ್ಭಸ್ಯ ವರ್ತನಮ್ ।
ಯದ್ಯದಶ್ನಾತಿ ಮಾತಾಸ್ಯ ಭೋಜನಂ ಹಿ ಚತುರ್ವಿಧಮ್ ॥ ॥೬೩॥
ತಸ್ಮಾದತ್ತಾದ್ರಸೀಭೂತಂ ವೀರ್ಯಂ ತ್ರೇಧಾ ಪ್ರವರ್ತತೇ ।
ಭಾಗಶ್ಶರೀರಂ ಪುಷ್ಣಾತಿ ಸ್ತನ್ಯಂ ಭಾಗೇನ ವರ್ಧತೇ ॥೬೪॥
ಗರ್ಭಃ ಪುಷ್ಯತಿ ಭಾಗೇನ ವರ್ಧತೇ ಚ ಯಥಾಕ್ರಮಮ್ ।
ಗರ್ಭಂ ಕುಲ್ಯೇವ ಕೇದಾರಂ ನಾಡೀ ಪ್ರೀಣಾತಿ ತರ್ಪಿತಾ ॥೬೫॥

ದೀಪಿಕೆ—ಗರ್ಭಪೋಷಣೆಯಾಗುವ ಕ್ರಮ—(ಸು।ಶಾ।ಅ।೨)

ಮಾತೃವಿನ ರಸವಾಹಿನೀಧಮನಿಗಳಲ್ಲಿ ಗರ್ಭದ ನಾಭಿನಾಳವು ಸೇರಿಕೊಂಡಿದೆ. ಅದು ಮಾತೃವಿನ ಆಹಾರ ರಸವನ್ನು ಹೊತ್ತು ಗರ್ಭಶರೀರದೊಳಕ್ಕೆ ಬಿಡುತ್ತದೆ. ಈ ರಸಧಾತುವು ಜಿನುಗುವುದರಿಂದ ಗರ್ಭಶರೀರವು ಪುಷ್ಟಿಯಾಗುತ್ತದೆ. ಗರ್ಭಕ್ಕೆ ಅಂಗಪ್ರತ್ಯಙ್ಗಗಳುಂಟಾಗುವುದಕ್ಕೆ ಮೊದಲು ಗರ್ಭಾಶಯದಲ್ಲಿ ಗರ್ಭವಾಗಿ ಪರಿಣಮಿಸಿದ ಶುಕ್ರಶೋಣಿತಗಳ ಸಂಯೋಗದಿಂದ ಕಲಲವಾಗಿರುವ ಗರ್ಭವು ಮಾತೃದೇಹದಲ್ಲಿ ಅಡ್ಡಡ್ಡಲಾಗಿ ಪ್ರಸರಿಸಿರುವ

ಧಮನಿಗಳಲ್ಲಿ ಸಂಚರಿಸುವ ರಸಧಾತುವಿನ ಅಂಶಗಳು ಜಿನುಗಿ ಸೇರುವುದ ರಿಂದ ವೃದ್ಧಿಹೊಂದುತ್ತದೆ ‖೬೧‖

ಭೋಜನ ಮತ––

ಗರ್ಭಪಿಂಡವು ಮಾತೃವಿನ ಗರ್ಭಾಶಯದ ರಸವಾಹಿ ರಕ್ತವಾಹಿ ಸಿರೆಗಳ ಮುಖವನ್ನು ಬಂಧಿಸುತ್ತದೆ. ತಡೆಯಲ್ಪಟ್ಟ ರಕ್ತದಿಂದ ಜರಾಯುವು ಉಂಟಾಗುತ್ತದೆ. ಗರ್ಭದ ನಾಭಿನಾಳವು ರಸದಿಂದ ಉತ್ಪನ್ನವಾಗಿದೆ. ಈ ನಾಡಿಯ ಮೂಲಕ ಮಾತೃವಿನ ರಸಧಾತುವು ಪ್ರವಹಿಸಿ ಗರ್ಭಶರೀರವನ್ನು ಪೋಷಿಸುತ್ತದೆ. ಮಾತೃವು ಭೋಜನಮಾಡಿದ ನಾಲ್ಕುವಿಧ ದ್ರವ್ಯಗಳು ಮೂರುವಿಧ ವೀರ್ಯಗಳಾಗಿ ಪರಿಣಮಿಸಿ ಮಾತೃದೇಹ, ಗರ್ಭದೇಹ, ಸ್ತನ್ಯಗಳನ್ನು ವೃದ್ಧಿ ಮಾಡುತ್ತದೆ. ಕಾಲುವೆಗಳ ನೀರು ಗದ್ದೆಗೆ ಹರಿದು ಒದ್ದೆಮಾಡುವಂತೆಯೇ ರಸಧಾತುವು ನಾಭಿನಾಳದ ಮೂಲಕ ಸಂಚರಿಸಿ ಗರ್ಭಶರೀರವನ್ನು ಪೋಷಿಸುತ್ತದೆ ‖೬೨–೬೫‖

ಮೂಲ—

ಗರ್ಭೋ ವಾತಮೂತ್ರಪುರೀಷೋತ್ಸರ್ಜನಾದಿಕಂ ನ ಕರೋತಿ;
ಕುತಃ? ‖೬೬‖

(ಸು।ಶಾ।ಅ।೨)—

ಮಲಾಲ್ಪತ್ವಾದಯೋಗಾಚ್ಚ ವಾಯೋಃ ಪಕ್ವಾಶಯಸ್ಯ ಚ ।
ವಾತಮೂತ್ರಪುರೀಷಾಣಿ ನ ಗರ್ಭಸ್ಥಃ ಕರೋತಿ ಹಿ ‖೬೭‖
ಜರಾಯುಣಾ ಮುಖೇ ಚ್ಛನ್ನೇ ಕಣ್ಠೇ ಚ ಕಫವೇಷ್ಟಿತೇ ।
ವಾಯೋರ್ಮಾರ್ಗಾವರೋಧಾಚ್ಚ ನ ಗರ್ಭಸ್ಥಃ ಪ್ರರೋದಿತಿ ‖೬೮‖
ನಿಶ್ವಾಸೋಚ್ಛ್ವಾಸಸಂಕ್ಷೋಭಸ್ವಪ್ನಾನ್ ಗರ್ಭೋಽಧಿಗಚ್ಛತಿ ।
ಮಾತುರ್ನಿಶ್ವಾಸನಿಶ್ವಾಸಸಂಕ್ಷೋಭಾತ್ ಸ್ವಪ್ನಸಂಭವಾತ್ ‖೬೯‖

ದೀಪಿಕೆ––

ಗರ್ಭಾಶಯದಲ್ಲಿರುವಾಗ ಶಿಶುವಿನ ನಾಭಿನಾಳದ ಮೂಲಕವಾಗಿ ತಾಯಿಯ ಶರೀರದಿಂದ ಆಹಾರರಸದ ಸಾರವು ಹರಿದುಬರುತ್ತದೆಯಾಗಿ ಗಟ್ಟಿಯಾದ ಮಲವು ಉತ್ಪತ್ತಿಯಾಗುವುದಿಲ್ಲ; ಪಕ್ವಾಶಯದಲ್ಲಿ ಅಪಾನ ವಾಯುವಿನ ಸಂಚಾರವಿರುವುದಿಲ್ಲ. ಜರಾಯುವೆಂಬ ತೆಳುವಾದ ಪೊರೆಯು ಶಿಶುವಿನ ಮುಖದ ಮೇಲೆ ಮುಚ್ಚಿಕೊಂಡಿರುತ್ತದೆ. ಕಂಠನಾಳದಲ್ಲಿ ಕಫವು ತುಂಬಿಕೊಂಡಿರುತ್ತದೆ. ವಾಯುವಿನ ಸಂಚಾರಕ್ಕೆ ಕಂಠನಾಳದಲ್ಲಿ ಅವಕಾಶವಿರುವುದಿಲ್ಲ. ಈ ಕಾರಣಗಳಿಂದ ಗರ್ಭಸ್ಥಶಿಶುವು ಅಳುವುದಿಲ್ಲ. ವಾತಮೂತ್ರ ಮಲಗಳನ್ನು ವಿಸರ್ಜನೆಮಾಡುವುದಿಲ್ಲ. ಆದರೆ ಅದರ ತಾಯಿಯು ಶ್ವಾಸೋಚ್ಛ್ವಾಸ ನಿದ್ರೆಗಳಿಂದಲೇ ಮಗುವಿಗೂ ಕ್ಷೋಭೆಯುಂಟಾಗಿ (ಶರೀರಚಲನೆ) ಶ್ವಾಸೋಚ್ಛ್ವಾಸ ನಿದ್ರೆಗಳುಂಟಾಗುತ್ತವೆ ‖೬೯‖

ಮೂಲ—

ಗರ್ಭಿಣ್ಯಾಮಯೇ ಗರ್ಭಸ್ಯಾಪಿ ಪೀಡಾ ಭವತಿ ।
(ಸು।ಶಾ।ಅ।೩)—
ದೋಷಾಭಿಷೂತ್ತೈರ್ಗರ್ಭಿಣ್ಯಾ ಯೋ ಯೋ ಭಾಗಃ ಪ್ರಪೀಡ್ಯತೇ।
ಸ ಸ ಭಾಗಶ್ಶಿಶೋಸ್ತಸ್ಯಾಃ ಗರ್ಭಸ್ಥಸ್ಯ ಪ್ರಪೀಡ್ಯತೇ ॥ ೭೦ ॥
ತಚ್ಚಿಕಿತ್ಸಾ—
ವ್ಯಾಧೀಂಶ್ಚಾಸ್ಯಾ ಮೃದುಸುಖೈರತೀಕ್ಷ್ಣೈರೌಷಧೈರ್ಜಯೇತ್ ।
ಇತ್ಯನಾತ್ಯಯಿಕೇ ವ್ಯಾಧೌ ವಿಧಿರಾತ್ಯಯಿಕೇ ಪುನಃ ॥ ೭೧ ॥
ತೀಕ್ಷ್ಣೈರಪಿ ಕ್ರಿಯಾಯೋಗ್ಯೈಃ ಸ್ತ್ರಿಯಂ ಯತ್ನೇನ ಪಾಲಯೇತ್।

ದೀಪಿಕೆ—

ದೋಷಪ್ರಕೋಪದಿಂದ ಗರ್ಭಿಣಿಯ ಯಾವ ಯಾವ ಅಙ್ಗವು ಪೀಡಿಸಲ್ಪಡುತ್ತದೆಯೋ ಗರ್ಭದಲ್ಲಿರುವ ಶಿಶುವಿನ ಆಯಾಯ ಅಙ್ಗಗಳಿಗೆ ಆಕಾರದಲ್ಲೂ ಬೆಳವಳಿಕೆಯಲ್ಲೂ ಅಡಚಣೆಯುಂಟಾಗುತ್ತದೆ ॥೭೦॥

ಇದಕ್ಕೆ ಚಿಕಿತ್ಸೆ—

ಗರ್ಭಿಣಿಯ ವ್ಯಾಧಿಗಳಿಗೆ ಮೃದುವಾದ ಮತ್ತು ಸುಖಕರಗಳಾದ ಔಷಧಗಳನ್ನು ಕೊಟ್ಟು ಚಿಕಿತ್ಸೆ ಮಾಡಬೇಕು ; ಅಪಾಯಕರಗಳಾದ ರೋಗಗಳಲ್ಲಿ ತೀಕ್ಷ್ಣಗಳಾದ ಔಷಧೋಪಚಾರಗಳಿಂದಾದರೂ ಪ್ರಯತ್ನಪಟ್ಟು ಚಿಕಿತ್ಸೆಮಾಡಿ ಸ್ತ್ರೀಯನ್ನು ಬದುಕಿಸಿಕೊಳ್ಳಬೇಕು. (ಒಂದುವೇಳೆ ಗರ್ಭಸ್ಥಶಿಶುವಿಗೆ ಅಪಾಯವಾದರೂ ಲಕ್ಷ್ಯಮಾಡದೆ ಸ್ತ್ರೀಯನ್ನು ಕಾಪಾಡಬೇಕೆಂದು ಅಭಿಪ್ರಾಯವು.) ॥೭೧॥

ಮೂಲ—ಗರ್ಭಾಂಶವಿವರಣಮ್—

(ಸು।ಶಾ।ಅ।೩) ಗರ್ಭಸ್ಯ ಕೇಶಶ್ಮಶ್ರುಲೋಮನಖದನ್ತಸಿರಾಸ್ನಾಯುಧಮನೀರೇತಃಪ್ರಭೃತೀನಿ ಸ್ಥಿರಾಣಿ ಪಿತೃಜಾನಿ; ಮಾಂಸಶೋಣಿತಮೇದೋಮಜ್ಜಾಹೃನ್ನಾಭಿಯಕೃತ್ಪ್ಲೀಹಾನ್ತ್ರಗುದಪ್ರಭೃತೀನಿ ಮೃದೂನಿ ಮಾತೃಜಾನಿ; ಶರೀರೋಪಚಯೋ ಬಲಂ ವರ್ಣಃ ಸ್ಥಿತಿರ್ಹಾನಿಶ್ಚ ರಸಜಾನಿ; ಇನ್ದ್ರಿಯಾಣಿ ಜ್ಞಾನಂ ವಿಜ್ಞಾನಮಾಯುಃ ಸುಖದುಃಖಾದಿಕಂ ಚಾತ್ಮಜಾನಿ ॥೭೨॥

(ಚ।ಶಾ।ಅ।೩।ಶ್ಲೋ. ೧೨)—ಮಾತೃಜಾನ್ಯವಯವಾನಿ—ತ್ವಕ್ಚ ಲೋಹಿತತಂ ಚ ಮಾಂಸಂ ಚ ಮೇದಶ್ಚ ನಾಭಿಶ್ಚ ಹೃದಯಂ ಚ ಕ್ಲೋಮ ಚ ಯಕೃಚ್ಚ ಪ್ಲೀಹಾ ಚ ವೃಕ್ಕೌ ಚ ಬಸ್ತಿಶ್ಚ ಪುರೀಷಾಧಾನಂ ಚಾಮಾಶಯಶ್ಚ ಪಕ್ವಾಶಯಶ್ಚೋತ್ತರಗುದಂ ಚಾಧರಗುದಂ ಚ ಕ್ಷುದ್ರಾನ್ತ್ರಂ ಸ್ಥೂಲಾನ್ತ್ರಂ ಚ ವಪಾ ಚ ವಪಾವಹನಂ ಚ ॥ ೭೩ ॥

ಪಿತೃಜಾನ್ಯಥಾ—ಕೇಶಶ್ಮಶ್ರುನಖಲೋಮದನ್ತಾಸ್ಥಿಸಿರಾಸ್ನಾಯುಧಮನ್ಯಃ ಶುಕ್ರಂ ಚೇತಿ ॥೭೪॥

ಆತ್ಮಜಾನಿ—ತಾಸು ತಾಸು ಯೋನಿಷೂತ್ಪತ್ತಿರಾಯುರಾತ್ಮಜ್ಞಾನಂ ಮನ ಇನ್ದ್ರಿಯಾಣಿ ಪ್ರಾಣಾಪಾನೌ ಪ್ರೇರಣಂ ಧಾರಣಮಾಕೃತಿಸ್ವರವರ್ಣವಿಶೇಷಾಃ ಸುಖದುಃಖೇ ಇಚ್ಛಾದ್ವೇಷೌ ಚೇತನಾ ಧೃತಿರ್ಬುದ್ಧಿಃ ಸ್ಮೃತಿರಹಙ್ಕಾರಃ ಪ್ರಯತ್ನಶ್ಚೇತಿ ॥೭೫॥

ಸಾತ್ಮ್ಯಜಾನಿ—ಆರೋಗ್ಯಮನಾಲಸ್ಯಮಲೋಲುಪತ್ವಮಿನ್ದ್ರಿಯಪ್ರಸಾದಃ ಸ್ವರವರ್ಣಬೀಜಸಂಪತ್ ಪ್ರಹರ್ಷಭೂಯಸ್ತ್ವಂ ಚೇತಿ ||೭೬||

ರಸಜಾನಿ—ಶರೀರಸ್ಯಾಭಿನಿರ್ವೃತ್ತಿರಭಿವೃದ್ಧಿಃ ಪ್ರಾಣಾನುಬನ್ಧಃ ತೃಪ್ತಿಃ ಪುಷ್ಟಿರುತ್ಸಾಹಶ್ಚೇತಿ ||೭೭||

ಸತ್ವಜಾನಿ-ಭಕ್ತಿಃಶೀಲಂ ಶೌಚಂ ದ್ವೇಷಃ ಸ್ಮೃತಿರ್ಮೋಹಸ್ತ್ಯಾಗೋ ಮಾತ್ಸರ್ಯಂ ಶೌರ್ಯಂ ಭಯಂ ಕ್ರೋಧಸ್ತನ್ದ್ರೋತ್ಸಾಹಸ್ತೈಕ್ಷ್ಣ್ಯಂ ಮಾರ್ದವಂ ಗಾಮ್ಭೀರ್ಯ-ಮನವಸ್ಥಿತತ್ವಮಿತ್ಯೇವಮಾದಯಶ್ಚಾನ್ಯೇ ನಾನಾವಿಧಾನಿ ಖಲು ಸತ್ವಾನಿ ತಾನಿ ಸರ್ವಾಣ್ಯೇಕಪುರುಷೇ ಭವನ್ತಿ। ನ ಚ ಭವನ್ತ್ಯೇಕಕಾಲಮ್। ಏಕನ್ತು ಪ್ರಾಯೋ-ವೃತ್ತ್ಯಾಹ ||೭೮

ದೀಪಿಕಾ—ಗರ್ಭಾಂಶವಿವರಣೆಯು (ಸು।ಶಾ।ಅ।೩) ಗರ್ಭದಲ್ಲಿರುವ ಶಿಶುವಿನ ತಲೆಕೂದಲು ಮೀಸೆ, ರೋಮಗಳು, ಉಗುರುಗಳು, ಹಲ್ಲುಗಳು, ಸಿರೆಗಳು, ಸ್ನಾಯುಗಳು, ಧಮನಿಗಳು, ಶುಕ್ರ ಮೊದಲಾದ ಸ್ಥಿರವಾದ ವಸ್ತುಗಳು ಪಿತೃವಿಗೆ ಸಂಬನ್ಧಪಟ್ಟ ಭಾಗಗಳು, ಮಾಂಸ, ರಕ್ತ, ಮೇದಸ್ಸು (ಕೊಬ್ಬು), ಮಜ್ಜೆ, ಹೃದಯ, ನಾಭಿ, ಯಕೃತ್ತು, ಪ್ಲೀಹ, ಕರಳು, ಹೊಟ್ಟೆ ಮೊದಲಾದ ಮೆತ್ತಗಿರುವ ವಸ್ತುಗಳು ಮಾತೃವಿಗೆ ಸಂಬನ್ಧಪಟ್ಟ ಭಾಗಗಳು.

ಶರೀರವು ಬೆಳೆಯುವುದು, ಬಲ, ವರ್ಣ, ಬದುಕಿರುವಿಕೆ, ನಾಶವಾಗುವುದು ಇವು ರಸಧಾತುವಿನ ಭಾಗಗಳು; ಇನ್ದ್ರಿಯಗಳು, ಜ್ಞಾನ, ವಿಜ್ಞಾನ, ಆಯುಸ್ಸು, ಸುಖದುಃಖಾದಿಗಳು ಆತ್ಮನಿಗೆ ಸಂಬನ್ಧಪಟ್ಟ ಭಾಗಗಳು (ಅಂಶಗಳು) ||೭೨||

ಮಾತೃವಿನ ಅಂಶಗಳು (ಚ।ಶಾ।ಅ।೩ ಶ್ಲೋ. ೧೨)—ಚರ್ಮ, ರಕ್ತ, ಮಾಂಸಖಂಡ, ಮೇದಸ್ಸು, ಹೊಕ್ಕಳು, ಹೃದಯ, ಕ್ಲೋಮ, (ಪುಪ್ಪುಸ), ಯಕೃತ್ಪ್ಲೀಹಗಳು, ವೃಕ್ಕಗಳು, ಬಸ್ತಿ, ಮಲಾಶಯ, ಆಮಾಶಯ, ಪಕ್ವಾಶಯ, ಮೇಲಿನಗುದ, ಕೆಳಗಿನಗುದ, ಸಣ್ಣಕರಳು, ದೊಡ್ಡಕರಳು, ವಪೆ, ವಪಾವಹನ ||೭೩||

ಪಿತೃವಿನ ಅಂಶಗಳು—ತಲೆಗೂದಲು, ಮೀಸೆ, ರೋಮಗಳು, ಹಲ್ಲುಗಳು, ಮೂಳೆಗಳು, ಸಿರೆಗಳು, ಸ್ನಾಯುಗಳು, ಧಮನಿಗಳು, ಶುಕ್ರ ||೭೪||

ಆತ್ಮನ ಅಂಶಗಳು—ಆಯಾಯ ಯೋನಿಗಳಲ್ಲಿ ಹುಟ್ಟುವುದು. ಆಯುಸ್ಸು ಆತ್ಮಜ್ಞಾನ, ಮನಸ್ಸು, ಇಂದ್ರಿಯಗಳು, ಪ್ರಾಣಾಪಾನಗಳು, ಕೆಲಸಮಾಡಲು ಪ್ರೇರಣೆಯಾಗುವುದು, ಶರೀರಧಾರಣೆ, ಶರೀರದ ಆಕೃತಿ, ಸ್ವರ ಬಣ್ಣಗಳ ವ್ಯತ್ಯಾಸಗಳು, ಸುಖದುಃಖಗಳು, ಇಚ್ಛಾದ್ವೇಷಗಳು, ಮನಸ್ಸು, ಧೈರ್ಯ, ಬುದ್ಧಿ, ಜ್ಞಾಪಕತೆ, ಅಹಂಭಾವ, ಪ್ರಯತ್ನ ||೭೫||

ಸಾತ್ಮ್ಯಗಳು—ಆರೋಗ್ಯ, ಚಟುವಟಿಕೆ, ಚಪಲತೆಯಿಲ್ಲದಿರುವುದು, ಶುದ್ಧವಾದ ಇನ್ದ್ರಿಯ ವ್ಯಾಪಾರಗಳು, ಸ್ವರ, ವರ್ಣ, ಶುಕ್ರಬೀಜಗಳ ಧೃಢತೆ, ಅಧಿಕವಾದ ಕಾಮಾಭಿಲಾಷೆ ||೭೬||

ರಸಧಾತುವಿನ ಭಾಗಗಳು—ಶರೀರದ ಉತ್ಪತ್ತಿ, ಪ್ರಾಣಧಾರಣೆ, ತೃಪ್ತಿ, ದೇಹವು ಪುಷ್ಟವಾಗಿ ಬೆಳೆಯುವುದು, ಉತ್ಸಾಹ, ಕೆಲಸಮಾಡಲು ಇಚ್ಛೆ ||೭೭||

ಸತ್ವಭಾಗಗಳು—ಭಕ್ತಿ, ಒಳ್ಳೆಯ ನಡತೆ, ಪರಿಶುದ್ಧತೆ, ದ್ವೇಷ, ಜ್ಞಾಪಕಶಕ್ತಿ, ಅಜ್ಞಾನ, ತ್ಯಾಗಬುದ್ಧಿ, ಮತ್ಸರಗುಣ, ಪರಾಕ್ರಮ, ಭಯ, ಕೋಪ, ತಂದ್ರಾ, ಉತ್ಸಾಹ, ಚುರುಕುಬುದ್ಧಿ, ಮೃದುತ್ವ, ಗಂಭೀರತೆ, ಚಪಲಚಿತ್ತತೆ ಇತ್ಯಾದಿ ಅನೇಕ ವಿಧಗಳಾದ ಮನೋವೃತ್ತಿಗಳು, ಇವೆಲ್ಲವೂ ಒಬ್ಬ ಪುರುಷನಲ್ಲೇ ಇರುತ್ತವೆ; ಒಂದೇ ಕಾಲದಲ್ಲಿ ಎಲ್ಲವೂ ಇರುವುದಿಲ್ಲ; ಯಾವುದಾದರೊಂದು ಮಾತ್ರ ಪ್ರಾಯಿಕವಾಗಿ ಒಂದೊಂದು ಕಾಲದಲ್ಲಿರುತ್ತದೆ ‖೭೮‖

ಮೂಲ—ಪ್ರಕೃತಿಧರ್ಮಾಃ—(ಸು।ಶಾ।ಅ।೩)—

ಸಾತ್ವಿಕಂ ಶೌಚಮಾಸ್ತಿಕ್ಯಂ ಶುಕ್ಲಧರ್ಮರುಚಿರ್ಮತಿಃ।
ರಾಜಸಂ ಬಹುಭಾಷಿತ್ವಂ ಮಾನಕೃದ್ದಮ್ಭಮತ್ಸರಾಃ ॥೭೯॥
ತಾಮಸಂ ಭಯಮಜ್ಞಾನಂ ನಿದ್ರಾಲಸ್ಯಂ ವಿಷಾದಿತಾ
ಸಾತ್ಮ್ಯಜಂ ತ್ವಾಯುರಾರೋಗ್ಯಮನಾಲಸ್ಯಂ ಪ್ರಭಾಬಲಮ್ ॥೮೦॥

ದೀಪಿಕೆ—ಪ್ರಕೃತಿಧರ್ಮಗಳು—

(ಸು।ಶಾ।ಅ।೩)—ಶುಚಿಯಾಗಿರೋಣ, ಆಸ್ತಿಕ್ಯಬುದ್ಧಿ (ದೇವರಿದ್ದಾನೆ, ಪರಲೋಕವಿದೆ ಎಂಬ ದೃಢವಾದ ನಂಬಿಕೆ), ಬಿಳುಪು ಬಣ್ಣ, ದೋಷರಹಿತವಾದ ಕಾರ್ಯಾಚರಣೆಗಳು ಮತ್ತು ಬುದ್ಧಿ ಇವು ಸಾತ್ವಿಕ ಪ್ರಕೃತಿಯವನ ಲಕ್ಷಣಗಳು; ಬಹಳವಾಗಿ ಮಾತನಾಡುವುದು, ಮಾನ, ಅಹಂಭಾವ, ಮತ್ಸರಬುದ್ಧಿ ಇವು ರಾಜಸಪ್ರಕೃತಿಯುಳ್ಳ ಮನುಷ್ಯರ ಲಕ್ಷಣಗಳು ‖೮೧‖

ಭಯ, ಅಜ್ಞಾನ, ನಿದ್ರೆ, ಅಲಸತೆ, ವ್ಯಸನಪಡುವುದು ಇವು ತಮೋಗುಣ ವುಳ್ಳ ಮನುಷ್ಯರ ಲಕ್ಷಣಗಳು; ಆಯುಃ, ಆರೋಗ್ಯ, ಚಟುವಟಿಕೆ, ಪ್ರಭೆ (ಥಾಳಥಳ್ಯ), ಬಲ, ಇವು ಸಾತ್ಮ್ಯ ಲಕ್ಷಣಗಳು ‖೮೨‖

ಮೂಲ—ಮಾತುರುದರೇ ಗರ್ಭಸ್ಥಿತಿಃ—(ಸು।ಶಾ।ಅ। ೩)—

ಗರ್ಭಸ್ತು ಮಾತೃಪೃಷ್ಠಾಭಿಮುಖೋ ಲಲಾಟೇ ಕೃತಾಞ್ಜಲಿಃ ಸಙ್ಕುಚಿತಾಙ್ಗೋ ಗರ್ಭಕೋಷ್ಠೇ ದಕ್ಷಿಣಂ ಪಾರ್ಶ್ವಮಾಶ್ರಿತ್ಯಾವತಿಷ್ಠತೇ ಪುಮಾನ್ ವಾಮಂ ಸ್ತ್ರೀ ಮಧ್ಯಂ ನಪುಂಸಕಮ್ ‖೮೩‖

ದೀಪಿಕೆ—ಗರ್ಭಾಶಯದಲ್ಲಿ ಶಿಶುವಿರುವ ಸ್ಥಿತಿ—(ಸು।ಶಾ।ಅ। ೩)—

ಶಿಶುವು ತಾಯಿಯ ಮುಖಕ್ಕೆ ಎದುರಾಗಿ ಮುಖವನ್ನು ಮಾಡಿಕೊಂಡು ತಲೆಯಮೇಲೆ ಎರಡು ಕೈಗಳನ್ನೂ ಜೋಡಿಸಿಟ್ಟುಕೊಂಡು ದೇಹದ ಅವಯವ ಗಳನ್ನು ಸಂಕೋಚಮಾಡಿಕೊಂಡು ಗಂಡಾದರೆ ಗರ್ಭಾಶಯದ ಬಲಗಡೆಯಲ್ಲೂ ಹೆಣ್ಣಾದರೆ ಎಡಭಾಗದಲ್ಲೂ ನಪುಂಸಕವಾದರೆ ಮಧ್ಯಭಾಗದಲ್ಲೂ ಇರುವಂತೆ ಕಾಣಿಸುತ್ತದೆ ‖೮೩‖

ಮೂಲ—ಸ್ತ್ರೀ ಪುಂನಪುಂಸಕಗರ್ಭಲಕ್ಷಣಾನಿ-(ಸು।ಶಾ।ಅ।೩)—

ಯಸ್ಯಾಃ ದಕ್ಷಿಣೇ ಸ್ತನೇ ಪ್ರಾಕ್ಪಯೋದರ್ಶನಂ ಭವತಿ ದಕ್ಷಿಣಾಕ್ಷಿಮಹತ್ವಂ ಚ ಪೂರ್ವಂ ದಕ್ಷಿಣಸಕ್ಥ್ಯುತ್ಕರ್ಷತಿ ಬಾಹುಳ್ಯಾಚ್ಚ ಪುನ್ನಾಮಧೇಯೇಷು ದೌಹೃದಮಭಿಧ್ಯಾಯತಿ ಸ್ವಪ್ನೇಷು ಚೋಪಲಭತೇ ಪದ್ಮೋತ್ಪಲಕುಮುದಾಮ್ರಾತಕಾನಿ ಪುನ್ನಾಮಾನ್ಯೇವ ಪ್ರಸನ್ನಮುಖವರ್ಣಾ ಚ ಭವತಿ ತಾಂ ವಿದ್ಯಾದಿಯಂ ಪುತ್ರಂ ಜನಯಿಷ್ಯತೀತಿ ತದ್ವಿಪರ್ಯಯೇ ಕನ್ಯಾಮ್ ॥೨೪॥

(ಅ।ಹೃ।)--ಪ್ರಾಗ್ದಕ್ಷಿಣಸ್ತನಸ್ತನ್ಯಾ ಪೂರ್ವಂ ತತ್ಪಾರ್ಶ್ವಚೇಷ್ಟಿನೀ।
ಪುನ್ನಾಮದೌಹೃದಪ್ರಶ್ನರತಾ ಪುಂಸ್ತ್ವಪ್ರದರ್ಶಿನೀ ॥೨೫॥
ಉನ್ನತೇ ದಕ್ಷಿಣೇ ಕುಕ್ಷೌ ಗರ್ಭೇ ಚ ಪರಿಮಣ್ಡಲೇ।
ಪುತ್ರಂ ಸೂತೇನ್ಯಥಾ ಕನ್ಯಾಂ ಯಾ ಚೇಚ್ಛತಿ ನೃಸಂಗತಿಮ್ ॥೨೬॥
ನೃತ್ಯವಾದಿತ್ರಗಾನ್ಧರ್ವಗನ್ಧಮಾಲ್ಯಪ್ರಿಯಾ ಚ ಯಾ।

ದೀಪಿಕೆ—ಗರ್ಭಸ್ಥ ಶಿಶುವು ಸ್ತ್ರೀಪುಂನಪುಂಸಕವೆಂದು ನಿಶ್ಚೈಸಲು ಅನುಕೂಲವಾಗುವ ಚಿಹ್ನೆಗಳು—(ಸು।ಶಾ।ಅ।೩)—

ಗರ್ಭಿಣಿಯ ಬಲಗಡೆಯ ಸ್ತನನಲ್ಲಿ ಮೊದಲು ಹಾಲು ಕಾಣಿಸಿಕೊಂಡು, ಅವಳ ಬಲದಕಣ್ಣು ಅಗಲವಾಗಿದ್ದು, ಬಲಗಾಲನ್ನು ಮೇಲಕ್ಕೆತ್ತಿತ್ತಿ ನಡೆಯುತ್ತಲೂ, ಪುಲ್ಲಿಂಗವಾಚಕಗಳಾದ ತೆಂಗಿನಕಾಯಿ ಮೊದಲಾದ ವಸ್ತುಗಳಲ್ಲಿ ಬಯಕೆಯುಂಟಾದರೆ, ತಾವರೆ ನೈದಿಲೆ ಅಮಟೆ ಮೊದಲಾದ ಪುಂವಾಚಕ ವಸ್ತುಗಳನ್ನು ಸ್ವಪ್ನದಲ್ಲಿ ಕಂಡರೆ, ಮುಖದ ವರ್ಣವು ಸುಂದರವಾಗಿ ಕಂಡುಬಂದರೆ ಈಕೆಯು ಗಂಡುಮಗುವನ್ನು ಹೆರುವಳೆಂದೂ; ಅವುಗಳಿಗೆ ಬೇರೆಯಾದ ಚಿಹ್ನೆಗಳನ್ನು ಸ್ವಪ್ನದಲ್ಲಿ ಕಂಡರೆ ಹೆಣ್ಣುಮಗುವನ್ನು ಹೆರುತ್ತಾಳೆಂದೂ ತಿಳಿಯಬೇಕು.

(ಅ।ಹೃ।ಶಾ।ಅ।೧)—ಹೊಟ್ಟೆಯ ಬಲಭಾಗವು ಉಬ್ಬಿ ಗುಂಡಾಗಿದ್ದು ಮೊದಲು ಬಲಗಡೆ ಸ್ತನದಲ್ಲಿ ಹಾಲು ಕಂಡುಬಂದರೆ, ಬಲಗಡೆ ಅವಯುವಗಳನ್ನು ಎತ್ತಿಹಾಕುತ್ತಾ ನಡೆದರೆ, ಪುಲ್ಲಿಂಗ ವಾಚಕಗಳಾದ ವಸ್ತುಗಳಲ್ಲಿ ಬಯಕೆಯುಂಟಾದರೆ, ಗಂಡು ಮಗುವನ್ನು ಹೆರುತ್ತಾಳೆಂದೂ, ಇವಕ್ಕೆ ವಿರುದ್ಧವಾಗಿ ಪುರುಷ ಸಮಾಗಮವನ್ನು ಅಪೇಕ್ಷಿಸುತ್ತಾ ನಾಟ್ಯ ಓಲಗ ಸಂಗೀತ ಗಂಧಪುಷ್ಪಗಳಲ್ಲಿ ವಿಶ್ವಾಸವುಳ್ಳವಳಾದರೆ ಹೆಣ್ಣುಮಗುವನ್ನು ಹೆರುತ್ತಾಳೆಂದೂ ತಿಳಿಯಬೇಕು ॥೨೪-೨೬॥

ಮೂಲ—ಯಮಳೋತ್ಪತ್ತೌ ತಥಾ ನಪುಂಸಕೋತ್ಪತ್ತೌ ಚಿಹ್ನಾನಿ—(ಸು।ಶಾ।ಅ। ೩)

ಯಸ್ಯಾ ಮಧ್ಯೇ ನಿಮ್ನಂ ದ್ರೋಣೀಪ್ರಭೂತಮುದರಂ ಸಾ ಯುಗ್ಮಂ ಪ್ರಸೂಯತೇ। ಯಸ್ಯಾಃ ಪಾರ್ಶ್ವದ್ವಯಮುನ್ನತಂ ಪುರಸ್ತಾನ್ನಿರ್ಗತಮುದರಂ ಸಾ ನಪುಂಸಕಮಿತಿ ॥೨೭॥

(ಅ।ಹೃ।)—ರೋಮರಾಜೀ ಭವೇನ್ನಿಮ್ನಾ ಯಸ್ಯಾಸ್ಸಾ ಸೂಯತೇ ಯಮೌ ॥೨೮॥

ದೀಪಿಕೆ—ಗರ್ಭಾಶಯದಲ್ಲಿ ಅವಳಿಮಕ್ಕಳಾಗಲೀ ನಪುಂಸಕ ಮಗುವಾಗಲೀ ಇದ್ದರೆ ಕಂಡುಬರುವ ಚಿಹ್ನೆಗಳು—(ಸು।ಶಾ।ಅ। ೩) ಗರ್ಭಿಣಿಯ

ಹೊಟ್ಟೆಯು ಮುಂಭಾಗವು ಎರಡು ದೋಣಿಗಳನ್ನು ಜೋಡಿಸಿದಂತೆಯೂ ಮಧ್ಯ ಭಾಗದಲ್ಲಿ ಹಳ್ಳಬಿದ್ದು ರೋಮಗಳು ಸಾಲಾಗಿ ಬೆಳೆದಿರುವಂತೆ ಕಂಡರೆ ಔಳಿ ಮಕ್ಕಳಿವೆಯೆಂದೂ ಎರಡು ಪಕ್ಕಗಳೂ ಸೇರಿ ಬೋರಲಾಗಿರುವ ಹೆಂಚಿನಾಕಾರದಂತೆ ಕಂಡರೆ ನಪುಂಸಕನೆಂದೂ ತಿಳಿಯಬೇಕು ॥೮೭–೮೮॥

ಮೂಲ—ಧರ್ಮಾಧರ್ಮಪುರಸ್ಸರಗರ್ಭನಿರ್ವೃತ್ತೌ ಹೇತುಃ (ಸು।ಶಾ।ಅ।೩)—

ದೇವತಾಬ್ರಾಹ್ಮಣಪರಾಃ ಶೌಚಾಚಾರಪರಾಶ್ಚ ಯಾಃ ।
ಮಹಾಗುಣಾನ್ ಪ್ರಸೂಯನ್ತೇ ವಿಪರೀತಾಸ್ತು ನಿರ್ಗುಣಾನ್ ॥೮೯॥
ಅಙ್ಗಪ್ರತ್ಯಙ್ಗನಿರ್ವೃತ್ತೌ ಯೇ ಭವನ್ತಿ ಗುಣಾಗುಣಾಃ ।
ತೇ ವೈ ಗರ್ಭಸ್ಯ ವಿಜ್ಞೇಯಾಃ ಧರ್ಮಾಧರ್ಮನಿಮಿತ್ತಜಾಃ ॥೯೦॥

ದೀಪಿಕೆ—ಧರ್ಮಾಽಧರ್ಮಗಳಿಗನುಸಾರವಾಗಿ ಗರ್ಭೋತ್ಪತ್ತಿಯಾಗಲು ಕಾರಣ (ಸು।ಶಾ।ಅ।೩)—

ದೇವತೆಗಳಲ್ಲೂ ಬ್ರಾಹ್ಮಣರಲ್ಲೂ ಭಕ್ತಿಯುಳ್ಳ ಶುಚಿರ್ಭೂತರಾದ ಸದಾಚಾರಪರರಾದ ಸ್ತ್ರೀಯರು ಮಹಾಗುಣಶಾಲಿಗಳಾದ ಮಕ್ಕಳನ್ನೂ ಅದಕ್ಕೆ ವಿಪರೀತಸ್ವಭಾವವುಳ್ಳವರು ನಿರ್ಗುಣರಾದ ಮಕ್ಕಳನ್ನೂ ಹೆರುತ್ತಾರೆ. ಗರ್ಭದಲ್ಲಿರುವ ಶಿಶುವಿನ ಅಙ್ಗಪ್ರತ್ಯಙ್ಗಗಳು ಅದರ ಪೂರ್ವಜನ್ಮದ ಧರ್ಮಾಽಧರ್ಮಗಳಿಗೆ ತಕ್ಕ ಕರ್ಮಫಲಗಳಿಗೆ ಅನುಸಾರವಾಗಿ ಉತ್ಪತ್ತಿಯಾಗುತ್ತವೆಂದು ತಿಳಿಯಬೇಕು ॥೮೯–೯೦॥

ಮೂಲ—ಜನ್ಮಾನ್ತರೇಽಭ್ಯಸ್ತಗುಣಾಃ ಪುನರ್ಭವೇಽಪ್ಯನುವರ್ತನ್ತೇ(ಸು।ಶಾ।ಅ।೩)—

ಕರ್ಮಣಾ ನೋದಿತಂ ಯೇನ ತದಾಪ್ನೋತಿ ಪುನರ್ಭವೇ ।
ಅಭ್ಯಸ್ತಾಃ ಪೂರ್ವದೇಹೇ ಯೇ ತಾನೇವ ಭಜತೇ ಗುಣಾನ್ ॥೯೧॥
ಭಾವಿತಾಃ ಪೂರ್ವದೇಹೇಷು ಸತತಂ ಶಾಸ್ತ್ರಬುದ್ಧಯಃ ।
ಭವನ್ತಿ ಸತ್ವಭೂಯಿಷ್ಠಾಃ ಪೂರ್ವಜಾತಿಸ್ಮರಾ ನರಾಃ ॥೯೨॥
ಆಹಾರಾಚಾರಚೇಷ್ಟಾಭಿರ್ಯಾದೃಶೀಭಿಃ ಸಮನ್ವಿತೌ ।
ಸ್ತ್ರೀಪುಂಸೌ ಸಮುಪೇಯಾತಾಂ ತಯೋಃ ಪುತ್ರೋಽಪಿ ತಾದೃಶಃ ॥೯೩॥

ದೀಪಿಕೆ—ಜನ್ಮಾನ್ತರದಲ್ಲಿ ಅಭ್ಯಾಸಮಾಡಿದ ಗುಣಗಳೇ ಈ ಜನ್ಮದಲ್ಲೂ ಅನುಸರಿಸಿ ಬರುತ್ತವೆ (ಸು।ಶಾ।ಅ।೩)—

ಹಿಂದಿನ ಜನ್ಮದಲ್ಲಿ ಮಾಡಿದ ಶುಭಾಶುಭಕರ್ಮಗಳ ಫಲಾನುಸಾರ ಅಭ್ಯಾಸ ಮಾಡಿದ ಗುಣಗಳೇ ಈ ಜನ್ಮದಲ್ಲೂ ಅನುಸರಿಸಿ ಬರುತ್ತವೆ. ಜನ್ಮಾನ್ತರಗಳಲ್ಲಿ ಶಾಸ್ತ್ರಜ್ಞಾನವನ್ನು ಹೊಂದಿ ಸತ್ವಗುಣಾಧಿಕ್ಯವುಳ್ಳ ಪುರುಷರು ಈ ಜನ್ಮದಲ್ಲೂ ಪೂರ್ವಜಾತಿಸ್ಮರಣೆಯುಳ್ಳವರಾಗುತ್ತಾರೆ. ಸ್ತ್ರೀಪುರುಷರು ಯಾವ ವಿಧಗಳಾದ ಆಹಾರ, ಆಚಾರಪದ್ಧತಿ, ನಿತ್ಯಕೆಲಸಗಳಲ್ಲಿ ನಿರತರಾಗಿದ್ದು ಸಂಭೋಗಮಾಡುತ್ತಾರೆಯೋ ಅವರ ಮಕ್ಕಳೂ ಅದೇ ವಿಧಗಳಾದ ಆಹಾರಾಚಾರಾದಿಗಳನ್ನೇ ಅನುಸರಿಸುತ್ತಾರೆ ॥ ೯೧–೯೩ ॥

ಮೂಲ—ಗರ್ಭವರ್ಣವಿಚಾರಃ (ಸು। ಶಾ। ಅ। ೩)—

ತತ್ರ ತೇಜೋಧಾತುಃ ಸರ್ವವರ್ಣಾನಾಂ ಪ್ರಭವಃ । ಸ ಯದಾ ಗರ್ಭೋತ್ಪತ್ತಾವಬ್ಧಾತುಪ್ರಾಯೋ ಭವತಿ ತದಾ ಗರ್ಭಂ ಗೌರಂ ಕರೋತಿ। ಪೃಥಿವೀಧಾತುಪ್ರಾಯಃ ಕೃಷ್ಣಶ್ಯಾಮಂ । ತೋಯಾಕಾಶಧಾತುಪ್ರಾಯಃ ಗೌರಶ್ಯಾಮಂ। ಸಮಸರ್ವಧಾತುಪ್ರಾಯಃ ಶ್ಯಾಮವರ್ಣಕರಃ । ಯಾದೃಗ್ವರ್ಣಮಾಹಾರಮುಪಸೇವತೇ ಗರ್ಭಿಣೀ ತಾದೃಗ್ವರ್ಣಪ್ರಸವಾ ಭವನ್ತೀತ್ಯೇಕೇ ಭಾಷನ್ತೇ ॥೯೪॥

ದೀಪಿಕೆ—ಗರ್ಭಶರೀರಕ್ಕೆ ಬಣ್ಣವುಂಟಾಗುವ ವಿಚಾರ (ಸು।ಅ।ಶಾ।ಅ।೩)——

ತೇಜೋಧಾತುವು ಶರೀರದಲ್ಲಿ ಸಕಲ ಬಣ್ಣಗಳ ಉತ್ಪತ್ತಿಗೂ ಕಾರಣವಾದದ್ದು. ಗರ್ಭೋತ್ಪತ್ತಿಕಾಲದಲ್ಲಿ ತೇಜೋಭೂತದೊಡನೆ ಅಧಿಕಾಂಶದಿಂದ ಅಬ್ಧಾತುವು ಮಿಶ್ರವಾದರೆ ಮಗುವಿನ ಶರೀರದ ಬಣ್ಣವು ಅರಿಶಿನ ವರ್ಣದ್ದಾಗಿಯೂ, ಪೃಥಿವೀ ಭೂತವು ಅಧಿಕಾಂಶದಿಂದ ಕೂಡಿದ್ದರೆ ಕಪ್ಪು ಅಥವಾ ಶ್ಯಾಮ ಬಣ್ಣವುಳ್ಳದಾಗಿಯೂ, ಅಪ್ಪು ಆಕಾಶ ಭೂತಗಳೆರಡೂ ಅಧಿಕವಾಗಿ ಸೇರಿದರೆ ಹಳದಿ ಮತ್ತು ಕಪ್ಪು ಬಣ್ಣಗಳೆರಡರ ಮಿಶ್ರಬಣ್ಣವುಳ್ಳದ್ದಾಗಿಯೂ, ಸಕಲ ಭೂತಗಳೂ ಸಮಪ್ರಮಾಣದಿಂದ ಮಿಶ್ರವಾದರೆ ಶ್ಯಾಮಬಣ್ಣದ ಮಗುವೂ ಹುಟ್ಟುತ್ತದೆ. ಗರ್ಭಿಣಿಯು ಸೇವಿಸುವ ಆಹಾರ ಪದಾರ್ಥಗಳ ಬಣ್ಣಕ್ಕೆ ಸರಿಯಾಗಿ ಜನಿಸುವ ಮಗುವಿನ ದೇಹಕ್ಕೆ ಬಣ್ಣವುಂಟಾಗುತ್ತದೆಂದು ಕೆಲವು ವೈದ್ಯರ ಮತವು ॥೯೪॥

ಪಞ್ಚಮೋಽಧ್ಯಾಯಃ

ವಿಕೃತ ಗರ್ಭೋತ್ಪತ್ತಿ ವಿಚಾರಃ

ಮೂಲ—ಯಮಳೋತ್ಪತ್ತೌ(ಸು। ಶಾ। ಅ। ೩)—

ಬೀಜೇಽನ್ತರ್ವಾಯುನಾ ಭಿನ್ನೇ ದ್ವೌ ಜೀವೌ ಕುಕ್ಷಿಮಾಗತೌ ।
ಯಮಾವಿತ್ಯಭಿಧೀಯೇತೇ ಧರ್ಮೇತರಪುರಸ್ಸರೌ ||೧||

(ಚ। ಶಾ। ಅ। ೩)—

ಶುಕ್ರಾಧಿಕಂ ದ್ವೈಧಮುಪೈತಿ ಬೀಜಂ ಯಸ್ಯಾಃ ಸುತೌ ಸಾ ಸಹಿತೌ ಪ್ರಸೂತೇ ।
ರಕ್ತಾಧಿಕಂ ವಾ ಯದಿ ಭೇದಮೇತಿ ದ್ವಿಧಾ ಸುತೇ ಸಾ ಸಹಿತೇ ಪ್ರಸೂತೇ||೨||
ಕರ್ಮಾಂಶಕತ್ವಾದ್ವಿಷಮಾಂಶಭೇಧಾಚ್ಛುಕ್ರಾಸೃಜೌ ವೃದ್ಧಿಮುಪೈತಿ ಕುಕ್ಷೌ।
ಏಕೋಽಧಿಕೋ ನ್ಯೂನತರೋ ದ್ವಿತೀಯ ಏವಂ ಯಮೇಽಪ್ಯಭ್ಯಧಿಕೋ ವಿಶೇಷಃ ||೩||

೫ನೆಯ ಅಧ್ಯಾಯ

ವಿಕಾರವಾದ ಗರ್ಭದ ಉತ್ಪತ್ತಿ ವಿಚಾರ

ದೀಪಿಕೆ—ಔಳಿ ಮಕ್ಕಳು ಹುಟ್ಟುವುದು(ಸು। ಶಾ। ಅ। ೩)—

ಸ್ತ್ರೀಪುರುಷರ ಶುಕ್ರಶೋಣಿತಗಳು ಗರ್ಭಾಶಯುವನ್ನು ಸೇರಿದಾಗ ಅಪಾನವಾಯುವು ಅವನ್ನು ಅರ್ಧಮಾಡಿದರೆ ಆಕೂಡಲೇ ಇಬ್ಬರು ಜೀವಾತ್ಮರು ತಮ್ಮ ಹಿಂದಿನ ಜನ್ಮದ ಕರ್ಮಫಲಾನುಸಾರವಾಗಿ ಮೇಲೆ ಹೇಳಿದ ಅರ್ಧಮಾಡಿದ ಶುಕ್ರಶೋಣಿತಗಳೊಡನೆ ಸೇರಿ ಗರ್ಭಾಶಯಕ್ಕೆ ಹೋಗಿ ನಿಂತು ವೃದ್ಧಿಯಾದರೆ ಎರಡು ಶಿಶುಗಳು ಹುಟ್ಟುತ್ತವೆ ॥೧॥

ಅಧರ್ಮವು ಹೆಚ್ಚಿ ಔಳಿ ಮಕ್ಕಳು ಹುಟ್ಟುತ್ತಾರೆಂದು ಶ್ರುತಿಯಲ್ಲಿ ಉಕ್ತವಾಗಿರುತ್ತದೆಯಾಗಿ ಇವರು ಜನನವಾದ ಮೇಲೆ ಪ್ರಾಯಶ್ಚಿತ್ತವನ್ನು ಮಾಡಬೇಕೆಂದು ಆಚಾರ್ಯಗಯಿಾ ಹೇಳುತ್ತಾರೆ. ಶುಕ್ರವು ಅಧಿಕವಾಗಿ ಸೇರಿರುವಾಗ ವಿಭಾಗವುಂಟಾದರೆ ಇಬ್ಬರೂ ಗಂಡು ಮಕ್ಕಳಾಗುತ್ತಾರೆಂದೂ, ರಜಸ್ಸೇ ಅಧಿಕ ಪ್ರಮಾಣದಿಂದ ಮಿಶ್ರವಾದಾಗ ವಿಭಾಗವಾದರೆ ಇಬ್ಬರೂ ಹೆಣ್ಣು ಮಕ್ಕಳೇ ಆಗುತ್ತಾರೆಂದೂ ತಿಳಿಯಬೇಕು ॥೨–೩॥

ಮೂಲ—ಅನೇಕೋತ್ಪತ್ತೌ (ಚ। ಶಾ।)—

ಭಿನತ್ತಿ ಯಾವದ್ಬಹುಧಾ ಪ್ರಪನ್ನಃ ಶುಕ್ರಾರ್ತವಂ ವಾಯುರತಿಪ್ರವೃದ್ಧಃ।
ತಾವನ್ತ್ಯಪತ್ಯಾನಿ ಯಥಾವಿಭಾಗಂ ಕರ್ಮಾತ್ಮಕಾನ್ಯಸ್ವವಶಾತ್ ಪ್ರಸೂತೇ ॥೪॥

ದೀಪಿಕೆ—

ಶುಕ್ರಶೋಣಿತಗಳ ಮಿಶ್ರಣದಿಂದಾಗುವ ಗರ್ಭಪಿಂಡವನ್ನು ಪ್ರಕುಪಿತವಾದ ವಾತವು ಅನೇಕ ಭಾಗಗಳಾಗಿ ವಿಭಾಗಿಸಲ್ಪಟ್ಟಾಗ ಅನೇಕ ಜೀವರು ತಮ್ಮ ತಮ್ಮ ಪೂರ್ವಕರ್ಮಾನುಸಾರವಾಗಿ ಪ್ರವೇಶಮಾಡಿ ವೃದ್ಧಿಹೊಂದಿದರೆ ಅನೇಕ ಮಕ್ಕಳು ಹುಟ್ಟುತ್ತಾರೆ.

ಮೂಲ—ವಿಕೃತೋತ್ಪತ್ತೌ ಹೇತುಃ (ಸು।ಶಾ।ಅ।೩)—

ಮಾತಾಪಿತ್ರೋಸ್ತು ನಾಸ್ತಿಕ್ಯಾದಶುಭೈಶ್ಚ ಪುರಾಕೃತೈಃ।
ವಾತಾದೀನಾಂ ಪ್ರಕೋಪೇನ ಗರ್ಭೋ ವಿಕೃತಿಮಾಪ್ನುಯಾತ್ ॥೫॥

(ಚ।ಶಾ।ಅ।೩)—

ಯದಾ ಸ್ತ್ರಿಯಾಃ ದೋಷಪ್ರಕೋಪಣೋಕ್ತಾನ್ಯಾಸೇವಮಾನಾಯಾಃ ದೋಷಾಃ ಪ್ರಕುಪಿತಾಶ್ಶರೀರಮುಪಸರ್ಪನ್ತಃ ಶೋಣಿತಗರ್ಭಾಶಯಾವುಪಪದ್ಯನ್ತೇ ನ ತು ಕಾರ್ತ್ಸ್ನ್ಯೇನ ಶೋಣಿತಗರ್ಭಾಶಯೌ ದೂಷಯನ್ತಿ ತದೇಯಂ ಗರ್ಭಂ ಲಭತೇ ಸ್ತ್ರೀ ಯದಾ ತಸ್ಯ ಗರ್ಭಸ್ಯ ಮಾತೃಜಾದೀನಾಮವಯವಾನಾಮನ್ಯತಮೋಽವಯವೋ ವಿಕೃತಿಮಾಪದ್ಯತೇ ಏಕೋಽಥವಾನೇಕೇ, ಯಸ್ಯ ಯಸ್ಯ ಹ್ಯವಯವಸ್ಯ ಬೀಜೇ ಬೀಜಭಾಗೇ ವಾ ದೋಷಾಃ ಪ್ರಕೋಪಮಾಪದ್ಯನ್ತೇ ತದಾ ತಂ ತಮವಯವಂ ವಿಕೃತಿರಾವಿಶತಿ ॥೬॥

ಯದಾ ಹ್ಯಸ್ಯಾಃ ಶೋಣಿತೇ ಗರ್ಭಾಶಯಬೀಜಭಾಗಃ ಪ್ರದೋಷಮಾಪದ್ಯತೇ ತದಾ ವನ್ಧ್ಯಾಂ ಜನಯತಿ। ಯದಾ ಪುನರಸ್ಯಾಃ ಶೋಣಿತೇ ಗರ್ಭಾಶಯಬೀಜಭಾಗಾವಯವಃ ಪ್ರದೋಷಮಾಪದ್ಯತೇ ತದಾ ಪೂತಿಪ್ರಜಾಂ ಜನಯತಿ। ಯದಾ

ತ್ವಸ್ಯಾಶ್ಶೋಣಿತೇ ಗರ್ಭಾಶಯಬೀಜಭಾಗಾವಯವಃ ಸ್ತ್ರೀಕರಾಣಾಞ್ಚ ಶರೀರ-ಬೀಜಭಾಗಾನಾಮೇಕದೇಶಃ ಪ್ರದೋಷಮಾಪದ್ಯತೇ ತದಾ ಸ್ತ್ರ್ಯಾಕೃತಿ-ಭೂಯಿಷ್ಠಾಮಸ್ತ್ರಿಯಂ ವಾರ್ತಾನಾಮ್ನೀಂ (ರಾನ್ಡ್ರಾಂ) ಜನಯತಿ। ತಾಂ ಸ್ತ್ರೀ-ವ್ಯಾಪದಮಾಚಕ್ಷತೇ ॥೭॥

ಏವಮೇವ ಪುರುಷಸ್ಯ ಯದಾ ಬೀಜೇ ಬೀಜಭಾಗಃ ಪ್ರದೋಷಮಾಪದ್ಯತೇ ತದಾ ವನ್ಧ್ಯಂ ಜನಯತಿ। ಯದಾ ಪುನರಸ್ಯ ಬೀಜೇ ಬೀಜಭಾಗಾವಯವಃ ಪ್ರದೋಷಮಾಪದ್ಯತೇ ತದಾ ಪೂತಿಪ್ರಜಾಂ ಜನಯತಿ। ಯದಾ ತಸ್ಯ ಬೀಜೇ ಬೀಜಭಾಗವಾಯವಃ ಪುರುಷಕರಾಣಾಂ ಚ ಶರೀರಬೀಜಭಾಗಾನಾಮೇಕದೇಶಃ ಪ್ರದೋಷಮಾಪದ್ಯತೇ ತದಾ ಪುರುಷಾಕೃತಿಭೂಯಿಷ್ಠಮಪುರುಷಂ ತೃಣಪೂಲಿಕಂ ನಾಮ ಜನಯತಿ। ತಾಂ ಪುರುಷವ್ಯಾಪದಮಾಚಕ್ಷತೇ ॥೮॥

ದೀಪಿಕೆ—ವಿಕಾರವಾದಮಕ್ಕಳು ಹುಟ್ಟುವುದಕ್ಕೆ ಕಾರಣ (ಚ।ಶಾ।ಅ। ೩)—

ದೋಷವೃದ್ಧಿಮಾಡುವ ಆಹಾರವಿಹಾರಗಳನ್ನು ಸೇವಿಸುವ ಸ್ತ್ರೀಯಳ ರಜಸ್ಸನ್ನೂ ಗರ್ಭಾಶಯವನ್ನೂ ದುಷ್ಟವಾದ ದೋಷಗಳು ಒಂದು ಭಾಗ ವನ್ನಾಗಲೀ ಅಥವಾ ಪೂರ್ತಿಯಾಗಿಯಾಗಲೀ ಕೆಡಿಸಿದರೆ ಆಗ ಆ ಸ್ತ್ರೀಯು ಗರ್ಭಧರಿಸಿದರೆ ಆ ಗರ್ಭದ ಮಾತೃಜಾದ್ಯವಯವಗಳ ಪೈಕಿ ಒಂದಾಗಲೀ ಅನೇಕ ಅವಯುವಗಳಾಗಲೀ ವಿಕಾರಹೊಂದಿದರೆ ಅಂಥಾ ಅವಯುವವನ್ನುಂಟುಮಾಡುವ ಗರ್ಭಬೀಜವಾಗಲೀ ಅಥವಾ ಬೀಜದ ಒಂದು ಭಾಗವಾಗಲೀ ದುಷ್ಟದೋಷ ಗಳಿಂದ ಕೆಡಿಸಲ್ಪಟ್ಟರೆ ಆಯಾಯ ಅವಯುವಗಳು ವಿಕಾರಗಳಾಗುತ್ತವೆ ॥೬॥

ಸ್ತ್ರೀಯ:ಳ ಆರ್ತವಬೀಜ (ಯೌವತ) ದಲ್ಲಿ ಗರ್ಭಾಶಯುವನ್ನು ಸೂಚಿ ಸುವ ಬೀಜಭಾಗವು ದುಷ್ಟವಾಗಿರುವಾಗ ಗರ್ಭಧಾರಣೆಯಾದರೆ ಆ ಹೆಣ್ಣು ಮಗುವು ವನ್ಧ್ಯ (ಬಂಜೆ) ಯಾಗುತ್ತಾಳೆ; ಗರ್ಭಾಶಯುದ ಒಂದು ಭಾಗವನ್ನು ನಿರ್ದೇಶಿಸುವ ಆರ್ತವಬೀಜಭಾಗವು ದುಷ್ಟವಾದರೆ ಪೂತಿಪ್ರಜಾ ಅಂದರೆ ದುರ್ಗಂಧವುಳ್ಳ ಯೋನಿಯಿಂದ ಕೂಡಿದವಳು ಹುಟ್ಟುತ್ತಾಳೆ. ಹೆಣ್ಣುಮಗುವನ್ನು ನಿರ್ದೇಶಮಾಡುವ ಆರ್ತವಬೀಜದ ಸ್ವಲ್ಪಭಾಗಮಾತ್ರ ದುಷ್ಟವಾಗಿರುವಾಗ ಗರ್ಭಧಾರಣೆಯಾದರೆ ಹೆಚ್ಚಾಗಿ ಸ್ತ್ರೀಲಕ್ಷಣಗಳುಳ್ಳ ಆದರೆ ಸ್ತ್ರೀಯಲ್ಲದ ರಾನ್ಡ್ರಾ (ರಣ್ಡಿ) ಎಂಬ ಮಗು ಹುಟ್ಟುತ್ತದೆ. ಆಕಾರದಲ್ಲಿ ಹೆಂಗಸೆಂದು ಕಂಡರೂ ಪುರುಷ ನೊಡನೆ ರಮಿಸುವುದಕ್ಕೂ ಮಕ್ಕಳನ್ನು ಹೆರುವುದಕ್ಕೂ ಯೋಗ್ಯವಾದ ಅಂಗ ಗಳನ್ನು ಹೊಂದಿರುವುದಿಲ್ಲ. ಇದಕ್ಕೆ ಸ್ತ್ರೀ–ವ್ಯಾಪತ್ತೆನ್ನುತ್ತಾರೆ ॥೭॥

ಇದೇ ರೀತಿಯಲ್ಲಿ ಪುರುಷನಿಗೆ ಶುಕ್ರಬೀಜ (ಪೌರುಷ)ವು ಅಥವಾ ಬೀಜ ಭಾಗವು ದುಷ್ಟವಾಗಿದ್ದು ಗರ್ಭಧಾರಣೆಯಾದರೆ ವನ್ಧ್ಯ (ಷಣ್ಢ)ನು ಹುಟ್ಟು ತ್ತಾನೆ. ಪುಂಬೀಜದಲ್ಲಿ ಬೀಜವನ್ನು ನಿರ್ಧರಿಸುವ ಒಂದು ಭಾಗವು ಕೆಟ್ಟು ಹೋಗಿ ದ್ದಾಗ ಗರ್ಭಧಾರಣೆಯಾದರೆ ಪೂತಿಪ್ರಜೆಯು ಹುಟ್ಟುತ್ತಾನೆ. ಪುರುಷಬೀಜ ದಲ್ಲಿ ಪುರುಷಶಿಶುವನ್ನು ಉತ್ಪತಿಮಾಡತಕ್ಕ ಬೀಜಭಾಗವು ದೋಷದಿಂದ ಕೆಡಿಸಲ್ಪಟ್ಟಾಗ ಗರ್ಭಧಾರಣೆಯಾದರೆ ಪುರುಷನ ಆಕಾರವುಳ್ಳದ್ದಾದರೂ ಗಂಡ

ಸಲ್ಲದ ತೃಣಪೂಲಿಕನೆಂಬ ಷಣ್ಢನು ಹುಟ್ಟುತ್ತಾನೆ. ಇದನ್ನು ಪುರುಷವ್ಯಾಪತ್ತೆನ್ನುವರು ॥೮॥

ಮೂಲ—

ನಪುಂಸಕಷಣ್ಢಯೋರ್ಭೇದಸ್ತದುತ್ಪತ್ತಿಕಾರಣಾನಿ ಚ—

(ಸು।ಶಾ।ಅ।೩) ಆಸೇಕ್ಯಃ—

ಪಿತ್ರೋರತ್ಯಲ್ಪಬೀಜತ್ವಾದಾಸೇಕ್ಯಃ ಪುರುಷೋ ಭವೇತ್।
ಸ ಶುಕ್ರಂ ಪ್ರಾಶ್ಯ ಲಭತೇ ಧ್ವಜೋಚ್ಛ್ರಾಯಮಸಂಶಯಮ್ ॥೯॥

ಸೌಗನ್ಧಿಕಃ—

ಯಃ ಪೂತಿಯೋನೌ ಜಾಯೇತ ಸ ಸೌಗನ್ಧಿಕಸಂಜ್ಞಿತಃ।
ಸ ಯೋನಿಶೇಫಸೋರ್ಗನ್ಧಮಾಘ್ರಾಯ ಲಭತೇ ಬಲಮ್ ॥೧೦॥

ಕುಮ್ಭೀಕಃ—

ಸ್ವೇ ಗುದೇಽಬ್ರಹ್ಮಚರ್ಯಾದ್ಯಃ ಸ್ತ್ರೀಷು ಪುಂವತ್ಪ್ರವರ್ತತೇ।
ಕುಮ್ಭೀಕಃ ಸ ಚ ವಿಜ್ಞೇಯ ಈರ್ಷ್ಯಕಂ ಶೃಣು ಚಾಪರಮ್ ॥೧೧॥

ಈರ್ಷ್ಯಕಃ—

ದೃಷ್ಟ್ವಾ ವ್ಯವಾಯಮನ್ಯೇಷಾಂ ವ್ಯವಾಯೇ ಯಃ ಪ್ರವರ್ತತೇ।
ಈರ್ಷ್ಯಕಃ ಸ ಚ ವಿಜ್ಞೇಯಃ ಷಣ್ಢಕಂ ಶೃಣು ಪಂಚಮಮ್ ॥೧೨॥

ಷಣ್ಢಃ—

ಯೋ ಭಾರ್ಯಾಯಾಂ ಋತೌ ಮೋಹಾದಙ್ಗನೇವ ಪ್ರವರ್ತತೇ।
ತತಃ ಸ್ತ್ರೀಚೇಷ್ಟಿತಾಕಾರೋ ಜಾಯತೇ ಷಣ್ಢಸಂಜ್ಞಿತಃ ॥೧೩॥
ಋತೌ ಪುರುಷವದ್ವಾಪಿ ಪ್ರವರ್ತೇತಾಙ್ಗನಾ ಯದಿ।
ತತ್ರ ಕನ್ಯಾ ಯದಿ ಭವೇತ್ಸಾ ಭವೇನ್ನರಚೇಷ್ಟಿತಾ ॥೧೪॥
ಆಸೇಕ್ಯಶ್ಚ ಸುಗನ್ಧೀ ಚ ಕುಮ್ಭೀಕಶ್ಚೇರ್ಷ್ಯಕಸ್ತಥಾ।
ಸರೇತಸಸ್ತ್ವಮೀ ಜ್ಞೇಯಾ ಅಶುಕ್ರಃ ಷಣ್ಢಸಂಜ್ಞಿತಃ ॥೧೫॥
ಅನಯಾ ವಿಪ್ರಕೃತ್ಯಾ ತು ತೇಷಾಂ ಶುಕ್ರವಹಾಃ ಸಿರಾಃ।
ಹರ್ಷಾತ್ ಸ್ಫುಟತ್ವಮಾಯಾನ್ತಿ ಧ್ವಜೋಚ್ಛ್ರಾಯಸ್ತತೋ ಭವೇತ್ ॥೧೬॥
ಯದಾ ನಾರ್ಯಾವುಪೇಯಾತಾಂ ವೃಷಸ್ಯನ್ತ್ಯೌ ಕಥಂಚನ।
ಮುಂಚನ್ತ್ಯೌ ಶುಕ್ರಮನ್ಯೋನ್ಯಮನಸ್ಥಿಸ್ತತ್ರ ಜಾಯತೇ ॥೧೭॥
ಋತುಸ್ನಾತಾ ತು ಯಾ ನಾರೀ ಸ್ವಪ್ನೇ ಮೈಥುನಮಾವಹೇತ್।
ಆರ್ತವಂ ವಾಯುರಾದಾಯ ಕುಕ್ಷೌ ಗರ್ಭಂ ಕರೋತಿ ಹಿ ॥೧೮॥
ಮಾಸಿ ಮಾಸಿ ವಿವರ್ಧೇತ ಗರ್ಭಿಣ್ಯಾ ಗರ್ಭಲಕ್ಷಣಮ್।
ಕಲಲಂ ಜಾಯತೇ ತಸ್ಯಾ ವರ್ಜಿತಂ ಪೈತೃಕೈರ್ಗುಣೈಃ ॥೧೯॥
ಸರ್ಪವೃಶ್ಚಿಕಕೂಷ್ಮಾಣ್ಡವಿಕೃತಾಕೃತಯಶ್ಚ ಯೇ।
ಗರ್ಭಾಸ್ತ್ವೇತೇ ಸ್ತ್ರಿಯಾಶ್ಚೈವ ಜ್ಞೇಯಾ ಪಾಪಕೃತಾ ಭೃಶಮ್। ॥೨೦॥
ಗರ್ಭೋ ವಾತಪ್ರಕೋಪೇನ ದೌಹೃದೇ ಚಾವಮಾನಿತೇ।
ಭವೇತ್ಕುಬ್ಜಃ ಕುಣಿಃ ಪಙ್ಗುರ್ಮೂಕೋ ಮಿಣ್ಮಿಣ ಏವ ವಾ ॥೨೧॥

ದೀಪಿಕಾ (ಸು।ಶಾ।ಅ।೩)—ನಪುಂಸಕರಿಗೂ ಷಣ್ಢರಿಗೂ ಇರುವ ಭೇದಗಳು ಮತ್ತು ಅವರ ಉತ್ಪತ್ತಿಗೆ ಕಾರಣಗಳು—

ಆಸೇಕ್ಯ ಅಥವಾ ಮುಖಯೋನಿ--ಸ್ತ್ರೀಪುರುಷರ ಶುಕ್ರಾರ್ತವಗಳು ಅತಿಸ್ವಲ್ಪಪ್ರಮಾಣದಿಂದ ಬೆರೆದು ಹುಟ್ಟುವವನಿಗೆ ಆಸೇಕ್ಯ ಅಥವಾ ಮುಖಯೋನಿ ಯೆಂದು ಹೆಸರು. ಇವನು ಪರಪುರುಷನ ಶುಕ್ರವನ್ನು ಕುಡಿದಮೇಲೆ ಧ್ವಜೋತ್ಥಾಪನೆಯನ್ನು ಪಡೆಯುತ್ತಾನೆ ॥೯॥

ಸುಗನ್ಧಿ ಅಥವಾ ನಾಸಾಯೋನಿ—ದುರ್ಗನ್ಧವಾದ ಯೋನಿಯಲ್ಲಿ ಹುಟ್ಟಿದವನಿಗೆ ಸೌಗನ್ಧಿಕನೆಂದು ಹೆಸರು. ಇವನಿಗೆ ಪರರ ಯೋನಿಶಿಶ್ನಗಳನ್ನು ಮೂಸಿನೋಡಿ ಅವುಗಳ ವಾಸನೆಯನ್ನು ಅನುಭವಿಸಿದಮೇಲೆ ಸ್ತ್ರೀಯೊಡನೆ ಭೋಗಿಸಲು ಬಲವುಂಟಾಗುತ್ತದೆ ॥೧೦॥

ಕುಮ್ಭಿಕ ಅಥವಾ ಗುದಯೋನಿ--ತನ್ನ ದೇಹದಲ್ಲಿ ಶುಕ್ರವು ಅಲ್ಪ ಪ್ರಮಾಣದಲ್ಲಿರುವ ಕಾರಣ ತನ್ನ ಗುದದಲ್ಲಿ ಇತರ ಪುರುಷನಿಂದ ಮೈಥುನವನ್ನು ಮಾಡಿಸಿಕೊಂಡರೆ (ಮತಾಂತರದವರು ಸ್ತ್ರೀಯನ್ನು ಬೋರಲಾಗಿ ಮುಖಕೆಳಗೆ ಮಾಡಿ ಮಲಗಿಸಿ ಅವಳ ಗುದದ್ವಾರದಲ್ಲಿ ತನ್ನ ಶಿಶ್ನವನ್ನು ಸಡಿಲಿಸಿಟ್ಟು ಮಲಗಿರಲು) ಸ್ವಲ್ಪಕಾಲದಮೇಲೆ ಶಿಶ್ನವು ಮೇಲಕ್ಕೆ ಏಳುತ್ತದೆ. ಅನಂತರ ತನ್ನ ಸ್ತ್ರೀಯನ್ನು ಕ್ರಮವಾಗಿ ರಮಿಸಬಹುದು. ಇವನಿಗೆ ಗುದಯೋನಿಯೆಂದು ಹೆಸರು. "ಗಯೀ" ಎಂಬ ವೈದ್ಯಾಚಾರ್ಯನು ಕುಮ್ಭಿಕನೆಂಬ ನಪುಂಸಕ ಭೇದದ ಉತ್ಪತ್ತಿಕಾರಣವನ್ನು ಈ ರೀತಿ ವಿವರಿಸುತ್ತಾನೆ:—ಶ್ಲೇಷ್ಮದುಷ್ಟಶುಕ್ರವುಳ್ಳ ಪುರುಷನು ಅರಜಸ್ಕಳನ್ನು ರಮಿಸಿದರೆ ಈತನಿಗೆ ಅನ್ಯಸ್ತ್ರೀಯಲ್ಲಿ ಇಚ್ಛೆಯಾಗುತ್ತದೆ. ಈ ಸಮಾಗಮದಿಂದ ಹುಟ್ಟಿದವನಿಗೆ ಕುಮ್ಭಿಕ ಅಥವಾ ಗುದ ಯೋನಿಯೆಂದು ಹೆಸರು ॥೧೧॥

ಈರ್ಷ್ಯಕನು—ಅನ್ಯಸ್ತ್ರೀಪುರುಷರು ರತಿಕ್ರೀಡೆಯಲ್ಲಿರುವುದನ್ನು ನೋಡಿ ಧ್ವಜೋತ್ಥಾನವಾದರೆ ಆಗ ಸ್ವಸ್ತ್ರೀಯನ್ನು ರಮಿಸಲು ಪ್ರಯತ್ನಿಸುವ ಪುರುಷನಿಗೆ ಈರ್ಷ್ಯಕ ಅಥವಾ ದೃಗ್ಯೋನಿಯೆಂದು ಹೆಸರು ॥೧೨॥

ಮೇಲೆ ವಿವರಿಸಿರುವ ಆಸೇಕ್ಯ ಮೊದಲಾದ ನಾಲ್ಕುವಿಧ ನಪುಂಸಕರೂ ಸ್ವಲ್ಪಪ್ರಮಾಣದಲ್ಲಿ ಶುಕ್ರಧಾತುವುಳ್ಳವರಾಗಿರುತ್ತಾರೆ. ಮೇಲೆ ಹೇಳಿದ ವಿರುದ್ಧಾಚರಣೆಗಳಿಂದ ಬೆದೆಯುಂಟಾಗಿ (ಶುಕ್ರಧಾತುವಿಗೆ ಶಕ್ತಿ ಬಂದು) ಧ್ವಜೋತ್ಥಾಪನೆಯಾಗುತ್ತೆಯಾಗಿ ಸ್ತ್ರೀರತಿಮಾಡಲು ಶಕ್ತರಾಗುತ್ತಾರೆ. ಆದರೆ ಷಣ್ಡರಿಗೆ ಶುಕ್ರಧಾತುವಿರುವುದಿಲ್ಲ. ಯಾವ ಉಪಾಯದಿಂದಲೂ ಧ್ವಜೋತ್ಥಾಪನೆಯುಂಟಾಗುವುದಿಲ್ಲ ॥೧೩॥

ನರಷಣ್ಡ—ಯಾವ ಪುರುಷನು ಕಾಮಾನ್ಧನಾಗಿ ಕೆಳಗೆ ಮಲಗಿ ತನ್ನ ಮೇಲೆ ಸ್ತ್ರೀಯನ್ನು ಮಲಗಿಸಿಕೊಂಡು ಬಲವಂತವಾಗಿ ರತಿಕ್ರಿಯೆಯನ್ನು ಮಾಡುತ್ತಾನೋ ಅವರ ಆ ಸಂಭೋಗದಿಂದ ಗರ್ಭಧಾರಣೆಯಾದರೆ ಸ್ತ್ರೀ ಚೇಷ್ಟೆಯುಳ್ಳ ಪುರುಷನು ಹುಟ್ಟುತ್ತಾನೆ. ಇವನಿಗೆ ನರಷಣ್ಡನೆಂದು ಹೆಸರು ॥೧೪॥

ನಾರೀಷಣ್ಡ—ಅದೇ ರೀತಿಯಲ್ಲಿ ಕಾಮುಕಳಾದ ಸ್ತ್ರೀಯು ಬಲವಂತದಿಂದ ತನ್ನ ಪತಿಯನ್ನು ಕೆಳಗೆ ಮಲಗಿಸಿ ಅವನ ಮೇಲೆ ತಾನು ಮಲಗಿ ರಮಿಸಿ ಗರ್ಭ

ಧಾರಣೆಯಾದರೆ ಪುರುಷಚೇಷ್ಟೆಯುಳ್ಳ ಸ್ತ್ರೀಯು ಹುಟ್ಟುತ್ತಾಳೆ. ಇವಳಿಗೆ ನಾರೀಷಣ್ಡಳೆಂದು ಹೆಸರು ॥೧೫॥

ಕಾಮುಕಿಯರಾದ ಇಬ್ಬರು ಹೆಂಗಸರು ಸ್ತ್ರೀಪುರುಷರಂತೆ ರತಿಕ್ರೀಡೆಯಲ್ಲಿ ತೊಡಗಿ ಒಂದುವೇಳೆ ಕಷ್ಟಪಟ್ಟು ಪರಸ್ಪರ ಶುಕ್ರವನ್ನು ಸ್ರವಿಸಿ ಯೋನಿಯ ಮೂಲಕ ಯಾವಳೊಬ್ಬಳ ಗರ್ಭಾಶಯಕ್ಕೆ ನುಗ್ಗುವಂತೆ ಮಾಡುತ್ತಾಳೋ ಆ ರೀತಿ ಮಿಶ್ರವಾದ ಸ್ತ್ರೀಶುಕ್ರವನ್ನು ವಾಯುವು ಗರ್ಭಾಶಯದೊಳಕ್ಕೆ ತಳ್ಳಿ ಗರ್ಭಧಾರಣೆಯಾದರೆ (ಅಸ್ಥಿ) ಪಿತೃಭಾಗವಿಲ್ಲದ ಆ ಸ್ತ್ರೀಯರ ಶುಕ್ರಾರ್ತವಗಳು ಮಿಶ್ರವಾಗಿ ಗರ್ಭಲಕ್ಷಣದಂತೆ ತಿಂಗಳುತಿಂಗಳಿಗೂ ವೃದ್ಧಿಹೊಂದಿ ಮಾಂಸದ ಮುದ್ದೆಯಾಗಿ ಪ್ರಸವವಾಗುತ್ತವೆ ॥೧೬–೧೭॥

ಋತುಸ್ನಾನಮಾಡಿದ ಸ್ತ್ರೀಯಳು ಮೈಥುನ (ಪುರುಷಸಮಾಗಮ)ವನ್ನು ಅನುಭವಿಸಿದಂತೆ ಕನಸು ಕಂಡರೆ ವಾಯುವು ಅವಳ ಆರ್ತವವನ್ನು ಅವಳ ಗರ್ಭಾಶಯದೊಳಕ್ಕೆ ತಳ್ಳಿ ಗರ್ಭಧಾರಣೆಯನ್ನುಂಟುಮಾಡುತ್ತದೆ. ಗರ್ಭಿಣಿಯಂತೆ ತಿಂಗಳುತಿಂಗಳುಗಳಲ್ಲಿ ಇವಳ ಗರ್ಭವೂ ಬೆಳೆಯುತ್ತಾ ಇವಳ ಶರೀರದಲ್ಲೂ ಗರ್ಭಿಣಿಯ ಲಕ್ಷಣಗಳು ಕಾಣಬರುತ್ತವೆ. ಆದರೆ ಪಿತೃವಿನ ಭಾಗವಾದ ಮೂಳೆ, ಸ್ನಾಯು ಮೊದಲಾದುವು ಇಲ್ಲದೆ ಬರಿಯದಾದ ಮಾಂಸದ ಮುದ್ದೆಯುಂಟಾಗುತ್ತದೆ ॥೧೮–೧೯॥

ಪಾಪಿಷ್ಠರಾದವರು ತಮ್ಮ ಪಾಪಕರ್ಮಕ್ಕೆ ತಕ್ಕಂತೆ ಸ್ತ್ರೀಯರ ಗರ್ಭಾಶಯದಲ್ಲಿ ಗರ್ಭರೂಪದಿಂದ ಜನಿಸಿ ಹಾವು, ಚೇಳು, ಕುಂಬಳಕಾಯಿ ಮತ್ತು ವಿಕಾರವಾದ ಆಕಾರವುಳ್ಳ ವಸ್ತುಗಳಾಗಿ ಹುಟ್ಟುತ್ತಾರೆ ॥೨೦॥

ಅತಿಯಾಗಿ ವಾತಪ್ರಕೋಪದಿಂದಲೂ ಬಯಕೆ ಸಲ್ಲಿಸಲ್ಪಡದ ಕಾರಣವೂ ಗರ್ಭಸ್ಥಶಿಶುವು ಗಿಡ್ಡಾಕಾರವಾಗಿಯೂ ಮೋಟುಕೈ (ಸೊತ್ತನಾದ) ಉಳ್ಳದ್ದಾಗಿಯೂ, ಹೆಳವನಾಗಿಯೂ, (ಕಾಲಿಲ್ಲದೆಯೂ), ಮೂಗನಾಗಿಯೂ, ಮಿಣಮಿಣ (ಅನುನಾಸಿಕವರ್ಣವನ್ನು ಉಚ್ಚರಿಸುವವ) ನಾಗಿಯೂ ಹುಟ್ಟುತ್ತಾನೆ ॥೨೧॥

ಮೂಲ—ಜಾತ್ಯನ್ಧಾದೀನಾಮುತ್ಪತ್ತೌ ಹೇತುಃ (ಸು।ಶಾ ಅ।೩)—

ತತ್ರ ದೃಷ್ಟಿಭಾಗಮಪ್ರತಿಪನ್ನಂ ತೇಜಃ ಜಾತ್ಯನ್ಧಂ ಕರೋತಿ। ತದೇವ ರಕ್ತಾನುಗತಂ ರಕ್ತಾಕ್ಷಂ ಪಿತ್ತಾನುಗತಂ ಪಿಙ್ಗಾಕ್ಷಂ ಶ್ಲೇಷ್ಮಾನುಗತಂ ಶುಕ್ಲಾಕ್ಷಂ ವಾತಾನುಗತಂ ವಿಕೃತಾಕ್ಷಮಿತಿ ॥೨೨॥

ದೀಪಿಕಾ—ಹುಟ್ಟುಕುರುಡರೇ ಮೊದಲಾದವರ ಉತ್ಪತ್ತಿಗೆಕಾರಣವು(ಸು।ಶಾ।ಅ೩)—

ಗರ್ಭಸ್ಥಶಿಶುವಿನ ದೃಷ್ಟಿಭಾಗಕ್ಕೆ ತೇಜೋಭೂತವು ವ್ಯಾಪಿಸದಿದ್ದರೆ ಹುಟ್ಟುವಾಗಲೇ ಕುರುಡಾಗಿರುತ್ತದೆ. ಆ ತೇಜಸ್ಸು ರಕ್ತದೊಡನೆ ಸೇರಿದ್ದರೆ ರಕ್ತಾಕ್ಷನೂ (ಕೆಂಗಣ್ಣನೂ), ಪಿತ್ತದೊಡನೆ ಸೇರಿದರೆ ಹಳದಿಬಣ್ಣದ ಕಣ್ಣುಳ್ಳವನೂ, ಶ್ಲೇಷ್ಮದೊಡನೆ ಸೇರಿದರೆ ಬಿಳಿ ಕಣ್ಣುಳ್ಳವನೂ ವಾತದೊಡನೆ ಕೂಡಿದ್ದರೆ ವಿಕೃತಿದೃಷ್ಟಿಯುಳ್ಳ ಮಗುವೂ ಹುಟ್ಟುತ್ತದೆ ॥೨೨॥

ಮೂಲ— ಕುಷ್ಠಿನಾಮುತ್ಪತ್ತಿಃ (ಸು।ಶಾ।ಅ।೩)—
ದಮ್ಪತ್ಯೋಃ ಕುಷ್ಠಬಾಹುಳ್ಯಾದ್ದುಷ್ಟಶೋಣಿತಶುಕ್ರಯೋಃ।
ಯದಪತ್ಯಂ ತಯೋರ್ಜಾತಂ ಜ್ಞೇಯಂ ತದಪಿ ಕುಷ್ಠಿತಮ್ ॥೨೩॥

ದೀಪಿಕಾ —ಕುಷ್ಠರೋಗದವರು ಹುಟ್ಟುವುದಕ್ಕೆ ಕಾರಣ (ಸು।ಶಾ।ಅ।೩)—

ಕುಷ್ಠರೋಗಪೀಡಿತರಾದ ಸ್ತ್ರೀಪುರುಷರ ಶುಕ್ರಾರ್ತವಗಳು ಕುಷ್ಠರೋಗದ ಉಲ್ಬಣೆಯಿಂದ ಕೆಡಿಸಲ್ಪಟ್ಟಿರುವಾಗ ಅವರಿಬ್ಬರ ಸಂಭೋಗದಿಂದ ಹುಟ್ಟುವ ಮಗುವೂ ಕುಷ್ಠರೋಗಪೀಡಿತವಾದದ್ದೆಂದೇ ತಿಳಿಯಬೇಕು ॥೨೩॥

ಮೂಲ—
ಪ್ರಥಮಗರ್ಭೋತ್ಪತ್ತ್ಯನನ್ತರಂ ಚಿರಾದ್ದ್ವಿತೀಯಗರ್ಭಾಧಾನೇ ಹೇತುಃ (ಚ।ಶಾ।ಅ। ೩)—
ಯೋನಿಪ್ರದೋಷಾನ್ಮನಸೋಽಭಿಘಾತಾಚ್ಛುಕ್ರಾಸೃಗಾಹಾರವಿಹಾರದೋಷಾತ್।
ಅಕಾಲಯೋಗಾದ್ಬಲಸಂಕ್ಷಯಾದ್ವಾ ಗರ್ಭಂ ಚಿರಾದ್ವಿನ್ದತಿ ಸಪ್ರಜಾಪಿ ॥೨೪॥

ದೀಪಿಕೆ—(ಚ।ಶಾ।ಅ।೩)—
ಯೋನಿದೋಷಗಳಿಂದಲೂ, ಕೋಪಶೋಕಾದಿಮನೋವಿಕಾರಗಳಿಂದಲೂ, ಶುಕ್ರಾರ್ತವಗಳ ಮತ್ತು ಆಹಾರ ವಿಹಾರ ಸೇವನೆಗಳ ದೋಷದಿಂದಲೂ, ಅಕಾಲಗಳಲ್ಲಿ ಸ್ತ್ರೀಪುಂಸಮಾಗಮವಾಗುವುದರಿಂದಲೂ, ಬಲಕ್ಷೀಣತೆಯಿಂದಲೂ ಒಂದುಸಾರಿ ಪ್ರಸವಿಸಿದ ಸ್ತ್ರೀಯು ಬಲುಕಾಲ ಕಳೆದಮೇಲೆ ಪುನಃ ಗರ್ಭಧಾರಣೆ ಮಾಡುತ್ತಾಳೆ ॥೨೪॥

ಷಷ್ಠೋಽಧ್ಯಾಯಃ

ಗರ್ಭಪರಿವೃದ್ಧಿಕ್ರಮಃ

ಮೂಲ—
ಮಾಸಾನುಸಾರೇಣ ಗರ್ಭವೃದ್ಧಿವಿವರಣಂ (ಸು। ಶಾ। ಅ। ೩)— ತತ್ರ ಪ್ರಥಮೇ ಮಾಸಿ ಕಲಲಂ ಜಾಯತೇ ॥೧॥
(ಚ।ಶಾ।ಅ।೩)—
ತತ್ರ ಪ್ರಥಮೇ ಮಾಸಿ ಸರ್ವಗುಣವಾನ್ ಸಗರ್ಭತ್ವಮಾಪನ್ನಃ ಸಮ್ಮೂರ್ಛಿತಃ ಸರ್ವಧಾತುಕಲಲೀಕೃತಃ ಖೇಟಭೂತೋ (ಶ್ಲೇಷ್ಮಭೂತೋ) ಭವತ್ಯವ್ಯಕ್ತವಿಗ್ರಹಃ ಸದಸದ್ಭೂತಾಙ್ಗಾವಯವಃ ॥೨॥

೬ನೆಯ ಅಧ್ಯಾಯ

ಗರ್ಭವೃದ್ಧಿಯ ಕ್ರಮ

ದೀಪಿಕೆ—
ತಿಂಗಳುತಿಂಗಳಿಗೆ ತಕ್ಕಂತೆ ಗರ್ಭವು ಬೆಳೆಯುವ ವಿಧಾನ (ಸು।ಶಾ ಅ। ೩)—ಗರ್ಭಧಾರಣೆಯಾದಮೇಲೆ ಮೊದಲನೆಯ ತಿಂಗಳ ಕಡೆಗೆ ಕಲಲವು (ಸಿಂಬಳದ ಗಡ್ಡೆಯ ಆಕಾರದ ಗರ್ಭಪಿಂಡವು) ವೃದ್ಧಿಯಾಗುತ್ತದೆ.

(ಚ|ಶಾ|ಅ|೩)--

ಗರ್ಭರೂಪವನ್ನು ಹೊಂದಿದ ಸ್ತ್ರೀಪುರುಷರ ಶುಕ್ರಶೋಣಿತಗಳ ಮಿಶ್ರಣವು ಗರ್ಭಾಶಯದಲ್ಲಿ ನೆಲೆಸಿ ಸಿಂಬಳದ ಗಡ್ಡೆಯಂತೆ ಅಭಿವೃದ್ಧಿ ಹೊಂದಿ ಮೊದಲನೆಯ ತಿಂಗಳ ಕಡೆಗೆ ಗಜ್ಜುಗದಷ್ಟು ಪರಿಮಾಣಕ್ಕೆ ಬರುತ್ತದೆ. ಇದರಲ್ಲಿ ಪಂಚಮಹಾಭೂತಗಳ ಕೆಲವು ಅಂಶಗಳು ವ್ಯಕ್ತವಾಗಿಯೂ ಮತ್ತೆ ಕೆಲವು ಅಂಶಗಳು ಸೂಕ್ಷ್ಮರೂಪದಲ್ಲಿಯೂ ಇರುತ್ತವೆ; ಸ್ತ್ರೀಪುರುಷರ ಶರೀರಗಳಿಂದ ಲಬ್ಧವಾದ ಸಪ್ತಧಾತುಗಳೂ ಅತ್ಯಲ್ಪಪ್ರಮಾಣದಲ್ಲಿದ್ದು ಮಾತಾಪಿತೃಗಳ ಸಕಲಗುಣಗಳಿಂದಲೂ ಕೂಡಿರುತ್ತವೆ ‖೨‖

ಮೂಲ—

ದ್ವಿತೀಯೆ ಮಾಸಿ—(ಸು|ಶಾ| ಅ| ೩)—ದ್ವಿತೀಯೇ ಶೀತೋಷ್ಮಾನಿಲೈರಭಿಪಚ್ಯಮಾನಾನಾಂ ಮಹಾಭೂತಾನಾಂ ಸಂಘಾತೋ ಘನಸ್ಸಮ್ಪದ್ಯತೇ| ಯದಿ ಪಿಣ್ಡಃ ಪುಮಾನ್ ಸ್ತ್ರೀ ಚೇತ್ಪೇಶೀ ನಪುಂಸಕಶ್ಚೇತ್ಯರ್ಬುದಮಿತಿ ‖೩‖

ದೀಪಿಕೆ--

ಪಂಚಮಹಾಭೂತಗಳ ಮಿಶ್ರಣವಾದ ಈ ಕಲಲವು ಪಾಕವಾಗಿ ಅಭಿವೃದ್ಧಿಯನ್ನು ಹೊಂದಿ ಮಾಂಸದ ಉಂಡೆಯಂತೆ ಆಗುತ್ತದೆ. ಈ ಮಾಂಸದ ಉಂಡೆಯು ಗುಂಡಾಗಿದ್ದರೆ ಗಂಡುಮಗು ಹುಟ್ಟುತ್ತದೆಂದೂ, ಚಪ್ಪಟೆಯಾಗಿದ್ದರೆ ಹೆಣ್ಣುಮಗುವೂ, ಕೋಳಿಮೊಟ್ಟೆಯ ಆಕಾರದಿಂದಿದ್ದರೆ ನಪುಂಸಕನೂ ಹುಟ್ಟುತ್ತಾರೆಂದು ತಿಳಿಯಬೇಕು ‖ ೩ ‖

ಮೂಲ—

(ಸು|ಶಾ| ಅ| ೩) ತೃತೀಯೇ ಮಾಸಿ ಹಸ್ತಪಾದಶಿರಸಾಂ ಪಂಚ ಪಿಣ್ಡಕಾ ನಿರ್ವರ್ತನ್ತೇಽಙ್ಗಪ್ರತ್ಯಙ್ಗವಿಭಾಗಶ್ಚ ಸೂಕ್ಷ್ಮೋ ಭವತಿ ‖೪‖

(ಚ|ಶಾ|ಅ|೩)—

ತೃತೀಯೇ ಮಾಸಿ ಸರ್ವೇನ್ದ್ರಿಯಾಣಿ ಸರ್ವಾಙ್ಗಾವಯವಾಶ್ಚ ಯೌಗಪದ್ಯೇನಾಭಿನಿರ್ವರ್ತನ್ತೇ| ತತ್ರಾಸ್ಯ ಕೇಚಿದಙ್ಗಾವಯವಾಃ ಮಾತೃಜಾದೀನವಯವಾನ್ವಿಭಜ್ಯ ಪೂರ್ವಮುಕ್ತಾಃ ತಾ ಅಪ್ಯಸ್ಯ ಮಹಾಭೂತವಿಕಾರಾ ಏವ| ತತ್ರಾಸ್ಯಾಕಾಶಾತ್ಮಕಂ ಶಬ್ದಃ ಶ್ರೋತ್ರಂ ಲಾಘವಂ ಸೌಕ್ಷ್ಮ್ಯಂ ವಿವೇಕಶ್ಚ| ವಾಯ್ವಾತ್ಮಕಂ ಸ್ಪರ್ಶಃ ಸ್ಪರ್ಶನಂ ಚ, ರೌಕ್ಷ್ಯಂ ಪ್ರೇರಣಂ ಧಾತುವ್ಯೂಹನಂ ಚೇಷ್ಟಾಶ್ಚ ಶಾರೀರ್ಯಃ| ಅಗ್ನ್ಯಾತ್ಮಕಂ ರೂಪಂ ದರ್ಶನಂ ಪ್ರಕಾಶಃ ಪಕ್ತಿ ರೌಷ್ಣ್ಯಂ ಚ| ಅಬಾತ್ಮಕಂ ರಸೋ ರಸನಂ ಶೈತ್ಯಂ ಮಾರ್ದವಂ ಸ್ನೇಹಃ ಕ್ಲೇದಶ್ಚ| ಪೃಥಿವ್ಯಾತ್ಮಕಂ ಗನ್ಧೋ ಘ್ರಾಣಂ ಗೌರವಂ ಸ್ಥೈರ್ಯಂ ಮೂರ್ತಿಶ್ಚ| ಏವಮಸ್ಯೇನ್ದ್ರಿಯಾಣಿ ಅಙ್ಗಾವಯವಾಶ್ಚ ಯೌಗಪದ್ಯೇನಾಭಿನಿರ್ವರ್ತನ್ತೇಽನ್ಯತ್ರ ತೇಭ್ಯೋ ಭಾವೇಭ್ಯೋ ಯೇಽಸ್ಯ ಜಾತಸ್ಯೋತ್ತರಕಾಲಂ ಜಾಯನ್ತೇ| ತದ್ಯಥಾ ದನ್ತಾಃ ವ್ಯಂಜನಾನಿ ವ್ಯಕ್ತೀಭಾವಸ್ತಥಾ ಯುಕ್ತಾನಿ ಚಾಪರಾಣಿ | ಏಷಾ ಪ್ರಕೃತಿರ್ವಿಕೃತಿಃ ಪುನರನ್ಯಥಾ ||೫||

ತಸ್ಯ ಯತ್ಕಾಲಮೇವೇಂದ್ರಿಯಾಣಿ ಸನ್ತಿಷ್ಠನ್ತೇ ತತ್ಕಾಲಮೇವ ವೇದನಾ-ನಿಬನ್ಧಂ (ಸುಖದುಃಖೋಪಲಬ್ಧಿಃ) ಪ್ರಾಪ್ನೋತಿ। ತಸ್ಮಾತ್ತದಾ ಪ್ರಭೃತಿ ಗರ್ಭಃ ಸ್ಪನ್ದತೇ (ಸುಖೋತ್ಪಾದನದುಃಖಪರಿಹಾರಾರ್ಥಂ) ಪ್ರಾರ್ಥಯತೇ ಚ ॥೬॥

ದೀಪಿಕೆ—

(ಸು।ಶಾ।ಅ।೩) ಮೂರನೆಯ ತಿಂಗಳಲ್ಲಿ ಗರ್ಭಪಿಂಡದಿಂದ ಎರಡು ಕೈಗಳನ್ನೂ ಎರಡು ಕಾಲುಗಳನ್ನೂ ತಲೆಯನ್ನೂ ಸೂಚಿಸುವ ಐದು ಮೊಳಕೆಗಳು (ಮಾಂಸಾಂಕುರಗಳು) ಹೊರಕ್ಕೆ ಹೊರಟಿರುತ್ತವೆ; ಅಙ್ಗಪ್ರತ್ಯಙ್ಗಗಳನ್ನು ಸೂಕ್ಷ್ಮರೂಪದಿಂದ ಗುರ್ತಿಸಬಹುದು ॥೪॥

(ಚ।ಶಾ।ಅ।೩)—

ಮೂರನೆಯ ತಿಂಗಳಲ್ಲಿ ಗರ್ಭಪಿಂಡದಿಂದ ಎಲ್ಲಾ ಇಂದ್ರಿಯದ್ವಾರಗಳೂ ಅಙ್ಗಗಳೂ ಏಕಕಾಲದಲ್ಲಿ ಹೊರಹೊರಡುತ್ತವೆ. ಪಂಚಮಹಾಭೂತವಿಕಾರಗಳಾದ ಮಾತೃಜ ಪಿತೃಜ ಭಾಗಗಳೂ ಈ ಅಙ್ಗಾವಯವಗಳಿಂದಲೇ ವ್ಯಕ್ತವಾಗಿ ಕಾಣುತ್ತವೆ. ಹೇಗೆಂದರೆ ಆಕಾಶಭೂತದಿಂದ ಶಬ್ದಗ್ರಾಹಕ ಶ್ರವಣವೂ (ಕಿವಿ), ಹಗುರತ್ವ, ಸೂಕ್ಷ್ಮತ್ವ, ವಿರೇಕವೂ (ದ್ರವವು ಹರಿದುಬರುವುದು); ವಾಯುಭೂತದಿಂದ ಸ್ಪರ್ಶನಗ್ರಾಹಕ ಚರ್ಮವೂ, ರೂಕ್ಷತೆ, ಧಾತುಗಳು ಒಟ್ಟಿಗೆ ಸೇರುವುದು, ಶರೀರದ ಅಂಗಗಳ ಚಲನವಲನಾದಿ ಕಾರ್ಯಗಳೂ; ಅಗ್ನಿಭೂತದಿಂದ ರೂಪಗ್ರಾಹಕಗಳಾದ ಕಣ್ಣುಗಳೂ, ಪ್ರಕಾಶವೂ, ಆಹಾರಪಾಕವೂ, ಶರೀರದ ಶಾಖವೂ; ಅಬ್ಭೂತದಿಂದ ರಸಬೋಧಕವಾದ ನಾಲಿಗೆಯೂ, ಶರೀರದ ಶೈತ್ಯವೂ, ಮೃದುತ್ವವೂ, ಜಿಡ್ಡಾಗಿರುವುದೂ ದ್ರವವು ಜಿನುಗುವುದೂ; ಪೃಥಿವೀಭೂತದಿಂದ ಗನ್ಧಗ್ರಾಹಕವಾದ ಮೂಗೂ, ಶರೀರದ ಭಾರವೂ ಮತ್ತು ಸ್ಥಿರತೆಯೂ, ಆಕಾರವೂ ಉಂಟಾಗುತ್ತವೆ. ಹಲ್ಲುಗಳೂ, ಶಿಶ್ನೋಪಸ್ಥಗಳಮೇಲೆ ಹುಟ್ಟುವ ರೋಮಗಳೂ, ಗಡ್ಡಮಿಸೆಗಳೂ, ಸ್ತನವೃದ್ಧಿಯೂ ಜನನವಾದಮೇಲೆ ಕಾಲಕಾಲದಲ್ಲಿ ಉಂಟಾಗುವ ಕಾರಣದಿಂದಲೂ ಕೆಲವು ಮರಣದವರೆಗೂ ಇರುವುದಿಲ್ಲವಾಗಿಯೂ ಇವು ಅನಿತ್ಯಭಾವಗಳು; ಕೈಕಾಲು ಮೊದಲಾದ ಅವಯವಗಳು ಜನ್ಮಕಾಲದಿಂದ ಮರಣವಾಗುವವರೆಗೂ ಶರೀರದೊಡನೆಯೇ ಸೇರಿರುತ್ತವೆಯಾಗಿ ಅವು ನಿತ್ಯಭಾವಗಳು. ಇದು ಸ್ವಭಾವವು. ಕೆಲವು ವೇಳೆ ಹಲ್ಲುಸಹಿತವಾದ ಮಗುವೂ ಶಿಶ್ನೋಪಸ್ಥಗಳಿಲ್ಲದೆ ಕೇವಲ ರಂಧ್ರಮಾತ್ರವಿರುವ ನಪುಂಸಕನೂ ಹುಟ್ಟುವುದು ವಿಕಾರವು (ವಿಕೃತಿಯು) ॥೫॥

ಗರ್ಭಸ್ಥಶಿಶುವಿಗೆ ಇಂದ್ರಿಯಗಳು ವ್ಯಕ್ತವಾಗುತ್ತಿರುವಾಗಲೇ ಸುಖದುಃಖಗಳ ಅನುಭವವೂ ಉಂಟಾಗುತ್ತದೆ. ಆದ್ದರಿಂದಲೇ ಸುಖೋತ್ಪಾದನೆ ಮತ್ತು ದುಃಖನಿವಾರಣೆ ಮಾಡಿಕೊಳ್ಳುವುದಕ್ಕಾಗಿಯೇ ಗರ್ಭವು ಚಲನೆಯಾಗುತ್ತದೆ. ಮತ್ತು ಇಷ್ಟವಾದ ಇಂದ್ರಿಯಾರ್ಥಗಳನ್ನು ಅಪೇಕ್ಷಿಸುತ್ತದೆ ॥೬॥

ಮೂಲ—(ಸು।ಶಾ।ಅ।೩)—

ಚತುರ್ಥೇ ಸರ್ವಾಙ್ಗಪ್ರತ್ಯಙ್ಗವಿಭಾಗಶ್ಚ ಪ್ರವ್ಯಕ್ತತರೋ ಭವತಿ । ಗರ್ಭಹೃದಯಪ್ರವ್ಯಕ್ತಭಾವಾಚ್ಚೇತನಾಧಾತುರಭಿವ್ಯಕ್ತೋ ಭವತಿ । ತಸ್ಮಾದ್ಗರ್ಭಃ

ಚತುರ್ಥೇ ಮಾಸಿ ಅಭಿಪ್ರಾಯಮಿನ್ದ್ರಿಯಾರ್ಥೇಷು ಕರೋತಿ । ದ್ವಿಹೃದಯಾಂ ಚ ನಾರೀಂ ದೌಹೃದಿನೀಮಾಚಕ್ಷತೇ ॥೭॥

(ಚ।ಶಾ।ಅ।೩)—

ಯಸ್ಮಾತ್ ಸ್ಥಿರತ್ವಮಾಪದ್ಯತೇ ಗರ್ಭಶ್ಚತುರ್ಥೇ ಮಾಸಿ ತದಾ ಗರ್ಭಿಣೀ ಗುರುಗಾತ್ರತ್ವಮಾಪದ್ಯತೇ ವಿಶೇಷೇಣ ॥೮॥

ದೀಪಿಕೆ—(ಸು।ಶಾ।ಅ।೩)—

ನಾಲ್ಕನೆಯ ತಿಂಗಳಲ್ಲಿ ಗರ್ಭದ ಸಕಲಅಙ್ಗಪ್ರತ್ಯಙ್ಗಗಳ ಭೇದಗಳೂ ವ್ಯಕ್ತವಾಗಿ ಕಾಣಿಸುತ್ತವೆ. ಗರ್ಭದ ಹೃದಯಸ್ಪನವು ಸ್ಪಷ್ಟವಾಗಿ ಕೇಳಿಸುವುದರಿಂದ ಚೇತನಾಧಾತುವು (ಮನಸ್ಸು) ಹೊರಪಡುವ ಕಾರಣ ಗರ್ಭವು ನಾಲ್ಕನೆಯ ತಿಂಗಳಲ್ಲಿ ಇಂದ್ರಿಯಾರ್ಥಗಳಲ್ಲಿನ ಅಭಿಲಾಷೆಯನ್ನು ಸೂಚಿಸುತ್ತದೆ. ಗರ್ಭದ ಹೃದಯವೂ ತಾಯಿಯ ಹೃದಯವೂ ಗರ್ಭಿಣಿಯ ದೇಹದಲ್ಲೇ ಇರುವ ಕಾರಣ ಅವಳನ್ನು "ದೌಹೃದಿನೀ" ಎರಡು ಹೃದಯವುಳ್ಳವಳು ಎಂದು ಕರೆಯುವುದು ವಾಡಿಕೆಯಾಗಿರುತ್ತೆ ॥೭॥

(ಚ।ಶಾ।ಅ।೩)—

ನಾಲ್ಕನೆಯ ತಿಂಗಳಲ್ಲಿ ಗರ್ಭದ ಅಂಗಗಳು ಸ್ಥಿರಪಟ್ಟು ಭಾರವಾಗಿರುವ ಕಾರಣ ಗರ್ಭಿಣಿಯ ದೇಹವು ಅಧಿಕವಾಗಿ ದಪ್ಪನಾಗುತ್ತದೆ ॥೮॥

ಮೂಲ—(ಚ।ಶಾ।ಅ।೩)—

ಮಾತೃಜಂ ಚಾಸ್ಯ ಹೃದಯಂ ಮಾತುಶ್ಚ ಹೃದಯೇನ ತತ್ ।
ಸಂಬದ್ಧಂ ತೇನ ಗರ್ಭಿಣ್ಯಾ ನೇಷ್ಟಂ ಶ್ರದ್ಧಾವಿಧಾರಣಮ್ ॥೯॥
ದೇಯಮಪ್ಯಹಿತಂ ತಸ್ಯೈ ಹಿತೋಪಹಿತಮಲ್ಪಕಮ್
ಶ್ರದ್ಧಾವಿಘಾತಾದ್ಗರ್ಭಸ್ಯ ವಿಕೃತಿಶ್ಚ್ಯುತಿರೇವ ವಾ ॥೧೦॥

(ಸು।ಶಾ।ಅ।೩)—

ದೌಹೃದವಿಮಾನನಾತ್ಕುಬ್ಜಂ ಕುಣಿಂ ಷಣ್ಡಂ ವಾಮನಂ ವಿಕೃತಾಕ್ಷಮನಕ್ಷಂ ವಾ ನಾರೀ ಸುತಂ ಜನಯತಿ। ತಸ್ಮಾತ್ಸಾ ಯದ್ಯದಿಚ್ಛೇತ್ ತತ್ತಸ್ಯೈ ದಾಪಯೇತ್।
ಲಬ್ಧದೌಹೃದಾ ಹಿ ವೀರ್ಯವನ್ತಂ ಚಿರಾಯುಷಂ ಪುತ್ರಂ ಜನಯತಿ ॥೧೧॥
ಇನ್ದ್ರಿಯಾರ್ಥಾನ್ಪ್ರಿಯಾನ್ ಯಾಂಸ್ತು ಭೋಕ್ತುಮಿಚ್ಛತಿ ಗರ್ಭಿಣೀ।
ಗರ್ಭಬಾಧಭಯಾತ್ತಾನ್ಸ್ತೈ ಭಿಷಗಾಹೃತ್ಯ ದಾಪಯೇತ್ ॥೧೨॥

ದೀಪಿಕೆ —(ಚ।ಶಾ।ಅ।೩)—

ಗರ್ಭದಲ್ಲಿರುವ ಶಿಶುವಿನ ಹೃದಯವು ತಾಯಿಯ ಶರೀರಭಾಗದಿಂದ ಹುಟ್ಟುತ್ತದೆ. ಗರ್ಭಿಣಿಯ ಹೃದಯದಿಂದ ಹೊರಡುವ ರಸವಾಹಿಧಮನಿಗಳೊಡನೆ ಶಿಶುವಿನ ನಾಭಿನಾಳವು ಸೇರಿಕೊಂಡಿರುವ ಕಾರಣ ಶಿಶುವು ತನಗೆ ಬೇಕಾದ ವಸ್ತುಗಳನ್ನು ಅಥವಾ ಇನ್ದ್ರಿಯಾರ್ಥಗಳನ್ನು ತಾಯಿಯ ಮೂಲಕ ಹೊಂದಲು ಇಷ್ಟಪಡುತ್ತದೆ. ಆದಕಾರಣ ಗರ್ಭಿಣಿಯರು ಬಯಸುವ ಬಯಕೆಗಳನ್ನು ಸಲ್ಲಿಸಬೇಕು; ತಿರಸ್ಕರಿಸಬಾರದು; ಆಕೆಯು ತನಗೆ ಹಿತವಲ್ಲದ ಬಯಕೆ

ಗಳನ್ನು ಅಪೇಕ್ಷಿಸಿದರೂ ಅವುಗಳನ್ನು ಸ್ವಲ್ಪ ಪ್ರಮಾಣದಿಂದ ಹಿತಕರಗಳಾದ ವಸ್ತುಗಳೊಡನೆ ಬೆರಿಶಿಯಾದರೂ ಕೊಡಬೇಕು. ಏಕೆಂದರೆ ಬಯಕೆಗಳನ್ನು ಸಲ್ಲಿಸದಿದ್ದರೆ ಗರ್ಭನಾಶವಾಗಬಹುದು ; ಅಥವಾ ಶಿಶುವು ಸರಿಯಾದ ಪ್ರಸವ ಕಾಲದವರೆಗೂ ಗರ್ಭಾಶಯದಲ್ಲಿ ನಿಲ್ಲದೆ ಹೊರಕ್ಕೆ ಬಂದುಬಿಡಬಹುದು ॥೯॥

(ಸು।ಶಾ।ಅ। ೩)—

ಗರ್ಭಿಣಿಯ ಬಯಕೆಗಳನ್ನು ಸಲ್ಲಿಸದಿದ್ದರೆ ಆಕೆಯು ಕುತ್ಸಿತದೇಹವುಳ್ಳ ಕೈಯಿಲ್ಲದ, ಕುಳ್ಳನೂ, ಷಣ್ಡನೂ ಇನ್ದ್ರಿಯಹೀನನೂ ಅಥವಾ ವಿಕೃತೇನ್ದ್ರಿಯ ವುಳ್ಳವನೂ ಆದ ಮಗುವನ್ನು ಹೆರುತ್ತಾಳೆ. ಆದಕಾರಣ ಗರ್ಭಿಣಿಯು ಬಯಸುವ ವಸ್ತುಗಳನ್ನು ಪ್ರಯತ್ನಪಟ್ಟು ತಂದುಕೊಡಲೇಬೇಕು. ಬಯಕೆಯು ಸಲ್ಲಿಸಲ್ಪಟ್ಟರೆ (ಶೂರನಾದ) ವೀರ್ಯವಂತನಾದ ಮತ್ತು ದೀರ್ಘಾಯುವಾದ ಪುತ್ರನು ಜನಿಸುತ್ತಾನೆ. ಗರ್ಭಿಣಿಯು ತನಗೆ ಇಷ್ಟವಾದ ಯಾವ ಇನ್ದ್ರಿಯಾರ್ಥ ಗಳನ್ನು ಅಪೇಕ್ಷಿಸುತ್ತಾಳೋ ಅವನ್ನು ವೈದ್ಯನು ತರಿಸಿಕೊಡಬೇಕು. ಇಲ್ಲದಿದ್ದರೆ ಗರ್ಭಕ್ಕೆ ತೊಂದರೆಯಾಗುತ್ತದೆ. ಆಕೆಗೆ ಬಯಸಿದ ಇಂದ್ರಿಯಾರ್ಥ ಗಳು ದೊರೆತರೆ ಸುಗುಣವುಳ್ಳ ಮಗನು ಹುಟ್ಟುತ್ತಾನೆ. ಬಯಕೆ ಸಲ್ಲದಿದ್ದರೆ ಗರ್ಭದಲ್ಲಿರುವ ಶಿಶುವಿಗಾಗಲೀ ಗರ್ಭಿಣಿಗಾಗಲೀ ತೊಂದರೆಯಾಗುತ್ತದೆ ॥೧೦-೧೨॥

ಮೂಲ—(ಸು।ಶಾ।ಅ।೩)—

ಯೇಷು ಯೇಷ್ವಿನ್ದ್ರಿಯಾರ್ಥೇಷು ದೌಹೃದೇ ಯಾ ವಿಮಾನತಾ।
ಪ್ರಜಾಯೇತ ಸುತಸ್ಯಾರ್ತಿಸ್ತಸ್ಮಿಂಸ್ತಸ್ಮಿಂಸ್ತದಿನ್ದ್ರಿಯೇ ॥೧೩॥

ಕರ್ಮಣಾ ನೋದಿತಂ ಜನ್ತೋರ್ಭವಿತವ್ಯಂ ಪುನರ್ಭವೇತ್।
ಯಥಾ ತಥಾ ದೈವಯೋಗಾದ್ದೌಹೃದಂ ಜನಯೇದ್ಧೃದಿ ॥೧೪॥

ರಾಜಸಂದರ್ಶನೇ ಯಸ್ಯಾ ದೌಹೃದಂ ಜಾಯತೇ ಸ್ತ್ರಿಯಾಃ।
ಅರ್ಥವನ್ತಂ ಮಹಾಭಾಗಂ ಕುಮಾರಂ ಸಾ ಪ್ರಸೂಯತೇ ॥೧೫॥

ದುಕೂಲಪಟ್ಟಕೌಶೇಯಭೂಷಣಾದಿಷು ದೌಹೃದಾತ್।
ಅಲಙ್ಕಾರೈಷಿಣಂ ಪುತ್ರಂ ಲಲಿತಂ ಸಾ ಪ್ರಸೂಯತೇ ॥೧೬॥

ಆಶ್ರಮೇ ಸಂಯತಾತ್ಮಾನಂ ಧರ್ಮಶೀಲಂ ಪ್ರಸೂಯತೇ।
ದೇವತಾಪ್ರತಿಮಾಯಾನ್ತು ಪ್ರಸೂತೇ ಪಾರ್ಷದೋಪಮಮ್ ॥೧೭॥

ದರ್ಶನೇ ವ್ಯಾಳಜಾತೀನಾಂ ಹಿಂಸಾಶೀಲಂ ಪ್ರಸೂಯತೇ।
ಗೋಧಾಮಾಂಸಾಶನೇ ಪುತ್ರಂ ಸುಷುಪ್ಸುಂ ಧಾರಣಾತ್ಮಕಮ್ ॥೧೮॥

ಗವಾಂ ಮಾಂಸೇಷು ಬಲಿನಂ ಸರ್ವಕ್ಲೇಶಸಹಂ ತಥಾ।
ಮಾಹಿಷೇ ದೌಹೃದಾಚ್ಛೂರಂ ರಕ್ತಾಕ್ಷಂ ಲೋಮಸಂಯುತಮ್ ॥೧೯॥

ವರಾಹಮಾಂಸಾತ್ಸ್ವಪ್ನಾಳುಂ ಶೂರಂ ಸಂಜನಯೇತ್ಸುತಮ್।
ಮಾರ್ಗಾದ್ವಿಕ್ರಾನ್ತಜಙ್ಘಾಲಂ ಸದಾ ವನಚರಂ ಸುತಮ್ ॥೨೦॥

ಸ್ಪಮರಾದ್ವಿಗ್ನಮನಸಂ ನಿತ್ಯಭೀತಂ ಚ ತಿತ್ತಿರಾತ್ ।
ಅತೋಽನುಕ್ತೇಷು ಯಾ ನಾರೀ ಸಮಭಿಧ್ಯಾತಿ ದೌಹೃದಮ್ ॥೨೧॥
ಶರೀರಾಚಾರಶೀಲೈಃ ಸಾ ಸಮಾನಂ ಜನಯಿಷ್ಯತಿ ।

ದೀಪಿಕೆ—(ಸು।ಶಾ।ಅ।೩)—

ಗರ್ಭಿಣಿಗೆ ಯಾವಯಾವ ಇಂದ್ರಿಯಾರ್ಥಗಳಲ್ಲಿನ ಬಯಕೆಯು ಸಲ್ಲಿಸಲ್ಪಡುವುದಿಲ್ಲವೋ ಹುಟ್ಟುತಕ್ಕ ಮಗುವಿಗೆ ಆಯಾಯ ಇನ್ದ್ರಿಯಗಳಲ್ಲಿ ಬಾಧೆಯುಂಟಾಗುತ್ತದೆ. ಹುಟ್ಟುವ ಮಗುವಿನ ಪೂರ್ವಜನ್ಮದ ಕರ್ಮಕ್ಕೆ ತಕ್ಕಂತೆಯೇ ದೈವಯೋಗದಿಂದ ಪ್ರೇರಿತವಾಗಿ ಗರ್ಭಿಣಿಗೆ ಬಯಕೆಗಳುಂಟಾಗುತ್ತವೆ ॥೧೩–೧೪॥

ಗರ್ಭಿಣಿಯು ರಾಜದರ್ಶನ ಮಾಡಲು ಬಯಸಿ ರಾಜದರ್ಶನ ಮಾಡಿದರೆ ಧನಿಕನಾದ ಪುಣ್ಯಶಾಲಿಯಾದ ಮಗನು ಹುಟ್ಟುತ್ತಾನೆ. ಹಗುರವಾದ ರೇಷ್ಮೆ ಬಟ್ಟೆ, ಶಾಲು, ಒಡವೆಗಳು, ಮುತ್ತಿನ ಸರಗಳಲ್ಲಿ ಬಯಕೆಯುಂಟಾದರೆ ಅಲಂಕಾರಪ್ರಿಯ (ಸೊಗಸುಗಾರ)ನಾದ ಮಗನೂ, ಋಷಿಗಳ ಆಶ್ರಮಗಳನ್ನು ನೋಡಬಯಸಿದ ಗರ್ಭಿಣಿಗೆ ಜಿತೇನ್ದ್ರಿಯನೂ ಧರ್ಮಶೀಲನೂ ಆದ ಮಗನೂ, ದೇವರ ವಿಗ್ರಹಗಳನ್ನು ನೋಡಬಯಸಿದರೆ ಸಭಾಧ್ಯಕ್ಷನಾದ ಮಗನೂ, ಕ್ರೂರ ಮೃಗಗಳನ್ನು ನೋಡಲಿಚ್ಛಿಸಿದರೆ ಪರಹಿಂಸಕನೂ, ಉಡುವಿನ ಮಾಂಸವನ್ನು ತಿನ್ನಲಪೇಕ್ಷಿಸಿದರೆ ನಿದ್ರಾಳುವೂ, ಗ್ರಹಿಸಿದ ವಿಷಯಗಳನ್ನು ಮರೆಯದೆ ಬಹಳ ಕಾಲದವರೆಗೂ ಜ್ಞಾಪಕದಲ್ಲಿಡತಕ್ಕವನೂ; ದನದ ಮಾಂಸವನ್ನು ತಿನ್ನಬೇಕೆಂದು ಬಯಕೆಯುಂಟಾದರೆ ಬಲಿಷ್ಠನಾದ ಮತ್ತು ಮನಃಕ್ಲೇಶವನ್ನು ಸಹಿಸತಕ್ಕವನೂ; ಎಮ್ಮೆಯ ಮಾಂಸದಲ್ಲಿ ಬಯಕೆಯುಂಟಾದರೆ ಶೂರನೂ, ಕೆಂಪುಕಣ್ಣಿನವನೂ, ಮೈಮೇಲೆ ರೋಮಗಳು ಬೆಳೆದಿರುವವನೂ ; ಹಂದಿಯ ಮಾಂಸದಲ್ಲಿ ಬಯಕೆಯುಂಟಾದರೆ ಸದಾ ನಿದ್ರಿಸುವವನೂ ಮತ್ತು ಶೂರನೂ ; ಜಿಂಕೆಯ ಮಾಂಸದಲ್ಲಿ ಬಯಕೆಯುಂಟಾದರೆ ಪರಾಕ್ರಮಿಯೂ ತ್ವರಿತವಾಗಿ ನಡೆಯುವವನೂ ಸದಾ ಕಾಡಿನಲ್ಲಿ ಅಲೆಯುವವನೂ; ಕಾಡುಹಂದಿಯ ಮಾಂಸದಲ್ಲಿ ಬಯಕೆಯಾದರೆ ಕೋಪದಿಂದ ಸರ್ವದಾ ಪರಹಿಂಸೆಯನ್ನುಂಟುಮಾಡುವವನೂ ; ತಿತ್ತಿರಿಪಕ್ಷಿಯ ಮಾಂಸದಲ್ಲಿ ಗರ್ಭಿಣಿಗೆ ಬಯಕೆಯುಂಟಾದರೆ ಸದಾ ದಿಗಲುಳ್ಳವನೂ, ಹುಟ್ಟುತ್ತಾನೆ. ಇವುಗಳಲ್ಲದೆ ಮತ್ತಾವ ಪ್ರಾಣಿಗಳ ಮಾಂಸದಲ್ಲಿ ಬಯಕೆಯುಂಟಾಗುತ್ತದೆಯೋ ಆಯಾಯ ಪ್ರಾಣಿಗಳ ಶರೀರಾಚಾರಗಳಿಗೆ ತಕ್ಕ ಸ್ವಭಾವವುಳ್ಳ ಮಗನು ಹುಟ್ಟುತ್ತಾನೆಂದು ಊಹಿಸಬೇಕು ॥೧೫–೨೧॥

ಮೂಲ—(ಸು।ಶಾ।೩)—

ಪಂಚಮೇ ಮನಃ ಪ್ರತಿಬುದ್ಧತರಂ ಭವತಿ ॥೨೨॥

(ಚ।ಶಾ।ಅ।೩)—

ಪಂಚಮೇ ಮಾಸಿ ಗರ್ಭಸ್ಯ ಮಾಂಸಶೋಣಿತೋಪಚಯೋ ಭವತ್ಯಧಿಕಮನ್ಯೇಭ್ಯೋ ಮಾಸೇಭ್ಯಃ। (ತಸ್ಮಾತ್ತದಾ ಗರ್ಭಿಣೀ ಕಾರ್ಶ್ಯಮಾಪದ್ಯತೇ ವಿಶೇಷೇಣ ॥೨೩॥

ದೀಪಿಕೆ—(ಸು।ಶಾ।ಅ।೩)--

ಐನೆಯ ತಿಂಗಳಲ್ಲಿ ಗರ್ಭದ ಮನಸ್ಸು ಹೆಚ್ಚಾಗಿ ವಿಕಾಸಗೊಳ್ಳುತ್ತದೆ ॥೨೨॥

(ಚ।ಶಾ।೫)--

ಆನೆಯ ತಿಂಗಳಲ್ಲಿ ಗರ್ಭಕ್ಕೆ ಮಾಂಸ ಮತ್ತು ರಕ್ತ ಧಾತುಗಳು ಇತರ ತಿಂಗಳಿಗಿಂತಲೂ ಹೆಚ್ಚಾಗಿ ವೃದ್ಧಿಯಾಗುತ್ತವೆಯಾಗಿ ಗರ್ಭಿಣಿಯು ದೇಹವು ತುಂಬಾ ಕೃಶವಾಗುತ್ತದೆ ॥೨೩॥

ಮೂಲ—(ಸು।ಶಾ।ಅ। ೩) ಷಷ್ಠೇ—ಬುದ್ಧಿಃ ॥೨೪॥

(ಚ।ಶಾ।)—ಷಷ್ಠೇ ಮಾಸಿ ಗರ್ಭಸ್ಯ ಬಲವರ್ಣೋಪಚಯೋ ಭವತ್ಯಧಿಕ-ಮನ್ಯೇಭ್ಯೋ ಮಾಸೇಭ್ಯಃ ಸ್ನಾಯುಸಿರಾರೋಮನಖತ್ವಚಾಮುಪಚಯಃ। ತಸ್ಮಾ-ತ್ತದಾ ಗರ್ಭಿಣೀ ಬಲವರ್ಣಹಾನಿಮಾಪದ್ಯತೇ ವಿಶೇಷಣ ॥೨೫॥

ದೀಪಿಕೆ—(ಸು।ಶಾ।ಅ। ೩)--

ಆರನೆಯ ತಿಂಗಳಲ್ಲಿ ಗರ್ಭಕ್ಕೆ ಬುದ್ಧಿಯುಂಟಾಗುತ್ತದೆ ॥೨೪॥

(ಚ।ಶಾ।)--

ಆರನೆಯ ತಿಂಗಳಲ್ಲಿ ಗರ್ಭಕ್ಕೆ ಬಲ, ವರ್ಣಗಳು ಇತರ ತಿಂಗಳುಗಳಿಗಿಂತಲೂ ಅಧಿಕ ಪ್ರಮಾಣದಿಂದ ವೃದ್ಧಿಗೊಳ್ಳುತ್ತವೆ. ಸ್ನಾಯು, ಸಿರೆ, ರೋಮ, ಉಗುರು, ಚರ್ಮ ಇವು ವೃದ್ಧಿಯಾಗುತ್ತವೆ. ಗರ್ಭಿಣಿಗೆ ಅಧಿಕಾಂಶದಿಂದ ಬಲವರ್ಣಗಳು ತಗ್ಗುತ್ತವೆ ॥೨೫॥

ಮೂಲ—(ಸು।ಶಾ।ಅ।೩) ಸಪ್ತಮೇ—ಸರ್ವಾಙ್ಗಪ್ರತ್ಯಙ್ಗವಿಭಾಗಃ ಪ್ರವ್ಯಕ್ತತರಃ ॥೨೬॥

(ಚ।ಶಾ।)—ಸಪ್ತಮೇ ಮಾಸಿ ಗರ್ಭಃ ಸರ್ವೈರ್ಭಾವೈರಾಪ್ಯಾಯತೇ ಸಹಸಾ। ತಸ್ಮಾತ್ತದಾ ಗರ್ಭಿಣೀ ಸರ್ವಾಕಾರೈಃ ಕ್ಲಾನ್ತತಮಾ ಭವತಿ ॥೨೭॥

ದೀಪಿಕೆ—(ಸು। ಶಾ। ಅ। ೩)--

ಏಳನೆಯ ತಿಂಗಳಲ್ಲಿ ಗರ್ಭದ ಸಕಲ ಅಂಗಗಳೂ ಬೇರೆಬೇರೆಯಾಗಿ ಸ್ಪಷ್ಟವಾಗಿ ತಿಳಿಯಬರುತ್ತವೆ ಮತ್ತು ಬೇಗಬೇಗನೆ ಪುಷ್ಟವಾಗಿ ಬೆಳೆಯುತ್ತವೆಯಾಗಿ ಗರ್ಭಿಣಿಯು ಅತ್ಯನ್ತ ಬಳಲುತ್ತಾಳೆ. ಅವಳ ಸಕಲ ಅಂಗಗಳೂ ಕ್ಷೀಣವಾಗುತ್ತವೆ ॥೨೬—೨೭॥

ಮೂಲ—(ಅ।ಹೃ।ಶಾ।)—

ಓಜೋಽಷ್ಟಮೇ ಸಂಚರತಿ ಮಾತಾಪುತ್ರೌ ಮುಹುಃ ಕ್ರಮಾತ್।
ತೇನ ತೌ ಮ್ಲಾನಮುದಿತೌ ತತ್ರ ಜಾತೋ ನ ಜೀವತಿ ॥೨೮॥
ಶಿಶುರೋಜೋಽನವಸ್ಥಾನಾನ್ನಾರೀ ಸಂಶಯಿತಾ ಭವೇತ್।

(ಸು।ಶಾ।ಅ।೩)—ಅಷ್ಟಮೇಽಸ್ಥಿರೀಭವತ್ಯೋಜಸ್ತತ್ರ ಜಾತಶ್ಚೇನ್ನ ಜೀವೇನ್ನಿ-ರೋಜಸ್ತ್ವಾನ್ನೈಋತಭಾಗತ್ವಾಚ್ಚ।ತತೋ ಮಾಂಸೋದನಮಸ್ಮೈ ದಾಪಯೇತ್ ॥೨೯॥

ಅಸ್ಮೈ—"ನೈಋತಾಯ ಭಾಗಶ್ಚ ವಾ ತೇಷು ರುದ್ರೇಣ ದತ್ತ" ಇತಿ ಕುಮಾರತನ್ತ್ರೇ ಪ್ರತಿಪಾದಿತವಾ'। ತಸ್ಮಾತ್ಕಾರಣಾದಷ್ಟಮೇ ಮಾಸಿ ಅಸ್ಮೈ ನೈಋತಾಯ ಮಾಂಸೋದನಂ ಬಲಿಂ ದಾಪಯೇತ್ ॥

(ಚ। ಶಾ।)—ಅಷ್ಟಮೇ ಮಾಸಿ ಗರ್ಭಶ್ಚ ಮಾತೃತೋ ಗರ್ಭತಶ್ಚ ಮಾತಾ ರಸ ಹಾರಿಣೀಭಿಸ್ಸಂವಾಹಿನೀಭಿರ್ಮುಹುರ್ಮುಹುರೋಜಃ ಪರಸ್ಪರತ ಆದದಾತೇ ಗರ್ಭಸ್ಯಾಸಮ್ಪೂರ್ಣತ್ವಾತ್'। ತಸ್ಮಾತ್ತದಾ ಗರ್ಭಿಣೀ ಮುಹುರ್ಮುದಾ ಯುಕ್ತಾ ಭವತಿ ಮುಹುರ್ಮುಹುಶ್ಚ ಮ್ಲಾನಾ। ತಥಾ ಗರ್ಭಃ। ತಸ್ಮಾತ್ತದಾ ಗರ್ಭಸ್ಯ ಜನ್ಮ ವ್ಯಾಪತ್ತಿಮದ್ಭವತ್ಯೋಜಸೋಽನವಸ್ಥಿತತ್ವಾತ್'। ತಂ ಚೈನಾರ್ಥಮಭಿಸಮೀಕ್ಷ್ಯಾಷ್ಟಮಂ ಮಾಸಮಗಣ್ಯಮಿತ್ಯಾಚಕ್ಷತೇ ಕುಶಲಾಃ ॥೩೦॥

ದೀಪಿಕೆ—(ಅ। ಹೃ। ಶಾ। ಚ। ಶಾ। ಸು। ಶಾ। ಅ। ೩)—

ಎಂಟನೆಯ ತಿಂಗಳಲ್ಲಿ ಗರ್ಭವು ಜನಿಸಿದರೆ ಬದುಕುವುದಿಲ್ಲ. ಏಕೆಂದರೆ ಓಜೋಧಾತುವು ಸ್ಥಿರವಾಗಿ ಗರ್ಭದೇಹದಲ್ಲಿ ನಿಲ್ಲದೆ ನಾಭಿನಾಳದ ಮೂಲಕವಾಗಿ ಗರ್ಭದೇಹದಿಂದ ತಾಯಿಯ ಹೃದಯಕ್ಕೂ ತಾಯಿಯ ಹೃದಯದಿಂದ ಗರ್ಭದೇಹಕ್ಕೂ ಸಂಚರಿಸುತ್ತಾ ಇರುತ್ತಾದ ಕಾರಣ ತಾಯಿಯೂ ಗರ್ಭಸ್ಥ ಶಿಶುವೂ ತಮ್ಮ ದೇಹದಲ್ಲಿ ಓಜಸ್ಸು ಇರುವಾಗ ಸಂತೋಷವುಳ್ಳವರಾಗಿಯೂ ದೇಹದಿಂದ ಹೊರಕ್ಕೆ ಚಲಿಸಿದಾಗ ತುಂಬಾ ಬಳಲಿದವರಾಗಿಯೂ ಇರುತ್ತಾರೆ. ಈ ಸ್ಥಿತಿಯಲ್ಲಿ ಪ್ರಸವವುಂಟಾದರೆ ಅವರಿಬ್ಬರಿಗೂ ಅಪಾಯ ಸಂಭವಿಸುತ್ತದೆ. ಏಕೆಂದರೆ : ಗರ್ಭದೇಹದಲ್ಲಿ ಓಜಸ್ಸು ಬಂದಾಗ ಪ್ರಸವವಾದರೆ ಓಜಸ್ಸು ಹೀನವಾದ ಕಾರಣ ತಾಯಿಯು ಮರಣಹೊಂದುತ್ತಾಳೆ ಮತ್ತು ಚಲಸ್ವಭಾವದಿಂದ ಅದು ಗರ್ಭದೇಹದಿಂದ ಹಿಂದಿರುಗಿ ಬಂದಾಗ ಶಿಶುವು ಮರಣ ಹೊಂದುವುದು. ಮಾತೃದೇಹದಲ್ಲಿ ಓಜಸ್ಸು ನಿಂತಿರುವಾಗ ಪ್ರಸವವಾದರೆ ಓಜೋಹೀನವಾದ ಶಿಶುವು ಮರಣಹೊಂದುವುದು ಆದರೆ ತಾಯಿಗೆ ಅಪಾಯವಿಲ್ಲ. ಕುಮಾರತನ್ತ್ರದಲ್ಲಿ—ರುದ್ರನಿಂದ ಓಜಸ್ಸು ರಾಕ್ಷಸಾಂಶಕ್ಕಾಗಿ ನಿರ್ದಿಷ್ಟವಾಗಿರುವುದರಿಂದ ಗರ್ಭಿಣಿಗೆ ಎಂಟನೆಯ ತಿಂಗಳಲ್ಲಿ ನೈಋತ ಗ್ರಹಪ್ರೀತ್ಯರ್ಥವಾಗಿ ಮಾಂಸೋದನವನ್ನು ನಿವಾಳಿಸಿ ಬಲಿಯನ್ನು ಹಾಕಿ ಹೊರಕ್ಕೆ ಬಿಸಾಡುವ ಸಂಪ್ರದಾಯವಿರುತ್ತದೆ. ಈ ಅಭಿಪ್ರಾಯದಿಂದಲೇ ಕುಶಲರಾದ ವೈದ್ಯರು ಗರ್ಭಿಣಿಗೆ ಭಯವುಂಟಾಗದಿರುವುದಕ್ಕಾಗಿ ಎಂಟನೆಯ ತಿಂಗಳನ್ನು ಲೆಕ್ಕ ಮಾಡಬಾರದೆಂದು ಹೇಳುತ್ತಾರೆ ॥೨೮–೩೦॥

ಮೂಲ—(ಚ। ಶಾ।)—

ತಸ್ಮಿನ್ (ಅಷ್ಟಮೇ ಮಾಸಿ) ಏಕದಿವಸಾತಿಕ್ರಾನ್ತೇಽಪಿ ನವಮಂ ಮಾಸಮುಪಾದಾಯ ಕಾಲಮಿತ್ಯಾಹುರಾದಶಮಾನ್ಮಾಸಾದೇತಾವಾನ್ಕಾಲಃ ವೈಕಾರಿಕಮತಃ ಪರಂ ಕುಕ್ಷೌ ಸ್ಥಾನಂ ಗರ್ಭಸ್ಯ। ದಶಮಾದಿತಿ ವಚನಂ ಪ್ರಶಸ್ತತರಪ್ರಸವಕಾಲಾಭಿಪ್ರಾಯೇಣ ॥೩೧॥

(ಸು। ಶಾ। ಅ। ೩)—

"ನವಮದಶಮ್ಯೈಕಾದಶದ್ವಾದಶಾನಾಮನ್ಯತಮಸ್ಮಿನ್ ಜಾಯತೇ । ಅತೋಽನ್ಯಥಾ ವಿಕಾರೀಭವತಿ" । ಇತಿ ಯದುಕ್ತಂ ದ್ವಾದಶಮಾಸಪರ್ಯನ್ತಂ ಸಮ್ಯಕ್ಪ್ರಸವಕಾಲಾಭಿಧಾನಂ ತತ್ ಸ್ತೋಕದೋಷಯೋಃ ಏಕಾದಶದ್ವಾದಶಮಾಸಯೋರೇವಾಲ್ಪದೋಷತ್ವೇನಾದೋಷಪಕ್ಷ ಏವ ನಿಕ್ಷಿಪೇದಿತಿ ಬೋದ್ಧವ್ಯಮ್ ॥೩೨॥

ದೀಪಿಕೆ—(ಚ। ಶಾ।)—

ಎಂಟನೆಯ ತಿಂಗಳು ತುಂಬಿದ ಮೇಲೆ ಒಂದು ದಿನ ಕಳೆದರೂ ಒಂಭತ್ತನೆಯ ತಿಂಗಳಾಯ್ತೆಂದು ಹತ್ತು ತಿಂಗಳವರೆಗೂ ಸರಿಯಾದ ಪ್ರಸವ ಕಾಲವೆನ್ನುತ್ತಾರೆ. ಅನಂತರದಲ್ಲೂ ಗರ್ಭಿಣಿಯ ಗರ್ಭಕೋಶದಲ್ಲೇ ಶಿಶುವಿದ್ದು ಹೆರಿಗೆಯಾಗದಿದ್ದರೆ ಗರ್ಭವಿಕಾರವೆನ್ನುತ್ತಾರೆ ॥೩೧॥

(ಸು। ಶಾ। ಅ। ೩)—

ಹತ್ತು ತಿಂಗಳವರೆಗೆ "ಎಂದು ಮೇಲೆ ಹೇಳಿರುವುದು ಪ್ರಶಸ್ತತರವಾದ ಪ್ರಸವಕಾಲವೆಂಬ ಅಭಿಪ್ರಾಯದಿಂದ." ೯–೧೦–೧೧–೧೨ನೆಯ ತಿಂಗಳ ಪೈಕಿ ಯಾವುದೊಂದು ತಿಂಗಳಲ್ಲಾಗಲೀ ಪ್ರಸವವಾಗುತ್ತದೆ ಎಂದು ಹೇಳಿರುವುದಕ್ಕೆ ಹನ್ನೆರಡು ತಿಂಗಳವರೆಗೂ ಸರಿಯಾದ ಪ್ರಸವಕಾಲದ ಪರಿಮಿತಿಯೆಂದೂ ಅಲ್ಪದೋಷಯುಕ್ತಗಳಾದ ೧೧–೧೨ನೆಯ ತಿಂಗಳುಗಳಲ್ಲಿ ಪ್ರಸವವಾದರೂ ದೋಷವಿಲ್ಲವೆಂದೇ ತಿಳಿಯಬೇಕು ॥ ೩೨ ॥

ಮೂಲ—ಬೃಹಚ್ಛಾರೀರೇ—

ಅವ್ಯಕ್ತಃ ಪ್ರಥಮೇ ಮಾಸಿ ಸಪ್ತಾಹಾತ್ಕಲಲೋ ಭವೇತ್ ।
ಅಥ ದ್ವಿತೀಯಸಪ್ತಾಹೇ ಹೃದಯೋತ್ಪತ್ತಿಲಕ್ಷಣಮ್ ॥೩೩॥
ದೃಶ್ಯೇತ ಸೂಕ್ಷ್ಮಂ ನಾಭಿಪ್ರಣಾಳ್ಯಾಸ್ತದ್ಬುದ್ಬುದಸ್ಯ ಚ ।
ಆರಭ್ಯೋಽಥ ತೃತೀಯೇ ಸ್ಯಾತ್ ಹೃತ್ಸ್ಪನ್ದೋ ಮಾಸು ತುಲಜ್ಜಿಕಮ್ ॥೩೪॥
ವಿಭಾಗಚಿಹ್ನಂ ಕರ್ಣಾಕ್ಷಿಬುದ್ಬುದಾಃ ಗ್ರನ್ಥಿಸನ್ನಿಭಾಃ ।
ಸ್ಯುಃ ಶಾಖಾ ನಾಭಿನಾಳಸ್ಯ ಚಾಙ್ಕುರೋ ಗ್ರನ್ಥಿಸನ್ನಿಭಃ ॥೩೫॥
ಚತುರ್ಥೇ ಯಕೃತಃ ಫುಪ್ಫುಸಸ್ಯ ಚೋತ್ಪತ್ತಿರುಚ್ಯತೇ ।
ಜರಾಯುಸಂವೃತೋ ಗರ್ಭೋ ನಾಭಿನಾಡ್ಯಾ ಯುತೋ ಭವೇತ್ ॥೩೬॥
ದ್ವಿತೀಯೇ ಮಾಸಿ ಗರ್ಭಸ್ಯ ಪಿಣ್ಡಪೇಶ್ಯರ್ಬುದಾಕೃತಿಃ ।
ಸ್ಪರ್ಶೇನ ಲಭ್ಯತೇ ಪುಂಸ್ತ್ರೀನಪುಂಸಕ ಇತೀರಯೇತ್ ॥೩೭॥
ವ್ಯಕ್ತೀಭವತಿ ಮಾಸೇಽಸ್ಯ ತೃತೀಯೇ ಗಾತ್ರಪಂಚಕಮ್ ।
ಮೂರ್ಧಾ ದ್ವೇ ಸಕ್ಥಿನೀ ಬಾಹೂ ಸರ್ವಸೂಕ್ಷ್ಮಾಙ್ಗಜನ್ಮ ಚ ॥೩೮॥
ಸಮಮೇವ ಚ ಮೂರ್ಧಾಸ್ಯೈತ್ರಜ್ಞಾನಂ ಚ ಸುಖದುಃಖಯೋಃ ।
ಗರ್ಭಸ್ಯ ನಾಭಾವಪರಾಯಾಂ ಚ ನಾಡೀ ನಿಬಧ್ಯತೇ ॥೩೯॥
ಅಪರಾ ಮಾತೃಹೃದಯೇನಾನುಬದ್ಧಾ ಸ್ತನನಾಳಿಭಿಃ ।
ತನ್ಮಾತೃಹೃದಯಾತ್ಸ್ಪನ್ದಮಾನ ಆಹಾರಜೋ ರಸಃ ॥೪೦॥
ರಕ್ತಾನುಗೋಽಪರಾನ್ತಸ್ಮಾದ್ಗರ್ಭನಾಭಿಂ ತತೋ ಯಕೃತ್ ।
ಯಕೃತೋ ಹೃದಯಂ ತಸ್ಮಾತ್ಸರ್ವಾಙ್ಗಂ ಚಾಪ್ನುಯಾತ್ಕ್ರಮಾತ್ ॥೪೧॥

ಗರ್ಭೋಽತಃ ಪುಷ್ಟಿಮಾಪ್ನೋತಿ ಕೇದಾರ ಇವ ಕುಲ್ಯಯಾ ।
ಸಂಚಾರಾನ್ಮಲಿನಂ ತ್ವಸ್ರಂ ನಾಭಿನಾಡ್ಯೇವ ಗರ್ಭತಃ ॥೪೨॥
ಅಪರಾಂ ಪ್ರಾಪಿತಂ ತತ್ರ ಮಾತೃರಕ್ತಾಭಿಮೂರ್ಛಿತಮ್ ।
ಮಿಥೋ ವಿನಿಮಯಾತ್ತ್ಯಕ್ತಮಲಿನಾಂಶಂ ಗುಣೋತ್ಕರಮ್ ॥೪೩॥
ಭೂತ್ವಾ ಭೂಯೋಽಪಿ ಗರ್ಭಾಙ್ಗಪೋಷಣಾಯ ನಿವರ್ತತೇ ।
ಬೀಜೋಪನೀತೈರಾಹಾರ್ಯೈಃ ಪ್ರಥಮಂ ಗರ್ಭಪೋಷಣಮ್ ॥೪೪॥
ಮಾರ್ಗಗರ್ಭಾಶಯಾದಿಸ್ಥೈ ರಸರಕ್ತೈಶ್ಚ ಮಾತೃಜೈಃ ।
ಸರ್ವಂ ತದಪರೋತ್ಪತ್ತೌ ತದ್ದ್ವಾರೈವ ಭವಿಷ್ಯತಿ ॥೪೫॥
ಸಾಕ್ಷಾದನ್ನಸ್ಯ ಪಾನಸ್ಯ ಚಾಭಾವಾದುದರೇ ಶಿಶೋಃ ।
ಸ್ಥೂಲೋ ಮಲೋ ನ ಭವತಿ ಸೂಕ್ಷ್ಮಸ್ತ್ವಸ್ರೇಣ ಧಾವತಿ ॥೪೬॥
ಚತುರ್ಥೇ ವ್ಯಕ್ತತಾಙ್ಗಾನಾಂ ಚೇತನಾಯಾಶ್ಚ ಪಂಚಮೇ ।
ವ್ಯಕ್ತಂ ಸ್ಯಾತ್ಪೋತಚಲನಂ ಮೂರ್ಧ್ನಿ ರೋಮ್ಣಾಂ ಚ ಸಮ್ಭವಃ ॥೪೭॥
ಉಲ್ಬಸ್ತ್ವಚಂ ಸ್ನೇಹಯತಿ ಮಲೋಽನ್ತ್ರೇಽಲ್ಪೋಪಚೀಯತೇ ।
ಮಾಂಸಶೋಣಿತಯೋರ್ವೃದ್ಧಿರ್ವಿಶೇಷಾದತ್ರ ಜಾಯತೇ ॥೪೮॥
ಷಷ್ಠೇ ಸ್ನಾಯುಸಿರಾರೋಮಬಲವರ್ಣನಖತ್ವಚಾಮ್ ।
ಸರ್ವೈಸ್ಸ್ವಾಙ್ಗಸಮ್ಪೂರ್ಣೋ ಭಾವೈಃ ಪುಷ್ಯತಿ ಸಪ್ತಮೇ ॥೪೯॥
ಓಜೋಽಷ್ಟಮೇ ಸಂಚರತಿ ಮಾತಾಪುತ್ರೌ ಮುಹುಃ ಕ್ರಮಾತ್ ।
ತೇನ ತೌ ಮುದಿತೌ ಮ್ಲಾನೌ ತತ್ರ ಜಾತೋ ನ ಜೀವತಿ ॥೫೦॥
ಶಿಶುರೋಜೋಽನವಸ್ಥಾನಾನ್ನಾರೀ ಸಂಶಯಿತಾ ಭವೇತ್ ।
ತಸ್ಮಿನ್ನೇಕಾಹಯಾತೇಽಪಿ ಕಾಲಃ ಸೂತೇರತಃ ಪರಮ್ ॥೫೧॥

ದಶಮೇ ಮಾಸೇ :—(ಬೃಹಚ್ಛಾರೀರೇ) ಪೂರ್ಣೇ ತು ಗರ್ಭೋ ಜೀರ್ಣತ್ವಮಾಪ್ನುಯಾತ್ ।
ದಶಮೇ ಮಾಸೇ ದೇಹಾಕೃತಿಭೇದಾ ವ್ಯಕ್ತತರಾ ಭವನ್ತಿ ಗರ್ಭಸ್ಯ ।

ಮಾಸಮಧ್ಯೇ ಗರ್ಭಾಶಯಮೂಲಮೂರ್ಧ್ವತಮಂ ಸ್ಥಾನಮಧಿರೋಹತಿ। ಅನನ್ತರಂ ಪುರೋಭಾಗಂ ಪ್ರತಿಪ್ರವಣಂ ಕಿಂಚಿದಧೋ ಗಚ್ಛತಿ। ಊರ್ಧ್ವಸಮ್ಪೀಡನಲಕ್ಷಣಾನಿ ಲಘೂಭವನ್ತಿ। ಗರ್ಭಿಣೀ ಸ್ವಯಂ ಲಘುತರಾ ಸುಖಾಧಿಕೇತಿ ಚಾಭಿಮನ್ಯತೇ। ಪ್ರಥಮಪ್ರಸೂತೌ ಪೋತಸ್ಯ ಮೂರ್ಧಾ ಕಟೀಗುಹಾಂ ಪ್ರಾಪ್ಯ ಸ್ಥಿರೀಕೃತಶ್ಚ ಭವತಿ ॥೫೨॥

ದೀಪಿಕಾ——(ಬೃಹಚ್ಛಾರೀರೇ)——

ಮೊದಲನೆಯ ತಿಂಗಳ ಮೊದಲನೆಯ ವಾರದಲ್ಲಿ ಗರ್ಭಪಿಂಡವು ಕಲಲ (ಅವಯವವಿಲ್ಲದ ಶ್ಲೇಷ್ಮದ ಗಡ್ಡೆಯಂತೆ) ವಾಗುತ್ತದೆ; ಎರಡನೆಯ ವಾರದಕಡೆಗೆ ಹೃದಯದ ಚಿಹ್ನೆಯೂ ನಾಭಿ, ಮತ್ತು ನಾಭಿನಾಳವನ್ನು ಸೂಚಿಸುವ ಸಣ್ಣ ಗುಳ್ಳೆಯಂತೆ ಚಿಹ್ನೆಗಳೂ ಗರ್ಭಪಿಂಡದಲ್ಲಿ ಕಾಣಿಸುತ್ತವೆ. ಮೂರನೆಯ ವಾರದ ಕೊನೆಗೆ ಹೃದಯಸ್ಪನ್ದವುಂಟಾದಂತೆಯೂ ತಲೆಯ ಮೆದಳಿನಲ್ಲಿ ಕಣ್ಣು, ಕಿವಿಗಳನ್ನು ಸೂಚಿಸುವ ಗುಳ್ಳೆಯ ಆಕಾರದ ಸಣ್ಣ ಗಂಟುಗಳೂ ಕೈ ಕಾಲು ನಾಭಿನಾಳಗಳನ್ನು ಸೂಚಿಸುವ ಮಾಂಸಾಂಕುರಗಳೂ ಕಾಣಿಸುತ್ತವೆ. ಗರ್ಭವು ಜರಾಯುವೆಂಬ ತೆಳುವಾದ ಪೊರೆಯಿಂದ ಆವರಿಸಲ್ಪಟ್ಟಿರುತ್ತದೆ. ನಾಭಿನಾಳವೂ ಕಾಣಿ

ಸುತ್ತದೆ; ನಾಲ್ಕನೆಯ ವಾರದಲ್ಲಿ ಯಕೃತ್ತು ಪುಪ್ಪುಸಗಳು ಕಾಣಿಸುತ್ತವೆ. ಎರಡನೆಯ ತಿಂಗಳಲ್ಲಿ ಹೊಕ್ಕಳ ಕೆಳಭಾಗವನ್ನು ಮುಟ್ಟಿದರೆ ಗುಂಡಾಗಿಯೋ, ಚಪ್ಪಟೆಯಾಗಿಯೋ ಅಥವಾ ಕೋಳಿಮೊಟ್ಟೆಯ ಆಕಾರದಂತೆಯೋ ಇರುವ ಮಾಂಸಪಿಂಡವು ಇದ್ದಂತೆ ಗೊತ್ತಾಗುತ್ತದೆ. ಇವು ಕ್ರಮವಾಗಿ ಗಂಡು ಹೆಣ್ಣು ನಪುಂಸಕರು ಹುಟ್ಟುತ್ತಾರೆಂಬುದನ್ನು ಸೂಚಿಸುವ ಚಿಹ್ನೆಗಳು. ಮೂರನೆಯ ತಿಂಗಳಲ್ಲಿ ತಲೆ ಎರಡು ಕೈಗಳೂ ಎರಡು ಕಾಲುಗಳೂ ವ್ಯಕ್ತವಾಗಿ ಕಾಣಿಸುತ್ತವೆ. ತಲೆ, ಮುಖ, ನಾಭಿನಾಳ, ರಕ್ತವಾಹಿ ಸಿರೆ ಇವುಗಳೂ ಶಿಶುವಿನ ನಾಭಿಯನ್ನೂ ತಾಯಿಯ ಹೃದಯಕ್ಕೆ ಸೇರಿಸುವ ನಾಳವೂ ಕಾಣಿಸುತ್ತವೆ. ಮಾತೃಹೃದಯದಿಂದ ಬರುವ ಆಹಾರರಸವು ರಕ್ತದೊಡನೆ ಸೇರಿ ಗರ್ಭದ ನಾಭಿ, ಯಕೃತ್ತು, ಹೃದಯಗಳನ್ನು ತಲುಪಿ ಕಡೆಗೆ ಗರ್ಭದ ಎಲ್ಲಾ ಶರೀರಭಾಗಗಳಿಗೂ ಹರಡಿಕೊಳ್ಳುತ್ತದೆ. ಕಾಲುವೆಯ ನೀರು ಗದ್ದೆಗೆ ಹರಿದು ತೇವಮಾಡುವಂತೆ ಮಾತೃವಿನ ಆಹಾರರಸವು ಗರ್ಭಶರೀರದಲ್ಲಿ ಹರಿದು ಗರ್ಭಪೋಷಣೆಯನ್ನು ಮಾಡುತ್ತದೆ. ಗರ್ಭಶರೀರದಿಂದ ಮಲಿನ ರಕ್ತವು ಗರ್ಭನಾಭಿನಾಳದ ಮೂಲಕ ಮಾತೃಹೃದಯಕ್ಕೆ ಬರುತ್ತದೆ. ಅಪರದ ಉತ್ಪತ್ತಿಗೆ ಮುಂಚೆ ಗರ್ಭವಾಗಿ ಪರಿಣಮಿಸಿದ ಶುಕ್ರಶೋಣಿತ ಬೀಜಗಳಲ್ಲಿರುವ ಸ್ತ್ರೀಪುರುಷರ ಭಾಗಗಳೇ ಗರ್ಭಪೋಷಣೆಯನ್ನು ಮಾಡುತ್ತವೆ. ಮಾತೃವಿನ ರಸರಕ್ತಧಾತುಗಳಲ್ಲಿರುವ ಆಹಾರಾಂಶಗಳು ಗರ್ಭಾಶಯದೊಳಕ್ಕೆ ಜಿನುಗಿಬಂದು ಗರ್ಭಪೋಷಣೆಯನ್ನು ಮಾಡುತ್ತವೆ. ಗರ್ಭಸ್ಥ ಶಿಶುವಿನ ದೇಹದಲ್ಲಿ ದಪ್ಪ ಮಲಗಳುಂಟಾಗುವುದಿಲ್ಲ. ಸೂಕ್ಷ್ಮಮಲಗಳು ಮಲಿನರಕ್ತದೊಡನೆ ಸೇರಿ ನಾಭಿನಾಳದ ಮೂಲಕ ಮಾತೃದೇಹಕ್ಕೆ ಬರುತ್ತದೆ. ನಾಲ್ಕನೆಯ ತಿಂಗಳಲ್ಲಿ ಗರ್ಭಾಂಗಗಳು ಚೆನ್ನಾಗಿ ಕಾಣಿಸುತ್ತವೆ. ಐದನೆಯ ತಿಂಗಳಿನಲ್ಲಿ ಮನಸ್ಸುಂಟಾಗುತ್ತದೆ. ಪೋತಚಲನೆಯಾಗುತ್ತದೆ ಮತ್ತು ತಲೆಯಲ್ಲಿ ಕೇಶಗಳು ಹುಟ್ಟುತ್ತವೆ. ಸಿಂಬಳದಂತಿರುವ ತೆಳುವಾದ ಪೊರೆಯು ಮಗುವಿನ ಶರೀರಕ್ಕೆಲ್ಲಾ ಅಂಟಿಕೊಂಡಿರುತ್ತದೆ. ಕರುಳಿನಲ್ಲಿ ಅತ್ಯಲ್ಪವಾಗಿ ಮಲವು ಸೇರಿರುತ್ತದೆ. ಮಾಂಸ ರಕ್ತಗಳು ಹೆಚ್ಚು ಪ್ರಮಾಣದಿಂದ ತುಂಬಿಕೊಳ್ಳುತ್ತವೆ. ಆರನೆಯ ತಿಂಗಳಲ್ಲಿ ಸ್ನಾಯು, ಸಿರೆ, ರೋಮ, ಬಲ, ವರ್ಣ, ಉಗರು ಚರ್ಮಗಳು ವೃದ್ಧಿಗೊಳ್ಳುತ್ತವೆ. ಏಳನೆಯ ತಿಂಗಳಲ್ಲಿ ಶಿಶುವಿನ ಸರ್ವಾಂಗಗಳೂ ಹೆಚ್ಚುತ್ತವೆ. ಎಂಟನೆಯ ತಿಂಗಳಲ್ಲಿ ಓಜಸ್ಸು ಕ್ರಮವಾಗಿ ಮಾತೃಶರೀರದಿಂದ ಗರ್ಭಕ್ಕೂ ಗರ್ಭಶರೀರದಿಂದ ಮಾತೃವಿನ ಹೃದಯಕ್ಕೂ ಗರ್ಭನಾಭಿನಾಳದ ಮೂಲಕ ಆಗಾಗ್ಯೆ ಚಲಿಸುತ್ತಿರುತ್ತದೆಯಾಗಿ ಗರ್ಭದಲ್ಲಿರುವ ಶಿಶುವೂ ಮಾತೃವೂ ಕೆಲವು ವೇಳೆ ಹರ್ಷಚಿತ್ತರಾಗಿಯೂ ಮತ್ತೆ ಕೆಲವುವೇಳೆ ಬಳಲಿದವರಾಗಿಯೂ ಆಗುತ್ತಾರೆ. ಈ ಸಮಯದಲ್ಲಿ ಹುಟ್ಟಿದ ಮಗುವು ಬದುಕುವುದಿಲ್ಲ. ಓಜಸ್ಸು ಸ್ಥಿರವಾಗಿರುವುದಿಲ್ಲವಾದ ಕಾರಣ ತಾಯಿಯು ಬದುಕಿರುವುದೂ ಸಂಶಯವು. ಎಂಟನೆಯ ತಿಂಗಳು ಕಳೆದು ಒಂದು ದಿನವಾದರೂ ಪ್ರಸವಕಾಲವು ಸಮೀಪಿಸಿತೆಂದು ಹೇಳುತ್ತಾರೆ. ಹತ್ತು ತಿಂಗಳು ತುಂಬಿದರೆ ಕಳಿತ ಹಣ್ಣುಗಳು ತೊಟ್ಟಿನಿಂದ ಕಳಚಿ

ಬೀಳುವಂತೆ ಮಗುವು ಗರ್ಭಾಶಯದಿಂದ ಸುಖವಾಗಿ ಹೊರಗೆ ಬಂದು ಜನಿಸಿ ಬಿಡುತ್ತದೆ ॥೩೩–೫೧॥

ಹತ್ತನೆಯ ತಿಂಗಳಲ್ಲಿ ಶರೀರದ ಆಕಾರದಲ್ಲಿ ವ್ಯತ್ಯಾಸಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಆ ತಿಂಗಳ ಮಧ್ಯಕಾಲದಲ್ಲಿ ಗರ್ಭಾಶಯದ ಬುಡವು ಅತಿ ಮೇಲಕ್ಕೆ ಬರುತ್ತದೆ. ಮುಂಭಾಗವು ಸ್ವಲ್ಪ ಕೆಳಕ್ಕೆ ಬರುತ್ತದೆ. ಮೇಲ್ಗಡೆಗೆ ನುಗ್ಗುವ ಚಿಹ್ನೆಗಳು ಕಡಮೆಯಾಗುವ ಕಾರಣ ಗರ್ಭಿಣಿಯು ತನಗೆ ದೇಹವು ಹಗುರವಾಗಿ ತಾನು ಸುಖದಿಂದಿರುವೆನೆಂದು ತಿಳಿಯುತ್ತಾಳೆ. ಮೊದಲನೆಯ ಹೆರಿಗೆಯಲ್ಲಿ ಶಿಶುವಿನ ತಲೆಯು ಗರ್ಭಿಣಿಯ ಸೊಂಟದ ಹತ್ತಿರ ಬಿಗಿಯಾಗಿರುತ್ತದೆ ॥೫೨॥

ಮೂಲ––(ಮ। ಭಾ। ಸ್ಕಂ। ೩ ಅ। ೩೨) ಗರ್ಭವೃದ್ಧಿವಿಚಾರೇ ಮತಾನ್ತರಾಣಿ––

ಯಥಾ––ಕರ್ಮಣಾ ದೈವನೇತ್ರೇಣ ಜನ್ತುರ್ದೇಹೋಪಪತ್ತಯೇ।
ಸ್ತ್ರಿಯಾಃ ಪ್ರವಿಷ್ಟ ಉದರಂ ಪುಂಸೋ ರೇತಃ ಕಣಾಶ್ರಯಃ ॥೫೩॥
ಕಲಲನ್ತ್ವೇಕರಾತ್ರೇಣ ಪಂಚರಾತ್ರೇಣ ಬುದ್ಬುದಮ್।
ದಶಾಹೇನ ತು ಕರ್ಕನ್ಧೂಃ ಪೇಶ್ಯಣ್ಡಂ ವಾ ತತಃ ಪರಮ್ ॥೫೪॥
ಮಾಸೇನ ತು ಶಿರೋ ದ್ವಾಭ್ಯಾಂ ಬಾಹ್ವಙ್ಘ್ರ್ಯಾದ್ಯಙ್ಗವಿಗ್ರಹಃ।
ನಖಲೋಮಾಸ್ಥಿಚರ್ಮಾಣಿ ಲಿಙ್ಗಛಿದ್ರೋದ್ಭವಸ್ತ್ರಿಭಿಃ ॥೫೫॥
ಚತುರ್ಭಿರ್ಧಾತವಸ್ಸಪ್ತ ಪಂಚಭಿಃ ಕ್ಷುತ್ತೃಡುದ್ಭವಃ।
ಷಡ್ಭಿರ್ಜರಾಯುಣಾ ವೀತಃ ಕುಕ್ಷೌ ಭ್ರಾಮ್ಯತಿ ದಕ್ಷಿಣೇ ॥೫೬॥
ಮಾತೃಜಗ್ಧಾನ್ನಪಾನಾದ್ಯೈರೇಧದ್ಧಾತುರಸಮ್ಮತೇ।
ಶೇತೇ ವಿಣ್ಮೂತ್ರಯೋರ್ಗರ್ತೇ ಸಜನ್ತುರ್ಜನ್ತುಸಮ್ಭವೇ ॥೫೭॥
ಕ್ರಿಮಿಭಿಃ ಕ್ಷತಸರ್ವಾಙ್ಗಃ ಸೌಕುಮಾರ್ಯಾತ್ಪ್ರತಿಕ್ಷಣಮ್।
ಮೂರ್ಛಾಮಾಪ್ನೋತ್ಯುರುಕ್ಲೇಶಸ್ತತ್ರತ್ಯೈಃ ಕ್ಷುಧಿತೈರ್ಮುಹುಃ ॥೫೮॥
ಕಟುತೀಕ್ಷ್ಣೋಷ್ಣಲವಣೈ ರೂಕ್ಷಾಮ್ಲಾದಿಭಿರುಲ್ಬಣೈಃ।
ಮಾತೃಭುಕ್ತೈರುಪಸ್ಪೃಷ್ಟಸ್ಸರ್ವಾಂಗೋತ್ಥಿತವೇದನಃ ॥೫೯॥
ಉಲ್ಬೇನ ಸಂವೃತಸ್ತಸ್ಮಿನ್ನನ್ತ್ರೈಶ್ಚ ಬಹಿರಾವೃತಃ।
ಆಸ್ತೇ ಕೃತ್ವಾ ಶಿರಃ ಕುಕ್ಷೌ ಭುಗ್ನಪೃಷ್ಠಶಿರೋಧರಃ ॥೬೦॥
ಅಕಲ್ಪಃ ಸ್ವಾಙ್ಗಚೇಷ್ಟಾಯಾಂ ಶಕುನ್ತ ಇವ ಪಂಜರೇ।
ತತ್ರ ಲಬ್ಧಸ್ಮೃತಿರ್ದೈವಾತ್ಕರ್ಮಜನ್ಮಶತೋದ್ಭವಮ್ ॥೬೧॥
ಸ್ಮರನ್ದೀರ್ಘಮನುಚ್ಛ್ವಾಸಂ ಶರ್ಮ ಕಿನ್ನಾಮ ವಿನ್ದತೇ।
ಏವಂ ಕೃತಮತಿರ್ಗರ್ಭೋ ದಶಮಾಸ್ಯಸ್ತುವನ್ ಋಷಿಃ ॥೬೨॥
ಸದ್ಯಃ ಕ್ಷಿಪತ್ಯವಾಚೀನಂ ಪ್ರಸೂತ್ಯೈ ಸೂತಿಮಾರುತಃ।
ತೇನಾವಸೃಷ್ಟಸ್ಸಹಸಾ ಕೃತ್ವಾವಾಕ್ಛಿರ ಆತುರಃ ॥೬೩॥
ವಿನಿಷ್ಕ್ರಾಮತಿ ಕೃಚ್ಛ್ರೇಣ ನಿರುಚ್ಛ್ವಾಸೋ ಹತಸ್ಮೃತಿಃ।

ದೀಪಿಕೆ––(ಮ। ಭಾಗವತೇ ಸ್ಕಂ. ೩ ಅಧ್ಯಾಯ ೩೨) ಗರ್ಭವೃದ್ಧಿಕ್ರಮದ ಬಗ್ಗೆ ಮತಾನ್ತರಗಳು––

ಜೀವನು ಹಿಂದಿನ ಜನ್ಮದ ಕರ್ಮಗಳಿಗೆ ತಕ್ಕಂತೆ ಪುರುಷನ ಶುಕ್ರಬೀಜ ರೂಪದಿಂದ ಸ್ತ್ರೀಯಳ ಗರ್ಭಾಶಯವನ್ನು ಸೇರಿ ಒಂದು ದಿನದಲ್ಲಿ

ಕಲಲವಾಗಿಯೂ ಐದು ದಿನದ ಹೊತ್ತಿಗೆ ನೀರಿನ ಗುಳ್ಳೆಯಂತೆಯೂ ಹತ್ತು ದಿನಗಳಲ್ಲಿ ಎಲಚೀ(ಬೋರೆ)ಕಾಯಿನಷ್ಟು ದಪ್ಪದ ಮಾಂಸಪೇಶಿ ಅಥವಾ ಕೋಳಿಯ ಮೊಟ್ಟೆಯಂತೆಯೂ ದೇಹವನ್ನು ಹೊಂದಿ ಒಂದು ತಿಂಗಳ ಕಾಲದಲ್ಲಿ ತಲೆ ಕೈಕಾಲುಗಳಿಂದ ಕೂಡಿದ ಶರೀರಾಕಾರವನ್ನೂ ಮೂರು ತಿಂಗಳಲ್ಲಿ ಉಗರು, ಶರೀರದ ರೋಮಗಳು, ಮೂಳೆ, ಚರ್ಮ, ಜನನೇನ್ದ್ರಿಯಗಳನ್ನೂ ನಾಲ್ಕನೆಯ ತಿಂಗಳಲ್ಲಿ ಏಳು ಧಾತುಗಳಿಂದಲೂ, ಐದನೆಯ ತಿಂಗಳಲ್ಲಿ ಹಸಿವು ಬಾಯಾರಿಕೆಗಳನ್ನೂ ಹೊಂದಿ ಆರನೆಯ ತಿಂಗಳಲ್ಲಿ ಜರಾಯುವಿನಿಂದ ಮುಚ್ಚಲ್ಪಟ್ಟು ಹೊಟ್ಟೆಯ ಬಲಭಾಗದಲ್ಲಿ ಅಲುಗಾಡುತ್ತಿರುವನು. ತಾಯಿಯು ತೆಗೆದುಕೊಂಡ ಆಹಾರ ಪಾನಗಳಿಂದ ವೃದ್ಧಿಹೊಂದಿ ಮೃದುಶರೀರವುಳ್ಳವನಾಗಿ ಮಲಮೂತ್ರಗಳ ಗುಂಡಿಯಲ್ಲಿ ಬಿದ್ದು ಕ್ರಿಮಿಗಳಿಂದ ಕಚ್ಚಲ್ಪಟ್ಟು ಸರ್ವಾಙ್ಗಗಳಲ್ಲೂ ಘಾಯವಾಗುವುದರಿಂದ ನೋವನ್ನು ಸಹಿಸಲಾರದೆ ಮೂರ್ಛೆ ಹೊಂದುತ್ತಾನೆ. ಮತ್ತು ತಾಯಿಯು ಭುಜಿಸುವ ಖಾರ, ಉಪ್ಪು, ಹುಳಿ, ಚುರುಕು, ಬಿಸಿ, ರೂಕ್ಷ ಪದಾರ್ಥಗಳ ಸಾರವು ಶರೀರಗತವಾಗಿ ಸಕಲ ಅಂಗಗಳಲ್ಲೂ ನೋವನ್ನುಂಟುಮಾಡುತ್ತದೆ. ಜರಾಯುವಿನಿಂದ ಆವರಿಸ್ಪಟ್ಟು ಹೊಟ್ಟೆಯಮೇಲೆ ತಲೆಯನ್ನು ಬಗ್ಗಿಸಿ ಬೆನ್ನು ಕತ್ತುಗಳನ್ನು ಸಂಕೋಚ ಮಾಡಿಕೊಂಡು ಪಂಜರದಲ್ಲಿರುವ ಹಕ್ಕಿಯಂತೆ ಕೈ ಕಾಲುಗಳನ್ನು ಅಲ್ಲಾಡಿಸುವುದಕ್ಕೂ ಆಗದೆ ನೂರಾರು ಜನ್ಮಗಳ ಕರ್ಮಫಲಗಳನ್ನು ಜ್ಞಾಪಿಸಿಕೊಂಡು ನಿಟ್ಟುಸುರನ್ನು ಬಿಡುತ್ತಾ ದುಃಖಪಡುತ್ತಿರುವ ಮಗುವನ್ನು ಹತ್ತನೆಯ ತಿಂಗಳಲ್ಲಿ ಪ್ರಸೂತಿವಾಯುವು ತಲೆ ಕೆಳಗೆಮಾಡಿ ಬಲಾತ್ಕಾರದಿಂದ ಗರ್ಭಾಶಯದಿಂದ ಹೊರಕ್ಕೆ ತಳ್ಳುತ್ತದೆ; ಆಗ ಸರಿಯಾಗಿ ಉಸಿರಾಡದೆ ಪ್ರಜ್ಞೆಯಿಲ್ಲದೆ ಮಗುವು ಬಿದ್ದಿರುತ್ತದೆ ॥೫೩-೬೩॥

ಮೂಲ—ಕು। ಸ। ವಾರಿಯರ—ಮಾಸಕ್ರಮೇಣ ಗರ್ಭಾಶಯವೃದ್ಧಿಃ—

ಗರ್ಭೇ ತು ವರ್ಧಮಾನೇ ತದಾಶಯೋ ವರ್ಧತೇಽನ್ವಹಮ್ ॥೬೪॥
ತತ್ತು ಮಾಸದ್ವಯಾನ್ತೇ ಸ್ಯಾತ್ಸ್ವಾದುನಾರಙ್ಗಕಾಕೃತಿಃ।
ಮಾಸತ್ರಯಾನ್ತೇಽಪವಲ್ಕನಾಳಿಕೇರಫಲೋಪಮಃ ॥೬೫॥
ಕಟೀಗುಹೋರ್ಧ್ವಸೀಮಾನಂ ಚತುರ್ಥೇ ಲಙ್ಘಯತ್ಯಲಮ್।
ಯಾವದ್ಭಗಸಮಸ್ಥಿತ್ಯಾ ಊರ್ಧ್ವಂ ಯಾತ್ಯಙ್ಗುಳತ್ರಯಮ್ ॥೬೬॥
ಸ ಪಞ್ಚಮೇ ಮಾಸಿ ನಾಭೇರ್ದ್ವ್ಯಙ್ಗುಳಾಧಃ ಪ್ರದೇಶಗಃ।
ನಾಭಿಕೂಪಸಮಷ್ಷಷ್ಠೇ ಸಪ್ತಮೇ ತ್ರ್ಯಙ್ಗುಳಾಧಿಕಃ ॥೬೭॥
ನಾಭಿಹೃತ್ಕೂಪಯೋರ್ಮಧ್ಯಮಷ್ಟಮೇ ಮಾಸಿ ಗಚ್ಛತಿ।
ಹೃತ್ಕೂಪಕಾನ್ತಂ ನವಮೇ ಪ್ರಾಪ್ನೋತಿ ದಶಮೇ ಪುನಃ ॥೬೮॥
ಗೃಹ್ಣಾತ್ಯಷ್ಟಮಮಾಸೀಯಂ ಸ್ಥಾನಮೇವ ಶ್ಲಥೀಭವನ್।
ಅಪರಾತಃ ಕ್ರಮಾದ್ಗರ್ಭೋ ಬಹಿರ್ಯಾತುಂ ವ್ಯವಸ್ಯತಿ ॥೬೯॥

ದೀಪಿಕೆ—ಪ-ಸ-ವಾರಿಯರ—ತಿಂಗಳು ತಿಂಗಳಿಗೆ ತಕ್ಕಂತೆ ಗರ್ಭಾಶಯದ ವೃದ್ಧಿಯು:—

ಗರ್ಭಧಾರಣೆಯಾದ ಮೇಲೆ ಎರಡನೆಯ ತಿಂಗಳು ತುಂಬುವಾಗ್ಯೆ ಸಿಹಿ ಕಿತ್ತಲೆಹಣ್ಣಿನ ಗಾತ್ರಕ್ಕೆ ಗರ್ಭಾಶಯವು ಉಬ್ಬುತ್ತದೆ; ಮೂರು ತಿಂಗಳಿಗೆ

ಮೊಟ್ಟೆತೆಗೆದ ತೆಂಗಿಕಾಯಿನಷ್ಟು ದಪ್ಪವಾಗುತ್ತದೆ; ನಾಲ್ಕನೆಯ ತಿಂಗಳು ಕಳೆದರೆ ಸೊಂಟದ ಮೇಲೆ ಜನನೇನ್ದ್ರಿಯದ ಮೇಲೆ ಮೂರು ಬೆರಳಿನಷ್ಟು ಮಟ್ಟಕ್ಕೆ ಬೆಳೆಯುತ್ತದೆ; ಐದನೆಯ ತಿಂಗಳ ಕೊನೆಗೆ ಹೊಕ್ಕಳ ಕೆಳಗೆ ಎರಡು ಬೆರಳಿನಷ್ಟು ಕೆಳಗೆ ಬರುತ್ತದೆ ; ಆರನೆಯ ತಿಂಗಳಲ್ಲಿ ಹೊಕ್ಕಳ ಮಟ್ಟಕ್ಕೂ, ಏಳನೆಯ ತಿಂಗಳಲ್ಲಿ ಹೊಕ್ಕಳಿನ ಮೇಲೆ ಮೂರು ಬೆರಳಿನಷ್ಟು ಎತ್ತರಕ್ಕೂ, ಎಂಟನೆಯ ತಿಂಗಳ ಕಡೆಗೆ ಹೊಕ್ಕಳಿಗೂ ಎದೆಗೂಡಿಗೂ ಮಧ್ಯಕ್ಕೂ, ಒಂಭತ್ತನೆಯ ತಿಂಗಳ ಕಡೆಗೆ ಎದೆಗೂಡಿನ ವರೆಗೂ ಬೆಳೆದು ಬರುತ್ತದೆ. ಹತ್ತನೆಯ ತಿಂಗಳಲ್ಲಿ ಗರ್ಭನಾಭಿನಾಳವು ಮಾತೃಹೃದಯದಿಂದ ಸಡಲಿರುವ ಕಾರಣ ಗರ್ಭವು ಕೆಳಕ್ಕೆ ಜಾರಿಬಂದು ಎಂಟನೆಯ ತಿಂಗಳಲ್ಲಿದ್ದ (ಎದೆಗೂಡಿಗೂ ಹೊಕ್ಕಳಿಗೂ ಮಧ್ಯಭಾಗ) ಮಟ್ಟಕ್ಕೆ ಬರುತ್ತದೆ. ಮತ್ತು ಅಪರಾ (ಜರಾಯು ಚೀಲ) ದಿಂದ ಹೊರಕ್ಕೆ ಬರಲು ಪ್ರಯತ್ನಿಸುತ್ತದೆ ॥ ೬೪–೬೯ ॥

ಮೂಲ—(ಸು।ಶಾ।ಅ। ೧೦)—ಗರ್ಭಿಣ್ಯಾಃ ಪಥ್ಯಾನಿ—

ಗರ್ಭಿಣೀ ಪ್ರಥಮದಿವಸಾದಾಪ್ರಸವಾತ್ ಹೃದ್ಯಂ ಮಧುರಪ್ರಾಯಂ ಸ್ನಿಗ್ಧಂ ದೀಪನೀಯಸಂಸ್ಕೃತಂ ಚ ಭೋಜನಂ ಭೋಜಯೇತ್।ವಿಶೇಷತಶ್ಚ ಗರ್ಭಿಣೀ ಪ್ರಥಮದ್ವಿತೀಯತೃತೀಯಮಾಸೇಷು ಮಧುರಶೀತದ್ರವಪ್ರಾಯಮಾಹಾರಮುಪಸೇವಯೇತ್ । ತೃತೀಯೇ ಷಷ್ಟಿಕೌದನಂ ಪಯಸಾ ಭೋಜಯೇತ್ । ಚತುರ್ಥೇ ಷಷ್ಟಿಕೌದನಂ ದಧ್ನಾ ಭೋಜಯೇತ್ । ಪಂಚಮೇ ಪಯಸಾ ಪಯೋನವನೀತಸಂಸೃಷ್ಟಮ್ । ಷಷ್ಠೇ ಷಷ್ಟಿಕೌದನಂ ಸರ್ಪಿಷಾ ಭೋಜಯೇಚ್ಛ್ವದಂಷ್ಟ್ರಾಸಿದ್ಧಸ್ಯ ಸರ್ಪಿಷಾ ಮಾತ್ರಾಂ ಪಾಯಯೇದ್ಯವಾಗೂಂ ವಾ । ಸಪ್ತಮೇ ಸರ್ಪಿಃ ಪೃಥಕ್ಪರ್ಣ್ಯಾದಿಸಿದ್ಧಮ್ । ಏವಮಾಪ್ಯಾಯತೇ ಗರ್ಭಃ । ಅಷ್ಟಮಾನ್ಮಾಸಾದೂರ್ಧ್ವಂ ಸ್ನಿಗ್ಧಾಭಿಃ ಯವಾಗೂಭಿರ್ಜಾಙ್ಗಲರಸೈಶ್ಚೋಪಕ್ರಾಮೇದಾಪ್ರಸವಾತ್ । ಏವಮುಪಕ್ರಾನ್ತಾ ಬಲವತೀ ಸ್ನಿಗ್ಧಾ ಹ್ಯನುಪದ್ರವಾ ಸುಖಂ ಪ್ರಸೂಯತೇ ॥ ೭೦ ॥

(ಚ। ಶಾ।)—ತತ್ರ ಪ್ರಥಮೇ ಮಾಸಿ ಶಙ್ಕೇತ ಚೇದ್ಗರ್ಭಮಾಪನ್ನಾ ಕ್ಷೀರಮನುಪಸಂಸ್ಕೃತಂ ಮಾತ್ರಾವಚ್ಛೀತಂ ಕಾಲೇಕಾಲೇ ಪಿಬೇದನ್ತರ್ವತ್ನೀ, ಸಾತ್ಮ್ಯಮೇವ ಚ ಪುನರ್ಭೋಜನಂ ಸಾಯಂಪ್ರಾತಶ್ಚ ಭುಂಜೀತ । ದ್ವಿತೀಯೇ ಮಾಸೇ ಕ್ಷೀರಮೇವ ಚ ಮಧುರೌಷಧಸಿದ್ಧಮ್ । ತೃತೀಯೇ ಕ್ಷೀರಂ ಮಧುಸರ್ಪಿರ್ಭ್ಯಾಮುಪಸಂಸೃಜ್ಯ । ಚತುರ್ಥೇ ಮಾಸೇ ಕ್ಷೀರನವನೀತಮಕ್ಷಮಾತ್ರಮಶ್ನೀಯಾತ್। ಪಂಚಮೇ ಕ್ಷೀರಸರ್ಪಿಃ । ಷಷ್ಠೇ ಮಾಸೇ ಕ್ಷೀರಸರ್ಪಿರ್ಮಧುರೌಷಧಸಿದ್ಧಮ್। ತದೇವ ಸಪ್ತಮೇ ಮಾಸೇ । ಅಷ್ಟಮೇ ತು ಮಾಸೇ ಕ್ಷೀರಯವಾಗೂಂ ಸರ್ಪಿಷ್ಮತೀಂ ಕಾಲೇ ಕಾಲೇ ಪಿಬೇತ್ । ನೇತಿ ಭದ್ರಕಾಪ್ಯಃ। ಪೈಙ್ಗಲ್ಯಾಬಾಧೋ ಹಿ ಅಸ್ಯಾ ಗರ್ಭಮಾಪಾದಯೇತ್ । ಅಸ್ತ್ವತ್ರ ಪೈಙ್ಗಲ್ಯಾಬಾಧ ಇತ್ಯಾಹ ಭಗವಾನ್ ಪುನರ್ವಸುರಾತ್ರೇಯಃ। ನ ತ್ವೇವೈತನ್ನ ಕಾರ್ಯಮ್ ॥ ೭೧ ॥

ದೀಪಿಕೆ––(ಸು।ಶಾ।ಅ। ೧೦)–ಗರ್ಭಿಣಿಗೆ ಪಥ್ಯವಿಚಾರ––

ಗರ್ಭಿಣಿಯು ಗರ್ಭಧರಿಸಿದಲಾಗಾಯ್ತು ಪ್ರಸವಕಾಲದವರೆಗೂ ಮನಸ್ಸಿಗೆ ಹಿತವಾದ ದ್ರವರೂಪದ ಸಿಹಿರಸವೇ ಹೆಚ್ಚಾಗಿರುವ ಜಿಡ್ಡಾದ ಹಸಿವೆಯನ್ನುಂಟು

ಮಾಡುವ ವಸ್ತುಗಳಿಂದ ತಯಾರಿಸಿದ ಆಹಾರವನ್ನೇ ಭೋಜನಮಾಡಬೇಕು. ಮುಖ್ಯವಾಗಿ ಒಂದು ಎರಡು ಮೂರನೆಯ ತಿಂಗಳುಗಳಲ್ಲಿ ಮಧುರ ಮತ್ತು ಶೀತ ದ್ರವಗಳು ಹೆಚ್ಚುಪ್ರಮಾಣದಲ್ಲಿರುವಂತೆ ಶಾಲಿಯನ್ನವನ್ನು ಹಾಲಿನೊಡನೆಯೂ, ನಾಲ್ಕನೆಯ ತಿಂಗಳಲ್ಲಿ ಮೊಸರಿನೊಡನೆಯೂ, ಐದನೆಯ ತಿಂಗಳಲ್ಲಿ ಹಾಲಿನೊಡನೆ ಯಾಗಲೀ ಹಾಲು ಬೆಣ್ಣೆ ಮಿಶ್ರಮಾಡಿಯಾಗಲೀ ಶಾಲ್ಯನ್ನವನ್ನು ಭೋಜನ ಮಾಡಬೇಕು. ಆರನೆಯ ತಿಂಗಳಲ್ಲಿ ತುಪ್ಪ ಮಿಶ್ರಮಾಡಿ ಶಾಲ್ಯನ್ನವನ್ನುಂಡು ನೆಗ್ಗಿಲುಸಮೂಲದೊಡನೆ ತಯಾರಿಸಿದ ತುಪ್ಪವನ್ನಾಗಲೀ ಗಂಜಿಯನ್ನಾಗಲೀ ಸರಿಯಾದ ಪ್ರಮಾಣದಿಂದ ಪಾನಮಾಡಬೇಕು. ಏಳನೆಯ ತಿಂಗಳಲ್ಲಿ ಒಂದೆಲೆ ಹೊನ್ನೆ ಮೊದಲಾದ ಲಘುಪಂಚಮೂಲಗಳಿಂದ ತಯಾರಿಸಿದ ಘೃತವನ್ನು ಪಾನ ಮಾಡುವುದರಿಂದ ಗರ್ಭವು ಪುಷ್ಟಿಗೊಳ್ಳುತ್ತದೆ. ಎಂಟನೆಯ ತಿಂಗಳಿಂದ ಪ್ರಸವ ಕಾಲದವರೆಗೆ ಜಿಡ್ಡಾದ ಗಂಜಿಯನ್ನೂ ಜಾಂಗಲ ಮಾಂಸರಸವನ್ನೂ ಉಪಯೋಗಿಸಬೇಕು. ಹೀಗೆ ಉಪಚರಿಸಲ್ಪಟ್ಟ ಗರ್ಭಿಣಿಯು ಸ್ನಿಗ್ಧಳೂ, ಬಲಿಷ್ಠಳೂ ಆಗಿ ಯಾವ ಕಷ್ಟಕ್ಕೂ ಸಿಕ್ಕದೆ ಸುಖವಾಗಿ ಪ್ರಸವಿಸುತ್ತಾಳೆ ॥ ೭೦ ॥

(ಚ।ಶಾ)—ಗರ್ಭಧಾರಣೆಯಾಗಿದೆಯೆಂದು ಗೊತ್ತಾದರೆ ಆ ಗರ್ಭಿಣಿಗೆ ಮೊದಲನೆಯ ತಿಂಗಳಲ್ಲಿ ಶುದ್ಧವಾದ ಕಾದ ಹಾಲನ್ನು ತಣ್ಣಗೆಮಾಡಿ ಕೊಡಬೇಕು. ಅವಳಿಗೆ ಅಭ್ಯಾಸವಾಗಿರುವ ಆಹಾರಗಳನ್ನೇ ಹಗಲು ರಾತ್ರಿ ಕಾಲಗಳಲ್ಲಿ ಭೋಜನ ಮಾಡಿಸಬೇಕು. ಎರಡನೆಯ ತಿಂಗಳಲ್ಲಿ ಮಧುರೌಷಧಗಣ ದ್ರವ್ಯ ಗಳಿಂದ ತಯಾರಿಸಿದ ಹಾಲನ್ನೂ, ಮೂರನೆಯ ತಿಂಗಳಲ್ಲಿ ಜೇನುತುಪ್ಪ ಮತ್ತು ತುಪ್ಪಗಳನ್ನು ಮಿಶ್ರಮಾಡಿದ ಹಾಲನ್ನೂ ಕುಡಿಸಬೇಕು. ನಾಲ್ಕನೆಯ ತಿಂಗಳಲ್ಲಿ ಕರ್ಷ ಪ್ರಮಾಣ ಬೆಣ್ಣೆಯನ್ನು ಸೇರಿಸಿದ ಹಾಲನ್ನೂ, ಐದನೆಯ ತಿಂಗಳಲ್ಲಿ ತುಪ್ಪ ಮಿಶ್ರಮಾಡಿದ ಹಾಲನ್ನೂ, ಆರು ಏಳನೆಯ ತಿಂಗಳುಗಳಲ್ಲಿ ಮಧುರಗಣೌಷಧಿಗ ಳಿಂದ ತಯಾರಿಸಿದ ಹಾಲಿಗೆ ತುಪ್ಪಮಿಶ್ರಮಾಡಿಯೂ ಕುಡಿಸಬೇಕು. ಎಂಟನೆಯ ತಿಂಗಳಲ್ಲಿ ಗಂಜಿಗೆ ತುಪ್ಪ ಮತ್ತು ಹಾಲನ್ನು ಮಿಶ್ರಮಾಡಿ ಹಗಲು ರಾತ್ರಿಗಳ ಭೋಜ ನಕಾಲಗಳಲ್ಲಿ ಕುಡಿಸಬೇಕು. ಗರ್ಭಕ್ಕೆ ಪಿಙ್ಗಳವರ್ಣ (ಹಳದಿಬಣ್ಣ) ವುಂಟಾಗು ವುದರಿಂದ ಯವಾಗೂವನ್ನು ಕುಡಿಸಬಾರದೆಂದು ಭದ್ರಕಾಪ್ಯರು ಹೇಳುತ್ತಾರೆ. ಗರ್ಭಕ್ಕೆ ಪಿಙ್ಗಳತ್ವವು ಬಂದರೆ ಬರಲಿ, ಹಿಂದೆ ಹೇಳಿದ ರೀತಿ ಯವಾಗೂ ಪಾನ ವನ್ನು ಮಾಡಿಸದೆ ಇರಬಾರದು (ಮಾಡಿಸಲೇಬೇಕು) ಎಂದು ಆತ್ರೇಯರು ಹೇಳುತ್ತಾರೆ. ಅಲ್ಪದೋಷದಿಂದುಂಟಾಗುವ ಪಿಙ್ಗಳನೇತ್ರವಿಕಾರವನ್ನು ಅನಂತರ ಸುಲಭವಾಗಿ ನಿವಾರಣೆಮಾಡಬಹುದೆಂದು ಅವರ ಮತ ॥೭೧॥

ಮೂಲ—(ಚ।ಶಾ।) ಗರ್ಭಿಣ್ಯುಪಚಾರಃ—

ಸಾಧ್ವಾಚಾರಾ ಚಾತ್ಮಾನಮುಪಚರೇದ್ಧಿತಾಭ್ಯಾಮಾಹಾರವಿಹಾರಾಭ್ಯಾಮ್।
ವ್ಯಾಧೀಂಶ್ಚಾಸ್ಯಾಃ ಸುಖಸುಕುಮಾರಪ್ರಾಯೈರೌಷಧಾಹಾರೋಪಚಾರೈರುಪಾ-
ಚರೇತ್ ॥೭೨॥

(ಸು।ಶಾ।ಅ।೧೦)—

ಗರ್ಭಿಣೀ ನಿತ್ಯಂ ಪ್ರಹೃಷ್ಟಾ ಶುಚ್ಯಲಙ್ಕೃತಾ ಶಾನ್ತಿಮಙ್ಗಳದೇವತಾಗುರುಪರಾ ಚ ಭವೇತ್। ಶುಕ್ಲವಸನಾ ಶಯನಾಸನಂ ಮೃದ್ವಾಸ್ತರಣಂ ನಾತ್ಯುಚ್ಚಮುಪಾಶ್ರಯೋಪೇತಮಸಂಬಾಧಂ ಚ ವಿದಧ್ಯಾತ್ ॥೭೩॥

(ಅ।ಹೃ।ಶಾ।)—

ಉಪಚಾರಃ ಪ್ರಿಯಹಿತೈರ್ಭರ್ತ್ರಾ ಭೃತ್ಯೈಶ್ಚ ಗರ್ಭಧೃಕ್ । ಸದಾ ಕರಣೀಯಾ ॥೭೪॥

ದೀಪಿಕಾ—(ಚ।ಶಾ।) ಗರ್ಭಿಣಿಯರ ಉಪಚಾರಕ್ರಮಗಳು—

ಗರ್ಭಿಣಿಯರಿಗೆ ಬಾಧೆಯುಂಟಾಗದಂತೆ ಹಿತಕರಗಳಾದ ಆಹಾರವಿಹಾರಗಳಿಂದಲೂ ಅವರ ವ್ಯಾಧಿಗಳನ್ನು ಮೃದುಹಿತಕರಗಳಾದ ಔಷಧಗಳಿಂದಲೂ ಉಪಚಾರಮಾಡಬೇಕು ॥೭೨॥

(ಸು।ಶಾ॥ಅ। ೧೦)—

ಗರ್ಭಿಣಿಯು ಸದಾ ಸಂತೋಷವುಳ್ಳವಳಾಗಿ ಶುಚಿಯಾಗಿದ್ದು ಶುಚಿಯಾದ ಬಿಳಿಯ ವಸ್ತ್ರವನ್ನುಟ್ಟು ಆಭರಣ ಗಂಧಮಾಲಿಕೆಗಳಿಂದ ದೇಹವನ್ನು ಅಲಂಕಾರ ಮಾಡಿಕೊಂಡು ಶಾನ್ತಿಕರಗಳಾದ ಪುಣ್ಯಾಹಸ್ವಸ್ತಿವಾಚನಗಳನ್ನು ಮಾಡಿಸಿ ದೇವತಾ ಬ್ರಾಹ್ಮಣಗುರುಗಳಲ್ಲಿ ಭಕ್ತಿಯುಳ್ಳವಳಾಗಿರಬೇಕು. ಹಾಸಿಗೆ ಹೊದಿಗೆಗಳು ಮೆತ್ತಗೂ ಕೊಳೆಯಿಲ್ಲದವುಗಳಾಗಿಯೂ ಮಲಗುವ ಮತ್ತು ಕೂಡುವ ಪೀಠಗಳು ಅತಿ ಎತ್ತರವಿಲ್ಲದೆಯೂ ಬಚ್ಚಲುಮನೆ ಮತ್ತು ಮಲವಿಸರ್ಜನೆಯ ಸ್ಥಳಗಳು ಸಮೀಪದಲ್ಲಿದ್ದು ಯಾವ ವಿಧವಾದ ತೊಂದರೆಯೂ ಇಲ್ಲದಂತಿರಬೇಕು ॥೭೩॥

(ಅ।ಹೃ।)—

ಗರ್ಭಿಣಿಯನ್ನು ಅವಳ ಗಂಡನೂ ಸೇವಕರೂ ಹಿತಕರಗಳಾದ ಉಪಚಾರಗಳಿಂದ ಸರ್ವದಾ ಸಂತೈಸಬೇಕು ॥೭೪॥

ಮೂಲ—(ಚ।ಶಾ।)—ಗರ್ಭಿಣ್ಯಾ ವರ್ಜ್ಯಾನಿ—

ಋತುಮತ್ಯಾ ನಿಷಿದ್ಧಾನಿ ದಿವಾಸ್ವಪ್ನಾಂಜನಾದೀನಿ ಗರ್ಭಿಣೀ ಪರಿಹರೇತ್ । ಮಲಿನವಿಕೃತಹೀನಗಾತ್ರಾಣಿ ನ ಸ್ಪೃಶೇತ್, ದುರ್ಗನ್ಧದುರ್ದರ್ಶನಾನಿ ಪರಿಹರೇತ್। ನ ಚಾಭೀಕ್ಷ್ಣಂ ತೈಲಾಭ್ಯಙ್ಗೋತ್ಸಾದನಾನಿ ನಿಷೇವೇತ ನ ಚಾಯಾಸಯೇಚ್ಛರೀರಮ್ । ಊರ್ಧ್ವಮಾರುತತೃಷ್ಣಾಕ್ಷುನ್ಮುಖಶೋಷಭ್ರಮಾನ್ವಿತೈರಪತರ್ಪಣಂ ನ ಕಾರ್ಯಮ್ । ಗರ್ಭಿಣ್ಯಾದಿಷ್ವನಾತ್ಯಯಿಕೇ ವ್ಯಾಧೌ ಲಂಘನಪ್ರತಿಷೇಧಃ। (ಡಲ್ಹಣಃ) ॥೭೫॥

(ಸು। ಶಾ। ಅ। ೧೦)—

ಗರ್ಭಿಣೀ ಗರ್ಭಧಾರಣಾತ್ಪ್ರಭೃತಿ ವ್ಯವಾಯಂ ವ್ಯಾಯಾಮಮಪತರ್ಪಣಮತಿಕರ್ಶನಂ ದಿವಾಸ್ವಪ್ನಂ ರಾತ್ರಿಜಾಗರಣಂ ಶೋಕಂ ಯಾನಾರೋಹಣಂ ಭಯಮುತ್ಕುಟುಕಾಸನಂ ಚೈಕಾನ್ತತಃ ಸ್ನೇಹಾದಿಕ್ರಿಯಾಃ ಶೋಣಿತಮೋಕ್ಷಣಂ ಚಾಕಾಲೇ ವೇಗವಿಧಾರಣಂ ಚ ನ ಸೇವೇತ। ಶುಷ್ಕಂ ಪರ್ಯುಷಿತಂ ಕುಥಿತಂ

ಶೂನ್ಯಂ ಚಾನ್ನಂ ನೋಪಭುಂಜೀತ । ಬಹಿರ್ನಿಷ್ಕ್ರಮಣಂ ಶೂನ್ಯಾಗಾರಚೈತ್ಯ-
ವೃಕ್ಷಾಶ್ರಯಾನ್ ಕ್ರೋಧಭಯಸಂಕ್ರಾಂತ್ಸ್ ದಾನಾದುಚ್ಚೈರ್ಭಾಷ್ಯಾದಿಕಂ ಚ ಪರಿಹರೇದ್ಯಾನಿ ಚ ಗರ್ಭಂ ವ್ಯಾಪಾದಯಂತಿ । ಕ್ಷಾರಕರ್ಮ ಚ ವರ್ಜ್ಯಾನಿ ಸಾಮಾನ್ಯಮೇತದಾಪ್ರಸವಾತ್ ॥೬೬॥

ದೀಪಿಕಾ—ಗರ್ಭಿಣಿಯು ಬಿಡಬೇಕಾದ ಕಾರ್ಯಗಳು—(ಚ।ಶಾ।)—

ಋತುಮತಿಯು ವರ್ಜಮಾಡಬೇಕಾದ ಹಗಲುನಿದ್ರೆ, ರಾತ್ರಿ ಎಚ್ಚರಗೊಂಡಿರುವುದು, ಕಣ್ಣಿಗೆ ಕಾಡಿಗೆ ಹಚ್ಚಿಕೊಳ್ಳುವುದು ಇವೇ ಮೊದಲಾದುವುಗಳನ್ನು ಗರ್ಭಿಣಿಯೂ ತ್ಯಜಿಸಬೇಕು. ಕೋಳಕಾದ ವಿಕಾರವಾದ ಅಂಗಹೀನವಾದ ದೇಹಗಳನ್ನು ಮುಟ್ಟಬಾರದು. ದುರ್ವಾಸನೆಯನ್ನೂ ವಿಕಾರವಾದ ದೃಶ್ಯಗಳನ್ನೂ, ಒಬ್ಬಳೇ ಇರುವಾಗ ತೈಲವನ್ನು ಶರೀರಕ್ಕೆ ಪದೇಪದೇ ತೊಡೆದುಕೊಳ್ಳುವುದನ್ನೂ, ಶರೀರವನ್ನು ತಿಕ್ಕುವುದು, ಆಯಾಸವಾಗುವಂತೆ ಕೆಲಸಮಾಡುವುದು ಇವನ್ನೂ ಬಿಡಬೇಕು. ಮೇಲುಸಿರು ಬಿಡುವ, ನೀರಡಿಕೆಯುಳ್ಳ, ಹಸಿವಿರುವ, ಮುಖಬಾಡಿರುವ, ಗರ್ಭಿಣಿಯರಿಗೆ ಉಪವಾಸವನ್ನು ಮಾಡಿಸಬಾರದು. ಅಪಾಯಕರವಾದ ವ್ಯಾಧಿಯಲ್ಲಿ ಹೊರತಾಗಿ ಮತ್ತ್ಯಾವಾಗಲೂ ಗರ್ಭಿಣಿಯರು ಉಪವಾಸಮಾಡಬಾರದು ॥೬೫॥

(ಸು।ಶಾ।೩।೧೦)—

ಗರ್ಭಿಣಿಯು ಗರ್ಭಧಾರಣೆಯಾದ ಲಾಗಾಯ್ತು ಹೆರುವವರೆಗೆ ಮೈಥುನ, ಆಯಾಸಕಾರ್ಯ, ಅತಿಭೋಜನ, ಉಪವಾಸ, ಹಗಲುನಿದ್ರೆ, ರಾತ್ರಿ ಎಚ್ಚರವಾಗಿರುವುದು, ವ್ಯಸನ, ಯಾನವಾಹನಗಳಮೇಲೆ ಕೂತು ಸವಾರಿಮಾಡುವುದು, ಬಿಗಲು, ಕುಕ್ಕುರುಗಾಲಿನಲ್ಲಿ ಕೂಡುವುದು, ಒಬ್ಬಳೇ ಇರುವಾಗ ಸ್ನೇಹಸ್ವೇದಗಳನ್ನು ಸೇವಿಸುವುದು, ರಕ್ತಮೋಕ್ಷಣ, ವಾತಮೂತ್ರ ಪುರೀಷಾದಿವೇಗಗಳನ್ನು ತಡೆಯುವುದು, ಇವನ್ನು ಮಾಡಬಾರದು. ಒಣಗಿದ, ತಂಗಳಾದ, ಪುನಃ ಬೇಯಿಸಿದ, ಹಳಸಿದ ಅನ್ನವನ್ನು ತಿನ್ನಬಾರದು. ಗಾಳಿಸವಾರಿ, ಬರಿಯ ಮನೆಯಲ್ಲಿ ಒಬ್ಬಳೇ ಇರುವುದು, ಕೋಪ, ಭಯ, ಕಾಳಗವನ್ನು ನೋಡುವುದು, ಸ್ಮಶಾನದಲ್ಲಿ, ಮರದ ಕೆಳಭಾಗದಲ್ಲಿ ನಿಲ್ಲುವುದು, ಗಟ್ಟಿಯಾಗಿ ಕೂಗಿಕೊಳ್ಳುವುದು, ಇವೇ ಮೊದಲಾದ ಗರ್ಭನಾಶಕಗಳಾದ ಕೆಲಸಗಳನ್ನು ಬಿಡಬೇಕು. ಗರ್ಭಿಣಿಗೆ ಕ್ಷಾರಪಾತನವನ್ನು ಮಾಡಿಸಕೂಡದು ॥೬೬॥

ಮೂಲ—(ಸು।ಶಾ।೩।೧೧)—

ವಿವೃತ್ತಶಾಯಿನೀ ನಕ್ತಂಚಾರಿಣೀ ಚೋನ್ಮತ್ತಂ ಜನಯತಿ । ಅಪಸ್ಮಾರಿಣಂ ಪುನಃ ಕಲಿಕಲಹಶೀಲಾ । ವ್ಯವಾಯಶೀಲಾ ದುರ್ವಪುಷಮಹ್ರೀಕಂ ಸ್ತ್ರೈಣಂ ವಾ. ಶೋಕನಿತ್ಯಾ, ಭೀತಮಪಚಿತಮಲ್ಪಾಯುಷಂ ವಾ । ಅಭಿಧ್ಯಾತ್ರೀ (ಮನಸಾ ದ್ರೋಹಶೀಲಾ) ಪರೋಪತಾಪಿನಮೀರ್ಷ್ಯುಂ ಸ್ತ್ರೈಣಂ ವಾ ಸ್ತೇನಾ ತ್ವಾಯಾಸಬಹುಳಮತಿದ್ರೋಹಮಕರ್ಮಶೀಲಂ ವಾ । ಅಮರ್ಷಿಣೀ ಚಂಡಮೌಪಧಿಕ (ಶಾಠ್ಯ-

ಪ್ರಚಾರಿಣ್ಯುನ್ಮತ್ತಕಂ ವಾ । ಸ್ವಪ್ನನಿತ್ಯಾ ತನ್ದ್ರಾಲುಮಬುಧಮಲ್ಪಾಗ್ನಿಂ ವಾ ॥೭೭॥

(ಚ|ಶಾ)—ದೇವತಾರಕ್ಷೋಽನುಚರಪರಿರಕ್ಷಣಾರ್ಥಂ ನ ರಕ್ತಾನಿ ವಾಸಾಂಸಿ ಬಿಭೃಯಾತ್ । ಉತ್ಕುಟುಕವಿಷಮಕಠಿನಾಸನಸೇವಿನ್ಯಾ ವಾತಮೂತ್ರಪುರೀಷವೇಗಾನುಪರುನ್ಧತ್ಯಾ ದಾರುಣಾನುಚಿತವ್ಯಾಯಾಮಸೇವಿನ್ಯಾಸ್ತೀಕ್ಷ್ಣೋಷ್ಣಾತಿಮಾತ್ರಸೇವಿನ್ಯಾಃ ಪ್ರಮಿತಾಶನಸೇವಿನ್ಯಾ ಗರ್ಭೋ ಮ್ರಿಯತೇಽನ್ತಃಕುಕ್ಷೇರಕಾಲೇ ಸ್ರಂಸತೇ ಶೋಷೀ ಭವತಿ ವಾ । ತಥಾಽಭಿಘಾತಪ್ರಪೀಡನೈಃ ಶ್ವಭ್ರಕೂಪಪ್ರಪಾತದೇಶಾವಲೋಕನೈರ್ವಾಽಭೀಕ್ಷ್ಣಂ ಮಾತುಃ ಪ್ರತತಕಾಲೇ ಶಬ್ದಾತಿಮಾತ್ರಂ ಸಂಕ್ಷೋಭಣಾದ್ವಾ ಪ್ರಪತನಾತ್ಪ್ರಸ್ರವತಿ । ಪ್ರತತೋತ್ತಾನಶಾಯಿನ್ಯಾಃ ಪುನರ್ಗರ್ಭಸ್ಯ ನಾಭ್ಯಾಶ್ರಯಾ ನಾಡೀ ಕಣ್ಠಮನುವೇಷ್ಟಯತಿ । ನ ಮದಕರಾಣಿ ಖಾದ್ಯಾನ್ನಾನ್ಯಭ್ಯವಹರೇತ್ । ನ ಯಾನಮಧಿರೋಹೇತ್ । ನ ಮಾಂಸಮಶ್ನೀಯಾತ್ । ಸರ್ವೇನ್ದ್ರಿಯಪ್ರತಿಕೂಲಾಂಶ್ಚ ಭಾವಾನ್ದೂರತಃ ಪರಿವರ್ಜಯೇತ್ । ತಸ್ಮಾದಹಿತಾನಾಹಾರಾನ್ ಪ್ರಜಾಸಮುದಾಚಾರಾನ್ ಸ್ತ್ರೀ ವಿಶೇಷೇಣ ವರ್ಜಯೇತ್ । ನ ಚಾಸ್ಯಾ ವಮನವಿರೇಚನಶಿರೋವಿರೇಚನಾನಿ ಪ್ರಯೋಜಯೇತ್ । ನ ರಕ್ತಮವಸೇಚಯೇತ್ । ಸರ್ವಕಾಲಂ ಚ ನಾಸ್ಥಾಪನಮನುವಾಸನಂ ವಾ ಕುರ್ಯಾದಾತ್ಯಯಿಕಾದ್ವ್ಯಾಧೇರನ್ಯತ್ರ । ಅಷ್ಟಮಂ ಮಾಸಮುಪಾದಾಯ ವಮನಾದಿಸಾಧ್ಯೇಷು ಪುನರ್ವಿಕಾರೇಷ್ವಾತ್ಯಯಿಕೇಷು ಮೃದುಭಿರ್ವಮನಾದಿಭಿಸ್ತದರ್ಥಕಾರಿಭಿರ್ವೋಪಚಾರಃ ಸ್ಯಾತ್ ॥೭೮॥

(ಅ|ಹೃ|)—ಗರ್ಭಿಣೀ ಪುಷ್ಪಿತಾ ಸೂತಾ ವರ್ಜ್ಯಾ ನಸ್ಯಸ್ನೇಹವಮನಾದಿಭಿಃ ॥೭೯॥

ದೀಪಿಕೆ (ಸು|ಶಾ|೩|೧೦)—ಗರ್ಭಿಣಿಯು ನಗ್ನಳಾಗಿ (ಬರಿಯ ಮೈಯ್ಯಲ್ಲಿ) ಮಲಗಿದರೂ, ರಾತ್ರಿಕಾಲದಲ್ಲಿ ಸಂಚಾರಮಾಡುತ್ತಿದ್ದರೂ ಹುಚ್ಚನಾದ ಮಗನು ಹುಟ್ಟುತ್ತಾನೆ; ಕಲಕಲನೆ ಮಾತನಾಡುತ್ತಾ ಜಗಳಕಾದಿದರೆ ಅಪಸ್ಮಾರ ರೋಗದವನೂ, ಸಂಭೋಗದಲ್ಲೇ ನಿರತಳಾದರೆ ಕುತ್ಸಿತದೇಹವುಳ್ಳವನೂ, ಲಜ್ಜೆಯಿಲ್ಲದವನೂ ಹೆಣ್ಣಿಗನೂ, ಸದಾ ದುಃಖಿಯೂ, ಅಂಜುಬುರುಕನೂ, ಕೃಶನೂ, ಅಲ್ಪಾಯುವೂ ಆದ ಮಗನನ್ನೂ, ದುರಾಲೋಚನೆ ಮಾಡುವವಳು ಪರಹಿಂಸಕನೂ, ಕೋಪಿಷ್ಠ, ಕಳ್ಳ, ಹೆಣ್ಣಿಗ, ಅಯಾಸಪಡುವ, ಮೋಸಗಾರನಾದ ಮತ್ತು ಸೋಮಾರಿಯಾದವನನ್ನೂ, ಕೋಪಿಷ್ಠಳು ಸದಾ ಕೋಪವುಳ್ಳ ಮತ್ತು ಅಸೂಯಕ (ಇತರರ ಮೇಲ್ಮೆಯನ್ನು ಸಹಿಸದವನು) ನನ್ನೂ, ಸದಾ ನಿದ್ರೆಮಾಡುವವಳು ತೂಕಡಿಸುವ ಅವಿವೇಕಿಯಾದ ಮತ್ತು ಅಗ್ನಿಮಾಂದ್ಯವುಳ್ಳ ಮಗನನ್ನೂ ಹೆರುತ್ತಾಳೆ ॥೭೭॥

(ಚ|ಶಾ|)—ದೇವದೂತರ, ರಾಕ್ಷಸರ ಬಾಧೆಯನ್ನು ತಪ್ಪಿಸಿಕೊಳ್ಳಲು ಗರ್ಭಿಣಿಯು ಕೆಂಪು ಬಟ್ಟೆಯನ್ನುಡಬಾರದು. ಕುಕ್ಕುರುಗಾಲಿನಲ್ಲಾಗಲೀ ಹಳ್ಳ ದಿಣ್ಣೆಯುಳ್ಳ ಮತ್ತು ಅತಿಗಟ್ಟಿಯಾದ ಆಸನಗಳಲ್ಲಾಗಲೀ ಕೂಡುವುದರಿಂದಲೂ ಮಲಮೂತ್ರವಾತಗಳ ವೇಗಗಳನ್ನು ತಡೆಯುವುದರಿಂದಲೂ, ಅಯೋಗ್ಯರೀತಿಯಿಂದ ವ್ಯಾಯಾಮವನ್ನೂ, ಕಷ್ಟಕೆಲಸಗಳನ್ನೂ ಮಾಡುವುದರಿಂದಲೂ, ಬಿಸಿಯಾದ ಚುರುಕಾದ ಆಹಾರವನ್ನು ಹೆಚ್ಚಾಗಿ ತಿನ್ನುವುದರಿಂದಲೂ,

ಸ್ವಲ್ಪವಾಗಿ ಊಟಮಾಡುವುದರಿಂದಲೂ, ಗರ್ಭವು ಹೊಟ್ಟೆಯಲ್ಲೇ ಸಾಯುತ್ತದೆ, ಅಕಾಲದಲ್ಲಿಹುಟ್ಟುತ್ತದೆ ಅಥವಾ ಕೃಶವಾದ ದೇಹವುಳ್ಳದ್ದಾಗಿರುತ್ತದೆ. ಗರ್ಭಿಣಿಗೆ ಪೆಟ್ಟು ಬೀಳುವುದರಿಂದಲೂ, ಹಳ್ಳ ಭಾವಿ ಮತ್ತು ಆಳವಾಗಿರುವ ಪ್ರದೇಶವನ್ನು ಬಗ್ಗಿನೋಡುವುದರಿಂದಲೂ, ಅತಿಯಾಗಿ ಕುಲುಕುವ (ಹಿಂದಕ್ಕೂ ಮುಂದಕ್ಕೂ ಓಡಾಡುವ) ಯಾನಗಳಲ್ಲಿ ಸಂಚರಿಸುವುದು, ಹಿತವಲ್ಲದ ಮಾತುಗಳನ್ನೂ ವಿಷಯ ಗಳನ್ನೂ ಬಲುಕಾಲದವರೆಗೆ ಕೇಳುವುದು, ಇವುಗಳಿಂದ ಅಕಾಲದಲ್ಲಿ ಗರ್ಭಪಾತ ವಾಗುತ್ತದೆ. ಗರ್ಭಿಣಿಯು ಅಂಗತಂಗಲಾಗಿ (ಮೇಲ್ಮುಖವಾಗಿ) ಹೆಚ್ಚುಕಾಲ ಮಲಗಿದ್ದರೆ ಗರ್ಭದ ಹೊಕ್ಕಳಬಳ್ಳಿಯು ಅದರ ಕತ್ತಿಗೆ ಸುತ್ತಿಕೊಳ್ಳುತ್ತದೆ; ಮದ ಕರಗಳಾದ ಆಹಾರಗಳನ್ನು ತಿನ್ನಬಾರದು; ಮಾಂಸವನ್ನು ಪಯೋಗಿಸಬಾರದು. ತನಗೆ ಬೇಡವಾದ ಇಂದ್ರಿಯ ವಿಷಯುಗಳನ್ನು ಬಿಡಬೇಕು. ಉತ್ತಮಸಂತಾನ ವನ್ನು ಪಡೆಯಲಪೇಕ್ಷಿಸುವ ಗರ್ಭಿಣಿಯರು ತಮಗೆ ಬೇಕಿಲ್ಲದ ಆಹಾರ ವಿಹಾರ ಗಳನ್ನು ಬಿಡಬೇಕು. ಗರ್ಭಿಣಿಯರಿಗೆ ವಮನ, ವಿರೇಚನ, ಶಿರೋವಿರೇಚನ, ರಕ್ತಮೋಕ್ಷಣ ಕರ್ಮಗಳನ್ನು ಮಾಡಿಸಬಾರದು. ಅಪಾಯಕಾಲದಲ್ಲಿ ವಿನಃ ಬಾಕಿಯು ಕಾಲಗಳಲ್ಲಿ ಬಸ್ತಿಕರ್ಮವನ್ನು ಮಾಡಿಸಬಾರದು. ಎಂಟನೆಯ ತಿಂಗಳಲ್ಲಿ ವಮನಾದಿಗಳಿಂದ ನಿವಾರಿಸಲ್ಪಡಬಹುದಾದ ರೋಗಗಳಲ್ಲೂ ಅಪಾಯವುಂಟಾ ದಾಗಲೂ ಮೃದುವಾದ ವಮನಕರದ್ರವ್ಯಗಳಿಂದ ತದರ್ಥಕಾರಿ ಚಿಕಿತ್ಸೆಯನ್ನು ಮಾಡಿಸಬೇಕು ॥೭೮॥

(ಅ।ಹೃ।)—ಗರ್ಭಿಣಿ, ಋತುಮತಿ, ಬಾಣಂತಿ ಇವರಿಗೆ ಸ್ವೇದ, ವಮನ ಮೊದಲ್ಗೊಂಡು ಧೂಮಪಾನದವರೆಗಿನ ಚಿಕಿತ್ಸಾಕ್ರಮಗಳನ್ನು ನಡೆಸಬಾರದು ॥೭೯॥

ಸಪ್ತಮೋಽಧ್ಯಾಯಃ

ಪ್ರಸೂತಿವಿಜ್ಞಾನಮ್ ಸೂತಿಕೋಪಚಾರಾಶ್ಚ

ಮೂಲ—(ಸು।ಶಾ।ಅ।೧೦) ಗರ್ಭಾವಿಷ್ಕರಣಸ್ಥಿತಿಸ್ವರೂಪಮ್—

ಆಭುಗ್ನೋಽಭಿಮುಖಶ್ಶೇತೇ ಗರ್ಭೋ ಗರ್ಭಾಶಯೇ ಸ್ತ್ರಿಯಾಃ ।
ಸ ಯೋನಿಂ ಶಿರಸಾ ಯಾತಿ ಸ್ವಭಾವಾತ್ಪ್ರಸವಂ ಪ್ರತಿ ॥೧॥

(ಚ।ಶಾ।)—

ಗರ್ಭಸ್ತು ಖಲು ಮಾತುಃ ಪೃಷ್ಠಾಭಿಮುಖ ಊರ್ಧ್ವಶಿರಾಃ ಸಙ್ಕುಚ್ಯಾಙ್ಗಾನಿ ಚಾಸ್ತೇಽನ್ತಃಕುಕ್ಷೌ । ಸ ಚೋಪಸ್ಥಿತಪ್ರಸವಕಾಲೇ ಜನ್ಮನಿ ಪ್ರಸೂತಿಮಾರುತ-ಯೋಗಾತ್ಪರಿವೃತ್ಯಾವಾಕ್ಛಿರಾಃ ನಿಷ್ಕ್ರಾಮತ್ಯಪತ್ಯಪಥಮೇವ। ಏಷಾ ಪ್ರಕೃತಿಃ, ವಿಕೃತಿಃ ಪುನರತೋಽನ್ಯಥಾ ॥೨॥

ಭೇಳತನ್ತ್ರೇ—

ಕಥಂ ಗರ್ಭೋ ಮಾತುರುದರೇ ತಿಷ್ಠತೀತಿ? ಊರ್ಧ್ವಮಿತಿ ಶೌನಕಃ । ಅವಾಕ್ಛಿರಾ ಇತಿ ಭಾರದ್ವಾಜಃ। ನೇತ್ಯಾಹ ಭಗವಾನ್ ಪುನರ್ವಸುರಾತ್ರೇಯಃ।

ಯದ್ಯೂರ್ಧ್ವಂ ತಿಷ್ಠೇತ್ತರ್ಹಿ ಮಾತ್ರುಮಾತಿಃ (ರಃ) ಸ್ಯಾತ್ । ಯದ್ಯವಾಕ್ಛಿರಾಸ್ತದಾ ಸ್ವಮಾತಿಃ (ರಃ) ಸ್ಯಾತ್ । ಕಥಂ ತರ್ಹಿ ? ತಿರ್ಯಕ್ಸರ್ವೈರಯಮಙ್ಗಪ್ರತ್ಯಙ್ಗೈಃ ಪ್ರತಿಭುಗ್ನಸ್ತಿಷ್ಠೇತ್ । ತಸ್ಯ ಯದುತ್ತರಂ ತತ್ಪ್ರಥಮಂ ಪ್ರತಿಪದ್ಯತೇ ತದಸ್ಯ ಗುರುತರಂ ಭವತೀತಿ। ಅಥ ಖಲು ವೃಕ್ಕೌ ಽಸ್ಯ ಮೇದೋ ಗುರುರಿತಿ ಸಂಪ್ರವೃದ್ಧೌ ಪರಸ್ಪರಮಭಿವರ್ಧಯನ್ತಿ ॥೩॥

ತತ್ರ ಶ್ಲೋಕಃ—

ಊಷ್ಮಾ ಉರಸ್ಥೋ ದೇಹೇಽಸ್ಮಿನ್ ಜೀವನಂ ಗೃಹ್ಯ ತಿಷ್ಠತಿ ।
ರಸೋದ್ಭವಃ ಪುಮಾಂಸ್ತಸ್ಮಾದ್ರಸೋ ಜೀವನಮುಚ್ಯತೇ ॥೪॥

೭ನೆಯ ಅಧ್ಯಾಯ

ಪ್ರಸೂತಿವಿಜ್ಞಾನ ಮತ್ತು ಸೂತಿಕೋಪಚಾರ

ದೀಪಿಕಾ—(ಸು।ಶಾ।ಅ।೧೦) ಗರ್ಭಾಶಯದಲ್ಲಿ ಗರ್ಭವಿದ್ದು ಕಾಣುವ ರೀತಿ—

ಗರ್ಭಾಶಯದಲ್ಲಿ ಗರ್ಭವು ತನ್ನ ಮುಖವನ್ನು ಗರ್ಭಿಣಿಯ ಮುಖಕ್ಕೆ ಎದುರುಮಾಡಿಕೊಂಡು ಅಂಗಗಳನ್ನು ಮುದುರಿಕೊಂಡು ಇರುತ್ತದೆ. ಪ್ರಸವ ಕಾಲದಲ್ಲಿ ತನ್ನ ತಲೆಯನ್ನು ಯೋನಿಯ ಮೂಲಕ ನುಗ್ಗಿಸಿಕೊಂಡು ಹೊರಕ್ಕೆ ಬರುತ್ತದೆ ॥೧॥

(ಚ।ಶಾ।)—

ಗರ್ಭಸ್ಥಶಿಶುವು ಗರ್ಭಾಶಯದಲ್ಲಿರುವಾಗ ತಾಯಿಯ ಮುಖಕ್ಕೆ ಎದುರಾಗಿ ತನ್ನ ಮುಖವನ್ನಿಟ್ಟು ತಲೆಯನ್ನು ಮೇಲಕ್ಕೆ ಎತ್ತಿಕೊಂಡು ಅಂಗಗಳನ್ನು ಒಳಕ್ಕೆ ಎಳೆದುಕೊಂಡು ಇರುತ್ತದೆ. ಪ್ರಸವ ಕಾಲದಲ್ಲಿ ಪ್ರಸೂತಿ ಮಾರುತನ ವೇಗದಿಂದ ತಲೆ ಕೆಳಗೆ ಮಾಡಿಕೊಂಡು ತಿರುಗಿ ಯೋನಿಮಾರ್ಗದ ಮೂಲಕ ಹೊರಕ್ಕೆ ಬರುತ್ತದೆ. ಇದು ಸ್ವಾಭಾವಿಕ ಪ್ರಸವವು. ಇದಕ್ಕೆ ಬದಲಾಗಿ ಕಾಲು ಮೊದಲಾದ ಅಂಗಗಳು ಯೋನಿಯ ಮೂಲಕ ಬಂದು ಪ್ರಸವವಾದರೆ ಕಷ್ಟ ಪ್ರಸವವೆನ್ನುತ್ತಾರೆ ॥೨॥

ಭೇಳತಂತ್ರದಲ್ಲಿ--ಗರ್ಭಾಶಯದಲ್ಲಿ ಶಿಶುವು ಹೇಗೆ ಇರುತ್ತದೆ? ತಲೆ ಮೇಲಾಗಿರುತ್ತದೆಂದು ಶೌನಕರೂ, ತಲೆ ಕೆಳಗೆ ಮಾಡಿಕೊಂಡು ನಿಂತಿರುತ್ತದೆಂದು ಭಾರದ್ವಾಜರೂ ಹೇಳುತ್ತಾರೆ. ಪುನರ್ವಸುರಾತ್ರೇಯರು ಹಾಗಲ್ಲ, ತಲೆಯು ಮೇಲಕ್ಕಿದ್ದರೆ ತಾಯಿ ಸಾಯುತ್ತಾಳೆ; ಕೆಳಗಿದ್ದರೆ ಆ ಮಗುವೇ ಸಾಯುತ್ತದೆ. ಮತ್ತೆ ಹೇಗಿರುತ್ತೆಂದರೆ ಅಡ್ಡಲಾಗಿದ್ದು ಸಕಲ ಅಂಗಗಳನ್ನೂ ಸಂಕೋಚಮಾಡಿಕೊಂಡೇ ಗರ್ಭಾಶಯದಲಿದ್ದು, ತಲೆಯು ಭಾರವಾದ ಅಂಗವಾದ್ದರಿಂದ ಪ್ರಸವ ಕಾಲದಲ್ಲಿ ತಲೆಯನ್ನು ಕೆಳಗಡೆಗೆ ತಂದು ಯೋನಿದ್ವಾರಾ ಹೊರಕ್ಕೆ ಬಂದು ಬಿಡುತ್ತದೆ. ವೃಕ್ಕಗಳೂ ಮೇದಸ್ಸೂ ಭಾರವಾಗಿದ್ದು ವೃದ್ಧಿ ಹೊಂದುತ್ತವೆ ॥೩॥

ಶಿಶುವಿಗೆ ಎದೆಯಲ್ಲಿರುವ ಶಾಖವೇ ಜೀವನಾಧಾರವಾದದ್ದು. ಮಾತೃವಿನ ರಸಧಾತುವಿನಿಂದಲೇ ಜೀವನು (ಶಿಶುವು) ಬೆಳೆಯಬೇಕಾದ್ದರಿಂದ ಈ ರಸ ಧಾತುವನ್ನೇ ಜೀವನವೆಂದು ಪರಿಗಣಿಸಬೇಕು ॥೪॥

ಮೂಲ--(ಸು।ಶಾ।ಅ। ೧೦) ಪ್ರಸೂತಿಸಾಮಗ್ರೀ—೧. ಸೂತಿಕಾಗಾರಮ್. ೨. ಉಪಕರಣಸಂಭಾರಾಃ. ೩. ಔಷಧಾನಿ. ೪. ಪರಿಚಾರಿಕಾಃ. ೫. ಸಾವಿಕಾಃ.

ತತ್ರ ಪ್ರಥಮಂ ತಾವತ್ ಸೂತಿಕಾಗಾರವರ್ಣನಮ್—

ತತ್ರಾರಿಷ್ಟಂ ಬ್ರಾಹ್ಮಣಕ್ಷತ್ರಿಯವೈಶ್ಯಶೂದ್ರಾಣಾಂ ಶ್ವೇತರಕ್ತಪೀತಕೃಷ್ಣೇಷು ಭೂಮಿಪ್ರದೇಶೇಷು ಬಿಲ್ವನ್ಯಗ್ರೋಧತಿನ್ದುಕಭಲ್ಲಾತಕನಿರ್ಮಿತಂ ಸರ್ವಾಗಾರಂ ಯಥಾಸಂಖ್ಯಂ ತನ್ಮಯಪರ್ಯಙ್ಕಮುಪಲಿಪ್ತಭಿತ್ತಿಂ ಸುವಿಭಕ್ತಪರಿಚ್ಛದಂ ಪ್ರಾಗ್ದ್ವಾರಂ ದಕ್ಷಿಣದ್ವಾರಂ ವಾಷ್ಟಹಸ್ತಾಯತಂ ಚತುರ್ಹಸ್ತವಿಸ್ತೃತಂ ರಕ್ಷಾಮಙ್ಗಳಸಮ್ಪನ್ನಂ ವಿಧೇಯಮ್ । ತತಃ ಪ್ರವೃತ್ತೇ ನವಮೇ ಮಾಸಿ ಪುಣ್ಯೇಽಹನಿ ಪ್ರಶಸ್ತನಕ್ಷತ್ರಯೋಗಮುಪಗತೇ ಭಗವತಿ ಶಶಿನಿ ಕಲ್ಯಾಣಕರಣೇ ಮೈತ್ರೇ ಮುಹೂರ್ತೇ ಶಾನ್ತಿಂ ಕೃತ್ವಾ ಪುಣ್ಯಾಹಶಬ್ದೇನ ಬ್ರಾಹ್ಮಣಮನುವರ್ತಮಾನಾ ಪ್ರದಕ್ಷಿಣಂ ಪ್ರವಿಶೇತ್ಸೂತಿಕಾಗಾರಂ ತತ್ರಸ್ಥಾ ಚ ಪ್ರಸವಕಾಲಂ ಪ್ರತೀಕ್ಷೇತ್ ॥೫॥

(ಚ।ಶಾ।)—

ಪ್ರಾಕ್ಚೈವಾಸ್ಯಾ ನವಮಮಾಸಾತ್ಸೂತಿಕಾಗಾರಂ ಕಾರಯೇದಪಹೃತಾಸ್ಥಿಕಪಾಲೇ ದೇಶೇ ಪ್ರಶಸ್ತರೂಪರಸಗನ್ಧಾಯಾಂ ಭೂಮೌ ಪ್ರಾಗ್ದ್ವಾರಮುದಗ್ದ್ವಾರಂ ವಾ। ವಾಸ್ತುವಿದ್ಯಾಹೃದಯಯೋಗಾಗ್ನಿಸಲಿಲವರ್ಚಃಸ್ಥಾನಸ್ನಾನಭೂಮಿಮಹಾನಸಮೃತುಸುಖಂ ಚ। ತತ್ರ ಬೈಲ್ವಾನಾಂ ಕಾಷ್ಠಾನಾಂ ತಿನ್ದುಕೈಙ್ಗುದಾನಾಂ ಭಲ್ಲಾತಕಾನಾಂ ವಾರಣಾನಾಂ ಖಾದಿರಾಣಾಂ ವಾ ಯಾನಿ ಚಾನ್ಯಾನ್ಯಪಿ ಬ್ರಾಹ್ಮಣಾಃ ಶಂಸೇಯುರಥರ್ವವೇದವಿದಃ ॥೬॥

ದೀಪಿಕೆ—(ಸು।ಶಾ।ಅ।೧೦)--ಪ್ರಸೂತಿಸಾಮಗ್ರಿಗಳು—೧. ಹೆರಿಗೆಯಮನೆ. ೨. ಉಪಕರಣವಸ್ತುಗಳು. ೩. ಔಷಧಿಗಳು. ೪. ಪರಿಚಾರಕರು. ೫. ಸೂಲಗಿತ್ತಿಯರು.

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಜಾತಿಯ ಗರ್ಭಿಣಿಯರಿಗೆ ಕ್ರಮವಾಗಿ ಬಿಳಪು, ಕೆಂಪು, ಹಳದಿ, ಕಪ್ಪು ಬಣ್ಣದ ನೆಲದಲ್ಲಿ ಬಿಲ್ವ, ಆಲ, ತೂಪರ, ಗೇರುಮರಗಳಿಂದ ತಯಾರಿಸಿದ ಹೆರಿಗೆಯ ಮನೆಗಳಲ್ಲಿ ಆಯಾಯ ಮರಗಳಿಂದ ಮಾಡಿದ ಮಂಚಗಳನ್ನೊದಗಿಸಿರಬೇಕು. ನೆಲಗಳಿಗೂ ಗೋಡೆಗಳಿಗೂ ನಯಗಾರೆಯನ್ನು ಬಳಿಸಿರಬೇಕು; ಸಾಮಾನುಗಳನ್ನು ವಿಂಗಡಿಸಿ ಗೊತ್ತಾದ ಸ್ಥಳಗಳಲ್ಲಿಟ್ಟಿರಬೇಕು. ಈ ಮನೆಗಳಿಗೆ ಪೂರ್ವಕ್ಕಾಗಲೀ ದಕ್ಷಿಣಕ್ಕಾಗಲೀ ಬಾಗಿಲನ್ನು ಇಟ್ಟಿರಬೇಕು. ಮನೆಯ ಉದ್ದ ಎಂಟು ಮೊಳಗಳೂ ಅಗಲ ನಾಲ್ಕು ಮೊಳಗಳೂ ಇರಬೇಕು. ರಕ್ಷೆ ಮಂಗಳ ಕಾರ್ಯಗಳನ್ನು ಮಾಡಿಸಿ ಗರ್ಭಿಣಿಗೆ ಒಂಭತ್ತನೆಯ ತಿಂಗಳಲ್ಲಿ ಶುಭ ದಿವಸ ಶುಭ ನಕ್ಷತ್ರ ಯೋಗ ಕರಣಗಳುಳ್ಳ ದಿವಸ ಮೈತ್ರ ಮುಹೂರ್ತದಲ್ಲಿ ಶಾನ್ತಿ ಕರ್ಮವನ್ನು ಮಾಡಿಸಿ ಪುಣ್ಯಾಹಶಬ್ದಗಳನ್ನುಚ್ಚಾರಮಾಡಿಸಿ ಬ್ರಾಹ್ಮಣರಿಗೆ ನಮಸ್ಕಾರ ಮಾಡಿಸಿ ಅವರ ಅಪ್ಪಣೆಯನ್ನು ಪಡೆದು ಅವರೊಡನೆ ಹೆರಿಗೆಯ ಮನೆಯನ್ನು ಗರ್ಭಿಣಿಯು ಪ್ರವೇಶಿಸಿ ಆಕೆಯು ಅಲ್ಲೇ ವಾಸಮಾಡುತ್ತಾ ಪ್ರಸವ ಕಾಲವನ್ನು ಎದುರುನೋಡುತ್ತಿರಬೇಕು ॥೫॥

(ಚ|ಶಾ|)—

ಗರ್ಭಿಣಿಗೆ ಒಂಭತ್ತು ತಿಂಗಳು ತುಂಬುವುದಕ್ಕೆ ಮೊದಲೇ ಹೆರಿಗೆಯ ಮನೆಯನ್ನು ತಯಾರಿಸಿಡಬೇಕು. ಆ ಸ್ಥಳದಲ್ಲಿದ್ದ ಮೂಳೆ ಬಕ್ಕರೆಚೂರುಗಳನ್ನು ನೆಲದಿಂದ ಶೋಧಿಸಿ ತೆಗೆಸಬೇಕು. ನೆಲವು ಸುಂದರವಾಗಿಯೂ ಸುವಾಸನೆಯುಳ್ಳ ರುಚಿಯುಳ್ಳ ಮಣ್ಣಿನಿಂದ ಕೂಡಿಯೂ ಇರಬೇಕು. ಪೂರ್ವ ಅಥವಾ ಉತ್ತರದಿಕ್ಕಿಗೆ ಅಭಿಮುಖವಾಗಿ ಬಾಗಿಲನ್ನು ನಿಲ್ಲಿಸಿರಬೇಕು. ವಾಸ್ತುವಿದ್ಯೆಯಲ್ಲಿ ಹೇಳಿರುವವೋರೆ ಮನೆಯ ಒಳಭಾಗವನ್ನೂ ಅಡಿಗೆಯ ಮನೆ ನೀರಿನಮನೆ, ಬಚ್ಚಲು ಮನೆ, ಮಲವಿಸರ್ಜನೆಯ ಸ್ಥಳಗಳನ್ನು ನಿರ್ಮಿಸಿರಬೇಕು. ಆಯಾಯ ಋತುಧರ್ಮಗಳಿಗೆ ತಕ್ಕಂತೆ ಅನುಕೂಲವನ್ನು ಕಲ್ಪಿಸಿರಬೇಕು. ಆ ಮನೆಗೆ ಬಿಲ್ವಪತ್ರೆ, ತೂಪರ, ಇಂಗಳ, ಗೇರು, ವರುಣ (ಮಟ್ಟಿವಾವು) ಕಗ್ಗಲಿ ಈ ಮರಗಳಿಂದಾಗಲೀ ಅಥವಾ ಬ್ರಾಹ್ಮಣರು ಪ್ರಶಸ್ತವೆಂದು ಹೇಳುವ ಇತರ ಮರಗಳಿಂದಲಾಗಲೀ ಬಾಗಿಲು ಕಿಟಕಿ ಮಂಚಗಳನ್ನು ತಯಾರಿಸಿ ಇಟ್ಟಿರಬೇಕು ॥೬॥

ಮೂಲ—(ಸು।ಶಾ।ಅ|೧೦) ಉಪಕರಣಸಂಭಾರಾಃ—

ಶಯನಾಸನಂ ಮೃದ್ವಾಸ್ತರಣಂ ನಾತ್ಯುಚ್ಚಮಪಾಶ್ರಯೋಽಪೇತಮಸಂಬಾಧಂ ಚ ವಿದಧ್ಯಾತ್ ॥೭॥

(ಚ|ಶಾ|)—

ಬಿಲ್ವಮಯೌ ಪರ್ಯಂಕೌ। ತದ್ವಸನಾಽಚ್ಛಾದನಪಿಧಾನಸಂಪದುಪೇತಮ್।ತಥಾ ಚಾಶ್ಮಾನೌ ದ್ವೌ ದ್ವೇ ಚ ಕುಣ್ಡಲಮುಸಲೇ, ದ್ವೇ ಚ ಊಲೂಖಲೇ। ಖರವೃಷಭೌ ದ್ವೌ ಚ। ತೀಕ್ಷ್ಣೌ ಸೂಚೀಪಿಪ್ಪಲಕೌ ಸೌವರ್ಣರಾಜತೌ। ಶಸ್ತ್ರಾಣಿ ತೀಕ್ಷ್ಣಾಯಸಾನಿ ದ್ವೌ ಚ। ಬ್ರಾಹ್ಮಣಾಶ್ಚಾಥರ್ವವೇದವಿದೋ ಯಚ್ಚಾನ್ಯದಪಿ ತತ್ರ ಸಮರ್ಥಂ ಮನ್ಯೇತ ಯಚ್ಚಾನ್ಯತ್ರ ಬ್ರಾಹ್ಮಣಾ ಬ್ರೂಯುಃ ಸ್ತ್ರಿಯಶ್ಚ ವೃದ್ಧಾಸ್ತತ್ಕಾರ್ಯಮ್ ॥೮॥

ದೀಪಿಕೆ—(ಸು|ಶಾ|ಅ। ೧೮) ಉಪಕರಣವಸ್ತುಗಳು—

ಮೃದುವಾದ ಹಾಸಿಗೆ, ಆಸನ, ಹೊದಿಕೆಗಳು, ತಲೆದಿಂಬು ಇವುಗಳು ಅತಿ ಎತ್ತರವಿರಬಾರದು; ಗರ್ಭಿಣಿಗೆ ತೊಂದರೆಯಾಗದಂತೆ ಮಲಮೂತ್ರಗಳ ವಿಸರ್ಜನೆಗೆ ಹತ್ತಿರದಲ್ಲೇ ಕಕ್ಕಸನ್ನು ಕಟ್ಟಿಸಿರಬೇಕು ॥೭॥

(ಚ|ಶಾ|)—

ಬಿಲ್ವಮರದ ಮಂಚಗಳೆರಡು, ಅದರಮೇಲೆ ಹಾಸಿಗೆ, ಮೆತ್ತಗಿರುವ ದಿಂಬುಗಳು, ಹೊದಿಕೆ ಬಟ್ಟೆಗಳು ಇವನ್ನು ಸಿದ್ಧಗೊಳಿಸಿರಬೇಕು. ಎರಡು ಚಕ್ಕಮುಕ್ಕಿ ಕಲ್ಲುಗಳು, ಒಂದು ಒರಳು, ವನಕೆಗಳೆರಡು, ಬಾಯೋಡುಗಳೆರಡು, ಎರಡೆರಡು ಎತ್ತುಗಳು, ಕತ್ತೆಗಳು, ಚಿನ್ನಬೆಳ್ಳಿಗಳ ಸೂಜಿಗಳೆರಡು, ಹರಿತವಾದ ಉಕ್ಕಿನಚೂರಿಗಳೆರಡು, ಅಥರ್ವಣವೇದವನ್ನು ತಿಳಿದ ಬ್ರಾಹ್ಮಣರೂ ವೃದ್ಧಸ್ತ್ರೀಯರೂ ಹೇಳುವ ಉಪಯುಕ್ತಗಳಾದ ಇತರ ಸಾಮುಗ್ರಿಗಳನ್ನೂ ಜಮಾಯಿಸಿಟ್ಟುಕೊಂಡಿರಬೇಕು ॥೮॥

ಮೂಲ—(ಸು।ಶಾ।ಅ।೧೦) ಔಷಧಾನಿ—

ತತ್ರ ಸರ್ಪಿಸ್ತ್ತೈಲಮಧುಸೈನ್ಧವಸುವರ್ಚಲಕಾಲವಿಡ್ವಿಡಙ್ಗಕುಷ್ಠಕಿಲಿಮನಾಗರ ಪಿಪ್ಪಲೀಪಿಪ್ಪಲೀಮೂಲಹಸ್ತಿಪಿಪ್ಪಲೀಮಣ್ಡೂಕಪರ್ಣ್ಯೇಲಾಲಾಙ್ಗಲೀವಚಾಚವ್ಯಚಿತ್ರಕ – ಚಿರಬಿಲ್ವಹಿಙ್ಗುಸರ್ಷಪಲಶುನಕತಕಕಣಕಣಿಕಾನೀಪಾತಸೀಬಲ್ಬಜಭೂರ್ಜಕುಳತ್ಥ– ಮೈರೇಯಸುರಾಸವಾಃ ಸನ್ನಿಹಿತಾಃ ಸ್ಯುಃ ॥೯॥

ದೀಪಿಕೆ––(ಸು।ಶಾ।ಅ। ೧೦) ಔಷಧಿದ್ರವ್ಯಗಳು—

ತುಪ್ಪ, ಎಳ್ಳೆಣ್ಣೆ, ಜೇನುತುಪ್ಪ, ಸೈಂಧವ, ಸೌವರ್ಚಲ, ವಿಡಲವಣ, ವಾಯು ವಿಡಂಗ, ಚಂಗಲ್‌ಕೋಷ್ಠ, ದೇವದಾರು, ಶುಂಠಿ, ಹಿಪ್ಪಲಿ, ಮೋಡಿ, ಗಜಹಿಪ್ಪಲಿ, ಒಂದೆಲಗ, ಕೋಳಿಕುಟಮನಗಡ್ಡೆ, ಬಜೆ, ಚವ್ಯ, ಚಿತ್ರಮೂಲ, ಹೊಂಗೆತೊಗಟೆ, ಹಿಙ್ಗು, ಸಾಸಿವೆ, ಬೆಳ್ಳುಳ್ಳಿ, ಚಿಲ್ಲಗಬೀಜ, ಹಿಪ್ಪಲಿಯಕಾಳುಗಳು, ಜಗಳಗಂಟಿತೊಗಟೆ, (ನೀಪ) ಸೀಮೆ ಅಗಸೆಬೀಜ, ಜೊಂಡು, ಭುಜಪತ್ರೆ, ಹುರಳಿ, ಮೈರೇಯ, ಸುರೆ, ಆಸವ ಇವುಗಳನ್ನು ಸಿದ್ಧಮಾಡಿಟ್ಟುಕೊಂಡಿರಬೇಕು ॥೯॥

ಮೂಲ—(ಸು।ಶಾ।ಅ। ೧೦) ಪರಿಚಾರಿಕಾಃ—

ಚತಸ್ರಃ ಸ್ತ್ರಿಯಃ ಪರಿಣತವಯಸಃ ಪ್ರಜನನಕುಶಲಾಃ ಕರ್ತಿತನಖಾಶ್ಚ ಪರಿಚರೇಯುರಿತಿ ॥೧೦॥

(ಚ।ಶಾ।)—

ಸ್ತ್ರಿಯಶ್ಚ ಬಹ್ವ್ಯೋ ಬಹುಶಃ ಪ್ರಜಾತಾಃ ಹಾರ್ದ್ಯಯುಕ್ತಾಃ ಸತತಮನು– ರಕ್ತಾಸ್ತ್ಯಕ್ತವಿಷಾದಾಃ ಕ್ಲೇಶಸಹಿನ್ಯೋಽಭಿಮತಾಶ್ಚ ॥೧೧॥

ದೀಪಿಕೆ––(ಸು।ಶಾ।ಅ। ೧೦) ಸಹಾಯಕರು––

ಮಧ್ಯವಯಸ್ಸಿನ ಹೆರಿಗೆಮಾಡಿಸುವುದರಲ್ಲಿ ಅನುಭವವುಳ್ಳ ಜಾಣರಾದ ನಾಲ್ಕುಜನ ಹೆಂಗಸರು ಉಗುರುಗಳನ್ನು ಕತ್ತರಿಸಿಕೊಂಡು ಶುದ್ಧರಾಗಿ ಉಪಚರಿಸಬೇಕು ॥೧೦॥

(ಚ।ಶಾ।)—

ಅನೇಕ ಮಕ್ಕಳನ್ನು ಹೆತ್ತು ಅನುಭವಪಡೆದಿರುವ, ದಯಾಳುಗಳಾದ, ಸದಾ ಗರ್ಭಿಣಿಯರಲ್ಲಿ ಪ್ರೀತಿಯುಳ್ಳ, ಸದಾಚಾರಪರರಾದ, ವಿವೇಕಶಾಲಿಗಳಾದ, ಸ್ವಭಾವದಿಂದಲೇ ಪ್ರೀತಿಯುಕ್ತರಾದ, ವ್ಯಸನಪಡದಿರುವ, ಕಷ್ಟವನ್ನು ಸಹಿಸುವ ಸ್ವಭಾವವುಳ್ಳ, ಗರ್ಭಿಣಿಗೆ ಇಷ್ಟರಾದ ಅನೇಕ ಸ್ತ್ರೀಸಹಾಯಕರು ಪ್ರಸವಕಾಲದಲ್ಲಿ ಇದ್ದು ಉಪಚರಿಸಬೇಕು ॥೧೧॥

ಮೂಲ—(ಸು।ಶಾ।ಅ।೧೦) ಆಸನ್ನಪ್ರಸವಲಿಙ್ಗಾನಿ—

ಜಾತೇ ಹಿ ಶಿಥಿಲೇ ಕುಕ್ಷೌ ಮುಕ್ತೇ ಹೃದಯಬನ್ಧನೇ ।
ಸಶೂಲೇ ಜಘನೇ ನಾರೀ ಜ್ಞೇಯಾ ಸಾ ತು ಪ್ರಜಾಯಿನೀ ॥೧೨॥

(ಚ।ಶಾ)—
ಕ್ಷವೋ ಗಾತ್ರಾಣಾಂ ಗ್ಲಾನಿರಾನನಸ್ಯಾಕ್ಷ್ಣೋರ್ವಿಮುಕ್ತಬನ್ಧನತ್ವಮಿವ ಕುಕ್ಷೇರವಸ್ರಂಸನಮಧೋಗುರುತ್ವಂ ವಂಕ್ಷಣವಸ್ತಿಕಟೀಪಾರ್ಶ್ವಪೃಷ್ಠನಿಸ್ತೋದೋ ಯೋನೇಃ ಪ್ರಸ್ರವಣಮನನ್ನಾಭಿಲಾಷಶ್ಚೇತಿ । ತತೋನನ್ತರಮಾವೀನಾಂ ಪ್ರಾದುರ್ಭಾವಃ ಪ್ರಸೇಕಶ್ಚ ಗರ್ಭೋದಕಸ್ಯ ॥೧೩॥
(ಅ।ಹೃ।ಶಾ।)—
ಅದ್ಯಶ್ವಃ ಪ್ರಸವೇ ಗ್ಲಾನಿಃ ಕುಕ್ಷ್ಯಕ್ಷಿಶ್ಲಥತಾ ಕ್ಲಮಃ ।
ಅಧೋಗುರುತ್ವಮರುಚಿಃ ಪ್ರಸೇಕೋ ಬಹುಮೂತ್ರತಾ ॥೧೪॥
ವೇದನೋರೂದರಕಟೀಪೃಷ್ಠಹೃದ್ವಸ್ತಿವಙ್ಕ್ಷಣೇ ।
ಯೋನಿಭೇದರುಜಾತೋದಸ್ಫುರಣಸ್ರವಣಾನಿ ಚ ॥೧೫॥
ಆವೀನಾಮನುಜನ್ಮಾ ನು ತತೋ ಗರ್ಭೋದಕಸ್ರುತಿಃ ।

ದೀಪಿಕೆ—(ಸು।ಶಾ।ಅ। ೧೦) ಪ್ರಸವಕಾಲ ಸಮೀಪಿಸಿದಾಗ ಗರ್ಭಿಣಿಯ ದೇಹದಲ್ಲಿ ಕಾಣುವ ಗುರ್ತುಗಳು—

ಹೊಟ್ಟೆಯು ಕೆಳಕ್ಕೆ ಜಗ್ಗಿದಂತೆಯೂ, ಹೃದಯಬಂಧನವು ಸಡಿಲಿದಂತೆಯೂ ಕಾಣಿಸುತ್ತದೆ. ಗುಹ್ಯಪ್ರದೇಶದಲ್ಲಿ (ಯೋನಿ) ಶೂಲೆಯುಂಟಾಗುತ್ತದೆ. ಈ ಚಿಹ್ನೆಗಳುಂಟಾದರೆ ಪ್ರಸವಕಾಲವು ಸಮೀಪಿಸಿತೆಂದು ತಿಳಿಯಬೇಕು.
(ಚ। ಶಾ)—
ಆಯಾಸ, ಬಳಲಿಕೆ, ಮುಖ ಬಾಡಿದಂತೆಯೂ, ಕಣ್ಣುಗಳು ಗುಳಿ (ಹಳ್ಳ) ಬಿದ್ದಂತೆಯೂ ಹೊಟ್ಟೆಯು ಜಾರಿ ಕೆಳಗೆ ಜಗ್ಗಿದಂತೆಯೂ ಕಾಣುತ್ತವೆ. ಗರ್ಭಿಣಿಗೆ ದೇಹದ ಕೆಳಭಾಗವು ಭಾರವಾಗಿ, ತೊಡೆಸಂದು, ಸೊಂಟ, ಹೊಟ್ಟೆ, ಪಕ್ಕೆಗಳು ಮತ್ತು ಬೆನ್ನು ಇವುಗಳಲ್ಲಿ ಒಡೆತವೂ, ಯೋನಿಸ್ರಾವವೂ, ಆಹಾರದಲ್ಲಿ ಇಚ್ಛೆಯಿಲ್ಲದಿರುವುದೂ ಅನಂತರ ಪ್ರಸವವೇದನೆಯೂ ಗರ್ಭೋದಕವು ಜಿನುಗುವುದೂ ಇವೆಲ್ಲಾ ಪ್ರಸವಕಾಲವು ಸಮೀಪಿಸಿದೆಯೆಂದು ತಿಳಿಸುವ ಗುರ್ತುಗಳು ॥೧೨–೧೫॥

ಮೂಲ—(ಸು।ಶಾ।ಅ। ೧೦) ತಸ್ಯಾ ಉಪಚಾರಾಃ—
ಪ್ರಜನಯಿಷ್ಯಮಾಣಾಂ ಕೃತಮಙ್ಗಳಸ್ವಸ್ತಿವಾಚನಾಂ ಕುಮಾರಪರಿವೃತಾಂ ಪುನ್ನಾಮಫಲಹಸ್ತಾಂ ಸ್ವಭ್ಯಕ್ತಾಮುಷ್ಣೋದಕಪರಿಷಿಕ್ತಾಮಥೈನಾಂ ಸಂಭೃತಾ-ಮಾಕಣ್ಠಂ ಯವಾಗೂಂ ಪಾಯಯೇತ್ । ತತಃ ಕೃತೋಪಧಾನೇ ಮೃದುನಿ ವಿಸ್ತೀರ್ಣೇ ಶಯನೇ ಸ್ಥಿತಾಮಾಭುಗ್ನಸಕ್ಥೀಮುತ್ತಾನಾಮಶಙ್ಕನೀಯಾಶ್ಚ-ತಸ್ರಃ ಸ್ತ್ರಿಯಃ (ಪರಿಚಾರಿಕಾಃ) ಪರಿಚರೇಯುಃ ॥೧೬॥

ದೀಪಿಕೆ—(ಸು। ಶಾ। ಅ। ೧೦) ಈ ಸಮಯದಲ್ಲಿ ಗರ್ಭಿಣಿಗೆ ಮಾಡಬೇಕಾದ ಉಪಚಾರಗಳು—

ಪ್ರಸವಲಕ್ಷಣಗಳು ಕಂಡಮೇಲೆ ಗರ್ಭಿಣಿಗೆ ಮಂಗಳಕರವಾದ ಸ್ವಸ್ತಿ ಪುಣ್ಯಾಹವಾಚನಗಳನ್ನು ಮಾಡಿಸಿ, ಅವಳ ಕೈಯ್ಯಲ್ಲಿ ಫಲತಾಂಬೂಲಗಳನ್ನಿಟ್ಟು ಅವಳಿಗೆ ಬಲಾತೈಲದಿಂದ ಅಭ್ಯಂಗನನ್ನೂ ಸುಖೋಷ್ಣವಾದ ನೀರಿನಿಂದ ಸ್ನಾನ

ವನ್ನೂ ಮಾಡಿಸಿ ಪುಷ್ಟಿಕರ ಪದಾರ್ಥಗಳನ್ನು ಸೇರಿಸಿ ತಯಾರಿಸಿದ ಯವಾಗೂ (ಹಾಲು ಕೀರು) ವನ್ನು ಕಂಠಪೂರ್ತಿಯಾಗುವಂತೆ ಕುಡಿಸಬೇಕು. ಅನಂತರ ತಲೆದಿಂಬು ಹಾಕದ ಮೆತ್ತಗಿರುವ ವಿಶಾಲವಾದ ಹಾಸಿಗೆಯಲ್ಲಿ ಗರ್ಭಿಣಿಯನ್ನು ಮೇಲ್ಮುಖವಮಾಡಿ ಮಲಗಿಸಿ ತೊಡೆಗಳನ್ನು ಮೇಲಕ್ಕೆ ಎತ್ತಿಕೊಂಡು ಸರಾಗವಾಗಿ ರುವಂತೆ ಮಾಡಿ ಹಿಂದೆ ವಿವರಿಸಿದ ನಾಲ್ಕು ಜನ ಪರಿಚಾರಿಕೆಯರು ಸಿದ್ಧರಾಗಿದ್ದು ಉಪಚರಿಸಬೇಕು ॥೧೬॥

ಮೂಲ—(ಸು।ಶಾ।ಅ। ೧೦)—ಉಪಸ್ಥಿತಪ್ರಸವಾಯಾ ಲಕ್ಷಣಾನಿ—

ತತ್ರೋಪಸ್ಥಿತಪ್ರಸವಾಯಾಃ ಕಟೀಪೃಷ್ಠಂಪ್ರತಿ ಸಮನ್ತಾದ್ವೇದನಾ ಭವತ್ಯಭೀಕ್ಷ್ಣಂ ಪುರೀಷಪ್ರವೃತ್ತಿರ್ಮೂತ್ರಂ ಪ್ರಸಿಚ್ಯತೇ ಯೋನಿಮುಖಾಚ್ಛ್ಲೇಷ್ಮಾ ಚ ॥೧೭॥

(ಅ।ಹೃ।ಶಾ।)—

ಗರ್ಭಃ ಪ್ರಯಾತ್ಯವಾಗೇವಂ ತಲ್ಲಿಙ್ಗಂ ಹೃದ್ವಿಮೋಕ್ಷತಃ ।
ಆವಿಶ್ಯ ಜಠರಂ ಗರ್ಭೋ ಬಸ್ತೇರುಪರಿ ತಿಷ್ಠತಿ ॥೧೮॥
ಆಪ್ಯೋ ಹಿ ತ್ವರಯನ್ತ್ಯೇನಾಂ ಖಟ್ವಾಮಾರೋಪಯೇತ್ತತಃ ।
ಅಥ ಸಮ್ಪೀಡಿತೇ ಗರ್ಭೇ ಯೋನಿಮಸ್ಯಾಃ ಪ್ರಸಾಧಯೇತ್ ॥೧೯॥
ಮೃದು ಪೂರ್ವಂ ಪ್ರವಾಹೇತ ಬಾಢಮಾಪ್ರಸವಾಚ್ಚ ಸಾ ।

ಬೃಹಚ್ಛಾರೀರೇ ಪ್ರಸವಾವಸ್ಥಾ—

ಗರ್ಭಾಶಯಗ್ರೀವಾಯಾ ಹ್ರಸ್ವೀಕರಣಮನ್ತರಾಸ್ಯಸ್ಯ ವಿಕಾಸಾರಮ್ಭಶ್ಚ ಪ್ರಸವಾತ್ಪೂರ್ವಮೇವ ಸಮ್ಭವನ್ತಿ । ಮಿಥ್ಯಾವೇದನಾಃ ಕದಾಚಿದ್ವಿಶೇಷತ ಆದ್ಯಪ್ರಸವೇ ಉದ್ಭವನ್ತಿ। ಆಸಾಂ ಕಾರಣಂ ಪುರೀಷರೋಧಮಗ್ನಿಮಾನ್ದ್ಯಂ ವಾ ಭವೇತ್। ಮೃದುಶೋಧನಾದಿನಾ ತಾಃ ಶಮಯನ್ತಿ ಚ ಇಮಾಃ ಕುಕ್ಷಿಮಭಿವ್ಯಾಪ್ಯಾಸ್ವಾಸ್ಥ್ಯಂ ಕುರ್ವನ್ತಿ । ಯಥಾರ್ಥವೇದನಾಸ್ತು ಪ್ರಾಧಾನ್ಯೇನ ನಿತಮ್ಬತ್ರಿಕದೇಶಂ ಭಗಾನ್ತರೋರ್ಧ್ವದೇಶಂ ವಾ ವ್ಯಾಪ್ನುವನ್ತಿ। ಮಿಥ್ಯಾವೇದನಾನಾಂ ಕ್ರಮವೃದ್ಧಿರ್ನ ಸ್ಯಾತ್। ಅಭಿಮಾರ್ಗವಿಕಾಸಶ್ಚ ನ ಸಮ್ಭವತಿ । ಯದಾ ಯಥಾರ್ಥವೇದನಾ ಉದ್ಭವನ್ತಿ ತತಃ ಪ್ರಭೃತಿ ಸಾಮಾನ್ಯತಸ್ತಿಸ್ರೋಽವಸ್ಥಾ ಪ್ರಸವಸ್ಯ ವರ್ಣಿತಾ ಭವನ್ತಿ ॥೨೦॥

ಯಥಾ—

(ಅ) ಸಜ್ಜೀಕರಣಾವಸ್ಥಾ (ಮಾರ್ಗವಿಕಸನಾವಸ್ಥಾ) (ಬ) ಪೋತನಿಷ್ಕಾಸನಾವಸ್ಥಾ (ಕ) ಅಪರಾ ನಿಷ್ಕಾಸನಾವಸ್ಥಾ ಚೇತಿ ॥ ಪ್ರಥಮಾವಸ್ಥಾಯಾಂ ಗರ್ಭಾಶಯಮೂಲಸ್ಯ ಪುರೋಭಾಗಂ ಪ್ರತಿನಮನಂ ಪೋತಶಿರಸಃ ಕಟೀಗುಹಾಪ್ರವೇಶಶ್ಚ। ಏತತ್ಪರ್ಯನ್ತಂ ಗರ್ಭಕೋಷ್ಠೇನ ಪ್ರೀಣಿಕಾಭಿಮುಖ್ಯೇನ ಕೃತಸ್ಯ ಸಮ್ಪೀಡನಸ್ಯಾಭಾವಾತ್ ಹೃದಯಸ್ಯ ಫುಪ್ಫುಸಯೋಶ್ಚ ಸ್ವಾತನ್ತ್ರ್ಯಸಿದ್ಧೇಶ್ಚ ಗರ್ಭಿಣ್ಯಾಃ ಕಿಂಚಿನ್ನಿವೃತಿಬುದ್ಧಿಶ್ಚೋತ್ಪದ್ಯತೇ ॥೨೧॥

ದೀಪಿಕೆ—(ಸು।ಶಾ।ಅ।೧೦) ಪ್ರಸವೋನ್ಮುಖಳಾದ ಗರ್ಭಿಣಿಯ ಚಿಹ್ನೆಗಳು :—

ನಡು ಬೆನ್ನುಗಳಲ್ಲಿ ಒಡೆತವೂ ನೋವೂ ಪದೇಪದೇ ಮಲಮೂತ್ರಗಳ ವಿಸರ್ಜನೆಯೂ ಯೋನಿದ್ವಾರದಿಂದ ಶ್ಲೇಷ್ಮವು ಹೊರಕ್ಕೆ ಸ್ರವಿಸಿ ಬರುವುದೂ ಇವು ಹೆರಿಗೆಯು ಪ್ರಾರಂಭಿಸಿತೆಂಬುದನ್ನು ಸೂಚಿಸುತ್ತವೆ.

(ಅ|ಹೃ|)—ಇವತ್ತೋ ನಾಳೆಯೋ ಹೆರುವ ಗರ್ಭಿಣಿಯ ಲಕ್ಷಣಗಳು—

ಬಳಲಿಕೆ, ಹೊಟ್ಟೆಜಗ್ಗುವುದು, ಕಣ್ಣುಗುಳಿಬೀಳುವುದು, ಶರೀರದ ಕೆಳಭಾಗದಲ್ಲಿ ಭಾರಕಾಣುವುದು, ಅರುಚಿ, ಬಾಯಿನಿಂದ ನೀರುಸುರಿಯುವುದು, ಹೆಚ್ಚಾಗಿ ಮೂತ್ರವು ವಿಸರ್ಜನೆಯಾಗುವುದು, ತೊಡೆ, ನಡು, ಬೆನ್ನು, ಹೊಟ್ಟೆ, ತೊಡೆಸಂದು ಇವುಗಳಲ್ಲಿ ನೋವು, ಯೋನಿಯಲ್ಲಿ ನೋವು, ಚುಚ್ಚುವುದು, ಅದುರುವುದು, ಕಡೆಗೆ ಪ್ರಸವವೇದನೆಯುಂಟಾಗಿ ಗರ್ಭೋದಕವು ಸ್ರವಿಸುವುದು. ಇವು ಪ್ರಸವೋನ್ಮುಖಳಾಗಿರುವ ಗರ್ಭಿಣಿಯ ಚಿಹ್ನೆಗಳು.

ಬೃಹಚ್ಛಾರೀರದಲ್ಲಿ ವಿವರಿಸಿರುವ ಪ್ರಸವಾವಸ್ಥೆ—

ಗರ್ಭಾಶಯದ ಕತ್ತು ಚಿಕ್ಕದಾಗುವುದು, ಒಳಮುಖವು ಹಿಗ್ಗುವುದು ಇವು ಹೆರಿಗೆಗೆ ಮೊದಲೇ ಉಂಟಾಗುತ್ತವೆ. ಕಳ್ಳನೋವು ಮೊದಲಸಾರಿಯ ಹೆರಿಗೆಯಲ್ಲಿ ಮಲಬಂಧ ಅಗ್ನಿಮಾಂದ್ಯಗಳಿಂದ ಉಂಟಾಗಿ ಹೊಟ್ಟೆಗೆ ಬಂದು ಪೀಡಿಸಿದರೂ ಮೃದುವಾದ ವಿರೇಚನದಿಂದ ನಿವಾರಣೆಯಾಗುತ್ತದೆ. ನಿಜವಾದ ಪ್ರಸವವೇದನೆಯು ಮುಖ್ಯವಾಗಿ ಸೊಂಟದ ಹಿಂಭಾಗ, ತ್ರಿಕಪ್ರದೇಶ, ಯೋನಿಯ ಒಳಭಾಗ ಮತ್ತು ಹೊರಭಾಗಗಳನ್ನು ವ್ಯಾಪಿಸಿರುತ್ತದೆ. ಕಳ್ಳನೋವು ಕ್ರಮಕ್ರಮವಾಗಿ ಹೆಚ್ಚುವುದಿಲ್ಲ; ಯೋನಿಮಾರ್ಗವನ್ನು ಹಿಗ್ಗಿಸುವುದೂ ಇಲ್ಲ; ನಿಜವಾದ ಪ್ರಸವ ವೇದನೆಯುಂಟಾದ ಮೇಲೆ ಹೆರಿಗೆಗೆ ಮೂರು ಅವಸ್ಥೆಗಳುಂಟಾಗುತ್ತವೆ—ಯೋನಿಮಾರ್ಗ ಹಿಗ್ಗುವುದು, ಮಗು ಹೊರಕ್ಕೆ ಬರುವುದು, ಮತ್ತು ಅಪರವು ಹೊರಕ್ಕೆ ಬರುವುದು. ಮೊದಲನೆಯ ಅವಸ್ಥೆಯಲ್ಲಿ ಗರ್ಭಾಶಯದ ಬುಡವು ಮುಂದಕ್ಕೆ ಬಾಗುವುದು, ಶಿಶುವಿನ ತಲೆಯು ಕಟೀಗುಹೆಗೆ ಬರುವುದು. ಈ ಕಾಲದವರೆಗೆ ಗರ್ಭಾಶಯದ ಒಳಗಡೆಯಲ್ಲಿ ಮಾಂಸಖಂಡಗಳು ಅದುಮುವುದಿಲ್ಲವಾಗಿ ಹೃದಯ ಮತ್ತು ಪುಪ್ಪುಸಗಳು ಸರಾಗವಾಗಿ ಸ್ಪಂದನವಾಗುವ ಕಾರಣ ಗರ್ಭಿಣಿಗೆ ಸುಖಾನುಭವವುಂಟಾಗುತ್ತದೆ.

(ಅ|ಹೃ|ಶಾ|)—

ಹೃದಯಬನ್ಧನವು ಸಡಿಲುವುದರಿಂದ ಗರ್ಭದಲ್ಲಿರುವ ಶಿಶುವು ಕೆಳಕ್ಕೆ ಜರುಗಿ ಬಸ್ತ್ಯಾಶಯದ ಮೇಲೆ ಬಂದುನಿಲ್ಲುತ್ತದೆ; ಹೆರಿಗೆಯ ನೋವುಂಟಾಗುತ್ತದೆ; ಆಗ ಗರ್ಭಿಣಿಯನ್ನು ಮಂಚದಮೇಲೆ ಮಲಗಿಸಬೇಕು; ಗರ್ಭವು ಅದುಮಲ್ಪಟ್ಟಾಗ ಯೋನಿಯನ್ನು ಕೈಯ್ಯಿಂದ ಮೆತ್ತಗೆ ಸವರಿ ಮೊದಮೊದಲು ಮೆಲ್ಲಗೂ ಅನಂತರ ಪ್ರಸವವಾಗುವವರೆಗೆ ಗಟ್ಟಿಯಾಗಿಯೂ ಮುಲುಕುವಂತೆ ಗರ್ಭಿಣಿಗೆ ಹೇಳಬೇಕು ॥೨೦–೨೧॥

ಮೂಲ—(ಸು|ಶಾ|ಅ|೧೦)—ಪ್ರಸವಪ್ರಥಮಸ್ಥಿತಿಃ—

ಯೋನಿದ್ವಾರಾ ಜಲೋದಯಃ ಆವೀಪ್ರಾದುರ್ಭಾವೇ ತು ಭೂಮೌ ಶಯನಂ ವಿದಧ್ಯಾನ್ಮೃದ್ವಾಸ್ತರಣೋಪಪನ್ನಮ್।ತದಧ್ಯಾಸೀತ ಸಾ। ತಾಂ ತಾಸ್ಸಮನ್ತತಃ ಪರಿವಾರ್ಯ ಯಥೋಕ್ತಗುಣಾಃ ಸ್ತ್ರಿಯಃ ಪರ್ಯುಪಾಸೀರನ್ನಾಶ್ವಾಸಯನ್ತ್ಯೋ ವಾಗ್ಭಿರ್ಗ್ರಾಹಿಣೀಭಿಸ್ಸಾನ್ತ್ವನೀಯಾಭಿಃ। ಸಾ ಚೇದಾವೀಭಿಃ ಸಂಕ್ಲಿಶ್ಯಮಾನಾ ನ

ಪ್ರಜಾಯೇತ್ಯಾಖ್ಯೈತಯಾ ಜೃಮ್ಭಣಂ ಚಙ್ಕ್ರಮಣಂ ಚಾನುಷ್ಠೇಯಂ ಭವತಃ ।
ಅಥಾಸ್ಯೈ ದದ್ಯಾತ್ ಕುಷ್ಠಲಾಙ್ಗಲಿಕಾ ವಚಾಚಿತ್ರಕಚಿರಬಿಲ್ವಚವ್ಯಚೂರ್ಣಮುಪ-
ಘ್ರಾತುಮ್ । ಸಾ ತತ್ ಮುಹುರ್ಮುಹುರುಪಜಿಘ್ರೇತ್ । ತಥಾ ಭೂರ್ಜ-
ಪತ್ರಧೂಮಂ ಶಿಂಶಪಾಧೂಮಂ ವಾ । ತಸ್ಯಾಶ್ಚಾನ್ತರಾನ್ತರಾ ಕಟೀಪಾರ್ಶ್ವ-
ಪೃಷ್ಠಸಕ್ಥೀನೀಷದುಷ್ಣೇನ ತೈಲೇನಾಭ್ಯಜ್ಯಾನುಸುಖಮವಮೃದ್ನೀಯಾದಿತ್ಯನೇನ
ಕರ್ಮಣಾ ಗರ್ಭೋಽವಾಕ್ಪ್ರತಿಪದ್ಯತೇ ॥೨೨॥

ದೀಪಿಕೆ--(ಸು।ಶಾ।ಅ। ೧೦) ಹೆರಿಗೆಯ ಮೊದಲನೆಯ ಸ್ಥಿತಿಯು--

ಯೋನಿಯಿಂದ ಜಲಸ್ರಾವವಾದಮೇಲೆ ಗರ್ಭವು ಮಾತೃವಿನ ಹೃದಯ ಸ್ಥಾನವನ್ನು ಬಿಟ್ಟು ತಲೆಯನ್ನು ಕೆಳಕ್ಕೆ ಮಾಡಿ ಜಠರಗುಹೆಗೆ ಬಂದು ಬಸ್ತಿಯ ಮೇಲ್ಗಡೆಗೆ ನಿಲ್ಲುವುದರಿಂದ ಗರ್ಭಿಣಿಗೆ ತೀವ್ರವಾದ ವೇದನೆಯುಂಟಾಗುತ್ತದೆ. ಆಗ ನೆಲದಮೇಲೆ ಮೆತ್ತಗಿರುವ ಹಾಸಿಗೆಯ ಮೇಲೆ ಆಕೆಯನ್ನು ಮೇಲ್ಮುಖಮಾಡಿ ಮಲಗಿಸಿ ಹಿಂದೆ ಹೇಳಿದಂತೆ ಗುಣಾಢ್ಯರಾದ ಸ್ತ್ರೀಯರು ಹಿತಕರಗಳಾದ ಮೃದು ಮಧುರ ಭಾಷಣಗಳಿಂದ ಸಮಾಧಾನಮಾಡುತ್ತಾ ಉಪಚರಿಸಬೇಕು. ಆಕೆಯು ವೇದನೆಯಿಂದ ಪೀಡಿತಳಾಗಿ ಹೆದರಿದ್ದರೆ ಆಕಳಿಸುವಂತೆ ಮಾಡಬೇಕು. ಮೇಲಕ್ಕೆ ಎಬ್ಬಿಸಿ ಅತ್ತಿತ್ತಲಾಗಿ ಸ್ವಲ್ಪ ತಿರುಗಾಡಿಸಬೇಕು. ಚಂಗಲ್‌ಕೋಷ್ಠ, ಕೋಳಿಕುಟುಮನ ಗೆಡ್ಡೆಗಳನ್ನಾಗಲೀ, ಬಜೆ, ಚಿತ್ರಮೂಲ, ಹೊಂಗೆತೊಗಟೆ, ಮತ್ತು ಚವ್ಯಗಳನ್ನಾಗಲೀ ಪುಡಿ ಮಾಡಿಸಿ ಪದೇಪದೇ ಮೂಸಿಸುತ್ತಿರಬೇಕು. ಭುಜಪತ್ರೆ, ಬೀಟೆಮರದ ಎಲೆಗಳನ್ನು ಸುಟ್ಟು ಆ ಧೂಮವನ್ನು ಮೂಸಿಸಬೇಕು. ಸುಖೋಷ್ಣವಾದ ಬಲಾತೈಲದಿಂದ ಆಕೆಯ ನಡು, ಬೆನ್ನು, ಪಕ್ಕೆಗಳು, ತೊಡೆ ಇವುಗಳನ್ನು ತಿಕ್ಕಿಸಿ ಮೃದುವಾಗಿ ಹಿಸುಕಬೇಕು. ಹೀಗೆ ಮಾಡಿದರೆ ಗರ್ಭವು ತಿರುಗಿ ಪ್ರಸವೋನ್ಮುಖವಾಗುತ್ತದೆ ॥೨೨॥

ಮೂಲ--(ಸು।ಶಾ।ಅ। ೧೦) ಮಧ್ಯಮಸ್ಥಿತಿಃ--ಗರ್ಭನಿಷ್ಕಾಸನಕಾಲಃ--

ಅಥಾಽಸ್ಯಾ ವಿಶಿಖಾನ್ತರಮನುಲೋಮಮನುಸುಖಮಭ್ಯಜ್ಯಾನುಬ್ರೂಯಾಚ್ಚ
ಸುಭಗೇ ! ಪ್ರವಾಹಸ್ವೇತಿ ನ ಚಾಪ್ರಾಪ್ತಾವೀಪ್ರವಾಹಸ್ವ, ತತೋ ವಿಮುಕ್ತೇ
ಗರ್ಭನಾಡೀಪ್ರಬನ್ಧೇ ಸಶೂಲೇಷು ಶ್ರೋಣಿವಂಕ್ಷಣಬಸ್ತಿ ಶಿರಸ್ಸು ಚ ಪ್ರವಾಹೇಥಾಃ
ಶನೈಶ್ಶನೈಃ; ತತೋ ಗರ್ಭನಿರ್ಗಮೇ ಪ್ರಗಾಢಮ್ ; ತತೋ ಗರ್ಭೇ ಯೋನಿ-
ಮುಖಂ ಪ್ರಪನ್ನೇ ಗಾಢತರಮಾವಿಶಲ್ಯಭಾವಾತ್। ಪ್ರಜಾತಾ ಪ್ರಜಾತಾ ಧನ್ಯಂ
ಧನ್ಯಂ ಪುತ್ರಮಿತಿ ಬ್ರೂಯುಃ । ತಥಾಸ್ಯಾ ಹರ್ಷೇಣಾಪ್ಯಾಯನ್ತೇ ಪ್ರಾಣಾಃ
॥೨೩॥

ದೀಪಿಕೆ--(ಸು।ಶಾ।ಅ। ೧೦) ಹೆರಿಗೆಯ ಎರಡನೆಯ ಅವಸ್ಥೆ ಶಿಶುಜನನವು--

ಶಿಶುವು ಪ್ರಸವಕ್ಕಾಗಿ ತಿರುಗಿದೆಯೆಂದು ತಿಳಿದರೆ ಆಗ ಗರ್ಭಿಣಿಯು ಯೋನಿದೇಶಕ್ಕೆ ಅನುಗುಣವಾಗಿ ಸುಖವಾಗುವಂತೆ ಬಲಾತೈಲದಿಂದ ಮೇಲ್ಮುಖವಾಗಿ ಉಜ್ಜಿಸಬೇಕು. ಪ್ರಸವವೇದನೆಯುಂಟಾದರೆ ಮುಲುಕಬೇಕೆಂದು ತಿಳಿಸ

ಬೇಕು. ಆದರೆ ವೇದನೆಯು ಬಾರದಿದ್ದಾಗ ಮುಲುಕಬಾರದು. ಗರ್ಭನಾಳವು ಸಡಿಲಿಸಿ ನಡು ತೊಡೆಯಸಂದು ಬಸ್ತ್ಯಾಶಯಗಳಲ್ಲಿ ಶೂಲೆಯುಂಟಾದರೆ ಮೆಲ್ಲ ಮೆಲ್ಲಗೆ ಮುಲುಕುವಂತೆಯೂ, ಗರ್ಭದಿಂದ ಹೊರಕ್ಕೆ ಶಿಶುವು ಬರುವಾಗ ಹೆಚ್ಚು ಜೋರಾಗಿ ಮುಲುಕುವಂತೆಯೂ, ಶಿಶುವು ಯೋನಿಮುಖಕ್ಕೆ ಬಂದರೆ ಅತ್ಯಂತ ಜೋರಾಗಿ ಮುಲುಕುವಂತೆಯೂ ತಿಳಿಸಬೇಕು. ಮುಲುಕದಿದ್ದರೆ ಗರ್ಭವು ಯೋನಿಯಲ್ಲಿ ತಡೆಯಲ್ಪಟ್ಟು ತೊಂದರೆ ಕೊಡುತ್ತದೆ. 'ಹೆತ್ತಳು, ಪುಣ್ಯವಂತನಾದ ಗಂಡು ಮಗುವನ್ನೇ ಹೆತ್ತಳು' ಎಂದು ದಾದಿಯರು ಹೇಳಬೇಕು. ಈ ಮಾತು ಗಳನ್ನು ಕೇಳುವುದರಿಂದ ಗರ್ಭಿಣಿಗೆ ಆಪ್ಯಾಯನವಾಗಿ ಸಂಕಟ ಕಡಿಮೆ ಯಾಗುತ್ತದೆ ॥೨೩॥

ಮೂಲ—(ಸು।ಶಾ।ಅ ೧೦) ಅಕಾಲಪ್ರವಾಹಣೇ ದೋಷಾಃ —

ಅಕಾಲಪ್ರವಾಹಣಾನ್ಮೂಕಂ, ಬಧಿರಂ, ವ್ಯಸ್ತಹನುಂ ಮೂರ್ಧಾಭಿಘಾತಿನಂ ಕಾಸಶ್ವಾಸಶೋಷಾಭಿದ್ರುತಂ ಸುತಂ ನಾರೀ ಪ್ರಜನಯಿಷ್ಯತೀತಿ ತಾನ್ಪರಿಹರೇತ್ ॥೨೪॥

(ಚ।ಶಾ।ಅ। ೮)—

ಸ ಯದಾ ಜಾನೀಯಾದ್ವಿಮುಚ್ಯ ಹೃದಯಮುದರಮಸ್ಯಾಸ್ತ್ರ್ಯಾವಿಶತಿ ಬಸ್ತಿ-ಶಿರೋಽವಗೃಹ್ಣಾತಿ, ತ್ವರಯನ್ತ್ಯೇನಾಮಾವ್ಯಃ, ಪರಿವರ್ತತೇಽಧೋ ಗರ್ಭ ಇತಿ ; ಅಸ್ಯಾಮವಸ್ಥಾಯಾಂ ಪರ್ಯಙ್ಕಮೇನಾಮಾರೋಪ್ಯ ಪ್ರವಾಹಿತುಮುಪಕ್ರಾಮ-ಯೇತ್'। ಯಾ ಹ್ಯನಾಗತಾವೀಃ ಪ್ರವಾಹತೇ ವ್ಯರ್ಥಮೇವಾಸ್ಯಾಸ್ತತ್ಕರ್ಮ ಭವತಿ ಪ್ರಜಾ ಚಾಸ್ಯಾ ವಿಕೃತಾ ವಿಕೃತಿಮಾಪನ್ನಾ ವಾ ಶ್ವಾಸಕಾಸಶೋಷಪ್ಲೀಹ-ಪ್ರಸಕ್ತಾ ಭವತಿ ॥೨೫॥

ದೀಪಿಕೆ—(ಸು। ಶಾ। ಅ। ೧೦) ಅಕಾಲದಲ್ಲಿ ಮುಲುಕಿದರೆ ಉಂಟಾಗುವ ಕೆಡಕುಗಳು—

ಅಕಾಲದಲ್ಲಿ ಮುಲುಕಿದರೆ ಮೂಗ, ಕಿವುಡ, ದವಡೆಜಾರಿದವ, ತಲೆಗೆ ಪೆಟ್ಟುಬಿದ್ದವ, ಕೆಮ್ಮು ದಮ್ಮು ಕ್ಷಯಗಳಿಂದ ನರಳುವ ಮಗು ಹುಟ್ಟುವ ಕಾರಣ ಅಕಾಲದಲ್ಲಿ ಮುಲುಕಬಾರದು ॥೨೪॥

(ಚ।ಶಾ।)—

ಗರ್ಭದಲ್ಲಿರುವ ಶಿಶುವು ತಾಯಿಯ ಹೃದಯಬಂಧನದಿಂದ ಕೆಳಕ್ಕೆ ಜಾರಿ ಬಸ್ತಿಯಮೇಲೆ ಬಂದರೆ ಪ್ರಸವ ವೇದನೆಯುಂಟಾಗಿ ಗರ್ಭವು ತಿರುಗುತ್ತದೆಂದು ತಿಳಿಯಬೇಕು. ಈ ಸಮಯದಲ್ಲಿ ಗರ್ಭಿಣಿಯನ್ನು ಮಂಚದಮೇಲೆ ಮಲಗಿಸಿ ಮುಕ್ಕರಿಯುವಂತೆ ಹೇಳಬೇಕು. ಪ್ರಸವವೇದನೆಯಿಲ್ಲದಿರುವಾಗ ಮುಲುಕಿದರೆ ವ್ಯರ್ಥವಾಗುತ್ತದೆ. ಮಗುವೂ ಅಂಗವಿಕಾರವಾಗಿ ಹುಟ್ಟುತ್ತದೆ; ಕೆಮ್ಮು, ದಮ್ಮು, ಕ್ಷಯ, ಪ್ಲೀಹವೃದ್ಧಿ ಮೊದಲಾದ ರೋಗಗಳಿಂದ ಪೀಡಿತವಾಗುತ್ತದೆ ॥೨೫॥

ಮೂಲ (ಚ।ಶಾ।ಅ।೮)—ಉತ್ತಮಸ್ಥಿತಿಃ—ಅಪರಾ ನಿಷ್ಕಾಸನಕಾಲಃ—

ಯದಾ ಚ ಪ್ರಜಾತಾ ಸ್ಯಾತ್ತದ್ಯೈವೇನಾಮವೇಕ್ಷೇತ ಕಾಚಿದಸ್ಯಾ ಅಪರಾ ಪ್ರಪನ್ನಾಽಪ್ರಪನ್ನಾ ವೇತಿ ॥೨೬॥

(ಸು।ಶಾ।ಅ। ೧೦)—

ಅಥಾಽಪರಾಽಪತನ್ತೀ ಆನಾಹಾಧ್ಮಾನೌ ಕುರುತೇ। ವಾತಮೂತ್ರಪುರೀಷಾಣಿ ಬಹಿರ್ಗಮನಶೀಲಾನಿ ನ ಸೃಜ್ಯನ್ತೇ ॥ ೨೭ ॥

ತಸ್ಮಾತ್ಕಣ್ಠಮಸ್ಯಾಃ ಕೇಶವೇಷ್ಟಿತಯಾಙ್ಗುಳ್ಯಾ ಪ್ರಮೃಜೇತ್ । ಗರ್ಭಸಙ್ಗೇ ತು ಯೋನಿಂ ಧೂಪಯೇತ್ಕೃಷ್ಣಸರ್ಪನಿರ್ಮೋಕೇಣ ಪಿಣ್ಡೀತಕೇನ ವಾ। ಬಧ್ನೀಯಾದ್ಧಿರಣ್ಯಪುಷ್ಪೀಮೂಲಂ ಹಸ್ತಪಾದಯೋಃ । ಧಾರಯೇತ್ಸುವರ್ಚಲಾಂ ವಿಶಲ್ಯಾಂ ವಾ ॥೨೮॥

ಕಟುಕಾಲಾಬುಕೃತವೇಧನಸರ್ಷಪಸರ್ಪನಿರ್ಮೋಕೈರ್ವಾ ಕಟುತೈಲವಿಮಿಶ್ರೈ-ರ್ಯೋನಿಮುಖಂ ಧೂಪಯೇತ್। ಲಾಂಗಲೀಮೂಲಕಲ್ಕೇನ ವಾಸ್ಯಾಃ ಪಾಣಿ-ಪಾದತಲಮಾಲಿಮ್ಪೇತ್ । ಮೂರ್ಧ್ನಿ ವಾಸ್ಯಾ ಮಹಾವೃಕ್ಷಕ್ಷೀರಮನು-ಸೇಚಯೇತ್। ಕುಷ್ಠಲಾಙ್ಗಲೀಮೂಲಕಲ್ಕಂ ವಾ ಮದ್ಯಮೂತ್ರಯೋರನ್ಯತರೇಣ ಪಾಯಯೇತ್। ಶಾಲಮೂಲಕಲ್ಕಂ ವಾ ಪಿಪ್ಪಲ್ಯಾದಿಂ ವಾ ಮದ್ಯೇನ। ಸಿದ್ಧಾರ್ಥಕ-ಕುಷ್ಠಲಾಙ್ಗಲೀ ಮಹಾವೃಕ್ಷಕ್ಷೀರಮಿಶ್ರೇಣ ಸುರಾಮಣ್ಡೇನ ವಾಽಸ್ಥಾಪಯೇತ್। ಏತೈರೇವ ಸಿದ್ಧೇನ ಸಿದ್ಧಾರ್ಥಕತೈಲೇನೋತ್ತರವಸ್ತಿಂ ದದ್ಯಾತ್। ಸ್ನಿಗ್ಧೇನ ವಾ ಕ್ಲೃಪ್ತನಖೇನ ಹಸ್ತೇನಾಪಹರೇತ್ ॥೨೯॥

(ಅ।ಹೃ।ಶಾ।ಅ। ೨) —

ಅಥಾಽಪತನ್ತೀಮಪರಾಂ ಪಾತಯೇನ್ಮತಿಮಾನ್ಭಿಷಕ್ ।
ಹಸ್ತೇನಾಪಹರೇದ್ವಾಽಪಿ ಪಾರ್ಶ್ವಾಭ್ಯಾಂ ಪರಿಪೀಡ್ಯ ವಾ ॥೩೦॥
ಧುನುಯಾಚ್ಚ ಮುಹುರ್ನಾರೀಂ ಪೀಡಯೇದ್ವಾಂಽಸಪಿಣ್ಡಿಕಾಮ್ ।
ತೈಲಾಕ್ತಯೋನೇರೇವಂ ತಾಂ ಪಾತಯೇನ್ಮತಿಮಾನ್ಭಿಷಕ್ ॥೩೧॥

(ಚ।ಶಾ।ಅ।೮)—

ತಸ್ಯಾಶ್ಚೇದಪರಾ ನ ಪ್ರಪನ್ನಾ ಸ್ಯಾದಥೈನಾಮನ್ಯತಮಾ ಸ್ತ್ರೀ ದಕ್ಷಿಣೇನ ಪಾಣಿನಾ ನಾಭೇರುಪರಿಷ್ಟಾದ್ಬಲವನ್ನಿಪೀಡ್ಯ ಸವ್ಯೇನ ಪೃಷ್ಠತ ಉಪಸಂಗೃಹ್ಯ ಸುನಿರ್ಧೂತಂ ನಿರ್ಧುನುಯಾತ್। ಅಥಾಽಸ್ಯಾ ಪಾದಪಾರ್ಷ್ಣ್ಯಾ ಶ್ರೋಣೀ-ಮಾಕೋಟಯೇತ್ತಸ್ಯಾಃ ಸ್ಫಿಚಾವುಪಸಂಗೃಹ್ಯ ಸುಪೀಡಿತಂ ಪೀಡಯೇತ್ । ಅಥಾಸ್ಯಾ ವಾಲವೇಣ್ಯಾ ಕಣ್ಠತಾಲು ಪರಿಸ್ಪೃಶೇತ್ ॥೩೨॥

ಸಾಮಾನ್ಯಚಿಕಿತ್ಸಾ—ಕುಷ್ಠತಾಲೀಸಕಲ್ಕಂ ಬಲ್ವಜಯೂಷೇ ಮೈರೇಯಸುರಾ-ಮಣ್ಡೇ ತೀಕ್ಷ್ಣೇ ಕೌಳತ್ಥೇ ವಾ ಮಣ್ಡೂಕಪರ್ಣೀಸಮ್ಭೂತೇ ವಾ ಸಮ್ಭಾವ್ಯ ಪಾಯಯೇತ್ತೈನಾಮ್ । ತಥಾ ಸೂಕ್ಷ್ಮೈಲಾ ಕಿಲಿಮ ಕುಷ್ಠ ನಾಗರ ವಿಡಙ್ಗ ಪಿಪ್ಪಲೀಕಾಲಾಗರುಚವ್ಯಚಿತ್ರಕೋಪಕುಂಜಿಕಾಕಲ್ಕಂ ವಾ। ಶತಪುಷ್ಪೀ ಮದನ ಕುಷ್ಠಹಿಙ್ಗುಸಿದ್ಧಸ್ಯ ಚೈನಾಂ ತೈಲಸ್ಯ ಪಿಚುಂ ಗ್ರಾಹಯೇತ್ । ಅತಶ್ಚೈ-ವಾನುವಾಸಯೇತ್ । ಏತೈರೇವ ಫಲಜೀಮೂತೇಕ್ಷ್ವಾಕುಧಾಮಾರ್ಗವಕುಟಜ ಕೃತವೇಧನಹಸ್ತಿಪಿಪ್ಪಲ್ಯುಪಹಿತೈರಾಸ್ಥಾಪಯೇತ್। ತದಾಸ್ಥಾಪನಮಸ್ಯಾಃ ಸಹ-ವಾತಮೂತ್ರಪುರೀಷೈರ್ನಿರ್ಹರತ್ಯಪರಾಮಸಕ್ತಾಂ ವಾಯೋರೇವಾಪ್ರತಿಲೋಮ-ಗತ್ವಾತ್ ॥೩೩॥

ದೀಪಿಕೆ (ಚ।ಶಾ।)—ಹೆರಿಗೆಯ ಮೂರನೆಯ ಅವಸ್ಥೆ; (ಜರಾಯುಪತನ)—

ಪ್ರಸವವಾದಮೇಲೆ ದಾದಿಯೊಬ್ಬಳು ಜರಾಯುವು ಹೊರಕ್ಕೆ ಬಿತ್ತೇ ಇಲ್ಲವೇ ಎಂಬುದನ್ನು ತಿಳಿದುಕೊಳ್ಳಬೇಕು ॥೨೬॥

(ಸು।ಶಾ।೫।೧೦)—

ಜರಾಯುವು ಗರ್ಭಾಶಯದಿಂದ ಹೊರಕ್ಕೆ ಬೀಳದಿದ್ದರೆ ವಾತಮೂತ್ರ ಮಲಗಳು ಸರಿಯಾಗಿ ಪ್ರವೃತ್ತವಾಗದೆ ಹೊಟ್ಟೆಯುಬ್ಬರವುಂಟಾಗುತ್ತದೆ. ಆಗ ದಾದಿಯೊಬ್ಬಳು ತನ್ನ ಕೈಬೆರಳಿಗೆ ಕೂದಲನ್ನು ಸುತ್ತಿಕೊಂಡು ಸೂತಿಕೆಯ ಗಂಟಲಿಗೆ ತಗುಲಿಸಬೇಕು. ಗರ್ಭಸಙ್ಗ (ತಡೆ)ವಾದರೆ ಕರಿಯ ನಾಗರಹಾವಿನ ಪೊರೆ ಮತ್ತು ಮಗ್ಗಾರೆಕಾಯಿ ಇವುಗಳ ಪುಡಿಯನ್ನು ಸೇರಿಸಿ ಯೋನಿಗೆ ಧೂಪನ ಮಾಡಿಸಬೇಕು. ಅವಳ ಕೈಕಾಲುಗಳಿಗೆ ಕೋಳಿಕುಟುಮನ ಬೇರನ್ನು ಕಟ್ಟಬೇಕು; ಸೂರ್ಯಕಾನ್ತಿಯ ಮತ್ತು ಕೋಳಿಕುಟುಮನ ಬೇರುಗಳನ್ನೂ ಶರೀರಕ್ಕೆ ತಗಲುವಂತೆ ಕಟ್ಟಬೇಕು ॥೨೭॥

ಬಾಹ್ಯಚಿಕಿತ್ಸೆ—ಕಹಿಸೋರೆ, ಹೀರೆ, ಸಾಸಿವೆ, ಹಾವಿನಪೊರೆಗಳಿಗೆ ಸ್ವಲ್ಪ ಸಾಸಿವೆಯೆಣ್ಣೆಯನ್ನು ಸೇರಿಸಿ ಕೆಂಡದಮೇಲೆ ಉದುರಿಸಿ ಬಂದ ಹೊಗೆಯನ್ನು ಯೋನಿಗೆ ತಗಲುವಂತೆ ಮಾಡಬೇಕು. ಕೋಳಿಕುಟುಮನ ಗೆಡ್ಡೆಯ ಗಂಧವನ್ನು ಅವಳ ಅಂಗೈ ಅಂಗಾಲುಗಳಿಗೆ ಲೇಪಿಸಿ ತಲೆನೆತ್ತಿಸುಳಿಯ ಭಾಗದಲ್ಲಿ ಮುಂಡು ಗಳ್ಳಿಯ ಹಾಲನ್ನೊತ್ತಬೇಕು. ಚಂಗಲ್ಕೋಷ್ಠ, ಮತ್ತು ಕೋಳಿಕುಟುಮನ ಗಡ್ಡೆ ಇವುಗಳ ಗಂಧದ ಮಾಷಪ್ರಮಾಣದಷ್ಟನ್ನು ನಾಲ್ಕು ಪಲಗಳಷ್ಟು ಮದ್ಯ ಅಥವಾ ಗೋಮೂತ್ರಗಳಲ್ಲಿ ಕದರಿ ಕುಡಿಸಬೇಕು. ಶಾಲವೃಕ್ಷದ ಬೇರಿನ ಕಲ್ಕವನ್ನಾಗಲೀ ಪಂಚಕೋಲ ಚೂರ್ಣವನ್ನಾಗಲೀ ಮದ್ಯದಲ್ಲಿ ಕದರಿ ಕುಡಿಸಬೇಕು. ಸಾಸಿವೆ, ಚಂಗಲ್‌ಕೋಷ್ಠ, ಕೋಳಿಕುಟುಮನ ಗಡ್ಡೆ ಇವುಗಳ ಕಲ್ಕವನ್ನು ಮುಂಡುಗಳ್ಳಿಯ ಹಾಲು, ಮತ್ತು ಮದ್ಯದ ತಿಳಿಯಲ್ಲಿ ಕದರಿ ಗುದದ್ವಾರದಿಂದ ರೂಕ್ಷಬಸ್ತಿಯನ್ನೂ, ಇವುಗಳನ್ನೇ ಸೇರಿಸಿ ತಯಾರಿಸಿದ ಸಾಸಿವೆಯೆಣ್ಣೆಯಿಂದ ಉತ್ತರಬಸ್ತಿಯನ್ನೂ ಪ್ರಯೋಗಮಾಡಬೇಕು. ಅಥವಾ ದಾದಿಯೊಬ್ಬಳು ತನ್ನ ಕೈಬೆರಳುಗಳ ಉಗುರು ಗಳನ್ನು ಕತ್ತರಿಸಿ ತೈಲ ತುಪ್ಪಗಳನ್ನು ಕೈಗೆ ಸವರಿ ಜಿಡ್ಡುಮಾಡಿಕೊಂಡು ಕೈಯನ್ನು ಯೋನಿಯೊಳಕ್ಕೆ ದೂಡಿಸಿ ಜರಾಯುವನ್ನು ಹೊರಕ್ಕೆ ತೆಗೆಯಬೇಕು ॥೨೮॥

(ಅ।ಹೃ।ಶಾ।)—

ಅಪರವು ಹೊರಕ್ಕೆ ಬೀಳದಿದ್ದರೆ ಬುದ್ಧಿಶಾಲಿಯಾದ ವೈದ್ಯನು ಆಕೆಯ ಪಕ್ಕೆಗಳನ್ನು ನೀವುತ್ತಾ ಯೋನಿಗೆ ಬಲಾತೈಲವನ್ನು ಮೆತ್ತಗೆ ಮರ್ದಿಸಿ ಹೆಗಲು ಮೇಲಿನ ಅಂಸಪಿಂಡಿಕೆಗಳನ್ನು ಹಿಸುಕಿ ಯೋನಿಯೊಳಗೆ ಕೈಹಾಕಿ ಅಪರವನ್ನು ಮೆಲ್ಲಗೆ ಅಲ್ಲಾಡಿಸುತ್ತಾ ಹೊರಕ್ಕೆ ತೆಗೆದುಬಿಡಬೇಕು ॥೨೯॥

(ಚ।ಶಾ।೮।೮)—

ಜರಾಯುವು ಹೊರಗೆಬಾರದಿದ್ದರೆ ದಾದಿಯೊಬ್ಬಳು ತನ್ನ ಬಲದ ಕೈಯ್ಯಿ ನಿಂದ ಸೂತಿಕೆಯ ಹೊಕ್ಕಳನ್ನು ಬಲವಾಗಿ ಅಮುಕಿ ಬೆನ್ನಿನ ಕಡೆಯಿಂದ ತನ್ನ

ಎಡಗೈಯ್ಯಲ್ಲಿ ಜರಾಯುವನ್ನು ಬಿಗಿದುಹಿಡಿದುಕೊಂಡು ಅಲ್ಲಾಡಿಸುತ್ತಾ ಹೊರಕ್ಕೆ ಎಳೆಯಬೇಕು. ಆಕೆಯ ಕಾಲಿನ ಹಿಮ್ಮಡಿಯಿಂದ ಪಿರ್‍ರೆಯನ್ನು ಗುದ್ದಿಸಬೇಕು. ಬಲವಾಗಿ ಅಮುಕಬೇಕು (ಹಿಸಕಬೇಕು). ಆಕೆಯ ತಲೆ ಗೂದಲ ತುದಿಯಿಂದ ಆಕೆಯ ಗಂಟಲೊಳಗೆ ಅಂಗಳು (ತಾಲು) ಪ್ರದೇಶವನ್ನು ತಗುಲಿಸಲು ಆಕೆ ಕೆಮ್ಮುವಳು, ಓಕರಿಸುವಳು ಇದರಿಂದ ಅವಳ ಯಕೃತ್ಪ್ಲೀಹ, ಕರಳು ಮೊದಲಾದ ಅಂಗಗಳು ಸಂಕೋಚವಾಗಿ ಗರ್ಭಾಶಯವು ಹಿಸುಕಿದಂತಾಗಿ ಜರಾಯುವು ಹೊರಕ್ಕೆ ಬೀಳಲು ಅನುಕೂಲವಾಗುತ್ತದೆ ॥೩೦॥

ಸಾಮಾನ್ಯ ಚಿಕಿತ್ಸೆ:—ಚಂಗಲ್ಕೋಷ್ಠ ಮತ್ತು ತಾಳೀಸಪತ್ರಗಳ ಕಲ್ಕವನ್ನು ಜೊಂಡಿನ ಕಷಾಯದಲ್ಲಾಗಲೀ, ಮದ್ಯದ ತಿಳಿಯಲ್ಲಾಗಲೀ, ತೀಕ್ಷ್ಣವಾದ ಹುರುಳಿಯ ಕಟ್ಟಿನಲ್ಲಾಗಲಿ, ಒಂದೆಲಗದ ಕಷಾಯದಲ್ಲಾಗಲೀ ಕದರಿ ಆಕೆಗೆ ಕುಡಿಸಬೇಕು. ಅಥವಾ ಸಣ್ಣ ಏಲಕ್ಕಿ; ದೇವದಾರು, ಚಂಗಲ್ಕೋಷ್ಠ, ಶುಂಠಿ, ವಿಡಂಗ, ಹಿಪ್ಪಲಿ, ಕರಿಯಅಗಿಲುಗಂಧ, ಚವ್ಯ, ಚಿತ್ರಮೂಲ ಜೀರಿಗೆ ಇವುಗಳ ಕಲ್ಕವನ್ನಾಗಲೀ ಕುಡಿಸಬೇಕು; ಸಬ್ಬಸಿಗೆಯ ಬೀಜ, ಚಂಗಲ್ಕೋಷ್ಠ, ಮಗ್ಗಾರೆಕಾಯಿ, ಹಿಂಗು ಇವುಗಳನ್ನೂ ಸಾಸಿವೆಯೆಣ್ಣೆಯನ್ನೂ ಸೇರಿಸಿ ತಯಾರಿಸಿದ ತೈಲದಲ್ಲಿ ಹತ್ತಿಯ ಉಂಡೆಯನ್ನು ಅದ್ದಿ ಯೋನಿಯೊಳಕ್ಕೆ ತುರುಕಬೇಕು. ಇದರಿಂದಲೇ ಅನುವಾಸನ ಬಸ್ತಿಯನ್ನೂ ಪ್ರಯೋಗಮಾಡಬೇಕು. ಇವುಗಳೊಡನೆ ಮಗ್ಗಾರೆಕಾಯಿ, ದೇವದಾಳಿ, ಕಹಿಸೋರೆ, ಕಹಿಹೀರೆ, ಕೊಡಶಿಗೆ, ತುಪ್ಪಹೀರೆ, ಗಜಹಿಪ್ಪಲಿ ಇವುಗಳನ್ನು ಸೇರಿಸಿ ತಯಾರಿಸಿದ ಕಷಾಯದಿಂದ ಆಸ್ಥಾಪನ ಬಸ್ತಿಯನ್ನೂ ಕೊಡಬೇಕು. ಇದರಿಂದ ಅಪಾನವಾಯುವು ಅನುಲೋಮನವಾಗಿ ತಡೆಯಲ್ಪಟ್ಟಿದ್ದ ಜರಾಯುವು ವಾತ, ಮೂತ್ರ, ಪುರೀಷಗಳೊಡನೆ ಹೊರಕ್ಕೆ ಬೀಳುತ್ತದೆ.

ಮೂಲ (ಸು।ಶಾ।ಅ।೧೦)—ಸೂತಿಕಾವಿಜ್ಞಾನಮ್, ಸೂತಿಕೋಪಚಾರಾಶ್ಚ—

ಅಕಾಲೇ ಚ ಪ್ರಸೂತಾ ಸ್ತ್ರೀ ಸ್ನೇಹಪಾನಂ ವಿವರ್ಜಯೇತ್ ।
ಸ್ನೇಹಪಾನಾದ್ಭವನ್ತ್ಯೇಷಾಂ ಸ್ತ್ರೀಣಾಂ ನಾನಾವಿಧಾ ಗದಾಃ ॥೩೪॥
ಗದಾ ವಾ ಕೃಚ್ಛ್ರತಾಂ ಯಾನ್ತಿ ನ ಸಿಧ್ಯನ್ತ್ಯಥವಾ ಪುನಃ ।
ಗರ್ಭಾಶಯೇಽವಶೇಷಾಸ್ಸ್ಯು ರಕ್ತಕ್ಲೇದಮಲಾಸ್ತತಃ ॥೩೫॥
ಸ್ನೇಹಂ ಜಹ್ಯಾನ್ನಿಷೇವೇತ ಪಾಚನಂ ರೂಕ್ಷಮೇವ ಚ ।
ದಶರಾತ್ರಾತ್ತತಃ ಸ್ನೇಹಂ ಯಥಾವದವಚಾರಯೇತ್ ॥೩೬॥

ಅಥ ಸೂತಿಕಾಂ ಬಲಾತೈಲಾಭ್ಯಕ್ತಾಂ ವಾತಹರೌಷಧನಿಃಕ್ವಾಥೇನೋಪಚರೇತ್ । ಸದೋಷಶೇಷಾನ್ತು ತದಹಃ ಪಿಪ್ಪಲೀ ಪಿಪ್ಪಲೀಮೂಲಹಸ್ತಿಪಿಪ್ಪಲೀ ಚಿತ್ರಕಶೃಙ್ಗವೇರಚೂರ್ಣಂ ಗುಡೋದಕೇನೋಷ್ಣೇನ ಪಾಯಯೇತ್; ಏವಂ ದ್ವಿರಾತ್ರಂ ತ್ರಿರಾತ್ರಂ ವಾ ಕುರ್ಯಾದಾದುಷ್ಟಶೋಣಿತಾತ್; ವಿಶುದ್ಧೇ ತತೋ ವಿದಾರಿಗನ್ಧಾದಿಸಿದ್ಧಾಂ ಸ್ನೇಹಯವಾಗೂಂ ಕ್ಷೀರಯವಾಗೂಂ ವಾ ಪಾಯಯೇತ್ತ್ರಿರಾತ್ರಮ್; ಅಬಲಾಂ ಯವಾಗೂಂ ಪಾಯಯೇತ ತ್ರಿರಾತ್ರಂ ಪಂಚರಾತ್ರಂ ವಾ; ಅತ ಊರ್ಧ್ವಂ ಸ್ನಿಗ್ಧೇನಾನ್ನಸಂಸರ್ಗೇಣೋಪಚರೇತ್ ॥೩೭॥
ಪಶ್ಚಾಚ್ಚಸ್ವೇದ್ಯಾ ಹೃತೇ ಶಲ್ಯೇ ಮೂಢಗರ್ಭಾನುಪದ್ರವಾ ।
ಸಮ್ಯಕ್ಪ್ರಜಾತಾ ಕಾಲೇ ವಾ ಪಶ್ಚಾಚ್ಚಸ್ವೇದ್ಯಾ ವಿಜಾನತಾ ॥೩೮॥

ನ್ಯಾನಭ್ಯಕ್ತೇ ನಾಽಪಿ ಚಾಽಸ್ನಿಗ್ಧದೇಹೇ ಸ್ವೇದೋ ಯೋಜ್ಯಃ ಸ್ವೇದವಿಧಿಃ ಕಥಂಚಿತ್ ‖೩೯‖

(ಸು।ಶಾ।ಅ।೧೦)—

ಧನ್ವಭೂಮಿಜಾತಾಂ ತು ಸೂತಿಕಾಂ ಘೃತತೈಲಯೋರನ್ಯತರಸ್ಯ ಮಾತ್ರಾಂ ಪಾಯಯೇತ್ಪಿಪ್ಪಲ್ಯಾದಿಕಷಾಯಾನುಪಾನಾಂ ; ಸ್ನೇಹಸಿತ್ಯಾ ಚ ಸ್ಯಾತ್ತ್ರಿರಾತ್ರಂ ಪಂಚರಾತ್ರಮ್ ಬಲವತೀಮ್ । ಅಬಲಾಂ ಯವಾಗೂಂ ಪಾಯಯೇತ್ತ್ರಿರಾತ್ರಂ ಪಂಚರಾತ್ರಂ ವಾ । ಅತ ಊರ್ಧ್ವಂ ಸ್ನಿಗ್ಧೇನಾನ್ನಸಂಸರ್ಗೇಣೋಪಚರೇತ್ । ಪ್ರಾಯಶಶ್ಚೈನಾಂ ಪ್ರಭೂತೇನೋಷ್ಣೋದಕೇನ ಪರಿಷಿಂಚೇತ್ । ಕ್ರೋಧಾಯಾಸಮೈಥುನಾದೀನ್ಪರಿಹರೇತ್ ‖೪೦‖

ತತೋ (ಚತುರ್ಥೇ ಷಷ್ಠೇ ವಾ ದಿನೇ)ಯವಕೋಲಕುಳತ್ಥಸಿದ್ಧೇನ ಜಾಂಗಲರಸೇನ ಶಾಲ್ಯೋದನಂ ಭೋಜಯೇದ್ಬಲಮಗ್ನಿಬಲಂ ಚಾವೇಕ್ಷ್ಯ । ಅನೇನ ವಿಧಿನಾಽಧ್ಯರ್ಧಮಾಸಮುಪಸಂಸ್ಕೃತಾ ವಿಮುಕ್ತಹಾರಾಚಾರಾ ವಿಗತಸೂತಿಕಾಭಿಧಾನಾ ಸ್ಯಾತ್ ಪುನರಾರ್ತವದರ್ಶನಾದಿತ್ಯೇಕೇ ‖೪೧‖

(ಚ।ಶಾ।ಅ।೮)—

ಗರ್ಭವೃದ್ಧಿಕ್ಷಯಿತಶಿಥಿಲಸರ್ವಶರೀರಧಾತುತ್ವಾತ್ಪ್ರವಾಹಣವೇದನಾಕ್ಲೇದನರಕ್ತಸ್ರುತಿವಿಶೇಷಶೂನ್ಯಶರೀರತ್ವಾಚ್ಚ ತಾಂ ತಸ್ಮಾದ್ಯಥೋಕ್ತೇನ ವಿಧಿನೋಪಚರೇತ್ । ಭೌತಿಕ ಜೀವನೀಯ ಬೃಂಹಣೀಯ ಮಧುರ ವಾತಹರಸಿದ್ಧೈರಭ್ಯಙ್ಗೋತ್ಸಾದನಪರಿಷೇಕಾವಗಾಹನಾನ್ನಪಾನವಿಧಿವಿಶೇಷತಶ್ಚೋಪಚರೇತ್ । ವಿಶೇಷತಶ್ಚ ಶೂನ್ಯಶರೀರಾಃ ಸ್ತ್ರಿಯಃ ಪ್ರಜಾತಾ ಭವನ್ತಿ । ಸೂತಿಕಾನ್ತು ಖಲು ಬುಭುಕ್ಷಿತಾಂ ವಿದಿತ್ವಾ ಸ್ನೇಹಂ ಪಾಯಯೇತ ಪರಮಯಾ ಶಕ್ತ್ಯಾ । ಸರ್ಪಿಸ್ತೈಲಂ ವಸಾ ಮಜ್ಜಾನಂ ವಾ ಸಾತ್ಮೀಭಾವಮಭಿಸಮೀಕ್ಷ್ಯ । ಪಿಪ್ಪಲೀಪಿಪ್ಪಲೀಮೂಲಚವ್ಯಚಿತ್ರಕಶೃಙ್ಗವೇರಚೂರ್ಣಸಹಿತಂ ಸ್ನೇಹಂ ಪೀತವತ್ಯಾಶ್ಚ ಸರ್ಪಿಸ್ತೈಲಾಭ್ಯಾಮಭ್ಯಜ್ಯ ವೇಷ್ಟಯೇದುದರಂ ಮಹತಾ ವಾಸಸಾ । ತಥಾ ತಸ್ಯಾ ನ ವಾಯುರುದರೇ ವಿಕೃತಿಮುತ್ಪಾದಯತ್ಯನವಕಾಶತ್ವಾತ್ । ಜೀರ್ಣೇ ತು ಸ್ನೇಹೇ ಪಿಪ್ಪಲ್ಯಾದಿಭಿರೇವ ಸಿದ್ಧಾಂ ಯವಾಗೂಂ ಸುಸ್ನಿಗ್ಧಾಂ ದ್ರವಾಂ ಮಾತ್ರಶಃ ಪಾಯಯೇತೋಭಯತಃ ಕಾಲಮ್ಧ್ಯೇ ಚೋಷ್ಣೋದಕೇನ ಚ ಪರಿಷೇಚಯೇತ್ಪ್ರಾಕ್ಸ್ನೇಹಯವಾಗೂಪಾನಾಭ್ಯಾಮ್ । ಏವಂ ಪಂಚರಾತ್ರಂ ಸಪ್ತರಾತ್ರಂ ವಾನುಪಾಲ್ಯ ತತಃ ಕ್ರಮೇಣಾಪ್ಯಾಯಯೇತ್ । ದಶಮ್ಯಾಂ ತಿಥ್ಯತೀತಾಯಾಂ ಸಪುತ್ರಾ ಸ್ತ್ರೀ ಸರ್ವಗನ್ಧೋದಕೇನ ಸ್ನಾತ್ವಾ ಲಘ್ವಹತಶುಚಿವಸ್ತ್ರಂ ಪರಿಧಾಯ ಬ್ರಾಹ್ಮಣೈಃ ಸ್ವಸ್ತಿ ವಾಚಯಿತ್ವಾ ಭರ್ತ್ರಾ ಕುಮಾರಸ್ಯ ನಾಮ ಕಾರಯೇತ್। ಅತಃ ಪರಂ ಸ್ವಸ್ಥವೃತ್ತಮಧ್ಯರ್ಧಮಾಸಂ ಸೂತಿಕಾಯಾಃ ‖೪೨‖

(ಅ।ಹೃ।ಶಾ।ಅ।೨)—

ಗತಸೂತಾಭಿಧಾನಾ ಸ್ಯಾತ್ಪುನರಾರ್ತವದರ್ಶನಾತ್।
ಪ್ರಸೂತಾ ಸಾರ್ಧಮಾಸಾನ್ತೇ ದೃಷ್ಟೇ ವಾ ಪುನರಾರ್ತವೇ ‖೪೩‖
ಸೂತಿಕಾ ನಾಮ ಹೀನಾ ಸ್ಯಾದಿತಿ ಧನ್ವನ್ತರೇರ್ಮತಮ್ ।
ಉಪದ್ರವೈರ್ವಿಶುದ್ಧಾಂ ಚ ವಿಜ್ಞಾಯ ವರವರ್ಣಿನೀಮ್ ‖೪೪‖
ಊರ್ಧ್ವಂ ಚತುರ್ಭ್ಯೋ ಮಾಸೇಭ್ಯಃ ಪರಿಹಾರಂ ವಿಸರ್ಜಯೇತ್ ।
ಸೂತಿಕಾ ಕ್ಷುದ್ವತೀ ತೈಲಾದ್ಘೃತಾದ್ವಾ ಮಹತೀಂ ಪಿಬೇತ್ ‖೪೫‖
ಪಂಚಕೋಲಕಿನೀಂ ಮಾತ್ರಾಮನು ಚೋಷ್ಣಂ ಗುಡೋದಕಮ್ ।
ವಾತಘ್ನೌಷಧತೋಯಂ ವಾ ತಥಾ ವಾಯುರ್ನ ಕುಪ್ಯತಿ ‖೪೬‖

ವಿಶುಧ್ಯತಿ ಚ ದುಷ್ಟಾಸ್ರಂ ದ್ವಿತ್ರಿರಾತ್ರಮಯಂ ಕ್ರಮಃ ।
ಸ್ನೇಹಾಯೋಗ್ಯಾ ತು ನಿಸ್ಸ್ನೇಹಮಮುಮೇವ ವಿಧಿಂ ಭಜೇತ್ ॥೪೭॥
ಪೀತವತ್ಯಾಶ್ಚ ಜಠರಂ ಯಮಕಾಕ್ತಂ ವಿವೇಷ್ಟಯೇತ್ ।
ಜೀರ್ಣೇ ಸ್ನಾತಾ ಪಿಬೇತ್ಪೇಯಾಂ ಪೂರ್ವೋಕ್ತೌಷಧಸಾಧಿತಾಮ್ ॥೪೮॥
ತ್ರ್ಯಹಾದೂರ್ಧ್ವಂ ವಿದಾರ್ಯಾದಿವರ್ಗಕ್ವಾಥೇನ ಸಾಧಿತಾ।
ಹಿತಾ ಯವಾಗೂಃ ಸ್ನೇಹಾಢ್ಯಾ ಸಾತ್ಮ್ಯತಃ ಪಯಸಾಥ ವಾ ॥೪೯॥
ಸಪ್ತರಾತ್ರಾತ್ಪರಂ ಚಾಸ್ಯೈ ಕ್ರಮಶೋ ಬೃಂಹಣಂ ಹಿತಮ್ ।

ಟಿಪ್ಪಣಿ—ಸರ್ವಗನ್ಧಃ—
ಚಾತುರ್ಜಾತಕಕರ್ಪೂರಕಕ್ಕೋಲಾಗುರುಕುಙ್ಕುಮಮ್ ।
ಲವಙ್ಗಸಹಿತಂ ಚೈವ ಸರ್ವಗನ್ಧಂ ವಿನಿರ್ದಿಶೇತ್ ॥ ಇತಿ ॥

ದೀಪಿಕೆ (ಸು।ಶಾ।ಅ।೧೦)—ಬಾಣಂತಿತನ—ಬಾಣಂತಿಯರ ಉಪಚಾರ—

ಅಕಾಲದಲ್ಲಿ ಪ್ರಸವಿಸಿದ ಸ್ತ್ರೀಯರಿಗೆ ಸ್ನೇಹಪಾನವನ್ನು ಮಾಡಿಸ ಬಾರದು; ಅದರಿಂದ ನಾನಾರೋಗಗಳುಂಟಾಗಿ ಕಷ್ಟಸಾಧ್ಯಗಳಾಗಿಯೂ ಅಸಾಧ್ಯಗಳಾಗಿಯೂ ಪರಿಣಮಿಸುತ್ತವೆ.

ರಕ್ತವೂ, ಗರ್ಭಾಶಯದಲ್ಲಿನ ಕ್ಲೇದದ್ರವವೂ, ಮಲವೂ ನಿಂತುಬಿಡುತ್ತವೆ; ಆದಕಾರಣ ಬಾಣಂತಿಗೆ ಸ್ನೇಹಪಾನ ಮಾಡಿಸದೆ ಹತ್ತು ದಿನಗಳವರೆಗೆ ಪಾಚ ನೌಷಧಗಳನ್ನೇ ಪ್ರಯೋಗಿಸಿ ಅನಂತರ ಕ್ರಮವಾಗಿ ಸ್ನೇಹವನ್ನು ಉಪ ಯೋಗಿಸಬೇಕು.

ಪ್ರಸವವಾದಮೇಲೆ ಶುದ್ಧಸ್ರಾವವುಳ್ಳ ಬಲಾಢ್ಯಳಾದ ಬಾಣಂತಿಗೆ ಬಲಾ ತೈಲದಿಂದ ಅಭ್ಯಂಗ ಮಾಡಿಸಿ ವಾತಹರದ್ರವ್ಯಗಳ ಕಷಾಯವನ್ನು ಸುಖೋಷ್ಣ ವಾಗಿ ಮಾಡಿ ಕುಡಿಸಬೇಕು. ದೋಷಶೇಷವಿದ್ದು ದುರ್ಬಲಳಾದರೆ ಆ ದಿವಸ ಹಿಪ್ಪಲಿ, ಮೋಡಿ, ಗಜಹಿಪ್ಪಲಿ, ಚಿತ್ರಮೂಲ, ಶುಂಠಿ ಇವುಗಳ ಸಮಭಾಗದ ಚೂರ್ಣವನ್ನು ಬಿಸಿಯಾದ ಬೆಲ್ಲದ ಪಾನಕದಲ್ಲಿ ಕದರಿ ಕುಡಿಸಬೇಕು; ಈ ರೀತಿಯಾಗಿ ಎರಡು ಮೂರು ದಿನಗಳು ಅಥವಾ ದುಷ್ಟರಕ್ತಸ್ರಾವವು ಶುದ್ಧಿಯಾಗುವವರೆಗೂ ಕುಡಿಸಿ ಅನಂತರ ವಿದಾರಿಗನ್ಧಾದಿಗಣದ್ರವ್ಯಗಳಿಂದ ತಯಾರಿಸಿದ ಘೃತವನ್ನು ಸೇರಿಸಿದ ಯವಾಗೂವನ್ನಾಗಲೀ ಹಾಲುಮಿಶ್ರಮಾಡಿದ ಯವಾಗೂವನ್ನಾಗಲೀ ಮೂರು ದಿನ ಅಥವಾ ಐದು ದಿನಗಳವರೆಗೆ ಪಾನಮಾಡಿಸಬೇಕು. ಅನಂತರ ಸ್ನೇಹಮಿಶ್ರಿತವಾದ ಅನ್ನಪಾನಗಳಿಂದ ಉಪಚರಿಸಬೇಕು. ಶಲ್ಯರೂಪವಾದ ಮೂಢಗರ್ಭವು ಹೊರಕ್ಕೆ ಬಂದಮೇಲಾಗಲೀ ಅಥವಾ ಸುಖಪ್ರಸವವಾದ ಮೇಲಾಗಲೀ ಉಪದ್ರವಗಳಿಲ್ಲದಿದ್ದರೆ ಬಾಣಂತಿಗೆ ಸ್ವೇದಮಾಡಿಸಬೇಕು. ತೈಲಾ ಭ್ಯಙ್ಗ ಮತ್ತು ಸ್ನೇಹಪಾನಗಳನ್ನು ಮಾಡಿಸದೆ ಬಾಣಂತಿಯರಿಗೆ ಸ್ವೇದಕರ್ಮವನ್ನು ಮಾಡಿಸಬಾರದು.

ಧನ್ವಭೂಮಿ ಅಥವಾ ಬೈಲುಸೀಮೆಯ ಬಲಾಢ್ಯರಾದ ಬಾಣಂತಿಯರಿಗೆ ಉತ್ತಮ ಮಾತ್ರೆಯ ಘೃತವನ್ನಾಗಲೀ ತೈಲವನ್ನಾಗಲೀ ಪಾನಮಾಡಿಸಿ ಪಿಪ್ಪಲ್ಯಾದಿಕಷಾಯವನ್ನು ಕುಡಿಸಬೇಕು. ಇದು ಜೀರ್ಣವಾದಮೇಲೆ ಸ್ನೇಹ

ಮಿಶ್ರವಾದ ಯವಾಗೂವನ್ನಾಗಲೀ ಹಾಲುಮಿಶ್ರ ಮಾಡಿದ ಯವಾಗೂವನ್ನಾಗಲೀ ಪ್ರಸವದಿನದಿಂದ ಮೂರು ದಿನಗಳವರೆಗೆ ಕುಡಿಸಬೇಕು. ದುರ್ಬಲಳಾದರೆ ಐದು ದಿನಗಳವರೆಗೆ ಸ್ನೇಹ ಯವಾಗೂವನ್ನಾಗಲೀ ಕ್ಷೀರ ಯವಾಗೂವನ್ನಾಗಲೀ ಕುಡಿಸಬೇಕು. ಪ್ರಾಯಿಕವಾಗಿ ಬಿಸಿನೀರಿನಿಂದ ಅಧಿಕವಾಗಿ ಸ್ನಾನ ಮಾಡಿಸಬೇಕು. ಶರೀರದ ಬಲವನ್ನೂ ಜಠರಾಗ್ನಿಯ (ಜೀರ್ಣಶಕ್ತಿಯ) ಬಲವನ್ನೂ ತಿಳಿದು ಮೂರನೆಯ ಅಥವಾ ನಾಲ್ಕನೆಯ ದಿನ ಯವೆ, ಎಲಚಿ, ಹುರಳಿಗಳ ಕಷಾಯ ಮತ್ತು ಮಾಂಸರಸ ಮಿಶ್ರಮಾಡಿದ ಶಾಲ್ಯೋದನವನ್ನು ಭೋಜನ ಮಾಡಿಸಬೇಕು. ಈ ರೀತಿಯಲ್ಲಿ ಒಂದೂವರೆ ತಿಂಗಳವರೆಗೂ ಉಪಚಾರಮಾಡಿ ಅನಂತರ ನಿಲ್ಲಿಸಬೇಕು. ಇಲ್ಲಿಗೆ ಬಾಣಂತಿತನವು ಮುಗಿಯುತ್ತದೆ. ಪುನಃ ಮಾಸಿಕಸ್ರಾವವುಂಟಾಗುವವರೆಗೂ ಬಾಣಂತಿತನದ ಕಾಲವೆಂದು ಕೆಲವು ವೈದ್ಯರ ಮತವು.

(ಚ। ಶಾ। ಅ। ೮)--

ಗರ್ಭಧರಿಸಿದಾಗ ಸ್ತ್ರೀಯರ ಶರೀರವು ಅತಿಯಾಗಿ ವೃದ್ಧಿಹೊಂದುತ್ತದೆ; ಪ್ರಸವವಾದಮೇಲೆ ಸಕಲ ಧಾತುಗಳೂ ಕ್ಷೀಣವಾಗಿ ಶರೀರವು ಕೃಶವಾಗುತ್ತದೆ; ಪ್ರಸವವೇದನೆಯಿಂದಲೂ ಮುಲುಕುವುದರಿಂದಲೂ ರಕ್ತವೂ ಗರ್ಭಾಶಯದಲ್ಲಿ ಸಂಚಯವಾದ ದ್ರವಗಳೂ ಹೊರಕ್ಕೆ ಸ್ರಾವವಾಗುವುದರಿಂದಲೂ, ಕೃಶವಾದ ದೇಹವುಳ್ಳ ಬಾಣಂತಿಗೆ ಮೇಲೆ ಹೇಳಿದ ಕ್ರಮದಂತೆ ಉಪಚಾರಮಾಡಿ ಜೀವನೀಯ ಬೃಂಹಣೀಯ ಮಧುರಗಳಾದ ಮತ್ತು ವಾತಹರಗಳಾದ ದ್ರವ್ಯಗಳ ಕಷಾಯಗಳಿಂದ ಸ್ನೇಹಮಿಶ್ರಮಾಡಿ ಅಭ್ಯಂಗ ಉತ್ಸಾದನ (ಮೃದುವಾಗಿ ಶರೀರದಮೇಲೆ ಉಜ್ಜುವುದು) ಸುಖೋಷ್ಣಕಷಾಯಗಳ ಸೇಚನೆ, ಅವಗಾಹ (ಕಷಾಯದಲ್ಲಿ ಕುಳ್ಳಿರಿಸುವುದು) ಸ್ನಾನ ಪಾನಗಳನ್ನು ಮಾಡಿಸಿ ಬಾಣಂತಿಗೆ ಹಸಿವೆಯುಂಟಾಗಿದೆಯೆಂದು ತಿಳಿದರೆ ಉತ್ತಮ ಮಾತ್ರೆಯ (ಎಂಟು ಯಾಮದಲ್ಲಿ ಜೀರ್ಣಿಸುವಷ್ಟು ಪ್ರಮಾಣದ) ಅವಳಿಗೆ ಅಭ್ಯಾಸವಾಗಿರುವ ಘೃತ ತೈಲ ವಸ ಮಜ್ಜೆಗಳಲ್ಲೊಂದು ಸ್ನೇಹವನ್ನು ಪಂಚಕೋಲ ಚೂರ್ಣ ಮಿಶ್ರಮಾಡಿ ಕುಡಿಸಬೇಕು. ತೈಲ ಘೃತಗಳೆರಡನ್ನೂ ಮಿಶ್ರಮಾಡಿ ಆಕೆಯ ಹೊಟ್ಟೆಗೆ ಚೆನ್ನಾಗಿ ಸವರಿ ಉಜ್ಜಿ ಅಗಲವಾದ ದಪ್ಪವಾದ ಬಟ್ಟೆಯ ಪಟ್ಟಿಯನ್ನು ಉದರಕ್ಕೆ ಬಿಗಿಯಬೇಕು. ಹೀಗೆ ಮಾಡಿದರೆ ಅವಳ ಉದರದೊಳಗೆ ವಾಯುವು ಪೀಡಿಸಲು ಅವಕಾಶವಿರುವುದಿಲ್ಲ. ಸ್ನೇಹವು ಜೀರ್ಣವಾದ ಮೇಲೆ ಪಂಚಕೋಲ ಮತ್ತು ಸ್ನೇಹ ಮಿಶ್ರಮಾಡಿದ ಯವಾಗೂವನ್ನು ದಿನಕ್ಕೆ ಎರಡು ವೇಳೆಯಂತೆ ಐದು ಅಥವಾ ಏಳು ದಿನಗಳವರೆಗೆ ಪಾನಮಾಡಿಸಿ ಅನಂತರ ಪುಷ್ಟಿಕರಗಳಾದ ಆಹಾರಗಳನ್ನು ಕ್ರಮಕ್ರಮವಾಗಿ ವೃದ್ಧಿಮಾಡಿ ಕೊಡಬೇಕು. ಪ್ರತಿದಿನವೂ ಸ್ನೇಹಪಾನ, ಯವಾಗೂ ಪಾನಗಳನ್ನು ಮಾಡಿಸುವುದಕ್ಕಿಂತ ಮೊದಲು ಶುದ್ಧವಾದ ಸುಖೋಷ್ಣವಾದ ನೀರಿನಿಂದ ಬಾಣಂತಿಯ ಶರೀರವನ್ನು ತೊಳೆಯಬೇಕು. ಪ್ರಸವವಾದ ಹತ್ತು ದಿನಗಳು ಕಳೆದ ಮೇಲೆ ಹನ್ನೊಂದನೆಯ ದಿವಸ ಬಾಣಂತಿಗೂ ಮಗುವಿಗೂ ಸರ್ವ

ಗಂಧೌಷಧಿಗಳನ್ನು ಸೇರಿಸಿ ಕಾಯಿಸಿದ ಸುಖೋಷ್ಣವಾದ ನೀರಿನಿಂದ ಸ್ನಾನ ಮಾಡಿಸಿ ಶುಭ್ರವಾದ ಹಗುರವಾದ ವಸ್ತ್ರಗಳನ್ನುಡಿಸಿ ಬ್ರಾಹ್ಮಣರಿಂದ ಸ್ವಸ್ತಿ ಪುಣ್ಯಾಹವಾಚನಗಳನ್ನು ಹೇಳಿಸಿ ಆಕೆಯ ಪತಿಯ ಮೂಲಕ ಮಗುವಿಗೆ ನಾಮ ಕರಣವನ್ನು ಮಾಡಿಸಬೇಕು. ಅನಂತರ ಒಂದೂವರೆ ತಿಂಗಳವರೆಗೂ ಈ ಕ್ರಮ ವನ್ನಾಚರಿಸಿದ ಮೇಲೆ ಸ್ವಸ್ತವೃತ್ತ ಕ್ರಮಗಳನ್ನು ಆಚರಿಸಬೇಕು. ಅಲ್ಲಿಂದ ಮುಂದೆ ಬಾಣಂತಿಯರು ಅನುಸರಿಸುವ ಮೇಲೆ ವಿವರಿಸಿದ ಆಹಾರ ವಿಹಾರ ಕ್ರಮಗಳು ಅವಶ್ಯಕವಿರುವುದಿಲ್ಲ.

(ಅ। ಹೃ। ಶಾ। ಅ ೨)—

ಪ್ರಸವಿಸಿದಮೇಲೆ ಒಂದೂವರೆ ತಿಂಗಳು ಕಳೆದರೆ ಅಥವಾ ಪುನಃ ರಜೋ ದರ್ಶನವಾದರೆ ಬಾಣಂತಿಯೆಂಬ ಅವಸ್ಥೆಯು (ಅಂದರೆ ಮೊದಲಿನಂತೆ ಗೃಹ ಕಾರ್ಯಗಳಲ್ಲಿ ಮಗ್ನಳಾಗಿ ದಾಂಪತ್ಯ ಸುಖವನ್ನು ಭೋಗಿಸಲು ಅರ್ಹಳಾಗು ತ್ತಾಳೆ) ಪೂರ್ತಿಯಾಗುತ್ತದೆಂದು ಧನ್ವನ್ತರಿಯ ಮತವು. ಪ್ರಸವಕಾಲದಲ್ಲಿ ಉಂಟಾಗುವ ವಿಕಾರಗಳು ನಿವಾರಣೆಯಾಗಿರುತ್ತೆಂದು ತಿಳಿದರೆ ಅಥವಾ ಪ್ರಸವ ವಾಗಿ ನಾಲ್ಕು ತಿಂಗಳು ಕಳೆದರೆ ಆಕೆಗೆ ಪಥ್ಯಾಚರಣೆಯನ್ನು ನಿಲ್ಲಿಸಬಹುದು.

ಪ್ರಸವವಾದಮೇಲೆ ಬಾಣಂತಿಗೆ ಹಶಿವೆಯುಂಟಾದರೆ ಪಂಚಕೋಲ ಚೂರ್ಣ ಮಿಶ್ರಮಾಡಿದ ಘೃತ ಅಥವಾ ತೈಲದ ಮಹಾಪ್ರಮಾಣದಷ್ಟನ್ನು (ಎಂಟು ಯಾಮ ಗಳಲ್ಲಿ ಜೀರ್ಣಿಸುವಷ್ಟು ಪ್ರಮಾಣ) ಕುಡಿಸಿ ಬಿಸಿಯಾದ ಬೆಲ್ಲದ ಪಾನಕವನ್ನು ಕುಡಿಸಬೇಕು. ಅಥವಾ ವಾತಹರಗಳಾದ ದಶಮೂಲಕ್ವಾಥವನ್ನು ಕುಡಿಸಬೇಕು; ಇದರಿಂದ ವಾತವು ಪ್ರಕೋಪಗೊಳ್ಳದೆ ದುಷ್ಟರಕ್ತವು ಸ್ರಾವವಾಗುತ್ತದೆ; ಈ ರೀತಿಯಾಗಿ ಪ್ರಸವವಾದ ಮೂರು ದಿನಗಳವರೆಗೆ ಆಚರಿಸಿ ಆ ಸ್ತ್ರೀಯು ಸ್ನೇಹ ಪಾನಕ್ಕೆ ಅನರ್ಹಳಾಗಿದ್ದರೆ ಬರಿಯದಾದ ಬೆಲ್ಲದ ನೀರಿಗೆ ಪಂಚಕೋಲ ಚೂರ್ಣ ವನ್ನು ಸೇರಿಸಿ ಕುಡಿಸಬೇಕು. ಅನಂತರ ತುಪ್ಪ ಎಣ್ಣೆ ಮಿಶ್ರಮಾಡಿ ಆಕೆಯ ಹೊಟ್ಟೆಯ ಸುತ್ತಲೂ ಮೆತ್ತಗೆ ತಿಕ್ಕಿ ದಪ್ಪವಾದ ಅಗಲವಾದ ಬಟ್ಟೆಯ ಪಟ್ಟಿ ಯನ್ನು ಬಿಗಿಯಬೇಕು. ಇದರಿಂದ ಹೊಟ್ಟೆಯಲ್ಲಿ ವಾತಪ್ರಕೋಪವಾಗುವುದಿಲ್ಲ. ಸ್ನೇಹವು ಜೀರ್ಣಿಸಿದಮೇಲೆ ಪಂಚಕೋಲಗಳಿಂದ ತಯಾರಿಸಿದ ಯವಾಗೂವನ್ನು ಕುಡಿಸಬೇಕು. ಮೂರು ದಿನಗಳ ನಂತರ ವಿಧಾರಿಗಂಧಾದಿಗಣದ್ರವ್ಯಗಳಿಂದ ತಯಾರಿಸಿದ ಯವಾಗೂವನ್ನಾಗಲಿ ಕ್ಷೀರಯವಾಗೂವನ್ನಾಗಲಿ ಏಳು ದಿನಗಳ ವರೆಗೆ ಪ್ರಯೋಗಿಸಿ ಅನಂತರ ಪುಷ್ಟಿಕರಗಳಾದ ಘೃತಮಿಶ್ರಗಳಾದ ಆಹಾರ ಗಳನ್ನು ಕೊಡಬೇಕು.

ಟಿಪ್ಪಣಿ—ಚಾತುರ್ಜಾತಕ, ಪಚ್ಚಕರ್ಪೂರ, ತಕ್ಕೋಲ, ಅಗಿಲು, ಕುಂಕುಮಕೇಸರಿ, ಲವಂಗ, ಇವುಗಳು ಸರ್ವಗಂಧಗಳು.

ಅಷ್ಟಮೋಽಧ್ಯಾಯಃ

ಗರ್ಭವಿಕೃತಿ ವಿಜ್ಞಾನಮ್

೧. (ಅ। ಸಂ। ಶಾ।)—ಜರಾಯುದೋಷಾಃ—

ಜರಾಯುಃ ಗರ್ಭಸ್ಯಾವೇಷ್ಟನರೂಪಶ್ಚರ್ಮವಿಶೇಷಃ । ವಿಕೃತಜರಾಯುಣಾಽಚ್ಛಾದನಂ ಜರಾಯುದೋಷಃ । ಗರ್ಭಶಯ್ಯಾಯಾಂ ಸ್ಥಿತೋ ಯೋ ಗರ್ಭಸ್ತಸ್ಯೋಪರಿ ವೇಷ್ಟಿತೋಽಲ್ಪವಿಕಾರಕರತ್ವಾಜ್ಜರಾಯುದೋಷಃ ॥ ೧ ॥

೨. (ಸು। ಶಾ। ಅ। ೧೦)—ಗರ್ಭಾತಿವೃದ್ಧಿಃ—

ವಿಕೃತಗರ್ಭೋ ಜಠರಾಭಿವೃದ್ಧಿಂ ಸ್ವೇದಂ ಚ ಕರೋತಿ ॥ ೨ ॥

ಚಿಕಿತ್ಸಾ—

ತೇಷಾಂ ಯಥಾಸ್ವಂ ಸಂಶೋಧನಂ ಕ್ಷಪಣಂ ಚ ಕ್ಷಯಾದವಿರುದ್ಧೈಃ ಕ್ರಿಯಾವಿಶೇಷೈಃ ಪ್ರಕುರ್ವೀತ ॥೩॥

೩. ರಕ್ತಗುಲ್ಮಃ—ಸ್ತ್ರೀರೋಗಾಧಿಕಾರೇ ಯೋನಿವ್ಯಾಪತ್ಸು ದ್ರಷ್ಟವ್ಯಃ ॥ ೪ ॥

೪. ಹಾರೀತೇ—ಗರ್ಭಜದೋಷಾಃ—

ಹೃಲ್ಲಾಸಶ್ಛರ್ದಿಶೋಷಾಶ್ಚ ಜ್ವರಶ್ಶ್ವೋಫಸ್ತಥಾಽರುಚಿಃ ।
ವಿವರ್ಣತ್ವಮತೀಸಾರಾಸ್ತೇಽಷ್ಟೌ ಸ್ಯುಃ ಗರ್ಭದೂಷಕಾಃ ॥ ೫ ॥

ಚಿಕಿತ್ಸಾ—ಶೋಷೇ—

ವಟಪ್ರರೋಹಂ ಮಗಧಾಮುಶೀರಂ ಪುನರ್ನವೇವ ವಾ ।
ವಟೀ ಖಣ್ಡೇನ ಸಹಿತಾ ಧೃತಾಸ್ಯೇ ಶೋಷಹಾರಿಣೀ ॥ ೬ ॥

ಅರುಚೌ—

ಶೃಙ್ಗವೇರಂ ಸಕಟುಕಂ ಮಾತುಲುಙ್ಗಸ್ಯ ಕೇಸರಮ್॥
ಮಾರ್ಜನಂ ದನ್ತಜಿಹ್ವಾಸು ಗಣ್ಡೂಷಶ್ಚೋಷ್ಣವಾರಿಣಾ ॥
ಗುರ್ವಿಣೀನಾಂ ಚ ಸರ್ವಾಸಾಮರುಚಿಂ ಸಂಪ್ರಯಚ್ಛತಿ ॥ ೭ ॥

(ಸು। ಶಾ। ಅ। ೧೦)—ಛರ್ದಿಃ—

ನಾರ್ಯಾಶ್ಚಾಪನ್ನಸತ್ವಾಯಾಶ್ಛರ್ದಿರ್ವ್ಯೈ ಸಮ್ಭವೇದ್ಧ್ರುವಮ್ ।
ಪ್ರಸೇಕೋ ಹೃದಯೋತ್ಕ್ಲೇಶೋ ಭಕ್ತಸ್ಯಾಽನಭಿನಂದನಮ್ ॥ ೮ ॥
ಪೂರ್ವರೂಪಂ ಮತಂ ಛರ್ದ್ಯಾಂ ಯಥಾಸ್ವಂ ಚ ವಿಭಾವಯೇತ್ ।
ಚಿಕಿತ್ಸಾ—ದೌಹೃದೀಂ ಛರ್ದಿಂ ಕಾಙ್ಕ್ಷಿತಫಲೈರ್ವಾರಯೇತ್ ॥ ೯ ॥

ಹಾರೀತೇ—ಶೀತೋಭೂನಿಮ್ಬಕಲ್ಕಶ್ಚ ಹರೇ ಚ್ಛರ್ದಿಂ ಸಶರ್ಕರಃ ॥ ೧೦ ॥

೮ನೆಯ ಅಧ್ಯಾಯ

ಗರ್ಭವಿಕಾರಗಳು

೧. ಜರಾಯು ದುಷ್ಟಿ—ಜರಾಯುವೆಂದರೆ ಶಿಶುವಿನ ದೇಹದ ಮೇಲೆ ಸಿಂಬಳದಂತೆ ಮೆತ್ತಿಕೊಂಡಂತಿರುವ ತೆಳುವಾದ ಚರ್ಮದ ಪೊರೆ ॥೧॥

(ಅ।ಸಂ)––ಜರಾಯುವು ಶಿಶುದೇಹದಲ್ಲಿ ಅಂಟಿಕೊಂಡಿದ್ದರೆ ಜರಾಯು ದೋಷವೆನ್ನುತ್ತಾರೆ. ಅತಿಸ್ವಲ್ಪ ವಿಕಾರವನ್ನುಂಟುಮಾಡುತ್ತದೆಯಾಗಿ ಈ ಹೆಸರು ಬಂದಿರುತ್ತದೆ ॥ ೨ ॥

ವಿಕೃತಗರ್ಭವು (ಅತಿ ಪ್ರಮಾಣದಲ್ಲಿ ವೃದ್ಧಿಯಾದ ಅವಯುವಗಳನ್ನುಳ್ಳ ಗರ್ಭವು) ಜಠರ ವೃದ್ಧಿಯನ್ನೂ ಜೆವರನ್ನೂ ಉಂಟುಮಾಡುತ್ತದೆ. ಶಿಶುವಿನ ದೇಹವು ಕ್ಷೀಣಿಸದಿರುವಷ್ಟು ಪ್ರಮಾಣದಲ್ಲಿ ಶೋಧನೌಷಧ ಮತ್ತು ಕರ್ಶನೌಷಧ ಗಳನ್ನುಪಯೋಗಿಸಬೇಕು ॥ ೩ ॥

೩. ರಕ್ತಗುಲ್ಮ––ಸ್ತ್ರೀರೋಗಾಧಿಕರಣದಲ್ಲಿ ಯೋನಿವ್ಯಾಪತ್ತಿನಲ್ಲಿ ನೋಡುವುದು ॥೪॥

೪. ಗರ್ಭದೋಷಗಳು––(ಗರ್ಭಿಣಿಯರಿಗೆ ಗರ್ಭಧಾರಣೆಯ ನಿಮಿತ್ತ ದಿಂದುಂಟಾಗುವ ತೊಂದರೆಗಳು)––

ಹಾರೀತಸಂ.––ಓಕರಿಕೆ, ವಮನ, ಶೋಷ, ಜ್ವರ, ಶೋಫ, ಅರುಚಿ, ವಿವ ರ್ಣತೆ, ಅತಿಸಾರ ಇವು ಗರ್ಭಜದೋಷಗಳು ॥ ೫ ॥ ಇವುಗಳಿಗೆ ಕ್ರಮವಾಗಿ ಪ್ರತೀಕಾರಗಳು :––

ಶೋಷಕ್ಕೆ––ಆಲದಬಿಳಲು, ಹಿಪ್ಪಲಿ, ಲಾವಂಚ, ಕೊನ್ನಾರಿಗೆಡ್ಡೆ ಇವು ಗಳನ್ನು ಸಮಪ್ರಮಾಣದಲ್ಲಿ ಚೂರ್ಣಿಸಿ ಸಮಸಕ್ಕರೆ ಬೆರಸಿ ವಟಕಗಳನ್ನು ತಯಾರಿಸಿ ಉಪಯೋಗಿಸಿದರೆ ಶೋಷಪರಿಹಾರವಾಗುತ್ತದೆ ॥೬॥

ಅರುಚಿ––ಶುಂಠಿ, ಕುಟುಕರೋಹಿಣಿ, ಮಾದಳಕುಸುಮ ಇವುಗಳನ್ನು, ಸಮಪ್ರಮಾಣದಲ್ಲಿ ಸೇರಿಸಿ ಕಲ್ಕಮಾಡಿ ಹಲ್ಲು ನಾಲಿಗೆಗಳಿಗೆ ಲೇಪಿಸಿ ಬಿಸಿನೀರಿ ನಿಂದ ಬಾಯಿ ಮುಕ್ಕುಳಿಸಬೇಕು ॥೭॥

ವಮನ:––ಗರ್ಭಿಣಿಯರಿಗೆ ಗರ್ಭವೃದ್ಧಿಯಾದುದಕ್ಕೆ ತಕ್ಕಂತೆ ವಮನ ವಾಗುತ್ತಿರುವುದು ಸಹಜವಾಗಿರುತ್ತದೆ. ಬಾಯಿಯಲ್ಲಿ ನೀರು ಬರುತ್ತಿರುವುದು, ಎದೆ ಒತ್ತುವುದು, ಅನ್ನ ರುಚಿಸದಿರುವುದು ಇವು ವಮನವಾಗುವುದಕ್ಕಿಂತ ಮುಂಚಿನ ಗುರ್ತುಗಳು. ಗರ್ಭಿಣಿಗೆ ಇಷ್ಟವಾದ ಹಣ್ಣುಗಳನ್ನು ಸೇವಿಸುವುದೇ ಇದಕ್ಕೆ ಪ್ರತೀಕಾರವು. ಸಾಮಾನ್ಯವಾಗಿ ವಮನವು ಎರಡನೆಯ ತಿಂಗಳಿನಲ್ಲಿ ಪ್ರಾರಂಭಿಸಿ ನಾಲ್ಕನೆಯ ತಿಂಗಳಹೊತ್ತಿಗೆ ಕಡಮೆಯಾಗುತ್ತದೆ.

(ಹಾರೀತೇ)––ಚಿಕಿತ್ಸೆ––ನೆಲಬೇವಿನ ಕಲ್ಕ ಒಂದು ತೊಲೆಯಷ್ಟಕ್ಕೆ ಸಮ ಸಕ್ಕರೆಯನ್ನು ಸೇರಿಸಿ ಬಿಸಿನೀರಿನಲ್ಲಿ ಕದರಿ ಕುಡಿಸಿದರೆ ಗರ್ಭಿಣಿಯರಿಗೆ ವಮನ ಪರಿಹಾರವಾಗುತ್ತದೆ ॥ ೮–೯–೧೦ ॥

೫. ಮೂಲ––(ಸು।ಶಾ।೩।೧೦)––ದೌಹೃದಮ್––

ಮಾತೃಜಂ ಹ್ಯಸ್ಯ ಹೃದಯಂ ಮಾತುಶ್ಚ ಹೃದಯೇನ ತತ್ ।
ಸಂಬದ್ಧಂ ತೇನ ಗರ್ಭಿಣ್ಯಾ ನೇಷ್ಟಂ ಶ್ರದ್ಧಾವಿಧಾರಣಮ್ ॥೧೧॥
ದೇಯಮಪ್ಯಹಿತಂ ತಸ್ಯೈ ಹಿತೋಪಹಿತಮಲ್ಪಕಮ್ ।

ದೀಪಿಕೆ—ಬಯಕೆ—

ಗರ್ಭದ ಹೃದಯವು ಮಾತೃವಿನ ಅಂಶದಿಂದ ಉಂಟಾಗಿ ವೃದ್ಧಿಹೊಂದಿ ನಾಭಿನಾಳದ ಮೂಲಕ ಮಾತೃವಿನ ಹೃದಯದೊಡನೆ ಸಂಬದ್ಧವಾಗಿರುವ ಕಾರಣ ಗರ್ಭಿಣಿಯರು ಬಯಸಿದ ವಸ್ತುಗಳನ್ನು ತಂದು ಅವರಿಗೆ ಸಲ್ಲಿಸಲೇ ಬೇಕು. ಅಹಿತವಸ್ತುಗಳಾದರೂ ಅವನ್ನು ಹಿತವಸ್ತುಗಳೊಡನೆ ಮಿಶ್ರಮಾಡಿ ಅಲ್ಪಪ್ರಮಾಣದಿಂದಾದರೂ ಕೊಡಿಸಬೇಕು ‖ ೧೧ ‖

ಮೂಲ—(ಚರಕೇ)—ಕಣ್ಡೂಃ—

ತತ್ರ ಗರ್ಭಸ್ಯ ಕೇಶಾ ಜಾಯಮಾನಾ ಮಾತುರ್ವಿದಾಹಂ ಜನಯನ್ತೀತಿ ಸ್ತ್ರಿಯೋ ಭಾಷನ್ತೇ। ತನ್ನೇತಿ ಭಗವಾನಾತ್ರೇಯಃ। ಕಿನ್ತು ಗರ್ಭೋತ್ಪೀಡನಾದ್ಧಿ ವಾತಪಿತ್ತಶ್ಲೇಷ್ಮಾಣ ಉರಃ ಪ್ರಾಪ್ಯ ವಿದಹನ್ತಿ। ತತಃ ಕಣ್ಡೂರುಪಜಾಯತೇ, ಕಣ್ಡೂಮೂಲಾ ಕಿಕ್ಕಿಸಾವಾಪ್ತಿಃ। ಉರಸ್ತನೋದರೇಷು ರೇಖಾಕಾರಾ ವಲಿವಿಶೇಷಾಸ್ತತ್ಕಾಲೇ ಯೇ ಜಾಯನ್ತೇ ತೇ ಕಿಕ್ಕಿಸಸಂಜ್ಞಾಃ। ಶೂಕೈರಿವ ಪೂರ್ಣತಾ ಕಿಕ್ಕಿಸಾನೀತಿ ಕೇಚನ ‖೧೨‖

ಸಾಮಾನ್ಯಚಿಕಿತ್ಸಾ—

ತತ್ರ ಕೋಲೋದಕೇನ ನವನೀತಸ್ಯ ಮಧುರೌಷಧಸಿದ್ಧಸ್ಯ ಪಾಣಿತಲಮಾತ್ರಂ ಕಾಲೇ ಕಾಲೇಽಸ್ಯೈ ದದ್ಯಾತ್। ಮಧುರಮಾಹಾರಜಾತಂ ವಾತಹರಮಲ್ಪಮಸ್ನೇಹಲವಣಮಲ್ಪೋದಕಾನುಪಾನಂ ಭುಂಜೀತ ‖೧೩‖

ಬಾಹ್ಯಚಿಕಿತ್ಸಾ—

ಚನ್ದನಮೃಣಾಲಕಲ್ಕೈಶ್ಚಾಸ್ಯಾಃ ಸ್ತನೋದರಂ ವಿಮೃದ್ನೀಯಾತ್। ಶಿರೀಷಧಾತಕೀಸರ್ಷಪಮಧೂಕಚೂರ್ಣೈರ್ವಾಃ ಕುಟಜಾದ್ರ್ಯಕಬೀಜಮುಸ್ತಾಹರಿದ್ರಾಕಲ್ಕೈರ್ವಾ। ಕರವೀರಪತ್ರಸಿದ್ಧೇನ ತೈಲೇನ ಚಾಭ್ಯಙ್ಗಃ। ಪರಿಷೇಕಃ ಪುನಃ ಮಾಲತೀಮಧುಕಸಿದ್ಧೇನಾಮ್ಭಸಾ ವಾ। ಜಾತಕಣ್ಡೂಶ್ಚ ಕಣ್ಡೂಯನಂ ವರ್ಜಯೇತ್ ತ್ವಗ್ಭೇದವೈರೂಪ್ಯಪರಿಹಾರಾರ್ಥಮ್। ಅಸಹ್ಯಾಯಾನ್ತು ಕಣ್ಡ್ವಾಮುನ್ಮರ್ದನೋದ್ಘರ್ಷಣಾಭ್ಯಾಂ ಪರಿಹಾರಃ ಸ್ಯಾತ್ ‖೧೪‖

ದೀಪಿಕೆ (ಚ। ಶಾ।)—ತಿನಸು (ತೀಟೆ)—

ಗರ್ಭದಲ್ಲಿರುವ ಶಿಶುವಿಗೆ ತಲೆಯಲ್ಲಿ ಕೂದಲು ಹುಟ್ಟುವಾಗ ಗರ್ಭಿಣಿಗೆ ಎದೆಯಲ್ಲಿ ಉರಿಯುಂಟಾಗಿ ನವೆ ಬರುತ್ತೆಂದು ಸ್ತ್ರೀಯರು ಹೇಳುವ ವಾಡಿಕೆಯುಂಟು. ಆತ್ರೇಯರ ಮತ—ಗರ್ಭದಲ್ಲಿರುವ ಶಿಶುವಿಗೆ ತಲೆಕೂದಲು ಹುಟ್ಟಿದರೆ ಗರ್ಭಿಣಿಗೆ ಎದೆಯಲ್ಲಿ ಉರಿಯುಂಟಾಗಿ ಕಡಿತವಾಗುತ್ತದೆಂಬ ಕಾರಣವು ಸರಿಯಲ್ಲ. ಆದರೆ ಶಿಶುವು ದೊಡ್ಡದಾಗುತ್ತಾ ಗರ್ಭಿಣಿಯ ಎದೆಗೆ ಚಾಚಿ ಅಮುಕುವುದರಿಂದ ವಾತಪಿತ್ತಶ್ಲೇಷ್ಮಗಳು ಎದೆಯಲ್ಲಿ ಸೇರಿ (ಅರೆಪಾಕ) ವಿದಾಹ ಹೊಂದುತ್ತವೆ. ಎದೆಯಲ್ಲಿ ಕಡಿತ (ನವೆ) ಯುಂಟಾಗುತ್ತದೆ. ನವೆಯಿಂದಲೇ ಕಿಕ್ಕಿಸವು ಉತ್ಪತ್ತಿಯಾಗುತ್ತದೆ. ಗರ್ಭಿಣಿಯರಿಗೆ ತೊಡೆ. ಎದೆ, ಸ್ತನ, ಹೊಟ್ಟೆಗಳ ಮೇಲೆ ಗೆರೆ ಎಳೆದಂತೆ ಚರ್ಮದಲ್ಲಿ ಸುಕ್ಕುಸುಕ್ಕುಗಳುಂಟಾದರೆ

ಕಿಕ್ಕಿಸವೆಂದೂ, ಮತ್ತೆ ಕೆಲವರು ಚರ್ಮವು ಮುಳ್ಳುಮುಳ್ಳಾಗಿ ಸ್ಪರ್ಶಕ್ಕೆ ಸಿಕ್ಕಿದರೆ ಕಿಕ್ಕಿಸವೆಂದೂ ಕರೆಯುವುದು ವಾಡಿಕೆಯಾಗಿರುತ್ತೆ ॥೧೨॥

ಸಾಮಾನ್ಯಚಿಕಿತ್ಸೆ--ಮಧುರಗಣದಲ್ಲಿ ಹೇಳಿದ ಪದಾರ್ಥಗಳನ್ನೂ, ಬೆಣ್ಣೆಯನ್ನೂ ಸೇರಿಸಿ ತಯಾರಿಸಿದ ತುಪ್ಪವನ್ನು ಎಲಚಿಹಣ್ಣಿನ ಕಷಾಯದಲ್ಲಿ ಸೇರಿಸಿ ಗರ್ಭಿಣಿಗೆ ಕುಡಿಸಬೇಕು. ವಾತಹರಗಳಾದ ಮಧುರವಾದ ಆಹಾರಗಳನ್ನು ಸ್ನೇಹ, ಲವಣಗಳನ್ನು ಸೇರಿಸದೆ ಸ್ವಲ್ಪಪ್ರಮಾಣದಿಂದ ಊಟಮಾಡಿಸಿ ಸ್ವಲ್ಪವಾಗಿಯೇ ನೀರನ್ನು ಕುಡಿಸಬೇಕು ॥೧೩॥

ಹೊರಭಾಗದ ಚಿಕಿತ್ಸೆ--ಶ್ರೀಗಂಧ ಮತ್ತು ತಾವರೆದಂಟುಗಳ ಕಲ್ಕದಿಂದ ಆಕೆಯ ಸ್ತನಗಳನ್ನೂ ಹೊಟ್ಟೆಯನ್ನೂ ಲೇಪಿಸಬೇಕು. ಬಾಗೆತೊಗಟೆ, ಧಾತಕೀ ಹೂವು, ಸಾಸಿವೆ, ಹಿಪ್ಪೆಹೂವುಗಳ ಕಲ್ಕವನ್ನಾಗಲೀ ಅಥವಾ ಕೊಡಶಿಗೆ ತೊಗಟೆ, ಹಸಿಶುಂಠಿ, ಕೊಡಶಿಗೆಬೀಜ, ಕೊನ್ನಾರಿಗೆಡ್ಡೆ, ಅರಶಿನಗಳನ್ನು ಕಲ್ಕಮಾಡಿಯಾಗಲೀ ಲೇಪಮಾಡಬೇಕು. ಕಣಗಿಲೆ ಎಲೆಯಿಂದ ತಯಾರಿಸಿದ ತೈಲವನ್ನು ಜಜ್ಜಿ ಜಾಜಿ ಅತಿಮಧುರಗಳನ್ನು ಹಾಕಿ ಕಾಯಿಸಿದ ನೀರನ್ನು ಚುಮುಕಿಸುತ್ತಾ ಸ್ನಾನ ಮಾಡಿಸಬೇಕು; ನವೆಯುಂಟಾದರೆ ಉಗುರಿನಿಂದ ಕೆರೆಯಬಾರದು; ಕೆರೆದರೆ ಚರ್ಮದಮೇಲೆ ಗೀರುಗೀರಾಗಿ ಕಲೆ ನಿಂತು ವಿಕಾರವಾಗುತ್ತದೆ; ಸಹಿಸಲಾರದಷ್ಟು ನವೆಯುಂಟಾದರೆ ಉಜ್ಜಬೇಕು ಮತ್ತು ಮೃದುವಾಗಿ ಹಿಸುಕಬೇಕು ॥೧೪॥

ಮೂಲ—(ಸು।ನಿ।ಅ।೧)—(೭) ವಾತರೋಗಾಃ—ಅರ್ದಿತಮ್—

ಗರ್ಭಿಣೀ ಸೂತಿಕಾ ಬಾಲವೃದ್ಧಕ್ಷೀಣೇಷ್ವಸೃಕ್‌ಕ್ಷಯೇ ।
ಉಚ್ಚೈರ್ವ್ಯಾಹರತೋಽತ್ಯರ್ಥಂ ಖಾದತಃ ಕಠಿನಾನಿ ಚ ॥೧೫॥
ಹಸತೋ ಜೃಮ್ಭತೋ ವಾಽಪಿ ಭಾರಾದ್ವಿಷಮಶಾಯಿನಃ ।
ಶಿರೋನಾಸೌಷ್ಠಚಿಬುಕಲಲಾಟೇಕ್ಷಣಸನ್ಧಿಗಃ ॥೧೬॥
ಅರ್ದಯಿತ್ವಾಽನಿಲೋ ವಕ್ತ್ರಮರ್ದಿತಂ ಜನಯನ್ತಿ ಹಿ ।
ವಕ್ರೀಭವತಿ ವಕ್ತ್ರಾರ್ಧಂ ಗ್ರೀವಾ ಚಾಪ್ಯಪವರ್ತತೇ ॥೧೭॥
ಶಿರಶ್ಚಲತಿ ವಾಕ್ಸಂಗೋ ನೇತ್ರಾದೀನಾಂ ಚ ವೈಕೃತಮ್ ।
ಗ್ರೀವಾಚಿಬುಕದನ್ತಾನಾಂ ತಸ್ಮಿನ್ಪಾರ್ಶ್ವೇ ಚ ವೇದನಾ ॥೧೮॥
ಯಸ್ಯಾಗ್ರಜೋ ರೋಮಹರ್ಷೋ ವೇಪಥುರ್ನೇತ್ರಮಾವಿಲಮ್ ।
ವಾಯುರೂರ್ಧ್ವಂ ತ್ವಚಿ ಸ್ವಾಪಃ ತೋದೋ ಮನ್ಯಾಹನುಗ್ರಹಃ ॥೧೯॥
ತಮರ್ದಿತಮಿತಿ ಪ್ರಾಹುರೇತತ್ತನ್ತ್ರವಿಶಾರದಾಃ ।

ಆಕ್ಷೇಪಕಃ—

ಯದಾ ತು ಧಮನೀಸ್ಸರ್ವಾಃ ಕುಪಿತೋಽಭ್ಯೇತಿ ಮಾರುತಃ ॥೨೦॥
ತದಾ ಕ್ಷಿಪತ್ಯಾಶು ಮುಹುರ್ಮುಹುರ್ದೇಹಂ ಮುಹುಶ್ಚರಃ ।
ಮುಹುರ್ಮುಹುಸ್ತದಾಕ್ಷೇಪಾದಾಕ್ಷೇಪಕ ಇತಿ ಸ್ಮೃತಃ ॥೨೧॥

ಅಪತನ್ತ್ರಕಃ—

ವಾಯುರೂರ್ಧ್ವಂ ವ್ರಜೇತ್ಸ್ಥಾನಾತ್ಕುಪಿತೋ ಹೃದಯಂ ಶಿರಃ ।
ಶಙ್ಖೌ ಚ ಪೀಡಯತ್ಯಙ್ಗಾನ್ಯಾಕ್ಷಿಪೇನ್ನಮಯೇಚ್ಚ ಸಃ ॥೨೨॥

ನಿಮೀಲಿತಾಕ್ಷೋ ನಿಶ್ಚೇಷ್ಟಃ ಸ್ತಬ್ಧಾಕ್ಷೋ ವ್ಯಾಪಿ ಕೂಜತಿ।
ನಿಶ್ವಾಸಮಥವಾ ಕೃಚ್ಛ್ರಾದುಚ್ಛ್ವಸ್ಯಾನ್ನಷ್ಟಚೇತನಃ ॥೨೩॥
ಸ್ವಸ್ಥಃ ಸ್ಯಾದ್ಧೃದಯೇ ಮುಕ್ತೇ ಹ್ಯಾವೃತೇ ತು ಪ್ರಮುಹ್ಯತಿ।
ಕಫಾನ್ವಿತೇನ ವಾತೇನ ಜ್ಞೇಯ ಏಷೋಽಪತನ್ತ್ರಕಃ ॥೨೪॥
ಗರ್ಭಪಾತಸಮುತ್ಪನ್ನಃ ಶೋಣಿತಾತಿಸ್ರವೋತ್ಥಿತಃ।
ಅಭಿಘಾತನಿಮಿತ್ತಶ್ಚ ದುಶ್ಚಿಕಿತ್ಸ್ಯತಮೋ ಹಿ ಸಃ ॥೨೫॥

ದೀಪಿಕೆ--(ಸು।ನಿ।ಅ। ೧) ೭ ವಾತರೋಗಗಳು-ಅರ್ದಿತ (ಏಕಾಯಾಮ)--

ಗರ್ಭಿಣಿಯರು, ಬಾಲಕರು, ಮುದುಕರು ಇವರುಗಳಿಗೆ ಅತಿಯಾಗಿ ರಕ್ತಸ್ರಾವವಾಗೋಣ, ಗಟ್ಟಿಯಾಗಿ ಕಿರುಚಿಕೊಳ್ಳುವುದು, ಗಟ್ಟಿಪದಾರ್ಥಗಳನ್ನು ಕಡಿಯುವುದು (ಅಗಿಯುವುದು), ಗಟ್ಟಿಯಾಗಿ ನಗುವುದು, ಆಕಳಿಸುವುದು, ಭಾರ ಹೊರುವುದು, ಹಳ್ಳತಿಟ್ಟಾದ ಭೂಮಿಯಮೇಲೆ ಮಲಗುವುದು, ಇವೇ ಮೊದಲಾದ ಕಾರಣಗಳಿಂದ ವಾತವು ಪ್ರಕುಪಿತವಾಗಿ ತಲೆ, ಮೂಗು, ತುಟಿ, ಗಲ್ಲ, ಹಣೆ, ಕಣ್ಣು ಕುಣಿಕೆಗಳಿಗೆ ವ್ಯಾಪಿಸಿ ಮುಖವನ್ನು ಪೀಡಿಸಿ ಅರ್ಧಮುಖವನ್ನೂ, ಕತ್ತನ್ನೂ ಒಂದು ಪಾರ್ಶ್ವಕ್ಕೆ ತಿರುಗಿಸಿ ಸೊಟ್ಟುಮಾಡುತ್ತದೆ. ತಲೆನಡುಕ, ತೊದಲು ಮಾತು, ಕಣ್ಣು, ಹುಬ್ಬು, ಕೆನ್ನೆಗಳು ವಿಕಾರವಾಗುವುದು, ಕತ್ತು, ಗಲ್ಲ, ಹಲ್ಲುಗಳು ತಿರುಗಿದ ಕಡೆಯಲ್ಲಿ ನೋವಿರುವುದು, ರೋಮಗಳು ಮೇಲಕ್ಕೆ ನಿಲ್ಲುವುದು, ಮೈನಡುಕ, ಕಣ್ಣುಗಳಲ್ಲಿ ಜಿಬರುಕಟ್ಟುವುದು, ಮೇಲುಬ್ಬಸ, ಚರ್ಮದಲ್ಲಿ ಸ್ಪರ್ಶಜ್ಞಾನ ನಷ್ಟವಾಗುವುದು, ಮೈಚುಚ್ಚುವುದು, ಹೆಕ್ಕತ್ತು ಮತ್ತು ದವಡೆಗಳು ಹಿಡಿದುಕೊಂಡು ಅಲ್ಲಾಡಿಸಲು ಆಗದಿರುವುದು, ಈ ಲಕ್ಷಣಗಳಿದ್ದರೆ ಅರ್ದಿತ (ಏಕಾಯಾಮ) ರೋಗವೆನ್ನುತ್ತಾರೆ.

ಆಕ್ಷೇಪಕ—(ಅದರುವಾಯು)—ಪ್ರಕುಪಿತವಾದ ವಾತವು ಧಮನಿಗಳಲ್ಲಿ ಸೇರಿ ಶರೀರದ ಎಲ್ಲಾ ಭಾಗಗಳಲ್ಲೂ ಸಂಚರಿಸುತ್ತಾ ಆಗಾಗ್ಯೆ ದೇಹವನ್ನು ಮೇಲಕ್ಕೆ ಎತ್ತಿ ಎತ್ತಿ ಕುಕ್ಕುತ್ತದೆಯಾಗಿ ಆಕ್ಷೇಪಕವೆಂದು ಹೆಸರು.

ಅಪತಾನಕ-- (ದಣ್ಡಕವಾತ) --ಪ್ರಕುಪಿತವಾಯುವು ಕಫಮಿಶ್ರವಾಗಿ ಧಮನಿಗಳನ್ನೆಲ್ಲಾ ಆಕ್ರಮಿಸಿ ಆಗಾಗ್ಯೆ ಬೀಳಿಸುತ್ತಾ ಮಧ್ಯೆ ಕೈಕಾಲುಗಳನ್ನು ನಿಗರಿಸಿ ದೊಣ್ಣೆಯಂತೆ ಸಿಲ್ಲಿಸಿದರೆ "ದಣ್ಡಾಪತಾನಕ"ವೆಂದು ಹೆಸರು. ಈ ವ್ಯಾಧಿಯು ಗರ್ಭಪಾತದಿಂದಾಗಲೀ, ಅತಿಯಾದ ರಕ್ತಸ್ರಾವದಿಂದಾಗಲೀ ಅಥವಾ ಬಲವಾಗಿ ಪೆಟ್ಟುಬೀಳುವುದರಿಂದಾಗಲೀ ಉಂಟಾದರೆ ಚಿಕಿತ್ಸೆಯಿಂದ ಗುಣಪಡಿಸಲಾಗುವುದಿಲ್ಲ.

ಅಪತನ್ತ್ರಕ--(ಸೂತಿಕಾವಾಯು--ನಡುಕವಾಯು) — ಪ್ರಕುಪಿತವಾದ ವಾಯುವು ಸ್ವಸ್ಥಾನವನ್ನು ಬಿಟ್ಟು ಮೇಲ್ಮುಖವಾಗಿ ನುಗ್ಗಿ ಹೃದಯ, ತಲೆ, ಕೆನ್ನೆಗಳನ್ನು ಹಿಂಡಿ ಅವಯವಗಳನ್ನು ಮೇಲಕ್ಕೆ ಎತ್ತೆತ್ತಿ ಬಗ್ಗಿಸುತ್ತಾ ಕಣ್ಣುಗಳನ್ನು ಮುಚ್ಚಿಸಿ ಚೇಷ್ಟೆಯಿಲ್ಲದಂತೆಯೂ ಇನ್ದ್ರಿಯಗಳನ್ನು ಬಿಗಿದು ಹಿಡಿದು "ಕೂ" ಎಂದು ಶಬ್ದವನ್ನುಂಟುಮಾಡುತ್ತಲೂ ಜ್ಞಾನವಿಲ್ಲದೆಯೂ ಬಲುಕಷ್ಟದಿಂದ

ಶ್ವಾಸೋಚ್ಛ್ವಾಸವನ್ನು ಮಾಡಿಸುತ್ತದೆ. ಪ್ರಕುಪಿತ ವಾತವು ಹೃದಯವನ್ನು ಬಿಟ್ಟಾಗ ರೋಗಿಗೆ ಸುಖವಾಗುತ್ತದೆ; ಹೃದಯವನ್ನಾವರಿಸಿದರೆ ಜ್ಞಾನತಪ್ಪುತ್ತದೆ. ಈ ರೀತಿ ಕೆಡಕುಮಾಡುವ ಕಫಮಿಶ್ರಿತವಾದ ವಾತವನ್ನು ಅಪತನ್ತ್ರಕವೆನ್ನುತ್ತಾರೆ. ಗರ್ಭಪಾತ, ಅತಿರಕ್ತಸ್ರಾವ, ಬಲವಾಗಿ ಪೆಟ್ಟುಬೀಳೋಣ ಈ ಕಾರಣಗಳಿಂದುಂಟಾದ ಅಪತನ್ತ್ರಕ ವಾತರೋಗವು ವಾಸಿಯಾಗುವುದಿಲ್ಲ.

ಮೂಲ—(ಅ|ಹೃ|ಚಿ|ಅ| ೨೧) ತೇಷಾಂ ಚಿಕಿತ್ಸಾ—

ತತ್ರ ಪ್ರಾಗೇವ ಸುಸ್ನಿಗ್ಧಸ್ವಿನ್ನಾಂಗೀಂ ತೀಕ್ಷ್ಣನಾವನವಮ್।
ಸ್ರೋತೋವಿಶುದ್ಧಯೇ ಯುಂಜ್ಯಾದಚ್ಛಪಾನಂ ತತೋ ಘೃತಮ್ ॥೨೬॥
ವಿದಾರ್ಯಾದಿಗಣಕ್ವಾಥದಧಿಕ್ಷೀರರಸೈಃ ಶೃತಮ್।
ನಾತಿಮಾತ್ರಂ ತಥಾ ವಾಯುರ್ವ್ಯಾಪ್ನೋತಿ ಸಹಸೈವ ವಾ ॥೨೭॥
ಕುಳತ್ಥಯವಕೋಲಾನಿ ಭದ್ರದಾರ್ವ್ವಾದಿಕಂ ಗಣಮ್।
ನಿಃಕ್ವಾಥ್ಯಾನೂಪಮಾಂಸಂ ಚ ತೇನಾಮ್ಲೈಃ ಪಯಸಾಪಿ ವಾ ॥೨೮॥
ಸ್ವಾದುಸ್ಕನ್ಧಪ್ರತೀವಾಪಂ ಮಹಾಸ್ನೇಹಂ ವಿಪಾಚಯೇತ್।
ಸೇಕಾಭ್ಯಙ್ಗಾವಗಾಹಾನ್ನಪಾನನಸ್ಯಾನುವಾಸನೈಃ ॥೨೯॥
ಸಹನ್ತಿ ವಾತಂ ತೇ ತೇ ಚ ಸ್ನೇಹಸ್ವೇದಾಃ ಸುಯೋಜಿತಾಃ।
ವೇಗಾನ್ತರೇ ತು ಮೂರ್ಧಾನಮಸಕೃಚ್ಚಾಸ್ಯ ರೇಚಯೇತ್ ॥೩೦॥
ಅವಪೀಡೈಃ ಪ್ರಧಮನೈಸ್ತೀಕ್ಷ್ಣೈಃ ಶ್ಲೇಷ್ಮನಿಬರ್ಹಣೈಃ।
ಶ್ವಸನಾಸು ವಿಮುಕ್ತಾಸು ತಥಾ ಸಂಜ್ಞಾಂ ಸ ವಿನ್ದತಿ ॥೩೧॥
ಸೌವರ್ಚಲಾಭಯಾವ್ಯೋಷಸಿದ್ಧಂ ಸರ್ಪಿಶ್ಚಲೇಽಧಿಕೇ।
ಚಿಕಿತ್ಸಿತಮಿದಂ ಕುರ್ಯಾಚ್ಛುದ್ಧವಾತಾಪತಾನಕೇ ॥೩೨॥
ಸಂಸೃಷ್ಟದೋಷೇ ಸಂಸೃಷ್ಟಂ ತ್ರಿದೋಷೇ ಸಾನ್ನಿಪಾತಿಕಮ್।

ದೀಪಿಕೆ—(ಅ|ಹೃ|ಚಿ|ಅ| ೨೧) ಇವುಗಳಿಗೆ ಚಿಕಿತ್ಸೆ:—

ಈ ವಾತರೋಗಗಳಿಂದ ಪೀಡಿತನಾದ ರೋಗಿಗೆ ಮೊದಲು ಸ್ನೇಹ ಸ್ವೇದ ಕರ್ಮಗಳನ್ನು ಮಾಡಿಸಿ ಚುರುಕಾದ ನಸ್ಯಕರ್ಮವನ್ನು ಮಾಡಿಸಬೇಕು. ಸ್ರೋತಸ್ಸುಗಳನ್ನು ಶೋಧಿಸುವುದಕ್ಕಾಗಿ ಅಚ್ಛಸ್ನೇಹಪಾನವನ್ನು ಮಾಡಿಸಬೇಕು ಅಥವಾ ವಿದಾರ್ಯಾದಿಗಣದಲ್ಲಿ ಹೇಳಿರುವ ದ್ರವ್ಯಗಳ ಕಷಾಯ, ಮೊಸರು, ಹಾಲು, ಮಾಂಸರಸ ಇವುಗಳನ್ನು ಸೇರಿಸಿ ತಯಾರಿಸಿದ ಘೃತವನ್ನಾಗಲೀ ಕುಡಿಸಬೇಕು. ಇದರಿಂದ ವಾತವು ಅಧಿಕಪ್ರಮಾಣದಿಂದ ವ್ಯಾಪಿಸುವುದಿಲ್ಲ. ಹುರುಳಿ, ಯವೆ, ಎಲಚಿಹಣ್ಣು, ಭದ್ರದಾರುಗಣದಲ್ಲಿರುವ ದ್ರವ್ಯಗಳು ಆನೂಪಮಾಂಸ ಇವುಗಳನ್ನು ಸೇರಿಸಿ ತಯಾರಿಸಿದ ಕಷಾಯದೊಡನೆ ಆಮ್ಲವರ್ಗದ ದ್ರವ್ಯಗಳೂ, ಹಾಲು, ಮಧುರಗಣ (ಕಾಕೋಳ್ಯಾದಿ) ದ್ರವ್ಯ ಮಹಾಸ್ನೇಹ ಇವುಗಳನ್ನು ಸೇರಿಸಿ ತಯಾರಿಸಿದ ಸ್ನೇಹವನ್ನು ಸೇಕ, ಅಭ್ಯಙ್ಗ, ಅವಗಾಹ, ಅನ್ನ, ಪಾನ, ನಸ್ಯ, ಅನುವಾಸನ ರೂಪದಿಂದ ಶರೀರಕ್ಕೆ ಸರಿಯಾಗಿ ಉಪಯೋಗಿಸಿದರೆ ಮೇಲೆ ವಿವರಿಸಿದ ವಾತರೋಗಗಳೆಲ್ಲಾ ಪರಿಹಾರವಾಗುತ್ತವೆ. ಅನೇಕ ಸಂದರ್ಭಗಳಲ್ಲಿ ವೇಗಗಳ ಮಧ್ಯೆ ಶ್ಲೇಷ್ಮಹರಗಳಾದ ಅವಪೀಡ, ಪ್ರಧಮನಗಳೆಂಬ ತೀಕ್ಷ್ಣನಸ್ಯ ಶಿರೋವಿರೇಚನಗಳನ್ನು ಮಾಡಿಸಬೇಕು.

ಇದರಿಂದ ಶ್ವಾಸೋಚ್ಛ್ವಾಸಗಳು ಸುಖವಾಗಿ ಪ್ರವರ್ತಿಸಿ ಎಚ್ಚರವುಂಟಾಗುತ್ತದೆ. ವಾತಾಧಿಕ್ಯದಲ್ಲಿ ಸೌವರ್ಚಲವಣ, ಅಣಿಲೆಕಾಯಿ, ತ್ರಿಕಟುಗಳನ್ನು ಸೇರಿಸಿ ತಯಾರಿಸಿದ ಘೃತವನ್ನು ಕುಡಿಸಬೇಕು. ಈ ರೀತಿಯ ಚಿಕಿತ್ಸೆಯನ್ನು ಶುದ್ಧವಾತಾಪತಾನಕದಲ್ಲಿ ಮಾಡಬೇಕು. ಸಂಸರ್ಗಸನ್ನಿಪಾತಗಳಲ್ಲಿ ಸಂಸರ್ಗ ದೋಷ, ಮತ್ತು ತ್ರಿದೋಷಹರಗಳಾದ ಚಿಕಿತ್ಸೆಗಳನ್ನು ನಡೆಸಬೇಕು ॥೨೬–೩೨॥

ಮೂಲ—ಹಾರೀತೇ—೮ ಮೂತ್ರಪಿಣ್ಡವಿಕಾರಾಃ—ಚಿಕಿತ್ಸಾ—

ತ್ರಪುಸೈರ್ವಾರುಬೀಜಾನಿ ಮೂತ್ರಬನ್ಧೇ ತು ಮಾಗಧೀ ।
ಶಿಲಾಭೇದಂ ಸಿತಾಢ್ಯಂ ಚ ಪಿಬೇತ್ತಣ್ಡುಲವಾರಿಣಾ ॥೩೪॥
ಮೂತ್ರರೋಧಂ ಗುರ್ವಿಣೀನಾಂ ನಾಶಯನ್ತ್ಯಾಶು ನಿಶ್ಚಿತಮ್ ।

(ಸು।ಚಿ।ಅ। ೧೦)—

ದರ್ಭಾದಿಸಿದ್ಧಂ ಪಯಃ ಶರ್ಕರಾಕ್ಷೌದ್ರಯುಕ್ತಂ ಮೂತ್ರರೋಧೇ ಪಾಯಯೇತ್ ॥೩೫॥

ದೀಪಿಕೆ—ವೃಕ್ಕರೋಗಗಳ ಪ್ರತಿಕ್ರಿಯೆ—

ಹಾರೀತ ಸಂ।—ಗರ್ಭಿಣಿಯರ ಮೂತ್ರರೋಧದಲ್ಲಿ ಮಿಣಿಕೆ, ಸೌತೆಬೀಜಗಳು, ಹಿಪ್ಪಲಿ, ಹಿಟ್ಟುಳಿಕಸಮೂಲಗಳನ್ನು ಅಕ್ಕಿತೊಳೆದ ನೀರಿನಲ್ಲಿ ಅರೆದು ಕದರಿ ಸಕ್ಕರೆಯನ್ನು ಮಿಶ್ರಮಾಡಿ ಕುಡಿಸಬೇಕು ॥೩೪॥

(ಸು।ಚಿ।ಅ। ೧೦)—

ದರ್ಭೆ ಮುಂತಾದ ತೃಣಪಂಚಮೂಲಗಳನ್ನು ಸೇರಿಸಿ ತಯಾರಿಸಿದ ಹಾಲಿಗೆ ಸಕ್ಕರೆ ಜೇನುತುಪ್ಪಗಳನ್ನು ಸೇರಿಸಿ ಪಾನಮಾಡಿಸಬೇಕು ॥೩೫॥

ಮೂಲ—ಶ್ವಯಥುಃ—ನಿದಾನಮ್—

(ಚ।ನಿ।)—

ಶುದ್ಧ್ಯಾಮಯಾಭಕ್ತಕೃಶಾಬಲಾನಾಂ ಕ್ಷಾರಾಮ್ಲತೀಕ್ಷ್ಣೋಷ್ಣಗುರೂಪಸೇವಾ ।
ದಧ್ಯಾಮಮೃಚ್ಛಾಕವಿರೋಧಿದುಷ್ಟಗರೋಪಸೃಷ್ಟಾನ್ನನಿಷೇವಣಂ ಚ ॥೩೬॥
ಅರ್ಶಾಂಸ್ಯಚೇಷ್ಟಾ ನ ಚ ದೇಹಶುದ್ಧಿರ್ಮರ್ಮೋಪಘಾತೋ ವಿಷಮಾ ಪ್ರಸೂತಿಃ ।
ಮಿಥ್ಯೋಪಚಾರಃ ಪ್ರತಿಕರ್ಮಣಾಂ ಚ ನಿಜಸ್ಯ ಹೇತುಃ ಶ್ವಯಥೋಃ ಪ್ರದಿಷ್ಟಃ ॥೩೭॥

ಸಂಪ್ರಾಪ್ತಿಃ—(ಅ।ಹೃ।)—

ಪಿತ್ತರಕ್ತಕಫಾನ್ ವಾಯುರ್ದುಷ್ಟೋ ದುಷ್ಟಾನ್ ಬಹಿಸ್ಸಿರಾಃ ।
ನೀತ್ವಾ ರುದ್ಧಗತಿಸ್ತೈರ್ಹಿ ಕುರ್ಯಾತ್ ತ್ವಙ್ಮಾಂಸಸಂಶ್ರಯಮ್ ॥೩೮॥
ಉತ್ಸೇಧಂ ಸಂಹತಂ ಶೋಫಂ ತಮಾಹುರ್ನಿಚಯಾದತಃ ।
ಸ್ರವೇನ್ನಾಸೃಕ್ಚಿರಾತ್ಪಿಚ್ಛಂ ಕುಶಶಸ್ತ್ರಾದಿ ವಿಕ್ಷತಃ ॥೩೯॥

ಲಕ್ಷಣಮ್ (ಚ।ಚಿ।)—

ಸ ಗೌರವಂ ಸ್ಯಾದನವಸ್ಥಿತತ್ವಂ ಸೋತ್ಸೇಧಮೂಷ್ಮಾಥ ಸಿರಾತನುತ್ವಮ್ ।
ಸಲೋಮಹರ್ಷಶ್ಚ ವಿವರ್ಣತಾ ಚ ಸಾಮಾನ್ಯಲಿಙ್ಗಂ ಶ್ವಯಥೋಃ ಪ್ರದಿಷ್ಟಮ್ ॥೪೦॥

ಅಸಾಧ್ಯಲಕ್ಷಣಮ್—(ಚ।ಚಿ।)—

ಯತ್ತು ಪಾದಾಭಿನಿರ್ವೃತ್ತಶ್ಶೋಫಃ ಸರ್ವಾಙ್ಗಗೋ ಭವೇತ್।
ಜನ್ತೋಃ ಸ ಚ ಸುಕಷ್ಟಃ ಸ್ಯಾತ್ಪ್ರಸೃತೋ ಸ್ತ್ರೀಮುಖಾಚ್ಚ ಯಃ ॥೪೧॥
ಯಶ್ಚಾಪಿ ಗುಹ್ಯಪ್ರಭವಃ ಸ್ತ್ರಿಯೋ ವಾ ಪುರುಷಸ್ಯ ವಾ।
ಸ ಚ ಕಷ್ಟತಮೋ ಜ್ಞೇಯೋ ಯಸ್ಯ ಚ ಸ್ಯುರುಪದ್ರವಾಃ ॥೪೨॥

ಸಾಮಾನ್ಯಚಿಕಿತ್ಸಾ—(ಚ।ಚಿ।)—

ಅಥಾಮಜಂ ಲಙ್ಘನಪಾಚನಕ್ರಮೈರ್ವಿಶೋಧನೈರುಲ್ಬಣದೋಷಮಾದಿತಃ।
ಶಿರೋಗತಂ ಶೀರ್ಷವಿರೇಚನೈರಧೋ ವಿರೇಚನೈರೂರ್ಧ್ವಹರೈಸ್ತಥೋರ್ಧ್ವಜಮ್ ॥೪೩॥
ಉಪಾಚರೇತ್ಸ್ನೇಹಗತಂ ವಿರೂಕ್ಷಣೈಃ ಪ್ರಕಲ್ಪಯೇತ್ಸ್ನೇಹವಿಧಿಂ ಚ ರೂಕ್ಷಜೇ।
ವಿಬದ್ಧವಿಟ್ಕೇಽನಿಲಜೇ ನಿರೂಹಣಂ ಘೃತಸ್ತು ಪಿತ್ತಾನಿಲಜೇ ಸತಿಕ್ತಕಮ್ ॥೪೪॥
ಪಯಶ್ಚ ಮೂರ್ಛಾರತಿದಾಹತರ್ಷಿತೇ ವಿಶೋಧನೀಯೇ ತು ಸಮೂತ್ರಮಿಷ್ಯತೇ।
ಕಫೋತ್ಥಿತಂ ಕ್ಷಾರಕಟೂಷ್ಣಸಂಯುತೈಃ ಸಮೂತ್ರತಕ್ರಾಸವಯುಕ್ತಿಭಿರ್ಜಯೇತ್ ॥೪೫॥

ದೀಪಿಕೆ (ಚ।ಚಿ)—ಶೋಫರೋಗ—ಕಾರಣ—

ವಮನವಿರೇಚನಗಳಿಂದಲೂ, ರೋಗದಿಂದಲೂ, ಆಹಾರವಿಲ್ಲದೆಯೂ ಕೃಶರಾಗಿ ದುರ್ಬಲರಾದವರು ಕ್ಷಾರ, ಹುಳಿ, ಚುರುಕಾದ, ಉಷ್ಣಕರವಾದ ಮತ್ತು ಗುರುವಾದ ಆಹಾರವನ್ನು ಪಯೋಗಿಸುವುದೂ; ಮೊಸರು, ಹಸಿಯುವಾದ ಪದಾರ್ಥಗಳು, ಮಣ್ಣು, ಸೊಪ್ಪು, ವಿರುದ್ಧವಾದ, ದುಷ್ಟವಾದ ಮತ್ತು ವಿಷಮಿಶ್ರವಾದ ಆಹಾರಗಳನ್ನು ತಿನ್ನುವುದೂ, ಮೂಲವ್ಯಾಧಿಯಿಂದ ನರಳುತ್ತಲೂ, ವ್ಯಾಯಾಮ ಮಾಡದೆಯೂ, ದೇಹಶೋಧನೆಗಾಗಿ ವಮನ ವಿರೇಚನಾದಿಗಳನ್ನು ಸೇವನೆ ಮಾಡದೆಯೂ ಇರೋಣವು ; ಮರ್ಮಸ್ಥಾನಗಳಲ್ಲಿ ಪೆಟ್ಟು ಬೀಳುವುದು, ವಿಷಮ ಪ್ರಸವ, ಶೋಧನೌಷಧಗಳನ್ನು ಸೇವಿಸಿದಮೇಲೆ ಸರಿಯಾದ ಪಥ್ಯಕ್ರಮಗಳನ್ನು ಆಚರಿಸದಿರುವುದೂ ಇವು ಶೋಫೆಯ ಉತ್ಪತ್ತಿಗೆ ಕಾರಣಗಳು.

(ಅ।ಹೃ।)—ರೋಗದ ಪ್ರಸಾರ—ಪ್ರಕೋಪಗೊಂಡ ವಾತವು ದುಷ್ಟವಾದ ಪಿತ್ತರಕ್ತಕಫಗಳನ್ನು ಸಿರೆಗಳಿಂದ ಹೊರಕ್ಕೆ ತಳ್ಳಿ ಅವುಗಳಿಂದ ಸುತ್ತುವರಿಯಲ್ಪಟ್ಟು ಚರ್ಮವನ್ನೂ ಮಾಂಸಖಣ್ಡಗಳನ್ನೂ ಉಬ್ಬಿಸುವ ಕಾರಣ ಈ ಶರೀರಭಾಗವು ಇತರ ಭಾಗಗಳಿಗಿಂತ ಉಬ್ಬುತ್ತದೆಯಾಗಿ ಶೋಥ (ಶೋಫೆ) ಎಂದು ಹೆಸರು.

ಲಕ್ಷಣ—ಹಾಗೆ ಉಬ್ಬಿದ ಜಾಗದಲ್ಲಿ ಚೂರಿ, ದರ್ಭೆಗಳಿಂದಲೂ ಮುಳ್ಳಿನಿಂದಲೂ ಚುಚ್ಚಿ ಗೀರಿದರೆ ರಕ್ತವು ಹೊರಕ್ಕೆ ಸುರಿಯುವುದಿಲ್ಲ. ಆ ಭಾಗವು ಭಾರವಾಗಿರುತ್ತದೆ. ಬೆರಳಿನಿಂದ ಅದುಮಿದರೆ ಹಳ್ಳವಾಗಿ ಬೆರಳನ್ನೆತ್ತಿದರೆ ಹಳ್ಳವು ತುಂಬಿಕೊಳ್ಳುತ್ತದೆ. ಒಳಗಡೆ ಸಿರೆಗಳು ಸೇರಿರುವ ಕಾರಣ ಶೋಥವು

ಕಡಿಮೆಯಾಗಿಯೂ ಶಾಖವಾಗಿಯೂ ಇರುತ್ತದೆ; ಊದಿನಮೇಲೆ ರೋಮ ಗಳೆದ್ದು ಬಣ್ಣ ವ್ಯತ್ಯಾಸ ಕಂಡುಬರುತ್ತದೆ.

ಅಸಾಧ್ಯವಿಚಾರ--ಪುರುಷರಿಗೆ ಕಾಲಿನಲ್ಲಿ ಊದು ಕಾಣಿಸಿ ಅನಂತರ ಶರೀರದ ಎಲ್ಲಾ ಭಾಗಗಳನ್ನು ಆವರಿಸಿದರೂ ಸ್ತ್ರೀಯರಿಗೆ ಮುಖದಲ್ಲಿ ಮೊದಲು ಊದು ಕಾಣಿಸಿಕೊಂಡು ಅನಂತರ ಕ್ರಮವಾಗಿ ಕಾಲಿನವರೆಗೆ ಊದಿದರೂ ಸ್ತ್ರೀಪುರುಷರಿಬ್ಬರಿಗೂ ಗುಹ್ಯಪ್ರದೇಶದಲ್ಲಿ ಶೋಭೆಯುಂಟಾದರೂ ಉಪದ್ರವಗಳಿಂದ ಕೂಡಿಕೊಂಡು ತೊಂದರೆಪಡಿಸುತ್ತಿದ್ದರೂ ಗುಣವಾಗುವುದು ತುಂಬಾ ಕಷ್ಟವಾಗುತ್ತದೆಂದು ತಿಳಿಯಬೇಕು.

ಸಾಮಾನ್ಯ ಚಿಕಿತ್ಸೆ—ಆಮದೋಷದಿಂದ ಶೋಭೆಯುಂಟಾದರೆ ಲಙ್ಘನವನ್ನೂ, ಪಾಚನೌಷಧಗಳನ್ನೂ, ದೋಷಾಧಿಕವಾಗಿದ್ದರೆ ಶೋಧನೌಷಧಗಳನ್ನೂ ತಲೆ ಊದಿದ್ದರೆ ಶಿರೋವಿರೇಚನೌಷಧವನ್ನೂ ಹೊಕ್ಕಳು ಕೆಳಗೆ ಊದಿದ್ದರೆ ವಿರೇಚನೌಷಧಿಗಳನ್ನೂ ಮೇಲೆ ಊದಿದ್ದರೆ ಊರ್ಧ್ವದೋಷಹರಗಳಾದ ವಮನೌಷಧಗಳನ್ನೂ ಸ್ನೇಹಾಧಿಕ್ಯದಿಂದುಂಟಾಗಿದ್ದರೆ ರೂಕ್ಷಣಕ್ರಿಯೆಯನ್ನೂ ರೂಕ್ಷ ಪದಾರ್ಥಗಳ ಸೇವನೆಯಿಂದ ಉಂಟಾಗಿದ್ದರೆ ಸ್ನೇಹವಿಧಿಯನ್ನೂ ಮಲಬಂಧದಿಂದ ವಾತಕೋಪವಾಗಿ ಶೋಭೆಯುಂಟಾಗಿದ್ದರೆ ನಿರೂಹವಸ್ತಿಕ್ರಮದಿಂದಲೂ, ವಾತಪಿತ್ತಪ್ರಕೋಪದಿಂದುಂಟಾಗಿದ್ದರೆ ತಿಕ್ತದ್ರವ್ಯಗಳೊಡನೆ ತುಪ್ಪವನ್ನು ಸೇರಿಸಿ ಕುಡಿಸುವುದರಿಂದಲೂ, ಮೂರ್ಛೆ, ಮೈಯುರಿ, ದುಃಖಗಳಿದ್ದರೆ ಹಾಲನ್ನು ಕುಡಿಸುವುದರಿಂದಲೂ, ವಿರೇಚನ ಮಾಡಿಸಬೇಕಾದಾಗ ಗೋಮೂತ್ರದೊಡನೆ ಹಾಲನ್ನು ಸೇರಿಸಿ ಕುಡಿಸುವುದರಿಂದಲೂ, ಕಫೋಲ್ಬಣದಿಂದುಂಟಾಗಿದ್ದರೆ ಕ್ಷಾರ ಕಟು ಉಷ್ಣಗಳಾದ ಮಜ್ಜಿಗೆ, ಗೋಮೂತ್ರ, ಆಸವಗಳನ್ನು ಪಾನಮಾಡಿಸುವುದರಿಂದಲೂ ಶೋಭೆಯನ್ನು ಪರಿಹಾರ ಮಾಡಬೇಕು.

ನವಮೋಽಧ್ಯಾಯಃ

ಗರ್ಭವೃದ್ಧಿಪ್ರಪೀಡನದೋಷಾಃ

೧. (ಚ।ಶಾ।)—ಉದಾವರ್ತಃ—

ಯಸ್ಯಾಃ ಪುನರುದಾವರ್ತವಿಬನ್ಧಃ ಸ್ಯಾದಷ್ಟಮೇ ಮಾಸೇ ನ ಚಾನುವಾಸನಸಾಧ್ಯಂ ಮನ್ಯೇತ ತತಸ್ತಸ್ಯಾಸ್ತದ್ವಿಕಾರಪ್ರಶಮನಮುಪಕಲ್ಪಯೇನ್ನಿರೂಹಮ್। ಉದಾವರ್ತೋ ಹ್ಯುಪೇಕ್ಷಿತಃ ಸಹಸಾ ಸಗರ್ಭಾಂ ಗರ್ಭಿಣೀಂ ಗರ್ಭಮಥವಾ ನಿಪಾತಯೇತ್ ॥೧॥

(ಸು।ನಿ।)—

ಅಧಶ್ಚೋರ್ಧ್ವಂ ಚ ಭಾವಾನಾಂ ಪ್ರವೃತ್ತಾನಾಂ ಸ್ವಭಾವತಃ।
ನ ವೇಗಾನ್ಧಾರಯೇತ್ಪ್ರಾಜ್ಞೋ ವಾತಾದೀನಾಂ ಜಿಜೀವಿಷುಃ ॥೨॥

ವಾತವಿಣ್ಮೂತ್ರಜೃಮ್ಭಾಶ್ರುಕ್ಷವೋದ್ಗಾರವಮೀನ್ದ್ರಿಯೈಃ ।
ವ್ಯಾಹನ್ಯಮಾನೈರುದಿತೈರುದಾವರ್ತೋ ನಿರುಚ್ಯತೇ ।
ಕ್ಷುತ್ತೃಷ್ಣಾಕಾಸನಿದ್ರಾಣಾಂ ಗ್ರಹಾಚ್ಚಾಪಥ್ಯಭೋಜನಾತ್ ॥೩॥

(ಚ।ಚಿ।) ಚಿಕಿತ್ಸಾ—

ತತ್ರ ವೀರಣಶಾಲಿಕುಶಕಾಶೇಕ್ಷುವಾಲಿಕಾವೇತಸಪರಿವ್ಯಾಧಮೂಲಾನಾಂ ಭೂತೀಕಾನನ್ತಕಾಶ್ಮರ್ಯಪರೂಷಕಮಧುಕಮೃದ್ವೀಕಾನಾಂ ಚ ಪಯಸಾರ್ಧೋದಕೇನೋದ್ಗಮಯ್ಯ ರಸಂ ಪ್ರಿಯಾಲವಿಭೀತಕಮಜ್ಜತಿಲಕಲ್ಪಸಂಪ್ರಯುಕ್ತಮೀಷಲ್ಲವಣಮನುಷ್ಣಂ ನಿರೂಹಂ ದದ್ಯಾತ್ । ವ್ಯಪಗತವಿಬನ್ಧಾಂ ಚೈನಾಂ ಸುಖಸಲಿಲಪರಿಷಿಕ್ತಾಙ್ಗೀಂ ಸ್ಥೈರ್ಯಕರಮವಿದಾಹಿನಮಾಹಾರಂ ಭುಕ್ತವತೀಂ ಸಾಯಂ ಮಧುಕಸಿದ್ಧೇನ ತೈಲೇನಾನುವಾಸಯೇತ್ । ನ್ಯುಬ್ಜಾಂ ಚೈನಾಮಾಸ್ಥಾಪನಾನುವಾಸನಾಭ್ಯಾಮುಪಚರೇತ್ ॥೪॥

(ಸು।ಶಾ।ಅ।೧೦)—

ಸರ್ವೇಷ್ವೇತೇಷು ವಿಧಿವದುದಾವರ್ತೇಷು ಕೃತ್ಸ್ನಶಃ ।
ವಾಯೋಃ ಕ್ರಿಯಾ ವಿಧಾತವ್ಯಾಃ ಸ್ವಮಾರ್ಗಪ್ರತಿಪತ್ತಯೇ ॥೫॥

(ಅ।ಹೃ।)—

ಉದಾವರ್ತನ್ತು ಗರ್ಭಿಣ್ಯಾಃ ಸ್ನೇಹೈರಾಶುತರಾಂ ಜಯೇತ್ ।
ಯೋಗ್ಯೈಶ್ಚ ಬಸ್ತಿಭಿರ್ಹನ್ಯಾತ್ ಸ ಗರ್ಭಂ ಸ ಹಿ ಗರ್ಭಿಣೀಮ್ ॥೬॥

೯ನೆಯ ಅಧ್ಯಾಯ

ಗರ್ಭವೃದ್ಧಿ ನಿಮಿತ್ತದಿಂದುಂಟಾಗುವ ತೊಂದರೆಗಳು

೧. ಮಲಬಂಧ—ಗರ್ಭಿಣಿಗೆ ಎಂಟನೆಯ ತಿಂಗಳಲ್ಲಿ ಮಲಸಂಗ ಉಂಟಾದರೆ ಸ್ನೇಹಬಸ್ತಿಯಿಂದ ಅದನ್ನು ಪರಿಹರಿಸಲಾಗದಿದ್ದರೆ ನಿರೂಹಬಸ್ತಿಯನ್ನು ಪ್ರಯೋಗಮಾಡಬೇಕು. ಏಕೆಂದರೆ ಮಲಸಂಗವನ್ನು ನಿವಾರಿಸದೆ ಉಪೇಕ್ಷಿಸಿದರೆ ಗರ್ಭಿಣಿಗಾಗಲೀ ಗರ್ಭಕ್ಕಾಗಲೀ ಕೂಡಲೇ ಅಪಾಯ ಉಂಟಾಗುತ್ತದೆ ॥೧॥

(ಸು।ನಿ।)—ದೀರ್ಘಕಾಲದವರೆಗೆ ಬದುಕಬೇಕೆಂದು ಅಪೇಕ್ಷೆಯುಂಟಾದರೆ ಸ್ವಭಾವವಾಗಿ ಹೊರಕ್ಕೆ ಪ್ರವರ್ತಿಯಾಗುವ ವಾತಮೂತ್ರ, ಪುರೀಷ, ಆಕಳಿಕೆ, ಕಣ್ಣೀರು, ಶೀನು, ತೇಗು, ಹಸಿವು, ಬಾಯಾರಿಕೆ, ಕೆಮ್ಮು, ನಿದ್ರೆ ಮೊದಲಾದ ಸ್ವಾಭಾವಿಕಗಳಾದ ಶರೀರದ ವೇಗಗಳನ್ನು ತಡೆಯಬಾರದು; ಅವನ್ನು ತಡೆದರೆ ಉದಾವರ್ತ (ಮಲಸಂಗ) ವುಂಟಾಗುತ್ತದೆ ॥೨-೩॥

(ಚ।ಶಾ।ಅ।೮) ಚಿಕಿತ್ಸೆ—

ಲಾಮಂಚ, ಭತ್ತ, ದರ್ಭೆ, ಗಂಡುದರ್ಭೆ, ಕಬ್ಬು (ತೃಣಪಂಚಮೂಲಗಳು), ನೀರಂಜೆ (ನೆಲಜಲಭೇದದಿಂದ ಎರಡು ವಿಧ) ಇವುಗಳ ಬೇರುಗಳನ್ನಾಗಲೀ ಪರಿಮಳ ಗಂಜಣಿ, ಗರಿಕೆ, ಶಿವನಿ, ಈಚಲು, ಹಿಪ್ಪೆ ಇವುಗಳ ಬೇರುಗಳನ್ನೂ

ತೊಗಟೆಗಳನ್ನೂ, ದ್ರಾಕ್ಷಿಯನ್ನೂ, ಅರ್ಧ ನೀರು ಮಿಶ್ರಮಾಡಿದ ಹಾಲಿನಿಂದ ಬೆಚ್ಚಿ ರಸವನ್ನು ಹಿಂಡಿ ಆ ರಸದಲ್ಲಿ ಚಾರಪೊಪ್ಪು, ತಾರೆಕಾಯಿಯ ಪೊಪ್ಪು, ಎಳ್ಳು ಇವುಗಳ ಕಲ್ಕವನ್ನು ಕದರಿ ಸ್ವಲ್ಪ ಸೈಂಧವಲವಣದ ಪುಡಿಯನ್ನು ಸೇರಿಸಿ ತಣ್ಣಗೆ ಮಾಡಿ ನಿರೂಹವಸ್ತಿಯನ್ನು ಕೊಡಬೇಕು. ಮಲಸಂಗ ಬಾಧೆಯು ನಿವಾರಣೆಯಾದಮೇಲೆ ಸುಖೋಷ್ಣವಾದ ನೀರಿನಿಂದ ಸ್ನಾನಮಾಡಿಸಿ ಸ್ಥೈರ್ಯ ಕರಗಳಾದ ಆದರೆ ವಿದಾಹ (ಎದೆಯುರಿಯನ್ನು) ವನ್ನುಂಟುಮಾಡದ ಗುರು ಸ್ನಿಗ್ಧಗಳಾದ ಆಹಾರವನ್ನು ಭೋಜನ ಮಾಡಿಸಿ ಸಾಯಂಕಾಲದಲ್ಲಿ ಅತಿ ಮಧುರದಿಂದ ತಯಾರಿಸಿದ ತೈಲದಿಂದ ಅನುವಾಸನ ಬಸ್ತಿಯನ್ನು ಪ್ರಯೋಗಿಸ ಬೇಕು. ನಿರೂಹ ಅನ್ವಾಸನ ಬಸ್ತಿ ಪ್ರಯೋಗಮಾಡುವಾಗ ಸ್ತ್ರೀಯನ್ನು ಬೋರಲಾಗಿ (ಮುಖ ಕೆಳಗೆಮಾಡಿ) ಮಲಗಿಸಿ ಪ್ರಯೋಗಿಸಬೇಕು ॥೪॥

(ಸು।ಶಾ।ಅ।೧೦)—

ಸಕಲ ವಿಧಗಳಾದ ಉದಾವರ್ತ ರೋಗಗಳಲ್ಲೂ ಅಪಾನವಾಯುವನ್ನು ಅನುಲೋಮಗೊಳಿಸತಕ್ಕ ಚಿಕಿತ್ಸೆಯನ್ನೇ ಮಾಡಬೇಕು ॥೫॥

(ಅ।ಸಂ)—

ಗರ್ಭಿಣಿಯರ ಉದಾವರ್ತರೋಗವನ್ನು ಸ್ನೇಹಪಾನದಿಂದಲೂ ಬಸ್ತಿ ಪ್ರಯೋಗಗಳಿಂದಲೂ ಅತಿಬೇಗ ನಿವಾರಿಸಬೇಕು. ಉಪೇಕ್ಷೆಮಾಡಿದರೆ ಗರ್ಭಿಣಿಯನ್ನೂ ಗರ್ಭವನ್ನೂ ಕೊಂದುಬಿಡುತ್ತದೆ ॥೬॥

ಮೂಲ—(ಚ।ಶಾ।)—೨ ಗುದಾರ್ಶಃ—

ಸ್ತ್ರೀಣಾಂ ಚಾಮಗರ್ಭಭ್ರಂಶಾದ್ಗರ್ಭೋತ್ಪೀಡನಾದ್ಬಹುವಿಷಮಪ್ರಸೂತಿಭಿಶ್ಚ ಪ್ರಕುಪಿತೋ ವಾಯುರಪಾನಸ್ತಂ ಮಲಮುಪಚಿತಮಧೋಗಮಮಾಸಾದ್ಯ ಗುದವಳಿಷ್ವಾಧತ್ತೇ। ತತಸ್ತ್ವರ್ಶಾಂಸಿ ಪ್ರಾದುರ್ಭವನ್ತಿ ॥೭॥

(ಅ।ಸಂ।)—

ಗರ್ಭವೃದ್ಧಿಪ್ರಪೀಡನಾತ್ವಾಯೋರ್ವಳಿಷ್ವಭಿಷ್ಯಣ್ಣಮೂರ್ತಿಷು ಜಾಯನ್ತೇಽರ್ಶಾಂಸಿ ॥೮॥

ಚಿಕಿತ್ಸಾ—ಧೂಪನಂ—

ಅರ್ಕಮೂಲಂ ಶಮೀಪತ್ರಂ ನೃಕೇಶಾಃ ಸರ್ಪಕಂಚುಕಮ್।
ಮಾರ್ಜಾರಚರ್ಮ ಸರ್ಪಿಶ್ಚ ಧೂಪನಂ ಹಿತಮರ್ಶಸಾಮ್ ॥೯॥

ವರ್ತಿಃ—

ಧಾನ್ಯಾಮ್ಲಪಿಷ್ಟೈರ್ಜೀಮೂತಬೀಜೈಸ್ತಜ್ಜಾಲಕಂ ಮೃದು।
ಲೇಪಿತಂ ಛಾಯಯಾ ಶುಷ್ಕಂ ವರ್ತಿರ್ಗುದಜಶಾತಿನೀ ॥೧೦॥

ಲೇಪಃ—

ಕುಷ್ಠಂ ಶಿರೀಷಬೀಜಾನಿ ಪಿಪ್ಪಲ್ಯಃ ಸೈನ್ಧವಂ ಗುಡಃ।
ಅರ್ಕಕ್ಷೀರಂ ಸುಧಾಕ್ಷೀರಂ ತ್ರಿಫಲಂ ಚ ಪ್ರಲೇಪನಮ್ ॥೧೧॥
ಅರ್ಕಂ ಪಯಸ್ಸುಧಾಕಾಣ್ಡಂ ಕಟುಕಾಲಾಬುಪಲ್ಲವಾಃ।
ಕರಞ್ಜೋ ಬಸ್ತಮೂತ್ರಂ ಚ ಲೇಪನಂ ಶ್ರೇಷ್ಠಮರ್ಶಸಾಮ್ ॥೧೨॥

ಸ್ನುಕ್‌ಕ್ಷೀರಾದ್ರ್ನಿಶಾಲೇಪಸ್ತಥಾ ಗೋಮೂತ್ರಕಲ್ಕಿತೈಃ ।
ಕೃಕವಾಕುಶಕೃತ್ಕೃಷ್ಣಾ ನಿಶಾಗುಂಜಾಫಲೈಸ್ತಥಾ ॥೧೩॥

ದಧಿಪಾನಂ—

ತ್ವಚಂ ಚಿತ್ರಕಮೂಲಸ್ಯ ಪಿಷ್ಟ್ವಾ ಕುಮ್ಭಂ ಪ್ರಲೇಪಯೇತ್ ।
ತಕ್ರಂ ವಾ ದಧಿ ವಾ ತತ್ರ ಜಾತಮರ್ಶೋಹರಂ ಪಿಬೇತ್ ॥೧೪॥

ದೀಪಿಕೆ—ಮೂಲವ್ಯಾಧಿ—(ಚ। ಶಾ।)——

ಗರ್ಭಪಾತ, ಗರ್ಭವು ಗುದವನ್ನು ಚುಚ್ಚುವುದು, ಕಷ್ಟಪ್ರಸವ, ಇತ್ಯಾದಿ ಕಾರಣಗಳಿಂದ ಅಪಾನ ವಾಯುವು ಪ್ರಕೋಪವಾಗಿ ಗರ್ಭಿಣಿಯರ ದೇಹದಲ್ಲಿ ಜಮಾಯಿಸಿದ ಮಲವನ್ನು ಆಕ್ರಮಿಸಿ ಗುದವಳಿಗಳಲ್ಲಿ ತಡೆಯನ್ನುಂಟುಮಾಡಿ ಮೂಲವ್ಯಾಧಿಯನ್ನುಂಟುಮಾಡುತ್ತದೆ.

(ಅ।ಸಂ।)—

ಗರ್ಭವು ಬೆಳೆಯುತ್ತಾ ಬೆಳೆಯುತ್ತಾ ಬಂದಂತೆ ಗುದವನ್ನು ಒತ್ತುವುದರಿಂದ ಅಪಾನ ವಾತವು ವಿಗುಣವಾಗಿ ಮಲವನ್ನು ಗುದವಳಿಗೆ ನುಗ್ಗಿಸಿ ಅರ್ಶಸ್ಸನ್ನುಂಟುಮಾಡುತ್ತದೆ.

ಚಿಕಿತ್ಸೆ—ಧೂಪನ—

ಎಕ್ಕದ ಬೇರು, ಬನ್ನಿ ಎಲೆ, ತಲೆಕೂದಲು, ಹಾವಿನ ಪೊರೆ, ಬೆಕ್ಕಿನ ಚರ್ಮ, ತುಪ್ಪ ಇವುಗಳಿಂದ ಧೂಪಹಾಕಿದರೆ ಅರ್ಶಸ್ಸಿಗೆ ಹಿತವಾಗುತ್ತದೆ.

ವರ್ತಿ—

ಹೀರೆಬೀಜದ ತಿರುಳನ್ನು ಹುಳಿಕಲಗಚ್ಚಿನಲ್ಲರೆದು ಕಲ್ಕಮಾಡಿ ಹೀರೆಕಾಯಿನೊಳಗೆ ಬಲೆಯಂತಿರುವ ಭಾಗಕ್ಕೆ ಲೇಪಿಸಿ ವರ್ತಿಯನ್ನು ಮಾಡಿ ಬಿಸಿಲಿನಲ್ಲೊಣಗಿಸಿ ಗುದದಲ್ಲಿಟ್ಟರೆ ಅರ್ಶಸ್ಸಿನ ಮೊಳೆಯು ಬೀಳುತ್ತದೆ.

ಲೇಪನ—

ಚಂಗಲ್‌ಕೋಷ್ಠ, ಬಾಗೇಬೀಜ, ಹಿಪ್ಪಲಿ, ಸೈಂಧವ, ಬೆಲ್ಲ, ಎಕ್ಕದ ಹಾಲು, ಮುಂಡುಗಳ್ಳಿಯ ಹಾಲು, ತ್ರಿಫಲೆಗಳನ್ನು ಲೇಪಿಸುವುದು. ಎಕ್ಕದ ಹಾಲು, ಮುಂಡುಗಳ್ಳಿಯ ಬೇರು, ಕಹಿಸೋರೆಸೊಪ್ಪು, ಹೊಂಗೆಬೀಜ ಇವುಗಳನ್ನು ಆಡಿನ ಗಂಜಲದಲ್ಲರೆದು ಲೇಪಿಸಬೇಕು.

ಮುಂಡುಗಳ್ಳಿಯ ಹಾಲು, ಹಸಿಯ ಅರಿಶಿನಗಳನ್ನು ಗೋಮೂತ್ರದಲ್ಲರೆದು ಲೇಪಿಸಬೇಕು ; ಕೋಳಿಯಹಿಕ್ಕೆ, ಹಿಪ್ಪಲಿ, ಅರಶಿನ, ಗುಲಗಂಜಿ, ಮಗ್ಗಾರೆಕಾಯಿಗಳನ್ನು ಅರೆದು ಲೇಪಿಸಿದರೆ ಮೊಳೆಗಳು ಬೀಳುತ್ತವೆ.

ದಧಿಪಾನ—

ಚಿತ್ರಮೂಲದ ತೊಗಟೆಯನ್ನು ಅರೆದು ಆ ಕಲ್ಕವನ್ನೊಂದು ಹೊಸ ಮಡಿಕೆಯೊಳಗೆ ಲೇಪಿಸಿ ಅದರೊಳಗ ಕಾಯಿಸಿದ ಹಾಲನ್ನು ಹಾಕಿ ಮಜ್ಜಿಗೆಯನ್ನು ಹೆಪ್ಪುಹಾಕಿ ತಯಾರಾದ ಮೊಸರನ್ನಾಗಲೀ ಮಜ್ಜಿಗೆಯನ್ನಾಗಲೀ ಕುಡಿದರೆ ಮೂಲವ್ಯಾಧಿಯು ನಿವಾರಣೆಯಾಗುತ್ತದೆ.

ಮೂಲ – ಸಗರ್ಭಗರ್ಭಾಶಯದೋಷಾಃ—

೧. (ಸು।ಶಾ।ಅ।೧೦)—ಕಾಲಾತೀತಸ್ಥಾಯಿಗರ್ಭಃ—

ತಸ್ಮಿನ್ವಿಶೇಷತಃ ಸಧಾನ್ಯಮುಲೂಖಲಂ ಮುಸಲೇನಾಭಿಹನ್ಯಾದ್ವಿಷಮೇ ವಾ ಯಾನಾಸನೇ ಸೇವೇತ ॥೧೫॥

೨. (ಚ।ಶಾ।ಅ।೮)—ಉಪವಿಷ್ಟಕಮ್—

ಯಸ್ಯಾಃ ಪುನರುಷ್ಣತೀಕ್ಷ್ಣೋಪಯೋಗಾದ್ಗರ್ಭಿಣ್ಯಾಃ ಮಹತಿ ಗರ್ಭೇ ಜಾತಸಾರೇ ಪುಷ್ಪದರ್ಶನಂ ಸ್ಯಾದನ್ಯೋ ವಾ ಯೋನಿಸ್ರಾವಃ ತಸ್ಯಾ ಗರ್ಭೋ ವೃದ್ಧಿಂ ನ ಪ್ರಾಪ್ನೋತಿ ನಿಸ್ರುತತ್ವಾತ್। ಸಕಾಲಮವತಿಷ್ಠತೇऽತಿಮಾತ್ರಮ್। ತಮುಪವಿಷ್ಟಕಮಾಚಕ್ಷತೇ ಕೇಚಿತ್ ॥೧೬॥

(ಅ।ಹೃ।)—

ಕೋಷ್ಠೇ ತಿಷ್ಠತಿ ಸಸ್ಫುರಃ ವರ್ಧತೇ ತೇನ ನೋದರಮ್ ॥೧೭॥

(ಚ।ಶಾ।)—ಚಿಕಿತ್ಸಾ—

ಭೌತಿಕ ಜೀವನೀಯ ಬೃಂಹಣೀಯ ಮಧುರವಾತಹರಸಿದ್ಧಾನಾಂ ಸರ್ಪಿಷಾಮುಪಯೋಗಃ ॥೧೮॥

ದೀಪಿಕೆ—ಗರ್ಭದಿಂದ ಕೂಡಿದ ಗರ್ಭಾಶಯದಲ್ಲಿನ ಬಾಧೆಗಳು—

೧. (ಸು।ಶಾ।ಅ।೧೦)—ಕಾಲಾತೀತಗರ್ಭ—

ಪ್ರಸವಕಾಲವು ಪೂರ್ತಿಯಾಗಿ ಕಳೆದರೂ ಶಿಶು ಜನನವಾಗದೆ ಗರ್ಭಾಶಯದಲ್ಲೇ ಇದ್ದರೆ ಒರಳಿಗೆ ಭತ್ತವನ್ನು ಹಾಕಿ ಗರ್ಭಿಣಿಗೆ ಒನಕೆಯನ್ನು ಕೊಟ್ಟು ಕುಟ್ಟಿಸಬೇಕು. ಹಳ್ಳತಿಟ್ಟಾದ (ಉಬ್ಬು ತಗ್ಗಾದ) ಆಸನಗಳಲ್ಲಿ ಕುಳ್ಳಿರಿಸಬೇಕು.

೨. ಉಪವಿಷ್ಟಕ—

ಗರ್ಭವು ಪುಷ್ಟವಾಗಿ ಬೆಳೆದಿರುವಾಗ ಗರ್ಭಿಣಿಯು ಬಿಸಿಯಾದ ಚುರುಕಾದ ದ್ರವ್ಯಗಳನ್ನು ಸೇವಿಸಿ ರಜಃಸ್ರಾವ ಅಥವಾ ಬೇರೆ ಯಾವ ವಿಧವಾದ ದ್ರವ್ಯವು ಸ್ರವಿಸಿದರೆ ಗರ್ಭದಲ್ಲಿರುವ ಶಿಶುವು ವೃದ್ಧಿಯಾಗದೆ ಗರ್ಭಾಶಯದಲ್ಲೇ ಬಲುಕಾಲದವರೆಗೆ ನಿಂತುಬಿಡುತ್ತದೆ. ಇದಕ್ಕೆ ಉಪವಿಷ್ಟಕವೆಂದು ಹೆಸರು.

(ಅ।ಹೃ।)—

ಗರ್ಭಾಶಯದಲ್ಲಿ ಚಲಿಸುತ್ತದೆ; ಹೊಟ್ಟೆಯು ದಪ್ಪವಾಗಿರುವುದಿಲ್ಲ.

(ಚ।ಶಾ।)—ಚಿಕಿತ್ಸಾ—ಪಾಂಚಭೌತಿಕಗಳಾದ ಜೀವನೀಯ ಬೃಂಹಣೀಯ ಮಧುರವಾಗಿ ವಾತಹರಗಳಾದ ಪದಾರ್ಥಗಳನ್ನು ಕೂಡಿಸಿ ತಯಾರಿಸಿದ ಘೃತವನ್ನು ಉಪಯೋಗಿಸಬೇಕು.

ಮೂಲ—(ಸು।ಶಾ।ಅ।೧೦)—೩. ಮಕ್ಕಲ್ಲಃ—

ಪ್ರಜಾತಾಯಾಶ್ಚ ನಾರ್ಯಾ ರೂಕ್ಷಶರೀರಾಯಾಸ್ತೀಕ್ಷ್ಣೈರವಿಶೋಧಿತಂ ರಕ್ತಂ ವಾಯುನಾ ತದ್ದೇಶಗೇನಾತಿಸಂರುದ್ಧಂ ನಾಭೇರಧಃ ಪಾರ್ಶ್ವಯೋರ್ಬಸ್ತೌ ಬಸ್ತಿಶಿರಸಿ ವಾ ಗ್ರನ್ಥಿಂ ಕರೋತಿ। ತತಶ್ಚ ನಾಭಿವಸ್ತ್ಯುದರಶೂಲಾನಿ ಭವನ್ತಿ।

ಸೂಚೀಭಿರಿವ ನಿಸ್ತುದ್ಯತೇ ಭಿದ್ಯತೇ ದೀರ್ಯತ ಇವ ಪಕ್ವಾಶಯಃ । ಸಮನ್ತಾ-ದಾಧ್ಮಾನಮುದರೇ ಮೂತ್ರಸಙ್ಗಶ್ಚ ಭವತೀತಿ ಮಕ್ಕಲ್ಲಲಕ್ಷಣಮ್ ॥೧೯॥

ಚಿಕಿತ್ಸಾ—

ತತ್ರ ವೀರತರ್ವಾದಿಸಿದ್ಧಂ ಜಲಮೂಷಕಾದಿಪ್ರತೀವಾಪಂ ಪಾಯಯೇತ್। ಯುವಕ್ಷಾರಚೂರ್ಣಂ ವಾ ಪಿಪ್ಪಲ್ಯಾದಿಕ್ವಾಥೇನ। ಪಿಪ್ಪಲ್ಯಾದಿಚೂರ್ಣಂ ವಾ ಸುರಾಮಣ್ಡೇನ । ವರುಣಾದಿಕ್ವಾಥಂ ವಾ ಪಂಚಕೋಲೈಲಾಪ್ರತೀವಾಪಮ್। ಪೃಥಕ್ಪರ್ಣ್ಯಾದಿಕ್ವಾಥಂ ವಾ ಭದ್ರದಾರುಮರಿಚಸಂಸೃಷ್ಟಮ್ । ಪುರಾಣಗುಡಂ ವಾ ತ್ರಿಕಟುಕಚಾತುರ್ಜಾತಕಕುಸ್ತುಂಬರುಮಿಶ್ರಂ ಖಾದಯೇತ್ । ಅಚ್ಛಂ ವಾ ಪಿಬೇದರಿಷ್ಟಮಿತಿ ॥೨೦॥

ದೀಪಿಕಾ–(ಮಕ್ಕಲ್ಲ) ೩. ಗರ್ಭಶೂಲೆ—

ಒಣಕಲು (ರೂಕ್ಷ) ದೇಹದ ಸ್ತ್ರೀಯು ಮಗುವನ್ನು ಹೆತ್ತಮೇಲೆ ಚುರುಕಾದ ಪಂಚಕೋಲ, ಮೊದಲಾದುವನ್ನು ಸೇವಿಸದೆ ಇರುವಕಾರಣ ಅವಳ ಗರ್ಭಾಶಯದಿಂದ ಸ್ರವಿಸುವ ದುಷ್ಟರಕ್ತವು ವಾತಪ್ರಕೋಪದಿಂದ ತಡೆಯಲ್ಪಟ್ಟು ಹೊಕ್ಕಳಿನ ಕೆಳಗೆ ಕರಳು, ಮೂತ್ರಾಶಯ, ಅದರ ಮೇಲ್ಭಾಗಗಳಲ್ಲಿ ಗಂಟುಗಂಟಾಗಿ ನಿಲ್ಲುತ್ತದೆ. ಇದರಿಂದ ಹೊಕ್ಕಳು, ಮೂತ್ರಾಶಯ, ಹೊಟ್ಟೆಗಳಲ್ಲಿ ನೋವುಂಟಾಗುತ್ತದೆ. ಕರಳಿನಲ್ಲಿ ಸೂಜಿಯಿಂದ ಚುಚ್ಚಿದಂತೆಯೂ, ಮೈಜಜ್ಜಿದಂತೆಯೂ ಶೀಳಿದಂತೆಯೂ ಬಾಧೆಯುಂಟಾಗುತ್ತದೆ; ಹೊಟ್ಟೆಯಲ್ಲಿ ವಾಯು ತುಂಬಿ ಉಬ್ಬುತ್ತದೆ, ಮೂತ್ರವು ತಡೆಯಲ್ಪಡುತ್ತದೆ. ಈ ಲಕ್ಷಣಗಳಿದ್ದರೆ ಮಕ್ಕಲ್ಲವೆಂದು ತಿಳಿಯಬೇಕು ॥ ೧೯ ॥

ಚಿಕಿತ್ಸೆ—ವೀರತರ್ವಾದಿಗಣ ಮತ್ತು ಲಾಮಂಚ ಮೊದಲಾದ ಗಣದ್ರವ್ಯಗಳ ಕಷಾಯಕ್ಕೆ ಚೌಳುಪ್ಪು, ಹಿಂಗುಗಳನ್ನು ಸೇರಿಸಿಯಾಗಲೀ, ಪಂಚಕೋಲ ಕಷಾಯದಲ್ಲಿ ಯವಕ್ಷಾರವನ್ನೂ, ಮದ್ಯದ ತಿಳಿಯಲ್ಲಿ ಪಂಚಕೋಲ ಚೂರ್ಣವನ್ನೂ, ಮಟ್ಟಿಮಾವು ಮೊದಲಾದ ಗಣದ್ರವ್ಯಗಳ ಕಷಾಯದಲ್ಲಿ ಪಂಚಕೋಲ ಏಲಕ್ಕಿಗಳ ಚೂರ್ಣವನ್ನೂ, ಲಘುಪಂಚಮೂಲದ ಕಷಾಯದಲ್ಲಿ ದೇವದಾರು ಮೆಣಸುಗಳ ಚೂರ್ಣವನ್ನೂ ಮಿಶ್ರಮಾಡಿ ಕುಡಿಸಬೇಕು ; ಹಳೆಯ ಬೆಲ್ಲ, ತ್ರಿಕಟು, ಚಾತುರ್ಜಾತಕ, ಕೊತ್ತುಂಬರಿಗಳ ಚೂರ್ಣವನ್ನು ಜೇನುತುಪ್ಪ ಮಿಶ್ರಮಾಡಿ ತಿನ್ನಿಸಬೇಕು ; ತಿಳಿಯಾದ ಅರಿಷ್ಟವನ್ನಾಗಲೀ ಕುಡಿಸಬೇಕು ॥೨೦॥

ಮೂಲ–(ಅ।ಹೃ।)—೪. ಯೋನಿಸಂವರಣಮ್—

ವಾತಲಾನ್ಯನ್ನಪಾನಾನಿ ಗ್ರಾಮ್ಯಧರ್ಮಂ ಪ್ರಜಾಗರಮ್ ।
ಅತ್ಯರ್ಥಂ ಸೇವಮಾನಾಯಾಂ ಗರ್ಭಿಣ್ಯಾಂ ಯೋನಿಮಾರ್ಗಗಃ ॥೨೧॥
ಮಾತಾರಿಶ್ವಾ ಪ್ರಕುಪಿತೋ ಯೋನಿದ್ವಾರಸ್ಯ ಸಂವೃತಿಮ್ ।
ಕುರುತೇ ರುದ್ಧಮಾರ್ಗತ್ವಾತ್ಪುನರನ್ತರ್ಗತೋಽನಿಲಃ ॥೨೨॥
ನಿರುಣದ್ಧ್ಯಾಶಯದ್ವಾರಂ ಪೀಡಯನ್ಗರ್ಭಸಂಸ್ಥಿತಮ್ ।
ನಿರುದ್ಧವದನೋಚ್ಛ್ವಾಸೋ ಗರ್ಭಶ್ಚಾಶು ವಿಪದ್ಯತೇ ॥೨೩॥
ಬದ್ಧ್ವಾಂ ಸಂರುದ್ಧಹೃದಯಾಂ ನಾಶಯತ್ಯಥ ಗರ್ಭಿಣೀಮ್ ।
ಯೋನಿಸಂವರಣಂ ನಾಮ ವ್ಯಾಧಿಮೇನಂ ಪ್ರಚಕ್ಷತೇ ॥೨೪॥
ಅನ್ತಕಪ್ರತಿಮಂ ಘೋರಂ ನಾರಭೇತ ಚಿಕಿತ್ಸಿತುಮ್ ।

ದೀಪಿಕಾ—(ಅ।ಹೃ।)—೪. ಯೋನಿಸಂವರಣ—ಗರ್ಭಾಶಯದ ಮುಖಬಂಧನ–

ಗರ್ಭಿಣಿಯು ಅತಿಯಾಗಿ ವಾತಪ್ರಕೋಪವಾಗುವ ಆಹಾರಗಳನ್ನೂ, ಸಂಭೋಗವನ್ನೂ, ರಾತ್ರಿ ನಿದ್ದೆಕೆಡುವುದನ್ನೂ ಆಚರಿಸಿದರೆ ಯೋನಿಮಾರ್ಗದಲ್ಲಿ ವಾತಪ್ರಕೋಪವಾಗಿ ತಡೆಯುಂಟಾಗುತ್ತದೆ. (ಯೋನಿಮುಖವು ಸಂಕುಚಿತವಾಗುತ್ತದೆ.) ಗರ್ಭಾಶಯದೊಳಭಾಗದಲ್ಲೂ ವಾತವು ಪ್ರಕುಪಿತವಾಗಿ ಗರ್ಭಾಶಯದ ಮುಖವನ್ನು ತಡೆಗಟ್ಟಿ ಗರ್ಭವನ್ನು ಅದುಮುತ್ತದೆಯಾದಕಾರಣ ಗರ್ಭಸ್ಥ ಶಿಶುವು ಬೇಗ ಸಾಯುತ್ತದೆ. ಗರ್ಭವು ಉಬ್ಬಿ ಗರ್ಭಿಣಿಯ ಎದೆಗೆ ಚಾಚಿಕೊಳ್ಳುವುದರಿಂದ ಗರ್ಭಿಣಿಯೂ ಸಾಯುತ್ತಾಳೆ. ಈ ವ್ಯಾಧಿಗೆ ಯೋನಿಸಂವರಣವೆನ್ನುತ್ತಾರೆ. ಮೃತ್ಯುರೂಪಿಯಾದ ಈ ವ್ಯಾಧಿಗೆ ಚಿಕಿತ್ಸೆ ಮಾಡಬಾರದು ॥೨೪॥

ಮೂಲ—೫. ರಕ್ತಗುಲ್ಮಃ—ಸ್ತ್ರೀರೋಗೇ ವರ್ಣಿತಮಾಸ್ತೇ।

(ಚ।ಶಾ।)—೬. ಗರ್ಭಸ್ರಾವಪಾತೌ—

ಸಾ ಚೇದಪಚಾರಾದ್ದ್ವಯೋಸ್ತ್ರಿಷು ವಾ ಮಾಸೇಷು ಪುಷ್ಪಂ ಪಶ್ಯೇತ್ ನಾಸ್ಯಾ ಗರ್ಭಃ ಸ್ಥಾಸ್ಯತೀತಿ ವಿದ್ಯಾತ್। ಅಜಾತಸಾರಾ ಹಿ ತಸ್ಮಿನ್ಕಾಲೇ ಭವನ್ತಿ ಗರ್ಭಾಃ ॥ ೨೫ ॥

(ಸು।ಶಾ।ಅ।೧೦)—

ಆ ಚತುರ್ಥಾತ್ತತೋ ಮಾಸಾತ್ಪ್ರಸ್ರವೇದ್ಗರ್ಭವಿಚ್ಯುತಿಃ।
ತತಃ ಸ್ಥಿರಶರೀರಾಯಾಃ ಪಾತಃ ಪಂಚಮಷಷ್ಠಯೋಃ ॥೨೬॥

(ಅ।ಹೃ।ಅ।೧೦)—ನಿದಾನಮ್—

ಅತಿವ್ಯವಾಯಮಾಯಾಸಂ ಭಾರಂ ಪ್ರಾವರಣಂ ಗುರು।
ಅಕಾಲಜಾಗರಸ್ವಪ್ನಕಠಿನೋತ್ಕುಟುಕಾಸನಮ್ ॥೨೭॥
ಕ್ರೋಧಶೋಕಭಯೋದ್ವೇಗವೇಗಶ್ರದ್ಧಾವಿಧಾರಣಮ್।
ಉಪವಾಸಾಧ್ವತೀಕ್ಷ್ಣೋಷ್ಣಗುರುವಿಷ್ಟಮ್ಭಿಭೋಜನಮ್ ॥೨೮॥
ರಕ್ತಂ ನಿವಸನಂ ಶ್ವಭ್ರಕೂಪೇಕ್ಷಾಂ ಮದ್ಯಮಾಮಿಷಮ್।
ಉತ್ತಾನಶಯನಂ ರಕ್ತಸ್ರುತಿಂ ಶುದ್ಧಿವಸ್ತೀ ತಥಾಽಷ್ಟಮೇ ॥೨೯॥
ಏಭಿರ್ಗರ್ಭಃ ಸ್ರವೇದಾಮಃ ಕುಕ್ಷೌ ಶುಷ್ಯೇನ್ಮ್ರಿಯೇತ ವಾ।

(ಸು।ಶಾ।ಅ।೧೦)—ಗರ್ಭಪಾತಲಕ್ಷಣಮ್—

ತತ್ರ ಪೂರ್ವೋಕ್ತೈಃ ಕಾರಣೈಃ ಪತಿಷ್ಯತಿ ಗರ್ಭೇ ಗರ್ಭಾಶಯಕಟೀವಸ್ತಿ-ವಂಕ್ಷಣಶೂಲಾನಿ ರಕ್ತದರ್ಶನಂ ಚ ॥೩೦॥

ಗಯಾತು—

ಗರ್ಭಸ್ರಂಸನೇನಾರ್ತವವಹಸ್ರೋತೋಮುಖವಿವೃತೇರಾರ್ತವಕ್ಷರಣಾದ್ರಕ್ತ-ದರ್ಶನಮಿತ್ಯಾಹ। ಪ್ರಸ್ರಂಸಮಾನೇ ಸದಾಹಪಾರ್ಶ್ವಶೂಲಾನಾಹಾಸ್ಯಗ್ದರ-ಮೂತ್ರಸಂಗಾಃ। ಸ್ಥಾನಾತ್ ಸ್ಥಾನಂ ಚೋಪಕ್ರಾಮತಿ ಗರ್ಭೇ ಕೋಷ್ಠೇ ಸಂರಮ್ಭಃ ॥ ೩೧ ॥

ದೀಪಿಕಾ—೫. ರಕ್ತಗುಲ್ಮ—ಸ್ತ್ರೀ ರೋಗದಲ್ಲಿ ವಿವರಿಸಲಾಗಿದೆ.

೬. ಗರ್ಭಸ್ರಾವಪಾತಗಳು—ಗರ್ಭಿಣಿಯು ನಿಯಮದಂತೆ ಆಹಾರ ವಿಹಾರಗಳನ್ನು ಆಚರಿಸದಕಾರಣ ಎರಡನೆಯ ಅಥವಾ ಮೂರನೆಯ ತಿಂಗಳಲ್ಲಿ ರಕ್ತಸ್ರಾವವಾದರೆ ಆ ಗರ್ಭವು ಸ್ಥಿರವಾಗಿ ನಿಲ್ಲುವುದಿಲ್ಲ. ಏಕೆಂದರೆ ಆ ಕಾಲಕ್ಕೆ ಗರ್ಭವು ವೃದ್ಧಿಯಾಗಿ ಗಟ್ಟಿಯಾಗಿರುವುದಿಲ್ಲ. ಗರ್ಭಶರೀರವು ಅಧಿಕ ದ್ರವ ರೂಪದಲ್ಲಿರುವುದರಿಂದ ನಾಲ್ಕನೆಯ ತಿಂಗಳವರೆಗೆ ಹೊರಕ್ಕೆ ಬಂದರೆ ಗರ್ಭಸ್ರಾವ ವೆಂದೂ ಆಮೇಲೆ ಗರ್ಭಶರೀರವು ಗಟ್ಟಿಯಾಗುವಕಾರಣ ೫–೬ನೇ ತಿಂಗಳುಗಳಲ್ಲಿ ಹೊರಕ್ಕೆ ಬಂದರೆ ಗರ್ಭಪಾತವೆಂದೂ ವ್ಯವಹಾರವು.

(ಅ|ಹೃ|)—ಅತಿಯಾಗಿ ಮೈಥುನ, ಆಯಾಸ, ಭಾರಹೊರುವುದು, ದಪ್ಪ ಹೊದಿಕೆಯನ್ನು ಹೊದಿಯುವುದು, ರಾತ್ರಿಹೊತ್ತು ಎಚ್ಚರವಾಗಿರುವುದು, ಹಗಲು ನಿದ್ರೆಮಾಡುವುದು, ಕುಕ್ಕುರುಗಾಲಿನಲ್ಲೂ, ಗಟ್ಟಿಯಾದ ಆಸನದಲ್ಲೂ ಕೂಡುವುದು, ವ್ಯಸನ, ಕೋಪ, ಭಯ, ಗಾಬರಿ (ಆತುರಪಟ್ಟು ಕೆಲಸಮಾಡುವುದು), ಇವು ಗಳಿಂದಲೂ, ಮಲಮೂತ್ರಗಳ ವೇಗವನ್ನು ತಡೆಯುವುದು, ಚುರುಕಾದ ಉಷ್ಣ ವೀರ್ಯವುಳ್ಳ ದ್ರವ್ಯಗಳನ್ನುಪಯೋಗಿಸುವುದು, ಅಜೀರ್ಣಪದಾರ್ಥಗಳನ್ನೂ ಮಲಬಂಧ ಮಾಡುವ ವಸ್ತುಗಳನ್ನೂ ಸೇವಿಸುವುದು, ಬಯಕೆಯನ್ನು ಸಲ್ಲಿಸ ದಿರುವುದು, ಉಪವಾಸಮಾಡುವುದು, ದಾರಿ ನಡೆಯುವುದು, ರಕ್ತಸ್ರಾವ ಮಾಡಿಸುವುದು, ಬೆತ್ತಲೆ ಇರುವುದು, ಬಾವಿ, ಹಳ್ಳಗಳನ್ನು ಬಗ್ಗಿ ನೋಡುವುದು, ಮದ್ಯ ಮಾಂಸಗಳನ್ನು ಸೇವಿಸುವುದು, ಅಂಗತ್ತಲಾಗಿ ಮಲಗುವುದು, ವಮನ, ವಿರೇಚನಗಳನ್ನೂ ಎಂಟನೆಯ ತಿಂಗಳಲ್ಲಿ ನಿರೂಹಬಸ್ತಿ ಪ್ರಯೋಗವನ್ನು ಮಾಡಿಸುವುದು ಇತ್ಯಾದಿ ಕಾರಣಗಳಿಂದ ಗರ್ಭವು ತುಂಬಾ ವೃದ್ಧಿಯಾಗದೆ ದ್ರವರೂಪದಿಂದಲೇ ಗರ್ಭಾಶಯದಿಂದ ಹೊರಕ್ಕೆ ಸ್ರಾವವಾಗುತ್ತದೆ. ಅಥವಾ ಅಲ್ಲೇ ಒಣಗಿಹೋಗಿ ಸಾಯುತ್ತದೆ.

ಗರ್ಭಪಾತ ಲಕ್ಷಣ—ಮೇಲೆ ವಿವರಿಸಿದ ಕಾರಣಗಳಿಂದ ಗರ್ಭಿಣಿಗೆ ಗರ್ಭಾಶಯ, ನಡು, ತೊಡೆಸಂದುಗಳಲ್ಲಿ ಶೂಲೆಯೂ, ಯೋನಿದ್ವಾರದಿಂದ ರಕ್ತ ದರ್ಶನವೂ ಉಂಟಾದರೆ ಗರ್ಭಪಾತವು ಸಂಭವಿಸುತ್ತೆಂದು ತಿಳಿಯಬೇಕು.

ಗಯಿಾ ಎಂಬ ಆಚಾರ್ಯರ ಮತ—ಗರ್ಭವು ಜಾರುವುದರಿಂದ ಆರ್ತವ ವಾಹಿ ಸ್ರೋತೋಮುಖಗಳು ಅಗಲವಾಗಿ ರಕ್ತಸ್ರಾವವುಂಟಾದರೆ ಉರಿ, ಪಕ್ಕೆ ಗಳಲ್ಲಿ ನೋವು, ಹೊಟ್ಟೆಯುಬ್ಬರ, ಪ್ರದರ, ಮೂತ್ರದ ತಡೆ ಇವುಗಳುಂಟಾಗು ತ್ತವೆ. ಗರ್ಭವು ಒಂದು ಕಡೆಯಿಂದ ಮತ್ತೊಂದು ಕಡೆಗೆ ಜಾರಿದರೆ ಹೊಟ್ಟೆಯಲ್ಲಿ ಮಗುವು ಹರಿದಾಡಿದಂತೆ ತೋರುತ್ತದೆ.

ಮೂಲ—(ಸು|ಶಾ|ಅ|೧೦)—ಚಿಕಿತ್ಸಾ—ಆಸನ್ನಗರ್ಭಪಾತಃ—

೧. ಅದೃಷ್ಟಶೋಣಿತವೇದನಾಯಾಮ್—ಮಧುಕದೇವದಾರು ಮಂಜಿಷ್ಠಾ-ಪಯಸ್ಯಾ ಸಿದ್ಧಂ ಪಯಃ ಪಾಯಯೇತ್। ತದೇವಾಶ್ಮನ್ತಕಶತಾವರೀಪಯಸ್ಯಾ

ಸಿದ್ಧಂ, ವಿದಾರಿಗನ್ಧಾದಿಸಿದ್ಧಂ, ಬೃಹತೀದ್ವಯ ಶತಾವರೀಸಾರಿವಾ ಪಯಸ್ಯಾ ಮಧುಕಸಿದ್ಧಂ ವಾ ಪಾಯಯೇತ್ ॥೩೨॥

೨. ಯಸ್ಯಾಃ ಪುನರಾಮಾನ್ವಯಾತ್ಪುಷ್ಪದರ್ಶನಂ ಸ್ಯಾತ್ತಸ್ಯಾಃ ಪ್ರಾಯಸ್ತದ್ಗರ್ಭೋ ಬಾಧಕಂ ಭವತಿ ವಿರುದ್ಧೋಪಕ್ರಮತ್ವಾತ್ತಯೋಃ ಏತಯೋಃ ಕ್ಷಿಪ್ರಮುಪಕ್ರಾನ್ತಯೋಃ ಗರ್ಭಸ್ಥಾಪನೋಕ್ತಾಭಿರೌಷಧೀಭಿರುಪಾವರ್ತನ್ತೇ ರುಜೋ ಗರ್ಭಶ್ಚಾಪ್ಯಾಯತೇ ॥೩೩–೩೪॥

೩. ಸೋಽತಿಕಾಲಮವತಿಷ್ಠಮಾನೋ ವ್ಯಾಪದ್ಯತೇ ತಾಂ ಮೃದುನಾ ಸ್ನೇಹಾದಿಕ್ರಮೇಣೋಪಚರೇತ್। ಉತ್ಕ್ರೋಶರಸಸಂಸಿದ್ಧಾಮನಲ್ಪಸ್ನೇಹಾಂ ಯವಾಗೂಂ ಪಾಯಯೇತ್ । ಮಾಷ ತಿಲ ಬಿಲ್ವಶಲಾಟುಸಿದ್ಧಾಂ ವಾ, ಕುಲ್ಮಾಷಾನ್ ಭಕ್ಷಯೇತ್ ಮಧು ಮಾಧ್ವೀಕಂ ಚಾನುಪಿಬೇತ್ಸಪ್ತರಾತ್ರಮ್ ॥೩೫॥

(ಅ।ಹೃ।)—ಅಪರಿಹಾರ್ಯಗರ್ಭಪಾತಚಿಕಿತ್ಸಾ—

ಗರ್ಭೇ ನಿಪತಿತೇ ತೀಕ್ಷ್ಣಂ ಮದ್ಯಂ ಸಾಮರ್ಥ್ಯತಃ ಪಿಬೇತ್।
ಗರ್ಭಕೋಷ್ಠವಿಶುದ್ಧ್ಯರ್ಥಮಾರ್ತಿವಿಸ್ಮರಣಾಯ ಚ ॥೩೬॥
ಲಘುನಾ ಪಂಚಮೂಲೇನ ರೂಕ್ಷಾಂ ಪೇಯಾಂ ತತಃ ಪಿಬೇತ್।
ಪೇಯಾಮಮದ್ಯಪಾ ಕಲ್ಕೇ ಸಾಧಿತಾಂ ಪಾಂಚಕೌಲಿಕೇ ॥೩೭॥
ಬಿಲ್ವಾದಿಪಂಚಕಕ್ವಾಥೇ ತಿಲೋದ್ದಾಲಕತಣ್ಡುಲೈಃ।
ಮಾಸತುಲ್ಯಂ ದಿನಾನ್ಯೇವಂ ಪೇಯಾದಿಃ ಪತಿತೇ ಕ್ರಮಃ ॥೩೮॥
ಲಘುರಸ್ನೇಹಲವಣೋ ದೀಪನೀಯಯುತೋ ಹಿತಃ।
ದೋಷಧಾತುಪರಿಕ್ಲೇದಶೋಷಾರ್ಥಂ ವಿಧಿರಿತ್ಯಯಮ್ ॥೩೯॥
ಸ್ನೇಹಾನ್ನಾಬಸ್ತಯಶ್ಚೋರ್ಧ್ವಂ ಬಲ್ಯಜೀವನದೀಪನಾಃ।

ದೀಪಿಕೆ—(ಸು।ಶಾ।ಅ।೧೦)—ಗರ್ಭಸ್ರಾವಪಾತಗಳಾಗುವವೆಂದು ಶಂಕೆಯುಂಟಾದರೆ ಚಿಕಿತ್ಸೆ—

೧. ರಕ್ತಸ್ರಾವವಿರದೆ ನೋವುಮಾತ್ರವಿದ್ದರೆ ಅತಿಮಧುರ, ದೇವದಾರು, ಮಂಜಿಷ್ಠೆ, ಕಾಕೋಳಿ ಇವುಗಳಿಂದ ತಯಾರಿಸಿದ ಹಾಲನ್ನು ಕುಡಿಸಬೇಕು. ಆರೇ ಮರದ ತೊಗಟೆ, ಆಷಾಢಿಬೇರು, ಕಾಕೋಳಿಗಳಿಂದಾಗಲೀ, ವಿದಾರಿಗನ್ಧಾದಿ (ಲಘುಪಂಚಮೂಲ) ಗಣದ್ರವ್ಯಗಳಿಂದಾಗಲೀ, ಹೆಗ್ಗುಳ್ಳ, ನೆಲಗುಳ್ಳ, ಆಷಾಢಿ, ಸೊಗದೆ, ಕಾಕೋಳಿ, ಅತಿಮಧುರಗಳಿಂದ ತಯಾರಿಸಿದ ಹಾಲನ್ನಾಗಲೀ ಕುಡಿಸಬೇಕು ॥೩೨॥

೨. ರಕ್ತಸ್ರಾವವಾದರೆ—ಆಮದೋಷಸಂಪರ್ಕದಿಂದ ಗರ್ಭಿಣಿಗೆ ರಕ್ತಸ್ರಾವವಾದರೆ ಬಾಧೆಯುಂಟಾಗುತ್ತದೆ. ಆಗ ಚಿಕಿತ್ಸೆಮಾಡಿದರೆ ನಿಷ್ಫಲವಾಗುತ್ತದೆ ; ಏಕೆಂದರೆ ರಕ್ತಸ್ರಾವವನ್ನು ನಿಲ್ಲಿಸಬೇಕಾದರೆ ಮಧುರ ಶೀತವೀರ್ಯಗಳಾದ ಔಷಧಗಳನ್ನು ಪ್ರಯೋಗಿಸಬೇಕು; ಆಗ ಆಮದೋಷವು ಹೆಚ್ಚುತ್ತದೆ; ಆಮದೋಷಹರಗಳಾದ ತೀಕ್ಷ್ಣೋಷ್ಣದ್ರವ್ಯಗಳನ್ನು ಪ್ರಯೋಗಿಸಿದರೆ ಅಧಿಕಪ್ರಮಾಣದಲ್ಲಿ ರಕ್ತಸ್ರಾವವಾಗುತ್ತದೆ. ಹೀಗೆ ವಿರುದ್ಧೋಪಕ್ರಮವಾಗುವುದರಿಂದ ಗರ್ಭಪಾತವನ್ನು ತಡೆಗಟ್ಟಲು ಪ್ರಯತ್ನಿಸಿದರೆ ಚಿಕಿತ್ಸೆಯು ವ್ಯರ್ಥವಾಗುತ್ತದೆ ॥೩೩॥

ಈ ಎರಡು ಬಗೆಯ ಗರ್ಭಪಾತಗಳಲ್ಲಿ ಗರ್ಭಸ್ಥಾಪನೆಗಾಗಿ ಹೇಳಿರುವ ಔಷಧಗಳನ್ನು ಪ್ರಯೋಗಿಸಿದರೆ ನೋವು ನಿಂತು ಗರ್ಭವು ಪುಷ್ಟಿಹೊಂದುತ್ತದೆ ॥೩೪॥

೩. ಶಿಶುವು ಬಲುಕಾಲದವರೆಗೂ ಗರ್ಭಾಶಯದಲ್ಲಿದ್ದು ಮೃತವಾದರೆ ಮೃದುವಾದ ಸ್ನೇಹಾದಿಕ್ರಿಯೆಗಳಿಂದ ಗರ್ಭಿಣಿಗೆ ಉಪಚಾರಮಾಡಬೇಕು. ಕುರರಪಕ್ಷಿಯ ಮಾಂಸರಸದಿಂದ ಯವಾಗೂವನ್ನು ತಯಾರಿಸಿ ಹೆಚ್ಚುಪ್ರಮಾಣದ ಸ್ನೇಹವನ್ನು ಸೇರಿಸಿ ಕುಡಿಸಬೇಕು. ಎಳ್ಳು, ಉದ್ದು, ಬಿಲ್ವಪತ್ರೆ ಹೀಚುಗಳ ಕಷಾಯದಿಂದ ಯವೆಯ ಅನ್ನವನ್ನು ಬೇಯಿಸಿ ತಿನ್ನಿಸಬೇಕು. ಮಧು, ಮೃದ್ವೀಕಗಳೆಂಬ ಮದ್ಯಗಳನ್ನು ಕುಡಿಸಬೇಕು. ಈ ರೀತಿಯಾದ ಆಹಾರಕ್ರಮವನ್ನು ಏಳು ದಿವಸಗಳವರೆಗೆ ಆಚರಿಸಬೇಕು ॥೩೫॥

೪. ತಡೆಯಲಾಗದ ಗರ್ಭಪಾತದಲ್ಲಿ ಚುರುಕಾದ ಮದ್ಯವನ್ನು ಗರ್ಭಿಣಿಗೆ ಬೇಕಾದಷ್ಟು ಕುಡಿಸಬಹುದು. ಇದರಿಂದ ಗರ್ಭಾಶಯದ ಒಳಭಾಗವು ಶುದ್ಧಿಯಾಗಿ ಗರ್ಭಪಾತದಿಂದುಂಟಾದ ನೋವು ಪರಿಹಾರವಾಗುತ್ತದೆ. ಅನಂತರ ಪಂಚಮೂಲ (ಲಘು) ದ ಕಷಾಯದಲ್ಲಿ ತಯಾರಿಸಿದ ಗಂಜಿಯನ್ನು ಕುಡಿಸಬೇಕು. ಮದ್ಯಪಾನ ಮಾಡದವರಿಗೆ ಬಿಲ್ವಾದಿ (ಬೃಹತ್) ಪಂಚಮೂಲದ ಕಷಾಯದಲ್ಲಿ ಪಂಚಕೋಲದ ಕಲ್ಕವನ್ನು ಕದರಿ ಎಳ್ಳು, ಅಕ್ಕಿ, ಉದ್ದು ಇವನ್ನು ಸೇರಿಸಿ ತಯಾರಿಸಿದ ಪೇಯಾದಿಗಳನ್ನು ಎಷ್ಟನೆಯ ತಿಂಗಳಲ್ಲಿ ಗರ್ಭಪಾತವಾಗುತ್ತದೆಯೋ ಅಷ್ಟುದಿನಗಳವರೆಗೆ ಸ್ನೇಹ ಲವಣಗಳನ್ನು ಸೇರಿಸದೆ ಪಾನಮಾಡಿಸಬೇಕು. ಈ ರೀತಿಯಾಗಿ ಉಪಚರಿಸುವುದರಿಂದ ದೋಷ, ಧಾತು, ಗರ್ಭಾಶಯ ಇವುಗಳು ಶುದ್ಧಿಯಾಗಿ ಗರ್ಭಿಣಿಗೆ ಬಲ ಬರುತ್ತದೆ. ಅನಂತರ ಬಲಕರಗಳಾದ ಜೀವನಪ್ರದಗಳಾದ ಮತ್ತು ಅಗ್ನಿವರ್ಧಕಗಳಾದ ಸ್ನೇಹ, ಅನ್ನ, ಬಸ್ತಿ ವಿಧಾನಗಳನ್ನು ಆಚರಿಸಬೇಕು ॥೩೬–೩೯॥

ಮೂಲ—೭. ಲೀನಗರ್ಭಃ—ಸ ತ್ರಿವಿಧಃ। ಯಥಾ—ವಿಷ್ಟಮ್ಭಗರ್ಭಃ, ನಾಗೋದರಃ ಲೀನಗರ್ಭ ಇತಿ॥

(ಅ।ಸಂ।)—೧. ವಿಷ್ಟಮ್ಭಗರ್ಭಃ—

ವಿಷ್ಟಮ್ಭ ಇವ ಮಾರ್ಗಾವರೋಧಾತ್ತಿಷ್ಠತಿ। ಸ ತು ವಾತಾಭಿಪನ್ನಗರ್ಭಸ್ಯ ಶೋಷಣಾನ್ನಾತುಃ ಕುಕ್ಷಿಂ ನ ಪೂರಯತಿಮನ್ದಂ ಸ್ಪನ್ದತೇ ಚ। ಅತ ಏವ ವೃದ್ಧ ಕಾಶ್ಯಪೇನ ಶುಷ್ಕಗರ್ಭ ಇತಿ ವ್ಯಾಚಕ್ಷತೇ ॥೪೦॥

ಯಥಾ—ಗರ್ಭನಾಡ್ಯಾಸ್ತು ವಹನಾದಲ್ಪವತ್ತ್ವಾದ್ರಸಸ್ಯ ಚ।
ಚಿರೇಣಾಪ್ಯಾಯತೇ ಗರ್ಭಸ್ತಥೈವಾಕಾಲಯೋಜನಾತ್ ॥೪೧॥
ಅಕುಕ್ಷಿಪೂರಣೋ ಗರ್ಭೋ ಮನ್ದಸ್ಪನ್ದನ ಏವ ಚ। ಇತಿ।

ದೀಪಿಕೆ—೭ ಗರ್ಭಲೋಪ—ಇದು ಮೂರು ವಿಧ–ವಿಷ್ಟಮ್ಭಗರ್ಭ, ನಾಗೋದರ, ಮತ್ತು ಲೀನಗರ್ಭಗಳೆಂದು.

೧. ವಿಷ್ಟಮ್ಭಗರ್ಭ—ಅಗಣಿಯ ಗೂಟದಂತೆ ಗರ್ಭಾಶಯದ ಒಳಗೆ ಅಡ್ಡಲಾಗಿ ನಿಂತು ಪ್ರಸವಮಾರ್ಗವನ್ನು ತಡೆಯುತ್ತದೆ. ವಾತಪ್ರಕೋಪ

ದಿಂದ ಗರ್ಭಸ್ಥ ಶಿಶುವು ಶೋಷಿಸಿರುವುದರಿಂದ ಗರ್ಭಾಶಯವು ತುಂಬಿರುವುದಿಲ್ಲ. ವೃದ್ಧಕಾಶ್ಯಪರು ಇದನ್ನು ಶುಷ್ಕಗರ್ಭವೆನ್ನುತ್ತಾರೆ. ಏಕೆಂದರೆ—ಗರ್ಭ ನಾಭಿನಾಳದಲ್ಲಿ ಅಲ್ಪಪ್ರಮಾಣದಿಂದ ಮಾತೃವಿನ ರಸಧಾತುವು ಹರಿಯುತ್ತದೆ. ಗರ್ಭವು ಸಕಾಲದಲ್ಲಿ ವೃದ್ಧಿಯಾಗುವುದಿಲ್ಲವಾದ್ದರಿಂದ ಗರ್ಭವು ಪುಷ್ಟಿಯಾಗಲು ಬಲುಕಾಲ ಬೇಕಾಗುತ್ತದೆ. ಗರ್ಭಾಶಯವು ತುಂಬಿರುವುದಿಲ್ಲ, ಅತಿಮೆಲ್ಲಗೆ ಶಿಶು ಚಲನೆಯಾಗುತ್ತದೆ ॥೪೦–೪೧॥

ಮೂಲ—(ಚ।ಶಾ।)—೨. ನಾಗೋದರಃ—

ಉಪವಾಸಕರ್ಮಪರಾಯಾಃ ಪುನಃ ಕದಾಹಾರಾಯಾಃ ಸ್ನೇಹದ್ವೇಷಿಣ್ಯಾಃ ವಾತಪ್ರಕೋಪಣಾನ್ಯಾಸೇವಮಾನಾಯಾ ಗರ್ಭೋ ನ ವೃದ್ಧಿಂ ಪ್ರಾಪ್ನೋತಿ ಪರಿಶುಷ್ಕತ್ವಾತ್ । ಸ ಚಾಪಿ ಕಾಲಮವತಿಷ್ಠತೇಽತಿಮಾತ್ರಮತಿಸ್ಪನ್ದನಶ್ಚ ಭವತಿ। ತನ್ನಾಗೋದರಮಿತ್ಯಾಚಕ್ಷತೇ ।।೪೨।।

(ಅ।ಹೃ।)—

ಶೋಕೋಪವಾಸರೂಕ್ಷಾದ್ಯೈರಥವಾ ಯೋನ್ಯತಿಸ್ರವಾತ್।
ವಾತೇ ಕ್ರುದ್ಧೇ ಕೃಶಃ ಶುಷ್ಯೇದ್ಗರ್ಭೋ ನಾಗೋದರಂ ತು ತತ್ ॥೪೩।।
ಉದರಂ ವೃದ್ಧಮಪ್ಯತ್ರ ಹೀಯತೇ ಸ್ಫುರಣಂ ಚಿರಾತ್।

(ಸು।ಶಾ।ಅ। ೧೦)—

ಶುಕ್ರಶೋಣಿತಂ ವಾಯುನಾಭಿಪನ್ನಮಪಕ್ರಾನ್ತಜೀವಮಾಧ್ಮಾಪಯತ್ಯುದರಮ್। ತತ್ಕದಾಚಿದ್ಯದೃಚ್ಛಯೋಪಶಾನ್ತಂ ನೈಗಮೇಷಾಪಹೃತಮಿತಿ ಭಾಷನ್ತೇ। ತಮೇವ ಕದಾಚಿದ್ವಿಲೀಯಮಾನಂ ನಾಗೋದರಮಿತ್ಯಾಹುಃ। ಕೇಚಿದೇನಂ ಭೂತಹೃತಂ ವದನ್ತಿ ।।೪೪।।

(ಚ।ಶಾ।)—ಯಥಾ—

ಅಸೃಙ್ನಿರುದ್ಧಂ ಪವನೇನ ನಾರ್ಯಾ ಗರ್ಭಂ ವ್ಯವಸ್ಯನ್ತ್ಯಬುಧಾಃ ಕದಾಚಿತ್।
ಗರ್ಭಸ್ಯ ರೂಪಂ ಹಿ ಕರೋತಿ ತಸ್ಯಾಸ್ತದಸ್ರಮುಸ್ರಾವಿ ವಿವರ್ಧಮಾನಮ್ ।।೪೫।।
ತದಗ್ನಿಸೂರ್ಯಶ್ರಮಶೋಕರೋಗೈರುಷ್ಣಾನ್ನಪಾನೈರಥವಾ ಪ್ರವೃತ್ತಮ್।
ದೃಷ್ಟ್ವಾಸೃಗೇಕಂ ನ ಚ ಗರ್ಭಸಂಜ್ಞಂ ಕೇಚಿನ್ನರಾ ಭೂತಹೃತಂ ವದನ್ತಿ ।।೪೬।।

ಚಿಕಿತ್ಸಾ—

ಗರ್ಭವೃದ್ಧಿಕರೈಸ್ಸಿದ್ಧಪಯಸ್ಸರ್ಪಿರ್ಭಿಃ ಸುಭಿಕ್ಷಾಯಾ ಅಭೀಕ್ಷ್ಣಂ ಯಾನವಾಹನಾವಮಾರ್ಜನಜೃಮ್ಭಣೈರುಪಪಾದನಮ್ ॥೪೭॥

ದೀಪಿಕೆ—(ಚ।ಶಾ।)—೨. ಸಪ್ರಾಕಾರದ ಶಿಶುಜನನ—

ಉಪವಾಸ, ಕದನ್ನಗಳನ್ನು ಸೇವಿಸುವ ಸ್ನೇಹಪದಾರ್ಥಗಳನ್ನುಪಯೋಗಿಸದ ಗರ್ಭಿಣಿಯ ಗರ್ಭವು ಪುಷ್ಟಿಯಾಗಿ ಬೆಳೆಯದೆ ಶುಷ್ಕವಾಗುತ್ತದೆ. ಇದು ಬಲುಕಾಲದವರೆಗೂ ಗರ್ಭಾಶಯದಲ್ಲೇ ನಿಂತು ಅತಿಯಾಗಿ ಚಲಿಸುತ್ತಿರುತ್ತದೆ. ಇದಕ್ಕೆ ನಾಗೋದರವೆನ್ನುತ್ತಾರೆ ॥೪೨॥

(ಅ।ಹೃ।)——ಶೋಕ, ಉಪವಾಸ, ರೂಕ್ಷಪದಾರ್ಥ ಇವುಗಳನ್ನು ಸೇವಿಸುವ ಗರ್ಭಿಣಿಗೆ ಅತಿಪ್ರಮಾಣದಿಂದ ಯೋನಿಸ್ರಾವವಾಗುವ ಕಾರಣ ವಾತವು ಪ್ರಕೋಪವಾಗಿ ಗರ್ಭವನ್ನು ಶೋಷಿಸುತ್ತದೆ. ಮೊದಮೊದಲು ಹೊಟ್ಟೆಯು ದಪ್ಪವಾಗಿದ್ದರೂ ಕಡೆಗೆ ಸಣ್ಣಗಾಗಿ ಬಹಳಕಾಲದಮೇಲೆ ಶಿಶುವು ಅದರುವುದು ತಿಳಿಯುತ್ತದೆ ॥೪೩॥

(ಸು।ಶಾ।ಅ। ೧೦)—ಗರ್ಭಾಶಯದಲ್ಲಿ ಸೇರಿದ ಶುಕ್ರಶೋಣಿತಗಳು ಪ್ರಕುಪಿತವಾತದಿಂದ ದೂಷಿಸಲ್ಪಟ್ಟು ಜೀವನು (ಕರ್ಮಪುರುಷ) ಬೇರೆಯಾದರೆ ಗರ್ಭಿಣಿಯ ಹೊಟ್ಟೆಯು ಉಬ್ಬಿರುತ್ತದೆ. ಬೆಂಕಿ, ಬಿಸಲು (ಸೂರ್ಯನ ಕಿರಣ) ಕಾಯುವುದು, ಆಯಾಸ, ವ್ಯಸನ, ರೋಗ, ಬಿಸಿಬಿಸಿಯಾಗಿ ಅನ್ನತಿನ್ನುವುದು, ಪಾನಮಾಡುವುದು ಇತ್ಯಾದಿಗಳಿಂದ ರಕ್ತಸ್ರಾವವಾಗಿ ಹೊಟ್ಟೆಯು ಸಣ್ಣಗಾದರೆ, ಗರ್ಭವನ್ನು ಪಿಶಾಚಿಯು ಅಪಹರಿಸಿತೆಂದು ಕೆಲವರು ಹೇಳುತ್ತಾರೆ.

(ಚ।ಶಾ।)——ವಾತಪ್ರಕೋಪದಿಂದ ಮಾಸಿಕರಕ್ತಸ್ರಾವವು ತಡೆಯಲ್ಪಟ್ಟರೆ ಆಕೆಯು ಗರ್ಭಿಣಿಯಾಗಿರುವಳೆಂದು ಅವಿವೇಕಿಗಳು ನಿಷ್ಕರ್ಷೆಮಾಡುತ್ತಾರೆ. ಹಾಗೆ ತಡೆಯಲ್ಪಟ್ಟ ರಕ್ತವು ಹೊರಕ್ಕೆ ಸ್ರಾವವಾಗದೆ ಅಭಿವೃದ್ಧಿಯಾಗಿ ಗರ್ಭದ ರೂಪವನ್ನು ಹೊಂದುತ್ತದೆ. ಬಿಸಲು, ಬೆಂಕಿ ಇವುಗಳನ್ನು ಕಾಯುವುದು, ಆಯಾಸ, ವ್ಯಸನ, ರೋಗಗಳಿಂದ ನರಳುವುದು, ಬಿಸಿಯಾದ ಆಹಾರಪಾನಗಳನ್ನು ಸೇವಿಸುವುದು ಇವುಗಳಿಂದ ಆ ದುಷ್ಟರಕ್ತವು ಹೊರಕ್ಕೆ ಸ್ರಾವವಾದರೆ ಭೂತವು ಗರ್ಭದಲ್ಲಿದ್ದ ಶಿಶುವನ್ನು ಅಪಹರಿಸಿತೆಂದು ಹೇಳುತ್ತಾರೆ ॥೪೪–೪೬॥

ಚಿಕಿತ್ಸೆ——ಗರ್ಭವೃದ್ಧಿಮಾಡುವ ಔಷಧಗಳಿಂದ ತಯಾರಿಸಿದ ಹಾಲು ತುಪ್ಪಗಳನ್ನು ಗರ್ಭಿಣಿಗೆ ಕೊಟ್ಟು ಪುಷ್ಟಳನ್ನಾಗಿ ಮಾಡಿ ಅತಿಯಾಗಿ ಕುಲುಕುವ ಯಾನ, ವಾಹನಗಳಲ್ಲಿ ಸಂಚರಿಸುವಂತೆ ಮಾಡುವುದರಿಂದಲೂ ವಮನ, ವಿರೇಚನ, ಆಕಳಿಸುವುದು ಮೊದಲಾದ ಕರ್ಮಗಳನ್ನು ಮಾಡಿಸುವುದರಿಂದಲೂ ಆರೋಗ್ಯ ವುಂಟಾಗುತ್ತದೆ ॥೪೭॥

ಮೂಲ—(ಸು।ಶಾ।ಅ। ೧೦)—೩. ಲೀನಗರ್ಭಃ—ಪ್ರಸುಪ್ತಗರ್ಭಃ—

ವಾತೋಪದ್ರವಗೃಹೀತತ್ವಾತ್ ಸ್ರೋತಸಾಂ ಲೀಯತೇ ಗರ್ಭಃ ಸೋಽತಿಕಾಲಮವತಿಷ್ಠಮಾನೋ ವ್ಯಾಪದ್ಯತೇ ॥೪೮॥

(ಚ।ಶಾ।)—

ಯಸ್ಯಾಃ ಪುನರ್ಗರ್ಭೋಽಪಿ ಪ್ರಸುಪ್ತಃ ನ ಸ್ಪನ್ದತೇತಿ ॥೪೯॥

ಚಿಕಿತ್ಸಾ—

ತಾಂ ಶ್ಯೇನ ಮತ್ಸ್ಯ ಗವಯ ಶಿಖಿ ತಾಮ್ರಚೂಡ ತಿತ್ತಿರೀಣಾಮನ್ಯತಮಸ್ಯ ಸರ್ಪಿಷ್ಮತಾ ರಸೇನ ಮಾಷಯೂಷೇಣ ವಾ ಪ್ರಭೂತಸರ್ಪಿಷಾ ಮೂಲಕಯೂಷೇಣ ವಾ ರಕ್ತಶಾಲೀನಾಮೋದನಂ ಮೃದುಮಧುರಶೀತಲಂ ಭೋಜಯೇತ್। ತೈಲಾಭ್ಯಜ್ಗೇನ ಚಾಸ್ಯಾ ಅಭೀಕ್ಷ್ಣಮುದರವಂಕ್ಷಣೋರುಕಟೀಪಾರ್ಶ್ವಪೃಷ್ಠಪ್ರದೇಶಾನೀಷದುಷ್ಣೇನೋಪಚರೇತ್ ॥೫೦॥

(ಅ|ಹೃ|ಶಾ|ಅ|೨)—

ಹರ್ಷಯೇತ್ಸತತಂ ಚೈನಾಮೇವಂ ಗರ್ಭಃ ಪ್ರವರ್ಧತೇ।
ಪುಷ್ಟೋಽನ್ಯಥಾ ವರ್ಷಗಣೈಃ ಕೃಚ್ಛ್ರಾಜ್ಜಾಯೇತ ನೈವ ವಾ ॥೫೧॥

ದೀಪಿಕೆ–(ಸು|ಶಾ|ಅ| ೧೦)–ಲೀನಗರ್ಭ–ಸ್ರೋತಸ್ಸಿನಲ್ಲಿ ಅಡಗಿರುವ ಶಿಶುವು–

ಪ್ರಕುಪಿತವಾದ ವಾತದಿಂದ ಪೀಡಿತವಾದ ಶಿಶುವು ಸಂಕುಚಿತ ದೇಹವುಳ್ಳದ್ದಾಗಿ ಸ್ರೋತಸ್ಸಿನೊಳಗೆ ಅಡಗಿ ಚಲನೆ ನಿಂತುಬಿಡುತ್ತದೆ; ಬಲುಕಾಲದಮೇಲೆ ಸಾಯುತ್ತದೆ ॥೪೮–೪೯॥

ಚಿಕಿತ್ಸೆ—ಗಿಡುಗನಹಕ್ಕಿ, ಮೀನು, ಕಾಡುಹಸು, ನವಿಲು, ಕೋಳಿ, ತಿತ್ತಿರಿ (ವೇದಪಕ್ಷಿ) ಇವುಗಳೊಂದರ ಮಾಂಸರಸಕ್ಕೆ ತುಪ್ಪವನ್ನು ಸೇರಿಸಿಯಾಗಲಿ, ಉದ್ದಿನಕಟ್ಟು ಮೂಲಂಗಿಯ ರಸಕ್ಕೆ ಹೆಚ್ಚಾಗಿ ತುಪ್ಪವನ್ನು ಮಿಶ್ರಮಾಡಿಯಾಗಲೀ ಕೆಂಪಕ್ಕಿ ಅನ್ನವನ್ನು ತಿನ್ನಿಸಬೇಕು. ಆಹಾರವು ಮೆತ್ತಗೂ ತಣ್ಣಗೂ ಸಿಹಿಯಾಗಿಯೂ ಇರಬೇಕು. ಆಗಾಗ್ಯೆ ಆಕೆಯ ಹೊಟ್ಟೆ, ತೊಡೆಯ ಸಂದು, ತೊಡೆ, ನಡು, ಪಕ್ಕೆಗಳು, ಬೆನ್ನು ಇವನ್ನು ತೈಲದಿಂದ ಮೆತ್ತಗೆ ಉಜ್ಜಿಸಬೇಕು. ಗರ್ಭಿಣಿಯು ಸದಾ ಸಂತೋಷದಿಂದಿದ್ದು ಪುಷ್ಟವಾಗಿ ಬೆಳೆದರೆ, ಗರ್ಭವೂ ವೃದ್ಧಿಗೊಳ್ಳುತ್ತದೆ. ಹಾಗೆ ಮಾಡದಿದ್ದರೆ ಅನೇಕ ವರ್ಷಗಳಾದರೂ ಗರ್ಭಾಶಯದಲ್ಲೇ ಇರುತ್ತದೆ. ಅಥವಾ ಬಲುಕಷ್ಟದಿಂದ ಹೊರಕ್ಕೆ ಬರುತ್ತದೆ. ॥೫೦–೫೧॥

ಮೂಲ—೮. ಸನ್ನಿಯುಕ್ತರೋಗಾನ್ತರಾಣಿ ಸಚಿಕಿತ್ಸಿತಾನಿ—

(ಅ) ವಸ್ತ್ಯುದರಶೂಲೇಷು—ಪುರಾಣಗುಡಂ ದೀಪನೀಯಸಂಯುತಂ ಪಾಯಯೇದರಿಷ್ಟಮಿತಿ ॥೫೨॥

(ಆ) ಆಮಾನ್ವಯಃ—ಆಮಾನುಗತರಕ್ತದರ್ಶನಮ್ ।

(ಅ|ಹೃ|ಶಾ|)—

ಆಮಾನ್ವಯೇ ಚ ತತ್ರೇಷ್ಟಂ ಶೀತಂ ರೂಕ್ಷೋಪಸಂಹಿತಮ್ ।
ಉಪವಾಸಘನೋಶೀರಗುಡೂಚ್ಯರಳುಧಾನ್ಯಕಾಃ ॥೫೩॥
ದುರಾಲಭಾಪರ್ಪಟಕಚನ್ದನಾತಿವಿಷಾಬಲಾಃ।
ಕ್ವಥಿತಾಃ ಸಲಿಲೇ ಪಾನಂ ತೃಣಧಾನ್ಯಾದಿ ಭೋಜನಮ್ ॥೫೪॥
ಮುದ್ಗಾದಿಯೂಷೈರಾಮೇ ತು ಜಿತೇ ಸ್ನಿಗ್ಧಾದಿಪೂರ್ವವತ್ ॥
(ಭೋಜಯೇತ್) ॥೫೫॥

ದೀಪಿಕೆ—೮ ಗರ್ಭಾಶಯದ ಇತರ ರೋಗಗಳು ಮತ್ತು ಅವುಗಳ ಪ್ರತೀಕಾರ—

(ಅ) ಮೂತ್ರಾಶಯದ ಮತ್ತು ಉದರದ ಶೂಲೆಗಳಲ್ಲಿ ಅಗ್ನಿವರ್ಧಕಗಳಾದ ಕಷಾಯದಲ್ಲಾಗಲೀ ಅರಿಷ್ಟವೆಂಬ ಮದ್ಯದಲ್ಲಾಗಲೀ ಹಳೆಯ ಬೆಲ್ಲದ ಪುಡಿಯನ್ನು ಸೇರಿಸಿ ಕುಡಿಸಬೇಕು ॥೫೨–೫೩॥

(ಆ) ಆಮಸಂಬನ್ಧದ ರಕ್ತಸ್ರಾವ—ಜಿಡ್ಡಿಲ್ಲದ ಶೀತಪದಾರ್ಥಗಳನ್ನು ಉಪಯೋಗಿಸಬೇಕು, ಉಪವಾಸಮಾಡಿಸಬೇಕು; ಮುಡಿವಾಳ, ಲಾಮಂಚ,

ಅಮೃತವಳ್ಳಿ, ಹೆಮ್ಮರದ ತೊಗಟೆ, ಕೊತ್ತುಂಬರಿ, ತುರುಚನಬೇರು, ಪರ್ಪಾಷ್ಟಕ, ರಕ್ತಚಂದನ, ಅತಿಬಜೆ, ಕಳ್ಳಂಗಡಲೆ ಇವುಗಳ ಕಷಾಯವನ್ನು ಕುಡಿಸಬೇಕು. ತೃಣಧಾನ್ಯ (ರಾಗಿ, ಜೋಳ, ನವಣೆ ಇತ್ಯಾದಿ)ಗಳ ಅನ್ನವನ್ನು ತಿನ್ನಿಸಬೇಕು. ಹೆಸರಿನ ಕಟ್ಟನ್ನೂ ಉಪಯೋಗಿಸಬಹುದು. ಇವುಗಳಿಂದ ಆಮದೋಷವು ನಿವಾರಣೆಯಾದರೆ ಅನಂತರ ಜಿಡ್ಡುಮಿಶ್ರಮಾಡಿ ಆಕೆಗೆ ಅಭ್ಯಾಸವಾಗಿರುವ ಆಹಾರಗಳನ್ನು ಭೋಜನಮಾಡಿಸಬಹುದು ॥೫೪–೫೫॥

ಮೂಲ—(ಇ) ಗರ್ಭೋದಕಸಂಚಯಃ—

ಕಾಸಾಂಚಿದ್ಗರ್ಭಿಣೀನಾಂ ಗರ್ಭಾಶಯಾನ್ತಃ ಗರ್ಭೋದಕಮತೀವ ಸಂಗೃಹ್ಯತೇ । ತೇನ ಗರ್ಭಿಣ್ಯತೀವ ಪೀಡಿತಾ ಭವತಿ ॥೫೬॥

ಚಿಕಿತ್ಸಾ—

ತತ್ರ ಮೃದುವಿರೇಚನಂ ಮೂತ್ರಲಾನಿ ತೃಣಪಂಚಮೂಲಾದಿಕ್ವಾಥಾನಿ ವಿಧೇಯಾನಿ ॥೫೭॥

ದೀಪಿಕೆ—(ಇ) ಗರ್ಭಾಶಯದಲ್ಲಿ ನೀರುತುಂಬುವುದು—

ಕೆಲವರು ಗರ್ಭಿಣಿಯರ ಗರ್ಭಾಶಯದಲ್ಲಿ ಹೆಚ್ಚು ಪ್ರಮಾಣದಲ್ಲಿ ಗರ್ಭೋದಕವು ಜಮಾವಣೆಯಾಗುತ್ತದೆ; ಅದರಿಂದ ಗರ್ಭಿಣಿಗೆ ಅತಿಯಾಗಿ ಹಿಂಸೆಯಾಗುತ್ತದೆ ಎನ್ನುತ್ತಾರೆ ॥೫೬॥

ಚಿಕಿತ್ಸೆ—ಮೃದುವಾದ ವಿರೇಚನೌಷಧವನ್ನೂ ಮತ್ತು ಮೂತ್ರಕರಗಳಾದ ತೃಣಪಂಚಮೂಲಾದಿ ಕಷಾಯಗಳನ್ನೂ ಕುಡಿಸಬೇಕು ॥೫೭॥

ಮೂಲ—(ಈ) ಆವರಣರೋಗಃ—

ಯೋನಿಮಾರ್ಗೇ ಹಸ್ತಸ್ಪರ್ಶಾತ್ಪಿಣ್ಡೋಪಮಾನಿ ದ್ರಾಕ್ಷಾಫಲಸದೃಶಾನ್ಯಙ್ಕುರಾಣ್ಯುಪಲಭ್ಯನ್ತೇ । ಗರ್ಭಾವರಣಕಲಾಯಾಮೇಷ ಉತ್ಪದ್ಯತೇ । ಅಸ್ಮಿನ್ ಗರ್ಭಿಣ್ಯುದರಸ್ಪರ್ಶನೇಽತೀವ ಕಠಿಣತ್ವಾಸ್ಪನ್ದನಂ ಚ ಪೋತಶರೀರಸ್ಯ ದ್ಯೋತ್ಯೇತೇ । ಯದಾ ವಿವೃದ್ಧಾಸ್ತಾ ಏವಾಙ್ಕುರಾಃ ಪೋತಂ ಮಾರಯನ್ತಿ; ತತ್ರ ಶಸ್ತ್ರಕ್ರಿಯೈವ ಸುಕರಾ ॥೫೮॥

ದೀಪಿಕೆ—(ಈ) ಆವರಣರೋಗ—

ಯೋನಿಮಾರ್ಗದಲ್ಲಿ ಕೈಬೆರಳುಗಳನ್ನಿಟ್ಟು ಸ್ಪರ್ಶಮಾಡಿದರೆ ದ್ರಾಕ್ಷಿ ಹಣ್ಣುಗಳಷ್ಟು ಸಣ್ಣವಾದ ಮಾಂಸಾಂಕುರಗಳು ತುಂಬಿರುವಂತೆ ತೋರಿಬರುತ್ತದೆ. ಗರ್ಭಾಶಯದೊಳಭಾಗದಲ್ಲಿ ಆವರಿಸಿದ ಪೊರೆಯಲ್ಲಿ ಈ ಅಂಕುರಗಳುಂಟಾಗುತ್ತವೆ. ಗರ್ಭಿಣಿಯ ಹೊಟ್ಟೆಯನ್ನು ಅಮುಕಿದರೆ ಗಟ್ಟಿಯಾಗಿರುತ್ತದೆ. ಶಿಶುವಿನ ಸ್ಪನ್ದನವು ತೋರುವುದೇ ಇಲ್ಲ. ಇವು ಅಭಿವೃದ್ಧಿಯನ್ನು ಹೊಂದಿದರೆ ಮಗುವನ್ನು ಕೊಲ್ಲುತ್ತವೆ. ಇದನ್ನು ಶಸ್ತ್ರಕ್ರಿಯೆಯಿಂದಲೇ ಪರಿಹರಿಸಿಕೊಳ್ಳಬೇಕು ॥೫೮॥

ಮೂಲ (ಉ) ನನ್ದನಾಮಾ—

ಮೂತ್ರಜವಿಷಸಮ್ಭವೋಽಯಮ್ । ವಿತತಮೂತ್ರಸಂಸರ್ಗಾದ್ದೂಷಿತಂ ರಕ್ತಂ ಗರ್ಭಿಣ್ಯಾಸ್ಸರ್ವಶರೀರಪರಿಸರ್ಪಣಾದ್ದೂಷಯತಿ ಸಪ್ತಧಾತೂನ್ ॥ ೫೯ ॥

ಚಿಕಿತ್ಸಾ—

ಮೂತ್ರಪಿಣ್ಡವಿಕಾರಕಥನೇ ಕಥಿತಪೂರ್ವಮ್ । ಕಿನ್ತು ವಿಷಹರಾಣ್ಯೌಷಧಾನಿ ಪ್ರಯುಜ್ಯ ಗರ್ಭಿಣೀಂ ಲಘೂಚಿತದ್ರವಪ್ರಾಯೇಣಾಹಾರೇಣೋಪಚರೇತ್ ॥ ೬೦ ॥

ದೀಪಿಕೆ (ಉ)—ನನ್ದರೋಗ—

ಮೂತ್ರವಿಷದಿಂದುಂಟಾಗುವ ರೋಗವಿಶೇಷವು.

ಮೂತ್ರವಿಷದಿಂದ ರಕ್ತವು ಕೆಡಿಸಲ್ಪಟ್ಟು ಗರ್ಭಿಣಿಯ ಸರ್ವಶರೀರಾವಯವಗಳಲ್ಲೂ ಸಂಚರಿಸಿ ಸಪ್ತಧಾತುಗಳನ್ನೂ ಕೆಡಿಸುತ್ತದೆ ॥೫೯॥

ಚಿಕಿತ್ಸೆ—ಮೂತ್ರಪಿಣ್ಡದ ವಿಕಾರಗಳ ಚಿಕಿತ್ಸೆಯಲ್ಲಿ ಹೇಳಿರುವ ಕ್ರಮಗಳನ್ನೇ ಅನುಸರಿಸಬೇಕು. ಆದರೆ ವಿಷಹರಗಳಾದ ಪಂಚಶಿರೀಷಾದಿಗಳನ್ನು ಪ್ರಯೋಗಮಾಡಿ ಲಘೂಚಿತದ್ರವಗಳೇ ಹೆಚ್ಚು ಪ್ರಮಾಣದಲ್ಲಿರುವ ಆಹಾರಗಳನ್ನು ಕೊಡಿಸಿ ಗರ್ಭಿಣಿಯನ್ನುಪಚರಿಸಬೇಕು ॥ ೬೦ ॥

ಮೂಲ—(ಊ) ಗರ್ಭೋನ್ಮಾದಃ—

ಮಾನಸವಿಕಾರೋಽಯಮ್ । ಅತ್ರ ಮನಃಸ್ವಾಸ್ಥ್ಯಕರಾಣ್ಯೇವ ಪ್ರಸಂಗಾನ್ ಕುರ್ವೀತ । ಲಘೂಚಿತಮಧುರದ್ರವಪ್ರಾಯಮಾಹಾರಂ ಚ ವಿದಧ್ಯಾತ್ ॥೬೧॥

ದೀಪಿಕೆ (ಊ)—ಗರ್ಭೋನ್ಮಾದವು—

ಇದೊಂದು ವಿಧವಾದ ಮನೋರೋಗವು—ಗರ್ಭಿಣಿಯ ಮನಸ್ಸು ಸಮಾಧಾನವಾಗುವಂತೆ ಪ್ರಿಯವಾದ ಮಾತುಗಳನ್ನಾಡುತ್ತಾ ಹಿತಕರಗಳಾದ ಆಹಾರ, ವಿಹಾರ, ಉಪಚಾರಗಳನ್ನು ಮಾಡಬೇಕು. ಮತ್ತು ಸುಲಭವಾಗಿ ಜೀರ್ಣವಾಗುವ ಹಿತಕರವಾದ ಮಧುರ ಶೀತ ದ್ರವಗಳೇ ಅಧಿಕಪ್ರಮಾಣದಲ್ಲಿ ಸೇರಿರುವ ಆಹಾರಗಳನ್ನು ಕೊಡಿಸಬೇಕು ॥೬೧॥

ದಶಮೋಽಧ್ಯಾಯಃ

ಪ್ರಸೂತಿವಿಕೃತಿವಿಜ್ಞಾನಮ್

(ಸು।ಶಾ।೮।೧೦)—(ಅ) ಗರ್ಭಸಙ್ಗಃ—

ಗರ್ಭಸಙ್ಗಸ್ತು ತಂ ವಿದ್ಯಾದ್ಯದ್ಯಙ್ಗಂ ಸಜ್ಜತೇಽನ್ತರಾತ್ ॥ ೧ ॥

ಚಿಕಿತ್ಸಾ—

ಗರ್ಭಸಂಗೇ ತು ಯೋನಿಂ ಧೂಪಯೇತ್ಕೃಷ್ಣಸರ್ಪನಿರ್ಮೋಕೇಣ ಪಿಣ್ಡೀತಕೇನ ವಾ । ಬಧ್ನೀಯಾದ್ಧಿರಣ್ಯಪುಷ್ಪೀಮೂಲಂ ಹಸ್ತಪಾದಯೋರ್ಧಾರಯೇತ್ಸುವರ್ಚಲಾಂ ವಿಶಲ್ಯಾಂ ವಾ ॥ ೨ ॥

ಶೀಘ್ರಪ್ರಸವಚಿಕಿತ್ಸಾ—

ಸುಪಿಷ್ಟಂ ಲಾಙ್ಗಲೀಮೂಲಂ ಬಲಾಂ ಚೋಷ್ಣೇನ ವಾರಿಣಾ।
ನಾಭಿಲೇಪಾದಧಸ್ತಾಚ್ಚ ಶೀಘ್ರಂ ನಾರೀ ಪ್ರಸೂಯತೇ ॥ ೩ ॥
ಭೀರುಭೂನಿಮ್ಬವಾರ್ತಾಕೀ ಮೂಲಂ ಚ ಪಿಪ್ಪಲೀಯಕಮ್।
ದೇವದಾಳೀ ಚ ತುಮ್ಬೀ ಚ ತಥಾ ಕೋಶಾತಕೀ ಶಿಫಾ ॥ ೪ ॥
ಸೂತಿಲೇಪಾಃ ಸ್ತ್ರಿಯಾ ಹ್ಯೇತೇ ಸಾ ಸುಖೇನ ಪ್ರಸೂಯತೇ ।

೧೦ನೆಯ ಅಧ್ಯಾಯ

ಪ್ರಸವ ವಿಕಾರಗಳು

(ಸು।ಶಾ।ಅ।೧೦)——(ಅ) ಪ್ರಸವದ ತಡೆ——ವಿಗುಣವಾದ ಅಪಾನ ವಾಯುವು ಶಿಶುವಿನ ಅವಯುವಗಳಲ್ಲೊಂದನ್ನು ಗರ್ಭಾಶಯದಲ್ಲಿ ತಡೆದು ಪ್ರಸವಕ್ಕೆ ಅಡ್ಡಿಯನ್ನುಂಟುಮಾಡುತ್ತದೆ ॥ ೧ ॥

ಚಿಕಿತ್ಸೆ—ಕೃಷ್ಣಸರ್ಪದಪೊರೆ ಮತ್ತು ಮಗ್ಗಾರೆಕಾಯಿನ ಪುಡಿ ಇವನ್ನು ಕೆಂಡದಮೇಲೆ ಹಾಕಿ ಹೊಗೆಯು ಯೋನಿಗೆ ತಗಲುವಂತೆ ಮಾಡಬೇಕು. ಕೋಳಿ ಕುಟುಮನ ಬೇರನ್ನು ಗರ್ಭಿಣಿಯ ಕೈಕಾಲುಗಳಿಗೆ ಕಟ್ಟಬೇಕು. ಸೂರ್ಯ ಕಾನ್ತಿಯ ಅಥವಾ ಕೋಳಿಕುಟುಮನ ಬೇರನ್ನು ತಲೆಗೆ ಮುಡಿಸಬೇಕು ॥೨॥

ಬೇಗ ಹೆರಿಗೆಯಾಗಬೇಕಾದರೆ—ಕೋಳಿಕುಟುಮನ ಬೇರನ್ನೂ, ಕಳ್ಳಂಗಡ ಲೆಯ ಬೇರನ್ನೂ ಬಿಸಿನೀರಿನಿಂದ ನುಣ್ಣಗೆ ಅರೆದು ಆ ಕಲ್ಕವನ್ನು ಗರ್ಭಿಣಿಯ ಹೊಕ್ಕಳಿಗೂ ಕಿಬ್ಬೊಟ್ಟೆಗೂ ಬಳಿಯಬೇಕು. ಅಷಾಢಿ, ನೆಲಬೇವು, ಮೋಡಿಗಳ ನ್ನಾಗಲೀ, ದೇವದಾಳಿ, ಸೋರೆ, ಹೀರೆ ಇವುಗಳ ಬೇರುಗಳನ್ನಾಗಲೀ ಅರೆದು ನಾಭಿಲೇಪಮಾಡಿದರೆ ಸುಖವಾಗಿ ಹೆರಿಗೆಯಾಗುತ್ತದೆ ॥ ೩ ॥

ಮೂಲ—(ಆ) ಗರ್ಭನಾಡೀವೇಷ್ಟನಮ್—

ಪ್ರತತೋತ್ತಾನಶಾಯಿನ್ಯಾಃ ಪುನರ್ಗರ್ಭಸ್ಯ ನಾಭ್ಯಾಶ್ರಯಾ ನಾಡೀ ಶಿಶೋಃ ಕಣ್ಠಮನುವೇಷ್ಟಯತಿ। ಸಾ ಪ್ರಸವಕಾಲೇ ಕುಶಲಾಭಿಸ್ಸಾವಿಕಾಭಿ-ರ್ಮೋಚನೀಯಾ ॥ ೪ ॥

ದೀಪಿಕೆ—(ಆ) ಗರ್ಭನಾಳವೇಷ್ಟನವು——

ಗರ್ಭಿಣಿಯು ಎತ್ತರವಾದ ಹಾಸಿಗೆಯಲ್ಲಿ ಅಂಗತ್ತಲಾಗಿ ಮಲಗುವುದ ರಿಂದ ಶಿಶುವಿನ ನಾಭಿನಾಳವು ಅದರ ಕತ್ತಿಗೆ ಸುತ್ತಿಕೊಳ್ಳುವ ಸಂಭವವುಂಟು. ಜಾಣೆಯರಾದ ದಾದಿಯರು ಪ್ರಸವವಾಗುತ್ತಿರುವಾಗಲೇ ಮಗುವಿನ ಕತ್ತಿನಿಂದ ಈ ನಾಳವನ್ನು ಉಪಾಯವಾಗಿ ಬಿಡಿಸಿದಮೇಲೆ ಪ್ರಸವವಾಗುವಂತೆ ಎಚ್ಚರಿಕೆ ಯಿಂದ ನೋಡಿಕೊಳ್ಳಬೇಕು ॥ ೪ ॥

ಮೂಲ—(ಇ) ಅನಿರ್ಮುಕ್ತಾಪರಾ। ವರ್ಣಿತಪೂರ್ವಾ (ಪಶ್ಯತಾಂ ಪ್ರಸವಪ್ರಥಮ ಸ್ಥಿತಿಃ)

(ಸು।ಶಾ।ಅ।೧೦)—(ಈ) ಅನ್ತರುದರೇ ಗರ್ಭಮೃತಿಃ—ನಿದಾನಮ್—

ಮಾನಸಾಗನ್ತುಭಿರ್ಮಾತುರುಪತಾಪೈಃ ಪ್ರಪೀಡಿತಃ ।
ಗರ್ಭೋ ವ್ಯಾಪದ್ಯತೇ ಕುಕ್ಷೌ ವ್ಯಾಧಿಭಿಶ್ಚ ಪ್ರಪೀಡಿತಃ ॥೫॥

(ಮಾ।ನಿ।)—ಲಕ್ಷಣಮ್—

ಗರ್ಭಾಸ್ಪನ್ದನಮಾವೀನಾಂ ಪ್ರಣಾಶಃ ಶ್ಯಾವಪಾಣ್ಡುತಾ ।
ಭವತ್ಯುಚ್ಛ್ವಾಸಪೂತಿತ್ವಂ ಶೂಲಂ ಚಾನ್ತರ್ಮೃತೇ ಶಿಶೌ ॥೬॥

(ಅ।ಹೃ।ಶಾ।)—

ಗರ್ಭೇಽತಿದೋಷೋಪಚಯಾದಪಥ್ಯೈರ್ದೈವತೋಽಪಿ ವಾ।
ಮೃತೇಽನ್ತರುದರಂ ಶೀತಂ ಸ್ತಬ್ಧಂ ಧ್ಮಾತಂ ಭೃಶವ್ಯಥಮ್ ॥೭॥
ಗರ್ಭಾಸ್ಪಂದೋ ಭ್ರಮಸ್ತೃಷ್ಣಾ ಕೃಚ್ಛ್ರಾದುಚ್ಛ್ವಸನಂ ಕ್ಲಮಃ।
ಅರತಿಃ ಸ್ರಸ್ತನೇತ್ರತ್ವಮಾವೀನಾಮಸಮುದ್ಭವಃ ॥೮॥

(ಚ।ಶಾ)—

ಯಸ್ಯಾಃ ಪುನರತಿಮಾತ್ರದೋಷೋಪಚಯಾದ್ವಾ ತೀಕ್ಷ್ಣೋಷ್ಣಾತಿಮಾತ್ರ-ಸೇವನಾದ್ವಾ ವಾತಮೂತ್ರಪುರೀಷವೇಗವಿಧಾರಣೈರ್ವಾ ವಿಷಮಾಸ(ಶ)ನ-ಶಯನಸ್ಥಾನಸಮ್ಪೀಡನಾಭಿಘಾತೈರ್ವಾ ಕ್ರೋಧಶೋಕೇರ್ಷ್ಯಾಭಯತ್ರಾಸಾದಿ-ಭಿರ್ವಾ ಸಾಹಸೈರ್ವಾಪರೈಃ ಕರ್ಮಭಿರನ್ತಃ ಕುಕ್ಷೇರ್ಗರ್ಭೋ ಮ್ರಿಯತೇ। ತಸ್ಯಾಃ ಸ್ತಿಮಿತಂ ಸ್ತಬ್ಧಮುದರಮಾತತಂ ಶೀತಮಶ್ಮಾನ್ತರ್ಗತಮಿವ ಭವತ್ಯಸ್ಪನ್ದನೋ ಗರ್ಭಃ। ಶೂಲಮಧಿಕಮುಪಜಾಯತೇ। ನ ಚಾವ್ಯಃ ಪ್ರಾದುರ್ಭವನ್ತಿ। ಯೋನಿರ್ನ ಪ್ರಸ್ರವತಿ। ಅಕ್ಷಿಣೀ ಚಾಸ್ಯಾಃ ಸ್ರಸ್ತೇ ಭವತಃ। ತಾಮ್ಯತಿ, ವ್ಯಥತೇ, ಭ್ರಮತೇ, ಶ್ವಸಿತಿ, ಅರತಿಬಹುಳಾ ಚ ಭವತಿ। ನ ಚಾಸ್ಯಾ ವೇಗಪ್ರಾದುರ್ಭಾವೋ ಯಥಾ-ವದುಪಲಭ್ಯತೇ। ಇತ್ಯೇವಂ ಲಕ್ಷಣಾಂ ಸ್ತ್ರಿಯಂ ಮೃತಗರ್ಭೇಯಮಿತಿ ವಿದ್ಯಾತ್ ॥೯॥

ದೀಪಿಕೆ—(ಇ) ಜರಾಯುವಿನ ತಡೆ—

ಹೆರಿಗೆಯ ಮೂರನೆಯ ಅವಸ್ಥೆಯಲ್ಲಿ ವಿವರಿಸಿರುತ್ತೆ.

(ಸು।ಶಾ।ಅ. ೧೦)—(ಈ) ಗರ್ಭಕೋಶದಲ್ಲಿ ಶಿಶುಮರಣ—

ಕಾರಣ—ಗರ್ಭಿಣಿಗೆ ಮಾನಸಿಕ ದುಃಖದಿಂದಲೂ ಬಹಿರ್ಭಾಗದಲ್ಲಿ ಪೆಟ್ಟುಬೀಳುವುದು, ಹಿಂಸೆಯಾಗುವುದು ಮೊದಲಾದ ಕಾರಣಗಳಿಂದಲೂ ಗರ್ಭ ಕೋಶದಲ್ಲೇ ಶಿಶುವು ಸಾಯುತ್ತದೆ.

(ಚ।ಶಾ।)—ಗರ್ಭಿಣಿಯರಿಗೆ ದೋಷಗಳು ಅತಿಯಾಗಿ ಜಮಾಯಿಸುವುದು. ಚುರುಕಾದ, ಬಿಸಿಯಾದ (ಉಷ್ಣವೀರ್ಯಗಳಾದ) ಆಹಾರಗಳನ್ನು ತಿನ್ನುವುದ ರಿಂದಲೂ, ಮಲಮೂತ್ರವಾತಗಳ ವೇಗಗಳನ್ನು ತಡೆಯುವುದರಿಂದಲೂ, ಉಬ್ಬು ತಗ್ಗಾದ ಪ್ರದೇಶಗಳಲ್ಲಿ ಮಲಗುವುದು, ಆಸನಗಳಲ್ಲಿ ಕೂಡುವುದು, ದೇಹವನ್ನು ಹಿಸುಕುವುದು, ಪೆಟ್ಟುಬೀಳುವುದು, ಕೋಪ, ವ್ಯಸನ, ಈರ್ಷ್ಯೆ (ಇತರರ ಅಭಿ ವೃದ್ಧಿ ಸಹಿಸದಿರುವುದು), ಹೆದರಿಕೆ, ನಡುಕ ಇತ್ಯಾದಿ ವ್ಯಾಪಾರಗಳಿಂದಲೂ

ಸಾಹಸ ಕಾರ್ಯಗಳಿಂದಲೂ ವಾತಪ್ರಕೋಪವುಂಟಾಗಿ ಗರ್ಭದಲ್ಲೇ ಶಿಶುವು ಸಾಯುತ್ತದೆ ॥೮॥

(ಚ।ಶಾ।) ಲಕ್ಷಣ—ಆಕೆಯ ಹೊಟ್ಟೆಯು ಚಲಿಸದೆ ಗಟ್ಟಿಯಾಗಿ ಉಬ್ಬಿರುತ್ತದೆ; ತಣ್ಣಗೂ, ಹೊಟ್ಟೆಯಲ್ಲಿ ಕಲ್ಲು ಸೇರಿದಂತೆ ಭಾರವಾಗಿಯೂ, ಅಧಿಕವಾಗಿ ಚುಚ್ಚುತ್ತಲೂ ಇರುತ್ತದೆ. ಪ್ರಸವವೇದನೆಯು ಬರುವುದಿಲ್ಲ. ಯೋನಿಸ್ರಾವವಿರುವುದಿಲ್ಲ (ಯೋನಿಯು ಒಣಗಿ ಬತ್ತಿದಂತಿರುತ್ತದೆ. ಅವಳ ಕಣ್ಣುಗುಡ್ಡೆಗಳು ಜಾರಿ ಗುಳಿಬಿದ್ದಿರುತ್ತವೆ. ಬಳಲಿಕೆ, ದುಃಖ, ತಲೆತಿರುಗು, ಏದುಬ್ಬಸ, ಅಸ್ವಸ್ಥತೆಗಳುಂಟಾಗಿ ವಾತಮೂತ್ರಪುರೀಷಗಳು ಮೊದಲಿನಂತೆ ವಿಸರ್ಜನೆಯಾಗುವುದಿಲ್ಲ. ಈ ಲಕ್ಷಣಗಳು ಕಂಡುಬಂದರೆ ಆಕೆಯ ಉದರದಲ್ಲಿ ಶಿಶುವು ಸತ್ತಿರುವುದೆಂದು ತಿಳಿಯಬೇಕು ॥೯॥

(ಮಾ।ನಿ।)–ಗರ್ಭದಲ್ಲಿ ಶಿಶುವು ಚಲಿಸುವುದಿಲ್ಲ, ಪ್ರಸವವೇದನೆಯುಂಟಾಗುವುದಿಲ್ಲ; ಆಕೆಯ ಮುಖವು ಹೊಗೆಯ ಬಣ್ಣವುಳ್ಳುದ್ದಾಗಿರುತ್ತೆ; ಉಸಿರು ಬಿಟ್ಟರೆ ಹೆಣದ ವಾಸನೆ ಬರುತ್ತದೆ. ಇವು ಹೊಟ್ಟೆಯಲ್ಲೇ ಮಗುವು ಸತ್ತಿದ್ದರೆ ಕಾಣಿಸುವ ಗುರ್ತುಗಳು ॥೧೦॥

(ಅ।ಹೃ।)–ಗರ್ಭಿಣಿಯ ದೇಹದಲ್ಲಿ ದೋಷಗಳು ಅತಿಯಾಗಿ ಪ್ರಕೋಪಿಸುವುದರಿಂದಲೂ, ಆಕೆಯು ಅಪಥ್ಯಭೋಜನಮಾಡುವುದರಿಂದಲೂ ದೈವನಿಯಮದಿಂದಲೂ ಗರ್ಭದಲ್ಲೇ ಮಗುವು ಸಾಯುತ್ತದೆ. ಆಕೆಯ ಹೊಟ್ಟೆಯು ಗಟ್ಟಿಯಾಗಿ ತಣ್ಣಗಿರುತ್ತದೆ; ಅಲುಗಾಡದೆ ಉಬ್ಬಿರುತ್ತದೆ; ನೋವು ಹೆಚ್ಚಾಗಿ ಗರ್ಭಚಲನೆಯಿಲ್ಲದೆ ಆಕೆಗೆ ತಲೆತಿರುಗು, ನೀರಡಿಕೆ, ಉಸಿರನ್ನು ಬಿಗಿಹಿಡಿದು ಬಿಡುವುದು, ಆಯಾಸ, ವ್ಯಥೆ, ಕಣ್ಣುಗುಡ್ಡೆಗಳು ಜಾರಿ ಗುಳಿಬಿದ್ದಿರುವುದು ಪ್ರಸವವೇದನೆಯುಂಟಾಗದಿರುವುದು ಇವು ಗರ್ಭದಲ್ಲಿ ಮಗು ಸತ್ತಿದ್ದರೆ ಕಾಣಬರುವ ಲಕ್ಷಣಗಳು ॥೧೧॥

ಮೂಲ—ಮೃತಗರ್ಭೋದ್ಧಾರಕ್ರಮಃ—

ದುಶ್ಚಿಕಿತ್ಸ್ಯವ್ಯಾಧೇಸ್ತಸ್ಯ ಗರ್ಭಶಲ್ಯಸ್ಯ ಜರಾಯುಪಾತನಂ ಕರ್ಮಸಂಶಮನಮಿತ್ಯಾಹುರೇಕೇ ಮನ್ತ್ರಾದಿಕಮಥರ್ವವೇದವಿಹಿತಮಿತ್ಯೇಕೇ। ಪರಿದೃಷ್ಟಕರ್ಮಣಾ ಶಲ್ಯಹರ್ತ್ರಾ ಹರಣಮಿಪರೇ ॥೧೨॥

(ಅ।ಹೃ।ಶಾ।)—

ಮನ್ತ್ರೈರ್ಯೋಗೈರ್ಜರಾಯ್ಯುಕ್ತೈರ್ಮೂಢಗರ್ಭೋ ನ ಚೇತ್ಪತೇತ್।
ತಸ್ಯಾಃ ಕೋಷ್ಣಾಮ್ಬುಸಿಕ್ತಾಯಾಃ ಪಿಷ್ಟ್ವಾ ಯೋನಿಂ ಪ್ರಲೇಪಯೇತ್ ॥೧೩॥
ಗುಡಂ ಕಿಣ್ವಂ ಸಲವಣಂ ತಥಾನ್ತಃ ಪೂರಯೇನ್ಮುಹುಃ।
ಘೃತೇನ ಕಲ್ಕೀಕೃತಯಾ ಶಾಲ್ಮಲ್ಯತಸಿಪಿಚ್ಛಯಾ ॥೧೪॥

(ಸು।ಶಾ।ಅ।೧೦)—

ಮೃತೇ ಚೋತ್ತಾನಾಯಾ ಆಭುಗ್ನಸಕ್ಥ್ಯಾ ವಸ್ತ್ರಾಧಾರೋನ್ನಮಿತಕಟ್ಯಾ ಧನ್ವನನಗವೃತ್ತಿಕಾಶಾಲ್ಮಲೀಮೃತ್ಸ್ನಘೃತಾಭ್ಯಾಂ ಮ್ರಂಕ್ಷಯಿತ್ವಾ ಹಸ್ತಂ ಯೋನೌ ಪ್ರವೇಶ್ಯ ಗರ್ಭಮಪಹರೇತ್। ತತ್ರ ಪ್ರತಿಲೋಮಮನುಲೋಮಯೇತ್ ॥೧೫॥

ದೀಪಿಕೆ—ಗರ್ಭಾಶಯದಲ್ಲಿರುವ ಮರಣಹೊಂದಿದ ಶಿಶುವನ್ನು ಹೊರಕ್ಕೆ ತೆಗೆಯುವ ಉಪಾಯವು—

(ಚ।ಶಾ।)—ಚಿಕಿತ್ಸೆ ಮಾಡಲು ಅಸಾಧ್ಯವಾದ ಈ ಅವಸ್ಥೆಯಲ್ಲಿ ಜರಾಯು ಪತನವನ್ನು ಮಾಡಿಸಿದರೆ ಶಮನವಾಗುತ್ತದೆಂದು ಕೆಲವು ವೈದ್ಯರ ಮತ; ಅಥರ್ವಣವೇದೋಕ್ತ ವಿಹಿತ ಮಂತ್ರಗಳನ್ನು ಶ್ರವಣ ಮಾಡಿಸಿದರೆ ಹೊರಕ್ಕೆ ಬರುತ್ತದೆಂದು ಮತ್ತೆ ಕೆಲವರ ಮತ್ತು ಕುಶಲರಾದ ಶಸ್ತ್ರವೈದ್ಯರಿಂದ ಹೊರಕ್ಕೆ ತೆಗೆಸಬೇಕೆಂದು ಮತ್ತೆ ಕೆಲವರ ಮತ ॥೧೩॥

(ಅ।ಹೃ।ಶಾ।)—ಅಥರ್ವಣವೇದದಲ್ಲಿ ಜರಾಯುಪತನ ಪ್ರಕರಣದಲ್ಲಿ ಉಕ್ತ ವಾದ ಮಂತ್ರಶ್ರವಣದಿಂದಲೂ ಮೃತಗರ್ಭ ಮತ್ತು ಮೂಢಗರ್ಭಗಳು ಹೊರಕ್ಕೆ ಪ್ರಸವವಾಗದಿದ್ದರೆ ಆಗ ಗರ್ಭಿಣಿಯನ್ನು ಸುಖೋಷ್ಣವಾದ ನೀರಿನಿಂದ ಸ್ನಾನ ಮಾಡಿಸಿ ಬೆಲ್ಲ, ಮದ್ಯದ ಹಿಂಡಿ, ಮತ್ತು ಸೈಂಧವ ಲವಣಗಳನ್ನು ಅರೆದು ಆಕೆಯ ಯೋನಿಗೆ ಲೇಪಿಸಿ ಬೂರಗದ ಮೇಣ, ಶೀಮೆ ಅಗಸೆ ಬೀಜಗಳ ಕಲ್ಕವನ್ನು ತುಪ್ಪ ದಿಂದ ಕಲಸಿ ಯೋನಿಯೊಳಕ್ಕೆ ತುಂಬಬೇಕು ॥೧೪॥

(ಸು।ಶಾ।ಅ।೧೦)—ಗರ್ಭಾಶಯದಲ್ಲೇ ಶಿಶುವು ಸತ್ತಿದ್ದರೆ ಆ ಗರ್ಭಿಣಿ ಯನ್ನು ಅಂಗತ್ತಲಾಗಿ ಮಲಗಿಸಿ ಅವಳ ಸೊಂಟದ ಕೆಳಕ್ಕೆ ಮೆತ್ತಗಿರುವ ಬಟ್ಟೆಯ ಗಂಟನ್ನು ಟೇಕಾ ಇರಿಸಿ ತೊಡೆಗಳನ್ನು ಮಡಿಸಿಸಬೇಕು. ಧನ್ವವೃಕ್ಷ (ದಿಂಡಲು)ದ ತೊಗಟೆ, ನಾಯಿಬೇಲದ ತೊಗಟೆ, ಬೂರಗದ ಮೇಣ ಇವುಗಳ ಕಲ್ಕವನ್ನು ತುಪ್ಪ ಮಿಶ್ರಮಾಡಿ ಕೈಗಳಿಗೆ ಬಳಿದು ಬಿಸಿನೀರಿನಿಂದ ತೊಳೆದು ಕೈಗಳು ಮೃದುವಾಗಿ ಜಾರಿಹೋಗುವಂತಾದರೆ ನುಣುಪಾದಹಾಗೆ ಕೈಯ್ಯನ್ನು ಉಪಾಯವಾಗಿ ಯೋನಿಯೊಳಕ್ಕೆ ತೂರಿಸಿ ಶಿಶುವನ್ನು ಹೊರಕ್ಕೆ ತೆಗೆದಿಡ ಬೇಕು. ಶಿಶುವಿನ ಅಂಗಗಳು ವ್ಯತ್ಯಾಸವಾಗಿದ್ದು ತಡೆದರೆ ಅವನ್ನು ಸರಿಪಡಿಸಿದ ಮೇಲೆ ಹೊರಕ್ಕೆ ಎಳೆದುಕೊಳ್ಳಬೇಕು ॥೧೫॥

ಮೂಲ—(ಸು।ನಿ।ಅ।೮)—(ಉ) ಮೂಢಗರ್ಭಃ—

ಗ್ರಾಮ್ಯಧರ್ಮಯಾನವಾಹನಾಧ್ವಗಮನಪ್ರಸ್ಖಲನಪ್ರಪತನಪ್ರಪೀಡನಧಾವ-ನಾಭಿಘಾತವಿಷಮಶಯನಾಸನೋಪವಾಸವೇಗವಿಘಾತಾತಿರೂಕ್ಷಕಟುತಿಕ್ತ-ಭೋಜನಶೋಕಾತಿಕ್ಷಾರಸೇವನಾತಿಸಾರವಮನವಿರೇಚನಪ್ರೇಙ್ಖೋಲನಾಜೀರ್ಣ-ಗರ್ಭಶಾತನಪ್ರಭೃತಿಭಿರ್ವಿಶೇಷೈರ್ಬನ್ಧನಾನ್ಮುಚ್ಯತೇ ಗರ್ಭಃ ಫಲಮಿ-ವ ವೃನ್ತಬನ್ಧನಾದಭಿಘಾತವಿಶೇಷೈಃ । ಸವಿಮುಕ್ತಬನ್ಧನೋ ಗರ್ಭಾಶಯಮತಿ-ಕ್ರಮ್ಯ ಯಕೃತ್ಪ್ಲೀಹಾನ್ತ್ರವಿವರೈರವಸ್ರಂಸಮಾನಃ ಕೋಷ್ಠಸಂಕ್ಷೋಭಮಾಪಾ-ದಯತಿ। ತಸ್ಯಾ ಉದರಸಂಕ್ಷೋಭಾದ್ವಾಯುರಪಾನೋ ಮೂಢಃ ಪಾರ್ಶ್ವಬಸ್ತಿ-ಶೀರ್ಷೋದರಯೋನಿಶೂಲಾನಾಹಮೂತ್ರಸಙ್ಗಾನಾಮನ್ಯತಮಮಾಪಾದ್ಯ ಗರ್ಭಂ ಚ್ಯಾವಯತಿ ತರುಣಂ ಶೋಣಿತಸ್ರಾವೇಣ। ತಮೇವ ಕದಾಚಿದ್ವಿವೃದ್ಧಮ-ಸಮ್ಯಗಾಗತಮಪತ್ಯಪಥಮನುಪ್ರಾಪ್ತಮನಿರಸ್ಯಮಾನಂ ವಿಗುಣಾಪಾನಸಂಮೋ-ಹಿತಂ ಗರ್ಭಂ ಮೂಢಗರ್ಭಮಿತ್ಯಾಚಕ್ಷತೇ ॥೧೬॥

ದೀಪಿಕೆ—(ಉ) ಮೂಢಗರ್ಭ—ಶಿಶುವಿನ ಅಂಗಗಳು ಯೋನಿಯು ಹೊರಗೆ ಬರಲು ತಡೆಯುಂಟಾಗುವುದು.—

(ಸು। ನಿ। ಅ। ೮)–ಗರ್ಭಿಣಿಯು ಮೈಥುನವನ್ನಾಚರಿಸುವುದು, ವಾಹನಗಳಲ್ಲಿ ಕುಳಿತು ಸಂಚರಿಸುವುದು, ದಾರಿನಡೆಯುವುದು, ಎಡವುವುದು, ಬೀಳುವುದು, ಶರೀರಕ್ಕೆ ಎಡಬಲಪಾರ್ಶ್ವಗಳಿಂದ ಬಲವಾಗಿ ಪೆಟ್ಟಾಗುವುದು, ಓಡುವುದು, ಉಬ್ಬುತಗ್ಗು ಭೂಮಿಗಳಲ್ಲೂ ಆಸನಗಳಲ್ಲೂ ಕೂಡುವುದು, ಮಲಗುವುದು, ಉಪವಾಸ ಮಾಡುವುದು, ಮಲಮೂತ್ರಾದಿ ವೇಗಗಳನ್ನು ತಡೆಯುವುದು, ಜಿಡ್ಡಿಲ್ಲದ ಖಾರ ಮತ್ತು ಕಹಿಪದಾರ್ಥಗಳನ್ನು ಹೆಚ್ಚಾಗಿ ತಿನ್ನುವುದು, ಅತಿಯಾಗಿ ಸೊಪ್ಪುಗಳನ್ನೂ ಕ್ಷಾರ ಪದಾರ್ಥಗಳನ್ನೂ ಉಪಯೋಗಿಸುವುದು, ಅತಿಯಾಗಿ ವಮನ ಭೇದಿಗಳಾಗುವುದು, ಉಯ್ಯಾಲೆಯಲ್ಲಿ ಕೂತುಕೊಂಡು ಹಿಂದಕ್ಕೂ ಮುಂದಕ್ಕೂ ಬಲವಾಗಿ ತೂಗಿಕೊಳ್ಳುವುದು, ಆಮಗರ್ಭಸ್ರಾವ ಮತ್ತು ಪಾತವಾಗುವುದು ಇವೇ ಮೊದಲಾದ ಕಾರಣಗಳಿಂದ ಗರ್ಭದಲ್ಲಿರುವ ಶಿಶುವಿಗೆ ತೊಂದರೆಯಾಗಿ ಕಳಿತು ಪಕ್ವವಾದ ಹಣ್ಣು ತೊಟ್ಟಿನಿಂದ ಕಳಚಿಬೀಳುವಂತೆ ಶಿಶುವು ಗರ್ಭಾಶಯದಿಂದ ಹೊರಕ್ಕೆಬಂದು ಯಕೃತ್ಪ್ಲೀಹಕರುಳುಗಳ ಮಧ್ಯೆ ಜಾರಿಬಿದ್ದು ಹೊಟ್ಟೆಯು ಬಿಗಿಯುವಂತೆ ಆಗುತ್ತದೆ. ಮತ್ತು ಅಪಾನವಾಯುವು ತಡೆಯಲ್ಪಟ್ಟು ಪಕ್ಕೆಗಳು, ಮೂತ್ರಾಶಯ, ಹೊಟ್ಟೆ ಮತ್ತು ಯೋನಿಗಳಲ್ಲಿ ಶೂಲೆಯೂ ಹೊಟ್ಟೆಯುಬ್ಬರ, ಮೂತ್ರದ ತಡೆಯೂ ಉಂಟಾಗಿ ಗರ್ಭವು ಹೊರಕ್ಕೆ ತಳ್ಳಲ್ಪಡುತ್ತದೆ, ತರುಣಾವಸ್ಥೆಯಲ್ಲಿದ್ದರೆ ಗರ್ಭಸ್ರಾವವಾಗುತ್ತದೆ. ಈ ರೀತಿಯಾಗಿ ಅಪಾನವಾಯುವಿನ ವೈಗುಣ್ಯದಿಂದ ಗರ್ಭಸ್ಥಶಿಶುವು ತಡೆಯಲ್ಪಟ್ಟು ಜನನೇನ್ದ್ರಿಯದ ಮೂಲಕ ನೇರವಾಗಿ ಪ್ರಸವವಾಗದೆ ನಿಂತರೆ ಅದನ್ನು ಮೂಢಗರ್ಭವೆಂದು ಕರೆಯುತ್ತಾರೆ ॥೧೭॥

ಮೂಲ—(ಸು। ನಿ। ಅ। ೮) ಮೂಢಗರ್ಭಗತಯಃ—

ತತ್ರ ಊರ್ಧ್ವಬಾಹುಶಿರಃ ಪಾದೋ ಯೋ ಯೋನಿಮುಖಂ ನಿರುಣದ್ಧಿ ಕೀಲ ಇವ ಸ ಕೀಲಃ। ನಿಸ್ಸೃತಹಸ್ತಪಾದಶಿರಾಃ ಕಾಯಸಙ್ಗೀ ಪ್ರತಿಖುರಃ। ಯಸ್ತು ನಿರ್ಗಚ್ಛತ್ಯೇಕಶಿರೋಭುಜಃ ಸ ಬೀಜಕಃ। ಪರಿಘ ಇವ ಯೋನಿಮುಖಮಾವೃತ್ಯ ತಿಷ್ಠೇತ್ ಸ ಪರಿಘ ಇತಿ ಚತುರ್ವಿಧೋ ಭವತೀತ್ಯೇಕೇ ಭಾಷನ್ತೇ। ತತ್ತು ನ ಸಮ್ಯಕ್। ಸ ಯದಾ ವಿಗುಣಾನಿಲಪ್ರಪೀಡಿತೋಽಪತ್ಯಪಥಮನೇಕಧಾ ಪ್ರತಿಪದ್ಯತೇ ತದಾ ಸಂಖ್ಯಾ ಹೀಯತೇ। ತತ್ರ ಕಶ್ಚಿತ್ ದ್ವಾಭ್ಯಾಂ ಸಕ್ಥಿಭ್ಯಾಂ ಯೋನಿಮುಖಂ ಪ್ರತಿಪದ್ಯತೇ। ಕಶ್ಚಿದಾಭುಗ್ನೈಕಸಕ್ಥಿರೇಕೇನ (ಸಕ್ಥ್ನಾ ಯೋನಿಮುಖಂ ಪ್ರತಿಪದ್ಯತೇ)। ಕಶ್ಚಿದಾಭುಗ್ನಸಕ್ಥಿಶರೀರಃ ಸ್ಫಿಗ್ದೇಶೇನ ತಿರ್ಯಗಾಗತಃ। ಕಶ್ಚಿದುರಃ ಪಾರ್ಶ್ವಪೃಷ್ಠಾನಾಮನ್ಯತಮೇನ ಯೋನಿದ್ವಾರಂ ಪಿಧಾಯಾಽವತಿಷ್ಠತೇ। ಅನ್ತಃಪಾರ್ಶ್ವಾಪವೃತ್ತಶಿರಾಃ ಕಶ್ಚಿದೇಕೇನ ಬಾಹುನಾ। ಕಶ್ಚಿದಾಭುಗ್ನಶಿರಾ ಬಾಹುದ್ವಯೇನ। ಕಶ್ಚಿದಾಭುಗ್ನಮಧ್ಯೋ ಹಸ್ತಪಾದಶಿರೋಭಿಃ। ಕಶ್ಚಿದೇಕೇನ ಸಕ್ಥ್ನಾ ಯೋನಿಮುಖಮಭಿಪ್ರತಿಪದ್ಯತೇಽಪರೇಣ ಪಾಯುಮ್। ಇತ್ಯಷ್ಟಧಾ ಮೂಢಗರ್ಭಗತಿರುದ್ದಿಷ್ಟಾ ಸಮಾಸೇನ ॥೧೭॥

(ವಾ। ನಿ।)—

ಗರ್ಭೋಽಭಿಘಾತವಿಷಮಾಶನಪೀಡನಾದ್ಯೈಃ ಪಕ್ವಂ ದ್ರುಮಾದಿವ ಫಲಂ ಪತತಿ ಕ್ಷಣೇನ। ಮೂಢಃ ಕರೋತಿ ಪವನಃ ಖಲು ಮೂಢಗರ್ಭಂ ಶೂಲಂ ಚ ಯೋನಿಜಠರಾದಿಷು ಮೂತ್ರಸಙ್ಗಮ್ ॥೧೮॥

ಭುಗ್ನೋಽನಿಲೇನ ವಿಗುಣೇನ ತತಃ ಸ ಗರ್ಭಃ ಸಂಖ್ಯಾಮತೀತ್ಯ ಬಹುಧಾ ಸಮುಪೈತಿ ಯೋನಿಮ್। ದ್ವಾರಂ ನಿರುಧ್ಯ ಶಿರಸಾ ಜಠರೇಣ ಕಶ್ಚಿತ್ ಕಶ್ಚಿಚ್ಛರೀರಪರಿವರ್ತಿತಕುಬ್ಜದೇಹಃ ॥೧೯॥

ಏಕೇನ ಕಶ್ಚಿದಪರೇಣ ಭುಜದ್ವಯೇನ ತಿರ್ಯಗ್ಗತೋ ಭವತಿ ಕಶ್ಚಿದವಾಙ್ಮುಖೋಽನ್ಯಃ। ಪಾರ್ಶ್ವಾಪವೃತ್ತಗತಿರೇತಿ ತಥೈವ ಕಶ್ಚಿದಿತ್ಯಷ್ಟಧಾ ಗತಿರಿಯಂ ಹ್ಯಪರಾ ಚತುರ್ಧಾ ॥೨೦॥

ಸಂಕೀಲಕಃ ಪ್ರತಿಖುರಃ ಪರಿಘೋಽಥ ಬೀಜಸ್ತೇಷೂರ್ಧ್ವಬಾಹುಚರಣೈಃ ಶಿರಸಾ ಚ ಯೋನಿಮ್। ಸಙ್ಗೀ ಚ ಯೋ ಭವತಿ ಕೀಲಕವತ್ ಸಕೀಲೋ ದೃಶ್ಯೈಃ ಖುರೈಃ ಪ್ರತಿಖುರಂ ಸ ಹಿ ಕಾಯಸಙ್ಗೀ ॥೨೧॥

ಗಚ್ಛೇದ್ಭುಜದ್ವಯಶಿರಾಃ ಸ ಚ ಬೀಜಕಾಖ್ಯೋ ಯೋನೌ ಸ್ಥಿತಃ ಸ ಪರಿಘಃ ಪರಿಘೇಣ ತುಲ್ಯಃ।

ದೀಪಿಕೆ—(ಸು।ನಿ।ಅ।೮)—ಮೂಢಗರ್ಭಗತಿಗಳು——

ಕೈ ಕಾಲು ತಲೆಗಳನ್ನು ಮೇಲಕ್ಕೆ ಜೋಡಿಸಿ ಯೋನಿಯೊಳಕ್ಕೆ ತಂದು ಗೂಟದಂತೆ ಚಾಚಿದ್ದರೆ ಕೀಲವೆಂಬ ಸಂಜ್ಞೆ; ಕೈ ಕಾಲು ತಲೆಗಳನ್ನು ಸೇದಿಕೊಂಡು ಎದೆಯನ್ನಾಗಲೀ ಬೆನ್ನನ್ನಾಗಲೀ ಯೋನಿಮಾರ್ಗಕ್ಕೆ ಚಾಚಿಕೊಂಡಿದ್ದರೆ ಪ್ರತಿಖುರವೆಂದೂ; ಒಂದು ತೋಳನ್ನೂ ತಲೆಯನ್ನೂ ಯೋನಿಯಿಂದ ಹೊರಕ್ಕೆ ಚಾಚಿದ್ದರೆ ಬೀಜಕವೆಂದೂ; ಎದೆಯನ್ನಾಗಲೀ ಬೆನ್ನನ್ನಾಗಲೀ ಯೋನಿಗೆ ಅಡ್ಡಲಾಗಿ ಚಾಚಿ ಅಗಣಿಯಂತೆ ಇದ್ದರೆ ಪರಿಘವೆಂದೂ ಈ ರೀತಿಯಾಗಿ ಮೂಢಗರ್ಭಗತಿಗಳು ನಾಲ್ಕು ಪ್ರಕಾರವೆಂದು ಕೆಲವು ವೈದ್ಯರ ಮತವು. ಇದು ಸರಿಯಲ್ಲ; ಏಕೆಂದರೆ ಅಪಾನವಾಯುವಿನ ವೈಗುಣ್ಯದಿಂದ ಗರ್ಭಸ್ಥಶಿಶುವಿನ ವಿವಿಧ ದೇಹಭಾಗಗಳು ಪ್ರಸವೋನ್ಮುಖವಾಗಿ ಬಂದು ನಿಲ್ಲಬಹುದಾದಕಾರಣ ಲೆಕ್ಕವಿಲ್ಲದಷ್ಟು ಪ್ರಕಾರ ಮೂಢಗರ್ಭದ ಗತಿಗಳಾಗಬಹುದು. ಆದರೆ ಚಿಕಿತ್ಸಾ ಸೌಕರ್ಯಕ್ಕಾಗಿ ಮೂಢಗರ್ಭಗತಿಗಳನ್ನು ಎಂಟು ವಿಧಗಳಾಗಿ ವಿಂಗಡಿಸಬಹುದೆಂದು ಸುಶ್ರುತಾಚಾರ್ಯರ ಮತವು. ಹೇಗೆಂದರೆ:—

೧. ಯೋನಿಮುಖದಲ್ಲಿ ಎರಡು ಕಾಲುಗಳು ಹೊರಟಿರುವುದು. ೨. ಯೋನಿಯೊಳಗಡೆಯಲ್ಲಿ ಒಂದು ಕಾಲನ್ನು ಮಡಿಸಿಟ್ಟುಕೊಂಡು ಮತ್ತೊಂದು ಕಾಲನ್ನು ಯೋನಿಯ ಹೊರಕ್ಕೆ ಚಾಚಿರುವುದು. ೩. ಗರ್ಭಾಶಯದೊಳಗಡೆ ಕಾಲುದೇಹಗಳನ್ನು ಅಡ್ಡಲಾಗಿ ಮಾಡಿಕೊಂಡು ಒಂದು ಪಿರ್ರೆಯು ಯೋನಿ ದ್ವಾರಕ್ಕೆ ಚಾಚಿದಂತಿರುವುದು. ೪. ಎದೆ, ಪಕ್ಕೆ, ಬೆನ್ನುಗಳಲ್ಲೊಂದು ಯೋನಿ ದ್ವಾರಕ್ಕೆ ಅಡ್ಡಲಾಗಿ ಚಾಚಿರುವುದು. ೫. ಯೋನಿಯಿಂದ ಹೊರಕ್ಕೆ ಒಂದು ತೋಳನ್ನು ಚಾಚಿಕೊಂಡು ಒಳಗಡೆಯಲ್ಲಿ ತಲೆಯನ್ನು ಪಕ್ಕಕ್ಕೆ ತಿರುಗಿಸಿರುವುದು.

೬. ತಲೆಯನ್ನು ಯೋನಿಯ ಒಳಗೇ ಸೊಟ್ಟುಮಾಡಿಕೊಂಡು ಎರಡು ತೋಳು ಗಳನ್ನೂ ಯೋನಿಯ ಹೊರಕ್ಕೆ ಚಾಚಿರುವುದು ೭. ಮಧ್ಯದೇಹವನ್ನು ಮೇಲಕ್ಕೆ ಮಾಡಿ ಕೈ ಕಾಲುಗಳನ್ನು ಯೋನಿದ್ವಾರಕ್ಕೆ ಚಾಚಿರುವುದು. ೮. ಒಂದು ಕಾಲನ್ನು ಯೋನಿದ್ವಾರದಿಂದ ಹೊರಕ್ಕೆ ಚಾಚಿ ಮತ್ತೊಂದನ್ನು ಗುದದಕಡೆಗೆ ತಿರುಗಿಸಿಕೊಂಡಿರುವುದು ॥೧೭॥

(ಮಾ।ನಿ।)—

ಗರ್ಭಿಣಿಗೆ ಪೆಟ್ಟು ಬೀಳೋಣ, ವಿಷಮವಾದ ಆಹಾರ ಸೇವನೆ, ಹೊಟ್ಟೆ ಯನ್ನು ಬಲವಾಗಿ ಹಿಸುಗುವುದು ಇತ್ಯಾದಿ ಕಾರಣಗಳಿಂದ ಪಕ್ವವಾದ ಹಣ್ಣು ತೊಟ್ಟಿನಿಂದ ಕಳಚಿ ಬೀಳುವಂತೆ ಗರ್ಭಾಶಯದಿಂದ ಜಾರಿ ಬಂದ ಗರ್ಭವು ವಿಗುಣವಾದ ಅಪಾನ ವಾಯುವಿನಿಂದ ತಡೆಯಲ್ಪಟ್ಟು ಹೊಟ್ಟೆಯ ನೋವನ್ನೂ ಮೂತ್ರದ ತಡೆಯನ್ನೂ ಉಂಟುಮಾಡುತ್ತದೆ. ಈ ರೀತಿಯಾಗಿ ವಿಗುಣಾ ಪಾನದಿಂದ ಸಂಕೋಚಹೊಂದಿದ ದೇಹವುಳ್ಳ ಶಿಶುವು ತಲೆ, ಹೊಟ್ಟೆ, ದೇಹ ಇವನ್ನು ಸಣ್ಣಗೆ ಮಾಡಿ ಗರ್ಭಾಶಯದಲ್ಲಿ ಅಡ್ಡಲಾಗಿ ತಿರುಗಿ ಒಂದು ಅಥವಾ ಎರಡು ಕೈಗಳಿಂದಲೂ, ಪಕ್ಕೆ, ಬೆನ್ನುಗಳಿಂದಲೂ ಯೋನಿದ್ವಾರವನ್ನು ಮುಚ್ಚುವುದರಿಂದ ಕ್ರಮವಾಗಿ ಎಂಟು ವಿಧಗಳಾದ ಗರ್ಭಗತಿಗಳುಂಟಾಗುತ್ತವೆ. ಯಾವುವೆಂದರೆ : ೧. ಯೋನಿದ್ವಾರದಲ್ಲಿ ತಲೆ ಶಿಕ್ಕಿರುವುದು, ೨. ಹೊಟ್ಟೆ ಬಂದಿರುವುದು, ೩. ದೇಹವನ್ನು ಸಂಕೋಚಿಸಿಕೊಂಡು ಒಂದು ತೋಳನ್ನು ಯೋನಿಯಿಂದ ಹೊರಕ್ಕೆ ಚಾಚಿರುವುದು, ೪. ಎರಡು ತೋಳುಗಳನ್ನು ಚಾಚಿರುವುದು, ೫ ಶರೀರ ವನ್ನು ಯೋನಿಗೆ ಅಡ್ಡಮಾಡಿ ಮುಖವನ್ನು ಮೇಲ್ಗಡೆಗೂ, ೬. ಬೆನ್ನನ್ನು ಮೇಲ್ಗಡೆಗೂ ಮಾಡಿರುವುದು, ೭ ಮತ್ತು ೮. ಪಕ್ಕೆಗಳಲ್ಲಿ ಬಂದು ದೇಹವನ್ನು ಸೊಟ್ಟು ಮಾಡಿರುವುದು. ಇವಲ್ಲದೆ ಮತ್ತೆ ನಾಲ್ಕು ವಿಧಗಳಾದ ಮೂಢಗರ್ಭ ಗತಿಗಳಿವೆ—ಕೀಲಃ, ಪ್ರತಿಖುರಃ, ಬೀಜಕಃ, ಪರಿಘಗಳು : ಕೈಕಾಲು ತಲೆಗಳನ್ನು ಸೇರಿಸಿ ಗೂಟದಂತೆ ಯೋನಿದ್ವಾರಕ್ಕೆ ತಡೆಗಟ್ಟಿದರೆ ಕೀಲಕವು ; ದೇಹವು ಅಡ್ಡ ಲಾಗಿ ಗರ್ಭಾಶಯದೊಳಗಿದ್ದು ಕೈಯಾಗಲೀ ಕಾಲಾಗಲೀ ಯೋನಿಯ ಹೊರ ಗಡೆಗೆ ಚಾಚಿಕೊಂಡಿದ್ದರೆ ಪ್ರತಿಖುರವು ; ಎರಡು ತೋಳುಗಳೂ ತಲೆಯೂ ಯೋನಿದ್ವಾರದಿಂದ ಹೊರಕ್ಕೆ ಬಂದಿದ್ದರೆ ಬೀಜಕವು ; ಅಗಣಿಯಂತೆ ಗರ್ಭ ಶರೀರವು ಯೋನಿದ್ವಾರಕ್ಕೆ ಅಡ್ಡಲಾಗಿ ಬಂದು ಚಾಚಿಕೊಂಡಿದ್ದರೆ ಪರಿಘವು ॥೧೮–೨೧॥

ಮೂಲ—(ಸು।ಚಿ।ಅ।೧೫)—ಮೂಢಗರ್ಭಚಿಕಿತ್ಸಾ—

ತತ್ರ ದ್ವಾವನ್ತ್ಯಾವಸಾಧ್ಯೌ ಮೂಢಗರ್ಭೌ। ಶೇಷಾನಪಿ ವಿಪರೀತೇನ್ದ್ರಿಯಾರ್ಥಾಕ್ಷೇಪಕಯೋನಿಭ್ರಂಶಸಂವರಣಮಕ್ಕಲ್ಲಶ್ವಾಸಕಾಸಭ್ರಮನಿಪೀಡಿತಾಂ ಪರಿಹರೇತ್ ॥೨೨॥

ನಾತಃ ಕಷ್ಟತಮಮಸ್ತಿ ಯಥಾ ಮೂಢಗರ್ಭಶಲ್ಯೋದ್ಧರಣಮ್। ಅತ್ರ ಹಿ ಯೋನಿಯಕೃತ್ಪ್ಲೀಹಾನ್ತ್ರವಿವರಗರ್ಭಾಶಯಾನಾಂ ಮಧ್ಯೇ ಕರ್ಮ ಕರ್ತವ್ಯಂ

ಸ್ಪರ್ಶೇನ । ಉತ್ಕರ್ಷಣಾಪಕರ್ಷಣಸ್ಥಾನಾಪವರ್ತನಭೇದನಛೇದನಪೀಡನ-ರ್ಜೂಕರಣದಾರಣಾನಿ ಚ ಏಕಹಸ್ತೇನ ಗರ್ಭಂ ಗರ್ಭಿಣೀಂ ಚಾಪ್ಯಹಿಂಸತಾ। ತಸ್ಮಾದಧಿಪತಿಮಾಪೃಚ್ಛ್ಯ ಪರಂ ಚ ಯತ್ನಮಾಸ್ಥಾಯೋಪಕ್ರಮೇತ್ ॥೨೩॥

ತತ್ರಾಷ್ಟವಿಧಾಸ್ವಪಿ ಮೂಢಗರ್ಭಗತಿಷು ತ್ರಯಃ ಸಙ್ಗಾ ಭವನ್ತಿ ಶಿರಸೋ ವೈಗುಣ್ಯಾದಂಸಯೋರ್ಜಘನಸ್ಯ ವಾ। ಜೀವತಿ ತು ಗರ್ಭೇ ಸೂತಿಕಾಗರ್ಭ-ನಿರ್ಹರಣೇ ಪ್ರಯತೇತ। ನಿರ್ಹರ್ತುಮಶಕ್ಯೇ ಚ್ಯಾವನಾನ್ಮನ್ತ್ರಾನುಪಶ್ರಾವ ಯಾತ್ ॥೨೪॥

ತಾನ್ ವಕ್ಷ್ಯಾಮಃ—

ಇಹಾಮೃತಂ ಚ ಸೋಮಶ್ಚ ಚಿತ್ರಭಾನುಶ್ಚ ಭಾಮಿನಿ ।
ಉಚ್ಚೈಃಶ್ರವಾಶ್ಚ ತುರಗೋ ಮನ್ದಿರೇ ನಿವಸನ್ತು ತೇ ॥೨೫॥

ಇದಮಮೃತಮಪಾಂ ಸಮುದ್ಧೃತಂ ವೈ ತವ ಲಘು ಗರ್ಭಮಿಮಂ ಪ್ರಮುಂಚತು ಸ್ತ್ರೀ । ತದನಲಪವನಾರ್ಕವಾಸವಾಸ್ತೇ ಸಹಲವಣಾಮ್ಬುಧರೈರ್ದಿಶನ್ತು ಶಾನ್ತಿಮ್ ॥೨೬॥

ಮುಕ್ತಾಃ ಪಾಶಾ ವಿಪಾಶಶ್ಚ ಮುಕ್ತಾಸ್ಸೂರ್ಯೇಣ ರಶ್ಮಯಃ ।
ಮುಕ್ತಸ್ಸರ್ವಭಯಾದ್ಗರ್ಭ ಏಹ್ಯೇಹಿ ಮಾ ಚಿರಂ ತಿಷ್ಠ ಸ್ವಾಹಾ ॥೨೭॥

ಔಷಧಾನಿ ಚ ವಿದಧ್ಯಾದ್ಯಥೋಕ್ತಾನಿ ॥೨೮॥

ವೃಥಾಭೂತೇ ಸತಿ ತತ್ರ—

೧. ಸಕ್ಥಿಭ್ಯಾಮಾಗತಮನುಲೋಮಮೇವಾಞ್ಛೇತ್ ।
೨. ಏಕಸಕ್ಥ್ನಾ ಪ್ರಸನ್ನಸ್ಯೇತರಸಕ್ಥಿ ಪ್ರಸಾರ್ಯಾಪಹರೇತ್ ।
೩. ಸ್ಫಿಗ್ದೇಶೇನಾಗತಸ್ಯ ಸ್ಫಿಗ್ದೇಶಂ ಪ್ರಪೀಡ್ಯೋರ್ಧ್ವಮುತ್ಕ್ಷಿಪ್ಯ ಸಕ್ಥಿನೀ ಪ್ರಸಾರ್ಯಾಪಹರೇತ್ ।
೪. ತಿರ್ಯಗಾಗತಸ್ಯ ಪರಿಘಸ್ಯೇವ ತಿರಶ್ಚೀನಸ್ಯ ಪಶ್ಚಾದೂರ್ಧ್ವಮುತ್ಕ್ಷಿಪ್ಯ ಪೂರ್ವಾರ್ಧಮುಪತ್ಯಪಥಂ ಪ್ರತ್ಯಾರ್ಜವಮಾನೀಯಾಪಹರೇತ್ ।
೫. ಪಾರ್ಶ್ವಾಪವೃತ್ತಶಿರಸಮಂಸಂ ಪ್ರಪೀಡ್ಯೋರ್ಧ್ವಮುತ್ಕ್ಷಿಪ್ಯ ಶಿರೋಽಪತ್ಯ-ಪಥಮಾನೀಯಾಪಹರೇತ್।
೬. ಬಾಹುದ್ವಯಪ್ರತಿಪನ್ನಸ್ಯೋರ್ಧ್ವಮುತ್ಕ್ಷಿಪ್ಯಾಂಸೌ ಶಿರೋಽನುಲೋಮ-ಮಾನೀಯಾಪಹರೇತ್ ।
೭-೮. ದ್ವಾವನ್ತ್ಯಾವಸಾಧ್ಯೌ ಮೂಢಗರ್ಭೌ ॥೨೯॥

ದೀಪಿಕೆ—(ಸು।ಚಿ।ಅ।೧೫)——ಮೂಢಗರ್ಭಚಿಕಿತ್ಸೆ—

ಕಡೆಯವಾದ ೭-೮ನೇ ಪ್ರಕಾರಗಳ ಮೂಢಗರ್ಭಗಳು ಅಸಾಧ್ಯಗಳು. ಉಳಿದ ವಿಧಗಳೂ ವಿಪರೀತವಾದ ಇಂದ್ರಿಯಾರ್ಥಗಳಿಂದಲೂ (ಕಿವಿ, ಚರ್ಮ, ಕಣ್ಣು, ನಾಲಿಗೆ, ಮೂಗುಗಳು ಹೆಚ್ಚುಕಡಿಮೆಯಾಗಿ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಗುಣಗಳನ್ನು ಅಕ್ರಮದಿಂದ ಸೇವಿಸುತ್ತಿದ್ದರೆ), ಆಕ್ಷೇಪಕವಾತ, ಯೋನಿ ಭ್ರಂಶ, ಯೋನಿದ್ವಾರವು ಸಂಕುಚಿಸಿರುವುದು, ಮಕ್ಕಲ್ಲ, ಉಬ್ಬಸ, ಕೆಮ್ಮು, ಶಿರೋಭ್ರಮಣವ್ಯಾಧಿಗಳಿಂದ ಪೀಡಿತಗಳಾಗಿದ್ದರೆ ಅಸಾಧ್ಯವೆಂದೇ ತಿಳಿಯಬೇಕು.

ಈ ಮೂಢಗರ್ಭರೂಪದ ಶಲ್ಯಕ್ಕಿಂತಲೂ ಬೇರೆಯಾದ ಶರೀರದಿಂದ ಹೊರಕ್ಕೆ ತೆಗೆಯಬೇಕಾದ ಕಷ್ಟತರಶಲ್ಯವು ಮತ್ತೊಂದಿರುವುದಿಲ್ಲ. (ಮೂಢ

ಗರ್ಭಹರಣಮಾಡುವುದು ಅತ್ಯಂತ ಕಷ್ಟತರದ ಚಿಕಿತ್ಸೆ). ಏಕೆಂದರೆ—ಯೋನಿ' ಯಕೃತ್, ಪ್ಲೀಹ, ಕರಳು, ಗರ್ಭಾಶಯಗಳ ಮಧ್ಯೆ ಜಾರಿ ಬಿದ್ದಿರುವ ಶಿಶುವನ್ನು ಬರಿಯ ಕೈಯಿಂದಲೇ ಮುಟ್ಟಿ ಸರಿಪಡಿಸಬೇಕು. ಶಿಶುವಿಗೂ ಗರ್ಭಿಣಿಗೂ ಹಿಂಸೆಯಾಗದಂತೆ ವೈದ್ಯನು ಜಾಗರೂಕತೆಯಿಂದ ತನ್ನ ಒಂದೇ ಕೈಯನ್ನು ಗರ್ಭಿಣಿಯ ಯೋನಿಯೊಳಕ್ಕೆ ನುಗ್ಗಿಸಿ ಮಗುವನ್ನು ಸಂದರ್ಭಕ್ಕೆ ತಕ್ಕಂತೆ ಮೇಲಕ್ಕೂ ಕೆಳಕ್ಕೂ ತಿರುಗಿಸುವುದೂ, ಒಡೆಯುವುದು, ಕತ್ತರಿಸುವುದು, ನೆಟ್ಟಗೆ ಮಾಡುವುದು, ಹಿಸುಕುವುದು, ಯೋನಿಮಾರ್ಗಕ್ಕೆ ಸರಿಯಾಗಿ ಬರುವಂತೆ ಮಾಡಿ ಹೊರಕ್ಕೆ ತರಲು ಶೀಳುವುದು ಮುಂತಾದ ಶಸ್ತ್ರಕರ್ಮವನ್ನು ಮಾಡಬೇಕಾಗುವುದು. ಆದಕಾರಣ ಆಕೆಯ ಗಂಡನ ಅಪ್ಪಣೆಯನ್ನು ಪಡೆದು ಪ್ರಯತ್ನಪೂರ್ವಕವಾಗಿ ಶಸ್ತ್ರಕರ್ಮವನ್ನು ಪಕ್ರಮಿಸಬೇಕು.

ಹಿಂದೆ ವಿವರಿಸಿದ ಎಂಟು ವಿಧಗಳಾದ ಮೂಢಗರ್ಭಗತಿಗಳೊಳಗೆ ದಪ್ಪನಾಗಿ ಬೆಳೆದ ತಲೆ, ಬೆನ್ನು, ಸೊಂಟಗಳುಳ್ಳ ಮಕ್ಕಳನ್ನು ಹೊರಗೆ ಅಂದರೆ ಸಣ್ಣ ಬಾಯುಳ್ಳ ಯೋನಿಯಿಂದ ಹೊರಕ್ಕೆ ತೆಗೆಯುವುದು ತುಂಬಾ ಕಷ್ಟವಾದದ್ದು. ಮಗುವು ಬದುಕಿದ್ದರೆ ಅದನ್ನು ಹೊರಕ್ಕೆ ತೆಗೆಯಲು ಪ್ರಯತ್ನಿಸಬೇಕು. ತೆಗೆಯಲಸಾಧ್ಯವಾದರೆ ಚ್ಯವನ ಮಂತ್ರಗಳನ್ನು ಗರ್ಭಿಣಿಗೆ ಕೇಳಿಸುವಂತೆ ಉಚ್ಚರಿಸಬೇಕು. ಆ ಮಂತ್ರಗಳ ಅರ್ಥವೇನೆಂದರೆ—"ಎಲೈ ಸ್ತ್ರೀಯಳೇ, ನಿನ್ನ ಹೆರಿಗೆಯ ಮನೆಯಲ್ಲಿ ಅಮೃತ, ಚಂದ್ರ, ಅಗ್ನಿ, ಉಚ್ಚೈಶ್ರವಸ್ಸೆಂಬ ಕುದುರೆ ಇವು ಸದಾ ಸನ್ನಿಹಿತಗಳಾಗಿರಲಿ. ಸಮುದ್ರಮಥನದಿಂದ ಹುಟ್ಟಿದ ಅಮೃತದ ಸಾನ್ನಿಧ್ಯದಿಂದ ನಿನಗೆ ಸುಖಪ್ರಸವವಾಗಲಿ. ಅಗ್ನಿ, ವಾಯು, ಸೂರ್ಯ, ಇಂದ್ರ, ಲವಣ ಸಮುದ್ರಗಳು ನಿನಗೆ ಶಾನ್ತಿಯುಕ್ತವಾದ ಮನಸ್ಸನ್ನುಂಟುಮಾಡಲಿ."

"ಎಲೈ ಗರ್ಭದಲ್ಲಿರುವ ಶಿಶುವೇ! ಪ್ರಸವವಾಗಲು ತಡೆಯಾಗಿದ್ದ ಪಾಶಬಂಧನವು ನಿವಾರಣೆಯಾಗಿದೆ. ಸೂರ್ಯ ಚಂದ್ರರ ಕಿರಣಗಳು ನಿವಾರಣೆಯಾಗಿವೆ. ಸಕಲ ಭಯಗಳೂ ನಿವಾರಿಸಲ್ಪಟ್ಟಿವೆ. ತಡಮಾಡದೆ ಗರ್ಭದಿಂದ ಹೊರಕ್ಕೆ ಬಂದುಬಿಡು." ಶಾಸ್ತ್ರೋಕ್ತಗಳಾದ ಮೂಲಿಕೆಗಳನ್ನು ಗರ್ಭಿಣಿಯ ಕೈ, ಕಾಲು, ತಲೆಗಳಲ್ಲಿ ಕಟ್ಟಬೇಕು. ಇವುಗಳಿಂದಲೂ ಪ್ರಸವವಾಗದಿದ್ದರೆ—

೧. ಯೋನಿಯ ಹೊರಕ್ಕೆ ಎರಡು ಕಾಲುಗಳು ಬಂದಿದ್ದರೆ ಅವನ್ನು ನೇರ ಮಾಡಿ ಮಗುವನ್ನು ಹೊರಕ್ಕೆ ಎಳೆದುಕೊಳ್ಳಬೇಕು.

೨. ಒಂದೇ ಕಾಲು ಹೊರಕ್ಕೆ ಬಂದಿದ್ದರೆ ಮತ್ತೊಂದು ಕಾಲನ್ನೂ ನೀಡಿಸಿ ಹೊರಕ್ಕೆ ಬರಮಾಡಿಸಿ ಮಗುವನ್ನು ಎಳೆದುಕೊಳ್ಳಬೇಕು.

೩. ಪಿರ್ರೆಗಳು ಯೋನಿಯಲ್ಲಿ ಚಾಚಿಕೊಂಡಿದ್ದರೆ ಅವನ್ನು ಅದುಮಿ ಒಳಕ್ಕೆ ತಳ್ಳಿ ಮಗುವನ್ನು ಮೇಲಕ್ಕೆ ಎತ್ತಿ ಕಾಲುಗಳನ್ನು ನೀಡಿಸಿ ಹೊರಕ್ಕೆ ತಂದು ಮಗುವನ್ನು ಎಳೆದುಕೊಳ್ಳಬೇಕು.

೪. ಅಗಣಿಯಂತೆ ಅಡ್ಡಲಾಗಿ ಶಿಕ್ಕಿಕೊಂಡಿರುವ ಮಗುವಿನ ಮೇಲಿನ ಅರ್ಧ ಭಾಗವನ್ನು ಮೇಲಕ್ಕೆ ಎತ್ತಿ ಕೆಳಭಾಗವನ್ನು ನೇರ ಮಾಡಿ ಕಾಲುಗಳನ್ನು ಯೋನಿದ್ವಾರದಿಂದ ಹೊರಕ್ಕೆ ಬರಮಾಡಿ ಶಿಶುವನ್ನು ಎಳೆದುಕೊಳ್ಳಬೇಕು.

೫. ಶಿಶುವು ಗರ್ಭಾಶಯದೊಳಗೆ ಒಂದು ಪಕ್ಕಕ್ಕೆ ತಲೆಯನ್ನು ತಿರುಗಿಸಿ ಕೊಂಡು ಒಂದು ಕೈಯನ್ನು ಯೋನಿಯಿಂದ ಹೊರಕ್ಕೆ ಚಾಚಿ ಕೊಂಡಿದ್ದರೆ ಆ ತೋಳಿನ ಭುಜ ಶಿರಸ್ಸನ್ನು ಹಿಸುಕಿ ಮೇಲಕ್ಕೆ ಎತ್ತಿ ತಲೆಯನ್ನು ಯೋನಿಮಾರ್ಗಕ್ಕೆ ಬರಮಾಡಿ ಮಗುವನ್ನು ಹೊರಕ್ಕೆ ಎಳೆದುಕೊಳ್ಳಬೇಕು.

೬ ಎರಡು ತೋಳುಗಳು ಯೋನಿಯಿಂದ ಹೊರಕ್ಕೆ ಚಾಚಿಕೊಂಡಿದ್ದರೆ ಆ ಎರಡು ಭುಜಶಿರಸ್ಸುಗಳನ್ನೂ ಹಿಸುಕಿ ಮೇಲಕ್ಕೆ ಎತ್ತಿ ತಲೆ ಯನ್ನು ಯೋನಿಮಾರ್ಗಕ್ಕೆ ಬರಮಾಡಿ ಮಗುವನ್ನು ಹೊರಕ್ಕೆ ಎಳೆದುಕೊಳ್ಳಬೇಕು.

ಕಡೆಯವಾದ ೭-೮ನೇ ವಿಧಾನಗಳ ಮೂಢಗರ್ಭವು ಅಸಾಧ್ಯ ವಾದದ್ದು.

ಮೂಲ—(ಊ) ಪ್ರಸೂತಿಶಲ್ಯನಿರ್ಹರಣವಿಧಿಃ—

ಶಲ್ಯಭೂತಗರ್ಭಪಾತನಾರ್ಥಂ ಶಸ್ತ್ರಾವಚಾರಣವಿಧಾನಮುಚ್ಯತೇ। ತಸ್ಯ ವಿಭಾಗಾಸ್ತ್ರಯಃ—೧ ಶಿರೋವಿದಾರಣಮ್ ೨. ಗರ್ಭವಿದಾರಣಮ್ ೩. ಮೃತ-ಗರ್ಭಿಣೀಬಾಲಕೋದ್ಧರಣಮಿತಿ ।।೩೦।।

(ಸು।ಶಾ।ಅ। ೧೦)—

ತತಃ ಸ್ತ್ರಿಯಮಾಶ್ವಾಸ್ಯ ಮೂಢಗರ್ಭಾದಿಷ್ವನ್ನಪೂರ್ಣಕೋಷ್ಠತ್ವಾದ್ಯನ್ನ-ದಾನಾದಿಭಿಃ ಕಷ್ಟಂ ಸದ್ಯೋಮರಣಂ ವಾ ಪ್ರಾಪ್ನೋತ್ಯಾತುರಃ । ಅನಿಲಶ್ಚ ಪ್ರಕೋಪಮೇತಿ। ತೇನ ಅಭುಕ್ತವತ್ಯಾಃ ಕರ್ಮ ಕುರ್ವೀತ ಏವಮಶಕ್ಯೇ ಶಸ್ತ್ರಮವ-ಚಾರಯೇತ್ ।।೩೧।।

ಸ ಚೇತನಂ ಚ ಶಸ್ತ್ರೇಣ ನ ಕಥಂಚನ ದಾರಯೇತ್ ।
ದಾರ್ಯಮಾಣೋ ಹಿ ಜನನೀಮಾತ್ಮಾನಂ ಚೈವ ಘಾತಯೇತ್ ।।೩೨।।
ಅವಿಷಹ್ಯೇ ವಿಕಾರೇ ತು ಶ್ರೇಯೋ ಗರ್ಭಸ್ಯ ಪಾತನಮ್ ।
ನ ಗರ್ಭಿಣ್ಯಾ ವಿಪರ್ಯಾಸಃ ಪ್ರಾಪ್ತಕಾಲಂ ನ ಹಾಸಯೇತ್ ।।೩೩।।

೧. ಶಿರೋವಿದಾರಣವಿಧಿಃ—

ಮಣ್ಡಲಾಗ್ರೇಣಾಙ್ಗುಳಿಶಸ್ತ್ರೇಣ ವಾ ಶಿರೋವಿದಾರ್ಯ ಶಿರಃ ಕಪಾಲಾನ್ಯಾ ಹೃತ್ಯ ಶಙ್ಕುನಾ ಗೃಹೀತ್ವೋರಸಿ ಕಕ್ಷಾಯಾಂ ವಾಪಹರೇತ್ । ಅಭಿನ್ನೇ ಶಿರಸಿ ಚಾಕ್ಷಿಕೂಟೇ ಗಣ್ಡೇ ವಾ ।।೩೪।।

(ಅ।ಹೃ।)—

ಪೂರ್ವಂ ಶಿರಃ ಕಪಾಲಾನಿ ದಾರಯಿತ್ವಾ ವಿಶೋಧಯೇತ್ ।।
ಕಕ್ಷೋರಸ್ತಾಲುಚಿಬುಕೇ ಪ್ರದೇಶೇऽನ್ಯತಮೇ ತತಃ ।।೩೫।।
ಸಮಾಲಮ್ಬ್ಯ ದೃಢಂ ಕರ್ಷೇತ್ಕುಶಲೋ ಗರ್ಭಶಙ್ಕುನಾ ।

ದೀಪಿಕೆ—(ಊ) ಪ್ರಸೂತಿಶಲ್ಯಾಹರಣವಿಧಾನವು—

ಶಲ್ಯರೂಪವಾದ ಗರ್ಭವನ್ನು ಹೊರಕ್ಕೆ ತೆಗೆಯಲು ಮೂರು ವಿಧಗಳಾದ ಶಸ್ತ್ರಪ್ರಯೋಗಗಳುಂಟು. ಯಾವುವೆಂದರೆ—೧. ತಲೆಯನ್ನು ಶೀಳಿ ತೆಗೆಯುವುದು. ೨. ಗರ್ಭವನ್ನು ಕತ್ತರಿಸಿ ತೆಗೆಯುವುದು. ೩. ಮೃತಳಾದ ಗರ್ಭಿಣಿಯ ಹೊಟ್ಟೆಯನ್ನು ಶೀಳಿ ಮಗುವನ್ನು ತೆಗೆಯುವುದು.

(ಸು!ಶಾ!ಅ।೧೦)—ಗರ್ಭಿಣಿಯ ಗಂಡನ ಅಪ್ಪಣೆಪಡೆದು ಶಸ್ತ್ರಪ್ರಯೋಗದಿಂದ ಮಗುವನ್ನು ಹೊರಕ್ಕೆ ತೆಗೆಯಲು ಪ್ರಯತ್ನಿಸಬೇಕು. ಗರ್ಭಿಣಿಯು ಅಹಾರವನ್ನು ತೆಗೆದುಕೊಂಡಿರುವಾಗ ಯನ್ತ್ರಶಸ್ತ್ರ ಪ್ರಯೋಗಗಳನ್ನು ಮಾಡಿದರೆ ಆಕೆಗೆ ವಾತಪ್ರಕೋಪವುಂಟಾಗಿ ಮರಣ ಸಂಭವಿಸಬಹುದು. ಅಥವಾ ತುಂಬಾ ಹಿಂಸೆಯಾಗಬಹುದು. ಆದಕಾರಣ ಭೋಜನವನ್ನು ಮಾಡದಿರುವಾಗ ಯನ್ತ್ರಶಸ್ತ್ರಗಳನ್ನು ಪ್ರಯೋಗಿಸಬೇಕು. ಮಗುವು ಬದುಕಿರುವಾಗ ಶಸ್ತ್ರಪ್ರಯೋಗವನ್ನು ಮಾಡಬಾರದು. ಶಸ್ತ್ರದಿಂದ ಶೀಳಲ್ಪಟ್ಟ ಮಗುವು ಸಾಯುವುದಲ್ಲದೆ ಗರ್ಭಿಣಿಯೂ ಸಾಯುವ ಸಂಭವವುಂಟು. ಅಸಾಧ್ಯವಾದ ನೋವಿದ್ದರೆ ಆ ನೋವನ್ನು ತಡೆಯಲಾಗದಿದ್ದರೆ ಗರ್ಭಿಣಿಯನ್ನು ಸಾಯುವಂತೆ ಮಾಡದೆ ಗರ್ಭಪಾತವನ್ನು ಮಾಡಿಸುವುದೇ ಯೋಗ್ಯವಾದದ್ದು. ಕಾಲವನ್ನು ಕಳೆಯದೆ ಶಸ್ತ್ರಪ್ರಯೋಗವನ್ನು ಮಾಡಿಸಬೇಕು. ಗರ್ಭಿಣಿಯನ್ನು ಸಮಾಧಾನಪಡಿಸಿದಮೇಲೆ ಮೂಢವಾಗಿರುವ ಗರ್ಭವನ್ನು ಹೊರಕ್ಕೆ ತೆಗೆಯಬೇಕು.

೧. ತಲೆಯನ್ನು ಶೀಳುವುದು—ಮಂಡಲಾಗ್ರಶಸ್ತ್ರದಿಂದಾಗಲೀ ಅಂಗುಳಿಶಸ್ತ್ರದಿಂದಾಗಲೀ ಮಗುವಿನ ತಲೆಬುರುಡೆಯನ್ನು ಶೀಳಿ ಚಪ್ಪಿನಂತಿರುವ ಮೂಳೆಗಳನ್ನು ಕತ್ತರಿಸಿ ಹೊರಕ್ಕೆ ತೆಗೆಯಬೇಕು. ಅನಂತರ ಗರ್ಭಶಂಕುವಿನಿಂದ ಎದೆಯನ್ನಾಗಲೀ ಕೊಂಕುಳನ್ನಾಗಲೀ ಬಲವಾಗಿ ಹಿಡಿದು ಹೊರಕ್ಕೆ ಎಳೆದು ತರಬೇಕು. ತಲೆಯ ಮೂಳೆಗಳು ಬಲಿತಿದ್ದು ಒಡೆಯಲಾಗದಿದ್ದಲ್ಲಿ ಕಣ್ಣಿನ ಗುಳಿಯಲ್ಲಾಗಲೀ ಕೆನ್ನೆಯನ್ನಾಗಲೀ ಗರ್ಭಶಂಕುವಿನಿಂದ ಚುಚ್ಚಿ ಜಾಣತನದಿಂದ ಮಗುವನ್ನು ಹೊರಕ್ಕೆ ತೆಗೆಯಬೇಕು.

ಮೂಲ—(ಸು।ಶಾ।ಅ। ೧೦)—(೨) ಗರ್ಭವಿದಾರಣವಿಧಿಃ—

ನೋಪೇಕ್ಷೇತ ಮೃತಂ ಗರ್ಭಂ ಮುಹೂರ್ತಮಪಿ ಪಣ್ಡಿತಃ ।
ಸಹ್ಯಾಶು ಜನನೀಂ ಹನ್ತಿ ನಿರುಚ್ಛ್ವಾಸಂ ಪಶುಂ ಯಥಾ ।।೩೬।।
ಮಣ್ಡಲಾಗ್ರೇಣ ಕರ್ತವ್ಯಂ ಛೇದ್ಯಮನ್ತರ್ವಿಜಾನತಾ।
ವೃದ್ಧಿಪತ್ರಂ ಹಿ ತೀಕ್ಷ್ಣಾಗ್ರಂ ನಾರೀಂ ಹಿಂಸ್ಯಾತ್ಕದಾಚನ ।।೩೭।।

ದೃತಿಮಿವಾತತಂ ವಾತಪೂರ್ಣೋದರಂ ವಾ ವಿದಾರ್ಯ ನಿರಸ್ಯಾನ್ತ್ರಾಣಿ ಶಿಥಿಲೀಭೂತಮಾಹರೇತ್ ।।೩೮।।

ಅಂಸಸಕ್ತಸ್ಯಾಂಸದೇಶೇ ಬಾಹುಂ ಛಿತ್ವಾ (ಶಙ್ಕುನಾ ಗೃಹೀತ್ವೋರಸಿ ಕಕ್ಷಾಯಾಂ; ವಾಽಪಹರೇತ್) ಜಘನಸಕ್ತಸ್ಯ ಜಘನಕಪಾಲಾನಿ ವಿದಾರ್ಯ ನಿರಸ್ಯಾನ್ತ್ರಾಣಿ ಶಿಥಿಲೀಭೂತಮಾಹರೇತ್ ।।೩೯।।

(ಚ।ಶಾ।)—

ವಿದಾರ್ಯ ಕೋಷ್ಠಮನ್ತ್ರಾಣಿ ಬಹಿರ್ವಾ ಸನ್ನಿರಸ್ಯ ಚ ।।೪೦।।

(ಅ।ಹೃ।ಶಾ।)—

ಕಟೀಸಕ್ತಸ್ಯ ತದ್ವಚ್ಚ ತತ್ಕಪಾಲಾನಿ ದಾರಯೇತ್ ।
ಯದ್ಯದ್ವಾಯುವಶಾದಙ್ಗಂ ಸಜ್ಜೇದ್ಗರ್ಭಸ್ಯ ಖಣ್ಡಶಃ ।।೪೧।।
ತತ್ತಚ್ಛಿತ್ವಾ ಹರೇತ್ಸಮ್ಯಗ್ರಕ್ಷೇನ್ನಾರೀಂ ಚ ಯತ್ನತಃ ।।

ದೀಪಿಕೆ—(೨) ಗರ್ಭಶರೀರವನ್ನು ಶೀಳಿ ಶಿಶುವನ್ನು ಹೊರಕ್ಕೆ ತರುವ ವಿಧಾನವು—

(ಸು।ಶಾ।ಅ। ೧೦)—

ಶಸ್ತ್ರವೈದ್ಯನು ಗರ್ಭಿಣಿಯ ಹೊಟ್ಟೆಯಲ್ಲಿ ಮಗುವು ಸತ್ತಿದ್ದರೆ ಒಂದು ಕ್ಷಣಕಾಲವೂ ಉಪೇಕ್ಷೆಮಾಡದೆ ಹೊರಕ್ಕೆ ತೆಗೆದುಬಿಡಬೇಕು. ಉಚ್ಛ್ವಾಸ ಮಾಡದಿದ್ದರೆ ಪಶುವು ಕೂಡಲೇ ಸಾಯುವ ರೀತಿಯಲ್ಲಿ ಮೃತಶಿಶುವನ್ನು ಹೊರಕ್ಕೆ ತೆಗೆಯದಿದ್ದರೆ ಗರ್ಭಿಣಿಯು ಉಸಿರಾಡದೆ ಸಾಯುತ್ತಾಳೆ. ಜಾಣನಾದ ವೈದ್ಯನು ಗರ್ಭದೊಳಗಿರುವ ಮೃತ ಶಿಶುವನ್ನು ಮಂಡಲಾಗ್ರಶಸ್ತ್ರದಿಂದ ಕತ್ತರಿಸಬೇಕು. ಅಂಗುಳಿಶಸ್ತ್ರವು ಹರಿತವಾದಕಾರಣ ಗರ್ಭಿಣಿಯನ್ನು ಕೊಲ್ಲಬಹುದು. ಉದರದಲ್ಲಿ ವಾಯುವು ತುಂಬಿಕೊಂಡು ತಿದಿಯಂತೆ ಉಬ್ಬಿದ್ದರೆ ಶಿಶುವಿನ ಉದರವನ್ನು ಶೀಳಿ ಕರುಳುಗಳನ್ನು ಹೊರಕ್ಕೆ ತೆಗೆದುಹಾಕಿದಮೇಲೆ ಗರ್ಭಶಂಕುವಿನಿಂದ ಶಿಶುದೇಹವನ್ನು ಭದ್ರವಾಗಿ ಅಮುಕಿ ಹಿಡಿದುಕೊಂಡು ಹೊರಕ್ಕೆ ಎಳೆದುಕೊಳ್ಳಬೇಕು ॥೩೯॥

ಹೆಗಲು ಭಾಗವು ಯೋನಿಯಲ್ಲಿ ಶಿಕ್ಕಿಕೊಂಡಿದ್ದರೆ ಆ ಹೆಗಲಿನ ಹತ್ತಿರದ ತೋಳನ್ನು ಕತ್ತರಿಸಿ ಹೊರಕ್ಕೆ ತೆಗೆದುಹಾಕಿ ಆ ರಂಧ್ರದಿಂದಲೇ ಕರುಳು ಯಕೃತ್ಪ್ಲೀಹ ಮೊದಲಾದ ಕೋಷ್ಠಾಂಗಗಳನ್ನು ಕತ್ತರಿಸಿ ಹೊರಕ್ಕೆ ತೆಗೆದು ಅನಂತರ ಗರ್ಭ ಶಂಕುವಿನಿಂದ ಮಗುವಿನ ಎದೆ ಕೊಂಕಳುಗಳನ್ನು ಬಿಗಿಯಾಗಿ ಹಿಡಿದು ಹೊರಕ್ಕೆ ಎಳೆದು ತೆಗೆಯಬೇಕು. ಶಿಶುವಿನ ಸೊಂಟವು ಯೋನಿಯಲ್ಲಿ ಸಿಕ್ಕಿಕೊಂಡಿದ್ದರೆ ಸೊಂಟದ ಮೂಳೆಗಳನ್ನೂ ಮತ್ತು ಕರುಳನ್ನೂ ಕತ್ತರಿಸಿ ಹೊರಕ್ಕೆ ತೆಗೆದಮೇಲೆ ಶಂಕುವಿನಿಂದ ಶಿಶುದೇಹವನ್ನು ಬಿಗಿಯಾಗಿ ಹಿಡಿದು ಹೊರಕ್ಕೆ ಎಳೆದುಕೊಳ್ಳಬೇಕು ॥ ೪೧ ॥

(ಚ।ಶಾ।)—ಶಿಶುವಿನ ಹೊಟ್ಟೆಯನ್ನು ಶೀಳಿ ಕರುಳುಗಳನ್ನು ಕತ್ತರಿಸಿ ತೆಗೆದ ಮೇಲೆ ಮಗುವನ್ನು ಗರ್ಭಶಂಕುವಿನಿಂದ ಬಲವಾಗಿ ಹಿಡಿದು ಹೊರಕ್ಕೆ ತೆಗೆದು ಬಿಡಬೇಕು.

(ಅ।ಹೃ।ಶಾ।)—ವಾತಪ್ರಕೋಪದಿಂದ ಶಿಶುವಿನ ಯಾವಯಾವ ಅಂಗಗಳು ಯೋನಿಮುಖಕ್ಕೆ ಬಂದು ಪ್ರಸವಕ್ಕೆ ತಡೆಗಟ್ಟುತ್ತವೆಯೋ ಆಯಾಯ ಅಂಗಗಳನ್ನು ಶಸ್ತ್ರದಿಂದ ಕತ್ತರಿಸಿ ಹೊರಕ್ಕೆ ತೆಗೆದುಹಾಕಿ ಅತಿಪ್ರಯತ್ನದಿಂದ ಗರ್ಭಿಣಿಯನ್ನು ಬದುಕಿಸಬೇಕು.

ಮೂಲ—(ಸು।ಶಾ। ಅ। ೧೦) (೩) ಮೃತಗರ್ಭಿಣೀಬಾಲಕೋದ್ಧರಣವಿಧಿಃ--

ಬಸ್ತಮಾರವಿಪನ್ನಾಯಾಃ ಕುಕ್ಷಿಃ ಪ್ರಸ್ಪನ್ದತೇ ಯದಿ।
ತತ್ಕ್ಷಣಾಜ್ಜನ್ಮಕಾಲೇ ತಂ ಪಾಟಯಿತ್ವೋದ್ಧರೇದ್ಭಿಷಕ್ ॥೪೨॥

ಅತ್ರ ಹಾರಾಣಚನ್ದ್ರಃ—

ಜನ್ಮಕಾಲೇ—ಉಪಸ್ಥಿತಪ್ರಸವಕಾಲೇ ; ವಿಪನ್ನಾಯಾಃ ಮೃತಗರ್ಭಿಣ್ಯಾಃ ಯದಿ ಕುಕ್ಷಿಃ ಪ್ರಸ್ಪನ್ದತೇ ತರ್ಹಿ ತತ್ಕ್ಷಣಾದ್ಬಸ್ತಿದ್ವಾರಂ ಪಾಟಯಿತ್ವಾ ಭಿಷಕ್ತಂ ಗರ್ಭಮುದ್ಧರೇತ್ ।।೪೩।।

ದೀಪಿಕೆ-(ಸು।ಶಾ।ಅ।೧೦)—(೩) ಮೃತಗರ್ಭಿಣಿಯ ಉದರದಲ್ಲಿ ಬದುಕಿರುವ ಶಿಶುವನ್ನು ಹೊರಕ್ಕೆ ತೆಗೆಯುವ ವಿಧಾನ —

ಗರ್ಭಿಣಿಯು ಸತ್ತಕೂಡಲೆ ಅವಳ ಕಿಬ್ಬೊಟ್ಟೆಯು (ಬಸ್ತ್ಯಾಶಯವಿರುವ ಭಾಗವು) ಅದುರುತ್ತಿದ್ದರೆ ಶಿಶುವು ಬದುಕಿರುತ್ತೆಂದು ತಿಳಿದು ಕೂಡಲೇ ವೈದ್ಯನು ಅವಳ ಹೊಕ್ಕಳ ಕೆಳಭಾಗವನ್ನು ಶೀಳಿ ಶಿಶುವನ್ನು ಹೊರಕ್ಕೆ ತೆಗೆದುಕೊಳ್ಳಬೇಕು ॥೪೩॥

ಮೂಲ—(ಸು।ಚಿ।ಅ।೧೫)—ಶಸ್ತ್ರಕರ್ಮಾನನ್ತರಕರಣೀಯವಿಧಾನಮ್—

ಏವಂ ನಿರ್ಹೃತಶಲ್ಯಾನ್ತು ಸಿಂಚೇದುಷ್ಣೇನ ವಾರಿಣಾ ।
ತತೋಽಭ್ಯಕ್ತಶರೀರಾಯಾ ಯೋನೌ ಸ್ನೇಹಂ ನಿಧಾಪಯೇತ್ ॥೪೪॥
ಏವಂ ಮೃದ್ವೀಭವೇದ್ಯೋನಿಸ್ತಚ್ಛೂಲಂ ಚೋಪಶಾಮ್ಯತಿ।
ಉಪದ್ರವಾಶ್ಚ ಯೇಽನ್ಯೇ ಸ್ಯುಸ್ತಾನ್ ಯಥಾಸ್ವಮುಪಾಚರೇತ್ ।।೪೫।।

ಇತಿ ಪ್ರಸೂತಿತನ್ತ್ರಂ ಸಮಾಪ್ತಮ್

ದೀಪಿಕೆ—(ಸು।ಚಿ।ಅ।೧೫)—ಶಸ್ತ್ರಕ್ರಿಯೆಯನ್ನು ಮಾಡಿಸಿದಮೇಲೆ ಗರ್ಭಿಣಿಗೆ ನಡೆಸಬೇಕಾದ ಉಪಚಾರಗಳು—

ಶಸ್ತ್ರಪ್ರಯೋಗ ಮುಗಿದಮೇಲೆ ಸುಖೋಷ್ಣವಾದ ನೀರಿನಿಂದ ಆ ಸ್ತ್ರೀಯಳಿಗೆ ಸ್ನಾನಮಾಡಿಸಿ ಬಲಾತೈಲದಿಂದ ಆಕೆಯ ಶರೀರಕ್ಕೆ ಅಭ್ಯಙ್ಗಮಾಡಿಸಿ ಯೋನಿಯೊಳಕ್ಕೂ ಸ್ನೇಹವನ್ನು ತುಂಬಬೇಕು. ಯೋನಿಯು ಮೃದುವಾಗಿ ಶೂಲೆಯು ನಿಲ್ಲುತ್ತದೆ. ಇತರ ಉಪದ್ರವಗಳಿದ್ದರೆ ಯೋಗ್ಯವಾದ ಚಿಕಿತ್ಸೆಗಳನ್ನು ಮಾಡಿಸಿ ಗುಣಪಡಿಸಬೇಕು.

ಪ್ರಸೂತಿತನ್ತ್ರವು ಪೂರೈಸಿತು.

ಸ್ತ್ರೀರೋಗಾಃ

ಸ್ತ್ರೀರೋಗಾಃ

(ಅ।ಸಂ।)—

ಸ್ತ್ರೀ ಹಿ ಮೂಲಮಪತ್ಯಾನಾಂ ಸ್ತ್ರೀ ಹಿ ರಕ್ಷತಿ ರಕ್ಷಿತಾ।
ಸರ್ವಾಶ್ರಮಾಣಾಂ ಪ್ರಥಮಂ ಗೃಹಸ್ಥತ್ವಮನಿನ್ದಿತಮ್ ॥೧॥
ತೀಕ್ಷ್ಣೈರಪಿ ಕ್ರಿಯಾಯೋಗೈಃ ಸ್ತ್ರಿಯಂ ಯತ್ನೇನ ಪಾಲಯೇತ್।

(ಚ।ಚಿ।ಅ।೩೦)—

ಭಗವನ್ ಯದಪತ್ಯಾನಾಂ ಮೂಲಂ ನಾರ್ಯಃ ಪರಂ ನೃಣಾಮ್ ॥೨॥
ತದ್ವಿಘಾತೋ ಗದೈಶ್ಚಾಸಾಂ ಕ್ರಿಯತೇ ಯೋನಿಸಂಶ್ರಿತೈಃ।
ತಸ್ಮಾತ್ತೇಷಾಂ ಸಮುತ್ಪತ್ತಿಮುತ್ಪನ್ನಾನಾಂ ಚ ಲಕ್ಷಣಮ್ ॥೩॥
ಸೌಷಧಂ ಶ್ರೋತುಮಿಚ್ಛಾಮಿ ಪ್ರಜಾನುಗ್ರಹಕಾಮ್ಯಯಾ।
ಇತಿ ಶಿಷ್ಯೇಣ ಪೃಷ್ಟಸ್ತು ಪ್ರೋವಾಚರ್ಷಿವರೋಽತ್ರಿಜಃ ॥೪॥

ಇತ್ಯಾದ್ಯನೇಕಕಾರಣವಿಶೇಷೈಃ ಪುರುಷೇಭ್ಯೋ ಸ್ತ್ರೀಣಾಮೇವಾಧಿಕತರ-ರಕ್ಷಣವಿಧಾನಮಾವಶ್ಯಕಂ ವಿಧಾತವ್ಯಮಿತಿ ನಿರ್ವಿವಾದವಿಷಯಮ್। ಅಙ್ಗಪ್ರತ್ಯಙ್ಗ-ನಿರ್ಮಾಣೇಽಪಿ ಪುರುಷಾಪೇಕ್ಷಯಾಽಸ್ತಿ ಕಿಂಚಿದ್ವೈಶಿಷ್ಟ್ಯಮ್ ಸ್ತ್ರೀಶರೀರೇ। ಅತ ಏವ ಸ್ತ್ರೀಣಾಂ ತತ್ತದ್ವೈಶೇಷಿಕಾಙ್ಗಸಮುತ್ಥಾಃ ಕತಿಪಯರೋಗಾಃ ಸ್ತ್ರೀಪುರುಷ-ಸಾಮಾನ್ಯರೋಗಭಿನ್ನಾಃ "ಸ್ತ್ರೀರೋಗಾ" ಇತಿ ಚಿಕಿತ್ಸಾಸೌಕರ್ಯಾರ್ಥಮಭಿ-ವಿಭಜ್ಯನ್ತೇ ॥೫॥

ಯಥಾ—

೧.	ಆರ್ತವವಿಕಾರಾಃ	೯.	ರಕ್ತಗುಲ್ಮಃ
೨.	ಬಸ್ತಿವಿಕಾರಾಃ	೧೦.	ಮಕ್ಕಲ್ಲಃ
೩.	ಯೋನಿವ್ಯಾಪತ್	೧೧.	ಸ್ತನವಿದ್ರಧಿಃ
೪.	ಯೋನಿಸಂವರಣಮ್	೧೨.	ಗರ್ಭಪತನಕಃ (ಸೂತಿಕಾಪತನಕಃ)
೫.	ಯೋನಿಕಂದಃ	೧೩.	ಜರಾಯುರೋಗಃ
೬.	ಭಗಾರ್ಶಃ	೧೪.	ಯೋಷೋನ್ಮಾದಃ
೭.	ತೂನೀಪ್ರತಿತೂನಯಃ	೧೫.	ಸೂತಿಕಾರೋಗಾ ಇತ್ಯಾದಯಃ ॥೬॥
೮.	ಉಪದಂಶಃ		

ಸ್ತ್ರೀರೋಗಗಳು

(ಅ।ಸಂ।)—

ಸಂತಾನವುಂಟಾಗಲು ಸ್ತ್ರೀಯರೇ ಮೂಲಕಾರಣರು. ಸ್ತ್ರೀಯಳೊಬ್ಬಳನ್ನು ಉಳಿಸಿಕೊಂಡರೆ ಆಕೆಯು ಎಲ್ಲರನ್ನೂ ಕಾಪಾಡುತ್ತಾಳೆ; ಸಕಲ ಆಶ್ರಮಗಳಲ್ಲೂ ಗೃಹಸ್ಥಾಶ್ರಮವೇ ನಿರ್ದೋಷವಾದದ್ದು. ಗೃಹಸ್ಥಧರ್ಮವೇ ಸರ್ವ ಆಶ್ರಮಿಗಳಿಗೂ ಸಹಾಯಮಾಡತಕ್ಕದ್ದು. ಆದಕಾರಣ ತೀಕ್ಷ್ಣಕರಗಳಾದ ಔಷಧಗಳನ್ನು ಪ್ರಯೋಗಿಸಿಯಾದರೂ ಸ್ತ್ರೀಯರನ್ನು ರಕ್ಷಿಸಿಕೊಳ್ಳಲೇಬೇಕು ॥೧॥

(ಚ।ಚಿ।ಅ। ೩೦)––

ಸಂತಾನದ ಉತ್ಪತ್ತಿಗೆ ಮುಖ್ಯಕಾರಣರಾದ ಸ್ತ್ರೀಯರಿಗೆ ಯೋನಿಯನ್ನಾಶ್ರೈಸಿ ಹುಟ್ಟುವ ವ್ಯಾಧಿಗಳು ಸಂತಾನೋತ್ಪತ್ತಿಬಾಧಕಗಳಾಗುತ್ತವೆಯಾದ ಕಾರಣ ಆ ವ್ಯಾಧಿಗಳು ಹುಟ್ಟುವುದಕ್ಕೆ ಕಾರಣಗಳೇನು? ಅವುಗಳ ಲಕ್ಷಣಗಳೇನು? ಅವುಗಳನ್ನು ನಿವಾರಣೆ ಮಾಡತಕ್ಕ ವಿಧಾನಗಳ್ಯಾವುವು? ಎಂಬ ವಿಚಾರಗಳನ್ನು ಪ್ರಜೆಗಳಿಗೆ ಹಿತವಾಗಬೇಕೆಂದು ತಿಳಿಯಲಪೇಕ್ಷಿಸುವೆನೆಂದು ಅಗ್ನಿವೇಶರು ಪ್ರಶ್ನೆಮಾಡಲು ಗುರುಗಳಾದ ಆತ್ರೇಯರು ಉತ್ತರ ಕೊಡುತ್ತಾರೆ.

ಇತ್ಯಾದಿ ಅನೇಕ ಉಪದೇಶವಾಕ್ಯಗಳಿಂದಲೂ ಲೌಕಿಕ ಅನುಭವಗಳಿಂದಲೂ ಪುರುಷರ ರಕ್ಷಣೆಗಿಂತಲೂ ಸ್ತ್ರೀರಕ್ಷಣೆಯೇ ಅತ್ಯವಶ್ಯಕವಾದದ್ದು ಮತ್ತು ಪವಿತ್ರವಾದದ್ದು ಎಂಬುದು ಸಿದ್ಧಾನ್ತವಾಗುತ್ತದೆ. ಸ್ತ್ರೀಯರ ಅಙ್ಗಪ್ರತ್ಯಙ್ಗಗಳಲ್ಲಿ ಪುರುಷರ ಅಙ್ಗಪ್ರತ್ಯಙ್ಗಗಳಿಗಿಂತಲೂ ಕೆಲವು ವ್ಯತ್ಯಾಸಗಳಿರುವುದರಿಂದ ಪುರುಷರಿಗೆ ಸಾಮಾನ್ಯವಾಗಿ ಉಂಟಾಗುವ ವ್ಯಾಧಿಗಳೇ ಸ್ತ್ರೀಯರಿಗೂ ಉಂಟಾಗುತ್ತವೆಯಾದರೂ ವ್ಯತ್ಯಾಸವುಳ್ಳ ಅಂಗಗಳ ಸನ್ನಿವೇಶಗಳಿಗೆ ತಕ್ಕಂತೆ ಅವುಗಳಲ್ಲುಂಟಾಗುವ ವ್ಯಾಧಿಗಳು ಸ್ತ್ರೀಯರಿಗೆ ಮಾತ್ರವೇ ಉಂಟಾಗುತ್ತವೆ. ಈ ಪ್ರತ್ಯೇಕ ವ್ಯಾಧಿಗಳನ್ನು ಚಿಕಿತ್ಸಾಸೌಕರ್ಯಕ್ಕಾಗಿ "ಸ್ತ್ರೀರೋಗಗಳೆಂದು" ವ್ಯವಹರಿಸುತ್ತಾರೆ. ಅವುಗಳ್ಯಾವುವೆಂದರೆ :––

೧. ಆರ್ತವವಿಕಾರಗಳು	೯. ರಕ್ತಗುಲ್ಮ
೨. ಬಸ್ತಿವಿಕಾರಗಳು	೧೦. ಮಕ್ಕಲ್ಲ
೩. ಯೋನಿವ್ಯಾಪತ್ತು	೧೧. ಸ್ತನವಿದ್ರಧಿ
೪. ಯೋನಿಸಂವರಣ	೧೨. ಗರ್ಭಾಪತಾನಕ
೫. ಯೋನಿಕನ್ದ	೧೩. ಜರಾಯುರೋಗ
೬. ಭಗಾರ್ಶಃ	೧೪. ಯೋಷೋನ್ಮಾದ
೭. ತೂನಿಪ್ರತಿತೂನಿಗಳು	೧೫. ಸೂತಿಕಾರೋಗ
೮ ಉಪದಂಶ	

ಮುಂತಾದವುಗಳು ಮುಖ್ಯವಾದುವು ॥೬॥

೧. ಆರ್ತವವಿಕಾರಾಃ

ಮೂಲ – (ಸು।ಶಾ।ಅ। ೨)––

ಆರ್ತವಕ್ಷಯಃ, ಅದೃಷ್ಟಾರ್ತವಮ್ (ಆರ್ತವಲೋಪಃ), ಆರ್ತವವೃದ್ಧಿಃ।

(ಅ) ಆರ್ತವಕ್ಷಯಃ––

ದೋಷೈರಾವೃತಮಾರ್ಗತ್ವಾದಾರ್ತವಂ ನಶ್ಯತಿ ಸ್ತ್ರಿಯಾಃ ॥೭॥

ಅತ್ರ ದೋಷಾಃ ಕಫೋ, ವಾಯುಃ, ವಾತಕಫೌ ವಾ ನ ತು ಪಿತ್ತಮ್, ಪಿತ್ತವೃದ್ಧೌ ಆರ್ತವಾತಿಪ್ರವೃತ್ತಿವೃದ್ಧ್ಯೋರುಕ್ತತ್ವಾತ್। ನಶ್ಯತೀತಿ ಪ್ರವರ್ತಮಾನಂ ನ

ದೃಶ್ಯತೇ ನ ತು ಸರ್ವಥಾ ಕ್ಷಯಂ ಯಾತಿ; ಆರ್ತವಕ್ಷಯೇ ಯಥೋಚಿತಕಾಲಾ-
ದರ್ಶನಮಲ್ಪತಾ ವಾ ಯೋನಿವೇದನಾ ಚ ಲಕ್ಷ್ಯನ್ತೇ ॥೮॥

ಚಿಕಿತ್ಸಾ—

ತತ್ರ ಮತ್ಸ್ಯಕುಳತ್ಥಾಮ್ಲತಿಲಮಾಷಸುರಾ ಹಿತಾಃ ।
ಪಾನೇ ಮೂತ್ರಮುದಶ್ವಿಚ್ಚ ದಧಿ ಶುಕ್ತಂ ಚ ಭೋಜನೇ ॥೯॥

೧ ಆರ್ತವರೋಗಗಳು

ದೀಪಿಕೆ—(ಸು।ಶಾ।ಅ।೨)—

ಆರ್ತವ ಕ್ಷೀಣತೆ—ಅದೃಷ್ಟಾರ್ತವ, ಆರ್ತವವೃದ್ಧಿ.

(ಅ) ಆರ್ತವಕ್ಷೀಣತೆ—

ಸ್ತ್ರೀಯರ ಆರ್ತವರಕ್ತವಾಹಿಸ್ರೋತೋಮಾರ್ಗಗಳು ಪ್ರಕುಪಿತವಾದ ದೋಷಗಳಿಂದ ಆವರಿಸಿದರೆ ಆರ್ತವನಾಶವಾಗುತ್ತದೆ. (ಇಲ್ಲಿ ದೋಷಗಳೆಂದರೆ ವಾತ, ಕಫ, ವಾತಕಫಗಳು; ಪಿತ್ತವಲ್ಲ; ಏಕೆಂದರೆ ಪಿತ್ತವೃದ್ಧಿಯಾದರೆ ಆರ್ತವವೃದ್ಧಿಯೂ ಆರ್ತವಸ್ರಾವವೂ ಉಂಟಾಗುತ್ತವೆ.) ಆರ್ತವ ಕ್ಷಯ ವೆಂದರೆ ಆರ್ತವಸ್ರಾವವು ಕಾಣಿಸುವುದಿಲ್ಲವೆಂದು ತಿಳಿಯಬೇಕೇ ಹೊರ್ತು ಸರ್ವಥಾ ಆರ್ತವವೇ ಕ್ಷಯಿಸಿಹೋಗುತ್ತದೆಯೆಂದಲ್ಲ; ಅಂಥವರಿಗೆ ಮೀನು, ಹುರುಳಿ, ಹುಳಿಪದಾರ್ಥ, ಎಳ್ಳು, ಉದ್ದು, ಮದ್ಯ ಇವುಗಳ ಸೇವನೆಯು ಹಿತಕರ ಗಳು. ಗೋಮೂತ್ರವನ್ನೂ, ಅರ್ಧನೀರು ಬೆರೆಸಿದ ಮೊಸರನ್ನೂ ಕುಡಿಸುವುದ ರಿಂದಲೂ ಮೊಸರು, ಶುಕ್ತ (ಗಡ್ಡೆಗಳು, ಬೇರುಗಳು, ಹಣ್ಣುಗಳು, ಸ್ನೇಹಗಳು, ಲವಣ ಇವುಗಳನ್ನು ಸೇರಿಸಿ ತಯಾರಿಸಿದ ಮದ್ಯವಿಶೇಷವು)ಗಳನ್ನು ಆಹಾರದೊಡನೆ ಸೇರಿಸಿ ತಿನ್ನಿಸುವುದರಿಂದಲೂ ಆರ್ತವವು ವೃದ್ಧಿಯಾಗುತ್ತದೆ. ಆರ್ತವ ಕ್ಷಯವೆಂದರೆ ಯಥೋಕ್ತಕಾಲಗಳಲ್ಲಿ ಆರ್ತವಸ್ರಾವವಾಗುವುದಿಲ್ಲ; ಸ್ವಲ್ಪ ಸ್ರಾವ, ಯೋನಿಶೂಲೆಗಳು ಕಂಡುಬರುತ್ತವೆಂದು ತಿಳಿಯಬೇಕು ॥೯॥

ಮೂಲ—(ಸು।ಶಾ।ಅ। ೩)—(ಆ) ಅದೃಷ್ಟಾರ್ತವಮ್—

ಅದೃಷ್ಟಾರ್ತವಾಪ್ಯಸ್ತೀತ್ಯೇಕೇ ಭಾಷನ್ತೇ; ಲಕ್ಷಣಾನಿ—

ಪೀನಪ್ರಸನ್ನವದನಾಂ ಪ್ರಕ್ಲಿನ್ನಾತ್ಮಮುಖದ್ವಿಜಾಮ್ ।
ನರಕಾಮಾಂ ಪ್ರಿಯಕಥಾಂ ಸ್ರಸ್ತಕುಕ್ಷ್ಯಕ್ಷಿಮೂರ್ಧಜಾಮ್ ॥೧೦॥
ಸ್ಫುರದ್ಭುಜಕುಚಶ್ರೋಣೀ ನಾಭ್ಯೂರುಜಘನಸ್ಫಿಚಾಮ್ ।
ಹರ್ಷೌತ್ಸುಕ್ಯಪರಾಂ ಚಾಪಿ ವಿದ್ಯಾದೃತುಮತೀಮಿತಿ ॥೧೧॥

ದೀಪಿಕೆ—ಆರ್ತವನಾಶ—

ಕೆಲವು ಸ್ತ್ರೀಯರಿಗೆ ಆರ್ತವಸ್ರಾವವೇ ಆಗುವುದಿಲ್ಲ.

ಲಕ್ಷಣ—

ಮೈ ತುಂಬಿಕೊಂಡಿರುತ್ತದೆ. ಮುಖವಿಕಾಸ, ಮೈ, ಉಗುರು, ಹಲ್ಲು ಗಳಲ್ಲಿ ಹೊಳಪೂ, ಪುರುಷಸಮಾಗಮದಲ್ಲೂ, ಪ್ರಿಯನ ವಿಷಯವಾದ ವಿಚಾರ

ಗಳನ್ನು ಕೇಳುವುದರಲ್ಲಿ ಕುತೂಹಲವೂ, ಹೊಟ್ಟೆ, ಕಣ್ಣುಗಳು, ಮುಂಭಾಗದ ಕೂದಲು ಜಗ್ಗಿದಂತೆಯೂ ಭುಜ, ಕುಚ, ಹೊಕ್ಕಳು, ನಡು, ತೊಡೆ, ಪಿರ್ರೆ, ತ್ರಿಕಗಳು ಅದರುವುದು, ಸಂತೋಷ, ಪ್ರಿಯಸಮಾಗಮದಲ್ಲಿ ಕುತೂಹಲ ಈ ಲಕ್ಷಣ ಗಳಿದ್ದರೆ ಆ ಸ್ತ್ರೀಯು ಮಾಸಿಕರಕ್ತಸ್ರಾವವಿಲ್ಲದಿದ್ದರೂ "ಋತುಮತಿ" ಯೆಂದೇ ವ್ಯವಹರಿಸಲ್ಪಡುತ್ತಾಳೆ ॥೧೦-೧೧॥

ಮೂಲ—(ಸು। ಶಾ। ಅ।೩)—(ಇ) ಆರ್ತವವೃದ್ಧಿಃ—

ತದೇವಾತಿಪ್ರಸಂಗೇನ ಪ್ರವೃತ್ತಮನೃತಾವಪಿ।
ಅಸೃಗ್ದರಂ ವಿಜಾನೀಯಾದತೋಽನ್ಯದ್ರಕ್ತಲಕ್ಷಣಾತ್ ॥೧೨॥

ಹೇತುಃ—

ಯಾತ್ಯರ್ಥಂ ಸೇವತೇ ನಾರೀ ಲವಣಾಮ್ಲಗುರೂಣಿ ಚ ॥೧೩॥
ಕಟೂನ್ಯಥ ವಿದಾಹೀನಿ ಸ್ನಿಗ್ಧಾನಿ ಪಿಶಿತಾನಿ ಚ।
ಗ್ರಾಮ್ಯೌದಕಾನಿ ಮೇದ್ಯಾನಿ ಕೃಶರಂ ಪಾಯಸಂ ದಧಿ ॥೧೪॥
ಶುಕ್ತಮಸ್ತುಸುರಾದೀನಿ ಭಜನ್ತ್ಯಾಃ ಕುಪಿತೋಽನಿಲಃ।

(ಮಾ। ನಿ।)—

ವಿರುದ್ಧಮದ್ಯಾಧ್ಯಶನಾದಜೀರ್ಣಾದ್ಗರ್ಭಪ್ರಪಾತಾದತಿಮೈಥುನಾಚ್ಚ।
ಯಾನಾಧ್ವಶೋಕಾದತಿಕರ್ಷಣಾಚ್ಚ ಭಾರಾಭಿಘಾತಾಚ್ಛಯನಾದ್ದಿವಾ ಚ ॥೧೫॥

(ಚ। ಚಿ। ೩೦)—ಸಂಪ್ರಾಪ್ತಿಃ—

ರಕ್ತಂ ಪ್ರಮಾಣಮುತ್ಕ್ರಮ್ಯ ಗರ್ಭಾಶಯಗತಾಃ ಸಿರಾಃ।
ರಜೋವಹಾಸ್ಸಮಾಶ್ರಿತ್ಯ ರಕ್ತಮಾದಾಯ ತದ್ರಜಃ ॥೧೬॥
ಯಸ್ಮಾದ್ವಿವರ್ಧಯತ್ಯಾಶು ರಕ್ತಪಿತ್ತಂ ಸಮಾರುತಮ್।

ನಿರುಕ್ತಿಃ—

ತಸ್ಮಾದಸೃಗ್ದರಂ ಪ್ರಾಹೂರಸಭಾವಾದ್ವಿಮಾನತಾ
ರಜಃ ಪ್ರದೀರ್ಯತೇ ಯಸ್ಮಾತ್ಪ್ರದರಸ್ತೇನ ಸಂಸ್ಮೃತಃ।

ಲಕ್ಷಣಾನಿ (ಸು। ಶಾ। ಅ। ೨)—

ತಸ್ಯಾತಿವೃತ್ತಾ ದೌರ್ಬಲ್ಯಂ ಭ್ರಮೋ ಮೂರ್ಛಾ ಮದಸ್ತೃಷಾ ॥೧೭॥
ದಾಹಃ ಪ್ರಲಾಪಃ ಪಾಣ್ಡುತ್ವಂ ತನ್ದ್ರಾ ರೋಗಾಶ್ಚ ವಾತಜಾಃ।

ಭೇದಾಃ—

ವಾತಪಿತ್ತಕಫೈಸ್ತ್ರಿಧಾ ಚತುರ್ಥಸ್ಸನ್ನಿಪಾತಕಃ ॥೧೮॥

(ಮಾ। ನಿ।)—

ತಂ ಶ್ಲೇಷ್ಮಪಿತ್ತಾನಿಲಸನ್ನಿಪಾತೈಶ್ಚತುಃಪ್ರಕಾರಂ ಪ್ರದರಂ ವದನ್ತಿ।

ದೀಪಿಕೆ—(ಇ) ರಜೋವೃದ್ಧಿ—

ಅತಿಪ್ರಮಾಣದಲ್ಲಿ ವೃದ್ಧಿಯಾದ ಆರ್ತವರಕ್ತವು ಋತುಕಾಲವಿಲ್ಲದಿರುವಾಗಲೂ ಹೆಚ್ಚಾಗಿ ಸ್ರಾವವಾಗುತ್ತದೆ. ಈ ಸ್ರಾವವನ್ನು ಅಸೃಗ್ದರವೆನ್ನುತ್ತಾರೆ. ಇದರಲ್ಲಿ ಆರ್ತವ (ಮಾಸಿಕರಕ್ತ)ದ ಲಕ್ಷಣಗಳಿರುವುದಿಲ್ಲ.

ಉತ್ಪತ್ತಿಕಾರಣ—ಹುಳಿ, ಉಪ್ಪು, ಖಾರ, ರಸದ್ರವ್ಯಗಳನ್ನೂ, ಪ್ರಮಾಣದಲ್ಲೂ ಗುಣದಲ್ಲೂ ಗುರುವಾದ, ಜಿಡ್ಡುಳ್ಳ, ಅರ್ಧಬೆಂದು ಹುಳಿತೇಗನೂ

ಎದೆಯುರಿಯನ್ನೂ ಉಂಟುಮಾಡುವ ಆಹಾರಗಳನ್ನೂ, ಕೋಳಿ, ಮೀನು, ಮೊದಲಾದ ಮೇದಸ್ಸನ್ನು ಹೆಚ್ಚಿಸುವ ಮಾಂಸವನ್ನೂ, ಕೃಶರ (ಅಕ್ಕಿ, ಎಳ್ಳು, ಉದ್ದು, ಮಿಶ್ರವಾದ ಭಕ್ಷ್ಯ), ಪಾಯಸ, ಮೊಸರು, ಮೊಸರಿನ ಕಟ್ಟು, ಅಕ್ಕಿ ಹಿಟ್ಟಿನಿಂದ ತಯಾರಿಸಿದ ಮದ್ಯ (ಸುರೆ), ಗೆಡ್ಡೆಗೆಣಸುಗಳು, ಎಣ್ಣೆ, ಉಪ್ಪು ಮೊದಲಾದುವನ್ನೂ ಸೇರಿಸಿ ತಯಾರಿಸಿದ ಮದ್ಯ (ಶುಕ್ತ) ಇವನ್ನು ಸೇವಿಸುವುದು. ಇವುಗಳಿಂದ ಆರ್ತವವು ವೃದ್ಧಿಯಾಗುತ್ತದೆ.

(ಮಾ।ನಿ।)—

ವಿರುದ್ಧ, ಅಜೀರ್ಣ, ಮತ್ತು ಅಧ್ಯಶನಗಳನ್ನೂ, ಮದ್ಯವನ್ನೂ ಸೇವಿಸುವುದು, ಗರ್ಭಪಾತ, ಅತಿಮೈಥುನ, ಸವಾರಿಮಾಡುವುದು, ದಾರಿನಡೆಯುವುದು, ವ್ಯಥೆ ಪಡುವುದು, ದೇಹಕೃಶವಾಗುವ ಆಹಾರವನ್ನು ಸೇವನೆಮಾಡುವುದು, ಭಾರ ಹೊರುವುದು, ಪೆಟ್ಟುಬೀಳುವುದು, ಹಗಲುಹೊತ್ತು ನಿದ್ರೆಮಾಡುವುದು.

ಸಂಪ್ರಾಪ್ತಿ ಮತ್ತು ನಿರುಕ್ತಿ—ಈ ಕಾರಣಗಳಿಂದ ವಾತವು ಪ್ರಕೋಪ ಹೊಂದಿ ಅಧಿಕ ಪ್ರಮಾಣದಲ್ಲಿ ಆರ್ತವವನ್ನು ಗರ್ಭಾಶಯಕ್ಕೆ ಹೋಗುವ ಸಿರೆಗಳಿಗೆ ತಳ್ಳುವುದರಿಂದ ಸಿರಾಮುಖಗಳು ಹರಿದು ಶರೀರದಿಂದ ಹೊರಕ್ಕೆ ಆರ್ತವವು ಸ್ರಾವವಾಗುತ್ತದೆ.

ಈ ರಕ್ತವು ರಜೋವಹಸಿರೆಗಳನ್ನು ಹರಿದು ಸ್ರವಿಸುವ ಕಾರಣ "ಅಸೃಗ್ದರ" ವೆಂದೂ ಹೆಚ್ಚು ಪ್ರಮಾಣದಿಂದ ಸ್ರವಿಸುವುದರಿಂದ "ಪ್ರದರ" ವೆಂದೂ ಲೋಕದಲ್ಲಿ "ಶೀರೆರೋಗ" "ಕುಸುಮರೋಗ" ಎಂದೂ ವಾಡಿಕೆಯಾಗಿದೆ.

ಲಕ್ಷಣ—ಹೆಚ್ಚು ಪ್ರಮಾಣದಿಂದ ಆರ್ತವವು ಸ್ರಾವವಾಗುವಕಾರಣ ಆ ಸ್ತ್ರೀಗೆ ದೌರ್ಬಲ್ಯ, ಭ್ರಮೆ, ಮೂರ್ಛೆ, ಮದ, ನೀರಡಿಕೆ, ಮೈಯ್ಯುರಿ, ಅತಿಯಾಗಿ ಮಾತುಗಳನ್ನಾಡುವುದು, ಮೈಬಿಳುಪೇರುವುದು, ತೂಕಡಿಕೆ ಮತ್ತು ಇತರ ವಾತರೋಗಗಳೂ ಉಂಟಾಗುತ್ತವೆ.

(ಮಾ।ನಿ।)—ಭೇದ—

ವಾತ, ಪಿತ್ತ, ಕಫ, ಸನ್ನಿಪಾತ ಪ್ರದರಗಳೆಂದು ನಾಲ್ಕು ವಿಧಗಳುಂಟು.

ಮೂಲ—(ಚ।ಚಿ।ಅ೩೦) (೧) ವಾತಪ್ರದರಮ್—

ರೂಕ್ಷಾದಿಭಿರ್ಮಾರುತಸ್ತು ರಕ್ತಮಾದಾಯ ಪೂರ್ವವತ್ ॥೧೯॥
ಕುಪಿತಃ ಪ್ರದರಂ ಕುರ್ಯಾಲ್ಲಿಙ್ಗಂ ತಸ್ಯ ಚ ಮೇ ಶೃಣು
ಫೇನಿಲಂ ತನು ರೂಕ್ಷಂ ಚ ಶ್ಯಾವಮಾರುಣಮೇವ ಚ ॥೨೦॥
ಕಿಂಶುಕೋದಕಸಂಕಾಶಂ ಸರುಜಂ ವಾSಥ ನೀರುಜಮ್।
ಕಟೀವಙ್ಕ್ಷಣಹೃತ್ಪಾರ್ಶ್ವಪೃಷ್ಠಶ್ರೋಣಿಷು ಮಾರುತಃ ॥೨೧॥
ಕುರುತೇ ವೇದನಾಂ ತೀವ್ರಾಮೇತದ್ವಾತಾತ್ಮಕಂ ವಿದುಃ।

(ಸು।ಶಾ।ಅ। ೨)—

ವಾತವೇದನಾಸ್ತೋದಭೇದಾದಯಃ ॥೨೨॥

ಚಿಕಿತ್ಸಾ—

ಮೂಲಕಲ್ಕನ್ತು ರೋಹೀತಾತ್ಪಾಣ್ಡುರೇ ಪ್ರದರೇ ಪಿಬೇತ್।
ಜಲೇನಾಮಲಕಾದ್ಬೀಜಂ ಕಲ್ಕಂ ವಾ ಸಸಿತಾ ಮಧುಮ್ ॥೨೩॥

ಮಧುನಾಮಲಕಂ ಚೂರ್ಣಂ ರಸಂ ವಾ ಲೇಹಯೇಚ್ಚ ತಾಮ್।
ನ್ಯಗ್ರೋಧತ್ವಕ್ಕಷಾಯೇಣ ಲೋಧ್ರಕಲ್ಕಂ ತಥಾ ಪಿಬೇತ್ ॥೨೪॥

ದೀಪಿಕೆ—(೧) ವಾತಪ್ರದರ—

ರೂಕ್ಷ, ಕಟು, ಕಹಿ, ವಗರು ಮೊದಲಾದ ರಸವುಳ್ಳ ಪದಾರ್ಥಗಳನ್ನು ಸೇವಿಸುವುದರಿಂದ ವಾತವು ಕೆರಳಿ ರಕ್ತವನ್ನು ರಜೋವಾಹಿಸಿರೆಗಳ ಮೂಲಕ ಹೊರಕ್ಕೆ ಸುರಿಸಿ ಪ್ರದರವನ್ನುಂಟುಮಾಡುತ್ತದೆ. ನೊರೆಯಿಂದ ಕೂಡಿ, ರೂಕ್ಷವಾಗಿ ಸ್ವಲ್ಪ ಪ್ರಮಾಣದಿಂದ ಕಪ್ಪಾಗಿ ಅಥವಾ ಕೆಂಪು ಮಿಶ್ರವಾದ ಕಪ್ಪುಬಣ್ಣದ ಅಥವಾ ಮುತ್ತುಗದ ಗಿಡದ ರಸದಂತಿರುವ ರಜಸ್ಸು ಸ್ರವಿಸುತ್ತದೆ; ಆ ಸ್ತ್ರೀಯಳ ನಡು, ತೊಡೆಸಂದು, ಎದೆ, ಪಕ್ಕೆ, ಬೆನ್ನು, ಪಿರ್ರೆಗಳಲ್ಲಿ ನೋವಿರುತ್ತದೆ; ಒಡೆತ, ಚುಚ್ಚುವುದು ಇವೇ ಮೊದಲಾದುವು ವಾತವೇದನೆಗಳು.

ಚಿಕಿತ್ಸೆ—ಬಿಳಿಯಬೂರಗದ ತೊಗಟೆಯನ್ನು ನೀರಿನಲ್ಲಿ ಅರೆದು ಕುಡಿಸುವುದು, ನೆಲ್ಲಿ ಬೀಜದ ಕಲ್ಕವನ್ನು ಸಕ್ಕರೆ, ಜೇನುತುಪ್ಪಗಳೊಡನೆ ಮಿಶ್ರಮಾಡಿ ನೆಕ್ಕಿಸುವುದು ; ನೆಲ್ಲಿಕಾಯಿನ ಪುಡಿಯನ್ನಾಗಲೀ ನೆಲ್ಲಿಕಾಯಿನ ರಸವನ್ನಾಗಲೀ ಜೇನುತುಪ್ಪ ಮಿಶ್ರಮಾಡಿ ಸೇವಿಸುವುದು, ಆಲದ ಮರದ ತೊಗಟೆಯ ಕಷಾಯದಲ್ಲಿ ಲೋಧ್ರದ ಕಲ್ಕವನ್ನು ಕದರಿ ಕುಡಿಸುವುದು.

ಮೂಲ—(೨) ಪಿತ್ತಪ್ರದರಮ್—

ಅಮ್ಲೋಷ್ಣಲವಣಕ್ಷಾರೈಃ ಪಿತ್ತಂ ಪ್ರಕುಪಿತಂ ಯದಾ ।
ಪೂರ್ವವತ್ಪ್ರದರಂ ಕುರ್ಯಾತ್ಪೈತ್ತಿಕಂ ಲಿಙ್ಗತಃ ಶೃಣು ॥೨೫॥
ಸನೀಲಮಥವಾ ಪೀತಮತ್ಯುಷ್ಣಮಸಿತಂ ತಥಾ।
ನಿತಾನ್ತರಕ್ತಂ ಸ್ರವತಿ ಮುಹುರ್ಮುಹುರಥಾರ್ತಿಮತ್ ॥೨೬॥
ವಿದಾಹರಾಗತೃಣ್ಮೋಹಜ್ವರಭ್ರಮಸಮಾಯುತಮ್।
ಅಸೃಗ್ದರಂ ಪೈತ್ತಿಕಂ ಚ .... ।

(ಸು।ಶಾ।ಅ।೨)—

ಊಷಚೋಷಾದಯಃ ಪಿತ್ತವೇದನಾಃ ॥೨೭॥

ಬಾಹ್ಯಚಿಕಿತ್ಸಾ—

ಆಸ್ರಾವೇ ಕ್ಷೌಮಪಟ್ಟಂ ವಾ ಭಾವಿತಂ ತೇನ ಧಾರಯೇತ್।
ಪ್ಲಕ್ಷತ್ವಕ್ಚೂರ್ಣಪಿಂಡಂ ವಾ ಧಾರಯೇನ್ಮಧುನಾ ಕೃತಮ್ ॥೨೮॥
ಯೋನ್ಯಾ ಸ್ನೇಹಾಕ್ತಯಾ ಲೋಧ್ರಪ್ರಿಯಙ್ಗುಮಧುಕಸ್ಯ ಚ।
ಧಾರ್ಯಾ ಮಧುಕೃತಾ ವರ್ತಿಃ ಕಷಾಯಾಣಾಂ ಚ ಸರ್ವಶಃ ॥೨೯॥
ಸ್ರಾವಚ್ಛೇದಾರ್ಥಮಭ್ಯಕ್ತಾಂ ಧೂಪಯೇದ್ವಾ ಘೃತಾಪ್ಲುತೈಃ।
ಸರಳಾಗುಗ್ಗುಳುಯುತೈಃ ಸತೈಲಕಟುಮತ್ಸ್ಯಕೈಃ ॥೩೦॥

(ಶಾ।ಸಂ।)—ಸಾಮಾನ್ಯಚಿಕಿತ್ಸಾ—

ದಾರ್ವೀರಸಾಂಜನಂ ಮುಸ್ತಂ ಭಲ್ಲಾತಃ ಶ್ರೀಫಲಂ ವೃಷಃ।
ಕೈರಾತಶ್ಚ ಪಿಬೇದೇಷಾಂ ಕ್ವಾಥಂ ಶೀತಂ ಸಮಾಕ್ಷಿಕಮ್ ॥೩೧॥
ಜಯೇತ್ಸಶೂಲಂ ಪ್ರದರಂ ಪೀತಶ್ವೇತಾಽಸಿತಾಽರುಣಮ್।

ದೀಪಿಕೆ—(೨) ಪಿತ್ತಪ್ರದರ—

ಹುಳಿ, ಉಪ್ಪು, ಕ್ಷಾರ, ಉಷ್ಣಕರಗಳಾದ ಆಹಾರಗಳ ಸೇವನೆಯಿಂದ ಪಿತ್ತವು ಕೆರಳಿ ರಕ್ತವನ್ನು ಕೆಡಿಸಿ ಹೊರಕ್ಕೆ ಸುರಿಸುತ್ತದೆ. ನೀಲಿ, ಹಳದಿ, ಕಪ್ಪು, ಅತಿ ಕೆಂಪುಬಣ್ಣದ ಆರ್ತವವು ಅತಿ ಬಿಸಿಯಾಗಿಯೂ ನೋವಿನಿಂದ ಕೂಡಿಯೂ ಬಾರಿ ಬಾರಿಗೂ ಸ್ರವಿಸುತ್ತದೆ. ಎದೆಯೊತ್ತುವುದು, ಮುಖ ಕೆಂಪಾಗುವುದು ಮತ್ತು ಜ್ವರ, ಭ್ರಮಣ ಇವು ಉಪದ್ರವಗಳು. ಊಷ ಚೋಷ (ದೇಹದ ಒಂದು ಭಾಗದಲ್ಲಾಗಲೀ ಎಲ್ಲಾ ಕಡೆಯಲ್ಲಾಗಲೀ ಉರಿಯುಂಟಾಗುವಿಕೆ) ಇವು ಪಿತ್ತದ ಗುರ್ತುಗಳೆಂದು ಸುಶ್ರುತರ ಮತವು.

ಶರೀರದ ಹೊರಭಾಗದ ಚಿಕಿತ್ಸೆ—ಅತಿಯಾಗಿ ರಕ್ತಸ್ರಾವವಾಗುತ್ತಿದ್ದರೆ ಪಂಚವಲ್ಕಗಳ ಕಷಾಯದಲ್ಲಿ ರೇಷ್ಮೆಬಟ್ಟೆಯನ್ನು ಅದ್ದಿ ನೆನೆಸಿದ ಪಿಚುವ (ಉಂಡೆ) ನ್ನಾಗಲಿ, ಹೂವರಶಿ ತೊಗಟೆಯ ಪುಡಿಯನ್ನು ಜೇನುತುಪ್ಪದಲ್ಲಿ ಕಲಿಶಿದ ಮುದ್ದೆಯನ್ನಾಗಲೀ, ಲೋಧ್ರ, ಫ್ರೇಂಖಣ ಅತಿಮಧುರಗಳ ಚೂರ್ಣವನ್ನು ಜೇನುತುಪ್ಪದಲ್ಲಿ ಕಲಿಶಿಮಾಡಿದ ಮುದ್ದೆಯನ್ನಾಗಲೀ ಸ್ನೇಹದಿಂದ ಲೇಪಿಸಿದ ಯೋನಿಯೊಳಕ್ಕೆ ತುಂಬಬೇಕು. ಸರಳದೇವದಾರು, ಮತ್ತು ಗುಗ್ಗುಳಗಳ ಚೂರ್ಣ, ತೈಲ, ತುಪ್ಪ, ಕಟುಮತ್ಸ್ಯ ಇವುಗಳನ್ನು ಬೆಂಕಿಯಮೇಲಿಟ್ಟು ಬರುವ ಹೊಗೆಯನ್ನು ಯೋನಿಗೆ ಧೂಪನ ಮಾಡಬೇಕು.

(ಶಾ।ಸಂ।)—ಸಾಮಾನ್ಯ ಚಿಕಿತ್ಸೆ—

ಮರದರಿಶಿನ, ರಸಾಂಜನ, ಕೊನ್ನಾರಿಗೆಡ್ಡೆ, ಗೇರುಬೀಜ, ಬಿಲ್ವಪತ್ರೆಯ ಹಣ್ಣು, ಆಡುಸೋಗೆಸೊಪ್ಪು, ನೆಲಬೇವು—ಇವುಗಳ ಕಷಾಯವನ್ನು ತಣ್ಣಗೆ ಮಾಡಿ ಜೇನುತುಪ್ಪವನ್ನು ಸೇರಿಸಿ ಕುಡಿಸಿದರೆ ಹಳದಿ, ಬಿಳಿ, ಕಪ್ಪು, ಮತ್ತು ಕೆಂಪು ಬಣ್ಣದ ಪ್ರದರಗಳು ನಿವಾರಣೆಯಾಗುತ್ತವೆ.

ಮೂಲ—(ಚ।ಚಿ।ಅ।೩೦)—(೩) ಕಫಪ್ರದರಮ್—

ಗುರ್ವಾದಿಭಿರ್ಹೇತುಭಿಶ್ಚ ಪೂರ್ವವತ್ಕುಪಿತಃ ಕಫಃ ॥೩೨॥
ಪ್ರದರಂ ಕುರುತೇ ತಸ್ಯ ಲಕ್ಷಣಂ ತತ್ತ್ವತಃ ಶೃಣು ।
ಪಿಚ್ಛಿಲಂ ಪಾಣ್ಡುವರ್ಣಂ ಚ ಗುರು ಸ್ನಿಗ್ಧಂ ಚ ಶೀತಲಮ್ ॥೩೩॥
ಸ್ರವತ್ಯಸೃಕ್ಶ್ಲೇಷ್ಮಲಂ ಚ ತಥಾ ಮನ್ದರುಜಾಕರಮ್ ।
ಛರ್ದ್ಯರೋಚಕಹೃಲ್ಲಾಸಶ್ವಾಸಕಾಸಸಮನ್ವಿತಮ್ ॥೩೪॥
ವಕ್ಷ್ಯತೇ ಕ್ಷೀರದೋಷಾಣಾಂ ಸಾಮಾನ್ಯಮಿಹ ಕಾರಣಮ್ ।

(ಸು।ಶಾ।ಅ।೨)—

ಶ್ಲೇಷ್ಮ ವೇದನಾಃ ಕಣ್ಡೂಪೈಚ್ಛಿಲ್ಯಾದಯಃ ॥೩೫॥

ಬಾಹ್ಯಚಿಕಿತ್ಸಾ—

ಕಾಸೀಸಂ ತ್ರಿಫಲಾ ಕಾಂಕ್ಷೀ ಸಾಮ್ರಜಮ್ಬ್ವಸ್ಥಿ ಧಾತಕೀ ।
ಪೈಚ್ಛಿಲ್ಯೇ ಕ್ಷೌದ್ರಸಂಯುಕ್ತಶ್ಚೂರ್ಣೋ ವೈಶದ್ಯಕಾರಕಃ ॥೩೬॥
ಪಲಾಶಸರ್ಜಜಮ್ಬೂತ್ವಕ್ಸಮಂಗಾಮೋಚಧಾತಕೀ ।
ಸಪಿಚ್ಛಿಲಾ ಪರಿಕ್ಲಿನ್ನಾ ಸ್ತಮ್ಭನಃ ಕಲ್ಕ ಇಷ್ಯತೇ ॥೩೭॥

ಪಥ್ಯಮ್—
ಅನ್ನಂ ಶಾಲಿಯವಂ ಮದ್ಯಂ ಹಿತಂ ಮಾಂಸಂ ಚ ಪಿತ್ತಲಮ್ ।

ದೀಪಿಕೆ––(೩) ಕಫಪ್ರದರ––

ಗುರು, ಸ್ನಿಗ್ಧ, ಪಿಚ್ಛಿಲ ಮೊದಲಾದ ಕಫವರ್ಧಕಗಳಾದ ಆಹಾರಸೇವನೆಯಿಂದ ಕಫವು ಪ್ರಕೋಪಿಸಿ ಆರ್ತವವನ್ನು ದೂಷಿಸಿ ಪ್ರದರವನ್ನುಂಟುಮಾಡುತ್ತದೆ. ಬಿಳುಪಾದ, ಅಂಟಾದ, ಭಾರವಾದ, ತಣ್ಣಗಿರುವ ಆರ್ತವವು ಸ್ವಲ್ಪವೇ ನೋವಿನಿಂದ ಸ್ರಾವವಾಗುತ್ತದೆ; ಆ ಸ್ತ್ರೀಯು ವಮನ ಅರುಚಿ, ಎದೆನೋವು, ಉಬ್ಬಸ, ಕೆಮ್ಮು ಮೊದಲಾದ ರೋಗಗಳಿಂದ ಪೀಡಿತಳಾಗಿರುತ್ತಾಳೆ. ಕ್ಷೀರ ದುಷ್ಟವಾಗಲು ಹೇಳಿರುವ ಕಾರಣಗಳೇ ಕಫಪ್ರದರಕ್ಕೂ ಕಾರಣಗಳಾಗಿವೆ.
(ಸು।ಶಾ।ಅ।೨)––ನವೆ, ತಣ್ಣಗಿರುವುದು, ಗರಣೆಗರಣೆಯಾಗಿ ಸ್ರಾವವಾಗುವುದು ಇವೇ ಕಫವೇದನೆಗಳು—

ಶರೀರದ ಮೇಲ್ಭಾಗದ ಚಿಕಿತ್ಸೆ––ಅನ್ನಭೇದಿ, ತ್ರಿಫಲೆ, ಪಟಿಕ, ಮಾವಿನ ಬೀಜ, ನೇರಳೆಬೀಜ, ಧಾತಕೀ ಕುಸುಮ, ಇವುಗಳ ಚೂರ್ಣವನ್ನು ಜೇನುತುಪ್ಪದಲ್ಲಿ ಕಲಿಶಿ ಯೋನಿಗೆ ಲೇಪಿಸಿದರೆ ಯೋನಿಯು ಅಗಲವಾಗುತ್ತದೆ, ಜಿಬಿಜಿಬಿ ಗುಟ್ಟುವುದು ನಿಲ್ಲುತ್ತದೆ. ಮುತ್ತುಗದ ಬೀಜ, ಸರ್ಜರಸ, ನೇರಳೆತೊಗಟೆ, ಮಂಜಿಷ್ಠೆ, ಎಲುವದಹಗಿನು, ಧಾತಕೀಕುಸುಮ ಇವುಗಳ ಕಲ್ಕವನ್ನುಯೋನಿಗೆ ಲೇಪಿಸಿದರೆ ಸ್ರಾವವು ನಿಲ್ಲುತ್ತದೆ. (ಸ್ತಮ್ಭನೌಷಧವು).

ಪಥ್ಯ––ರಕ್ತಶಾಲಿ, ಯವೆಗಳ ಅನ್ನ, ಮದ್ಯ, ಪಿತ್ತಕರಗಳಾದ ಮಾಂಸ ಇವುಗಳ ಸೇವನೆಯು ಹಿತಕರವು.

ಮೂಲ—(ಸು।ಶಾ।ಅ।೨)—(೪) ರಕ್ತಪ್ರದರಮ್––
ಕುಣಪಗನ್ಧ್ಯನಲ್ಪಂ ರಕ್ತೇನ ॥೩೮॥
ಚಿಕಿತ್ಸಾ
ಪೇಯಂ ಕುಣಪಪೂಯಾಸ್ರೇ ಚನ್ದನಂ ವಕ್ಷ್ಯತೇ ತು ಯತ್।
(ಅ।ಹೃ)—
ಪಾಯಯೇತ್ಸರ್ಪಿರಥವಾ ವಿಪಕ್ವಮಸನಾದಿಭಿಃ ॥೩೯॥
ಗುಹ್ಯರೋಗೇ ಚ ತತ್ಸರ್ವಂ ಕಾರ್ಯಂ ಸೋತ್ತರಬಸ್ತಿಕಮ್।

ದೀಪಿಕೆ––(೪) ರಕ್ತಪ್ರದರ––

ರಕ್ತ ದುಷ್ಟವಾಗಿ ಆರ್ತವವೃದ್ಧಿಯಾದರೆ ಶವದ ವಾಸನೆಯಿರುತ್ತದೆ.
(ಅ।ಹೃ।)—ಚಿಕಿತ್ಸೆ—

ಶವಗಂಧಿ, ಪೂಯಾರ್ತವಗಳಿಗೆ ಶ್ರೀಗಂಧದ ಕಷಾಯವನ್ನು ಕುಡಿಸಬೇಕು. ಅಥವಾ ಅಸನಾದಿಗಣದ್ರವ್ಯಗಳಿಂದ ತಯಾರಿಸಿದ ಘೃತವನ್ನು ಕುಡಿಸಬೇಕು ಮತ್ತು ಗುಹ್ಯರೋಗದಲ್ಲ ಹೇಳಿರುವಂತೆ ಉತ್ತರಬಸ್ತಿವಿಧಾನಾಂತವಾಗಿ ಚಿಕಿತ್ಸೆ ಮಾಡಬೇಕು.

ಮೂಲ—(ಅ|ಹೃ|)—(೫) ಶ್ಲೇಷ್ಮವಾತಪ್ರದರಮ್—

....ಗ್ರನ್ಥಿಲಂ ಗ್ರನ್ಥಿಸನ್ನಿಭಮ್।

ಚಿಕಿತ್ಸಾ—(ಸು|ಶಾ|ಅ|೨)—

ಗ್ರನ್ಥಿಭೂತೇ ಪಿಬೇತ್ಪಾಠಾಂ ತ್ರ್ಯೂಷಣಂ ವೃಕ್ಷಕಾಣಿ ಚ ॥೪೦॥

ದೀಪಿಕೆ—(೫) ಶ್ಲೇಷ್ಮವಾತಪ್ರದರ—

ಇದರಲ್ಲಿ ಗಂಟುಗಂಟಾಗಿ ಸ್ರಾವವಿರುತ್ತದೆ.

(ಸು|ಶಾ|ಅ|೨) ಚಿಕಿತ್ಸಾ—

ಅಗಳುಶುಂಠಿ, ತ್ರಿಕಟು, ಕೊಡಶಿಗೆ ತೊಗಟೆಗಳ ಕಷಾಯದ ಪಾನವು ಹಿತಕರವಾದದ್ದು.

ಮೂಲ—(ಅ|ಹೃ|)—(೬) ವಾತಪಿತ್ತಪದರಮ್—

ಕ್ಷೀಣಂ ಮಾರುತಪಿತ್ತತಃ। ಕಾರಣೈಃ ಸಮಾನಾದಲ್ಪೀಭೂತಮ್ ।

ಲಕ್ಷಣಮ್—

ದೌರ್ಬಲ್ಯಂ ಮುಖಶೋಷಶ್ಚ ಪಾಣ್ಡುತ್ವಂ ಸದನಂ ಭ್ರಮಃ। ಕ್ಲೈಬ್ಯಮ್ ॥೪೧॥

ಚಿಕಿತ್ಸಾ—

ಆರ್ತವವೃದ್ಧಿಕರಾಣ್ಯಾಹಾರವಿಹಾರಾಣ್ಯನುವಿಧಾತವ್ಯಾನಿ ॥೪೨॥

ದೀಪಿಕೆ—(೬) ವಾತಪಿತ್ತಪ್ರದರ—

ಅತ್ಯಲ್ಪ ಪ್ರಮಾಣದಲ್ಲಿ ಸ್ರಾವವಿರುತ್ತದೆ.

ಲಕ್ಷಣ—ದೌರ್ಬಲ್ಯ, ಮುಖಶೋಷ, ಪಾಂಡುತ್ವ, ಕಾರ್ಶ್ಯ, ಭ್ರಮೆ, ಷಂಡತ್ವಗಳು ಇರುತ್ತವೆ.

ಚಿಕಿತ್ಸೆ—ಆರ್ತವವರ್ಧಕಗಳಾದ ಹುರುಳಿ, ಎಳ್ಳು, ಉದ್ದು, ಸುರೆ, ಮೊಸರು, ಮೀನು ಇವುಗಳನ್ನು ಆಹಾರದೊಡನೆ ಉಪಯೋಗಿಸಬೇಕು.

ಮೂಲ—(ಸು|ಶಾ ಅ|೨)—(೭) ಕಫಪಿತ್ತಪ್ರದರಮ್—

ಪೂತಿಪೂಯನಿಭಂ ಪಿತ್ತಶ್ಲೇಷ್ಮಭ್ಯಾಮ್।

(ಅ|ಹೃ)—

ಪೂಯಾಭಂ ರಕ್ತಪಿತ್ತಾಭ್ಯಾಮ್ ವರ್ಣವೇದನಾಶ್ಚ ಶ್ಲೇಷ್ಮಪಿತ್ತಯೋರೇವ ಬೋದ್ಧವ್ಯಾಃ ॥೪೩॥

ಚಿಕಿತ್ಸಾ—

ಕುಣಪಾರ್ತವವಚ್ಚಿಕಿತ್ಸಾ ಕರ್ತವ್ಯಾ ॥೪೪॥

ದೀಪಿಕೆ—(ಸು|ಶಾ ಅ|೨)—(೭) ಕಫಪಿತ್ತಪ್ರದರ—

ಆರ್ತವವು ಪಿತ್ತಶ್ಲೇಷ್ಮಗಳಿಂದ ದುಷ್ಟವಾದರೆ ಕೊಳೆತ ಕೀವಿನಂತೆ ದುರ್ಗನ್ಧಯುಕ್ತವಾಗಿರುತ್ತದೆ. ಶ್ಲೇಷ್ಮಪಿತ್ತಗಳ ವರ್ಣವೇದನೆಗಳಿರುತ್ತವೆ ॥೪೩॥

ಪ್ರದರರೋಗ ಚಿಕಿತ್ಸೆ—ಶವಗನ್ಧವುಳ್ಳ ಆರ್ತವದೋಷಕ್ಕೆ ಮಾಡುವ ಚಿಕಿತ್ಸೆಯನ್ನೇ ಕಫಪಿತ್ತಜ ಪ್ರದರರೋಗದಲ್ಲೂ ಮಾಡಬೇಕು ॥೪೪॥

(ಸು।ಶಾ।)—
ಮೂತ್ರಪುರೀಷಗನ್ಧಿ ಸನ್ನಿಪಾತೇನ ॥೪೫॥

ಮೂಲ—(ಚ।ಚಿ।ಅ।೩೦)—(೮) ಸನ್ನಿಪಾತಪ್ರದರಮ್—
ನಾರೀ ತ್ವತಿಪರಿಕ್ಲಿಷ್ಟಾ ಯದಾ ಪ್ರಕ್ಷೀಣಶೋಣಿತಾ।
ಸರ್ವಹೇತುಸಮಾಚಾರಾದತಿವೃದ್ಧಸ್ತದಾಽನಿಲಃ ॥೪೬॥
ರಕ್ತಮಾರ್ಗೇಣ ಸೃಜತಿ ಪ್ರತ್ಯನೀಕಬಲಂ ಕಫಮ್।
ದುರ್ಗನ್ಧಂ ಪಿಚ್ಛಿಲಂ ಪೀತಂ ವಿದಗ್ಧಂ ಪಿತ್ತತೇಜಸಾ ॥೪೭॥
ವಸಾಂ ಮೇದಶ್ಚ ಯಾವದ್ಧಿ ಸಮುಪಾದಾಯ ವೇಗವಾನ್।
ಯತ್ತ್ರಿಲಿಂಗಕ್ಷೀರದೋಷಾಣಾಂ ಸಾಮಾನ್ಯಮಿಹ ಕಾರಣಮ್ ॥೪೮॥
ತದೇವ ಸಂಯುತಂ ವಿದ್ಯಾನ್ನೈತಾವಸ್ಥಮಸೃಗ್ದರಮ್।

ಚಿಕಿತ್ಸಾ—
ಸೃಜತ್ಯಪತ್ಯಮಾರ್ಗೇಣ ಸರ್ಪಿರ್ಮಜ್ಜವಸೋಪಮಮ್ ॥೪೯॥
ಶಶ್ವಚ್ಛ್ರವದಥಾಸ್ರಾವಂ ತೃಷ್ಣಾದಾಹಜ್ವರಾನ್ವಿತಮ್।
ಕ್ಷೀಣರಕ್ತಾಂ ದುರ್ಬಲಾಂ ಚ ತಾಮಸಾಧ್ಯಾಂ ವಿನಿರ್ದಿಶೇತ್॥
(ವಿವರ್ಜಯೇತ್) ॥೫೦॥

ಬಾಹ್ಯಚಿಕಿತ್ಸಾ—
ದುರ್ಗನ್ಧೀನಾಂ ಕಷಾಯಃ ಸ್ಯಾತ್ತ್ವರಃ ಕಲ್ಕ ಏವ ವಾ।
ಚೂರ್ಣಂ ವಾ ಸರ್ವಗನ್ಧಾನಾಂ ಪೂತಿಗನ್ಧಾಪಕರ್ಷಣಮ್ ॥೫೧॥

(ಅ।ಹೃ।)—ಆನ್ತರ್ಯಚಿಕಿತ್ಸಾ—
ಸಾ ಶುದ್ಧಾ ವಿಟ್ಪ್ರಭೇ ಸರ್ಪಿರ್ಹಿಜ್ಜುಸೇವ್ಯಾದಿ ಸಾಧಿತಮ್॥ ಪಿಬೇತ್ ॥೫೨॥

ದೀಪಿಕೆ (ಚ।ಚ।ಅ।೩೦)—(೮) ತ್ರಿದೋಷಜಪ್ರದರ—

ಅತಿಯಾಗಿ ರಕ್ತಕ್ಷೀಣವಾಗಿ ತುಂಬಾ ಪೀಡಿತಳಾದ ಸ್ತ್ರೀಯು ತ್ರಿದೋಷ ಕೋಪಗಳಾದ ಆಹಾರವಿಹಾರಗಳನ್ನು ಸೇವಿಸಿದರೆ ಅತಿವೃದ್ಧಿಹೊಂದಿದ ವಾತವು ಪಿತ್ತದ ಉಷ್ಣದೊಡನೆ ಸೇರಿ ಕಫವನ್ನು (ಅರಪಾಕ) ದಗ್ಧಪಾಕವಾಗುವಂತೆ ಮಾಡಿ ಮೇದಸ್ಸಿನೊಡಗೂಡಿದ ರಕ್ತವನ್ನು ರಕ್ತವಾಹಿ ಸಿರೆಗಳ ಮೂಲಕ ವೇಗವಾಗಿ ಹರಿಯುವಂತೆ ಮಾಡುತ್ತದೆ. ಈ ಸ್ರಾವವು ದುರ್ಗನ್ಧವುಳ್ಳದ್ದಾಗಿಯೂ, ಹಳದಿ ಬಣ್ಣವುಳ್ಳದ್ದಾಗಿಯೂ ಗರಣೆಗರಣೆಯಾಗಿಯೂ ಇರುತ್ತದೆ. ತ್ರಿದೋಷದುಷ್ಟ ಸ್ತನ್ಯದ ಕಾರಣಗಳೇ ತ್ರಿದೋಷದುಷ್ಟಪ್ರದರಕ್ಕೂ ಕಾರಣಗಳಾಗುತ್ತವೆ. ತ್ರಿದೋಷಗಳ ವರ್ಣಗಳುಳ್ಳದ್ದಾಗಿರುತ್ತದೆ ಮತ್ತು ತ್ರಿದೋಷಗಳ ವೇದನೆಗಳೂ ಉಂಟಾಗುತ್ತವೆ. ಮಲಮೂತ್ರಗಳ ವಾಸನೆಯಿದ್ದರೆ ತ್ರಿದೋಷದುಷ್ಟವೆಂದು ತಿಳಿಯಬೇಕು.

ತುಪ್ಪ, ಮಜ್ಜೆ, ಕೊಬ್ಬು ಇವುಗಳಂತೆ ಸದಾ ಯೋನಿಮಾರ್ಗದಿಂದ ಸ್ರಾವವಾಗುವುದು, ಬಾಯಾರಿಕೆ, ಮೈಯ್ಯುರಿತ, ಜ್ವರಗಳಿದ್ದು ರಕ್ತಕ್ಷೀಣತೆ ಬಲ ಹೀನತೆಗಳಿಂದಿರುವ ಸ್ತ್ರೀಯನ್ನು ವರ್ಜಿಸಬೇಕು (ಅಸಾಧ್ಯವೆಂದರ್ಥ).

ಬಾಹ್ಯಚಿಕಿತ್ಸೆ—

ದುರ್ಗನ್ಧವಾದ ಸ್ರಾವವಿದ್ದರೆ ದುರ್ಗನ್ಧಹರಗಳಾದ ಕಷಾಯಗಳಿಂದ ಯೋನಿಯನ್ನು ಪ್ರಕ್ಷಾಳನೆ ಮಾಡಿಸಿ ತೌವರಕಲ್ಕದಿಂದ ಲೇಪವನ್ನೂ ಸರ್ವಗಂಧ ಚೂರ್ಣದಿಂದ ಉದ್ಧೂಳನವನ್ನೂ (ಉದುರಿಸುವುದು) ಮಾಡಿಸಬೇಕು.

ಅಂತರಚಿಕಿತ್ಸೆ—

ಪಂಚಕರ್ಮಗಳಿಂದ ದೇಹಶುದ್ಧಿಮಾಡಿಸಿದ ಸ್ತ್ರೀಯಳಿಗೆ ಹಿಪ್ಪುಲಾಮಂಚ ಗಳನ್ನು ಸೇರಿಸಿ ತಯಾರಿಸಿದ ಘೃತವನ್ನು ಕುಡಿಸಬೇಕು.

ಟಿಪ್ಪಣಿ:—ಚಾತುರ್ಜಾತಕ, ಪಚ್ಚಕರ್ಪೂರ, ತಕ್ಕೋಲ, ಅಗಿಲು, ಕುಂಕುಮ ಕೇಸರಿ, ಲವಂಗ, ಇವು ಸರ್ವಗಂಧಗಳು.

೨. ಬಸ್ತಿವಿಕಾರಾಃ—ಸೋಮರೋಗಃ

ನಿದಾನಮ್—

ಸ್ತ್ರೀಣಾಮತಿಪ್ರಸಂಗಾದ್ವಾ ಶೋಕಾದ್ವಾಽತಿಶ್ರಮಾದಪಿ।
ಅಭಿಚಾರಕಯೋಗಾದ್ವಾ ಗರದೋಷಾತ್ತಥೈವ ಚ ॥೫೩॥

ಸಮ್ಪ್ರಾಪ್ತಿಃ—

ಆಪಃ ಸರ್ವಶರೀರಸ್ಥಾಃ ಕ್ಷುಭ್ಯನ್ತಿ ಪ್ರಸ್ರವನ್ತಿ ಚ।
ತಸ್ಯಾಸ್ತಾಃ ಪ್ರಚ್ಯುತಾ ಸ್ಥಾನಾನ್ಮೂತ್ರಮಾರ್ಗಂ ವ್ರಜನ್ತಿ ಹಿ ॥೫೪॥
ಪ್ರಸನ್ನಾ ವಿಮಲಾಶ್ಶೀತಾಃ ನಿರ್ಗನ್ಧಾ ನೀರುಜಃ ಸಿತಾಃ।
ಸ್ರವನ್ತಿ ಚಾತಿಮಾತ್ರಂ ತಾಃ..........................

ಲಕ್ಷಣಮ್—

..............................ಸಾ ನ ಶಕ್ನೋತಿ ದುರ್ಬಲಾ ॥೫೫॥
ವೇಗಂ ಧಾರಯಿತುಂ ತಾಸಾಂ ನ ವಿನ್ದತಿ ಸುಖಂ ಕ್ವಚಿತ್।
ಶಿರಶ್ಶಿಥಿಲತಾ ತಸ್ಯಾ ಮುಖಂ ತಾಲು ಚ ಶುಷ್ಯತಿ ॥೫೬॥
ಮೂರ್ಛಾ ಜೃಮ್ಭಾ ಪ್ರಲಾಪಶ್ಚ ತ್ವಗ್ರೂಕ್ಷಾ ಚಾತಿಮಾತ್ರತಃ।
ಭಕ್ಷ್ಯೈರ್ಭೋಜ್ಯೈಶ್ಚ ಪೇಯೈಶ್ಚ ನ ತೃಪ್ತಿಂ ಲಭತೇ ಕ್ವಚಿತ್ ॥೫೭॥

ನಿರುಕ್ತಿಃ—

ಸೋಮರೋಗ ಇತಿ ಜ್ಞೇಯೋ ದೇಹೇ ಸೋಮಕ್ಷಯಾತ್ ಸ್ತ್ರಿಯಾಃ।
ಶರೀರಧಾರಣಾಚ್ಚಾಪಿ ಸೋಮ ಇತ್ಯಭಿಧೀಯತೇ ॥೫೮॥

(ಮಾ।ನಿ।)—

ಸನ್ಧಾರಣಾಚ್ಛರೀರಸ್ಯ ತಾ ಆಪಃ ಸೋಮಸಂಜ್ಞಿತಾಃ।
ತತಃ ಸೋಮಕ್ಷಯಾತ್ ಸ್ತ್ರೀಣಾಂ ಸೋಮರೋಗ ಇತಿ ಸ್ಮೃತಃ ॥೫೯॥
ಸೋಽತಿಕ್ರಾನ್ತಂ ಕ್ರಮೇಣೈವ ಸ್ರವೇನ್ಮೂತ್ರಮಭೀಕ್ಷ್ಣಶಃ।
ಮೂತ್ರಾತಿಸಾರಮಪ್ಯೇವಂ ತಮಾಹುರ್ಬಲನಾಶನಮ್ ॥೬೦॥
ಚರಕೇ ತ್ರಿದೋಷಜನ್ಯಪ್ರದರೇಽನ್ತರ್ಭಾವಿತೋಽಯಮ್।

ಚಿಕಿತ್ಸಾ—

ಕದಳೀನಾಂ ಫಲಂ ಪಕ್ವಂ ಧಾತ್ರೀಫಲರಸಂ ಮಧು।
ಶರ್ಕರಾಪಯಸೋಪೇತಂ ಸೋಮಧಾರಣಮುತ್ತಮಮ್ ॥೬೧॥

ಮಾಷಚೂರ್ಣಂ ಚ ಮಧುಕಂ ವಿದಾರೀಮಧುಶರ್ಕರಾ ।
ಪಯಸಾ ಪಾಯಯೇತ್ಪ್ರತಸ್ತ್ವಪಾಂ ಧಾರಣಮುತ್ತಮಮ್ ॥೬೨॥

೨. ಬಸ್ತಿರೋಗ—ಸೋಮರೋಗ

ಕಾರಣ—

ಅತಿಮೈಥುನ, ಮನೋವ್ಯಥೆ, ಅತ್ಯಾಯಾಸ, ಅಭಿಚಾರಕಕ್ರಿಯೆ (ಶೂನ್ಯ ಮಾಡಿಸುವುದು), ಕೈಮಸಕು (ಗರ).

ರೋಗ ಪ್ರಸರಿಸುವ ವಿಧಾನ—

ಈ ಕಾರಣಗಳಿಂದ ಸ್ತ್ರೀಯರ ಸರ್ವದೇಹಗತವಾದ ಅಬ್ಧಾತುವು ಕಲಕಲ್ಪಟ್ಟು ಸ್ವಸ್ಥಾನದಿಂದ ಜಿನುಗುತ್ತಾ ಮೂತ್ರಮಾರ್ಗಕ್ಕೆ ಸೇರಿ ಅತಿಪ್ರಮಾಣ ದಿಂದ ತಿಳಿಯಾಗಿಯೂ, ಮಲಮಿಶ್ರವಾಗಿಯೂ, ತಣ್ಣಗೂ, ವಾಸನೆಯಿಲ್ಲದೆಯೂ, ನೋವಿಲ್ಲದೆಯೂ, ಬೆಳ್ಳಗೂ ಹೊರಕ್ಕೆ ಸ್ರವಿಸುತ್ತದೆ.

ಲಕ್ಷಣ—

ಇದರ ಸ್ರಾವವನ್ನು ತಡೆಯಲು ಆ ಸ್ತ್ರೀಯಳಿಗೆ ಶಕ್ತಿಕಡಮೆಯಾಗಿರು ತ್ತದೆ. ಆಕೆಗೆ ಸ್ವಲ್ಪವೂ ಸುಖವಿರುವುದಿಲ್ಲ, ತಲೆ ಬೆಂಡಾಗಿಯೂ, ಬಾಯಿ ಗಂಟಲು ದ್ರವವಿಲ್ಲದೆ ಒಣಗುತ್ತಲೂ, ಮೂರ್ಛೆ, ಆಕಳಿಕೆಗಳಿದ್ದು ಅತಿಮಾತು ಗಳನ್ನು ಆಡುತ್ತಲೂ ಇರುತ್ತಾಳೆ, ಚರ್ಮವು ಒರಟಾಗಿರುತ್ತದೆ. ಆಹಾರ ತಿಂಡಿ ಗಳನ್ನೆಷ್ಟು ತಿಂದರೂ ಆಕೆಗೆ ತೃಪ್ತಿಯೇ ಆಗುವುದಿಲ್ಲ.

ನಿರುಕ್ತಿ—

ಶರೀರಧಾರಣೆಗೆ ಶೀತವೀರ್ಯವುಳ್ಳ ಅಬ್ಧಾತುವು ಅತ್ಯವಶ್ಯಕವಾದದ್ದು. ಶರೀರಧಾರಣೆ ಮಾಡುವುದರಿಂದಲೇ ಸೋಮಧಾತುವೆಂದೂ ಹೆಸರಾಗಿರುತ್ತದೆ. ಇದು ಕ್ಷೀಣವಾದರೆ ಸೋಮರೋಗವೆನ್ನುತ್ತಾರೆ. ಕ್ರಮತಪ್ಪಿ ಅತಿಯಾಗಿ ಮೂತ್ರವು ಸ್ರಾವವಾಗುವುದರಿಂದ ಮೂತ್ರಾತಿಸಾರವೆಂತಲೂ ಹೇಳುತ್ತಾರೆ. ಈ ವ್ಯಾಧಿಯು ಶರೀರದ ಬಲವನ್ನೇ ಕುಗ್ಗಿಸುತ್ತದೆ. ಚರಕಸಂಹಿತೆಯಲ್ಲಿ ಈ ರೋಗವನ್ನು ತ್ರಿದೋಷಜನ್ಯ ಪ್ರದರರೋಗದಲ್ಲೇ ಸೇರಿಸಿರುತ್ತಾರೆ.

೩. ಯೋನಿವ್ಯಾಪತ್

ಮೂಲ—(ಚ।ಚಿ।ಅ।೩೦)-ಹೇತುಃ—

ವಿಶಂತಿರ್ವ್ಯಾಪದೋ ಯೋನೇರ್ನಿರ್ದಿಷ್ಟಾ ರೋಗಸಂಗ್ರಹೇ ।
ಮಿಥ್ಯಾಚಾರೇಣ ತಾಃ ಸ್ತ್ರೀಣಾಂ ಪ್ರದುಷ್ಟೇನಾರ್ತವೇನ ಚ ॥೬೩॥
ಜಾಯನ್ತೇ ಬೀಜದೋಷಾಚ್ಚ ದೈವಾಚ್ಚ ಶ್ರುಣು ತಾಃ ಪೃಥಕ್ ।

೧. ವಾತಲಾ—

ವಾತಲಾಹಾರಚೇಷ್ಟಾಯಾ ವಾತಲಾಯಾಃ ಸಮೀರಣಃ ॥೬೪॥
ವಿವೃದ್ಧೋ ಯೋನಿಮಾಶ್ರಿತ್ಯ ಯೋನೇಸ್ತೋದಂ ಸವೇದನಮ್ ।
ಸ್ತಮ್ಭಂ ಪಿಪೀಲಿಕಾಸೃಪ್ತಿಮಿವ ಕರ್ಕಶತಾಂ ತಥಾ ॥೬೫॥

ಕರೋತಿ ಸುಪ್ತಿಮಾಯಾಸಂ ವಾತಜಾಂಶ್ಚಾಪರಾನ್ ಗದಾನ್ ।
ಸಾ ಸ್ಯಾತ್ಸಶಬ್ದರುಕ್ಫೇನತನುರೂಕ್ಷಾರ್ತವಾಽನಿಲಾತ್ ॥೬॥
೨. ಉದಾವರ್ತಾ—
ವೇಗೋದಾವರ್ತನಾದ್ಯೋನಿಮುದಾವರ್ತಯತೇಽನಿಲಃ।
ಸಾ ರುಗಾರ್ತಾ ರಜಃ ಕೃಚ್ಛ್ರೇಣೋದಾವೃತ್ತಂ(ತ್ತ) ವಿಮುಂಚತಿ ॥೭॥
ಆರ್ತವೇ ಸಾ ವಿಮುಕ್ತೇ ತು ತತ್ಕ್ಷಣಂ ಲಭತೇ ಸುಖಮ್।
ರಜಸೋ ಗಮನಾದೂರ್ಧ್ವಂ ಜ್ಞೇಯೋದಾವರ್ತಿನೀ ಬುಧೈಃ ॥೮॥
(ಸು।ಉ।ಅ। ೩೮)—
ಸಫೇನಿಲಮುದಾವರ್ತಾ ರಜಃ ಕೃಚ್ಛ್ರೇಣ ಮುಂಚತಿ ।
೩. ವನ್ಧ್ಯಾಂ ನಷ್ಟಾರ್ತವಾಂ ವಿದ್ಯಾತ್.... ... ॥೯॥
(ಚ।ಚಿ।ಅ। ೩೦) ಅರಜಸ್ಕಾ—
ಯೋನಿಗರ್ಭಾಶಯಸ್ಥಂ ಚೇತ್ಪಿತ್ತಂ ಸನ್ದೂಷಯೇದಸೃಕ್।
ಸಾರಜಸ್ಕಾ ಮತಾ ಕಾರ್ಶ್ಯವೈವರ್ಣ್ಯಜನನೀ ಭೃಶಮ್ ॥೧೦॥
೪. ಉಪಪ್ಲುತಾ—
ಗರ್ಭಿಣ್ಯಾಃ ಶ್ಲೇಷ್ಮಲಾಭ್ಯಾಸಾಚ್ಛರ್ದಿನಿಃಶ್ವಾಸನಿಗ್ರಹಾತ್ ।
ವಾಯುಃ ಕ್ರುದ್ಧಃ ಕಫಂ ಯೋನಿಮುಪನೀಯ ಪ್ರದೂಷಯೇತ್ ॥೧೧॥
ಪಾಣ್ಡುಂ ಸತೋದಮಾಸ್ರಾವಂ ಶ್ವೇತಂ ಸ್ರವತಿ ವಾ ಕಫಮ್।
ಕಫವಾತಾಮಯವ್ಯಾಪ್ತಾ ಸಾ ಸ್ಯಾದ್ಯೋನಿರುಪಪ್ಲುತಾ ॥೧೨॥
೫. ಪರಿಪ್ಲುತಾ—
ಪಿತ್ತಲಾಯಾ ನೃಸಂವಾಸೇ ಕ್ಷವಥೂದ್ಗಾರಧಾರಣಾತ್ ।
ಪಿತ್ತಸಮ್ಮೂರ್ಛಿತೋ ವಾಯುರ್ಯೋನಿಂ ದೂಷಯತಿ ಸ್ತ್ರಿಯಾಃ ॥೧೩॥
ಶೂನಾ ಸ್ಪರ್ಶಾಕ್ಷಮಾ ಸಾರ್ತಿರ್ನೀಲಪೀತಮಸೃಕ್ಸ್ರವೇತ್।
ಶ್ರೋಣಿವಙ್ಕ್ಷಣಪೃಷ್ಠಾರ್ತಿಜ್ವರಾರ್ತಾಯಾಃ ಪರಿಪ್ಲುತಾ ॥೧೪॥
ಚತಸೃಷ್ವಪಿ ಚಾದ್ಯಾಸು ಭವನ್ತ್ಯನಿಲವೇದನಾಃ।

೩. ಯೋನಿವ್ಯಾಪತ್ತು

ದೀಪಿಕೆ—(ಚ।ಚಿ।ಅ. ೩೦)—

ಸ್ತ್ರೀಯರಿಗೆ ಮಿಥ್ಯಾಹಾರವಿಹಾರಗಳಿಂದಲೂ, ದುಷ್ಟವಾದ ಆರ್ತವದಿಂದಲೂ ಬೀಜದೋಷದಿಂದಲೂ, ದೈವಿಕವಾಗಿಯೂ ಇಪ್ಪತ್ತು ವಿಧಗಳಾದ ಯೋನಿರೋಗಗಳುಂಟಾಗುತ್ತವೆ. ಅವುಗಳನ್ನು ಪ್ರತ್ಯೇಕಪ್ರತ್ಯೇಕವಾಗಿ ವಿವರಿಸಲಾಗುತ್ತದೆ.

೧. ವಾತದುಷ್ಟವಾದ ಯೋನಿ—

ವಾತಪ್ರಕೋಪಗಳಾದ ಆಹಾರವಿಹಾರಗಳನ್ನು ಸೇವಿಸುವ ಸ್ತ್ರೀದೇಹದಲ್ಲಿ ವಾತವೃದ್ಧಿಯಾಗಿ ಯೋನಿಯನ್ನಾಶ್ರೈಸಿ ನೋವು, ಚುಚ್ಚುವಿಕೆ, ಬಿಗಿತ, ಇರುವೆ ಹರಿದಂತೆ ಅನುಭವ, ಕಠಿಣತ್ವ, ಸ್ಪರ್ಶಹಾನಿ, ಆಯಾಸ—ಇವೇ ಮೊದಲಾದ ವಾತವೇದನೆಗಳನ್ನುಂಟುಮಾಡುತ್ತದೆ. ನೀರಾಗಿ ಜಿಡ್ಡಿಲ್ಲದ ರಜಸ್ಸು ನೋವಿನಿಂದಲೂ ನೊರೆನೊರೆಯಾಗಿಯೂ ಶಬ್ದದಿಂದ ಕೂಡಿಯೂ ಹರಿದುಬರುತ್ತದೆ.

೨. ಉದಾವರ್ತಿನೀ--

ಮಲಮೂತ್ರಾದಿ ವೇಗಗಳನ್ನು ತಡೆಯುವುದರಿಂದ ವಾತವು ಪ್ರಕೋಪ ಹೊಂದಿ ರಜಸ್ಸನ್ನು ಮೇಲ್ಗಡೆಗೆ ತಿರುಗಿಸುವ ಕಾರಣ ಆ ಸ್ತ್ರೀಯಳಿಗೆ ಪ್ರಯಾಸ ದಿಂದಲೂ ನೋವಿನಿಂದಲೂ ರಜಸ್ಸ್ರಾವವಾಗುತ್ತದೆ. ರಜಸ್ಸ್ರಾವವಾದ ಮೇಲೆ ಆಕೆಗೆ ಸೌಖ್ಯವಾಗುತ್ತದೆ. ರಜಸ್ಸು ಮೇಲ್ಮುಖವಾಗಿ ಹರಿದು ಕಷ್ಟದಿಂದ ಯೋನಿ ಯಿಂದ ಸ್ರಾವವಾಗುವ ಕಾರಣ ಈ ವ್ಯಾಧಿಗೆ ಉದಾವರ್ತವೆಂದು ಹೆಸರು.

೩. ವನ್ಧ್ಯಾ--ಅರಜಸ್ಕಾ--

ಪ್ರಕುಪಿತವಾದ ಪಿತ್ತವು ಸ್ತ್ರೀಯಳ ಯೋನಿಗರ್ಭಾಶಯಗಳನ್ನು ಸೇರಿ ಆರ್ತವವನ್ನು ಕೆಡಿಸಿ ಆ ಸ್ತ್ರೀಯಳನ್ನು ಕೃಶಳನ್ನಾಗಿಯೂ, ವರ್ಣವಿಕಾರ ವುಳ್ಳವಳನ್ನಾಗಿಯೂ ಮಾಡುತ್ತದೆ.

೪. ಉಪಪ್ಲುತಾ--

ಗರ್ಭಿಣಿಯು ಕಫವರ್ಧಕಗಳಾದ ಆಹಾರಗಳನ್ನು ಸೇವಿಸುತ್ತಲೂ ವಮನ ವನ್ನು ತಡೆಯುವುದರಿಂದಲೂ ವಾತವು ಪ್ರಕೋಪಗೊಂಡು ಕಫವನ್ನು ಯೋನಿಗೆ ತೆಗೆದುಕೊಂಡು ಬಂದು ಬಿಳುಪಾಗಿಯೂ ನೋವಿನಿಂದ ಕೂಡಿಯೂ ಕಫಮಿಶ್ರ ವಾಗಿಯೂ ರಜಸ್ಸ್ರಾವವನ್ನುಂಟುಮಾಡುತ್ತದೆ. ಈ ವ್ಯಾಧಿಗೆ "ಉಪಪ್ಲುತಾ ಯೋನಿವ್ಯಾಪತ್" ಎಂದು ಹೆಸರು.

೫. ಪರಿಪ್ಲುತಾ--

ಪಿತ್ತಪ್ರಕೃತಿಯಸ್ತ್ರೀಯಳು ಪುರುಷನೊಡನೆ ಸಂಭೋಗಮಾಡುವಾಗ ಶೀನನ್ನೂ, ತೇಗುವುದನ್ನೂ ತಡೆದರೆ ಪಿತ್ತದೊಡನೆ ಸೇರಿದ ವಾಯುವು ಆಕೆಯ ಯೋನಿಯನ್ನು ಕೆಡಿಸಿ ಊದುವಂತೆಯೂ ಸ್ಪರ್ಶಮಾಡಲು ಸಹಿಸದಂತೆಯೂ, ನೋವಿನಿಂದ ಕಪ್ಪು, ಹಳದಿ ಬಣ್ಣದ ರಜಸ್ಸ್ರಾವವಾಗುವಂತೆಯೂ ಸೊಂಟ, ಬೆನ್ನು, ತೊಡೆಸಂದುಗಳಲ್ಲಿ ನೋವು ಇರುವಂತೆಯೂ ಮಾಡುತ್ತದೆ. ಆಕೆಗೆ ಜ್ವರವೂ ಇರುತ್ತದೆ. ಈ ವ್ಯಾಧಿಗೆ "ಪರಿಪ್ಲುತಾಯೋನಿವ್ಯಾಪತ್" ಎನ್ನುತ್ತಾರೆ. ಈ ನಾಲ್ಕು ವ್ಯಾಧಿಗಳಲ್ಲೂ ವಾತವೇದನೆಗಳು ಇರುತ್ತವೆ.

ಮೂಲ—೬. ಪಿತ್ತಜಾ—

ವ್ಯಾಪತ್ಕಟ್ವಮ್ಲಲವಣಕ್ಷಾರಾದ್ಯೈಃ ಪಿತ್ತಜಾ ಭವೇತ್ ।
ದಾಹಪಾಕಜ್ವರೋಷ್ಣಾರ್ತಾ ನೀಲಪೀತಾಸಿತಾರ್ತವಾ ॥೭೫॥
ಭೃಶೋಷ್ಣಕುಣಪಸ್ರಾವಾ ಯೋನಿಃ ಸ್ಯಾತ್ಪಿತ್ತದೂಷಿತಾ ।

೭. ಅಪ್ರಜಾ (ರುಧಿರಕ್ಷರಾ)—

ರಕ್ತಪಿತ್ತಕರೈರ್ನಾರ್ಯಾ ರಕ್ತಂ ಪಿತ್ತೇನ ದೂಷಿತಮ್ ॥೭೬॥
ಅತಿಪ್ರವರ್ತತೇ ಯೋನ್ಯಾಂ ಲಬ್ಧೇ ಗರ್ಭೇಽಪಿ ಸಾಽಪ್ರಜಾ ।

೮. ವಾಮಿನೀ—

ಷಡಹಾತ್ಸಪ್ತರಾತ್ರಾದ್ವಾ ಶುಕ್ರಂ ಗರ್ಭಾಶಯಂ ಗತಮ್ ॥೭೭॥
ಸರುಜಂ ನೀರುಜಂ ವಾಽಪಿ ಯಾ ಸ್ರವೇತ್ಸಾ ತು ವಾಮಿನೀ ।

೯. ಅನ್ತರ್ಮುಖೀ (ಸ್ರಂಸಿನೀ)—
ವ್ಯವಾಯಮತಿತೃಪ್ತಾಯಾ ಭಜನ್ತ್ಯಾಸ್ತ್ವನ್ನಪೀಡಿತಃ ॥೭೮॥
ವಾಯುರ್ಮಿಥ್ಯಾಸ್ಥಿತಾಙ್ಗ್ಯಾಯಾ ಯೋನಿಸ್ರೋತಸಿ ಸಂಸ್ಥಿತಃ ।
ವಕ್ರಯತ್ಯಾನನಂ ಯೋನ್ಯಾಃ ಸ್ವಾಸ್ಥಿಮಾಂಸಾನಿಲಾರ್ತಿಭಿಃ ॥೭೯॥
ಭೃಶಾರ್ತಿರ್ಮೈಥುನಾಶಕ್ತಾ ಯೋನಿರನ್ತರ್ಮುಖೀ ಮತಾ ।
ಪ್ರಸ್ರಂಸಿನೀ ಸ್ಪನ್ದತೇ ತು ಕ್ಷೋಭಿತಾ ದುಃಪ್ರಸೂಶ್ಚ ಯಾ ॥೮೦॥
೧೦. ಪುತ್ರಘ್ನೀ—
ರೌಕ್ಷ್ಯಾದ್ವಾಯುರ್ಯದಾ ಗರ್ಭಂ ಜಾತಂ ಜಾತಂ ವಿನಾಶಯೇತ್ ।
ದುಷ್ಟಶೋಣಿತಜಂ ನಾರ್ಯಾಃ ಪುತ್ರಘ್ನೀ ನಾಮ ಸಾ ಮತಾ ॥೮೧॥
(ಚತಸೃಷ್ವಪಿ ಚಾದ್ಯಾಸು ಪಿತ್ತಲಿಙ್ಗೋಚ್ಛ್ರಯೋ ಭವೇತ್ ।)

ದೀಪಿಕೆ—

೭. ಪಿತ್ತಜಾ—ಕಟು, ಆಮ್ಲ, ಕ್ಷಾರ, ಲವಣಗಳನ್ನು ಸೇವಿಸಿದರೆ ಪಿತ್ತವು ಪ್ರಕುಪಿತವಾಗಿ ಜ್ವರ, ಪಾಕ, ಉರಿ, ಬಿಸಿಗಳಿಂದ ಪೀಡಿತಳಾಗಿ ನೀಲಿಬಣ್ಣ, ಹಳದಿ, ಕಪ್ಪು ಬಣ್ಣದ ಆರ್ತವವು ಸ್ರಾವವಾಗುತ್ತದೆ. ಈ ಸ್ರಾವವು ಅತಿ ಬಿಸಿಯಾಗಿಯೂ ಹೆಣದ ವಾಸನೆಯುಳ್ಳದ್ದಾಗಿಯೂ ಇರುತ್ತದೆ. ಈ ವ್ಯಾಧಿಗೆ ಪಿತ್ತದೂಷಿತ ಯೋನಿಯೆನ್ನುತ್ತಾರೆ.

೭. ಅಪ್ರಜಾ—(ರುಧಿರಕ್ಷರಾ)—ರಕ್ತಪಿತ್ತವೃದ್ಧಿಯಾಗುವ ಆಹಾರಗಳನ್ನು ಸೇವಿಸಿದರೆ ಪಿತ್ತವು ಪ್ರಕೋಪವಾಗಿ ರಕ್ತವನ್ನು ಕೆಡಿಸಿ ಯೋನಿದ್ವಾರದಿಂದ ಅತಿಯಾಗಿ ರಕ್ತಸ್ರಾವವಾಗುತ್ತದೆ. ಈ ಸ್ತ್ರೀಯು ಗರ್ಭಧರಿಸಿದರೂ ಅದು ರಕ್ತಸ್ರಾವದೊಡನೆ ಹೊರಕ್ಕೆ ಬಂದುಬಿಡುತ್ತದೆಯಾಗಿ ಅಪ್ರಜಾ ಎಂದೂ ರುಧಿರಕ್ಷರಾ ಎಂದೂ ಹೆಸರು.

೮. ವಾಮಿನೀ—ಗರ್ಭಾಶಯದಲ್ಲಿ ಬಂದ ಶುಕ್ರವು ಆರು ದಿನ ಅಥವಾ ಏಳು ದಿನಗಳಲ್ಲಿ ನೋವಿನಿಂದ ಕೂಡಿಯಾಗಲೀ ನೋವಿಲ್ಲದೆಯಾಗಲೀ ಹೊರಕ್ಕೆ ಸ್ರಾವವಾದರೆ ಆ ವ್ಯಾಧಿಗೆ ವಾಮಿನೀ ಎಂದು ಹೆಸರು.

೯. ಅಂತರ್ಮುಖೀ—(ಸ್ರಂಸಿನೀ)—ಅತಿಯಾಗಿ ಆಹಾರವನ್ನು ತಿಂದ ಕೂಡಲೇ ಅಂಗಗಳನ್ನು ವ್ಯತ್ಯಸ್ಥಮಾಡಿ ಮೈಥುನವನ್ನು ಆಚರಿಸುವ ಸ್ತ್ರೀಯಳ ಅಂತ್ರಗಳಿಂದ ಪೀಡಿತವಾದ ವಾಯುವು ಯೋನಿದ್ವಾರದಲ್ಲಿ ಸೇರಿ ಅಸ್ಥಿಮಾಂಸಗಳನ್ನು ಹಿಂಸಿಸಿ ಯೋನಿಮುಖವನ್ನು ಸೊಟ್ಟಾಗಿ ಮಾಡುತ್ತದೆ. ಆಕೆಗೆ ಹೆಚ್ಚು ನೋವಿರುತ್ತದೆ, ಮೈಥುನಕರ್ಮಕ್ಕೆ ಶಕ್ತಳಾಗುವುದಿಲ್ಲ. ಈ ವ್ಯಾಧಿಗೆ ಅಂತರ್ಮುಖೀ ಎಂದು ಹೆಸರು. ಯೋನಿಕ್ಷೋಭೆ ಸ್ಪನ್ದನ ಕಷ್ಟಪ್ರಸವಗಳುಂಟಾಗುವ ಕಾರಣ ಸ್ರಂಸಿನೀ ಎಂದೂ ಹೆಸರು.

೧೦. ಪುತ್ರಘ್ನೀ—ರೂಕ್ಷದೇಹವುಳ್ಳ ಸ್ತ್ರೀಗೆ ರಕ್ತದುಷ್ಟವಾಗಿ ಗರ್ಭವು ಧಾರಣೆಯಾದಾಗಲೆಲ್ಲಾ ಆ ಗರ್ಭವು ನಾಶವಾಗುತ್ತಲೇ ಇರುತ್ತಾಗಿ ಈ ವ್ಯಾಧಿಗೆ ಪುತ್ರಘ್ನೀ ಎಂದು ಹೆಸರು. ಈ ಮೇಲಿನ ನಾಲ್ಕು ಯೋನಿರೋಗಗಳೂ ಪಿತ್ತಾಧಿಕ್ಯದಿಂದುಂಟಾಗುತ್ತವೆಯಾಗಿ ಪಿತ್ತಚಿಹ್ನೆಗಳೇ ಅಧಿಕವಾಗಿರುತ್ತವೆ.

ಮೂಲ—೧೧. ಕಫಜಾ—

ಕಫೋಽಭಿಷ್ಯನ್ದಿಭಿರ್ವೃದ್ಧೋ ಯೋನಿಂ ಚೇದ್ದೂಷಯೇತ್ ಸ್ತ್ರಿಯಾಃ ।
ಸ ಕುರ್ಯಾತ್ಪಿಚ್ಛಿಲಾಂ ಶೀತಾಂ ಕಣ್ಡೂಗ್ರಸ್ತಾಲ್ಪವೇದನಾಮ್ ॥೮೨॥
ಪಾಂಡುವರ್ಣಾಂ ತಥಾ ಪಾಂಡುಪಿಚ್ಛಿಲಾರ್ತವವಾಹಿನೀಮ್ ॥

೧೨. ಕರ್ಣಿನೀ—

ಅಕಾಲೇ ವಾಹಮಾನಾಯಾ ಗರ್ಭೇಣ ಪಿಹಿತೋಽನಿಲಃ ॥೮೩॥
ಕರ್ಣಿಕಾಂ ಜನಯೇದ್ಯೋನೌ ಶ್ಲೇಷ್ಮರಕ್ತೇನ ಮೂರ್ಛಿತಃ ।
ರಕ್ತಮಾರ್ಗಾವರೋಧಿನ್ಯಾ ಸಾ ತಯಾ ಕರ್ಣಿನೀ ಮತಾ ॥೮೪॥

೧೩. ಶುಷ್ಕಯೋನಿಃ—

ವ್ಯವಾಯಕಾಲೇ ರುನ್ಧನ್ತ್ಯಾ ವೇಗಾನ್ಪ್ರಕುಪಿತೋಽನಿಲಃ ।
ಕುರ್ಯಾದ್ವಿಣ್ಮೂತ್ರಸಙ್ಗಾರ್ತಿಂ ಶೋಷಂ ಯೋನಿಮುಖಸ್ಯ ಚ ॥೮೫॥

೧೪. ಅಚರಣಾ—

ಯೋನ್ಯಾಮಧಾವನಾತ್ಕಣ್ಡೂಂ ಜಾತಾಃ ಕುರ್ವನ್ತಿ ಜನ್ತವಃ।
ಸಾ ಸ್ಯಾದಚರಣಾ ಕಣ್ಡ್ವಾ ತಯಾಽತಿನರಕಾಂಕ್ಷಿಣೀ ॥೮೬॥

೧೫. ಅತಿಚರಣಾ—

ಪವನೋಽತಿವ್ಯವಾಯೇನ ಶೋಫಸುಪ್ತಿರುಜಃ ಸ್ತ್ರಿಯಾಃ।
ಕರೋತಿ ಕುಪಿತೋ ಯೋನೌ ಸಾ ಚಾತಿಚರಣಾ ಮತಾ ॥೮೭॥

೧೬. ಪ್ರಾಕ್ಚರಣಾ—

ಮೈಥುನಾದತಿಬಾಲಾಯಾಃ ಪೃಷ್ಠಕಟ್ಯೂರುವಂಕ್ಷಣಮ್ ।
ರುಜನ್ದೂಷಯತೇ ಯೋನಿಂ ವಾಯುಃ ಪ್ರಾಕ್ಚರಣಾ ಹಿ ಸಾ ॥೮೮॥

ದೀಪಿಕೆ—

೧೧. ಕಫಜಾ—ಮೊಸರು ಮಾಂಸ ಮೊದಲಾದ ಕಫವರ್ಧಕ ಪದಾರ್ಥಗಳ ಸೇವನೆಯಿಂದ ಪ್ರಕುಪಿತವಾದ ಕಫವು ಸ್ತ್ರೀಯರ ಯೋನಿಯನ್ನು ಕೆಡಿಸಿ ಗರಣೆಯಾಗಿ ತಣ್ಣಗೆ ನವೆಯಿಂದ ಕೂಡಿ ಸ್ವಲ್ಪ ನೋವಿನಿಂದ ಬೆಳ್ಳಗೆ ಯೋನಿ ಗರಣೆ ಸ್ರಾವವನ್ನುಂಟುಮಾಡಿದರೆ ಕಫದೂಷಿತಯೋನಿಯೆನ್ನುತ್ತಾರೆ.

೧೨. ಕರ್ಣಿನೀ—ಪ್ರಸವವೇದನೆಯಿಲ್ಲದಿರುವಾಗ ಮುಲುಕಿದರೆ ಗರ್ಭದಿಂದ ತಳ್ಳಲ್ಪಟ್ಟ ವಾತವು ಶ್ಲೇಷ್ಮರಕ್ತಗಳೊಡನೆ ಸೇರಿ ಯೋನಿಯಲ್ಲಿ ಕರ್ಣಿಕೆಯನ್ನುಂಟುಮಾಡುತ್ತದೆ. ಜಪಾಕುಸುಮದ (ದಾಸವಾಳದಹೂವಿನ) ಆಕಾರದ ಮಾಂಸಪಿಂಡವನ್ನುಂಟುಮಾಡುತ್ತದೆ. ಈ ಮಾಂಸಪಿಂಡವು ರಕ್ತಸ್ರಾವವನ್ನು ತಡೆಗಟ್ಟುತ್ತದೆಯಾಗಿ ಇದಕ್ಕೆ ಕರ್ಣಿನೀ ಎನ್ನುತ್ತಾರೆ.

೧೩. ಶುಷ್ಕಯೋನಿಃ—ಸಂಭೋಗಕಾಲದಲ್ಲಿ ಮಲಮೂತ್ರಗಳ ವೇಗವನ್ನು ತಡೆದರೆ ವಾತಪ್ರಕೋಪವುಂಟಾಗಿ ಯೋನಿಮುಖವನ್ನು ಶೋಷಣೆ ಮಾಡುತ್ತದೆ. ದ್ರವರಹಿತವಾದ ಈ ಯೋನಿಗೆ ಶುಷ್ಕಯೋನಿಯೆನ್ನುತ್ತಾರೆ.

೧೪. ಅಚರಣಾ—ಯೋನಿಪ್ರಕ್ಷಾಳನೆ ಮಾಡದಿದ್ದರೆ ಯೋನಿಯಲ್ಲಿ ಸಣ್ಣಕ್ರಿಮಿಗಳುಂಟಾಗಿ ನವೆಯುಂಟಾಗುತ್ತದೆ. ಈ ನವೆಯನ್ನು ನಿವಾರಿಸಲು

ಅಧಿಕವಾಗಿ ಪುರುಷಸಂಭೋಗವನ್ನು ಅಪೇಕ್ಷಿಸುತ್ತಾಳಾಗಿ ಈ ಸ್ತ್ರೀಯಳ ಯೋನಿರೋಗಕ್ಕೆ ಅಚರಣಾಯೋನಿಯೆನ್ನುತ್ತಾರೆ.

೧೫. ಅತಿಚರಣಾ—ಅತಿಯಾಗಿ ಸಂಭೋಗಮಾಡಿದರೆ ವಾತಪ್ರಕೋಪವುಂಟಾಗಿ ಯೋನಿಶೋಥವನ್ನೂ, ನೋವನ್ನೂ, ಸ್ಪರ್ಶನಾಶವನ್ನೂ ಉಂಟುಮಾಡುವ ಕಾರಣ ಈ ವ್ಯಾಧಿಗೆ ಅತಿಚರಣಾ ಎಂದು ಹೆಸರು.

೧೬. ಪ್ರಾಕ್ಚರಣಾ—ಪ್ರಾಪ್ತವಯಸ್ಕಳಾಗುವುದಕ್ಕೆ ಮೊದಲೇ ಅತ್ಯಂತ ಬಾಲಕಿಯನ್ನು ಮೈಥುನಮಾಡಿದರೆ ವಾಯುವು ಪ್ರಕುಪಿತವಾಗಿ ಆಕೆಯ ಬೆನ್ನು, ಸೊಂಟ, ತೊಡೆ, ತೊಡೆಸಂದುಗಳಲ್ಲ ನೋವನ್ನುಂಟುಮಾಡಿ ಆ ಅಂಗಗಳನ್ನು ಕೆಡಿಸುತ್ತದೆಯಾಗಿ ಈ ಅವಸ್ಥೆಗೆ ಪ್ರಾಕ್ಚರಣಾ ಎಂದು ಹೆಸರು.

ಮೂಲ—೧೭. ತ್ರಿದೋಷಜಾ—

ಸಮಶ್ನನ್ತ್ಯಾ ರಸಾನ್ ಸರ್ವಾನ್ದೂಷಯಿತ್ವಾ ತ್ರಯೋ ಮಲಾಃ ।
ಯೋನಿಗರ್ಭಾಶಯಸ್ಥಾಃ ಸ್ವೈರ್ಯೋನಿಂ ಯುಂಜಂತಿ ಲಕ್ಷಣೈಃ ॥೮೯॥
ಸಾ ಭವೇದ್ದಾಹಶೂಲಾರ್ತಾ ಶ್ವೇತಪಿಚ್ಛಿಲವಾಹಿನೀ ।

೧೮. ಷಂಡೀ—
ಬೀಜದೋಷಾತ್ತು ಗರ್ಭಸ್ಥಮಾರುತೋಪಹತಾಶಯಾ ॥೯೦॥
ನೃದ್ವೇಷಿಣ್ಯಸ್ತನೀ ಚೈವ ಷಂಡೀ ಸ್ಯಾದನುಪಕ್ರಮಾ ।

೧೯. ಸೂಚೀಮುಖೀ—
ಗರ್ಭಸ್ಥಾಯಾ ಸ್ತ್ರಿಯಾ ರೌಕ್ಷ್ಯಾದ್ವಾಯುರ್ಯೋನಿಂ ಪ್ರದೂಷಯನ್ ॥೯೧॥
ಮಾತೃದೋಷಾದಣುದ್ವಾರಾಂ ಕುರ್ಯಾತ್ಸೂಚೀಮುಖೀ ತು ಸಾ ।

೨೦. ಅಸಂವೃತಮುಖೀ—ಮಹಾಯೋನಿಃ—
ವಿಷಮಂ ದುಃಖಶಯ್ಯಾಯಾಂ ಮೈಥುನಾತ್ಕುಪಿತೋಽನಿಲಃ ॥೯೨॥
ಗರ್ಭಾಶಯಸ್ಯ ಯೋನ್ಯಾಶ್ಚ ಮುಖಂ ವಿಷ್ಟಮ್ಭಯೇತ್ ಸ್ತ್ರಿಯಾಃ ।
ಅಸಂವೃತಮುಖೀ ಸಾರ್ತೀ ರೂಕ್ಷಫೇನಾಸ್ರವಾಹಿನೀ ॥೯೩॥
ಮಾಂಸೋತ್ಸನ್ನಾ ಮಹಾಯೋನಿಃ ಪರ್ವವಂಕ್ಷಣಶೂಲಿನೀ ।
ಇತ್ಯೇತೈಃ ಕಾರಣೈಃ ಪ್ರೋಕ್ತಾ ವಿಂಶತಿರ್ಯೋನಿಜಾ ಗದಾಃ ॥೯೪॥
ನ ಶುಕ್ರಂ ಧಾರಯತ್ಯೇಭಿರ್ದೋಷೈರ್ಯೋನಿರುಪದ್ರುತಾ ।
ತಸ್ಮಾದ್ಗರ್ಭಂ ನ ಗೃಹ್ಣಾತಿ ಸ್ತ್ರೀ ಗಚ್ಛತ್ಯಾಮಯಾನ್ ಬಹೂನ್ ॥೯೫॥
ಗುಲ್ಮಾರ್ಶಃ ಪ್ರದರಾದೀಂಶ್ಚ ವಾತಾದ್ಯೈಶ್ಚಾತಿಪೀಡನಮ್ ।

ದೀಪಿಕೆ—

೧೭. ತ್ರಿದೋಷದುಷ್ಟಯೋನಿ—ಎಲ್ಲಾ ರಸಗಳುಳ್ಳ ಪದಾರ್ಥಗಳನ್ನು ತಿನ್ನುವ ಸ್ತ್ರೀಯಳ ಯೋನಿಗರ್ಭಾಶಯಗಳನ್ನು ಪ್ರಕುಪಿತಗಳಾದ ಮೂರು ದೋಷಗಳೂ ಕೆಡಿಸಿ ಉರಿ, ನೋವುಗಳಿಂದ ಪೀಡಿಸಿ ಬಿಳುಪಾಗಿಯೂ ಗರಣೆಗರಣೆಯಾಗಿಯೂ ರಜಸ್ಸ್ರಾವವನ್ನುಂಟುಮಾಡುತ್ತವೆ.

೧೮. ಷಣ್ಢೀ—ಗರ್ಭಾಶಯದಲ್ಲಿ ಪ್ರಕುಪಿತವಾದ ವಾತವು ದೋಷಯುಕ್ತವಾದ ಬೀಜದ ಗರ್ಭಭಾಗವನ್ನು ಕೆಡಿಸುವುದರಿಂದ ಪುರುಷಸಮಾಗಮ

ವನ್ನು ದ್ವೇಷಿಸುವ ಸ್ತನರಹಿತಳಾದ ಷಂಡಳು ಹುಟ್ಟುತ್ತಾಳೆ. ಚಿಕಿತ್ಸೆ ಮಾಡಿದರೂ ಇದು ಸಾಧ್ಯವಾಗುವುದಿಲ್ಲ.

೧೯. ಸೂಚೀಮುಖೀ—ರೂಕ್ಷದೇಹದ ಸ್ತ್ರೀಯಳ ಗರ್ಭಾಶಯದಲ್ಲಿರುವ ಹೆಣ್ಣು ಮಗುವಿನ ಯೋನಿಯನ್ನು ಪ್ರಕುಪಿತವಾದ ವಾತವು ಕೆಡಿಸಿ ಬಲು ಸಣ್ಣವಾದ ಯೋನಿದ್ವಾರವನ್ನುಂಟುಮಾಡುವ ಕಾರಣ ಈ ಯೋನಿದೋಷವನ್ನು ಸೂಚೀಮುಖೀ ಎಂದು ಹೇಳುತ್ತಾರೆ.

೨೦. ಅಸಂವೃತಮುಖೀ-ಮಹಾಯೋನಿಃ—ಗಟ್ಟಿಯಾದ ಹಾಸಿಗೆಯಲ್ಲಿ ದೇಹವನ್ನು ವಕ್ರವಾಗಿಟ್ಟು ಮಲಗಿಕೊಂಡು ಮೈಥುನವನ್ನು ಆಚರಿಸುವ ಸ್ತ್ರೀಯಳ ಯೋನಿಯ ಮತ್ತು ಗರ್ಭಾಶಯದ ಮುಖಗಳನ್ನು ಪ್ರಕುಪಿತವಾತವು ತಡೆಗಟ್ಟಿ ಹಿಂದಕ್ಕೆ ನೂಕುವುದರಿಂದ ಜಿಡ್ಡಿಲ್ಲದ, ನೋವಿನಿಂದ ಕೂಡಿದ, ನೊರೆಸಹಿತವಾದ ಆರ್ತವವು ಸ್ರಾವವಾಗುತ್ತದೆ. ಇದು ಅಸಂವೃತಮುಖಯೋನಿಯೆಂದೂ, ಮಾಂಸಖಂಡಗಳುಬ್ಬಿ ತೊಡೆಸಂದು ಕೈಕಾಲುಬೆರಳುಗಳಲ್ಲಿ ನೋವಿರುವಕಾರಣ ಮಹಾಯೋನಿಯೆಂದೂ ಕರೆಯಲ್ಪಡುತ್ತದೆ. ಈ ರೀತಿಯಾಗಿ ಮೇಲೆ ಹೇಳಿರುವ ಕಾರಣಗಳಿಂದ ಇಪ್ಪತ್ತು ವಿಧಗಳಾದ ಯೋನಿದೋಷಗಳುಂಟಾಗುತ್ತವೆ. ಪ್ರಕುಪಿತಗಳಾದ ದೋಷಗಳಿಂದ ಯೋನಿಯು ಪೀಡಿಸಲ್ಪಡುವುದರಿಂದ ಶುಕ್ರವನ್ನು ಧರಿಸದೆ ಗರ್ಭಧಾರಣೆಯೇ ಆಗುವುದಿಲ್ಲ ಮತ್ತು ವಾತಾದಿ ದೋಷಗಳಿಂದ ಗುಲ್ಮ, ಅರ್ಶಸ್, ಪ್ರದರ ಮೊದಲಾದ ಅನೇಕ ರೋಗಗಳಿಂದ ಆ ಸ್ತ್ರೀಯು ನರಳುತ್ತಾಳೆ.

ಮೂಲ—(ಚ।ಚಿ।ಅ।೩೦)—ಯೋನಿವ್ಯಾಪಚ್ಚಿಕಿತ್ಸಾ— ಸಾಮಾನ್ಯ ಚಿಕಿತ್ಸಾ—

ಯೋನಿವ್ಯಾಪತ್ಸು ಭೂಯಿಷ್ಠಂ ಶಸ್ಯತೇ ಕರ್ಮ ವಾತಜಿತ್ ॥೯೭॥
ಸ್ನೇಹನಸ್ವೇದಬಸ್ತ್ಯಾದಿವಾತಜಾಸು ವಿಶೇಷತಃ ।
ನ ಹಿ ವಾತಾದೃತೇ ಯೋನಿರ್ವನಿತಾನಾಂ ಪ್ರದುಷ್ಯತಿ ॥೯೭॥
ಅತೋ ಜಿತ್ವಾ ತಮನ್ಯಸ್ಯ ಕುರ್ಯಾದ್ದೋಷಸ್ಯ ಭೇಷಜಮ್ ।
ಪಿತ್ತಲಾನಾಂ ತು ಯೋನೀನಾಂ ಸೇಕಾಭ್ಯಂಗಪಿಚುಕ್ರಿಯಾಃ ॥೯೮॥
ಶೀತಾಃ ಪಿತ್ತಜಿತಃ ಕಾರ್ಯಾಃ ಸ್ನೇಹನಾರ್ಥಂ ಘೃತಾನಿ ಚ ।
ಏವಮೇವ ಪಯಸ್ಸರ್ಪಿರ್ಜೀವನೀಯೋಪಸಾಧಿತಮ್ ॥೯೯॥
ಗರ್ಭದಂ ಪಿತ್ತಜಾನಾಂ ಚ ರೋಗಾಣಾಂ ಪರಮಂ ಹಿತಮ್ ।
ರಕ್ತಯೋನ್ಯಾಮಸೃಗ್ವರ್ಣೈರನುಬನ್ಧಮವೇಕ್ಷ್ಯ ಚ ॥೧೦೦॥
ಯಥಾ ದೋಷೋದಯಂ ಯುಂಜ್ಯಾದ್ರಕ್ತಸ್ಥಾಪನಮೌಷಧಮ್ ।
ಯೋನ್ಯಾಂ ಬಲಾಸದುಷ್ಟಾಯಾಂ ಸರ್ವಂ ರೂಕ್ಷೋಷ್ಣಮೌಷಧಮ್ ॥೧೦೧॥
ಸ್ತಬ್ಧಾನಾಂ ಕರ್ಕಶಾನಾಂ ಚ ಕಾರ್ಯಂ ಮಾರ್ದವಕಾರಕಮ್ ।
ಧಾರಣಂ ವೇಸವಾರಸ್ಯ ಕೃಶರಾಪಯಸಸ್ಯ ಚ ॥೧೦೨॥
ದುರ್ಗನ್ಧಾನಾಂ ಕಷಾಯಃ ಸ್ಯಾತ್ತೈಲಂ ವಾ ಕಲ್ಕ ಏವ ವಾ ।
ಚೂರ್ಣೋ ವಾ ಸರ್ವಗನ್ಧಾನಾಂ ಪೂತಿಗನ್ಧಾಪಕರ್ಷಣಃ ॥೧೦೩॥

(ಚ।ಚಿ।ಅ।೩೦) ವಿಶೇಷಚಿಕಿತ್ಸಾ—

ಸ್ನಿಗ್ಧಸ್ವಿನ್ನಾಂ ತಥಾ ಯೋನಿಂ ದುಃಸ್ಥಿತಾಂ ಸ್ಥಾಪಯೇತ್ಪುನಃ ।
ಪ್ರವೇಶಯೇನ್ನಿಸ್ಸೃತಾಂ ಚ ವಿವೃತಾಂ ಪರಿವರ್ತಯೇತ್ ॥೧೦೪॥

ಪಾಣಿನಾ ನಾಮಯೇಜ್ಜಿಹ್ಮಾಂ ಸಂವೃತಾಂ ವರ್ಧಯೇತ್ಪುನಃ ।
ಯೋನಿಃ ಸ್ಥಾನಾಪವೃತ್ತಾ ಹಿ ಶಲ್ಯಭೂತಾ ಮತಾ ಸ್ತ್ರಿಯಾಃ ॥೧೦೫॥
ಸರ್ವಾಂ ವ್ಯಾಪನ್ನಯೋನಿಂ ತು ಕರ್ಮಭಿರ್ವಮನಾದಿಭಿಃ ।
ಮೃದುಭಿಃ ಪಂಚಭಿರ್ನಾರೀಂ ಸ್ನಿಗ್ಧಸ್ವಿನ್ನಾಮುಪಾಚರೇತ್ ॥೧೦೬॥
ಕರ್ಣಿನ್ಯಾಂ ವರ್ತಿಕಾ ಕುಷ್ಠಪಿಪ್ಪಲ್ಯರ್ಕಾಗ್ರಸೈಂಧವೈಃ ।
ಬಸ್ತಮೂತ್ರಕೃತಾ ಧಾರ್ಯಾ ಸರ್ವಂ ಚ ಶ್ಲೇಷ್ಮನುದ್ಧಿತಮ್ ॥೧೦೭॥
ವಸಾ ಋಕ್ಷವರಾಹಾಣಾಂ ಘೃತಂ ಚ ಮಧುರೈಃ ಶೃತಮ್ ।
ಪೂರಯಿತ್ವಾ ಮಹಾಯೋನಿಂ ಬಧ್ನೀಯಾತ್ ಕ್ಷೌಮಲಕ್ತಕೈಃ ॥೧೦೮॥
ಪ್ರಸ್ರಸ್ತಾಂ ಸರ್ಪಿಷಾಭ್ಯಜ್ಯ ಕ್ಷೀರಸ್ವಿನ್ನಾಂ ಪ್ರವೇಶ್ಯ ಚ ।
ಬಧ್ನೀಯಾದ್ವೇಸವಾರಸ್ಯ ಪಿಂಡೇನಾಮೂತ್ರಕಾಲತಃ ॥೧೦೯॥

ಟಿಪ್ಪಣಿ.—ಸರ್ವಗನ್ಧಃ—ಚಾತುರ್ಜಾತಕಕರ್ಪೂರಕಕ್ಕೋಲಾಗುರುಕುಙ್ಕುಮಮ್।
ಲವಙ್ಗಸಹಿತಂ ಚೈವ ಸರ್ವಗನ್ಧಂ ವಿನಿರ್ದಿಶೇತ್ ॥ ಇತಿ ॥

ದೀಪಿಕೆ—(ಚ।ಚಿ।ಅ।೩೦)—ಯೋನಿವ್ಯಾಪತ್ಸಾಮಾನ್ಯ ಚಿಕಿತ್ಸೆ—

ಎಲ್ಲಾ ವಿಧವಾದ ಯೋನಿರೋಗಗಳಿಗೂ ವಾತಹರಗಳಾದ ಚಿಕಿತ್ಸೆಯನ್ನೇ ಹೆಚ್ಚಾಗಿ ಮಾಡಿಸಬೇಕು. ವಾತಾಧಿಕ್ಯವಾದರೆ ಸ್ನೇಹಸ್ವೇದ ಬಸ್ತ್ಯಾದಿ ಕರ್ಮಗಳನ್ನು ವಿಶೇಷವಾಗಿಯೇ ಮಾಡಿಸಬೇಕು. ವಾತದೋಷವಿಲ್ಲದೆ ಸ್ತ್ರೀಯರ ಯೋನಿಯು ಕೆಡುವುದಿಲ್ಲವಾದ್ದರಿಂದ ಮೊದಲು ವಾತದೋಷವನ್ನು ನಿವಾರಣೆ ಮಾಡಿ ಅನಂತರ ಇತರ ದೋಷಗಳಿಗೆ ಚಿಕಿತ್ಸೆಮಾಡಬೇಕು; ಪಿತ್ತದೋಷದಿಂದ ಪೀಡಿತವಾದ ಯೋನಿರೋಗದಲ್ಲಿ ಶೀತಲವಾದ ಮತ್ತು ಪಿತ್ತಹರಗಳಾದ ಸೇಕ, ಅಭ್ಯಙ್ಗ, ಪಿಚುಗಳನ್ನೂ ಘೃತವನ್ನೂ ಜೀವನೀಯಔಷಧಗಳಿಂದ ತಯಾರಿಸಿದ ಹಾಲು ತುಪ್ಪಗಳನ್ನೂ ಗರ್ಭಪ್ರದಗಳಾಗಿಯೂ ಪಿತ್ತಹರಗಳಾಗಿಯೂ ಇರುವ ಔಷಧಗಳನ್ನೂ ಉಪಯೋಗಿಸಬೇಕು. ರಕ್ತದುಷ್ಟಯೋನಿರೋಗದಲ್ಲಿ ರಕ್ತದ ಬಣ್ಣವನ್ನೂ ಉಪದ್ರವಗಳನ್ನೂ ತಿಳಿದು ತಕ್ಕ ರೀತಿಯಲ್ಲಿ ದೋಷಹರಗಳಾದ ಚಿಕಿತ್ಸೆಯನ್ನು ಮಾಡಿ ರಕ್ತಸ್ರಾವವನ್ನು ನಿಲ್ಲಿಸಬೇಕು. ಕಫದುಷ್ಟಯೋನಿರೋಗದಲ್ಲಿ ರೂಕ್ಷೋಷ್ಣಗಳಾದ ಔಷಧಿಗಳನ್ನೂ, ಸ್ತಬ್ಧವಾಗಿಯೂ ಕರ್ಕಶವಾಗಿಯೂ ಇರುವ ಯೋನಿರೋಗದಲ್ಲಿ ವೇಸವಾರ, ಕೃಶರ (ಅಕ್ಕಿ, ಎಳ್ಳು, ಉದ್ದು ಸೇರಿ ತಯಾರಾದ ಕಲ್ಕ) ಪಾಯಸಗಳನ್ನು ಯೋನಿಯೊಳಗೆ ಇಟ್ಟು ಮೃದುವನ್ನಾಗಿ ಮಾಡಬೇಕು. ದುರ್ಗನ್ಧವುಳ್ಳ ಯೋನಿರೋಗದಲ್ಲಿ ದುರ್ಗನ್ಧಹರಗಳಾದ ಸರ್ವಗಂಧಗಳ ಚೂರ್ಣವನ್ನಾಗಲೀ, ಕಲ್ಕವನ್ನಾಗಲೀ, ಇವುಗಳನ್ನು ಸೇರಿಸಿ ತಯಾರಿಸಿದ ತೈಲವನ್ನಾಗಲೀ ಯೋನಿಯೊಳಕ್ಕೆ ತುಂಬಿ ದುರ್ಗನ್ಧವನ್ನು ನಿವಾರಿಸಬೇಕು.

(ಚ।ಚಿ।ಅ। ೩೮) ವಿಶೇಷ ಚಿಕಿತ್ಸೆ—

ಯೋನಿಯು ಸ್ಥಳಪಲ್ಲಟದಿಂದ ಸ್ತ್ರೀಯರಿಗೆ ತುಂಬಾ ಬಾಧೆಯನ್ನುಂಟು ಮಾಡುವುದರಿಂದ ಅದನ್ನು ಮೊದಲಿದ್ದ ಸ್ಥಿತಿಗೆ ತರುವುದಕ್ಕಿಂತ ಮೊದಲು

ಮೃದುವಾದ ಸ್ನೇಹಸ್ವೇದಕರ್ಮಗಳಿಂದ ಆ ಸ್ತ್ರೀಯನ್ನು ಉಪಚರಿಸಿದಮೇಲೆ ಮೃದುವಾದ ವಮನ ವಿರೇಚನ ಮೊದಲಾದ ಪಂಚಕರ್ಮಗಳಿಂದ ದೇಹ ಶುದ್ಧಿಮಾಡಿಸಿ ಸ್ಥಳ ಬದಲಾಗಿದ್ದರೆ ಮೊದಲಿನಂತೆ ಸ್ವಸ್ಥಳವನ್ನು ಸೇರುವಂತೆಯೂ, ಹೊರಗಡೆಗೆ ಹೊರಟಿದ್ದರೆ ಒಳಭಾಗಕ್ಕೆ ಮೆಲ್ಲಗೆ ನೂಕುವುದರಿಂದಲೂ, ಅಗಲವಾಗಿ ಹಿಗ್ಗಿದ್ದರೆ ಸಂಕೋಚವಾಗುವಂತೆ ಬಿಗಿಯಾಗಿ ಹಿಂಡುವುದರಿಂದಲೂ, ಸೊಟ್ಟಾಗಿದ್ದರೆ ಅಂಗೈಯಿಂದ ಮೆತ್ತಗೆ ಉಜ್ಜಿ ನೇರವಮಾಡಿಯೂ, ಸಂಕುಚಿತವಾಗಿದ್ದರೆ ಹಿಗ್ಗಿಲಿಸಿ ಅಗಲವಾಗುವಂತೆ ಯೋನಿಯೊಳಗೆ ಹತ್ತಿಯ ಉಂಡೆಯನ್ನಿಟ್ಟು ಕಟ್ಟಿ ಹಿಗ್ಗುವಂತೆ ಮಾಡಿಯೂ, ಸರಿಪಡಿಸಬೇಕು. ಕರ್ಣಿನೀಯೆಂಬ ವಿಕಾರದಲ್ಲಿ (ದುಷ್ಟಮಾಂಸವೃದ್ಧಿ) ಚಂಗಲ್‌ಕೋಷ್ಠ, ಹಿಪ್ಪಲಿ, ಎಕ್ಕದ ಚಿಗರು, ಸೈಂಧವಗಳನ್ನು ಆಡಿನ ಮೂತ್ರದಲ್ಲಿ ಅರೆದು ವರ್ತಿಯನ್ನು ಮಾಡಿ ಯೋನಿದ್ವಾರದಲ್ಲಿಟ್ಟು ಪಟ್ಟಿಯಿಂದ ಕಟ್ಟಬೇಕು. ಶ್ಲೇಷ್ಮಹರವಾದ ಚಿಕಿತ್ಸೆಯನ್ನೇ ಮಾಡಿಸಬೇಕು. ಮಹಾಯೋನಿಗೆ ಕರಡಿ ಮತ್ತು ಹಂದಿಯ ಕೊಬ್ಬನ್ನಾಗಲೀ ಅಥವಾ ಕಾಕೋಲ್ಯಾದಿ ಗಣದ್ರವ್ಯಗಳಿಂದ ತಯಾರಿಸಿದ ಘೃತವನ್ನಾಗಲೀ ತುಂಬಿ ಅರಗಿನ ಕಷಾಯದಲ್ಲಿ ನೆನೆಸಿದ ಹತ್ತಿಯ ಉಂಡೆಯನ್ನು ಯೋನಿಯ ಮೇಲಿಟ್ಟು ಕಟ್ಟಿಸಬೇಕು. ಹೊರಗಡೆಗೆ ಜಾರಿಬಿದ್ದಿರುವ ಯೋನಿಗೆ ತುಪ್ಪವನ್ನು ಲೇಪಿಸಿ ಸುಖೋಷ್ಣವಾದ ಹಾಲಿನಿಂದ ಸೇಕಮಾಡಿ ಒಳಗಡೆಗೆ ನೂಕಿ ವೇಸವಾರದ ಮುದ್ದೆಯನ್ನಿಟ್ಟು ಕಟ್ಟಿ ಮೂತ್ರವಿಸರ್ಜನೆಯಾಗುವವರೆಗೂ ಬಿಚ್ಚಬಾರದು.

ಟಿಪ್ಪಣಿ.––ಲವಙ್ಗಪತ್ರೆ, ದಾಲ್ಚಿನ್ನಿ, ಏಲಕ್ಕಿ, ನಾಗಕೇಸರ, ಪಚ್ಚಕರ್ಪೂರ, ತಕ್ಕೋಲ, ಅಗಿಲುಗನ್ಧ, ಕುಂಕುಮಕೇಸರಿ, ಲವಂಗ ಇವುಗಳಿಗೆ ಸರ್ವಗಂಧವೆಂದು ಹೆಸರು.

ಮೂಲಮ್ —

ಪಾಠಕಾನಾಂ ಸುಖಬೋಧಾಯ ವಿಂಶತಿರ್ಯೋನಿವ್ಯಾಪದಃ ಪ್ರಸ್ತಾರವಿಧಾನೇನ ನಿರೂಪ್ಯನ್ತೇ। ಯಥಾ :—

ಟಿಪ್ಪಣಿ.––ಪಾಠಕರಿಗೆ ಸುಲಭವಾಗಿ ಬೋಧೆಯಾಗಲು ೨೦ ವಿಧಗಳಾದ ಯೋನಿರೋಗಗಳನ್ನೂ ಈ ಪ್ರಸ್ತಾರಕ್ರಮದಲ್ಲಿ ಬರೆಯಲಾಗಿದೆ. ಹೇಗೆಂದರೆ:—

ಯೋನಿವ್ಯಾಪತ್ತುಗಳು (೨೦)

ಸಂಖ್ಯೆ	ಚರಕ ಚಿ।೩।೩೦	ಸುಶ್ರುತ ಉ।೩।೩೮	ಅಷ್ಟಾಂಗಹೃದಯ ಉ।೩।೩೩	ಮಾಧವನಿದಾನ ಪುಟ ೩೬೧	ಪರಸ್ಪರ ಸಮನ್ವಯ ವಿಧಾನವು
೧	ವಾತಲಾ	ವಾತಲಾ	ವಾತಿಕೀ	ವಾತಲಾ	
೨	ಪಿತ್ತಲಾ	ಪಿತ್ತಲಾ	ಪೈತ್ತಿಕೀ	ಪಿತ್ತಲಾ	
೩	ಶ್ಲೇಷ್ಮಲಾ	ಶ್ಲೇಷ್ಮಲಾ	ಶ್ಲೈಷ್ಮಿಕೀ	ಶ್ಲೇಷ್ಮಲಾ	
೪	ತ್ರಿದೋಷಲಾ	ತ್ರಿದೋಷಜಾ	ಸಾನ್ನಿಪಾತಿಕೀ	ತ್ರಿದೋಷಲಾ	
೫	ಸಾಸೃಜಾಯೋನಿಃ	ಲೋಹಿತಕ್ಷರಾ	ರಕ್ತಯೋನಿಃ	ಲೋಹಿತಕ್ಷಯಾ	
೬	ಅರಜಸ್ಕಾ	ವಂಧ್ಯಾ	ಲೋಹಿತಕ್ಷಯಾ	ವಂಧ್ಯಾ	ಇವೆಲ್ಲಾ ಆರ್ತವದ ಕ್ಷೀಣತೆಯನ್ನೇ ನಿರ್ದೇಶ ಮಾಡುತ್ತವೆ.
೭	ಅಚರಣಾ	ಅಚರಣಾ	ವಿಪ್ಲುತಾ	ಅಚರಣಾ	ಚರಕೋಕ್ತ "ಅಚರಣಾ" ಎಂಬುವುದಕ್ಕೆ ಅ।ಹೃ।ದಲ್ಲ 'ವಿಪ್ಲುತಾ' ಎಂದು ಹೇಳಿರುತ್ತೆ; ಯೋನಿಕ್ಷಾಳನೆಯನ್ನು ಮಾಡದಕಾರಣ ಕ್ರಿಮಿಗಳುಂಟಾಗಿ ಯೋನಿ ಕಣ್ಡುವಾಗುವ ಕಾರಣ ಅತಿಯಾಗಿ ಮೈಥುನಾಭಿಲಾಷೆಯುಂಟಾಗುತ್ತದೆ.
೮	ಅತಿಚರಣಾ	ಅತಿಚರಣಾ	ಅತಿಚರಣಾ	ಅತಿಚರಣಾ	
೯	ಪ್ರಾಕ್ಚರಣಾ	ಅತ್ಯಾನನ್ದಾ	ಪ್ರಾಕ್ಚರಣಾ	ಅತ್ಯಾನನ್ದಾ	ಪ್ರಾಕ್ಚರಣಾ—ಅತ್ಯಾನನ್ದಾ ಇವೆರಡರಲ್ಲೂ ಅತ್ಯಂತ ಬಾಧೆಯೂ ರಮಿಸಿದರೆ ವಾತ ಪ್ರಕೋಪವುಂಟಾಗಿ ಸೊಂಟ, ಯೋನಿಗಳಲ್ಲಿ ನೋವೂ ಉಂಟಾಗುವ ಕಾರಣ ಮೈಥುನ ಕಾರ್ಯದಲ್ಲಿ ದ್ವೇಷವುಂಟಾಗುತ್ತದೆಂದರ್ಥವು.

ಯೋನಿವ್ಯಾಪತ್ತುಗಳು (೨೦)

ಸಂಖ್ಯೆ	ಚರಕ ಚಿ।ಅ।೩೦	ಸುಶ್ರುತ ಉ।ಅ।೩೮	ಅಷ್ಟಾಂಗಹೃದಯ ಉ।ಅ।೩೩	ಮಾಧವನಿದಾನ ಪುಟ ೩೬೧	ಪರಸ್ಪರ ಸಮನ್ವಯ ವಿಧಾನವು
೧೦	ಉಪಪ್ಲುತಾ	ಸ್ರಂಸಿನೀ	ಉಪಪ್ಲುತಾಖ್ಯಾ	ಪ್ರಸ್ರಂಸಿನೀ	ಉಪಪ್ಲುತಾ–ಸ್ರಂಸಿನೀ–ಪ್ರಸ್ರಂಸಿನೀ–ಇವೆಲ್ಲಾ ಒಂದೇ ಕಾರ್ಯವನ್ನು ಬೋಧಿಸುತ್ತವೆ; ಅಂದರೆ ವಾತದುಷ್ಟಿಯಿಂದ ಯೋನಿಯ ಮೂಲಕ ಬಿಳುಪಾದ ಕಫವು ಸ್ರಾವವಾಗುತ್ತದೆಂದು ತಿಳಿಯಬೇಕು.
೧೧	ಪರಿಪ್ಲುತಾ	ಪರಿಪ್ಲುತಾ	ಪರಿಪ್ಲುತಾಖ್ಯಾ	ಪರಿಪ್ಲುತಾ	
೧೨	ಉದಾವರ್ತಿನೀ	ಉದಾವರ್ತಾ	ಉದಾವೃತ್ತಾ	ಉದಾವರ್ತಾ	
೧೩	ಕರ್ಣಿನೀ	ಕರ್ಣಿನೀ	ಕರ್ಣಿನೀ	ಕರ್ಣಿನೀ	
೧೪	ಪುತ್ರಘ್ನೀ	ಪುತ್ರಘ್ನೀ	ಜಾತಘ್ನೀ	ಪುತ್ರಘ್ನೀ	
೧೫	ಅನ್ತರ್ಮುಖೀ	ಫಲಿನೀ	ಅನ್ತರ್ಮುಖೀ	ಅಂಡಲೀ	ಅನ್ತರ್ಮುಖೀ, ಫಲಿನೀ, ಅಂಡಲೀ: ಅಂತರ್ಮುಖೀ–ಯೋನಿಮುಖವು ಸೊಟ್ಟಾಗುತ್ತದೆ. ಫಲಿನೀ–ಅತಿ ದಪ್ಪ ಮೇಹನವುಳ್ಳವನ ಸಂಗಡ ಮೈಥುನವಾದರೆ ಯೋನಿಯು ಜಾರಿ ಹೊರಕ್ಕೆ ಬರುತ್ತದೆ; ಅಂಡಲೀ—ಅತಿ ದಪ್ಪ ಮೈಯುಳ್ಳ ಹೆಂಗಸಿನ ಯೋನಿಯು ಹೊರಕ್ಕೆ ಚಾಚಿ ಮೊಟ್ಟೆಯಂತೆ ಹೊರಗೆ ಜೋತಾಡುತ್ತದೆ.
೧೬	ಸೂಚೀಮುಖೀ	ಸೂಚಿವಕ್ತ್ರಾ	ಸೂಚೀಮುಖೀ	ಸೂಚಿವಕ್ತ್ರಾ	
೧೭	ಶುಷ್ಕಯೋನಿಃ	ವಿಪ್ಲುತಾ	ಶುಷ್ಕಯೋನಿಃ	ವಿಪ್ಲುತಾ	ಶುಷ್ಕಯೋನಿಃ—(ವಿಪ್ಲುತಾ)–ವಾತದುಷ್ಟಿಯಿಂದ ಯೋನಿಶೋಷವೂ ನಷ್ಟಾರ್ತವವೂ ಉಂಟಾಗುವುದರಿಂದ "ವನ್ಧ್ಯ" ಎಂಬ ಸಂಜ್ಞೆಯುಂಟಾಗುತ್ತದೆ.
೧೮	ವಾಮಿನೀ	ವಾಮಿನೀ	ವಾಮಿನೀ	ವಾಮಿನೀ	
೧೯	ಷಣ್ಢೀ	ಷಣ್ಢಾ	ಷಣ್ಢಸಂಜ್ಞಾ	ಷಣ್ಢೀ	
೨೦	ಮಹಾಯೋನಿಃ	ಮಹತೀ	ಮಹಾಯೋನಿಃ	ಮಹಾಯೋನಿಃ	

೪. ಯೋನಿಸಂವರಣಮ್

ಮೂಲ—(ಪ್ರಸೂತಿತನ್ತ್ರೇ ನವಮೋಽಧ್ಯಾಯೇ ದ್ರಷ್ಟವ್ಯಮ್।)

ದೀಪಿಕೆ——ಪ್ರಸೂತಿತನ್ತ್ರದ ಒಂಭತ್ತನೆಯ ಅಧ್ಯಾಯದಲ್ಲಿ ಯೋನಿಸಂವರಣ ರೋಗವಿವರಣೆಯನ್ನು ನೋಡತಕ್ಕದ್ದು.

೫. ಯೋನಿಕನ್ದಃ

(ಭಾ।ಪ್ರ। ಯೋನ್ಯಧಿಕಾರೇ)

ನಿದಾನಮ್—

ದಿವಾಸ್ವಪ್ನಾದತಿಕ್ರೋಧಾದ್ವ್ಯಾಯಾಮಾದತಿಮೈಥುನಾತ್ ।
ಕ್ಷತಾಚ್ಚ ನಖದನ್ತಾದ್ಯೈರ್ವಾತಾದ್ಯಾ ಕುಪಿತಾ ಯಥಾ ॥೧೧೦॥
ಪೂಯಶೋಣಿತಸಂಕಾಶಂ ಲಕುಚಾಕೃತಿಸನ್ನಿಭಮ್ ।
ಜನಯನ್ತಿ ಯದಾ ಯೋನೌ ನಾಮ್ನಾ ಕನ್ದಃ ಸ ಯೋನಿಜಃ ॥೧೧೧॥

ಲಕ್ಷಣಮ್—

ರೂಕ್ಷಂ ವಿವರ್ಣಂ ಸ್ಫುಟಿತಂ ವಾತಿಕಂ ತಂ ವಿನಿರ್ದಿಶೇತ್ ।
ದಾಹರಾಗಜ್ವರಯುತಂ ವಿದ್ಯಾತ್ಪಿತ್ತಾತ್ಮಕಂ ತು ತಮ್ ॥೧೧೨॥
ತಿಲಪುಷ್ಪಪ್ರತೀಕಾಶಂ ಕಣ್ಡೂಮನ್ತಂ ಕಫಾತ್ಮಕಮ್।
ಸರ್ವಲಿಙ್ಗಸಮಾಯುಕ್ತಂ ಸನ್ನಿಪಾತಾತ್ಮಕಂ ವದೇತ್ ॥೧೧೩॥

ಚಿಕಿತ್ಸಾ—

ಕರ್ಣಿನ್ಯಾಂ ವರ್ತಯೋ ದೇಯಾಃ ಶೋಧನದ್ರವ್ಯನಿರ್ಮಿತಾಃ ।
ಗೂಡೂಚೀತ್ರಿಫಲಾದನ್ತೀಕ್ವಥಿತೋದಕಧಾರಯಾ ॥೧೧೪॥
ಯೋನಿಂ ಪ್ರಕ್ಷಾಳಯೇತ್ತೇನ ತತ್ರ ಕಣ್ಡೂಃ ಪ್ರಶಾಮ್ಯತಿ ।
ಮುದ್ಗಯೂಷಂ ಸಖದಿರಂ ಪಥ್ಯಾಂ ಜಾತೀಫಲಂ ತಥಾ ॥೧೧೫॥
ನಿಮ್ಬಂ ಪೂಗಂ ಚ ಸಂಚೂರ್ಣ್ಯ ವಸ್ತ್ರಪೂತಂ ಕ್ಷಿಪೇದ್ಭಗೇ।
ಯೋನಿರ್ಭವತಿ ಸಂಕೀರ್ಣಾ ನ ಸ್ರವೇಚ್ಚ ಜಲಂ ತತಃ ॥೧೧೬॥

ದೀಪಿಕೆ–(ಭಾ।ಪ್ರ। ಯೋನ್ಯಧಿಕಾರದಲ್ಲಿದೆ) ಯೋನಿಕನ್ದ—

ಕಾರಣ——ಹಗಲುನಿದ್ರೆ, ಅತಿಕೋಪ, ಅಂಗಸಾಧನೆ, ಅತಿಯಾಗಿ ಮೈಥುನ ಸೇವನ, ಉಗುರು, ಹಲ್ಲು ಮೊದಲಾದುವುಗಳಿಂದ ಯೋನಿಗೆ ಪೆಟ್ಟುಬೀಳುವುದು, ವಾತಪ್ರಕೋಪ ಇವುಗಳಿಂದ ಕೀವು ರಕ್ತಗಳಿಂದ ಕೂಡಿ ಕಿತ್ತಳೆಯಹಣ್ಣಿನ ಆಕಾರದ ಮಾಂಸಗ್ರಂಥಿಯು ಯೋನಿಯಲ್ಲುಂಟಾದರೆ ಯೋನಿಕಂದವೆನ್ನುತ್ತಾರೆ.

ಲಕ್ಷಣ——ರೂಕ್ಷವಾಗಿ ಬಣ್ಣ ಬದಲಾಗಿ ಸೀಳಿದ್ದರೆ ವಾತಿಕ ಕಂದವೆಂದೂ ಉರಿ, ಕೆಂಪುಬಣ್ಣ, ಜ್ವರಗಳಿಂದ ಕೂಡಿದ್ದರೆ ಪೈತ್ತಿಕ ಕಂದವೆಂದೂ, ಎಳ್ಳಿನ ಹೂವಿನಂತೆ ಆಕಾರವಿದ್ದು ನವೆಯುಳ್ಳದ್ದಾದರೆ ಕಫಜವೆಂದೂ ಮೇಲಿನ ಎಲ್ಲಾ ಲಕ್ಷಣಗಳೂ ಕಂಡುಬಂದರೆ ತ್ರಿದೋಷಜನಿತ ಕಂದವೆಂದೂ ಸಂಜ್ಞೆಯು.

ಚಿಕಿತ್ಸೆ——ದೋಷಶೋಧನ ದ್ರವ್ಯಗಳಿಂದ ತಯಾರಿಸಿದ ವರ್ತಿಯನ್ನು ಯೋನಿಯೊಳಕ್ಕೆ ನುಗ್ಗಿಸಿದಮೇಲೆ ಅಮೃತವಳ್ಳೀ, ತ್ರಿಫಲೆ, ಜಾಪಾಳದ ತೊಗಟೆಗಳ ಕಷಾಯವನ್ನು ಕೊಳಬಿಯ ಮೂಲಕ ಯೋನಿಗೆ ಸುರಿಸಿ ತೊಳೆಯಬೇಕು. ಇದರಿಂದ ನವೆಯು ನಿಲ್ಲುತ್ತದೆ. ಹೆಸರಿನಕಟ್ಟಿಗೆ ಕಗ್ಗಲಿಯಮೇಣ (ಕಾಚು), ಅಣಿಲೆ

ಕಾಯಿಶಿಪ್ಪೆ, ಜಾಜಿಕಾಯಿ, ಜೇವಿನ ತೊಗಟೆ, ಅಡಿಕೆಗಳ ಚೂರ್ಣವನ್ನು ಬಟ್ಟೆಯಿಂದ ಶೋಧಿಸಿ ನುಣುಪಾದ ಪುಡಿಯನ್ನು ಸೇರಿಸಿದ ಗಂಟನ್ನು ಯೋನಿಯೊಳಕ್ಕೆ ಇಟ್ಟಿದ್ದರೆ ಸಂಕೀರ್ಣಯೋನಿಯು (ಅನೇಕ ದೋಷದಿಂದ ಕೆಟ್ಟಿರುವುದು) ಶುದ್ಧವಾಗುತ್ತದೆ; ಅನಂತರ ಯೋನಿಸ್ರಾವವುಂಟಾಗುವುದಿಲ್ಲ.

೬. ಭಗಾರ್ಶಃ

ಮೂಲಮ್ — ನಿದಾನಲಕ್ಷಣ ಚಿಕಿತ್ಸಿತಾನ್ಯಸ್ಯ ಗುದಾರ್ಶವಿಹಿತಾನ್ಯೇವೇತಿ ಬೋದ್ಧವ್ಯಾನಿ। (ಪ್ರಸೂತಿ ಅ।೯।ಶೋ।೭) ॥೧೧೭॥

೬. ಭಗಾರ್ಶಸ್ಸು

ದೀಪಿಕೆ—ಇದರ ನಿದಾನಲಕ್ಷಣ ಚಿಕಿತ್ಸಾ ವಿಧಾನಗಳೂ ಗುದಾರ್ಶಸ್ಸಿನಂತೆಯೇ ಇರುತ್ತವೆ ಎಂದು ತಿಳಿಯಬೇಕು. (ಪ್ರಸೂತಿ ಅ।೯।ಶ್ಲೋ।೭).

೭. ತೂನೀಪ್ರತಿತೂನಯಃ

ಮೂಲಮ್—(ಮಾ।ನಿ।ಅ।೨೨)—

ಅಧೋ ಯಾ ವೇದನಾ ಯಾತಿ ವರ್ಚೋಮೂತ್ರಾಶಯೋತ್ಥಿತಾ ।
ಭಿನ್ದತೀವ ಗುದೋಪಸ್ಥಂ ಸಾ ತೂನೀನಾಮ ನಾಮತಃ ॥೧೧೮॥
ಗುದೋಪಸ್ಥೋತ್ಥಿತಾ ಯಾ ತು ಪ್ರತಿಲೋಮಂ ಪ್ರಧಾವಿತಾ ।
ವೇಗೈಃ ಪಕ್ವಾಶಯಂ ಯಾತಿ ಪ್ರತಿತೂನೀತಿ ಸೋಚ್ಯತೇ ॥೧೧೯॥

ಚಿಕಿತ್ಸಾ—ಬಸ್ತ್ಯಭ್ಯಙ್ಗಾವಗಾಹಗುದವರ್ತ್ಯಾದಿವಾತವ್ಯಾಧಿಹರಾಣ್ಯೇವ ಕ್ರಿಯಾವಿಶೇಷಾಣಿ ಪ್ರಯೋಜ್ಯಾನಿ।

೭. ತೂನೀಪ್ರತಿತೂನಿಗಳು

ದೀಪಿಕೆ—(ಮಾ।ನಿ।ಅ।೨೨।)——

ಪಕ್ವಾಶಯ ಮತ್ತು ಬಸ್ತ್ಯಾಶಯಗಳಲ್ಲಿ ವಾತಶೂಲೆಯುಂಟಾಗಿ ಕೆಳಭಾಗಕ್ಕೆ ನುಗ್ಗುತ್ತಾ ಗುದವನ್ನೂ ಯೋನಿಯನ್ನೂ ಒಡೆದುಬಿಡುವಂತೆ ವೇದನೆಯನ್ನುಂಟುಮಾಡಿದರೆ "ತೂನೀ" ಎಂದೂ, ಗುದ ಮತ್ತು ಯೋನಿದೇಶಗಳಲ್ಲಿ ಪ್ರಾರಬ್ಧಿಸಿ ಮೇಲ್ಮುಖವಾಗಿ ಪಕ್ವಾಶಯ ಮತ್ತು ಬಸ್ತಿ ದೇಶಗಳಿಗೆ ನುಗ್ಗಿ ವೇದನೆಯನ್ನುಂಟುಮಾಡಿದರೆ "ಪ್ರತಿತೂನೀ" ಎಂದೂ ಹೆಸರು.

ಚಿಕಿತ್ಸೆ——ಬಸ್ತಿ, ಅಭ್ಯಂಗ, ಅವಗಾಹ, ಗುದವರ್ತಿ ಮೊದಲಾದ ವಾತವ್ಯಾಧಿಹರಗಳಾದ ಚಿಕಿತ್ಸಾ ವಿಧಾನಗಳನ್ನು ಆಚರಿಸಬೇಕು.

೮. ಉಪದಂಶಃ

(ಯೋ।ರ।)—

ಸ್ತ್ರೀಣಾಂ ಪುಂಸಾಂ ಚ ಜಾಯನ್ತೇ ಉಪದಂಶಾಶ್ಚ ದಾರುಣಾಃ।

ನಿದಾನಮ್—

ಹಸ್ತಾಭಿಘಾತಾನ್ನಖದನ್ತಪಾತಾದಧಾವನಾದತ್ಯುಪಸೇವನಾದ್ವಾ। ಯೋನಿಪ್ರದೋಷಾಚ್ಚ ಭವನ್ತಿ ಯೋನ್ಯಾಂ (ಶಿಶ್ನೇ) ಪಂಚೋಪದಂಶಾ ವಿವಿಧಾಪಚಾರೈಃ ॥೧೨೦॥

ವಾತಜಃ—
ಸತೋದಭೇದಸ್ಫುರಣೈಃ ಕೃಷ್ಣೈಃ ಸ್ಫೋಟೈಶ್ಚ ವಾತಜಃ ।
ಪಿತ್ತಜಃ—
ರಕ್ತಪೀತೈಃ ಕ್ಲೇದದಾಹೈಃ ಪಿತ್ತಜೋ ಮಾಂಸಕೀಲಕಃ ॥೧೨೧॥
ಕಫಜಃ—
ಕಣ್ಡೂಶೋಫವ್ರಣೈಶ್ಶುಕ್ಲೈಃ ಸ್ರಾವಯುಕ್ತೈಃ ಕಫೇನ ತು ।
ತ್ರಿದೋಷಜಃ—
ನಾನಾಸ್ರಾವರುಜೋಪೇತೋ ದುಶ್ಚಿಕಿತ್ಸ್ಯಸ್ತ್ರಿದೋಷಜಃ ॥೧೨೨॥
ಚಿಕಿತ್ಸಾ—
ಪಟೋಲನಿಮ್ಬಖದಿರಾಕಿರಾತತ್ರಿಫಲಾಸನೈಃ ।
ಕ್ವಾಥೋ ಗುಗ್ಗುಳುಸಂಯುಕ್ತ ಉಪದಂಶಹರಃ ಪರಃ ॥೧೨೩॥
ತ್ರಿಫಲಾಭೃಙ್ಗಪಂಚವಲ್ಕಕಷಾಯೈಃ ಕ್ಷಾಳನಂ ವ್ರಣಶೋಥಹರಮ್ ॥೧೨೪॥

೮. ಉಪದಂಶರೋಗ.

(ಯೋ।ರ।)—

ಈ ಭಯಂಕರವ್ಯಾಧಿಯು ಸ್ತ್ರೀಯರಿಗೂ ಪುರುಷರಿಗೂ ಉಂಟಾಗುತ್ತದೆ.

ಕಾರಣ—ಕೈಯಿಂದ ಪೆಟ್ಟುಬೀಳುವುದು, ಉಗುರು ಹಲ್ಲುಗಳಿಂದ ಘಾಯವಾಗುವುದು, ಯೋನಿಯನ್ನು ಪದೇಪದೇ ತೊಳೆಯದೆಯೂ ಶುದ್ಧಿಮಾಡದೆಯೂ ಇರುವುದು, ಅತಿಮೈಥುನವನ್ನು ಕೈಗೊಳ್ಳುವುದು, ಯೋನಿದೋಷ ಇವುಗಳಿಂದ ಪುರುಷರ ಶಿಶ್ನದಲ್ಲುಂಟಾಗುವಂತೆಯೇ ಸ್ತ್ರೀಯರ ಯೋನಿಯಲ್ಲೂ ಐದು ವಿಧಗಳಾದ ಉಪದಂಶಗಳು (ಮೇಹವ್ರಣಗಳು) ಉಂಟಾಗುತ್ತವೆ.

ಭೇದಗಳು—ಯೋನಿಯಲ್ಲಿ ಚುಚ್ಚುವುದು, ಜಜ್ಜುವುದು ಮುಂತಾದ ನೋವುಗಳುಂಟಾಗುವುದು, ಯೋನಿ ಅದರುವುದು, ಕರೀಗುಳ್ಳೆಗಳು ಏಳುವುದು ಇವು ವಾತದೋಷದಿಂದಲೂ; ಕೆಂಪು, ಹಳದಿ ಬಣ್ಣದ ಮಾಂಸಾಂಕುರಗಳೆದ್ದು ದ್ರವಸೋರುತ್ತಾ ಉರಿಯುತ್ತಾ ಇದ್ದರೆ ಪಿತ್ತದೋಷದಿಂದಲೂ; ನವೆ, ಊದು, ಹುಣ್ಣು, ಬಿಳುಪುಬಣ್ಣದ ಸ್ರಾವವಿದ್ದರೆ ಕಫದೋಷದಿಂದ ಉಂಟಾಗಿರುತ್ತವೆಯೆಂದೂ; ಅನೇಕ ಬಣ್ಣದ ಸ್ರಾವಗಳಿದ್ದು ನೋವಿನಿಂದ ಕೂಡಿದ್ದರೆ ತ್ರಿದೋಷಗಳಿಂದ ಉಂಟಾದುದೆಂದೂ ಚಿಕಿತ್ಸೆಮಾಡಿ ಗುಣಪಡಿಸಲು ಅಸಾಧ್ಯವೆಂದೂ ತಿಳಿಯಬೇಕು.

ಚಿಕಿತ್ಸೆ—ಕಹಿಪಡವಲ, ಬೇವು, ಕಗ್ಗಲಿಯ ತೊಗಟೆ, ನೆಲಬೇವು, ತ್ರಿಫಲೆಗಳ ಶಿಪ್ಪೆ, ಕೆಂಪುಹೊನ್ನೆತೊಗಟೆ ಇವುಗಳ ಕಷಾಯಕ್ಕೆ ಗುಗ್ಗುಳುವನ್ನು ಸೇರಿಸಿ ಪಾನ ಮಾಡಿಸಿದರೆ ಉಪದಂಶಹರವು.

ತ್ರಿಫಲಾಕಷಾಯ, ಗರುಗದಸ್ವರಸ, ಪಂಚಕ್ಷೀರವೃಕ್ಷಗಳ ಕಷಾಯದಿಂದ ಕ್ಷಾಳನಮಾಡಿಸಿದರೆ ವ್ರಣವು ಮಾಯುತ್ತದೆ, ಊದು ಕಡಿಮೆಯಾಗುತ್ತದೆ.

೯. ರಕ್ತಗುಲ್ಮಃ

ಮೂಲ—(ಚ। ಚಿ। ಅ। ೫)—

ನಿದಾನಮ್—

ಋತಾವನಾಹಾರತಯಾ ಭಯೇನ ವಿರೂಕ್ಷಣೈರ್ವೇಗವಿನಿಗ್ರಹೈಶ್ಚ। ಸಂಸ್ತಮ್ಭನೋಲ್ಲೇಖನಯೋನಿದೋಷೈರ್ಗುಲ್ಮಃ ಸ್ತ್ರಿಯಂ ರಕ್ತಭವೋಽಭ್ಯುಪೈತಿ ॥೧೨೫॥

ಲಕ್ಷಣಮ್—

ಯಃ ಸ್ಪನ್ದತೇ ಪಿಣ್ಡಿತ ಏವ ನಾಂಗೈಶ್ಚಿರಾತ್ ಸಶೂಲಃ ಸಮಗರ್ಭಲಿಙ್ಗಃ। ಸ ರೌಧಿರಃ ಸ್ತ್ರೀಭವ ಏವ ಗುಲ್ಮೋ ಮಾಸೇ ವ್ಯತೀತೇ ದಶಮೇ ಚಿಕಿತ್ಸ್ಯಃ ॥೧೨೬॥

ಚಿಕಿತ್ಸಾ—

ರೌಧಿರಸ್ಯ ಚ ಗುಲ್ಮಸ್ಯ ಗರ್ಭಕಾಲವ್ಯತಿಕ್ರಮೇ
ಸ್ನಿಗ್ಧಸ್ವಿನ್ನಶರೀರಾಯೈ ದದ್ಯಾತ್ಸ್ನೇಹವಿರೇಚನಮ್ ॥೧೨೭॥
ಬಸ್ತಿಂ ಸಕ್ಷೀರಗೋಮೂತ್ರಂ ಸಕ್ಷಾರಂ ದಾಶಮೂಲಿಕಮ್
ಅದೃಶ್ಯಮಾನೇ ರುಧಿರೇ ದದ್ಯಾದ್ಗುಲ್ಮಪ್ರಭೇದನಮ್ ॥೧೨೮॥
ಪ್ರವರ್ತಮಾನೇ ರುಧಿರೇ ದದ್ಯಾನ್ಮಾಂಸರಸೌದನಮ್ ।
ರುಧಿರೇಽತಿಪ್ರವೃತ್ತೇ ತು ರಕ್ತಪಿತ್ತಹರೀಃ ಕ್ರಿಯಾಃ ॥೧೨೯॥
ಕಾರ್ಯಾ ವಾತರುಗಾರ್ತಾಯಾಃ ಸರ್ವಾ ವಾತಹರೀಃ ಪುನಃ ।
ಪ್ರಯೋಜಯೇದುತ್ತರಂ ವಾ ಜೀವನೀಯೇನ ಸರ್ಪಿಷಾ ॥೧೩೦॥
ಅತಿಪ್ರವೃತ್ತೇ ರುಧಿರೇ ಸತಿಕ್ತೇನಾನುವಾಸನಮ್

೯. ರಕ್ತಗುಲ್ಮ

ದೀಪಿಕೆ—(ಚ।ಚಿ।ಅ। ೫)—

ಕಾರಣ—ಋತುಕಾಲದಲ್ಲಿ ಆಹಾರ ಸೇವನೆಯನ್ನು ಮಾಡದೆಯೂ, ಭಯ, ರೂಕ್ಷಾಹಾರಸೇವನೆ, ಮಲ ಮೂತ್ರಗಳ ವೇಗವನ್ನು ತಡೆಯುವುದು, ಸ್ತಮ್ಭನ ಮತ್ತು ಉಲ್ಲೇಖನೌಷಧಗಳ ಸೇವನೆ, ಯೋನಿದೋಷ ಇವುಗಳಿಂದ ಸ್ತ್ರೀಯರಿಗೆ ರಕ್ತಗುಲ್ಮವುಂಟಾಗುತ್ತದೆ.

ಲಕ್ಷಣ—ಗರ್ಭಚಿಹ್ನೆಗಳೆಲ್ಲಾ ಇರುತ್ತವೆ, ಹೊಟ್ಟೆಯನ್ನು ಮುಟ್ಟಿದರೆ ಅದುರುತ್ತದೆ, ಕೈ ಕಾಲುಗಳಿಲ್ಲದ ಬರಿಯ ಮಾಂಸದ ಮುದ್ದೆಯು ಸ್ಪರ್ಶಕ್ಕೆ ಗೊತ್ತಾಗುತ್ತದೆ. ಬಲುಕಾಲದಮೇಲೆ ಹೊಟ್ಟೆಶೂಲೆಯುಂಟಾಗುತ್ತದೆ ; ಹತ್ತು ತಿಂಗಳು ಕಳೆದಮೇಲೆ ಚಿಕಿತ್ಸೆಮಾಡಿಸಬೇಕು ; ಮೊದಲೇ ಚಿಕಿತ್ಸೆ ಮಾಡಿಸಿದರೆ ಹಣ್ಣಾಗದೆ ಇರುವ ಮಾವಿನಕಾಯಿಯನ್ನು ಜಜ್ಜಿದರೆ ರಸವೂ ಓಪ್ಪೆಯೂ ಬೇರ್ಪಡದೆ ವ್ಯರ್ಥವಾಗುವಂತೆಯೇ ಗುಲ್ಮವು ಸರಿಯಾಗಿ ಹೊರಕ್ಕೆ ಬಾರದೆ ಆ ಸ್ತ್ರೀಗೆ ಅಪಾಯವುಂಟಾಗುತ್ತದೆ.

ಚಿಕಿತ್ಸಾವಿಧಾನವು—ಆ ಸ್ತ್ರೀಯಳಿಗೆ ಸ್ನೇಹಸ್ವೇದಗಳನ್ನು ಮಾಡಿಸಿ ಸ್ನೇಹಮಿಶ್ರಮಾಡಿ ವಿರೇಚನೌಷಧವನ್ನು ಕುಡಿಸಬೇಕು. ಹಾಲು, ಗೋಮೂತ್ರ, ಯವಕ್ಷಾರ, ದಶಮೂಲಗಳ ಕಷಾಯಗಳನ್ನು ಮಿಶ್ರಮಾಡಿ ಬಸ್ತಿದಾನಮಾಡಿಸ

ಬೇಕು. ಯೋನಿಯಿಂದ ರಕ್ತಸ್ರಾವವಾಗದಿದ್ದರೆ ಗುಲ್ಮಭೇದಕಗಳಾದ ಕ್ಷಾರ ಮೊದಲಾದೌಷಧಗಳನ್ನು ಪ್ರಯೋಗಿಸಬೇಕು. ರಕ್ತಸ್ರಾವವಾಗುತ್ತಿದ್ದರೆ ಮಾಂಸರಸ ಮಿಶ್ರವಾದ ಅನ್ನವನ್ನು ಕೊಡಬೇಕು. ಅತಿಯಾಗಿ ರಕ್ತಸ್ರಾವ ವಾಗುತ್ತಿದ್ದರೆ ರಕ್ತಪಿತ್ತಹರಗಳಾದ ಚಿಕಿತ್ಸೆಗಳನ್ನು ಮಾಡಬೇಕು. ವಾತ ಶೂಲೆಗಳಿದ್ದರೆ ವಾತಹರಗಳಾದ ಚಿಕಿತ್ಸೆಯನ್ನು ಮಾಡಿಸಿ ಜೀವನೀಯೌಷಧ ಗಳಿಂದ ತಯಾರಿಸಿದ ಘೃತವನ್ನು ಭೋಜನವಾದಮೇಲೆ ಕುಡಿಸಬೇಕು. ಅತಿಯಾಗಿ ರಕ್ತಸ್ರಾವವಾಗುತ್ತಿದ್ದರೆ ತಿಕ್ತಘೃತಮಿಶ್ರವಾದ ಅನುವಾಸನ ಬಸ್ತಿಯನ್ನು ಪ್ರಯೋಗಿಸಬೇಕು.

ಮೂಲ—೧೦. ಮಕ್ಕಲ್ಲಃ, ಪ್ರಸೂತಿತನ್ತ್ರೇ ಅಷ್ಟಮಾಧ್ಯಾಯೇ ವರ್ಣಿತಪೂರ್ವಃ।

ದೀಪಿಕೆ—೮೦. ಮಕ್ಕಲ್ಲರೋಗವು ಪ್ರಸೂತಿತನ್ತ್ರದ ಎಂಟನೆಯ ಅಧ್ಯಾಯ ದಲ್ಲಿಯೇ ವಿವರಿಸಲ್ಪಟ್ಟಿರುತ್ತೆ.

೧೧. ಸ್ತನರೋಗಾಃ

ಮೂಲ—(ಕಾ।ಸಂ।ಅ। ೨೧)—ಸ್ತನರೋಗಾಃ—

ತೇ ತು ತ್ರಿಧಾ—ಸ್ತನಕೀಲಕಮ್, ಸ್ತನಶೋಫಃ, ಸ್ತನವಿದ್ರಧಿರಿತಿ ॥೧೩೧॥

(ಅ) ಸ್ತನಕೀಲಕಮ್—ವಜ್ರಮ್—

ತೃಣಂ ಕೀಟಂ ತುಷಂ ಶೂಕಂ ಮಕ್ಷಿಕಾಙ್ಗಮಲಾಷ್ಟಕಮ್ ।
(ಜ್ಞಾನಿಲೋಷ್ಟಕಃ)
ಕೇಶೋರ್ಣಾಸ್ಥ್ಯಾದಿಕಂ ವಿದ್ಯಾದ್ವಜ್ರಮಿತ್ಯುಪಚಾರತಃ ॥೧೩೨॥

ಸಂಪ್ರಾಪ್ತಿಃ—

ಸಹಾನ್ನಪಾನೇನ ಯದಾ ಧಾತ್ರೀ ವಜ್ರಂ ಸಮಶ್ನುತೇ।
ಪಚ್ಯಮಾನೇನ ಪಾಕೇನ ಹ್ಯನನ್ಯತ್ವಾ ನ್ನ ಪಚ್ಯತೇ ॥ ॥೧೩೩॥
ಅಪಚ್ಯಮಾನಂ ವಿಕ್ಲಿನ್ನಂ ವಾಯುನಾ ಸಮುದೀರಿತಮ್।
ರಸೇನ ಸಹ ಸಂಯುಕ್ತಂ ಯಾತಿ ಸ್ತನ್ಯವಹಾಃ ಸಿರಾಃ ॥೧೩೪॥
ಸರ್ವಸ್ರೋತಾಂಸಿ ಹಿ ಸ್ತ್ರೀಣಾಂ ವಿವೃತಾನಿ ವಿಶೇಷತಃ।
ತತ್ಪಯೋಧರಮಾಸಾದ್ಯ ಕ್ಷಿಪ್ರಂ ವಿಕುರುತೇ ಸ್ತ್ರಿಯಾಃ ॥೧೩೫॥

ರೂಪಾಣಿ—

ಅಜೀರ್ಣಮರತಿರ್ಗ್ಲಾನಿರನಿಮಿತ್ತಂ ವ್ಯಥಾಽರುಚಿಃ ।
ಪರ್ವಭೇದಾಙ್ಗಮರ್ದಶ್ಚ ಶಿರೋರುಕ್ ಕ್ಷವಥುಗ್ರಹಃ ॥೧೩೬॥
ಕಫೋತ್ಕ್ಲೇದೋ ಜ್ವರಸ್ತೃಷ್ಣಾ ವಿಡ್ಭೇದೋ ಮೂತ್ರಸಂಗ್ರಹಃ।
ಸ್ತಮ್ಭಃ ಸ್ರಾವಶ್ಚ ಕುಚಯೋಃ ಸಿರಾಜಾಲೇನ ಸಂತತಃ ॥೧೩೭॥
ಶೋಥಶೂಲರುಜಾದಾಹೈಃ ಸ್ತನಃ ಸ್ಪ್ರಷ್ಟುಂ ನ ಶಕ್ಯತೇ।
ಸ್ತನಕೀಲಕಮಿತ್ಯಾಹುರ್ಭಿಷಜಸ್ತಂ ವಿಚಕ್ಷಣಾಃ ॥೧೩೮॥
ಕೀಲವತ್ಕಠಿಣೋಽಙ್ಗೇಷು ಬಾಧಮಾನೋ ಹಿ ತಿಷ್ಠತಿ ।

ಭೇದಾಃ—

ಏಷ ಪಿತ್ತಾತ್ಮನಾ ಶೀಘ್ರಂ ಪಾಕಂ ಭೇದಂ ಚ ಗಚ್ಛತಿ ॥೧೩೯॥

ಕಫಾಚ್ಚಿರಂ ಕ್ಲೇಶಯತಿ ವಾತಾದಾಶು ವಿವರ್ಧತೇ । (ನಿವರ್ತತೇ)
ಶಾಖಾಶಿರಾಭಿಸ್ತು ಯದಿ ವಿಮಾರ್ಗಾನ್ನ ಪ್ರಪದ್ಯತೇ ॥೧೪೦॥
ಆಕೃಷ್ಯಮಾಣಂ ಬಾಲೇನ ಕ್ಷಿಪ್ರಂ ನಿರ್ಧಾವತಿ ಸ್ತನಾತ್ ।
ನಿರ್ದುಹ್ಯಮಾನಮುತ್ಪೀಡಾದ್ವಜ್ರಂ ಸಕ್ಷೀರಶೋಣಿತಮ್ ॥೧೪೧॥
ಅಥವಾಭ್ಯೇತಿ ಸಹಸಾ ಪ್ರತ್ಯಕ್ಷಂ ಚೋಪಲಭ್ಯತೇ ।

ಚಿಕಿತ್ಸಾ—
ಘೃತಪಾನಂ ಪ್ರಥಮತಃ ಶಸ್ಯತೇ ಸ್ತನಕೀಲಕೇ ॥೧೪೨॥
ಸ್ರೋತಾಂಸಿ ಮಾರ್ದವಂ ಸ್ನೇಹಾದ್ಯಾತಿ ವಜ್ರಂ ಚ ಚ್ಯಾವ್ಯತೇ ।
ನಿರ್ದೋಹೋ ಮರ್ದನಂ ಯುಕ್ತ್ಯಾಪಾಯನಂ ಚ ಗಳೇನ ಚ ॥೧೪೩॥
ಶೀತಾಃ ಸೇಕಾಃ ಪ್ರಲೇಪಾಶ್ಚ ವಿರೇಕಃ ಪಥ್ಯಭೋಜನಮ್ ।
ಸ್ರಾವಣಂ ಚಾಪ್ಯವಿದಗ್ಧಸ್ಯ ದೋಷದೇಹವ್ಯಪೇಕ್ಷಯಾ ॥೧೪೪॥
ಪಕ್ವಸ್ಯ ಪಾಟನಂ ಕುರ್ಯಾನ್ಮೃಜಾಂ ವಿದ್ರಧಿವಚ್ಚ ತತ್ ।

೧೧. ಸ್ತನರೋಗಗಳು

ದೀಪಿಕೆ—(ಕಾ।ಸಂ।ಅ। ೨೧) (ಅ) ಸ್ತನಕೀಲಕ—

ಹುಲ್ಲು, ಹುಳು, ಹೊಟ್ಟು, ಬತ್ತದ ಮುಳ್ಳು, ನೊಣ, ಮೈಯ ಕೊಳೆ, ಮಣ್ಣಿನ ಹೆಂಟೆ, ಕೂದಲು, ಕುರಿ ತುಬಟ, ಮೂಳೆಯ ಚೂರು ಇವುಗಳಿಗೆ 'ವಜ್ರ' ಎಂಬುದಾಗಿ ಗೌರವಯುತವಾಗಿ ಹೇಳುತ್ತಾರೆ. ಮಗುವಿಗೆ ಹಾಲು ಕುಡಿಸುವ ದಾದಿಯು ಅನ್ನಪಾನಗಳೊಡನೆ ಈ ವಜ್ರವನ್ನೂ ತಿಂದರೆ ಇದು ಆಹಾರಪದಾರ್ಥವಲ್ಲದ ಕಾರಣ ಜೀರ್ಣಿಸುವುದಿಲ್ಲ. ಈ ರೀತಿ ಪಾಕವಾಗದಿರುವ ವಜ್ರವು ವಾಯುವಿನಿಂದ ರಸಧಾತುವಿನೊಡನೆ ಸ್ತನ್ಯವಾಹಿಶಿರೆಗಳಿಗೆ ನೂಕಲ್ಪಡುತ್ತದೆ. ಸ್ತ್ರೀಯರಿಗೆ ಎಲ್ಲಾ ಸ್ರೋತೋಮಾರ್ಗಗಳೂ ವಿವೃತವಾಗಿರುವುದರಿಂದ ವಜ್ರವು ಸ್ತನಗಳಿಗೆ ಬಂದು ಹಿಂಸೆಪಡಿಸುತ್ತದೆ.

ಲಕ್ಷಣ—

ಆ ಸ್ತ್ರೀಯಳಿಗೆ ಅಜೀರ್ಣ, ದುಃಖ, ಬಳಲಿಕೆ, ಕಾರಣವಿಲ್ಲದೆ ವ್ಯಸನಪಡೋಣವು, ಅರುಚಿ, ಬೆರಳುಗಳ ಗಿಣ್ಣುಗಳಲ್ಲಿ ನೋವು, ಮೈಕೈ ಕತ್ತರಿಸಿದಂತೆ ನೋವು, ತಲೆಶೂಲೆ, ಶೀನು ತಡೆದಿರುವುದು, ಬಾಯಿಯಲ್ಲಿ ಜೊಲ್ಲು ಸುರಿಯುವುದು, ಜ್ವರ, ಬಾಯಾರಿಕೆ, ನೀರುನೀರಾಗಿ ಮಲವು ಜಾರುವುದು, ಮೂತ್ರದ ತಡೆ, ಮೈ ಬಿಗಿಹಿಡಿಯುವುದು, ಸ್ತನಗಳಿಂದ ದ್ರವವು ಸ್ರವಿಸುವುದು, ಸಿರಾಜಾಲದಿಂದ ಸ್ತನಗಳು ಆವರಿಸಲ್ಪಟ್ಟಿರುವುದು, ಸ್ತನದಲ್ಲಿ ಶೋಥ, ಚುಚ್ಚುವುದು, ನೋಯುವುದು, ಉರಿಯುವುದು, ಮುಟ್ಟುಗೊಳಿಸದಿರುವುದು, ಈ ಲಕ್ಷಣಗಳಿರುತ್ತವೆ; ಈ ವ್ಯಾಧಿಗೆ ಸ್ತನಕೀಲಕವೆಂದು ಹೆಸರು. ಇದು ದೇಹದಲ್ಲಿ ನೆಟ್ಟುಕೊಂಡ ಗೂಟದಂತೆ ಹಿಂಸೆಯನ್ನುಂಟುಮಾಡುತ್ತದೆ.

ಭೇದಗಳು—

ಪಿತ್ತಾಧಿಕವಾದರೆ ಬೇಗ ಪಾಕವಾಗಿ ಒಡೆದುಬಿಡುತ್ತದೆ; ಕಫಾಧಿಕವಾದರೆ ಬಲುಕಾಲದವರೆಗೂ ಪೀಡಿಸುತ್ತದೆ; ವಾತಾಧಿಕವಾದರೆ ಬೇಗ ವೃದ್ಧಿಯಾಗಿ ನಿವಾರಣೆಯಾಗುತ್ತದೆ. ಶಾಖಾ (ರಕ್ತಾದಿಧಾತುಗಳು, ಚರ್ಮ) ಮತ್ತು ಸಿರೆಗಳು ಸ್ತನಗಳಿಗೆ ದೂರವಾದ ಕಾರಣ ಅವುಗಳಲ್ಲಿ ವಜ್ರವು ಸೇರಲಾಗುವುದಿಲ್ಲ; ಮಗುವು ಹಾಲು ಕುಡಿಯುವಾಗ ಸ್ತನದಿಂದ ಬೇಗನೆ ಹೊರಕ್ಕೆ ಬಂದುಬಿಡುತ್ತದೆ. ಬಲಾತ್ಕಾರದಿಂದ ಹಾಲನ್ನು ಕರೆದರೆ ಹಾಲು ರಕ್ತಗಳೊಡನೆ ಸೇರಿಕೊಂಡು ಬಲುವ್ಯಥೆಯಿಂದ ಹೊರಕ್ಕೆ ಬರುವುದನ್ನು ನೋಡಬಹುದು.

ಚಿಕಿತ್ಸೆ—

ಸ್ತನಕೀಲಕರೋಗದಲ್ಲಿ ಮೊದಲು ಘೃತಪಾನವು ಹಿತಕರವಾದದ್ದು. ಸ್ನೇಹದಿಂದ ಸ್ರೋತೋಮಾರ್ಗಗಳು ಮೃದುವಾಗಿ ಮಾಡಲ್ಪಡುತ್ತವೆಯಾಗಿ ವಜ್ರವು ಹೊರಕ್ಕೆ ಜಾರಿಬರುತ್ತದೆ. ಉಪಾಯವಾಗಿ ಸ್ತನವನ್ನು ಹಿಸುಕಿ ಹಾಲನ್ನು ಕರೆದುಬಿಡಬೇಕು. ಮಗುವು ಗಂಟಲೊಳಕ್ಕೆ ಮೊಲೆಯನ್ನು ಎಳೆದುಕೊಂಡು ಹಾಲನ್ನು ಹೀರುವಂತೆ ಮಾಡಬೇಕು. ತಣ್ಣಗಿರುವ ನೀರನ್ನಾಗಲೀ ಕಷಾಯವನ್ನಾಗಲೀ ಸ್ತನಗಳಮೇಲೆ ಸೇಚನೆಮಾಡಿಸಬೇಕು. ಶೀತಲವಾದ ಲೇಪನಗಳನ್ನೂ, ವಿರೇಚನೌಷಧ ಸೇವನವನ್ನೂ ಹಿತಾಹಾರಭೋಜನವನ್ನೂ ಪ್ರಯೋಗಿಸಿ ದೋಷದೇಹಗಳಿಗೆ ತಕ್ಕಂತೆ ಪಾಕವಾಗದಿರುವ ರಕ್ತವನ್ನು ಸ್ರಾವಣಮಾಡಿಸಬೇಕು. ಪಕ್ವವಾದರೆ ವ್ರಣಪಾಟನಮಾಡಿಸಿ ವಿದ್ರಧಿಚಿಕಿತ್ಸೆಯಂತೆ ಉಪಚರಿಸಬೇಕು.

ಮೂಲ—(ಸು।ಸಂ।)—(ಅ) ಸ್ತನಶೋಫಃ—

ಧಮನ್ಯಃ ಸಂವೃತದ್ವಾರಾಃ ಕನ್ಯಾನಾಂ ಸ್ತನಸಂಶ್ರಿತಾಃ ॥೧೪೫॥
ದೋಷಾವಿಸರಣಾತ್ತಾಸಾಂ ನ ಭವನ್ತಿ ಸ್ತನಾಮಯಾಃ।
ತಾಸಾಮೇವ ಪ್ರಜಾತಾನಾಂ ಗರ್ಭಿಣೀನಾಂ ಚ ತಾಃ ಪುನಃ ॥೧೪೬॥
ಸ್ವಭಾವಾದೇವ ವಿವೃತಾ ಜಾಯನ್ತೇ ಸಮ್ಭವನ್ತ್ಯತಃ।

ನಿದಾನಮ್—

ದುಷ್ಟಾ ದೋಷಾಃ ಸ್ತನಸಿರಾಃ ವಿವೃತಾಃ ಪ್ರಾಪ್ಯ ಯೋಷಿತಾಮ್ ॥೧೪೭॥
ಸೂತಾನಾಂ ಗರ್ಭಿಣೀನಾಂ ವಾ ಸಮ್ಭವೇಚ್ಛ್ವಯಥುರ್ಘನಃ।

ಸಮ್ಪ್ರಾಪ್ತಿಃ—

ಸಕ್ಷೀರೌ ವಾಪ್ಯದುಗ್ಧೌ ವಾ ಪ್ರಾಪ್ಯ ದೋಷಾ ಸ್ತನೌ ಸ್ತ್ರಿಯಾಃ ॥೧೪೮॥
ಪ್ರದೂಷ್ಯ ಮಾಂಸಂ ರುಧಿರಂ ಸ್ತನರೋಗಾಯ ಕಲ್ಪತೇ।

ಲಕ್ಷಣಮ್—

ಯತ್ಸರಕ್ತಂ ತನುಸ್ರಾವಂ ರುಧಿರಾಮಿಷಗನ್ಧಿ ಯತ್ ॥೧೪೯॥
ಶೋಥವೃದ್ಧಿಸಮಾಯುಕ್ತಂ ಸರುಜಂ ಚ ಪಯೋಧರಮ್।

ಭೇದಾಃ—

ದೋಷೈಸ್ತ್ರಿಭಿರ್ಭವತಿ ಸಾ ಪೃಥಗೇಕಶಶ್ಚ
ಸಂಮೂರ್ಛಿತೈರಪಿ ಚ ಶಲ್ಯನಿಮಿತ್ತತೋಽನ್ಯಾ ॥೧೫೦॥

ಚಿಕಿತ್ಸಾ—

ಶೋಥಂ ಸ್ತನೋತ್ಥಿತಮವೇಕ್ಷ್ಯ ಭಿಷಗ್ವಿದಧ್ಯಾ-
ದ್ವಿದ್ರಧಾವಭಿಹಿತಂ ಬಹುಧಾವಿಧಾನಮ್ ।
ಸಂಪಚ್ಯಮಾನಮಪಿ ತಂ ತು ವಿನೋಪನಾಹೈಃ
ಸರ್ವ್ವೋಜನೇನ ಖಲು ಪಾಚಯಿತುಂ ಯತೇತ ॥೧೫೧॥
ಶೀಘ್ರಂ ಸ್ತನೌ ಹಿ ಮೃದುಮಾಂಸತಯೋಪನದ್ಧೌ
ಸರ್ವಂ ಪ್ರಕೋಪಮುಪಯಾನ್ತ್ಯವದೀರ್ಯತೇ ಚ ॥೧೫೨॥

ಅಥಮಲ್ಲಃ—ಏರಣ್ಡಸಪ್ತಕಂ ಸ್ತನಾದಿ ಗತವಾತೇ ।

ಏರಣ್ಡೋ ಬೀಜಪೂರಶ್ಚ ಗೋಕ್ಷುರೋ ಬೃಹತೀದ್ವಯಮ್ ।
ಅಶ್ಮಭೇದಸ್ತಥಾ ಬಿಲ್ವಃ ಮೂತ್ರೈರೇತೈಃ ಕೃತಃ ಶೃತಃ ॥೧೫೩॥
ಏರಣ್ಡತೈಲಹಿಂಗ್ವಾಢ್ಯಃ ಸಯವಕ್ಷಾರಸೈನ್ಧವಃ ।
ಸ್ತನಸ್ಕನ್ಧಕಟೀವೇಢ್ರಹೃದಯೋತ್ಥಾಂ ವ್ಯಥಾಂ ಜಯೇತ್ ॥೧೫೪॥
ಜಲೌಕೋಭಿರ್ಹರೇದ್ರಕ್ತಂ ನ ಸ್ತನಾವುಪನಾಹಯೇತ್ ।
ದುಃಖಸ್ತನಾ ತು ಯಾ ನಾರೀ ಸಾ ಶೀಘ್ರಂ ಸುಖಿನೀ ಭವೇತ್ ॥೧೫೫॥
ಲೇಪೋ ವಿಶಾಲಮೂಲೇನ ಹನ್ತಿ ಪೀಡಾಂ ಸ್ತನೋತ್ಥಿತಾಮ್ ।
ನಿಶಾಕನಕಕಲ್ಕಾಭ್ಯಾಂ ಲೇಪಶ್ಚಾಪಿ ಸ್ತನಾರ್ತಿಹೃತ್ ॥೧೫೬॥

ದೀಪಿಕೆ—(ಅ) ಸ್ತನಶೋಫವು—

ಕನ್ನಿಕೆಯರಿಗೆ ಸ್ತನಗಳಲ್ಲಿರುವ ಧಮನಿಗಳ ಮುಖಗಳು ಸಂಕೋಚ ಹೊಂದಿರುವುದರಿಂದ ದೋಷಗಳು ಹರಡಿಕೊಳ್ಳುವುದಕ್ಕೆ ಅವಕಾಶವಿರುವುದಿಲ್ಲ. ಅವರು ಹೆತ್ತಮೇಲಾಗಲೀ, ಗರ್ಭಿಣಿಯರಾದ ಕಾಲದಲ್ಲಿಯಾಗಲೀ ಸ್ವಭಾವ ವಾಗಿಯೇ ಆ ಧಮನಿಗಳು ಹಿಗ್ಗಿರುತ್ತವೆಯಾಗಿ ಆಗ ಸ್ತನರೋಗಗಳುಂಟಾಗುತ್ತವೆ.

ಕಾರಣ—

ಸ್ತ್ರೀಯರು ಗರ್ಭಿಣಿಯರಾಗಿರುವಾಗಲೂ ಹೆತ್ತಮೇಲೂ ಪ್ರಕುಪಿತಗಳಾದ ದೋಷಗಳು ಸ್ತನದಲ್ಲಿರುವ ಸಿರೆಗಳನ್ನು ಅಗಲಿಸಿ ಸ್ತನವನ್ನು ಉಬ್ಬಿಸುತ್ತವೆ.

ರೋಗವು ಹಬ್ಬುವ ವಿಧಾನ—

ಸ್ತನಗಳಲ್ಲಿ ಹಾಲಿರಲಿ, ಇಲ್ಲದೆ ಇರಲಿ, ಪ್ರಕುಪಿತಗಳಾದ ದೋಷಗಳು ಸ್ತನಗಳನ್ನು ಸೇರಿ ಮಾಂಸವನ್ನೂ ರಕ್ತವನ್ನೂ ಕೆಡಿಸಿ ಸ್ತನರೋಗವನ್ನುಂಟು ಮಾಡುತ್ತವೆ.

ಲಕ್ಷಣಭೇದಗಳು—

ಸ್ತನಗಳು ಉಬ್ಬಿ ನೋವಿನಿಂದ ಕೂಡಿ ರಕ್ತಮಿಶ್ರವಾಗಿ ತೆಳುವಾದ ದ್ರವವನ್ನು ಸುರಿಸುತ್ತವೆ. ಆ ದ್ರವವು ರಕ್ತದ ಮತ್ತು ಮಾಂಸದ ವಾಸನೆ ಯುಳ್ಳದ್ದಾಗಿರುತ್ತದೆ. ವಾತ, ಪಿತ್ತ, ಕಫ, ಸನ್ನಿಪಾತ ಮತ್ತು ಶಲ್ಯನಿಮಿತ್ತ ದಿಂದ ಸ್ತನಶೋಫವು ಐದು ವಿಧಗಳಾಗುತ್ತದೆ.

ಚಿಕಿತ್ಸೆ—

ವೈದ್ಯರು ವಿದ್ರಧಿಗೆ ಮಾಡುವಂತೆಯೇ ಸ್ತನಶೋಫದಲ್ಲೂ ಅನೇಕವಿಧ ಗಳಾದ ಚಿಕಿತ್ಸೆಯನ್ನು ಮಾಡಬೇಕು. ಉಪನಾಹಕರ್ಮವನ್ನು ಮಾಡದೆ ಸರಿ

ಯಾದ ಆಹಾರವಿಧಾನಗಳಿಂದಲೇ ಅದು ಪಕ್ವವಾಗುವಂತೆ ಮಾಡಬೇಕು. ಸ್ತನಗಳ ಮಾಂಸವು ಅತಿ ಮೃದುವಾದ್ದರಿಂದ ಉಪನಾಹಮಾಡಿಸಿದರೆ ಮೂರು ದೋಷಗಳೂ ಕೆರಳಿ ಸ್ತನಗಳು ಬಿರುಕುಬಿಟ್ಟು ತುಂಬಾ ವ್ಯಥೆಯನ್ನುಂಟುಮಾಡುತ್ತವೆ. ಹರಳುಬೇರು, ಮಾದಳ, ನೆಗ್ಗಿಲುಸಮೂಲ, ಪೆಗ್ಗುಳ್ಳ, ನೆಲಗುಳ್ಳ, ಹಿಟ್ಟುಳುಕನಗೆಡ್ಡೆ, ಬಿಲ್ವಪತ್ರೆ ಬೇರುಗಳ ಕಷಾಯಕ್ಕೆ ಇಂಗನ್ನು ಹೆಚ್ಚು ಪ್ರಮಾಣದಲ್ಲಿ ಸೇರಿಸಿ ಯವಕ್ಷಾರವನ್ನೂ ಸೈಂಧಲವಣವನ್ನೂ ಮಿಶ್ರಮಾಡಿ ಕುಡಿಸಿದರೆ ಸ್ತನ, ಹೆಗಲು, ಸೊಂಟ, ಶಿಶ್ನ, (ಯೋನಿ) ಎದೆಗಳಲ್ಲುಂಟಾಗುವ ನೋವು ನಿವಾರಣೆಯಾಗುತ್ತದೆ. ಜಿಗಣೆಗಳನ್ನು ಸ್ತನಗಳಿಗೆ ಕಚ್ಚಿಸಿ ಕೆಟ್ಟರಕ್ತವನ್ನು ತೆಗೆಸಬೇಕು. ಸ್ತನಗಳು ಅತಿಬಿಗಿಯಾಗಿದ್ದು ಹಾಲು ಕರೆಯಲಾಗದಿದ್ದರೆ ಆಕೆಗೆ ಶೀಘ್ರದಲ್ಲೇ ಸುಖವಾಗುತ್ತದೆ. ದಾಸಮೆಕ್ಕೇಬೇರಿನ ಗಂಧವನ್ನಾಗಲೀ ಅಥವಾ ಅರಶಿನ, ಉಮ್ಮತ್ತಿ ಎಲೆಗಳ ಕಲ್ಕವನ್ನಾಗಲೀ ಸ್ತನಗಳಿಗೆ ಲೇಪಿಸಿದರೆ ನೋವು ನಿವಾರಣೆಯಾಗುತ್ತದೆ.

ಮೂಲ--(ಅ।ಹೃ।ಚಿ।ಅ।೧೩)—(೩) ಸ್ತನವಿದ್ರಧಿಃ—

……………… ……ದೋಷೈರಸೃಕ್ಪ್ರದೂಷಣೈಃ ।
ದುಷ್ಟತ್ವಙ್ಮಾಂಸಮೇದೋಸ್ಥಿಸ್ನಾವಾಸೃಕ್ಕಣ್ಡರಾಶ್ರಯಃ ॥೧೫೭॥
ಯಃ ಶೋಫೋ ಬಹಿರನ್ತರ್ವಾ ಮಹಾಮೂಲೋ ಮಹಾರುಜಃ ।
ವೃತ್ತಃ ಸ್ಯಾದಾಯತೋ ಯೋ ವಾ ಸ್ಮೃತಃ ಷೋಢಾ ಸ ವಿದ್ರಧಿಃ ॥೧೫೮॥

ತಸ್ಯಾನ್ತರ್ಬಹೀರೂಪತಯಾ ದ್ವಿಧಾತ್ವಮ್—

ಅನ್ತರೋ ದಾರುಣತರೋ ಗಮ್ಭೀರೋ ಗುಲ್ಮವದ್ಘನಃ ।
ವಲ್ಮೀಕವತ್ಸಮುಚ್ಛ್ರಾಯೀ ಶೀಘ್ರಘಾತ್ಯಗ್ನಿಶಸ್ತ್ರವತ್ ॥೧೫೯॥
ಸಾಮರ್ಥ್ಯಾಚ್ಚಾತ್ರ ವಿಭಜೇದ್ಬಾಹ್ಯಾಭ್ಯನ್ತರಲಕ್ಷಣಮ್ ।

ರಕ್ತವಿದ್ರಧಿಃ—

ಕೃಷ್ಣಸ್ಫೋಟಾವೃತಃ ಶ್ಯಾವಸ್ತೀವ್ರದಾಹರುಜಾಜ್ವರಃ ॥೧೬೦॥
ಪಿತ್ತಲಿಙ್ಗೋಽಸೃಜಾ ಬಾಹ್ಯಃ ಸ್ತ್ರೀಣಾಮೇವ ತಥಾನ್ತರಃ ।

ಚಿಕಿತ್ಸಾ—

ಸ್ತನಜೇ ವ್ರಣವತ್ಸರ್ವಂ ನ ತ್ವೇನಮುಪನಾಹಯೇತ್ ॥೧೬೧॥
ಪಾಟಯೇತ್ಪಾಲಯನ್ ಸ್ತನ್ಯವಾಹಿನೀಃ ಕೃಷ್ಣಚೂಚುಕೌ ।
ಸರ್ವಾಸ್ವಾಮಾದ್ಯವಸ್ಥಾಸು ನಿರ್ದುಹೀತ ಚ ತತ್ ಸ್ತನಮ್ ॥೧೬೨॥

(ಸು।ನಿ।)—

ಪಕ್ವೇ ಚ ದುಗ್ಧಹರಿಣೀಃ ಪರಿಹೃತ್ಯ ನಾಡೀಃ
ಕೃಷ್ಣಂ ಚ ಚೂಚುಕಯುಗಂ ವಿದಧೀತ ಶಸ್ತ್ರಮ್ ।
ಆಮೇ ವಿದಾಹಿನಿ ತಥೈವ ಗತೇ ಚ ಪಾಕಂ
ಧಾತ್ರ್ಯಾಃ ಸ್ತನೌ ಸತತಮೇವ ಚ ನಿರ್ದುಹೀತ ॥೧೬೩॥

ಡಲ್ಹಣಃ—

ಆಮೇ ವಿದಗ್ಧತಾ ಪರಿಹಾರಾಯ, ವಿದಾಹಿನಿ ವಿಪಾಕಪರಿಹಾರಾಯ, ಪಕ್ವೇ ನಾಡೀವ್ರಣಪರಿಹಾರಾಯ ಚ ಸ್ತನೌ ನಿರ್ದುಹೀತ ।

(ಸು।ನಿ।)—

ದುಷ್ಟಸ್ತನ್ಯೇಷ್ವಾಚೂಷಣಮಾಸ್ಯೇನ ವಿಷಾಣೈರ್ವಾ ಕಾರ್ಯಮ್ ॥೧೬೪॥

ದೀಪಿಕೆ—(ಇ) ಎದೆದಾವು—

ಪ್ರಕುಪಿತಗಳಾದ ತ್ರಿದೋಷಗಳು ಚರ್ಮ, ಮಾಂಸ, ಮೇದಸ್ಸು, ಮೂಳೆ, ಸ್ನಾಯು, ರಕ್ತ, ಕಣ್ಡರ (ಮಾಂಸರಜ್ಜು) ಗಳನ್ನು ಕೆಡಿಸಿ ಶೋಫವನ್ನುಂಟು ಮಾಡುತ್ತವೆ. ಈ ಶೋಫವು ದೇಹದೊಳಗಾಗಲೀ ಹೊರಗಾಗಲೀ ಉಂಟಾಗಿ ಆಳವಾಗಿ ವ್ಯಾಪಿಸಿ ತುಂಬಾ ನೋವನ್ನು ಕೊಡುತ್ತಾ ಗುಂಡಾಗಿಯೂ, ವಿಶಾಲ ವಾಗಿಯೂ ವೃದ್ಧಿಹೊಂದುತ್ತದೆ. ವಾತ, ಪಿತ್ತ, ಕಫ, ರಕ್ತ, ತ್ರಿದೋಷ, ಶಸ್ತ್ರಕೃತಗಳೆಂದು ಆರು ಪ್ರಕಾರದ ಬಾವುಗಳಿರುತ್ತವೆ. ನೋವಿನ ಸ್ಥಿತಿಗೆ ಅನುಸಾ ರವಾಗಿ ಅವುಗಳನ್ನು ಬಹಿರನ್ತರ್ವಿದ್ರಧಿಗಳೆಂದು ಎರಡು ಪ್ರಕಾರವಾಗಿ ವಿಭಾಗ ಮಾಡಬೇಕು. ಅನ್ತರ್ವಿದ್ರಧಿಯು ಬಾಹ್ಯವಿದ್ರಧಿಗಿಂತಲೂ ಹೆಚ್ಚು ಭಯಂಕರ ವಾದದ್ದು; ಆಳದವರೆಗೂ ಪ್ರವೇಶಿಸುತ್ತದೆ. ಗುಲ್ಮದಂತೆ ಮಧ್ಯದಲ್ಲಿ ಪೊಳ್ಳಾಗಿಯೂ ವಲ್ಮೀಕದಂತೆ ಉಬ್ಬುತ್ತಲೂ ಬಂದು ಬೆಂಕಿ ಶಸ್ತ್ರಗಳಂತೆ ಶೀಘ್ರವಾಗಿ ಕೊಲ್ಲುತ್ತದೆ.

ರಕ್ತಬಾವು—(ರಕ್ತಕುರು)—

ಕರಿಯ ಗುಳ್ಳೆಗಳೆದ್ದು ಹೊಗೆಯ ಬಣ್ಣದ ಊದು ಕಾಣುತ್ತದೆ. ಅತಿಯಾಗಿ ಉರಿಯೂ ಜ್ವರವೂ ಇರುತ್ತವೆ. ಪಿತ್ತಲಕ್ಷಣಗಳೇ ಹೆಚ್ಚಾಗಿ ತೋರುತ್ತವೆ. ಹೆಂಗಸರಿಗೆ ಮಾತ್ರ ರಕ್ತದಿಂದ ಅಂತರ್ವಿದ್ರಧಿಯು ಉಂಟಾಗುತ್ತದೆ. (ತೊಟ್ಟಿ ಸೊಪ್ಪನ್ನು ವಳ್ಳೆಣ್ಣೆಯಲ್ಲಿ ಕಾಯಿಸಿ ಸ್ತನಗಳಿಗೆ ಲೇಪಿಸಿದರೆ ಬಾವು ಇಳಿಯುತ್ತದೆ). ಇದು ನಮ್ಮ ಸ್ವಂತ ಅನುಭವವು.

ಚಿಕಿತ್ಸೆ—

ಉಪನಾಹಚಿಕಿತ್ಸೆಯನ್ನು ಮಾಡದೆ ಅವಸ್ಥಾನುಗುಣವಾಗಿ ವ್ರಣದ ಇತರ ಚಿಕಿತ್ಸೆಗಳನ್ನೆಲ್ಲಾ ಸ್ತನವಿದ್ರಧಿಯಲ್ಲೂ ಮಾಡಬೇಕು. ಸ್ತನ್ಯವಾಹಿಶಿರೆಗಳನ್ನೂ ಕೃಷ್ಣಚೂಚುಕಗಳನ್ನೂ ಬಿಟ್ಟು ಇತರಭಾಗದಲ್ಲಿ ಸ್ತನಪಾಟನವನ್ನು ಮಾಡಿ ದುಷ್ಟ ಕೀವುರಕ್ತಗಳನ್ನು ಹೊರಕ್ಕೆ ತೆಗೆಯಬೇಕು. ಆಮಾವಸ್ಥೆಯಲ್ಲಿ ಮಾಂಸವು ಅರ್ಧಪಾಕವಾಗದಿರಲೆಂದೂ, ವಿದಾಹಸ್ಥಿತಿಯಲ್ಲಿ ಮಾಂಸಪಾಕವಾಗದಿರುವುದ ಕ್ಕಾಗಿಯೂ ಪಕ್ವಾವಸ್ಥೆಯಲ್ಲಿ ಕೀವು ಶರೀರಗತವಾಗಿ ನಾಡೀವ್ರಣವು ಉತ್ಪನ್ನ ವಾಗದಿರಲೆಂದೂ ದಾದಿಯ ಸ್ತನಗಳಿಂದ ಪದೇಪದೇ ಹಾಲನ್ನು ಕರೆದು ಕರೆದು ಸ್ತನಗಳನ್ನು ಬರಿದುಮಾಡುತ್ತಿರಬೇಕು. ಸ್ತನ್ಯದುಷ್ಟವಾದರೆ ಬಾಯಿನಿಂದಾ ಗಲೀ ವಿಷಾಣಯಂತ್ರದಿಂದಾಗಲೀ ಹಾಲನ್ನು ಹೀರಿ ತೆಗೆದುಬಿಡಬೇಕು.

ಮೂಲಮ್—

೧೨. ಗರ್ಭಾಪತಾನಕಃ (ಸೂತಿಕಾಪತಾನಕಃ), ೧೩. ಜರಾಯುರೋಗಶ್ಚ ಪ್ರಸೂತಿತನ್ತ್ರೇ ಅಷ್ಟಮಾಧ್ಯಾಯೇ; ತಥಾ ೧೪. ಯೋಷೋನ್ಮಾದಃ ತತ್ರೈವ ನವಮಾಧ್ಯಾಯೇ ವರ್ಣಿತಾಸ್ಸನ್ತಿ ।

ದೀಪಿಕಾ—

೧೨. ಗರ್ಭಾಪತಾನಕ (ಸೂತಿಕಾಪತಾನಕ) ಮತ್ತು ೧೩. ಜರಾಯು ರೋಗಗಳು ಇವು ಪ್ರಸೂತಿತನ್ತ್ರದ ಎಂಟನೆಯ ಅಧ್ಯಾಯದಲ್ಲೂ, ಒಂಭತ್ತನೆಯ ಅಧ್ಯಾಯದಲ್ಲಿ ೧೪. ಯೋಷೋನ್ಮಾದವೂ ವಿವರಿಸಲ್ಪಟ್ಟಿರುತ್ತವೆ.

೧೫. ಸೂತಿಕಾರೋಗಾಃ

ಮೂಲ—ನಿದಾನಮ್—

ಸ್ತ್ರೀಣಾಮುಪಪ್ರಜಾತಾನಾಂ ಪ್ರಜಾತಾನಾಂ ತಥಾಽಹಿತೈಃ ।
ಮಿಥ್ಯೋಪಸೇವಾತ್ಸಂಕ್ಲೇಶಾದ್ವಿಷಮಾಜೀರ್ಣಭೋಜನಾತ್ ॥೧೬೫॥
ಸ್ತನ್ಯಾವತರಣೇ ಚೈವ ಜ್ವರೋ ದೋಷೈಃ ಪ್ರವರ್ತತೇ ।

ಲಕ್ಷಣಮ್—

ಅಙ್ಗಮರ್ದೋ ಜ್ವರಃ ಕಮ್ಪಃ ಪಿಪಾಸಾ ಗುರುಗಾತ್ರತಾ ॥೧೬೬॥
ಶೋಥಃ ಶೂಲಾತಿಸಾರೌ ಚ ಸೂತಿಕಾರೋಗಲಕ್ಷಣಮ್ ।

ಉಪದ್ರವಾಃ—

ಜ್ವರಾತಿಸಾರಶೋಥಾಶ್ಚ ಶೂಲಾನಾಹಬಲಕ್ಷಯಾಃ ॥೧೬೭॥
ತನ್ದ್ರಾಽರುಚಿಪ್ರಸೇಕಾಶ್ಚ ಕಫವಾತಾಮಯೋದ್ಭವಾಃ ।
ತೇ ಸರ್ವೇ ಸೂತಿಕಾನಾಮ್ನಾ ರೋಗಾಸ್ತೇ ಚಾಪ್ಯುಪದ್ರವಾಃ ॥೧೬೮॥
ಕೃಚ್ಛ್ರಸಾಧ್ಯಾ ಹಿ ತೇ ರೋಗಾಃ ಕ್ಷೀಣಮಾಂಸಬಲಾಗ್ನಿತಃ ।
ಯತ್ನೇನೋಪಚರೇದ್ಧೀಮಾನ್ ದುಸ್ಸಾಧ್ಯಾ ಸೂತಿಕಾಮಯಾಃ ॥೧೬೯॥

ಚಿಕಿತ್ಸಾ—

ಲಙ್ಘನಾಽಭ್ಯಙ್ಗನಸ್ವೇದೈಃ ಕಟುತಿಕ್ತೋಷ್ಣಸೇವಯಾ ।
ಶುಷ್ಕಮೂಲಕಕೌಳತ್ಥೈರ್ಯೂಷೈರ್ಮಾಂಸರಸೈಶ್ಶುಭೈಃ ॥೧೭೦
ದಶಮೂಲೀಕೃತಃ ಕ್ವಾಥಃ ಸಾಜ್ಯಃ ಸೂತೀಜ್ವರಾಪಹಃ ।
ಆಮಶೂಲರುಜಾಯಾನ್ತು ಧಾನ್ಯಶುಣ್ಠೀಸಮನ್ವಿತಾ ॥೧೭೧॥
ಧಾನ್ಯಪಂಚಕಯುಕ್ತಾ ವಾ ದಶಮೂಲೀ ಪ್ರಶಸ್ಯತೇ ।
ಕ್ವಾಥೇನ ಸೂತಾ ನಿರ್ದಿಷ್ಟಾ ಹ್ರೀವೇರಾದಿಶ್ಚ ಶಸ್ಯತೇ ॥೧೭೨॥

ದೇವದಾರ್ವಾದಿಕ್ವಾಥಃ—

ದೇವದಾರು ವಚಾ ಕುಷ್ಠಂ ಪಿಪ್ಪಲೀ ವಿಶ್ವಭೇಷಜಮ್ ।
ಕಟ್ಫಲಂಮುಸ್ತಭೂನಿಮ್ಬತಿಕ್ತಾಧಾನ್ಯಾಹರೀತಕೀ ॥೧೭೩॥
ಗಜಕೃಷ್ಣಾ ಚ ದುಸ್ಪರ್ಶಾ ಗೋಕ್ಷುರುರ್ಧನ್ವಯಾಸಕಮ್ ।
ಬೃಹತ್ಯತಿವಿಷಾ ಭಿನ್ನಾ ಕರ್ಕಟಂ ಕೃಷ್ಣಜೀರಕಮ್ ॥೧೭೪॥
ಕ್ವಾಥಮಷ್ಟಾವಶೇಷನ್ತು ಪ್ರಸೂತಾಂ ಪಾಯಯೇತ್ ಸ್ತ್ರಿಯಮ್ ।
ಶೂಲಕಾಸಜ್ವರಶ್ವಾಸ ಮೂರ್ಛಾಕಮ್ಪಶಿರೋರ್ತಿಜಿತ್ ॥೧೭೫॥

೧೫. ಸೂತಿಕಾರೋಗಗಳು—ಬಾಣನ್ತಿಯರ ರೋಗಗಳು.

ದೀಪಿಕೆ—(ಚ।ಚಿ।ಅ।೧೦)—ಕಾರಣ—ಅಕಾಲಪ್ರಸವ, ಅಹಿತಗಳಾದ ಮಿಥ್ಯಾಶನವನ್ನು ಸೇವಿಸುವುದು, ಅತಿ ಕಷ್ಟಪಡುವುದು ಇವುಗಳಿಂದಲೂ

ಸ್ತನಗಳಿಗೆ ಹಾಲು ಬರುವಾಗಲೂ ತ್ರಿದೋಷಗಳು ಪ್ರಕೋಪಗೊಂಡು ಜ್ವರವನ್ನುಂಟುಮಾಡುತ್ತವೆ.

ಲಕ್ಷಣಗಳು—

ಮೈಕತ್ತರಿಸುವಂತೆ ನೋಯುವುದು, ಜ್ವರ, ನಡುಕ, ಬಾಯಾರಿಕೆ, ಮೈಭಾರ, ಶೋಥ, ಹೊಟ್ಟೆನೋವು, ಅತಿಸಾರ ಇವು ಸೂತಿಕಾರೋಗದ ಲಕ್ಷಣಗಳು.

ಉಪದ್ರವಗಳು —

ಜ್ವರ, ಅತಿಸಾರ, ಶೋಥ, ಹೊಟ್ಟೆನೋವು, ಹೊಟ್ಟೆಯುಬ್ಬರ, ಬಲಕುಗ್ಗುವುದು, ತೂಕಡಿಕೆ, ಅರೋಚಕತೆ, ಬಾಯಿಯಲ್ಲಿ ನೀರೂರುತ್ತಿರುವುದು, ವಾತಕಫರೋಗಗಳು ಇವುಗಳೆಲ್ಲಾ ಸೂತಿಕಾರೋಗದ ಉಪದ್ರವಗಳೆಂದು ಕರೆಯಲ್ಪಡುತ್ತವೆ. ಮಾಂಸ, ದೇಹಬಲ, ಅಗ್ನಿಬಲಗಳು ಕ್ಷೀಣವಾಗಿದ್ದರೆ ಕಷ್ಟಸಾಧ್ಯವಾಗುತ್ತವೆ. ಬಲುಪ್ರಯತ್ನಪಟ್ಟು ಚಿಕಿತ್ಸೆಮಾಡಬೇಕು. ಇಲ್ಲದಿದ್ದರೆ ಅಸಾಧ್ಯವಾಗಿ ಪರಿಣಾಮಹೊಂದುತ್ತವೆ.

ಚಿಕಿತ್ಸಾಕ್ರಮ—

ಉಪವಾಸ, ಅಭ್ಯಂಜನ, ಸ್ವೇದಕರ್ಮ ಇವುಗಳನ್ನು ಮಾಡಿಸಬೇಕು. ಕಹಿ, ಖಾರ, ಉಷ್ಣ ವೀರ್ಯವುಳ್ಳ ಪದಾರ್ಥಗಳನ್ನೇ ಸೇವಿಸಬೇಕು; ಒಣಗಿದ ಮೂಲಂಗಿ, ಹುರುಳಿಕಟ್ಟು, ಮಾಂಸರಸ ಇವುಗಳನ್ನು ಉಪಯೋಗಿಸಬೇಕು. ದಶಮೂಲದ ಕಷಾಯಕ್ಕೆ ತುಪ್ಪಮಿಶ್ರಮಾಡಿ ಕುಡಿಸಿದರೆ ಸೂತಿಕಾಜ್ವರವು ಬಿಟ್ಟುಬಿಡುತ್ತದೆ. ಆಮಶೂಲೆ ನೋವುಗಳಿದ್ದರೆ ಅದರೊಡನೆ ಕೊತ್ತುಂಬರಿಯನ್ನೂ, ಶುಂಠಿಯನ್ನೂ ಸೇರಿಸಬೇಕು. ಧಾನ್ಯಪಂಚಕಗಳನ್ನು ಸೇರಿಸಿದ ದಶಮೂಲದ ಕಷಾಯವನ್ನು ಕುಡಿಸಿದರೆ ಹಿತಕರವಾಗುತ್ತದೆ. ಹ್ರೀವೇರಾದಿಗಣದ್ರವ್ಯಗಳಿಂದ ಕಷಾಯ ಮಾಡಿಸಿ ಕುಡಿಸಿದರೂ ಸೂತಿಕಾರೋಗವು ನಿವಾರಣೆಯಾಗುತ್ತವೆ.

ದೇವದಾರ್ವಾದಿ ಕಷಾಯ—

ದೇವದಾರು, ಬಜೆ, ಚಂಗಲ್ಕೋಷ್ಠ, ಹಿಪ್ಪಲಿ, ಶುಂಠಿ, ಕಟ್ಫಲ, ಕೊನ್ನಾರಿಗೆಡ್ಡೆ, ನೆಲಬೇವು, ಕಟುಕರೋಹಿಣೀ, ಕೊತ್ತುಂಬರಿ, ಅಣಲೆಶಿಪ್ಪೆ, ಗಜಹಿಪ್ಪಲಿ, ತುರುಚ, ನೆಗ್ಗಿಲುಸಮೂಲ, ಹೆದ್ದುರುಚ, ಹೆಗ್ಗುಳ, ಅತಿಬಜೆ, ಅಮೃತವಳ್ಳಿ, ಕರ್ಕಾಟಕಶೃಙ್ಗಿ, ಕರೀಜೀರಿಗೆ, ಇವುಗಳನ್ನು ಸೇರಿಸಿ ಅಷ್ಟಾವಶೇಷವಾಗಿ ಕಷಾಯ ಮಾಡಿ ಬಾಣಂತಿಗೆ ಕುಡಿಸಿದರೆ ಶೂಲೆ, ಹೊಟ್ಟೆಯುಬ್ಬರ, ಕೆಮ್ಮು, ಜ್ವರ, ಉಬ್ಬಸ, ಮೂರ್ಛೆ, ನಡುಕ, ತಲೆಶೂಲೆ ಇವೆಲ್ಲಾ ನಿವಾರಣೆಯಾಗುತ್ತವೆ.

೧೬. ಅತತ್ವಾಭಿನಿವೇಶಃ

ಮೂಲಮ್—(ಚ।ಚಿ।ಅ।೧೦).—ಅತತ್ವಾಭಿನಿವೇಶಃ—

ಮಲಿನಾಹಾರಶೀಲಸ್ಯ ವೇಗಾನ್ ಪ್ರಾಪ್ತಾನ್ ನಿಗೃಹ್ಣತಃ ।
ಶೀತೋಷ್ಣಸ್ನಿಗ್ಧರೂಕ್ಷಾದ್ಯೈರ್ಹೇತುಭಿಶ್ಚಾತಿಸೇವಿತೈಃ ॥

ಹೃದಯಂ ಸಮುಪಾಶ್ರಿತ್ಯ ಮನೋಬುದ್ಧಿವಹಾಃ ಸಿರಾಃ ।
ದೋಷಾಃ ಸಂದೂಷ್ಯ ತಿಷ್ಠನ್ತಿ ರಜೋಮೋಹಾವೃತಾತ್ಮನಃ ॥
ರಜಸ್ತಮೋಭ್ಯಾಂ ವೃದ್ಧಾಭ್ಯಾಂ ಬುದ್ಧೌ (ಸತ್ವೇ) ಮನಸಿ ಚಾವೃತೇ ।
ಹೃದಯೇ ವ್ಯಾಕುಲೇ ದೋಷೈರಥ (ಮೂಢಾಲ್ಪಚೇತಸಃ) ಮೂಢೋಽಲ್ಪಚೇತನಃ॥
ವಿಷಮಾಂ ಕುರುತೇ ಬುದ್ಧಿಂ ನಿತ್ಯಾನಿತ್ಯೇ ಹಿತಾಹಿತೇ ।
ಅತತ್ವಾಭಿನಿವೇಶಂ ತಮಾಹುರಾಪ್ತಾ ಮಹಾಗದಮ್ ॥
ಸ್ನೇಹಸ್ವೇದೋಪಪನ್ನಂ ತಂ ಸಂಶೋಧ್ಯ ವಮನಾದಿಭಿಃ ।
ಕೃತಸಂಸರ್ಜನಂ ಮೇಧ್ಯೈರನ್ನಪಾನೈರುಪಾಚರೇತ್ ॥
ಬ್ರಾಹ್ಮೀಸ್ವರಸಯುಕ್ತಂ ಯತ್ಪಂಚಗವ್ಯಮುದಾಹೃತಮ್
ತತ್ಸೇವ್ಯಂ ಶಙ್ಖಪುಷ್ಪೀ ಚ ಯಚ್ಚ ಮೇಧ್ಯಂ ರಸಾಯನಮ್ ॥
ಸುಹೃದಶ್ಚಾನುಕೂಲಾಸ್ತಂ ಸ್ವಾಪ್ತಾ ಧರ್ಮಾರ್ಥವಾದಿನಃ ।
ಸಂಯೋಜಯೇಯುರ್ವಿಜ್ಞಾನಧೈರ್ಯಸ್ಮೃತಿಸಮಾಧಿಭಿಃ ॥

ಇತಿ ಸ್ತ್ರೀರೋಗಾಃ

---

೧೬. ಅತತ್ವಾಭಿನಿವೇಶವು

ದೀಪಿಕೆ—(ಚ।ಚಿ।ಅ।೧೦)—

ನಿದಾನ––ಸಂಪ್ರಾಪ್ತಿ––ನಿರುಕ್ತಿ—

ಕೊಳಕಾದ ಆಹಾರಗಳನ್ನು ಸೇವಿಸುವ, ವಾತಮೂತ್ರ ಪುರೀಷವೇಗಗಳನ್ನು ತಡೆಯುವ, ಅತಿಶೀತ, ಉಷ್ಣ, ಸ್ನಿಗ್ಧ, ರೂಕ್ಷಗಳಾದ ವಸ್ತುಗಳನ್ನು ಅತಿಯಾಗಿ ಸೇವಿಸುವ, ಮನುಷ್ಯರಿಗೆ ತ್ರಿದೋಷಗಳು ಪ್ರಕೋಪಗೊಂಡು ಅವರ ಹೃದಯವನ್ನಾಶ್ರಯಿಸಿರುವ ಮನೋವಾಹಿ ಮತ್ತು ಬುದ್ಧಿವಾಹಿ ಸಿರೆಗಳನ್ನು ಕೆಡಿಸುವುದರಿಂದ ರಜಸ್ತಮೋಗುಣಗಳು ವೃದ್ಧಿಯಾಗಿ ಅವರ ಮನಸ್ಸನ್ನೂ ಬುದ್ಧಿಯನ್ನೂ ಆವರಿಸುತ್ತವೆ; ದೋಷಗಳು ಹೃದಯವನ್ನು ಕೆಡಿಸುವುದರಿಂದ ಆ ಮನುಷ್ಯನು ಏನು ಮಾಡಬೇಕೆಂಬುದನ್ನು ತಿಳಿಯದೆ ಇದು ನಿತ್ಯವಾದದ್ದು, ಇದು ಕ್ಷಣಿಕವಾದದ್ದು, ಇದು ಹಿತಕರವು, ಇದು ಅಹಿತವು ಎಂಬ ವಿವೇಕಜ್ಞಾನವಿಲ್ಲದೆ ಒಂದಕ್ಕೊಂದನ್ನು ವ್ಯತ್ಯಾಸವಾಗಿ ತಿಳಿಯುತ್ತಾನೆ. ಈ ರೀತಿಯಾದ ರೋಗವನ್ನು ವೈದ್ಯರು ಮಹಾಗದ, ಅತತ್ವಾಭಿನಿವೇಶ ಎಂದು ಹೇಳುತ್ತಾರೆ.

ಚಿಕಿತ್ಸೆ––

ಈ ರೋಗಿಗೆ ಸ್ನೇಹಸ್ವೇದ ವಿಧಾನಗಳಿಂದಲೂ ವಮನ, ವಿರೇಚನಗಳ ಪ್ರಯೋಗದಿಂದಲೂ ದೇಹವನ್ನು ಶುದ್ಧಿಗೊಳಿಸಿ ಪೇಯಾ ವಿಲೇಪಿ ಮೊದಲಾದುವುಗಳಿಂದುಪಚರಿಸಿ ಅಗ್ನಿವೃದ್ಧಿಯಾದಮೇಲೆ ಶುದ್ಧವಾದ ಅನ್ನಪಾನಗಳಿಂದ ಆದರಿಸಿ ಬ್ರಾಹ್ಮೀಸ್ವರಸ, ಪಂಚಗವ್ಯಗಳೊಡನೆ ತಯಾರಿಸಿದ ಘೃತ ಮತ್ತು ಬುದ್ಧಿವರ್ಧಕಗಳಾದ ಶಂಖಪುಷ್ಪೀ ರಸಾಯನ ಇವುಗಳಿಂದುಪಚರಿಸಬೇಕು; ಆಪ್ತ

ರಾದ ಧರ್ಮಾರ್ಥಗಳನ್ನು ಬೋಧಿಸುವ ಸ್ನೇಹಿತರು ಹಿತನುಡಿಗಳಿಂದ ಅವರಿಗೆ ವಿಜ್ಞಾನ, ಧೈರ್ಯ, ಸ್ಮರಣಶಕ್ತಿ, ಶಾಂತಮನಸ್ಸು ಇವುಗಳುಂಟಾಗುವಂತೆ ಮಾಡಿ ಸಮಾಧಾನಪಡಿಸಬೇಕು ; ತಿಲತೈಲ, ಬೆಳ್ಳುಳ್ಳಿ, ಅಷಾಡಿಬೇರು, ಇವುಗಳೊಡನೆ ಹಾಲನ್ನೂ, ಹಾಲಿನ ಎಂಟರಷ್ಟು ನೀರನ್ನೂ ಸೇರಿಸಿ ಹಾಲು ಮಾತ್ರ ಉಳಿಯು ವಂತೆ ಪಾಕಮಾಡಿ ಶೋಧಿಸಿದ ಆ ಹಾಲಿಗೆ ತುಪ್ಪ, ಜೇನುತುಪ್ಪಗಳನ್ನು ಮಿಶ್ರ ಮಾಡಿಯೂ ಒಂದೆಲಗದ ಸ್ವರಸ, ಚಂಗಲ್‌ಕೋಷ್ಠದ ಕಷಾಯ, ಬಜೆಯ ಚೂರ್ಣ ಇವುಗಳಲ್ಲೊಂದನ್ನು ಜೇನುತುಪ್ಪ ಮಿಶ್ರಮಾಡಿಯೂ ಕುಡಿಸಬೇಕು.

ಇಲ್ಲಿಗೆ ಸ್ತ್ರೀರೋಗವು ಪೂರೈಸಿರುತ್ತದೆ.

ಕೌಮಾರಭೃತ್ಯಮ್

ಪ್ರಥಮೋಽಧ್ಯಾಯಃ

ಕುಮಾರಭರಣವಿಧಿಃ

(ಅ|ಹೃ|ಉ|೧)—

ಜಾತಮಾತ್ರಂ ವಿಶೋಧ್ಯೋಲ್ಬಾದ್ಬಾಲಂ ಸೈನ್ಧವಸರ್ಪಿಷಾ ।
ಪ್ರಸೂತಿಕ್ಲೇಶಿತಂ ಚಾನು ಬಲಾತೈಲೇನ ಸೇಚಯೇತ್ ॥೧॥
ಅಶ್ಮನೋರ್ವಾದನಂ ಚಾಸ್ಯ ಕರ್ಣಮೂಲೇ ಸಮಾಚರೇತ್ ।
ಅಥಾಸ್ಯ ದಕ್ಷಿಣೇ ಕರ್ಣೇ ಮನ್ತ್ರಮುಚ್ಚಾರಯೇದಿಮಮ್ ॥೨॥
ಅಙ್ಗಾದಙ್ಗಾತ್ಸಮ್ಭವಸಿ ಹೃದಯಾದಭಿಜಾಯಸೇ ।
ಆತ್ಮಾ ವೈ ಪುತ್ರನಾಮಾಸಿ ಸ ಜೀವ ಶರದಾಂ ಶತಮ್ ॥೩॥
ಶತಾಯುಃ ಶತವರ್ಷೋಽಸಿ ದೀರ್ಘಮಾಯುರವಾಪ್ನುಹಿ ।
ನಕ್ಷತ್ರಾಣಿ ದಿಶೋ ರಾತ್ರಿರಹಶ್ಚ ತ್ವಾಽಭಿರಕ್ಷತು ॥೪॥

ನಾಭಿನಾಳವರ್ಧನಮ್—

ಸ್ವಸ್ಥೀಭೂತಸ್ಯ ನಾಭಿಂ ಚ ಸೂತ್ರೇಣ ಚತುರಂಗುಳಾತ್ ।
ಬದ್ಧ್ವೋರ್ಧ್ವಂ ವರ್ಧಯಿತ್ವಾ ಚ ಗ್ರೀವಾಯಾಮವಸಂಜಯೇತ್ ॥೫॥
ನಾಭಿಂ ಚ ಕುಷ್ಠತೈಲೇನ ಸೇಚಯೇತ್ಸ್ನಾಪಯೇದನು ।
ಕ್ಷೀರಿವೃಕ್ಷಕಷಾಯೇಣ ಸರ್ವಗನ್ಧೋದಕೇನ ವಾ ॥೬॥
ಕೋಷ್ಣೇನ ತಪ್ತರಜತತಪನೀಯನಿಮಜ್ಜನೈಃ ।

ತಾಲೂನ್ನಮನಮ್—

ತತೋ ದಕ್ಷಿಣತರ್ಜನ್ಯಾ ತಾಲೂನ್ನಮ್ಯಾವಗುಂಠಯೇತ್ ।
ಶಿರಸಿ ಸ್ನೇಹಪಿಚುನಾ............ ......।

೧ನೆಯ ಅಧ್ಯಾಯ

ಕುಮಾರಭರಣ ವಿಧಾನವು

ದೀಪಿಕೆ—

ಪ್ರಸವಿಸಿದ ಶಿಶುವಿನ ದೇಹದಮೇಲೆ ಅಂಟಿಕೊಂಡಿರುವ ಸಿಂಬಳದಂತಿರುವ ತೆಳುವಾದ ಪೊರೆಯನ್ನು ಹೋಗಲಾಡಿಸಲು ನುಣುಪಾದ ಸೈಂಧವ ಲವಣದ ಪುಡಿಯನ್ನು ತುಪ್ಪದಲ್ಲಿ ರಂಗಳಿಸಿ ಶಿಶುವಿನ ಮೈಗೆ ಸವರಬೇಕು. ಪ್ರಸವಕಾಲದಲ್ಲಿ ಉಂಟಾದ ಆಯಾಸವನ್ನು ಹೋಗಲಾಡಿಸಲು ಅದರ ಮೈಮೇಲೆ ಬಲಾತೈಲವನ್ನು ಚುಮುಕಿಸಬೇಕು ಅದರ ಕಿವಿಯ ಹತ್ತಿರದಲ್ಲಿ ಸಣ್ಣ ಕಲ್ಲುಗಳೆರಡರಿಂದ ಸದ್ದು ಮಾಡಬೇಕು. (ಶಬ್ದವಾಹಿ ಸಿರೆಗಳು ಉದ್ಬೋಧವಾಗಿ ಶ್ರವಣೇಂದ್ರಿಯದ ವ್ಯಾಪಾರವು ಪ್ರಾರಂಭವಾಗುತ್ತದೆ.) ಅನಂತರ ಆ ಶಿಶುವಿನ ಬಲದ ಕಿವಿಯಲ್ಲಿ "ಎಲೈ ಶಿಶುವೇ, ನನ್ನ ಆತ್ಮವೇ ಪುತ್ರನೆಂಬ ನಿನ್ನ ರೂಪದಿಂದ

ಉಂಟಾಗಿದೆ. ನನ್ನ ಪ್ರತಿ ಅಂಗಗಳಿಂದಲೂ ಹೃದಯದಿಂದಲೂ ನಿನ್ನ ಪ್ರತ್ಯಂಗ ಗಳೂ ಹೃದಯವೂ ಉತ್ಪನ್ನವಾಗಿವೆ. ನೀನು ನೂರು ವರ್ಷಗಳಕಾಲ ಜೀವಿಸಿರು. ದೀರ್ಘಾಯುವನ್ನು ಹೊಂದು ; ನಕ್ಷತ್ರಗಳೂ, ಹತ್ತು ದಿಕ್ಕುಗಳೂ, ಹಗಲು ರಾತ್ರಿ ಗಳೂ, ನಿನ್ನನ್ನು ಕಾಪಾಡಲಿ'' ಎಂಬ ಅರ್ಥವುಳ್ಳ ಮಂತ್ರವನ್ನು ಉಚ್ಚರಿಸ ಬೇಕು.

ಮಗುವು ಸ್ವಲ್ಪ ಚೇತರಿಸಿಕೊಂಡಮೇಲೆ ಹೊಕ್ಕಳ ಬಳ್ಳಿಯನ್ನು ಹೊಕ್ಕಳಿಂದ ನಾಲ್ಕು ಬೆರಳುಗಳಷ್ಟು ಉದ್ದ ಬಿಟ್ಟು ದಾರದಿಂದ ಕಟ್ಟಿ ಗಂಟಿನ ಮೇಲ್ಗಡೆಗೆ ಬಳ್ಳಿಯನ್ನು ಕತ್ತರಿಸಿ ಮಗುವಿನ ಕತ್ತಿಗೆ ಆ ದಾರದ ಇನ್ನೊಂದು ತುದಿಯನ್ನು ಸುತ್ತಬೇಕು; ರಕ್ತ ಸ್ರಾವವಾಗುವುದಿಲ್ಲ. ಚಂಗಲ್‌ಕೋಷ್ಠದ ಪುಡಿಯನ್ನು ತೈಲಕ್ಕೆ ಸೇರಿಸಿ ಕಾಯಿಸಿ ಸುಖೋಷ್ಣವಾಗಿರುವ ಆ ತೈಲವನ್ನು ಹೊಕ್ಕಳಿನಮೇಲೆ ಸ್ವಲ್ಪ ಸುರಿಯಬೇಕು ; ಹೊಕ್ಕಳಿನಲ್ಲಿ ವ್ರಣವಾಗುವುದಿಲ್ಲ. ಅನಂತರದಲ್ಲಿ ಆಲ, ಅತ್ತಿ ಮೊದಲಾದ ಪಂಚವಲ್ಕ ಗಳ ಕಷಾಯದಲ್ಲಾಗಲೀ ಚನ್ದನಾದಿ ವರ್ಗದಲ್ಲಿ ಹೇಳಿದ ಸರ್ವಗಂಧದ್ರವ್ಯ ಗಳನ್ನು ತಂದು ಮಾಡಿದ ಶೀತಕಷಾಯದಲ್ಲಾಗಲೀ ಕಾದ ಚಿನ್ನದ ಅಥವಾ ಬೆಳ್ಳಿಯ ಸಲಾಕಿಯನ್ನು ಅದ್ದಿ ಅದ್ದಿ ಬಿಸಿಮಾಡಿ ಸುಖೋಷ್ಣವಾದ ಆ ಕಷಾಯ ದಿಂದ ಶಿಶುವಿನ ದೇಹವನ್ನು ತೊಳೆದು ಸ್ನಾನಮಾಡಿಸಬೇಕು. ಅನಂತರ ಬಲದ ಕೈಯಿನ ತರ್ಜನೀಬೆರಳಿನಿಂದ ಶಿಶುವಿನ ತಾಲುವನ್ನು ಮೇಲಕ್ಕೆ ಎತ್ತಿ ಗಂಟಲಿ ನಲ್ಲಿ ಮೆತ್ತಿರುವ ಕಫವನ್ನು ಹೊರಕ್ಕೆ ತೆಗೆದುಬಿಡಬೇಕು. ಮಗುವು ಶ್ವಾಸೋ ಚ್ಛ್ವಾಸಗಳನ್ನು ಪ್ರಾರಂಭಿಸುತ್ತದೆ. ತೈಲದಿಂದ ನೆನೆಸಿದ ಹತ್ತಿಯ ಉಂಡೆ ಯನ್ನು (ಪಿಚು) ಶಿಶುವಿನ ನೆತ್ತಿಯ ಮೇಲಿಡಬೇಕು.

ಮೂಲ (ಅ।ಹೃ।)—ಜಾತಕರ್ಮ—

............ಪ್ರಾಶ್ಯಂ ಚಾಸ್ಯ ಪ್ರಯೋಜಯೇತ್।
ಹರೇಣುಮಾತ್ರಂ ಮೇಧಾಯುರ್ಬಲಾರ್ಥಮಭಿಮನ್ತ್ರಿತಮ್ ॥೮॥
ಐನ್ದ್ರೀ ಬ್ರಾಹ್ಮೀ ವಚಾ ಶಙ್ಖಪುಷ್ಪೀಕಲ್ಕಂ ಘೃತಂ ಮಧು।
ಚಾಮೀಕರವಚಾಬ್ರಾಹ್ಮೀತಾಪ್ಯಪಥ್ಯಾರಜೀಕೃತಾಃ ॥೯॥
ಲಿಹ್ಯಾನ್ಮಧುಘೃತೋಪೇತಾ ಹೇಮಧಾತ್ರೀರಜೋಽಥವಾ।

(ಕಾ।ಸಂ।)— ಲೇಹನವಿಧಾನಮ್—

ವಿಘೃಷ್ಯ ಧೌತೇ ದೃಷದಿ ಪ್ರಾಙ್ಮುಖೀ ಲಘುನಾಮ್ಬುನಾ ॥೧೦॥
ಆಮಥ್ಯ ಮಧುಸರ್ಪಿರ್ಭ್ಯಾಂ ಲೇಹಯೇತ್ಕನಕಂ ಶಿಶುಮ್।
ಸುವರ್ಣಪ್ರಾಶನಂ ಹ್ಯೇತನ್ಮೇಧಾಗ್ನಿಬಲವರ್ಧನಮ್ ॥೧೧॥
ಆಯುಷ್ಯಂ ಮಙ್ಗಳಂ ಪುಣ್ಯಂ ವೃಷ್ಯಂ ವರ್ಣ್ಯಂ ಗ್ರಹಾಪಹಮ್।
ಮಾಸಾತ್ ಪರಮಮೇಧಾವೀ ವ್ಯಾಧಿಭಿರ್ನ ಚ ಧೃಷ್ಯತೇ ॥೧೨॥
ಷಡ್ಭಿರ್ಮಾಸೈಃ ಶ್ರುತಧರಃ ಸುವರ್ಣಪ್ರಾಶನಾದ್ಭವೇತ್।
ಕಲ್ಯಾಣಕಂ ಪಂಚಗವ್ಯಂ ಬ್ರಾಹ್ಮೀಂ ಸಂವರ್ಧನಂ ಘೃತಮ್ ॥೧೩॥

ನಿವರ್ತ್ಯಾರ್ಥಿರ್ವರ್ಧತೇ ಶೀಘ್ರಂ ಲೇಹ್ಯಂ ಮಧುಯುತಂ ಸದಾ।
ಪಙ್ಗುಮೂಕಾ ಶ್ರುತಿಜಡಾ ಯುಜ್ಯನ್ತೇ ಚಾಶು ಕರ್ಮಭಿಃ ॥೧೪॥

ದೀಪಿಕೆ— ಜಾತಕರ್ಮ—

ಶಿಶುವಿಗೆ ಮೇಧಾಶಕ್ತಿ, ಆಯುಸ್ಸು, ಬಲ ಇವುಗಳು ವೃದ್ಧಿಯಾಗಲು ಹಾವುಮೆಕ್ಕೆ, ಒಂದೆಲಗ, ಬಜೆ, ಗಿರಿಕರ್ಣಿಕೆ ಇವುಗಳ ಕಲ್ಕವನ್ನು ಮಂತ್ರದಿಂದ ಪ್ರೋಕ್ಷಿಸಿ ರೇಣುಕೆಯ ಬೀಜದ ಗಾತ್ರದಷ್ಟನ್ನು ತುಪ್ಪ, ಜೇನುತುಪ್ಪಗಳೊಡನೆ ರಂಗಳಿಸಿ ನೆಕ್ಕಿಸಬೇಕು. ಅಥವಾ ಸುವರ್ಣದಪುಡಿ, ಬಜೆ, ಒಂದೆಲಗ, ಹೇಮ ಮಾಕ್ಷಿಕ, ಅಣಿಲೆಕಾಯಿಯ ಶಿಪ್ಪೆ ಇವುಗಳ ಚೂರ್ಣವನ್ನಾಗಲೀ, ಸುವರ್ಣದಪುಡಿ ನೆಲ್ಲಿಕಾಯಿನ ಪುಡಿಗಳನ್ನಾಗಲೀ ತುಪ್ಪ ಜೇನುತುಪ್ಪಗಳೊಡನೆ ರಂಗಳಿಸಿ ರೇಣುಕೆಯ ಬೀಜದಷ್ಟನ್ನು ಶಿಶುವಿಗೆ ನೆಕ್ಕಿಸಬೇಕು.

(ಕಾ।ಸಂ।)––ಲೇಹನವಿಧಾನವು—

ದಾದಿಯು ಪೂರ್ವಾಭಿಮುಖಳಾಗಿ ಕೂತುಕೊಂಡು ಸಾಣೆಯಕಲ್ಲಿನಮೇಲೆ ನೀರುಹಾಕಿ ಚಿನ್ನವನ್ನು ಅರೆದು ತುಪ್ಪ, ಜೇನುತುಪ್ಪಗಳನ್ನು ಮಿಶ್ರಮಾಡಿ ಶಿಶುವಿಗೆ ನೆಕ್ಕಿಸಬೇಕು. ಈ ವಿಧಾನಕ್ಕೆ ಸುವರ್ಣಪ್ರಾಶನವೆಂದು ಹೆಸರು. ಇದರಿಂದ ಶಿಶುವಿಗೆ ಮೇಧಾಶಕ್ತಿ, ಅಗ್ನಿ, ಶಕ್ತಿ, ಬಲಗಳು ವೃದ್ಧಿಯಾಗುತ್ತವೆ. ಆಯುರ್ವೃದ್ಧಿಕರ, ಮಂಗಳಕರ, ಪುಣ್ಯಕರ, ವೃಷ್ಯ, ಕಾನ್ತಿಕರ, ಗ್ರಹಬಾಧೆಯನ್ನು ನಿವಾರಿಸುತ್ತದೆ. ಹೀಗೆ ಇದನ್ನು ಒಂದು ತಿಂಗಳು ಸೇವಿಸಿದರೆ ಶಿಶುವು ಅತ್ಯಂತ ಮೇಧಾವಿಯಾಗುತ್ತಾನೆ. ವ್ಯಾಧಿಗಳು ಪೀಡಿಸುವುದಿಲ್ಲ. ಆರು ತಿಂಗಳು ಉಪಯೋಗಿಸಿದರೆ ಶಾಸ್ತ್ರಗ್ರಹಣ ಮಾಡುವಷ್ಟು ಶಕ್ತಿಯುಂಟಾಗುತ್ತದೆ. ಇದೇ ರೀತಿಯಲ್ಲಿ ಕಲ್ಯಾಣಕಘೃತ, ಪಂಚಗವ್ಯಘೃತ, ಬ್ರಾಹ್ಮೀಘೃತ, ಸಂವರ್ಧನ ಘೃತ ಇವುಗಳಲ್ಲೊಂದನ್ನು ತುಪ್ಪ, ಜೇನುತುಪ್ಪಗಳೊಡನೆ ಮಿಶ್ರಮಾಡಿ ತಿನ್ನಿಸುತ್ತಾ ಬಂದರೆ ಶಿಶುವು ರೋಗವಿಲ್ಲದೆ ಬೆಳೆಯುತ್ತದೆ. ಹೆಳವರೂ, ಮೂಗರೂ, ಕಿವುಡರೂ ಇವುಗಳನ್ನು ಸೇವಿಸುತ್ತಾ ಬಂದರೆ ಕ್ರಮವಾಗಿ ಇವರ ವ್ಯಾಧಿಗಳು ನಿವಾರಣೆಯಾಗಿ ತಮ್ಮತಮ್ಮ ಕೆಲಸಗಳಲ್ಲಿ ನಿರತರಾಗುತ್ತಾರೆ.

ಮೂಲ—(ಅ।ಹೃ।ಉ।ಅ। ೧)—ಗರ್ಭೋದಕವಮನಮ್—

ಗರ್ಭಾಮ್ಬುಃ ಸೈನ್ಧವವತಾ ಸರ್ಪಿಷಾ ವಾಮಯೇತ್ತತಃ।
ಪ್ರಾಜಾಪತ್ಯೇನ ವಿಧಿನಾ ಜಾತಕರ್ಮಾಣಿ ಕಾರಯೇತ್ ॥೧೫॥

ದೀಪಿಕೆ—(ಅ।ಹೃ।ಉ।ಅ।೧)––ಗರ್ಭೋದಕ ವಮನ––

ಸೈನ್ಧವಲವಣದ ಚೂರ್ಣವನ್ನು ತುಪ್ಪದಲ್ಲಿ ರಂಗಳಿಸಿ ಮಗುವಿಗೆ ನೆಕ್ಕಿಸಿದರೆ ಅದರ ಹೊಟ್ಟೆಯಲ್ಲಿದ್ದ ಗರ್ಭೋದಕವು ವಮನವಾಗಿ ಹೊರಕ್ಕೆ ಬರುತ್ತದೆ. ಅನಂತರ ವೇದೋಕ್ತ ವಿಧಾನದಿಂದ ಪುಣ್ಯಾಹ, ನಾಂದಿ, ಗ್ರಹಮುಖಕರ್ಮಗಳನ್ನೂ ಜಾತಕರ್ಮ ಮೊದಲಾದ ವಿಧಾನವನ್ನೂ ಮಾಡಿಸಬೇಕು.

ಮೂಲ—(ಅ।ಹೃ।ಉ।ಅ।೧)—ಸ್ತನ್ಯಾವತರಣಮ್—

ಸಿರಾಣಾಂ ಹೃದಯಸ್ಥಾನಾಂ ವಿವೃತತ್ವಾತ್ಪ್ರಸೂತಿತಃ।
ತೃತೀಯೇಽಹ್ನಿ ಚತುರ್ಥೇ ವಾ ಸ್ತ್ರೀಣಾಂ ಸ್ತನ್ಯಂ ಪ್ರವರ್ತತೇ ॥೧೬॥

ದೀಪಿಕೆ—ಸ್ತನ್ಯವುಂಟಾಗುವುದು—

ಹೆರಿಗೆಯಾದಮೇಲೆ ಸ್ತ್ರೀಯರ ಹೃದಯದಲ್ಲಿರುವ ಸಿರೆಗಳ ಮುಖಗಳು ಅಗಲವಾಗುವುದರಿಂದ ಮೂರನೆಯ ಅಥವಾ ನಾಲ್ಕನೆಯ ದಿವಸ ಸ್ತನಗಳಿಗೆ ಹಾಲು ಬರುತ್ತದೆ.

ಮೂಲ—(ಅ।ಹೃ।ಉ।ಅ।೧)—ಶಿಶೋಃ ಪ್ರಾಶನಮ್—

ಪ್ರಥಮೇ ದಿವಸೇ ತಸ್ಮಾತ್ ತ್ರಿಕಾಲಂ ಮಧುಸರ್ಪಿಷೀ।
ಅನನ್ತಾಮಿಶ್ರಿತೇ ಮನ್ತ್ರಪಾವಿತೇ ಪ್ರಾಶಯೇಚ್ಛಿಶುಮ್ ॥೧೭॥
ದ್ವಿತೀಯೇ ಲಕ್ಷ್ಮಣಾ ಸಿದ್ಧಂ ತೃತೀಯೇ ಚ ಘೃತಂ ತತಃ।
ಪ್ರಾಙ್ನಿಷಿದ್ಧಸ್ತನಸ್ಯಾಸ್ಯ ತತ್ಪಾಣಿತಲಸಮ್ಮಿತಮ್ ॥೧೮॥
ಸ್ತನ್ಯಾನುಪಾನಂ ದ್ವೌ ಕಾಲೌ ನವನೀತಂ ಪ್ರಯೋಜಯೇತ್।

ದೀಪಿಕೆ—

ಹೆರಿಗೆಯಾದ ಮೊದಲನೆಯ ದಿವಸ ತುರುಚನಬೇರಿನ ಚೂರ್ಣವನ್ನು ತುಪ್ಪ, ಜೇನುತುಪ್ಪಗಳೊಡನೆ ಮಿಶ್ರಮಾಡಿ ಮನ್ತ್ರವನ್ನು ಉಚ್ಚಾರಣೆಮಾಡಿ ಶುದ್ಧಿಮಾಡಿ ಮೂರುಹೊತ್ತು ಶಿಶುವಿಗೆ ನೆಕ್ಕಿಸಬೇಕು. ಎರಡನೆಯ ಮತ್ತು ಮೂರನೆಯ ದಿವಸಗಳಲ್ಲಿ ಲಕ್ಷ್ಮಣದ (ಬಿಳಿಯಗುಳ್ಳ) ಕಲ್ಕವನ್ನು ಮಿಶ್ರಮಾಡಿ ತಯಾರಿಸಿದ ಘೃತವನ್ನು ಮೂರು ಹೊತ್ತು ಶಿಶುವಿಗೆ ನೆಕ್ಕಿಸಬೇಕು. ನಾಲ್ಕನೆಯ ದಿನದವರೆಗೂ ಶಿಶುವಿಗೆ ಸ್ತನ್ಯಪಾನವನ್ನು ನಿಷೇಧಿಸಿದ್ದ ಕಾರಣ ಆ ದಿವಸದಿಂದ ಮುಂದೆ ಶಿಶುವಿನ ಅಂಗೈಯಲ್ಲಿ ಹಿಡಿಸುವಷ್ಟು ಬೆಣ್ಣೆಯನ್ನು ತಿನ್ನಿಸಿ ಮಾತೃವಿನ ಸ್ತನದಿಂದ ನೆಲದಮೇಲೆ ಸ್ವಲ್ಪ ಹಾಲನ್ನು ಕರೆದು ಚೆಲ್ಲಿ ಅನಂತರ ಶಿಶುವಿಗೆ ಸ್ತನ್ಯವನ್ನು ಕುಡಿಸಬೇಕು.

ಮೂಲ—(ಅ।ಹೃ।ಉ।ಅ।೧)—ಧಾತ್ರೀನಿಯೋಗಸ್ತಲ್ಲಕ್ಷಣಂ ಚ—

ಮಾತುರೇವ ಪಿಬೇತ್ ಸ್ತನ್ಯಂ ತತ್ಪರಂ ದೇಹವೃದ್ಧಯೇ ॥೧೯॥
ಸ್ತನ್ಯಧಾತ್ರ್ಯಾವುಭೇ ಕಾರ್ಯೇ ತದಸಮ್ಪದಿ ವತ್ಸಲೇ।
ಅವ್ಯಙ್ಗೇ ಬ್ರಹ್ಮಚಾರಿಣ್ಯೌ ವರ್ಣಪ್ರಕೃತಿತಃ ಸಮೇ ॥೨೦॥
ನೀರುಜೇ ಮಧ್ಯವಯಸೌ ಜೀವದ್ವತ್ಸೇ ನ ಲೋಲುಪೇ।
ಹಿತಾಹಾರವಿಹಾರೇಣ ಯತ್ನಾದುಪಚರೇಚ್ಚ ತೇ ॥೨೧॥

ದೀಪಿಕೆ—ದಾದಿಯರನ್ನು ನೇಮಿಸುವುದು ಮತ್ತು ದಾದಿಯರ ಲಕ್ಷಣಗಳು—

ಮಗುವಿಗೆ ತಾಯಿಯ ಹಾಲನ್ನೇ ಕುಡಿಸಬೇಕು. ಅದರಿಂದ ಅದರ ದೇಹವು ಅಧಿಕವಾಗಿ ವೃದ್ಧಿಯಾಗುತ್ತದೆ. ತಾಯಿಗೆ ಹಾಲೇ ಇಲ್ಲವಾದರೆ ಹಾಲುಳ್ಳ ಇಬ್ಬರು ದಾದಿಯರನ್ನು ನೇಮಿಸುವುದು ಉತ್ತಮ. ಅವರು

ಮಗುವಿನಲ್ಲಿ ಪ್ರೀತಿಯುಳ್ಳವರಾಗಿಯೂ, ಅಂಗವಿಕಾರವಿಲ್ಲದವರಾಗಿಯೂ, ಪತಿಸಂಗವನ್ನು ಬಿಟ್ಟಿರುವವರಾಗಿಯೂ, ಮಗುವಿನ ಜಾತಿ ಪ್ರಕೃತಿಗಳಿಗೆ ಸಮಾನವಾದ ಜಾತಿಪ್ರಕೃತಿಯವರಾಗಿಯೂ, ಬದುಕಿರುವ ಮಕ್ಕಳುಳ್ಳವರಾಗಿಯೂ ಜಿಹ್ವಾಚಾಪಲ್ಯವನ್ನು ಬಿಟ್ಟವರಾಗಿಯೂ, ಹಿತಕರಗಳಾದ ಆಹಾರ ವಿಹಾರ ನಿಯಮಗಳನ್ನು ಪಾಲಿಸುತ್ತಾ ಋತುವರ್ಜಿಯಿಂದ ಮಗುವನ್ನು ಉಪಚರಿಸಿ ಪೋಷಿಸತಕ್ಕವರಾಗಿಯೂ ಇರಬೇಕು.

ಮೂಲ—(ಸು।ಶಾ।ಅ।೧೦)—ಬಾಲೋಪಚಾರಃ—

ಅಥ ಬಾಲಂ ಕ್ಷೌಮಪರಿವೃತಂ ಕ್ಷೌಮವಸ್ತ್ರಾಸ್ತೃತಾಯಾಂ ಶಯ್ಯಾಯಾಂ
ಶಾಯಯೇತ್। ಪೀಲುಬದರೀನಿಮ್ಬಪರೂಷಕಶಾಖಾಭಿಶ್ಚೈನಂ ವೀಜಯೇತ್।
ಮೂರ್ಧ್ನಿ ಚಾಸ್ಯಾಹರಹಸ್ತೈಲಪಿಚುಮವಚಾರಯೇತ್। ಧೂಪಯೇಚ್ಚೈನಂ
ರಕ್ಷೋಘ್ನೈರ್ಧೂಪೈಃ। ರಕ್ಷೋಘ್ನಾನಿ ಚಾಸ್ಯ ಪಾಣಿಪಾದಶಿರೋಗ್ರೀವಾಸ್ವವ-
ಸೃಜೇತ್। ತಿಲಾತಸೀಸರ್ಷಪಕಣಾಂಶ್ಚಾತ್ರ ಪ್ರಕಿರೇತ್। ಅಧಿಷ್ಠಾನೇ ಚಾಗ್ನಿಂ
ಪ್ರಜ್ವಾಲಯೇತ್। ವ್ರಣಿತೋಪಾಸನೀಯಂ ಚಾವೇಕ್ಷೇತ ॥೨೨॥

ದೀಪಿಕೆ—(ಸು।ಶಾ।ಅ।೧೦)—ಬಾಲೋಪಚಾರಃ—

ಶಿಶುಜನನವಾದಮೇಲೆ ಉಲ್ಬವನ್ನು ನಿವಾರಣೆಮಾಡಿ ಶಿಶುವಿಗೆ ಕ್ಷೀರವೃಕ್ಷಗಳ ಕಷಾಯದಿಂದ ಸ್ನಾನಮಾಡಿಸಿ ರೇಷ್ಮೆಬಟ್ಟೆಯಿಂದ ಅದರ ಶರೀರವನ್ನು ಹೊದ್ದಿಸಿ ರೇಷ್ಮೆಬಟ್ಟೆಯನ್ನು ಹಾಸಿ ಅದರಮೇಲೆ ಮಲಗಿಸಬೇಕು. ಬಗಿನಿ, ಎಲಚಿ, ಬೇವು, ಖರ್ಜೂರದ ಕೊನೆಗಳನ್ನು ಹಿಡಿದು ಮಗುವಿನ ದೇಹದಮೇಲೆ ಮೆಲ್ಲಗೆ ಬೀಸಿ ಹಾರಾಡುವ ಸೊಳ್ಳೆನೊಣಗಳನ್ನು ಹೊರಕ್ಕೆ ಹೊರಡಿಸಬೇಕು. ಪ್ರತಿದಿನವೂ ಹತ್ತಿಯ ಉಂಡೆಯನ್ನು ತೈಲದಲ್ಲಿ ನೆನೆಸಿ ಶಿಶುವಿನ ನೆತ್ತಿಯಲ್ಲಿಡಬೇಕು. ಕ್ರಿಮಿಹರಗಳಾದ ಬಜೆ, ವಿಡಂಗ ಮೊದಲಾದುವನ್ನು ಬೆಂಕಿಯ ಕೆಂಡದಮೇಲೆ ಉದುರಿಸಿ ಆ ಧೂಪದಿಂದ ಶಿಶುವಿನ ಮೈ, ಕೈ, ಕಾಲು, ತಲೆಗಳಿಗೆ ಧೂಮ ತಗಲುವಂತೆ ಕಾಯಿಸಬೇಕು. ಮತ್ತು ಆ ಕ್ರಿಮಿಹರವಸ್ತುಗಳನ್ನೇ ತುಂಡುಬಟ್ಟೆಯಲ್ಲಿಟ್ಟು ಶಿಶುವಿನ ಕೈ, ಕಾಲು, ತಲೆ, ಕತ್ತುಗಳಲ್ಲಿ ಕಟ್ಟಿಡಬೇಕು. ಎಳ್ಳು, ಅಗಸೆಯ ಬೀಜ, ಸಾಸಿವೆ, ಹಿಪ್ಪಲಿಕಾಳುಗಳನ್ನು ಮನೆಯ ಅಂಗಳದಲ್ಲಿ ಎರಚಿರಬೇಕು. ಅಗ್ಗಿಷ್ಟಿಕೆಯಲ್ಲಿ ಬೆಂಕಿಯನ್ನಿಟ್ಟು ಉರಿಸಬೇಕು. ವ್ರಣಪೀಡಿತನಿಗೆ ಮಾಡುವ ಉಪಚಾರಗಳನ್ನೆಲ್ಲಾ ಶಿಶುವಿಗೆ ಮಾಡಬೇಕು.

ಮೂಲ—(ಸು।ಶಾ।ಅ।೧೦)—ಧಾತ್ರೀಪರೀಕ್ಷಾ.ಸ್ತನ್ಯಪ್ರಾಶನವಿಧಿಶ್ಚ—

ತತೋ ಯಥಾವರ್ಣಂ ಧಾತ್ರೀಮುಪೇಯಾತ್ ಮಧ್ಯಮಪ್ರಮಾಣಾಂ
ಮಧ್ಯಮವಯಸ್ಕಾಮರೋಗಾಂ ಶೀಲವತೀಮಚಪಲಾಮಲೋಲುಪಾಮವಿಕೃತಾ-
ಮಸ್ಥೂಲಾಂ ಪ್ರಸನ್ನಕ್ಷೀರಾಮಲಮ್ಬೋಷ್ಠೀಮಲಮ್ಬೋರ್ಧ್ವಸ್ತನೀಮವ್ಯಙ್ಗಾಮ-
ವ್ಯಸನಿನೀಂ ಜೀವದ್ವತ್ಸಾಂ ದೋಗ್ಧ್ರೀಂ ವತ್ಸಲಾಮಕ್ಷುದ್ರಕರ್ಮಿಣೀಂ ಕುಲೇ-
ಜಾತಾಮತೋಭೂಯಿಷ್ಠೈಶ್ಚ ಗುಣೈರನ್ವಿತಾಂ ಶ್ಯಾಮಾಮಾರೋಗ್ಯಬಲ-

ವೃದ್ಧಯೇ ಬಾಲಸ್ಯ। ತತ್ರೋರ್ಧ್ವಸ್ತನೀ ಕರಾಳಂ ಕುರ್ಯಾತ್। ಲಮ್ಬಸ್ತನೀ ನಾಸಿಕಾಮುಖಂ ಛಾದಯಿತ್ವಾ ಮರಣಮಾಪಾದಯೇತ್ ॥೨೩॥

ತತಃ ಪ್ರಶಸ್ತಾಯಾಂ ತಿಥೌ ಶಿರಃ ಸ್ನಾತಮಹತವಾಸಸಮುದಙ್ಮುಖಂ ಶಿಶುಮುಪವೇಶ್ಯ ಧಾತ್ರೀಂ ಪ್ರಾಙ್ಮುಖೀಂ ಚ ದಕ್ಷಿಣಂ ಸ್ತನಂ ಧೌತಮೀಷತ್ಪರಿಸ್ರುತಮಭಿಮನ್ತ್ರ್ಯ ಮನ್ತ್ರೇಣಾನೇನ ಪಾಯಯೇತ್ ॥೨೪॥

ಚತ್ವಾರಃ ಸಾಗರಾಸ್ತುಭ್ಯಂ ಸ್ತನಯೋಃ ಕ್ಷೀರವಾಹಿಣಃ।
ಭವನ್ತು ಸುಭಗೇ ನಿತ್ಯಂ ಬಾಲಸ್ಯ ಬಲವೃದ್ಧಯೇ ॥೨೫॥
ಪಯೋಽಮೃತರಸಂ ಪೀತ್ವಾ ಕುಮಾರಸ್ತೇ ಶುಭಾನನೇ।
ದೀರ್ಘಮಾಯುರವಾಪ್ನೋತು ದೇವಾಃ ಪ್ರಾಶ್ಯಾಮೃತಂ ಯಥಾ ॥೨೬॥

ಅಪರಿಸ್ರುತಸ್ತನಸ್ತನ್ಯಪಾನೇ ದೋಷಾಃ—ಅಪರಿಸ್ರುತೇಽಪ್ಯತಿಸ್ತಬ್ಧಸ್ತನ್ಯಪೂರ್ಣಸ್ತನಪಾನಾದುತ್ಸ್ರಂಸಿತಸ್ರೋತಸಃ ಶಿಶೋಃ ಕಾಸಶ್ವಾಸವಮಿಪ್ರಾದುರ್ಭಾವಃ। ತಸ್ಮಾದೇವಂವಿಧಂ ಸ್ತನ್ಯಂ ನ ಪಾಯಯೇತ್ ॥೨೭॥

ದೀಪಿಕೆ—(ಸು।ಶಾ।ಅ।೧೦)—ಧಾತ್ರಿಯ ಪರೀಕ್ಷೆ ಮತ್ತು ಸ್ತನ್ಯಪಾನವಿಧಾನ—

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಜಾತಿಯ ಶಿಶುಗಳಿಗೆ ಆಯಾಯ ಜಾತಿಗೆ ಸೇರಿದ ದಾದಿಯರನ್ನೇ ಹಾಲುಕುಡಿಸಿ ಪೋಷಣೆಮಾಡುವಂತೆ ಏರ್ಪಡಿಸಬೇಕು. ದಾದಿಯು ಮಧ್ಯ ವಯಸ್ಕಳಾಗಿಯೂ ಅತಿ ಎತ್ತರವಿಲ್ಲದೆಯೂ ಅತಿ ಕುಳ್ಳಾಗಿರದೆಯೂ, ಮಧ್ಯಮಟ್ಟದವಳಾಗಿಯೂ, ರೋಗರಹಿತಳಾಗಿಯೂ ಸದಾಚಾರಳಾಗಿಯೂ, ಮನಃಸ್ಥೈರ್ಯವುಳ್ಳವಳಾಗಿಯೂ, ಸಿಕ್ಕಿದ ಆಹಾರವನ್ನು ತಿನ್ನದೆ ಸರಿಯಾದ ಆಹಾರವನ್ನು ತಿನ್ನುವವಳಾಗಿಯೂ, ಅತಿ ಕೃಶಳಲ್ಲದೆಯೂ, ಅತಿ ದಪ್ಪದೇಹವಿಲ್ಲದವಳೂ, ಶುದ್ಧವಾದ ಹಾಲುಳ್ಳವಳೂ, ತುಟಿಯು ಕೆಳಗೆ ಜೋಲುಬೀಳದೆಯೂ, ಸ್ತನಗಳು ಕೆಳಕ್ಕೆ ನೇತಾಡದೆಯೂ, ಮೇಲಕ್ಕೆ ಹೊರಟು ಕೊಂಡಿರದೆಯೂ, ಅಙ್ಗಹೀನಳಲ್ಲದವಳೂ, ವ್ಯಸನವಿಲ್ಲದವಳೂ, ಬದುಕಿರುವ ಮಗುವುಳ್ಳವಳೂ, ಹೆಚ್ಚು ಹಾಲುಳ್ಳವಳೂ, ಮಗುವಿನಲ್ಲಿ ಪ್ರೀತಿಯಿರುವವಳೂ, ಹೀನ ಕೆಲಸ ಮಾಡದಿರುವವಳೂ, ಸತ್ಕುಲದಲ್ಲಿ ಹುಟ್ಟಿದವಳೂ, ಇನ್ನೂ ಅನೇಕ ಸದ್ಗುಣಯುಕ್ತಳೂ ಆಗಿ ಶ್ಯಾಮಬಣ್ಣದವಳಾದ ದಾದಿಯ ಹಾಲನ್ನು ಕುಡಿಯುವ ಮಗುವಿಗೆ ಆರೋಗ್ಯ ಬಲಗಳು ವೃದ್ಧಿಗೊಳ್ಳುತ್ತವೆ. ಸ್ತನಗಳು ಮೇಲಕ್ಕೆ ಹೊರಟುಕೊಂಡಿದ್ದರೆ ಮಗುವು ಹಾಲುಕುಡಿಯುವುದಕ್ಕೆ ಕಷ್ಟವಾಗುತ್ತದೆ; ಕರಾಳ ದನ್ತಗಳಾಗುತ್ತವೆ. (ಹಲ್ಲುಗಳು ವಕ್ರವಾಗಿ ಹುಟ್ಟುತ್ತವೆ.) ಸ್ತನಗಳು ಕೆಳಗೆ ನೇತಾಡುತ್ತಿದ್ದರೆ ಹಾಲುಕುಡಿಯುವಾಗ ಮಗುವಿನ ಬಾಯಿ ಮೂಗುಗಳು ಮುಚ್ಚಿ ಮಗುವು ಉಸಿರಾಡದೆ ಸಾಯುತ್ತದೆ. ಆದಕಾರಣ ಮೇಲೆ ಹೇಳಿದ ದೋಷಗಳಿಂದ ರಹಿತಳಾದ ದಾದಿಯು ಪ್ರಶಸ್ತಳಾದವಳು. ಅನಂತರ ಒಂದು ಶುಭದಿವಸ ಶಿಶುವಿಗೆ ತಲೆಗೆ ಸ್ನಾನಮಾಡಿಸಿ ಹೊಸವಸ್ತ್ರವನ್ನು ಉಡಿಸಿ ಉತ್ತರಾಭಿಮುಖವಾಗಿ ಕುಳ್ಳಿರಿಸಿ ದಾದಿಯು ಪೂರ್ವಾಭಿಮುಖಳಾಗಿ ಕುಳಿತುಕೊಂಡು ತನ್ನ ಬಲಗಡೆಯ ಸ್ತನವನ್ನು ಸ್ವಚ್ಛವಾಗಿ ತೊಳೆದು ಸ್ವಲ್ಪ ಸ್ತನ್ಯವನ್ನು ಕರೆದು ನೆಲದ ಮೇಲೆ ಚೆಲ್ಲಿ ಅಭಿಮಂತ್ರಿಸಿ ಮಗುವಿಗೆ ಸ್ತನಪಾನಮಾಡಿಸಬೇಕು. ಆಗ ಹೇಳುವ

ಮಂತ್ರದ ಅಭಿಪ್ರಾಯವೇನೆಂದರೆ: "ಎಲೈ ಮಂಗಳಾಂಗಿಯೇ! ಮಗುವಿಗೆ ಬಲವೃದ್ಧಿಯಾಗಲು ನಾಲ್ಕು ಸಮುದ್ರದ ಅಭಿಮಾನ ದೇವತೆಗಳೂ ನಿನ್ನ ಸ್ತನಗಳಿಗೆ ಕ್ಷೀರವನ್ನು ತಂದು ತುಂಬಲಿ. ಈ ಮಗುವು ಅಮೃತಕ್ಕೆ ಸಮವಾದ ನಿನ್ನ ಈ ಕ್ಷೀರವನ್ನು ಕುಡಿದು ದೇವತೆಗಳು ಅಮೃತಪಾನವಾಗಿ ದೀರ್ಘಾಯುವನ್ನು ಹೊಂದಿದಂತೆಯೇ ಆಯುರ್ವೃದ್ಧಿಯನ್ನು ಪಡೆಯಲಿ." ಸ್ತನದಿಂದ ಸ್ವಲ್ಪ ಹಾಲನ್ನು ಕರೆದು ನೆಲದಮೇಲೆ ಚೆಲ್ಲದೆ ಮಗುವಿಗೆ ಸ್ತನಪಾನ ಮಾಡಿಸಿದರೆ ಸ್ತನಗಳು ಬಿಗಿದು ಹಾಲು ತುಂಬಿ ಮಗುವು ಸ್ತನಪಾನಮಾಡುವಾಗ ಅದರ ಬಾಯಿ, ಮೂಗುಗಳಿಗೆ ಹಾಲು ತುಂಬಿಕೊಂಡು ಕೆಮ್ಮು, ದಮ್ಮುಗಳುಂಟಾಗುವಕಾರಣ ಮೇಲೆ ವಿವರಿಸಿರುವ ಪ್ರಕಾರದ ಹಾಲನ್ನು ಕುಡಿಸಬಾರದು.

ಮೂಲ—(ಸು।ಶಾ।ಅ ೧೦) –ಸ್ತನ್ಯನಾಶೇ ಹೇತವಃ—

ಕ್ರೋಧಶೋಕವಾತ್ಸಲ್ಯಾದಿಭಿಶ್ಚ ಸ್ತ್ರಿಯಾಃ ಸ್ತನ್ಯನಾಶೋ ಭವತಿ ॥೨೮॥

(ಅ।ಹೃ)—

ಶುಕ್ರೋಧಲಙ್ಘನಾಯಾಸಾಃ ಸ್ತನ್ಯನಾಶಸ್ಯ ಹೇತವಃ ॥೨೯॥

ದೀಪಿಕೆ—ಸ್ತನ್ಯನಾಶಕ್ಕೆ ಕಾರಣ—

ದಾದಿಯರಿಗೆ ದುಃಖ, ಕೋಪ, ಉಪವಾಸ, ಆಯಾಸ, ಮಗುವಿನಲ್ಲಿ ಅಪ್ರೀತಿಯುಂಟಾಗುವುದು ಇವುಗಳಿಂದ ಕ್ಷೀರನಾಶವಾಗುತ್ತದೆ ॥೨೯॥

ಮೂಲ—(ಅ।ಹೃ।)—ಸ್ತನ್ಯವರ್ಧನಾನಿ—

ಸ್ತನ್ಯಸ್ಯ ಸೀಧುವರ್ಜ್ಯಾನಿ ಮದ್ಯಾನ್ಯಾನೂಪಜಾ ರಸಾಃ ।
ಕ್ಷೀರಂ ಕ್ಷೀರಿಣ್ಯ ಔಷಧ್ಯಃ ಶೋಕಾದೇಶ್ಚ ವಿಪರ್ಯಯಃ ॥೩೦॥

(ಸು।ಶಾ।ಅ।೧೦)—

ಅಥಾಸ್ಯಾಃ ಕ್ಷೀರಜನನಾರ್ಥಂ ಸೌಮನಸ್ಯಮುತ್ಪಾದ್ಯ ಯವಗೋಧೂಮಶಾಲಿಷಷ್ಟಿಕಮಾಂಸರಸಸುರಾಸೌವೀರಕಪಿಣ್ಯಾಕಲಶುನಮತ್ಸ್ಯಕಶೇರುಕಶೃಙ್ಗಾಟಕಬಿಸವಿದಾರಿಕನ್ದಮಧುಕಶತಾವರೀನಳಿಕಾಲಾಬೂಕಾಲಶಾಕಪ್ರಭೃತೀನಿ ವಿದಧ್ಯಾತ್ ॥೩೧॥

(ಕಾ।ಸಂ।ಅ।೨೧)—

ನಾಡಿಕಾ ಸಗುಡಾ ಸಿದ್ಧಾ ಹಿಙ್ಗುಜಾತೀಸುಸಂಸ್ಕೃತಾ ।
ವಾಜೀಕರಣಸಿದ್ಧಂ ವಾ ಕ್ಷೀರಂ ಕ್ಷೀರವಿವರ್ಧನಮ್ ॥೩೨॥
ಘೃತತೈಲೋಪಸೇವಾ ಚ ಬಸ್ತಯಶ್ಚ ಪಯಸ್ಕರಾಃ ।
ಮಧುರಾಣ್ಯನ್ನಪಾನಾನಿ ಧ್ರುವಾಣಿ ಲವಣಾನಿ ಚ ॥೩೩॥
ವರಾಹಮಹಿಷಾದೂರ್ಧ್ವಂ ಮಾಂಸಾನಾಂ ಚ ಹಿತೋ ರಸಃ ।
ಲಶುನಾನಾಂ ಪಲಾಣ್ಡೂನಾಂ ಸೇವನಂ ಶಯನಂ ಸುಖಮ್ ॥೩೪॥
ಕ್ರೋಧಾಧ್ವಭಯಶೋಕಾನಾಮಾಯಾಸಾನಾಂ ಚ ವರ್ಜನಮ್ ।
ವಟಾದೀನಾಂ ಚ ವೃಕ್ಷಾಣಾಂ ಕ್ಷೀರಿಕಾಯಾಶ್ಚ ವಲ್ಕಲಮ್ ॥೩೫॥
ಪಾಕ್ಯಂ ಗುಡವಿಡೋಪೇತಂ ಸಘೃತಂ ಶಾಲಿಮಾಶಯೇತ್ ।
ಅಪಿ ಶುಷ್ಕಸ್ತನೀನಾಂ ತತ್ಕ್ಷೀರೋಪಜನನಂ ಪರಮ್ ॥೩೬॥

ಶಾಲಿಷಷ್ಟಿಕದರ್ಭಾಣಾಂ ಕುಶಗುನ್ದ್ರೇತ್ಕಟಸ್ಯ ಚ।
ಸಾರಿವಾ ವೀರಣೇಕ್ಷೂಣಾಂ ಮೂಲಾನಿ ಕುಶಕಾಶಯೋಃ ॥೩೭॥
ಪೇಯಾನಿ ಪೂರ್ವಕಲ್ಪೇನ ಶ್ರೇಷ್ಠಂ ಕ್ಷೀರವಿವರ್ಧನಮ್ ।
ಸ್ವಭಾವನಷ್ಟೇ ಶುಷ್ಕೇ ವಾ ದುಷ್ಟೇ ಸಾಧ್ವೀಕ್ಷಿತೇ ಹಿತಮ್ ॥೩೮॥

(ಕಾ।ಸಂ।ಅ।೨೧) ಶುದ್ಧಕ್ಷೀರಲಕ್ಷಣಮ್—
ಅವ್ಯಾಹತಬಲಾಜ್ಞಾಯುರರೋಗೋ ವರ್ಧತೇ ಸುಖಮ್।
ಶಿಶುಧಾತ್ರ್ಯೋರನಾಪತ್ತಿಃ ಶುದ್ಧಕ್ಷೀರಸ್ಯ ಲಕ್ಷಣಮ್ ॥೩೯॥

ದೀಪಿಕೆ——ಸ್ತನ್ಯವರ್ಧಕಗಳು—

(ಅ।ಹೃ)——

ಸೀಧುವೆಂಬ ವಿಧವನ್ನು ಬಿಟ್ಟು ಬಾಕಿ ವಿಧಗಳ ಮದ್ಯಗಳು, ಅನೂಪ ದೇಶದ ಪ್ರಾಣಿಗಳ ಮಾಂಸರಸ, ಹಾಲು ಇವು ಹಾಲನ್ನು ವೃದ್ಧಿಮಾಡುವ ಔಷಧಗಳು ; ಧಾತ್ರಿಗೆ ವ್ಯಸನ, ಕೋಪ, ಆಯಾಸಗಳನ್ನು ಬಿಟ್ಟುಬಿಡುವಂತೆ ಮಾಡಿ ಸಂತೋಷ, ಪುಷ್ಟಿಯಾದ ಆಹಾರಗಳ ಸೇವನೆ, ಮಗುವಿನಲ್ಲಿ ಪ್ರೀತಿ ಇವುಗಳುಂಟಾಗುವಂತೆ ಮಾಡಿದರೆ ಸ್ತನ್ಯವೃದ್ಧಿಯಾಗುತ್ತದೆ ॥೩೦॥

(ಸು।ಶಾ।ಅ।೧೦)——

ದಾದಿಗೆ ಮನಸ್ಸನ್ತೋಷಪಡಿಸಿ ಯವೆ, ಗೋಧಿ, ಅರವತ್ತು ದಿನದಲ್ಲಿ ಬೆಳೆಯುವ ಬತ್ತದ ಅಕ್ಕಿಯ ಅನ್ನ, ಮಾಂಸರಸ, ಸುರೆಯೆಂಬ ಮದ್ಯ, ತುಷೋದಕ, ಎಳ್ಳಿನಚಿಗಳಿ, ಬೆಳ್ಳುಳ್ಳಿ, ಮೀನು, ಕೊತ್ತಿಗೆಡ್ಡೆ, ಮುಮ್ಮೂಲೆಗೆಡ್ಡೆ, ತಾವರೆಯ ದಂಟು, ನೆಲಗುಂಬಳಗೆಡ್ಡೆ, ಅತಿಮಧುರ, ಆಷಾಢಿಯಬೇರು, ನಳಿಕೆ, ಸೋರೆಕಾಯಿ, ಕರಿಬೇವುಗಳನ್ನು ಆಹಾರಪಾನಗಳಿಗೆ ಒದಗಿಸಿಕೊಡಬೇಕು ॥೩೧॥

(ಕಾ।ಸಂ।ಅ।೨೧)——

ನಾಡಿಕದೊಡನೆ ಬೆಲ್ಲ, ಇಂಗು, ಜಾಜಿಕಾಯಿ ಇವುಗಳನ್ನು ಸೇರಿಸಿ ತಯಾರಿಸಿದ ಪಾಯಸ, ಹಾಲು, ಮಾಂಸರಸ, ಮದ್ಯ ಇವುಗಳ ಸೇವನೆಯು ಹಾಲನ್ನು ವೃದ್ಧಿಮಾಡುತ್ತದೆ.

ವಾಜೀಕರಣದ್ರವ್ಯಗಳಿಂದ ತಯಾರಿಸಿದ ಹಾಲನ್ನು ಕುಡಿಸಿದರೆ ಹಾಲು ವೃದ್ಧಿಯಾಗುತ್ತದೆ. ತುಪ್ಪ, ಎಣ್ಣೆ, ಹಾಲುಮಿಶ್ರಮಾಡಿದ ಬಸ್ತಿ ಪ್ರಯೋಗವೂ ಸಿಹಿಯಾದ ದ್ರವವಾದ ಲವಣಮಿಶ್ರವಾದ ಅನ್ನಪಾನಗಳೂ, ಹಂದಿ, ಎಮ್ಮೆಗಳ ಮಾಂಸರಸ, ಬೆಳ್ಳುಳ್ಳಿ, ನೀರುಳ್ಳಿ ಇವುಗಳನ್ನುಪಯೋಗಿಸುವುದೂ, ಸುಖವಾದ ಹಾಸಿಗೆಯಲ್ಲಿ ಮಲಗಿ ನಿದ್ರಿಸುವುದೂ, ಕೋಪ, ದಾರಿನಡೆಯುವುದು, ವ್ಯಸನ, ಭಯ, ಆಯಾಸಗಳನ್ನು ಬಿಟ್ಟುಬಿಡುವುದೂ, ವಟಾದಿ ಪಂಚವಲ್ಕಲಗಳ ಕಷಾಯಕ್ಕೆ ಹಾಲನ್ನು ಸೇರಿಸಿ ಪಾಕಮಾಡಿದ ಆ ಹಾಲನ್ನು ಕುಡಿಸುವುದೂ, ಈ ಹಾಲಿನೊಡನೆ ಬೆಲ್ಲ, ಬಿಡಲವಣ, ತುಪ್ಪಗಳನ್ನು ಮಿಶ್ರಮಾಡಿದ ಅನ್ನವನ್ನು ತಿನ್ನಿಸುವುದೂ, ಇವುಗಳಿಂದ ಶುಷ್ಕಸ್ತನವುಳ್ಳ ಸ್ತ್ರೀಯರಿಗೂ ಹಾಲು ವೃದ್ಧಿಯಾಗುತ್ತದೆ. ಇದೇರೀತಿಯಲ್ಲಿ ಷಷ್ಟಿಕಶಾಲಿ, ದರ್ಭೆ, ಕುಶ, ಕಬ್ಬು ಇವುಗಳ

ಬೇರು, ಸೊಗದೆಬೇರು, ಲಾವಂಚ ಇವುಗಳ ಕಷಾಯದೊಡನೆ ಹಾಲನ್ನೂ ಸೇರಿಸಿ ಪಾಕಮಾಡಿದ ಕ್ಷೀರಸೇವನೆಯಿಂದ ಸ್ವಭಾವನಷ್ಟವಾದ, ಕ್ಷೀಣವಾದ, ಹಾಲುಳ್ಳ ವರಿಗೆ ಹಿತವಾಗುತ್ತದೆ.

ಶುದ್ಧವಾದ ಹಾಲಿನ ಲಕ್ಷಣ—

ಯಾವ ಹಾಲನ್ನು ಕುಡಿಸಿದರೆ ಶಿಶುವು ರೋಗವಿಲ್ಲದೆ ಬಲ, ದೇಹ, ಆಯುಸ್ಸುಗಳ ವೃದ್ಧಿಯನ್ನು ಹೊಂದಿ ಶಿಶುವಿಗೂ ದಾದಿಗೂ ಯಾವ ತೊಂದರೆಯೂ ಉಂಟಾಗುವುದಿಲ್ಲವೋ ಆ ಹಾಲು ಶುದ್ಧವಾದದ್ದು.

ಮೂಲ—(ಸು। ಶಾ। ಅ। ೧೦)—ಸ್ತನ್ಯಾಽಭಾವೇ ಕಿಂ ಕರ್ತವ್ಯಮ್ ?

ಕ್ಷೀರಸಾತ್ಮ್ಯತಯಾ ಕ್ಷೀರಮಾಜಂ ಗವ್ಯಮಥಾಪಿ ವಾ।
ದದ್ಯಾದಾಸ್ತನ್ಯಪರ್ಯಾಪ್ತಂ ಬಾಲಾನಾಂ ವೀಕ್ಷ್ಯ ಮಾತ್ರಯಾ ॥೪೦॥

(ಅ। ಹೃ।)—

ಸ್ತನ್ಯಾಽಭಾವೇ ಪಯಚ್ಛಾಗಂ ಗವ್ಯಂ ವಾ ತದ್ಗುಣಂ ಪಿಬೇತ್।
ಹ್ರಸ್ವೇನ ಪಂಚಮೂಲೇನ ಸ್ಥಿರಯಾ ವಾ ಸಿತಾಯುತಮ್ ॥೪೧॥

ದೀಪಿಕೆ—ಮಾತೃವಿನ ಸ್ತನ್ಯ ದೊರೆಯದಿದ್ದರೆ ಏನುಮಾಡಬೇಕು ?

(ಸು। ಶಾ। ಅ। ೧೦)—

ಶಿಶುವಿಗೆ ತಾಯಿಯಹಾಲು ಒಗ್ಗಿರುತ್ತದೆ. ಆಡಿನ ಹಾಲು ಮಾತೃವಿನ ಸ್ತನ್ಯಕ್ಕೆ ಸಮಾನಗುಣವುಳ್ಳದ್ದಾದಕಾರಣ ಸ್ತನ್ಯವಿಲ್ಲದ ಮಾತೆಯರ ಮಕ್ಕಳಿಗೆ ಕ್ಷೀರಪಾನಮಾಡುವ ವಯಸ್ಸು ಮುಗಿಯುವವರೆಗೂ ಆಡಿನ ಹಾಲನ್ನಾಗಲೀ ಹಸುವಿನ ಹಾಲನ್ನಾಗಲೀ ಅವರ ಜೀರ್ಣಶಕ್ತಿಗೆ ಅನುಸಾರವಾದ ಪ್ರಮಾಣದಿಂದ ಕುಡಿಸಬೇಕು ॥೪೦॥

(ಅ। ಹೃ।)—

ಶಿಶುವಿಗೆ ತಾಯಿಯ ಹಾಲು ದೊರೆಯದಿದ್ದರೆ ಆಡಿನ ಹಾಲನ್ನು ಕುಡಿಸಬೇಕು. ಅಥವಾ ಲಘುಪಂಚಮೂಲದೊಡನೆಯಾಗಲೀ ಅಥವಾ ಮೂರೆಲೆ ಹೊನ್ನೆಯೊಡನೆಯಾಗಲೀ ತಯಾರಿಸಿದ ಹಸುವಿನ ಹಾಲಿಗೆ ಸಕ್ಕರೆಯನ್ನು ಬೆರೆಸಿಯಾಗಲೀ ಕುಡಿಸಬೇಕು. (ಈ ರೀತಿ ಪಾಕಮಾಡಿದ ಹಾಲು ಗುಣದಲ್ಲ ಆಡಿನ ಹಾಲಿಗೆ ಸಮವಾಗಿರುತ್ತದೆ) ॥೪೧॥

ಮೂಲ—ಸೂತಿಕಾಗೃಹೇ—(ಅ। ಹೃ।)—

ಷಷ್ಠೀಂ ನಿಶಾಂ ವಿಶೇಷೇಣ ಕೃತರಕ್ಷಾಬಲಿಕ್ರಿಯಾಃ।
ಜಾಗೃಯುರ್ಬಾನ್ಧವಾಸ್ತಸ್ಯ ದಧತಃ ಪರಮಾಂ ಮುದಮ್ ॥೪೨॥
ದಶಮೇ ದಿವಸೇ ಪೂರ್ಣೇ ವಿಧಿಭಿಃ ಸ್ವಕುಲೋಚಿತೈಃ।
ಕಾರಯೇತ್ಸೂತಿಕೋತ್ಥಾನಂ ನಾಮ ಬಾಲಸ್ಯ ಚಾರ್ಚಿತಮ್ ॥೪೩॥
ಬಿಭ್ರತೋಽಙ್ಗ್ರಿರ್ಮನೋಹ್ವಾಲರೋಚನಾಗುರುಚನ್ದನಮ್।
ನಕ್ಷತ್ರದೇವತಾಯುಕ್ತಂ ಬಾನ್ಧವಂ ವಾ ಸಮಾಕ್ಷರಮ್ ॥೪೪॥

(ಸು।ಶಾ।ಅ।೧೦)—

ತತೋ ದಶಮೇಽಹನಿ ಮಾತಾಪಿತರೌ ಕೃತಮಙ್ಗಳಕೌತುಕೌ ಸ್ವಸ್ತಿವಾಚನಂ
ಕೃತ್ವಾ ನಾಮ ಕುರ್ಯಾತಾಂ ಯದಭಿಪ್ರೇತಂ ನಕ್ಷತ್ರನಾಮ ವಾ ॥೪೫॥

ದೀಪಿಕೆ—

ಶಿಶುವಿನ ಬಂಧುಜನರು ಹೊಲೆಮನೆಯಲ್ಲಿ ರಕ್ಷೆ, ಬಲಿದಾನಗಳನ್ನು ಮಾಡಿ ಜಾಗರೂಕತೆಯಿಂದ ಶಿಶುವನ್ನು ನೋಡಿಕೊಳ್ಳುತ್ತಿರಬೇಕು; ಮುಖ್ಯವಾಗಿ ಪ್ರಸವವಾದ ಆರನೆಯದಿನ ರಾತ್ರಿಯಲ್ಲಿ ಹೆಚ್ಚು ಜಾಗರೂಕರಾಗಿದ್ದು ಮಗುವಿಗೆ ಹರ್ಷವನ್ನುಂಟುಮಾಡುತ್ತಾ ಎಚ್ಚೆತ್ತಿರಬೇಕು. ಹತ್ತನೆಯದಿನ ಕಳೆದಮೇಲೆ ಹನ್ನೊಂದನೆಯ ದಿವಸ ಪ್ರಾತಃಕಾಲ ಸೂತಿಕೆಯನ್ನು ಎಬ್ಬಿಸಿ ಹೊಲೆಮನೆಯ ಹೊರಕ್ಕೆ ಕರೆದುತಂದು ಮಂಗಳಸ್ನಾನವನ್ನು ಮಾಡಿಸಿ (ಲಕ್ಕಿ, ಬೇವು, ಹೆರಳೆ, ನಿಂಬೆ, ಮಾವು ಇವುಗಳ ಸೊಪ್ಪುಗಳನ್ನು ಹಾಕಿ ಕಾಯಿಸಿ ಸುಖೋಷ್ಣವಾಗಿರುವ ನೀರಿನಿಂದ ಸ್ನಾನಮಾಡಿಸಬೇಕು.) ಮಗುವಿನ ಹಣೆ, ಕೆನ್ನೆ, ಮುಂಗೈ ಮುಂತಾದ ಅವಯವಗಳಮೇಲೆ ಮಣಶಿಲೆ, ಅರಿದಳ, ಗೋರೋಚನ, ಅಗಿಲು, ಶ್ರೀಗಂಧ ಇವುಗಳಿಂದ ಚಿತ್ರವಿಚಿತ್ರವಾಗಿ ಅಲಂಕರಿಸಬೇಕು. ಮಗುವಿನ ತಂದೆ ತಾಯಿಗಳು ಸ್ನಾನಾಲಂಕೃತರಾಗಿ ಶುಚಿರ್ಭೂತರಾಗಿ ಮಗುವಿನೊಡನೆ ಆಸನದಲ್ಲಿ ಕುಳಿತುಕೊಂಡು ಸ್ವಸ್ತಿಪುಣ್ಯಾಹವಾಚನಗಳನ್ನು ಮಾಡಿಸಿ ಸ್ವಕುಲ ವೃದ್ಧರ ಅಂದರೆ ಮಗುವಿನ ತಾತಮುತ್ತಾತಂದಿರ ಇಷ್ಟವಾದ ಹೆಸರನ್ನಾಗಲೀ ಆ ಮಗುವಿನ ನಕ್ಷತ್ರಕ್ಕೆ ಅಭಿಮಾನಿಯಾದ ದೇವರ ಹೆಸರನ್ನಾಗಲೀ ಸಮಾಕ್ಷರ ಬರುವಂತೆ ವಿಚಾರಮಾಡಿ ಮಗುವಿಗೆ ನಾಮಕರಣಮಾಡಿಟ್ಟು ವ್ಯವಹರಿಸಬೇಕು ॥೪೨–೪೫॥

ಮೂಲ—(ಅ।ಹೃ।)—ಬಾಲೋಪಚಾರಃ—

ತತಃ ಪ್ರಕೃತಿಭೇದೋಕ್ತರೂಪೈರಾಯುಃ ಪರೀಕ್ಷಣಮ್।
ಪ್ರಾಗುದಕ್ಛಿರಸಃ ಕುರ್ಯಾದ್ಬಾಲಸ್ಯ ಜ್ಞಾನವಾನ್ಭಿಷಕ್ ॥೪೬॥
ಶುಚಿಧೌತೋಪಧಾನಾನಿ ನಿರ್ವಲೀನಿ ಮೃದೂನಿ ಚ
ಶಯ್ಯಾಸ್ತರಣವಾಸಾಂಸಿ ರಕ್ಷೋಘ್ನೈರ್ಧೂಪಿತಾನಿ ಚ ॥೪೭॥
ಕಾಕೋ ವಿಶಸ್ತಃ ಶಸ್ತಶ್ಚ ಧೂಪನೇ ತ್ರಿವೃತಾನ್ವಿತಃ।
ಜೀವತ್ಖಡ್ಗಾದಿಶೃಙ್ಗೋತ್ಥಾ ಸದಾ ಬಾಲಃ ಶುಭಾನ್ಮಣೀನ್ ॥೪೮॥
ಧಾರಯೇದೌಷಧೀಃ ಶ್ರೇಷ್ಠಾ ಬ್ರಾಹ್ಮ್ಯೈಂದ್ರೀಜೀವಕಾದಿಕಾಃ।
ಹಸ್ತಾಭ್ಯಾಂ ಗ್ರೀವಯಾ ಮೂರ್ಧ್ನಿ ವಿಶೇಷಾತ್ಸತತಂ ವಚಾಮ್ ॥೪೯॥
ಆಯುರ್ಮೇಧಾಸ್ಮೃತಿಸ್ವಾಸ್ಥ್ಯಕರೀಂ ರಕ್ಷೋಭಿರಕ್ಷಿಣೀಮ್।
ಪಂಚಮೇ ಮಾಸಿ ಪುಣ್ಯೇಽಹ್ನಿ ಧರಣ್ಯಾಮುಪವೇಶಯೇತ್ ॥೫೦॥

ಅನ್ನಪ್ರಾಶನಮ್—

ಷಷ್ಠೇಽನ್ನಪ್ರಾಶನಂ ಮಾಸಿ ಕ್ರಮಾತ್ತತ್ರ ಪ್ರಯೋಜಯೇತ್।
ಅಥೈನಂ ಜಾತದಶನಂ ಕ್ರಮೇಣಾಪನಯೇತ್ ಸ್ತನಾತ್ ॥೫೧॥
ಪೂರ್ವೋಕ್ತಂ ಯೋಜಯೇತ್ ಕ್ಷೀರಮನ್ನಂ ಚ ಲಘು ಬೃಂಹಣಮ್ ।

(ಸು।ಶಾ।ಅ।೧೦)—

ಷಣ್ಮಾಸಂ ಚೈನಮನ್ನಂ ಪ್ರಾಶಯೇಲ್ಲಘು ಹಿತಂ ಚ ॥೫೨॥

ದೀಪಿಕೆ—ಬಾಲೋಪಚಾರ—

(ಅಸ್ಟಾ।)—

ಮಗುವಿನ ದೇಹಪ್ರಕೃತಿಗಳಿಗೆ ಅನುಸಾರವಾಗಿ ಆಯುಸ್ಸನ್ನು ಪರೀಕ್ಷಿಸಬೇಕು. ನಾಮಕರಣವಾದಮೇಲೆ ಮಗುವನ್ನು ಪೂರ್ವ ಅಥವಾ ಉತ್ತರದಿಕ್ಕಿಗೆ ತಲೆಯಿರುವಂತೆ ಮಾಡಿ ಮಲಗಿಸಬೇಕು. ಹಾಸಿಗೆ ಹೊದ್ದಿಕೆಯ ಬಟ್ಟೆಗಳನ್ನು ಕೊಳೆಯಿಲ್ಲದೆಯೂ ಚೆನ್ನಾಗಿ ಒಗೆದು ಕ್ರಿಮಿಹರಗಳಾದ ದ್ರವ್ಯಗಳನ್ನು ಬೆಂಕಿಯ ಕೆಂಡದ ಮೇಲೆ ಉದುರಿಸಿ ಬಂದ ಧೂಮದಿಂದ ಕಾಯಿಸಿ ವಾಸನೆಯುಳ್ಳವನ್ನಾಗಿಯೂ ಮಾಡಿ ಸುಕ್ಕಿಲ್ಲದಂತೆ ಮೆತ್ತಗೆ ಹಾಸಿರಬೇಕು. ಆಗತಾನೇ ಕೊಂದ ಕಾಗೆಯನ್ನು ತಿಗಡೆಪುಡಿಯೊಡನೆ ಸೇರಿಸಿ ಸುಟ್ಟು ಬಂದ ಹೊಗೆಯಿಂದ ಆ ಬಟ್ಟೆಗಳಿಗೆ ಧೂಪಕೊಡಬೇಕು. ಬದುಕಿರುವ ಖಡ್ಗಮೃಗದ ಕೊಂಬಿನ ಚೂರನ್ನೂ, ದಿವ್ಯರತ್ನಗಳನ್ನೂ, ಬ್ರಾಹ್ಮೀ, ಐನ್ದ್ರೀ, ಜೀವಕಾದಿಮೂಲಿಕೆಗಳನ್ನೂ, ಚಿನ್ನ, ಬೆಳ್ಳಿಯ ತಾತಿಗಳಲ್ಲಿಟ್ಟು ಮುಚ್ಚಿ ಮಗುವಿನ ಕೈ, ತೋಳು, ತಲೆ, ಕತ್ತುಗಳಲ್ಲಿ ಕಟ್ಟಬೇಕು. ಬಜೆಯ ಕೊನೆಯನ್ನು ಸರ್ವದಾ ಮಗುವಿಗೆ ಕಟ್ಟಿರಬೇಕು. ಇದರ ಪ್ರಯೋಗವು ಆಯುಸ್ಸು, ಬುದ್ಧಿ, ಸ್ಮೃತಿ, ಸ್ವಾಸ್ಥ್ಯತೆಗಳನ್ನುಂಟುಮಾಡಿ ಕ್ರಿಮಿಕೀಟಗಳ ಬಾಧೆಯನ್ನು ನಿವಾರಿಸುತ್ತದೆ. ಐದನೆಯ ತಿಂಗಳಲ್ಲಿ ಶುಭದಿವಸ ನೋಡಮೇಲೆ ಕೂರಿಸಬೇಕು. ಈ ರೀತಿಯಿಂದ ಕ್ರಮವಾಗಿ ಉಪಚರಿಸುತ್ತಾ ಆರನೆಯ ತಿಂಗಳಲ್ಲಿ ಅನ್ನಪ್ರಾಶನವನ್ನು ಮಾಡಿಸಬೇಕು. ಆರು ತಿಂಗಳಿಗೆ ಮಗುವು ಪುಷ್ಟವಾಗಿ ಬೆಳೆದು ಮಾತೃವಿನ ಸ್ತನ್ಯವು ಅದರ ಶರೀರದ ಬೆಳವಣಿಗೆಗೆ ಸಾಕಾಗುವುದಿಲ್ಲವಾದ ಕಾರಣವೂ, ಜೀರ್ಣಶಕ್ತಿಯು ಹೆಚ್ಚಾಗುತ್ತಾದ ಕಾರಣವೂ ಮಗುವಿಗೆ ಸುಲಭವಾಗಿ ಜೀರ್ಣವಾಗುವ ಹಿತಕರವಾದ ಅನ್ನವನ್ನು ತಿನ್ನಿಸಬೇಕು ॥೪೭–೫೨॥

ಮೂಲ—(ಕಾ।ಸಂ।ಅ।೨೦)—ದನ್ತಜನ್ಮಿಕಮ್—

ಇಹ ಖಲು ನೃಣಾಂ ದ್ವಾತ್ರಿಂಶದ್ದನ್ತಾಃ। ತತ್ರಾಷ್ಟೌ ಸಕೃಜ್ಜಾತಾಃ ಸ್ವರೂಢದನ್ತಾ ಭವನ್ತಿ। ಅತಃ ಶೇಷಾ ದ್ವಿಜಾಃ ಯಾವತ್ಸ್ವೇವ ಚ ಮಾಸೇಷು ದನ್ತಾ ನಿಷಿಚ್ಯನ್ತೇ ತಾವತ್ಸ್ವಹಸ್ಸೂದ್ಭಿದ್ಯನ್ತೇ ಯಾವತ್ಸ್ವೇವ ಚ ಮಾಸೇಷು ಜಾತಸ್ಯ ಸತ ಉದ್ಭಿದನ್ತೇ ತಾವತ್ಸ್ವೇವ ಚ ವರ್ಷೇಷು ಪತಿತಾಃ ಪುನರುದ್ಭಿದ್ಯನ್ತೇ। ತತ್ರ ಮಧ್ಯೇ ದ್ವಾವುತ್ತರೌ ರಾಜದನ್ತಸಂಜ್ಞೌ ಭವತಃ; ತಾವಪವಿತ್ರೌ; ತಸ್ಮಾತ್ತಾಭ್ಯಾಂ ಖಣ್ಡೇನ ಶ್ರಾದ್ಧಮರ್ಹತಿ; ಅಪವಿತ್ರೋ ಹಿ ಸಃ; ತಯೋರುಭಯತಃ ಪಾರ್ಶ್ವಯೋರಪಿ ವಸ್ತೌ ತಯೋರಪಿ ದಂಷ್ಟ್ರೇ ಶೇಷಾಃ ಸ್ವರೂಢಾ ಹಾನವ್ಯಾ (ಹನುಪ್ರದೇಶೋದ್ಭವಾ ಇತ್ಯರ್ಥಃ) ಇತಿ ಚೋಚ್ಯನ್ತೇ ತಥಾಧಸ್ತಾತ್ ॥೫೩॥

ತತ್ರ ಕುಮಾರೀಣಾಮಾಶುಕರಮಲ್ಪಾಬಾಧಕರಂ ಚ ದನ್ತಜನ್ಮ ಸುಷಿರತ್ವಾದ್ದಂಶಾನಾಂ ಮೃದುಸ್ವಭಾವಾಚ್ಚ। ಪ್ರಕೃಷ್ಟಕಾಲಮಾಬಾಧಬಹುಳಂ ತು ಕುಮಾರಾಣಾಮಾಚಕ್ಷತೇ। ಘನತ್ವಾದ್ದಂಶಾನಾಂ ಸ್ಥಿರಸ್ವಭಾವಾಚ್ಚ। ನೃಣಾನ್ತು ಚತುರ್ಥಾದಿಮಾಸೇಷು ದನ್ತಾ ನಿಷಿಚ್ಯನ್ತೇ। ತತ್ರ ಸದನ್ತಜನ್ಮ ಚ, ಪೂರ್ವಮುತ್ತರದನ್ತಜನ್ಮ ಚ, ವಿರಲದನ್ತಜನ್ಮ ಚ, ಹೀನದನ್ತತಾ ಚ, ಅಧಿಕದನ್ತತಾ ಚ,

ಕರಾಳದನ್ತತಾ ಚ, ವಿವರ್ಣದನ್ತತಾ ಚ ಸ್ಫುಟಿತದನ್ತತಾ ಚಾಮಙ್ಗಳ್ಯಾ ಭವನ್ತಿ । ತತ್ರ ಶಾನ್ತ್ಯರ್ಥಂ ಮಾರುತೀಮಿಷ್ಟಿಂ ನಿರ್ವಪೇತ್ ॥೩೪॥

ಚತುರ್ವಿಧಂ ತು ದನ್ತಜನ್ಮಾಚಕ್ಷತೇ । ಸಾಮುದ್ಗಂ, ಸಂವೃತಂ, ವಿವೃತಂ, ದನ್ತಸಂಪದಿತಿ । ತತ್ರ ಸಾಮುದ್ಗಂ ಕ್ಷಯಿ ನಿತ್ಯಸಂಪಾತಾತ್ । ಸಂವೃತಮಧನ್ಯಂ ಮಲಿಷ್ಠಮ್ । ವಿವೃತಂ ವೀತಮನಿತ್ಯಂ ಲಾಲೋಪಹತಮಸಂಛನ್ನದನ್ತತ್ವಾದಾಶು ದನ್ತವೈವರ್ಣ್ಯಕರಮಾಸನ್ನಾಬಾಧಮಿತಿ ॥೩೫॥

ಚತುರ್ಥೇ ತು ಮಾಸಿ ದನ್ತಾ ನಿಷಿಕ್ತಾ ದುರ್ಬಲಾ ಭವನ್ತ್ಯಶುಕ್ಷಯಿಣಶ್ಚಾಮಯಬಹುಳಾಶ್ಚ । ಪಞ್ಚಮೇ ಸ್ಪನ್ದನಾಶ್ಚ ಪ್ರಹರ್ಷಿಣಶ್ಚಾಮಯಬಹುಳಾಶ್ಚ । ಷಷ್ಠೇ ಪ್ರತೀಪಾಶ್ಚ ಮಲಗ್ರಾಹಿಣಶ್ಚ ವಿವರ್ಣಾಶ್ಚ ಘುಣದನ್ತಾಶ್ಚ ಭವನ್ತಿ । ಸಪ್ತಮೇ ದ್ವಿಪುಟಾಃ ಸ್ಫೋಟಿನಶ್ಚ ರಾಜಿಮನ್ತಶ್ಚ ಖಣ್ಡಾಶ್ಚ ರೂಕ್ಷಾಶ್ಚ ವಿಷಮಾಶ್ಚೋನ್ನತಾಶ್ಚ ಭವನ್ತಿ । ತಥಾಷ್ಟಮೇ ಮಾಸಿ ಸರ್ವಗುಣಸಮ್ಪನ್ನಾ ಭವನ್ತಿ ॥೩೬॥

ದನ್ತಸಮ್ಪತ್—ಪೂರ್ಣತಾ, ಸಮತಾ, ಘನತಾ, ಶುಕ್ಲತಾ, ಸ್ನಿಗ್ಧತಾ, ಶ್ಲಕ್ಷ್ಣತಾ, ನಿರ್ಮಲತಾ, ನಿರಾಮಯತಾ, ಕಿಂಚಿದುತ್ತರೋನ್ನತತಾ, ದನ್ತಬನ್ಧನಾನಾಂ ಚ ಸಮತಾ ರಕ್ತತಾ ಸ್ನಿಗ್ಧತಾ ಬೃಹದ್ಘನಸ್ಥಿರಮೂಲತಾ ಚೇತಿ ದನ್ತಸಮ್ಪದುಚ್ಯತೇ । ಹೀನೋಲ್ಬಣಸಿತಾಽಸಿತಾಪ್ರವಿಭಕ್ತದನ್ತಬನ್ಧನತ್ವಮಪ್ರಶಸ್ತಂ ಋಷಯೋ ವದನ್ತಿ । ತತ್ಸ್ವಭಾವಾದ್ದನ್ತೋಲೂಖಲೇಷು ಯಚ್ಛೋಣಿತಂ ಗರ್ಭೇ ನಿಷಿಕ್ತಂ ತದೇವ ಜಾತಸ್ಯ ಸಮತೋಽಭಿವರ್ಧಮಾನಸ್ಯ ಕ್ರಮೇಣ (ವಿವರ್ಧಯತಿ) ॥೩೭॥

ದೀಪಿಕೆ––(ಕಾ।ಸಂ।ಅ।೨೦) (ದನ್ತಜನ್ಮಿಕ) ಹಲ್ಲುಹುಟ್ಟುವುದು––

ಮನುಷ್ಯರಿಗೆ ಹುಟ್ಟುವ ಮೂವತ್ತೆರಡು ಹಲ್ಲುಗಳಪೈಕಿ ಎಂಟು ಹಲ್ಲುಗಳು ಒಂದೇ ಸಾರಿ ಹುಟ್ಟಿ ಸ್ಥಿರದಂತಗಳಾಗುತ್ತವೆ. ಉಳಿದವು ದ್ವಿಜಗಳು ಅಂದರೆ ಎರಡೆರಡಾವರ್ತಿ ಹುಟ್ಟುತ್ತವೆಂದರ್ಥ ; ಎಷ್ಟನೆಯ ತಿಂಗಳಲ್ಲಿ ಹಲ್ಲುಗಳು ಹುಟ್ಟುತ್ತವೆಯೋ ಅಷ್ಟು ದಿನಗಳಲ್ಲಿ ಹೊರಕ್ಕೆ ಬರುತ್ತವೆ. ಎಷ್ಟನೆಯ ತಿಂಗಳಲ್ಲಿ ಹುಟ್ಟಿ ಮೇಲೆ ಬರುತ್ತವೆಯೋ ಅಷ್ಟನೆಯ ವರ್ಷದಲ್ಲಿ ಅವು ಬಿದ್ದು ಅವುಗಳ ಸ್ಥಳಗಳಲ್ಲಿ ಬೇರೆ ಹಲ್ಲುಗಳು ಪುನಃ ಹುಟ್ಟುತ್ತವೆ. ಮೇಲಿನ ವಸಡಿನ ಮಧ್ಯದಲ್ಲೆರಡು ಹಲ್ಲುಗಳಿಗೆ "ರಾಜದನ್ತ"ಗಳೆಂದು ಹೆಸರು. ಅವು ಅಶುದ್ಧವಾದ ಕಾರಣ ಅವು ಹುಟ್ಟಿದಮೇಲೆ ಶ್ರಾದ್ಧವನ್ನು ಮಾಡಬೇಕು. ಅವುಗಳಿಗೆ ಎಡಬಲಭಾಗಗಳಲ್ಲಿ ಹುಟ್ಟುವ ಹಲ್ಲುಗಳಿಗೆ "ವಸ್ತ" ಎಂಬ ಹೆಸರು. ಈ "ವಸ್ತ"ಗಳ ಎಡಬಲಗಳಲ್ಲಿ ದಂಷ್ಟ್ರಗಳು (ಕೋರೆಹಲ್ಲುಗಳು) ಹುಟ್ಟುತ್ತವೆ. ಉಳಿದವು ದವಡೆಯಲ್ಲಿ ಹುಟ್ಟುತ್ತವೆಯಾಗಿ "ಹಾನವ್ಯ"ಗಳೆಂಬ ಸಂಕೇತವನ್ನು ಹೊಂದಿರುತ್ತವೆ. ಇದೇ ಮೇರೆಗೆ ಕೆಳಗಿನ ವಸಡಿನಲ್ಲೂ ಹುಟ್ಟುತ್ತವೆ. ಹೆಣ್ಣುಮಕ್ಕಳಿಗೆ ದಂತಗಳೊಳಗೆ ರಂಧ್ರವಿರುವುದರಿಂದಲೂ ಮೃದುಸ್ವಭಾವವುಳ್ಳ ಕಾರಣವೂ ಸ್ವಲ್ಪ ಬಾಧೆಯೂ ಇಲ್ಲದೆ ಬಲು ಬೇಗನೆ ಹಲ್ಲುಗಳು ಹುಟ್ಟುತ್ತವೆ. ಗಂಡುಮಕ್ಕಳಿಗೆ ನಿಧಾನವಾಗಿಯೂ ಬಲು ಯಾತನೆಯನ್ನುಂಟುಮಾಡುತ್ತಲೂ ಹುಟ್ಟುತ್ತವೆ. ಅವರಿಗೆ ಹಲ್ಲುಗಳು ಗಟ್ಟಿಯಾಗಿಯೂ ರಂಧ್ರವಿಲ್ಲದೆಯೂ

ಇರುತ್ತವೆ. ಮನುಷ್ಯರಿಗೆ ಹುಟ್ಟಿದ ನಾಲ್ಕನೆಯ ತಿಂಗಳ ಲಾಗಾಯ್ತು ಹಲ್ಲುಗಳು ಹುಟ್ಟಿಬರುತ್ತವೆ. ಕೆಲವರಿಗೆ ಜನನಕ್ಕೆ ಮುಂಚೆಯೇ ಹಲ್ಲು ಹುಟ್ಟಿರುತ್ತದೆ, ಮತ್ತೆ ಕೆಲವರಿಗೆ ಮೊದಲು ಮೇಲುಭಾಗದಲ್ಲಿ ಹಲ್ಲುಗಳು ಹುಟ್ಟುತ್ತವೆ; ಹಲ್ಲುಗಳು ವಿರಳವಾಗಿಯೂ, ಮೋಟಾಗಿಯೂ, ದಪ್ಪವಾಗಿಯೂ, ಸೊಟ್ಟಾಗಿಯೂ, ಬಣ್ಣ ವ್ಯತ್ಯಾಸವುಳ್ಳವಾಗಿಯೂ, ಬಿರುಕು ಬಿಟ್ಟಿರುವುವಾಗಿಯೂ ಹುಟ್ಟುವುದು ಮಂಗಳ ಕರವಲ್ಲ. ಇಂಥವರಿಗೆ ಮಾರುತೇಷ್ಟಿಯನ್ನು ಮಾಡಿಸಿ ಶಾನ್ತಿ ಮಾಡಿಸಬೇಕು. ಹಲ್ಲುಗಳಲ್ಲಿ ನಾಲ್ಕು ವಿಧಗಳಿರುತ್ತವೆ. ೧. ಸಾಮುದ್ಗವು (ಭರಣಿ, ಮುಚ್ಚಳ ಗಳಂತಿರುವುದು) ಸದಾ ಮುಚ್ಚಿಕೊಂಡಿರುವುದರಿಂದ ಕ್ಷೀಣವಾಗುತ್ತದೆ. ೨. ಸಂವೃತಂ (ಹಲ್ಲುಗಳು ಒಂದಕ್ಕೊಂದು ಜಂಟಿಯಾಗಿ ಹುಟ್ಟುವುದು) ಇದು ಕೊಳೆಯಿಂದ ಮುಚ್ಚಿಕೊಂಡಿರುತ್ತವೆಯಾದುದರಿಂದ ಅನಾರೋಗ್ಯಕರವು. ೩. ವಿವೃತಂ (ಹಲ್ಲುಗಳು ದೂರದೂರದಲ್ಲಿರುವುದು) ಇದು ಬೇಗ ಕಳಚಿ ಬೀಳುವುದ ರಿಂದಲೂ ಸದಾ ಜೊಲ್ಲಿನಿಂದ ಕೂಡಿ ಹಲ್ಲುಗಳು ದಟ್ಟವಾಗಿಲ್ಲದ ಕಾರಣದಿಂದಲೂ ಬಣ್ಣ ವ್ಯತ್ಯಾಸವಾಗಿ ಬಲುಬೇಗ ನೋವನ್ನು ಕೊಡುತ್ತವೆ. ೪. ದನ್ತಸಂಪತ್ (ಗುಣಕರವಾದ ಹಲ್ಲುಗಳು) ಹಲ್ಲುಗಳು ಪೂರ್ಣವಾಗಿಯೂ, ನೇರವಾಗಿಯೂ, ದಪ್ಪವಾಗಿಯೂ, ಬೆಳ್ಳಗೂ, ಥಳಥಳಗುಟ್ಟುತ್ತಲೂ, ನುಣುಪಾಗಿಯೂ, ಕೊಳೆ ಯಿಲ್ಲದೆಯೂ, ರೋಗವಿಲ್ಲದವುಗಳಾಗಿಯೂ, ಸ್ವಲ್ಪ ಮೇಲಕ್ಕೆ ಎತ್ತಿಕೊಂಡಿರುವು ವಾಗಿಯೂ, ಒಸಡು (ದನ್ತಬನ್ಧನ ಮಾಂಸಖಂಡವು) ಸಮವಾಗಿಯೂ ಕೆಂಪಗೂ ಜಿಡ್ಡುಳ್ಳದ್ದಾಗಿಯೂ, ಬುಡವು ದಪ್ಪವಾಗಿಯೂ ಬಿಗಿಯಾಗಿಯೂ ಇರುವುದಾದರೆ ಉತ್ತಮ ಜಾತಿಯ ಹಲ್ಲುಗಳ ಲಕ್ಷಣವೆನಿಸುತ್ತದೆ. ಹಲ್ಲುಗಳು ಮೋಟಾಗಿಯೂ, ಉದ್ದವಾಗಿಯೂ, ಬಿಳುಪು ಕಪ್ಪು ಮಿಶ್ರ ಬಣ್ಣವುಳ್ಳದ್ದಾಗಿಯೂ, ಬುಡದಲ್ಲಿ ಮಾಂಸಖಂಡಗಳು ಪ್ರತ್ಯೇಕವಾಗಿರದೆ ಒಂದಕ್ಕೊಂದು ಸೇರಿದ್ದರೆ ಪ್ರಶಸ್ತವಲ್ಲ ವೆಂದು ಋಷಿಗಳು ಹೇಳುತ್ತಾರೆ. ಗರ್ಭೋತ್ಪತ್ತಿಯ ಕಾಲದ ನಿಷಿಕ್ತವಾದ ರಕ್ತವು ಹಲ್ಲುಗಳ ಬುಡದಲ್ಲಿ ಸ್ವಭಾವಿಕವಾಗಿ ಸೇರಿದ್ದರೆ ಹಲ್ಲುಗಳು ಹುಟ್ಟಿದ ಮೇಲೆ ಮಾಂಸಖಂಡಗಳು ಸಮಪ್ರಮಾಣದಿಂದಲೇ ವೃದ್ಧಿಯಾಗುತ್ತವೆ.

ನಾಲ್ಕನೆಯ ತಿಂಗಳಲ್ಲಿ ಹುಟ್ಟುವ ಹಲ್ಲುಗಳು ಬಲಹೀನಗಳಾಗಿಯೂ ಬೇಗ ಕ್ಷೀಣವಾಗುತ್ತಲೂ, ಅಧಿಕವಾಗಿ ರೋಗವನ್ನುಂಟುಮಾಡುವುವಾಗಿಯೂ ಆಗು ತ್ತವೆ. ಐದನೆಯ ತಿಂಗಳಲ್ಲಿ ಹುಟ್ಟುವವು ಅಲ್ಲಾಡುತ್ತಲೂ ಜುಮುಗುಟ್ಟುತ್ತಲೂ ರೋಗಕರಗಳಾಗಿಯೂ, ಆರನೆಯ ತಿಂಗಳಲ್ಲಿ ಹುಟ್ಟುವವು ಎದರುಬದರಾಗಿ ಹುಟ್ಟಿ ಕೊಳೆಯಿಂದ ಕೂಡಿ ಬಣ್ಣ ಬದಲಾಗಿ ಘುಣದಂತೆ (ನೊಣದಂತೆ) ಆಕಾರ ವುಳ್ಳವುಗಳಾಗುತ್ತವೆ. ಏಳನೆಯ ತಿಂಗಳಲ್ಲಿ ಎರಡೆರಡು ಪಕ್ಕಗಳುಳ್ಳವಾಗಿ ಬಿರುಕುಗಳುಳ್ಳವಾಗಿ ಗೆರೆಗಳಿಂದಲೂ ಚೂರುಚೂರಾಗಿ ಉಬ್ಬುತಗ್ಗುಗಳಿಂದಲೂ ಕೂಡಿ ಎತ್ತರವಾಗಿ ಹುಟ್ಟುತ್ತವೆ. ಎಂಟನೆಯ ತಿಂಗಳಲ್ಲಿ ಸಕಲ ಗುಣಗಳಿಂದ ಕೂಡಿದವುಗಳಾಗಿ ಹುಟ್ಟುತ್ತವೆ ‖೫೩–೫೭‖

ಮೂಲ—

ಅಥೈನಂ ಜಾತದಶನಂ ಕ್ರಮಾದಪನಯೇತ್ ಸ್ತನಾತ್।
ಪೂರ್ವೋಕ್ತಂ ಯೋಜಯೇತ್ ಕ್ಷೀರಮನ್ನಂ ಚ ಲಘು ಬೃಹ್ಮಣಮ್ ॥೫೮॥
ಪ್ರಿಯಾಲವಜ್ಜಮಧುಕಮಧುಲಾಜಾಸಿತೋಪಲೈಃ।
ಅಪಸ್ತನ್ಯಸ್ಯ ಸಂಯೋಜ್ಯಃ ಪ್ರೀಣನೋ ಮೋದಕಃ ಶಿಶೋಃ ॥೫೯॥
ದೀಪನೋ ಬಾಲಬಿಲ್ವೈಲಾಶರ್ಕರಾಲಾಜಸಕ್ತುಭಿಃ।
ಸಂಗ್ರಾಹೀ ಧಾತಕೀಪುಷ್ಪಶರ್ಕರಾಲಾಜತರ್ಪಣೈಃ ॥೬೦॥

ದೀಪಿಕೆ—

ಹಲ್ಲು ಹುಟ್ಟಿದಮೇಲೆ ಕ್ರಮವಾಗಿ ಸ್ತನಪಾನವನ್ನು ಬಿಡಿಸಿ ಮಗುವಿಗೆ ಹಿಂದೆ ಹೇಳಿದಂತೆ ಆಡಿನ ಹಾಲನ್ನು ಕುಡಿಸಬೇಕು ಮತ್ತು ಲಘುವಾಗಿಯೂ (ಸುಲಭವಾಗಿ ಜೀರ್ಣಿಸುವ) ಪುಷ್ಟಿಕರವಾಗಿಯೂ ಇರುವ ಅನ್ನವನ್ನು ತಿನ್ನಿಸಬೇಕು. ಚಾರುಪೊಪ್ಪು, ಅತಿಮಧುರ, ಜೇನುತುಪ್ಪ, ಅರಳುಹಿಟ್ಟು, ಸಕ್ಕರೆಗಳನ್ನು ಸೇರಿಸಿ ತಯಾರ್ಮಾಡಿದ ಮೋದಕವು ಹಾಲು ಬಿಡಿಸಿದ ಮಕ್ಕಳಿಗೆ ಹಿತಕರವಾದದ್ದು. ಬಿಲ್ವಪತ್ರೆಯ ಎಳೆಯ ಹೀಚು, ಏಲಕ್ಕಿ, ಸಕ್ಕರೆ, ಅರಳುಹಿಟ್ಟು ಇವುಗಳ ಮೋದಕವು ಅಗ್ನಿದೀಪ್ತಿಯನ್ನುಂಟುಮಾಡುತ್ತದೆ. ಧಾತಕೀಕುಸುಮ, ಸಕ್ಕರೆ, ಅರಳುಹಿಟ್ಟುಗಳನ್ನು ಸೇರಿಸಿ ತಯಾರಿಸಿದ ಮೋದಕವು ಮಲಮೂತ್ರಗಳ ಸ್ರಾವವನ್ನು ತಡೆಯುತ್ತದೆ ॥೫೮–೬೦॥

ಮೂಲ—(ಅ।ಹೃ।ಉ।ಅ।೧)—ಕರ್ಣಪಾಳೀವರ್ಧನಮ್—

ಷಟ್ಸಪ್ತಮಾಷ್ಟಮಾಸೇಷು ನೀರುಜಸ್ಯ ಶುಭೇಽಹನಿ।
ಕರ್ಣೌ ಹಿಮಾಗಮೇ ವಿಧ್ಯೇತ್ ಧಾತ್ರ್ಯಙ್ಕಸ್ಥಸ್ಯ ಸಾನ್ತ್ವಯನ್ ॥೬೧॥
ಪ್ರಾಗ್ದಕ್ಷಿಣಂ ಕುಮಾರಸ್ಯ ಭಿಷಗ್ವಾಮಂ ತು ಯೋಷಿತಃ।
ದಕ್ಷಿಣೇನ ದಧತ್ಸೂಚೀಂ ಪಾಳಿಮನ್ಯೇನ ಪಾಣಿನಾ ॥೬೨॥
ಮಧ್ಯತಃ ಕರ್ಣಪೀಠಸ್ಯ ಕಿಂಚಿದ್ಗಣ್ಡಾಶ್ರಯಂ ಪ್ರತಿ।
ಜರಾಯುಮಾತ್ರಪ್ರಚ್ಛನ್ನೇ ರವಿರಶ್ಮ್ಯವಭಾಸಿತೇ ॥೬೩॥
ಧೃತಸ್ಯ ನಿಶ್ಚಲಂ ಸಮ್ಯಗಲಕ್ತಕರಸಾಙ್ಕಿತೇ।
ವಿಧ್ಯೇದ್ದೈವಕೃತಚ್ಛಿದ್ರೇ ಸಕೃದೇವರ್ಜುಲಾಘವಾತ್ ॥೬೪॥
ನೋರ್ಧ್ವಂ ನ ಪಾರ್ಶ್ವತೋ ನಾಧಃ ಸಿರಾಸ್ತತ್ರ ಹಿ ಸಂಶ್ರಿತಾಃ।
ಕಾಳಿಕಾ ಮರ್ಮರೀ ರಕ್ತಾ ತದ್ವ್ಯಧಾದ್ರಾಗರುಗ್ಜ್ವರಾಃ ॥೬೫॥
ಸಶೋಫದಾಹಸಂರಮ್ಭಮನ್ಯಾಸ್ತಮ್ಭಾಪತಾನಕಾಃ।
ತೇಷಾಂ ಯಥಾಕ್ರಮಂ ಕುರ್ಯಾದ್ವಿಭಜ್ಯಾಶು ಚಿಕಿತ್ಸಿತಮ್ ॥೬೬॥
ಸ್ಥಾನೇ ವ್ಯಧಾನ್ನ ರುಧಿರಂ ನ ರುಗ್ರಾಗಾದಿಸಮ್ಭವಃ।
ಸ್ನೇಹಾಕ್ತಂ ಸೂಚ್ಯನುಸ್ಯೂತಂ ಸೂತ್ರಂ ಚಾನುನಿಧಾಪಯೇತ್ ॥೬೭॥
ಆಮೇ ತೈಲೇನ ಸಿಂಚೇಚ್ಚ ಬಹಳಾಂ ತದ್ವದಾರಯಾ।
ವಿಧ್ಯೇತ್ಪಾಳೀಂ ಹಿತಭುಜಃ ಸಂಚಾರ್ಯಾಥ ಸ್ಥವೀಯಸೀ ॥೬೮॥
ವರ್ತಿಸ್ತ್ರ್ಯಹಾತ್ತತೋ ರೂಢಂ ವರ್ಧಯೇತ ಶನೈಶ್ಶನೈಃ।

ದೀಪಿಕೆ—(ಅ।ಹೃ।ಉ।ಅ। ೧) ಕರ್ಣವ್ಯಧನ (ಕಿವಿಚುಚ್ಚುವುದು)

ಆರು, ಏಳು, ಎಂಟನೆಯ ತಿಂಗಳುಗಳಲ್ಲಿ ಯಾವ ತಿಂಗಳಲ್ಲಾದರೂ ಹಿಮಗಾಲ ಬಂದಿರುವಾಗ ಮಗುವು ಅರೋಗ್ಯದಿಂದಿರುವಾಗ ಶುಭದಿವಸದಲ್ಲಿ ಆಟಪಾಟಗಳಿಂದ ಮಗುವನ್ನು ಸಂತೈಸಿ ಧಾತ್ರಿಯ ತೊಡೆಯಮೇಲೆ ಕೂರಿಸಿ ಕರ್ಣಪಾಳಿಯನ್ನು ಚುಚ್ಚಬೇಕು. ವೈದ್ಯನು ಬಲಗೈಯಲ್ಲಿ ಸ್ನೇಹದಲ್ಲಿ ಅದ್ದಿದ ದಾರವನ್ನು ಪೋಣಿಸಿರುವ ಸೂಜಿಯನ್ನು ಹಿಡಿದುಕೊಂಡು ಎಡಗೈಯಿಂದ ಗಂಡುಮಗುವಿನ ಬಲದ ಕಿವಿಯನ್ನೂ ಹೆಣ್ಣುಮಗುವಿನ ಎಡಗಿವಿಯನ್ನೂ ಹಿಡಿದುಕೊಂಡು ಅದರ ಕೆನ್ನೆಯ ಮೇಲೆ ಸ್ವಲ್ಪ ಟೇಕಾಕೊಟ್ಟು ಹಿಡಿದು ದೈವಿಕವಾದ ರನ್ಧ್ರದಲ್ಲಿ ಸೂಜಿಯಿಂದ ಚುಚ್ಚಬೇಕು; ಮಗುವನ್ನು ಸೂರ್ಯನಿಗೆ ಅಭಿಮುಖವಾಗಿ ಕೂಡಿಸಿ ನೋಡಿದರೆ ಕರ್ಣಪಾಳಿಯ ಮಧ್ಯದಲ್ಲಿ ತೆಳುವಾದ ಪೊರೆಯಿಂದ ಮುಚ್ಚಿಕೊಂಡಿರುವ ಸ್ವಾಭಾವಿಕವಾದ ರಂಧ್ರವು ಕಾಣಿಸುತ್ತದೆ; ಆ ರನ್ಧ್ರದ ಮೇಲೆ ಅರಗಿನ ಕಷಾಯದಿಂದ ಗುರ್ತುಮಾಡಿ ರಂಧ್ರದೊಳಕ್ಕೆ ನೇರವಾಗಿ ಹೋಗುವಂತೆ ಒಂದೇ ಸಾರಿ ಸೂಜಿಯಿಂದ ಚುಚ್ಚಬೇಕು. ರಂಧ್ರದ ಮೇಲಾಗಲೀ ಕೆಳಗಾಗಲೀ ಎಡ ಬಲಗಳಲ್ಲಾಗಲೀ ಚುಚ್ಚಬಾರದು. ಏಕೆಂದರೆ ಕಾಲಿಕಾ ಮರ್ಮರೀ ರಕ್ತಾ ಎಂಬ ಸಿರೆಗಳು ಕರ್ಣಪಾಳಿಯಲ್ಲಿ ಸೇರಿ ಕೊನೆಗಾಣುತ್ತವೆ. ಅವುಗಳಿಗೆ ಸೂಜಿಯು ಚುಚ್ಚಿಕೊಂಡರೆ ಚರ್ಮವು ಕೆಂಪಗಾಗಿ ನೋವು, ಜ್ವರ, ಊದು, ಉರಿ, ದಿಗಲಿನಿಂದ ಕತ್ತು ತಿರುಚಿಕೊಳ್ಳುವುದು, ಅಪತಾನಕ (ವಾಯುವಿನ ಶೆಳತ) ಗಳುಂಟಾಗುತ್ತವೆ. ಅವುಗಳಿಗೆ ತಕ್ಕಂತೆ ಚಿಕಿತ್ಸಾಕ್ರಮವನ್ನು ಮಾಡಬೇಕಾಗುತ್ತಾದ ಕಾರಣ ದೈವಕೃತವಾದ ಕರ್ಣಛಿದ್ರದಲ್ಲಿಯೇ ಚುಚ್ಚಬೇಕು. ಇದರಿಂದ ರಕ್ತವೂ ಬರುವುದಿಲ್ಲ; ನೋವು ಕಿವಿ ಕೆಂಪಾಗುವುದು ಮೊದಲಾದ ಯಾವ ಬಾಧೆಗಳೂ ಉಂಟಾಗುವುದಿಲ್ಲ. ಉಪಾಯವಾಗಿ ಸೂಜಿಯನ್ನು ಹೊರಕ್ಕೆ ಎಳೆದುಕೊಂಡು ದಾರವು ಕಿವಿಯ ರಂಧ್ರದೊಳಗಿರುವಂತೆ ಮಾಡಿ ಸೂಜಿಯನ್ನು ಬೇರ್ಪಡಿಸಿ ದಾರವು ಕಳಚಿ ಬೀಳದಂತೆ ಗಂಟು ಹಾಕಬೇಕು. ಆ ಗಂಟು ಕಿವಿಯ ಹೊರಗಡೆಗಿರಬೇಕು. ಆಮಾವಸ್ಥೆಯಲ್ಲಿದ್ದರೆ ಅದರ ಮೇಲೆ ತೈಲವನ್ನು ಸವರಬೇಕು. ಪಾಳಿಯು ದಪ್ಪನಾಗಿದ್ದರೆ ಮಗುವಿಗೆ ಹಿತವಾದ ಆಹಾರವನ್ನು ತಿನ್ನಿಸಿದ ಮೇಲೆ ಆರೆ (ಸಲಾಕಿ) ಯಿಂದ ರಂಧ್ರವನ್ನು ಹಿಗ್ಗಲಿಸಿ ಅಗಲವಾದ ಆ ರಂಧ್ರದೊಳಗೆ ದಪ್ಪ ದಾರವನ್ನು ಪೋಣಿಸಿ ಕಟ್ಟಬೇಕು. ಈ ರೀತಿಯಾಗಿ ಮೂರು ದಿನಗಳಿಗೊಂದಾವರ್ತಿ ದಪ್ಪ ದಾರವನ್ನು ಬದಲಾಯಿಸುತ್ತಾ ತನಗೆ ಬೇಕಾದಷ್ಟು ಪ್ರಮಾಣದಲ್ಲಿ ಕರ್ಣಪಾಳಿಯ ರಂಧ್ರವನ್ನು ಅಗಲಮಾಡಿಕೊಳ್ಳಬೇಕು.

ಮೂಲ—(ಸು।ಶಾ।ಅ। ೧೦) ಬಾಲರಕ್ಷಾವಿಧಾನಮ್—

ಬಾಲಂ ಪುನರ್ಗಾತ್ರಸುಖಂ ಗೃಹ್ಣೀಯಾತ್। ನ ಚೈನಂ ತರ್ಜಯೇತ್। ಸಹಸಾ ನ ಪ್ರತಿಬೋಧಯೇತ್—ವಿತ್ರಾಸಭಯಾತ್ । ಸಹಸಾ ನಾಪಹರೇತ್ ಕ್ಷಿಪೇದ್ವಾ ವಾತಾದಿವಿಘಾತಭಯಾತ್ । ನೋಪವೇಶಯೇತ್ಕೌಬ್ಜಭಯಾತ್। ನಿತ್ಯಂ ಚೈನ-

ಮನುವರ್ತೇತ ಪ್ರಿಯಶತೈರಜಿಘಾಂಸುಃ । ಏವಮನಭಿಹತಮನಾಸ್ತ್ವಭಿವರ್ಧತೇ ನಿತ್ಯಮುದಗ್ರಸತ್ವಸಂಪನ್ನೋ ನೀರೋಗಃ ಸುಪ್ರಸನ್ನಮನಾಶ್ಚ ಭವತಿ। ವಾತಾತಪವಿದ್ಯುತ್ಪ್ರಭಾಪಾದಪಲತಾಶೂನ್ಯಾಗಾರನಿಮ್ನಸ್ಥಾನಗ್ರಹಚ್ಛಾಯಾದಿಭ್ಯೋ ದುರ್ಗ್ರಹೋಪಸರ್ಗತಶ್ಚ ಬಾಲಂ ರಕ್ಷೇತ್ ॥೬॥

ನಾಽಶುಚೌ ವಿಸೃಜೇದ್ಬಾಲಂ ನಾಕಾಶೇ ವಿಷಮೇ ನ ಚ ।
ನೋಷ್ಮಮಾರುತವರ್ಷೇಷು ರಜೋಧೂಮೋದಕೇಷು ಚ ॥೭೦॥

(ಅ।ಹೃ।)—

ತ್ರಾಸಯೇನ್ನಾಽವಿಧೇಯಂ ತಂ ತ್ರಸ್ತಂ ಗೃಹ್ಣನ್ತಿ ಹಿ ಗ್ರಹಾಃ।
ವಸ್ತ್ರವಾತಾತ್ಪರಸ್ಪರ್ಶಾತ್ಪಾಲಯೇಲ್ಲಙ್ಘಿತಾಚ್ಚ ತಮ್ ॥೭೧॥

ದೀಪಿಕೆ—(ಸು।ಶಾ।ಅ।೧೦) ಬಾಲಕರನ್ನು ರಕ್ಷಿಸುವ ವಿಧಾನ—

ಮಗುವಿಗೆ ಹಿಂಸೆಯಾಗದಂತೆ ಅದನ್ನು ಎತ್ತಿಕೊಳ್ಳಬೇಕು ; ಅದನ್ನು ಹೆದರಿಸಬಾರದು ; ನಿದ್ರಿಸುತ್ತಿರುವಾಗ ಥಟ್ಟನೆ ಎಬ್ಬಿಸಬಾರದು ; ಹೆದರುತ್ತದೆ. ಸರಕ್ಕನೆ ಎತ್ತಿಕೊಳ್ಳಲೂ ಬಾರದು ; ಕೆಳಕ್ಕೆ ಇಳಿಸಲೂ ಬಾರದು—ವಾತರೋಗಗಳುಂಟಾಗುತ್ತವೆ ; ಕೂರಿಸಬಾರದು—ನಡು ಬಗ್ಗಿ ಗೂನಾಗುತ್ತದೆ; ಮಗುವನ್ನು ಆಡಿಸತಕ್ಕವರು ವಿಧವಿಧಗಳಾದ ಆಟದ ಸಾಮಾನುಗಳನ್ನು ಮಗುವಿನ ಮುಂದಿಟ್ಟು ಪ್ರಿಯವಾದ ಮೃದುನುಡಿಗಳಿಂದ ಮಗುವಿನ ಶರೀರ ಮನಸ್ಸುಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಮಗುವನ್ನು ಹೊಡೆಯಬಾರದು ; ಗಾಳಿ, ಬಿಸಲು, ಸಿಡಿಲು, ಮಿಂಚುಗಳಿಗೆ ಸಿಕ್ಕದಂತೆಯೂ ; ಮರದ ಕೆಳಗೆ, ಬಳ್ಳಿಗಳ ಹತ್ತಿರ, ವಾಸವಿಲ್ಲದ ಮನೆ, ಹಳ್ಳ ತಿಟ್ಟಾಗಿರುವ ಸ್ಥಳ, ಗ್ರಹಗಳು ಸಂಚರಿಸುತ್ತಿರುವ ಸ್ಥಳಗಳಲ್ಲೂ, ನೆರಳಿರುವ ಸ್ಥಳದಲ್ಲೂ, ಒಂಟಿಯಾಗಿಯೂ ಮಗುವನ್ನು ಬಿಡಬಾರದು–ಗ್ರಹಪೀಡೆಯುಂಟಾಗುತ್ತದೆ. ಹೊಲಸು (ಹೇಸಿಗೆಯ) ಸ್ಥಳದಲ್ಲೂ ನೆಲಕ್ಕೂ ಛಾವಣಿಗೂ ಮಧ್ಯದಲ್ಲೂ ಹಳ್ಳದಿಣ್ಣೆಯ ಭೂಮಿಯಲ್ಲೂ ಬಿಸಿಲು, ಗಾಳಿ, ಧೂಳು, ಹೊಗೆ, ನೀರು ಹರಿಯುವ ಸ್ಥಳಗಳಲ್ಲೂ ಮಗುವನ್ನು ಬಿಟ್ಟಿರಬಾರದು.

(ಅ। ಹೃ।)—ಮಗುವು ಹೇಳಿದ ಮಾತನ್ನು ಧಿಕ್ಕರಿಸುತ್ತದೆಂದು ಅದನ್ನು ಹೆದರಿಸಬಾರದು. ಹೆದರಿದ ಮಕ್ಕಳನ್ನು ಗ್ರಹಗಳು ಆವರಿಸಿ ಪೀಡಿಸುತ್ತವೆ; ಮಗುವಿನ ಮೇಲೆ ಬಟ್ಟೆಯಿಂದ ಬೀಸಬಾರದು, ಒರಟಾದ ವಸ್ತುಗಳನ್ನು ಅದರ ದೇಹಕ್ಕೆ ತಿಕ್ಕಬಾರದು ; ಮಗವು ಚಿಮ್ಮಿ ಮುಗ್ಗರಿಸಿ ಬೀಳದಂತೆ ಅದನ್ನು ಬಿಗಿಯಾಗಿ ಹಿಡಿದಿರಬೇಕು ॥೬೯–೭೧॥

ಮೂಲ—(ಅ।ಹೃ।)—ಬಾಲೋಪಚಾರಃ—

ತ್ರಿವಿಧಃ ಕಥಿತೋ ಬಾಲಃ ಕ್ಷೀರಾನ್ನೋಭಯವರ್ತನಃ।
ಸ್ವಾಸ್ಥ್ಯಂ ತಾಭ್ಯಾಮದುಷ್ಟಾಭ್ಯಾಂ ದುಷ್ಟಾಭ್ಯಾಂ ರೋಗಸಮ್ಭವಃ ॥೭೨॥

(ಸು।ಶಾ।ಅ।೧೦)—

ಕ್ಷೀರಾಹಾರಯ ಸರ್ಪಿಃ ಪಾಯಯೇತ್ಸಿದ್ಧಾರ್ಥಕವಚಾಮಾಂಸೀಪಯಸ್ಯಾಪಾಮಾರ್ಗಶತಾವರೀಸಾರಿವಾಬ್ರಾಹ್ಮೀಪಿಪ್ಪಲೀಹರಿದ್ರಾ ಕುಷ್ಠಸೈನ್ಧವಸಿದ್ಧಮ್। ಕ್ಷೀರಾನ್ನಾದಾಯ ಮಧುಕವಚಾಪಿಪ್ಪಲೀಚಿತ್ರಕತ್ರಿಫಲಾಸಿದಮ್ದ್ಧ। ಅನ್ನಾದಾಯ

ದ್ವಿಪಂಚಮೂಲೀಕ್ಷೀರತಗರಭದ್ರದಾರುಮರಿಚಮಧುವಿಡಙ್ಗದ್ರಾಕ್ಷಾದ್ವಿಬ್ರಾಹ್ಮೀ-
ಸಿದ್ಧಮ್ । ತೇನಾರೋಗ್ಯಬಲಮೇಧಾಯೂಂಷಿ ಶಿಶೋರ್ಭವನ್ತಿ ॥೭೩॥

ದೀಪಿಕೆ—ಬಾಲಕರನ್ನುಪಚರಿಸುವ ವಿಧಾನ—

(ಅ।ಹೃ।)—

ಮಕ್ಕಳಲ್ಲಿ ಕ್ಷೀರಪಾಯಿೀ, ಕ್ಷೀರಾನ್ನೋಭಯಜೀವೀ, ಅನ್ನಜೀವೀ, ಎಂದು ಮೂರು ವಿಧಗಳುಂಟು. ಹಾಲು ಮತ್ತು ಅನ್ನ ಇವೆರಡೂ ಶುದ್ಧವಾಗಿದ್ದರೆ ಮಕ್ಕಳು ಆರೋಗ್ಯವಾಗಿರುತ್ತಾರೆ; ಅವು ಕೆಟ್ಟರೆ ರೋಗಗಳುಂಟಾಗುತ್ತವೆ. ॥ ೭೨ ॥

(ಸು।ಶಾ।ಅ।೧೦)—

ಬಿಳಿಯ ಸಾಸಿವೆ, ಬಜೆ, ಜಟಾಮಾಂಸೀ, ಕ್ಷೀರಕಾಕೋಳಿ, ಉತ್ತರಣಿ, ಆಷಾಢಿಬೇರು, ಒಂದೆಲಗ, ಹಿಪ್ಪಲಿ, ಅರಿಶಿನ, ಚಂಗಲ್‌ಕೋಷ್ಠ, ಸೈಂಧವ ಲವಣ ಇವುಗಳನ್ನು ಸೇರಿಸಿ ತಯಾರಿಸಿದ ಘೃತವನ್ನು ಬರೀ ಹಾಲು ಕುಡಿಯುವ ಮಗುವಿಗೂ; ಅತಿಮಧುರ, ಬಜೆ, ಹಿಪ್ಪಲಿ, ಚಿತ್ರಮೂಲ, ತ್ರಿಫಲೆಗಳನ್ನು ಸೇರಿಸಿ ತಯಾರಿಸಿದ ಘೃತವನ್ನು ಕ್ಷೀರಾನ್ನಾದನಿಗೂ; ದಶಮೂಲ, ಹಾಲು, ಗ್ರಂಥಿಕತಗರ, ದೇವದಾರು, ಮೆಣಸು, ಜೇನುತುಪ್ಪ, ವಿಡಂಗ, ದ್ರಾಕ್ಷಿ, ಎರಡು ವಿಧದ ಒಂದೆಲಗ ಇವುಗಳನ್ನು ಸೇರಿಸಿ ತಯಾರಿಸಿದ ಘೃತವನ್ನು ಬರೀ ಅನ್ನ ವನ್ನೇ ತಿನ್ನುವವನಿಗೂ ಪಾನಮಾಡಿಸಿದರೆ ಮಗುವಿಗೆ ಆರೋಗ್ಯ, ಬಲ, ವರ್ಣ, ಮೇಧಾಶಕ್ತಿ, ಆಯುಸ್ಸುಗಳುಂಟಾಗುತ್ತವೆ ॥ ೭೩ ॥

ಮೂಲ—(ಸು।ಶಾ।ಅ।೧೦)—ಬಾಲರಸಾಯನಾನಿ—

ಸೌವರ್ಣಂ ಸುಕೃತಂ ಚೂರ್ಣಂ ಕುಷ್ಠಂ ಮಧು ಘೃತಂ ವಚಾ।
ಹೇಮಚೂರ್ಣಾನಿ ಕೈಡರ್ಯಃ ಶ್ವೇತಾ ದೂರ್ವಾಘೃತಂ ಮಧು ॥೭೪॥
ಮತ್ಸ್ಯಾಕ್ಷಕಃ ಶಙ್ಖಪುಷ್ಪೀ ಮಧುಸರ್ಪಿಃ ಸಕಾಂಚನಮ್ ।
ಅರ್ಕಪುಷ್ಪೀ ಮಧುಘೃತಂ ಚೂರ್ಣಿತಂ ಕನಕಂ ವಚಾ ॥೭೫॥
ಚತುರೋಽಭಿಹಿತಾಃ ಪ್ರಾಶಾಃ ಶ್ಲೋಕಾರ್ಧೇಷು ಚತುರ್ಷ್ವಪಿ ।
ಕುಮಾರಾಣಾಂ ವಪುರ್ಮೇಧಾ ಬಲಬುದ್ಧಿವಿವರ್ಧನಾಃ ॥೭೬॥
ವಚಾಯಷ್ಟ್ಯಾಹ್ವಸಿನ್ಧೂತ್ಥಪಥ್ಯಾನಾಗರದೀಪ್ಯಕೈಃ।
ಶುದ್ಧ್ಯತೇ ವಾಗ್ಘವಿರ್ಲೀಢೈಃ ಸಕುಷ್ಠಕಣಜೀರಕೈಃ ॥೭೭॥

(ಅ।ಹೃ।)—

ಬ್ರಾಹ್ಮೀಸಿದ್ಧಾರ್ಥಕವಚಾಸಾರಿವಾಕುಷ್ಠಸೈನ್ಧವೈಃ।
ಸಕಣೈಃ ಸಾಧಿತಂ ಪೀತಂ ವಾಙ್ಮೇಧಾಸ್ಮೃತಿಕೃದ್ಘೃತಮ್ ॥೭೮॥
ಆಯುಷ್ಯಂ ಪಾಪ್ಮರಕ್ಷೋಘ್ನಂ ಭೂತೋನ್ಮಾದನಿಬರ್ಹಣಮ್ ।
ವಚೇನ್ದುಲೇಖಾಮಣ್ಡೂಕೀಶಙ್ಖಪುಷ್ಪೀಶತಾವರೀ ॥೭೯॥
ಬ್ರಹ್ಮಸೋಮಾಮೃತಾಬ್ರಾಹ್ಮೀಃ ಕಲ್ಕೀಕೃತ್ಯ ಪಲಾಂಶಿಕಾಃ ॥
ಅಷ್ಟಾಙ್ಗಂ ವಿಪಚೇತ್ಸರ್ಪಿಃ ಪ್ರಸ್ಥಂ ಕ್ಷೀರಂ ಚತುರ್ಗುಣಮ್ ॥೮೦॥

ತತ್ಪೀತಂ ಧನ್ಯಮಾಯುಷ್ಯಂ ವಾಙ್ಮೇಧಾಸ್ಮೃತಿಬುದ್ಧಿಕೃತ್ ।
ಅಜಾಕ್ಷೀರಾಭಯಾವ್ಯೋಷಪಾಠೋಗ್ರಾಶಿಗ್ರುಸೈನ್ಧವೈಃ ॥೮೧॥
ಸಿದ್ಧಂ ಸಾರಸ್ವತಂ ಸರ್ಪಿರ್ವಾಙ್ಮೇಧಾಸ್ಮೃತಿಬುದ್ಧಿಕೃತ್ ।
ವಚಾಮೃತಾಶಠೀಪಥ್ಯಾ ಶಂಖಿನೀವೇಲ್ಲನಾಗರೈಃ ॥೮೨॥
ಅಪಾಮಾರ್ಗೇಣ ಚ ಘೃತಂ ಸಾಧಿತಂ ಪೂರ್ವವದ್ಗುಣೈಃ।

ದೀಪಿಕೆ—(ಸು। ಶಾ।ಅ। ೧೦)——ಬಾಲರಸಾಯನಗಳು—

೧. ನುಣುಪಾದ ಸುವರ್ಣದ ಪುಡಿ, ಚಂಗಲ್ಕೋಷ್ಠ, ಬಜೆ ಇವುಗಳ ಪುಡಿಯನ್ನು ತುಪ್ಪ, ಜೇನುತುಪ್ಪಗಳೊಡನೆ ಮಿಶ್ರಮಾಡಿರುವುದು. ೨. ಹೊನಗನ್ನೆ, ಗಿರಿಕರ್ಣಿಕೆ, ಚಿನ್ನದ ಪುಡಿ ಇವುಗಳಿಗೆ ತುಪ್ಪ, ಜೇನುತುಪ್ಪವನ್ನು ಸೇರಿಸಿದ್ದು ೩. ಕಾಕೋಳಿ, ಚಿನ್ನದ ಪುಡಿ, ಬಜೆ ಇವುಗಳಿಗೆ ತುಪ್ಪ, ಜೇನುತುಪ್ಪಗಳನ್ನು ಮಿಶ್ರಮಾಡಿದ್ದು ೪. ಚಿನ್ನದ ಪುಡಿ, ಕಿರಿಶಿವನಿ, ಬಿಳಿಗಿರಿಕರ್ಣಿಕೆ, ಬಿಳಿಗರಿಕೆ ಇವುಗಳನ್ನು ಪುಡಿಮಾಡಿ ತುಪ್ಪ, ಜೇನುತುಪ್ಪಗಳೊಡನೆ ಮಿಶ್ರಮಾಡಿದ್ದು ; ಈ ನಾಲ್ಕು ಯೋಗಗಳಲ್ಲೊಂದನ್ನು ಒಂದು ವರ್ಷದವರೆಗಿರುವ ಮಕ್ಕಳಿಗೆ ತಿನ್ನಿಸುತ್ತಾ ಬಂದರೆ ಶರೀರ, ಬುದ್ಧಿ, ಶಕ್ತಿಗಳು ಹೆಚ್ಚುತ್ತವೆ. ಬಜೆ, ಅತಿಮಧುರ, ಸೈಂಧವ, ಅಣಿಲೆಶಿಪ್ಪೆ, ಶುಂಠಿ, ಪಾದಕ್ಕಿ, ಚಂಗಲ್‌ಕೋಷ್ಠ, ಹಿಪ್ಪಲಿ, ಜೀರಿಗೆಗಳನ್ನು ಮಿಶ್ರಮಾಡಿ ನುಣ್ಣಗೆ ಪುಡಿಮಾಡಿಟ್ಟುಕೊಂಡು ನಿತ್ಯವೂ ತುಪ್ಪದಲ್ಲಿ ಸೇರಿಸಿ ತಿನ್ನುತ್ತಾ ಬಂದರೆ ವಾಕ್ಶುದ್ಧಿಯುಂಟಾಗುತ್ತದೆ. ಒಂದೆಲಗ, ಬಿಳಿಯಸಾಸಿವೆ, ಬಜೆ, ಸೊಗದೆಬೇರು, ಚಂಗಲ್ಕೋಷ್ಠ, ಸೈನ್ಧವಲವಣ, ಹಿಪ್ಪಲಿ ಇವುಗಳನ್ನು ಮಿಶ್ರಮಾಡಿ ತಯಾರಿಸಿದ ಘೃತವನ್ನು ಪಾನಮಾಡಿದರೆ ಸ್ಫುಟವಾದ ಮಾತು, ಬುದ್ಧಿಶಕ್ತಿ, ಜ್ಞಾಪಕಶಕ್ತಿ, ಆಯುಸ್ಸು ಇವುಗಳು ಹೆಚ್ಚುತ್ತವೆ. ಆಯುಃಪ್ರದವು, ಪಾಪ, ಕ್ರಿಮಿ, ಭೂತಾವೇಶ, ಹುಚ್ಚು ಮೊದಲಾದ ರೋಗಗಳು ನಿವಾರಿಸಲ್ಪಡುತ್ತವೆ. ಬಜೆ, ಬಾವನ್ತಿಬೀಜ, ದೊಡ್ಡ ಒಂದೆಲಗ, ಬಿಳಿ ಹುವ್ವು ಬಿಡುವ ವಿಷ್ಣುಕ್ರಾನ್ತಿ, ಆಷಾಢಿ, ಸೋಮಲತೆ, ಅಮೃತಬಳ್ಳಿ ಇವು ಬಗೆಯೊಂದಕ್ಕೆ ಒಂದು ಪಲದ ಮೇರಿಗೆ ಸೇರಿಸಿ ಕಲ್ಕಮಾಡಿ ಒಂದು ದಪ್ಪ ಕಲಾಯಿ ಮಾಡಿದ ಪಾತ್ರೆಯೊಳಕ್ಕೆ ಹಾಕಿ ತೂಕದ ಒಂದು ಪ್ರಸ್ಥದಷ್ಟು ಹಸುವಿನ ತುಪ್ಪ ನಾಲ್ಕು ಪ್ರಸ್ಥ ಹಸುವಿನ ಹಾಲು ಇವುಗಳನ್ನು ಸೇರಿಸಿ ತಯಾರಿಸಿದ ಘೃತವು ಅಷ್ಟಾಂಗಘೃತವೆನಿಸಿಕೊಳ್ಳುತ್ತದೆ. ಪ್ರತಿನಿತ್ಯವೂ ಬಾಲಕರು ಈ ಘೃತವನ್ನು ಸೇವಿಸುತ್ತಾ ಬಂದರೆ ಇಷ್ಟಾರ್ಥಸಿದ್ಧಿಯಾಗಿ ರೋಗ ನಿವಾರಣೆಯಾಗಿ, ದೀರ್ಘಾಯುಗಳಾಗಿ ರೋಗವಿಲ್ಲದೆ, ಬುದ್ಧಿಶಕ್ತಿ ಜ್ಞಾನ ಶಕ್ತಿಗಳು ಹೆಚ್ಚುತ್ತವೆ. ಅಣಿಲೆಶಿಪ್ಪೆ, ತ್ರಿಕಟು, ಬಜೆ, ಅಗಲುಶುಂಠಿ, ನುಗ್ಗೆತೊಗಟೆ, ಸೈನ್ಧವಲವಣ, ಆಡಿನ ಹಾಲು, ಹಸುವಿನ ತುಪ್ಪ ಇವುಗಳಿಂದ ತಯಾರಿಸಿದ ಘೃತವನ್ನುಪಯೋಗಿಸುತ್ತಾ ಬಂದರೆ ಮಾತನಾಡುವ ಶಕ್ತಿ, ಬುದ್ಧಿ, ಸ್ಮೃತಿಗಳು ಹೆಚ್ಚುತ್ತವೆ. ಇದೇ ರೀತಿಯಾಗಿ ಅಣಿಲೆಶಿಪ್ಪೆ, ತ್ರಿಕಟು, ಅಗಳುಶುಂಠಿ, ಬಜೆ, ನುಗ್ಗೆ ತೊಗಟೆಗಳನ್ನು ಸೇರಿಸಿ ತಯಾರಿಸಿದರೆ ಸಾರಸ್ವತಘೃತವೆನ್ನುತ್ತಾರೆ. ಇದರ ಪ್ರಯೋಗದಿಂದ ಮಕ್ಕಳಿಗೆ ವಾಕ್ಕು, ಮೇಧಾಶಕ್ತಿಗಳು ಹೆಚ್ಚಾಗುತ್ತವೆ.

ಬಜೆ, ಅಮೃತವಳ್ಳಿ, ಅಗುಳುಶುಂಠಿ, ಅಣಿಲೆಶಿಪ್ಪೆ, ಗಿರಿಕರ್ಣಿಕೆ, ವಿಡಂಗ, ಶುಂಠಿ, ಉತ್ತರಣೆಗಳನ್ನು ಸೇರಿಸಿ ತಯಾರಿಸಿದ ಘೃತದ ಸೇವನೆಯಿಂದ ಸಾರಸ್ವತಘೃತದ ಸೇವನೆಯಿಂದ ದೊರೆಯುವ ಫಲವೇ ಉಂಟಾಗುತ್ತದೆ.

ದ್ವಿತೀಯೋಽಧ್ಯಾಯಃ

ಬಾಲರೋಗಾಸ್ತತ್ಪ್ರತಿಷೇಧಾಶ್ಚ

ಮೂಲ—(ಸು।ಶಾ।ಅ।೧೦)—ನಿದಾನಮ್—

ಧಾತ್ರ್ಯಾಸ್ತು ಗುರುಭಿರ್ಭೋಜ್ಯೈರ್ವಿಷಮೈರ್ದೋಷಲೈಸ್ತಥಾ ॥೧॥
ದೋಷಾ ದೇಹೇ ಪ್ರಕುಪ್ಯನ್ತಿ ತತಸ್ತನ್ಯಂ ಪ್ರದುಷ್ಯತಿ ।
ಮಿಥ್ಯಾಹಾರವಿಹಾರಿಣ್ಯಾ ದುಷ್ಟಾ ವಾತಾದಯಃ ಸ್ತ್ರಿಯಾಃ ॥೨॥
ದೂಷಯನ್ತಿ ಪಯಸ್ತೇನ ಜಾಯನ್ತೇ ವ್ಯಾಧಯಶ್ಶಿಶೋಃ।

(ಅ।ಹೃ।ಉ।ಅ।೨)—
ವಿರುದ್ಧಾಹಾರಭುಕ್ತಾಯಾ ಕ್ಷುಧಿತಾಯಾ ವಿಚೇತಸಃ ॥೩॥
ಪ್ರದುಷ್ಟಧಾತೋರ್ಗರ್ಭಿಣ್ಯಾಃ ಸ್ತನ್ಯಂ ರೋಗಕರಂ ಶಿಶೋಃ ।

(ಸು।ಶಾ।ಅ।೧೦)—
ನ ಚ ಕ್ಷುಧಿತಶೋಕಾರ್ತಶ್ರಾನ್ತಪ್ರದುಷ್ಟಧಾತುಗರ್ಭಿಣೀಜ್ವರಿತಾತಿಕ್ಷೀಣಾತಿಸ್ಥೂಲವಿದಗ್ಧಭಕ್ಷ್ಯವಿರುದ್ಧಾಹಾರತರ್ಪಿತಾಯಾಃ ಸ್ತನ್ಯಂ ಪಾಯಯೇತ'।ನಾಜೀರ್ಣೌಷಧಂ ಚ ಬಾಲಂ ದೋಷೌಷಧಮಲಾನಾಂ ತೀವ್ರವೇಗೋತ್ಪತ್ತಿಭಯಾತ್ ॥೪॥

೨ನೆಯ ಅಧ್ಯಾಯ

ಬಾಲರೋಗಗಳು ಮತ್ತು ಅವುಗಳ ಚಿಕಿತ್ಸೆ

(ಸು।ಶಾ।ಅ।೧೦)—ರೋಗೋತ್ಪತ್ತಿಗೆ ಕಾರಣಗಳು—

ಧಾತ್ರಿಯು ಗುರುವಾದ ವಿಷಮವಾದ ಮತ್ತು ದೋಷಕರವಾದ ಆಹಾರವನ್ನು ಸೇವಿಸಿದರೆ ದೋಷಗಳು ಪ್ರಕೋಪವಾಗಿ ಹಾಲನ್ನು ಕೆಡಿಸುತ್ತವೆ. ಮಿಥ್ಯಾಹಾರ ವಿಹಾರಗಳನ್ನು ಸೇವಿಸುವ ಸ್ತ್ರೀಯರ ದೇಹದಲ್ಲಿ ವಾತಾದಿ ದೋಷಗಳು ಕೆಟ್ಟು ಹಾಲನ್ನು ಕೆಡಿಸುತ್ತವೆ. ಆ ಹಾಲನ್ನು ಕುಡಿದರೆ ಮಕ್ಕಳಿಗೆ ರೋಗಗಳುಂಟಾಗುತ್ತವೆ ॥೧-೨॥

(ಅ।ಹೃ।)—

ವಿರುದ್ಧಾಹಾರಗಳನ್ನು ತಿನ್ನುವ, ಹಸಿದಿರುವ, ಮನಸ್ಸು ಬದಲಾಗಿರುವ, ಧಾತುಗಳು ಕೆಟ್ಟಿರುವ ಸ್ತ್ರೀಯರ ಮತ್ತು ಗರ್ಭಿಣಿಯರ ಸ್ತನ್ಯವನ್ನು ಮಕ್ಕಳು ಪಾನಮಾಡಿದರೆ ರೋಗ ಬರುತ್ತದೆ ॥ ೩ ॥

(ಸು।ಶಾ।ಅ।೧೦)—

ಹಸಿದಿರುವ, ವ್ಯಸನವುಳ್ಳ, ಆಯಾಸಪಟ್ಟಿರುವ, ಧಾತುಗಳು ಕೆಟ್ಟಿರುವ ಗರ್ಭಿಣಿಯು, ಜ್ವರಪೀಡಿತಳ, ಅತಿಕೃಶಳ, ಅತಿ ಸ್ಥೂಲಳಾದವಳ, ವಿರುದ್ಧಾಹಾರ ವನ್ನೂ, ಅರ್ಧಬೆಂದ ಭಕ್ಷ್ಯಗಳನ್ನೂ ತಿಂದು ತೃಪ್ತಳಾಗಿರುವವಳ ಹಾಲನ್ನು ಮಕ್ಕಳಿಗೆ ಕುಡಿಸಬಾರದು. ಮಕ್ಕಳಿಗೆ ಕುಡಿಸಿದ ಔಷಧವು ಜೀರ್ಣಿಸದಿರುವಾಗ ಹಾಲನ್ನು ಕುಡಿಸಬಾರದು. ಏಕೆಂದರೆ ಅವರ ದೇಹದಲ್ಲಿ ದೋಷಗಳೂ ಔಷಧವೂ ಮಲಗಳೂ ತೀವ್ರವಾದ ವೇಗವನ್ನುಂಟುಮಾಡಿ ಅಪಾಯವನ್ನುಂಟು ಮಾಡುತ್ತವೆ ॥೪॥

ಮೂಲ--(ಸು।ಶಾ।ಅ।೧೦)—ಸ್ತನ್ಯಪರೀಕ್ಷಾ ಶುದ್ಧಕ್ಷೀರಲಕ್ಷಣಂ ಚ—

ಅಥ ಧಾತ್ರ್ಯಾಃ ಸ್ತನ್ಯಮಪ್ಸು ಪರೀಕ್ಷೇತ । ತಚ್ಚೇಚ್ಛೀತಲಮಮಲಂ ತನು-ಶಙ್ಖಾವಭಾಸಮಪ್ಸು ನ್ಯಸ್ತಮೇಕೀಭಾವಂ ಗಚ್ಛತ್ಯಫೇನಿಲಮತನ್ತುಮನ್ನೋತ್ಪ್ಲ-ವತೇ ನ ಸೀದತಿ ವಾ ತಚ್ಛುದ್ಧಮಿತಿ ವಿದ್ಯಾತ್ । ತೇನ ಕುಮಾರಸ್ಯಾರೋಗ್ಯಂ ಶರೀರೋಪಚಯೋ ಬಲವೃದ್ಧಿಶ್ಚ ಭವತಿ ॥೫॥

(ಅ।ಹೃ।ಉ।ಅ।೨)—

ಯದದ್ಭಿರೇಕತಾಂ ಯಾತಿ ನ ಚ ದೋಷೈರಧಿಷ್ಠಿತಮ್ ।
ತದ್ವಿಶುದ್ಧಂ ಪಯಃ .... ॥೬॥

ದೀಪಿಕೆ—ಸ್ತನ್ಯಪರೀಕ್ಷೆ ಮತ್ತು ಶುದ್ಧಕ್ಷೀರಲಕ್ಷಣಗಳು—

(ಸು।ಶಾ।ಅ।೧೦)—

ಧಾತ್ರಿಯು ಹಾಲನ್ನು ನೀರಿಗೆ ಸುರಿದರೆ ಕಾಣುವ ಲಕ್ಷಣಗಳ್ಯಾವುವೆಂದರೆ:— ತಣ್ಣಗೆ, ಕೊಳೆಯಿಲ್ಲದೆ, ದ್ರವವಾಗಿ ಶಙ್ಖದಂತೆ ಬಿಳುಪಾಗಿದ್ದು ನೀರಿಗೆ ಹಾಕಿದರೆ ಕೂಡಲೇ ಬೆರೆದುಕೊಂಡು ನೊರೆಯಿಲ್ಲದೆ ಧಾರವನ್ನು ಬಿಡದೆ ನೀರಿನ ಮೇಲೆ ತೇಲದೆಯೂ ನೀರಿನಲ್ಲಿ ಮುಳುಗಿಕೊಳ್ಳದೆಯೂ ಇದ್ದರೆ ಶುದ್ಧವಾದದ್ದೆಂದು ತಿಳಿಯಬೇಕು. ಇಂತಹ ಹಾಲನ್ನು ಕುಡಿಸಿದರೆ ಮಕ್ಕಳಿಗೆ ಆರೋಗ್ಯವೂ ಶರೀರವೃದ್ಧಿಯೂ ಉಂಟಾಗುತ್ತದೆ ॥೫॥

(ಅ।ಹೃ।ಉ।ಅ।೨)—

ಹಾಲನ್ನು ನೀರಿಗೆ ಸೇರಿಸಿದರೆ ಎರಡೂ ಸೇರಿಕೊಂಡು ದೋಷವಿಲ್ಲದಿದ್ದರೆ ಆ ಹಾಲು ಶುದ್ಧವಾದದ್ದೆಂದು ತಿಳಿಯಬೇಕು ॥೬॥

ಮೂಲ—(ಕಾ।ಸಂ।ಅ।೨೦)—ಪ್ರಕೃತಯಃ—

ಯದನ್ನಪಾನಂ ಪ್ರಾಯೇಣ ಗರ್ಭಿಣೀ ಸ್ತ್ರೀ ನಿಷೇವತೇ ।
ರಸೋ ನಿವರ್ತತೇ ತಾದೃಕ್ ತ್ರಿಧಾ ಚಾಸ್ಯಾಃ ಪ್ರವರ್ತತೇ ॥೭॥
ಮಾತೃಪುಷ್ಟ್ಯರ್ಥಮೇಕಾಂಶೋ ದ್ವಿತೀಯೋ ಗರ್ಭಪುಷ್ಟಯೇ ।
ತೃತೀಯಃ ಸ್ತನಪುಷ್ಟ್ಯರ್ಥಂ ನಾರ್ಯಾ ಗರ್ಭಸ್ತು ಪುಷ್ಯತಿ ॥೮॥

ತಾದೃಕ್ಪ್ರಕೃತಯಸ್ತಸ್ಮಾದ್ಗರ್ಭಾತ್ಪ್ರಭೃತಿ ದೇಹಿನಃ।
ವಾತಪಿತ್ತಕಫಸ್ತೂರ್ಣಾಸ್ತಿಸ್ರಃ ಪ್ರಕೃತಯಶ್ಚ ತಾಃ ॥೯॥
ವಾತಿಕಾಃ ಪೈತ್ತಿಕಾಃ ಕೇಚಿತ್ಕಫಿನಶ್ಚೈವ ದೇಹಿನಃ।
ದ್ವಂದ್ವಪ್ರಕೃತಯಶ್ಚಾನ್ಯೇ ಸಮಸ್ತೂರ್ಣಾಸ್ತಥಾಪರೇ ॥೧೦॥
ಅರೋಗಾಸ್ತು ಸಮಸ್ತೂರ್ಣಾ ವಾತಿಕಾದ್ಯಾಸ್ಸದಾತುರಾಃ।
ಏತಾಃ ಪ್ರಕೃತಯಶ್ಪ್ರೋಕ್ತಾಃ ದೇಹಿನಾಂ ವೃದ್ಧಜೀವಕ ॥೧೧॥
ಏತಾ ಆಶ್ರಿತ್ಯ ತತ್ವಜ್ಞೋ ಭೇಷಜಾನ್ಯುಪಕಲ್ಪಯೇತ್।
ಯ ಏತಾ ವೇದ ತತ್ವೇನ ನ ಸ ಮುಹ್ಯತಿ ಭೇಷಜೇ ॥೧೨॥

ದೀಪಿಕೆ—(ಕಾ।ಸಂ।ಅ।೨೦)—ಪ್ರಕೃತಿಗಳು—

ಗರ್ಭಿಣಿಯು ಸೇವಿಸುವ ಅನ್ನಪಾನಗಳಿಗನುಸಾರವಾಗಿಯೇ ರಸಧಾತುವಿನ ಅಂಶಗಳುಂಟಾಗುತ್ತವೆ. ಈ ರೀತಿಯಲ್ಲಿ ಉತ್ಪನ್ನವಾದ ರಸಧಾತುವಿನಿಂದ ಮಾತೃಪುಷ್ಟಿಯೂ ಗರ್ಭಪುಷ್ಟಿಯೂ ಸ್ತನ್ಯಪುಷ್ಟಿಯೂ ಉಂಟಾಗಿ ಗರ್ಭಪೋಷಣೆಯಾಗಬೇಕು. ಆದಕಾರಣ ಗರ್ಭಧಾರಣೆಯಾದ ಕಾಲದಿಂದಲೂ ಪ್ರಾಣಿಗಳು ವಾತ, ಪಿತ್ತ, ಕಫ, ದ್ವಂದ್ವ, ಸಮಪ್ರಕೃತಿಯುವರಾಗಿ ಜನಿಸುತ್ತಾರೆ. ಸಮಪ್ರಕೃತಿಯುವರು ರೋಗವಿಲ್ಲದೆಯೂ ವಾತಾದಿಪ್ರಕೃತಿಯುವರು ನಿತ್ಯರೋಗಿಗಳಾಗಿಯೂ ಇರುತ್ತಾರೆ. ಎಲೈ ವೃದ್ಧಜೀವಕನೆಂಬ ಶಿಷ್ಯನೇ! ಈ ರೀತಿಯಾಗಿ ಪ್ರಕೃತಿಭೇದಗಳನ್ನು ತಿಳಿಸಿರುತ್ತೇನೆ. ಬುದ್ಧಿವಂತನಾದ ವೈದ್ಯನು ಆಯಾಯ ಪ್ರಕೃತಿಯುವರಿಗೆ ತಕ್ಕಂತೆ ಔಷಧಗಳನ್ನು ತಯಾರಿಸಿ ಪ್ರಯೋಗ ಮಾಡಬೇಕು. ಈ ವಿಚಾರವನ್ನು ತಿಳಿದವನು ಚಿಕಿತ್ಸೆಮಾಡುವಾಗ ಮೋಸ ಹೋಗುವುದಿಲ್ಲ ॥೭–೧೨॥

ಮೂಲ—(ಅ।ಹೃ।ಉ।ಅ।೨)—ವಾತಾದಿದೋಷದೂಷಿತಕ್ಷೀರಲಕ್ಷಣಮ್—

ಪಂಚೈವ ಕ್ಷೀರದೋಷಾಶ್ಚ ಸ್ತ್ರೀಣಾಂ ಚ ಕಥಿತಾ ಬುಧೈಃ।
ಫೇನಕ್ಷೀರೋಷ್ಣಕ್ಷೀರಾಮ್ಲಕ್ಷೀರಾ ಚೈವ ತಥಾಪರಾ ॥೧೩॥
ಮೃದುಕ್ಷೀರಾ ಭವೇತ್ಸಂಖ್ಯಾ ಪಂಚಾನ್ಯಾ ದೋಷಕಾರಕಾಃ।

ವಾತಾದಿದೋಷದುಷ್ಟಕ್ಷೀರಲಕ್ಷಣಮ್—

ಸ್ತನ್ಯಪಾನೇ ಶಿಶೋರ್ವಾತಾದ್ದುಷ್ಟಂ ತು ಪ್ಲವತೇಽಮ್ಭಸಿ।
ಕಷಾಯಂ ಫೇನಿಲಂ ರೂಕ್ಷಂ ವರ್ಚೋಮೂತ್ರವಿಬನ್ಧಕೃತ್ ॥೧೪॥

ಬಾಲಾತಙ್ಕಹಾರೀ—

ವಾತದುಷ್ಟಂ ಶಿಶುಃ ಸ್ತನ್ಯಂ ಪಿಬನ್ವಾತಗದಾತುರಃ।
ಕ್ಷಾಮಸ್ವರಃ ಕೃಶಾಙ್ಗಃ ಸ್ಯಾದ್ಬದ್ಧವಿಣ್ಮೂತ್ರಮಾರುತಃ ॥೧೫॥
ಪಿತ್ತಾದುಷ್ಣಾಮ್ಲಕಟುಕಂ ಪೀತರಾಜ್ಯಪ್ಸು ದಾಹಕೃತ್।
ಸ್ವಿನ್ನೋ ಭಿನ್ನಮಲೋ ಬಾಲಃ ಕಾಮಲಾಪಿತ್ತರೋಗವಾನ್ ॥೧೬॥
ತೃಷ್ಣಾಲುರುಷ್ಣಸರ್ವಾಙ್ಗಃ ಪಿತ್ತದುಷ್ಟಸ್ತನಂ ಪಿಬನ್।
ಕಫಾತ್ಸಲವಣಂ ಸಾನ್ದ್ರಂ ಜಲೇ ಮಜ್ಜತಿ ಪಿಚ್ಛಿಲಮ್ ॥೧೭॥
ಕಫದುಷ್ಟಂ ಪಿಬನ್ ಕ್ಷೀರಂ ಲಾಲಾಳುಃ ಶ್ಲೇಷ್ಮರೋಗವಾನ್।
ನಿದ್ರಾರ್ದಿತೋ ಜಡಃ ಶೂನಃ ಶುಕ್ಲಾಕ್ಷಃ ಛರ್ದನಶ್ಶಿಶುಃ ॥೧೮॥

ದ್ವನ್ದ್ವದೋಷತ್ರಿದೋಷೈರ್ದುಷ್ಟಸ್ತನ್ಯಲಕ್ಷಣಾನಿ :—
ಸಂಸೃಷ್ಟಲಿಂಗಂ ಸಂಸರ್ಗಾತ್ತ್ರಿಲಿಂಗಂ ಸಾನ್ನಿಪಾತಿಕಮ್ ।
ಯಥಾ ಸ್ವಲಿಂಗಾಂಸ್ತದ್ವ್ಯಾಧೀನ್ ಜನಯನ್ತ್ಯುಪಯೋಜಿತಮ್ ॥೧೯॥

ದೀಪಿಕೆ--(ಅ|ಹೃ|ಉ|ಅ|೨)--ವಾತಾದಿದೋಷಗಳಿಂದ ಕೆಡಿಸಲ್ಪಟ್ಟ ಸ್ತನ್ಯದ (ಹಾಲಿನ) ಲಕ್ಷಣ--

ವಾತದೋಷದಿಂದ ಕೆಡಿಸಲ್ಪಟ್ಟ ಹಾಲನ್ನು ಮಗುವು ಕುಡಿದರೆ ವಾತರೋಗ ದಿಂದ ಪೀಡಿತನಾಗಿ ಧ್ವನಿ ಕುಗ್ಗಿ ದೇಹ ಕ್ಷೀಣವಾಗಿ ಮಲಮೂತ್ರ ಅಪಾನವಾಯು ಗಳ ತಡೆಯುಂಟಾಗುತ್ತದೆ. ಪಿತ್ತದುಷ್ಟವಾದ ಹಾಲು ಬಿಸಿಯಾಗಿ ಖಾರವಾಗಿ ಹುಳಿಯಾಗಿರುತ್ತದೆ. ನೀರಿನಲ್ಲಿ ಹಾಕಿದರೆ ಹಳದಿವರ್ಣದ ದಾರದಂತೆ ಇಳಿಯು ತ್ತದೆ. ಇದನ್ನು ಕುಡಿದ ಮಗುವಿಗೆ ಮೈಯ್ಯುರಿ, ಬೆವರು, ಒಡಕಲು ಮಲ, ಸ್ರಾವ ಇವುಗಳುಂಟಾಗುತ್ತವೆ; ಪಿತ್ತರೋಗಪೀಡಿತನಾಗಿ ಬಾಯಾರಿಕೆ ಮತ್ತು ಮೈಬಿಸಿಯುಳ್ಳವನಾಗಿ ಇರುತ್ತಾನೆ; ಕಫದುಷ್ಟವಾದ ಹಾಲು ಉಪ್ಪಾಗಿಯೂ, ದಟ್ಟವಾಗಿಯೂ, ಗರಣೆ ಗರಣೆಯಾಗಿಯೂ ನೀರಿನಲ್ಲಿ ಹಾಕಿದರೆ ಮುಳು ಗುತ್ತಲೂ ಇರುತ್ತದೆ. ಇದನ್ನು ಕುಡಿದ ಮಗುವು ಜೊಲ್ಲನ್ನು ಸುರಿಸುತ್ತಾ ಕಫರೋಗಪೀಡಿತನಾಗಿ ಸದಾ ನಿದ್ದೆಮಾಡುತ್ತಲೂ ಜಡನಾಗಿ ಮೈ ಊದಿಕೊಂಡು ಕಣ್ಣು ಬಿಳಿಚಿಕೊಂಡು ವಮನಮಾಡುತ್ತಲೂ ಇರುತ್ತದೆ. ಎರಡೆರಡು ಮತ್ತು ಮೂರುಮೂರು ದೋಷಗಳಿಂದ ಕೆಟ್ಟಿರುವ ಹಾಲನ್ನು ಕುಡಿದ ಮಗುವು ಎರಡೆರಡು ಮತ್ತು ಮೂರುಮೂರು ದೋಷಗಳ ಲಕ್ಷಣಗಳುಳ್ಳ ರೋಗಗಳಿಂದ ಪೀಡಿಸಲ್ಪಡು ತ್ತದೆ ॥೧೩-೧೯॥

ಮೂಲ—(ಅ|ಹೃ|ಉ|ಅ|೨)—ಬಾಲಾನಾಂ ರೋಗಜ್ಞಾನೋಪಾಯಾಃ—
ಶಿಶೋಸ್ತೀವ್ರಾಮತೀವ್ರಾಂ ಚ ರೋದನಾಲ್ಲಕ್ಷಯೇದ್ರುಜಮ್ ।
ಸೋಽಯಂ ಸ್ಪೃಶೇದ್ಭೃಶಂ ದೇಶಂ ಯತ್ರ ಚ ಸ್ಪರ್ಶನಾಕ್ಷಮಃ ॥೨೦॥
ತತ್ರ ವಿದ್ಯಾದ್ರುಜಂ ಮೂರ್ಧ್ನಿ ರುಜಂ ಚಾಕ್ಷಿನಿಮೀಲನಾತ್ ।
ಹೃದಿ ಜಿಹ್ವೌಷ್ಠದಶನಶ್ವಾಸಮುಷ್ಟಿನಿಪೀಡಿತೈಃ ॥೨೧॥
ಕೋಷ್ಠೇ ವಿಬನ್ಧವಮಥುಸ್ತನದಂಶಾನ್ತ್ರಕೂಜನೈಃ ।
ಆಧ್ಮಾನಪೃಷ್ಠನಮನಜಠರೋನ್ನಮನೈರಪಿ ॥೨೨॥
ಬಸ್ತೌ ಗುಹ್ಯೇ ಚ ವಿಣ್ಮೂತ್ರಸಙ್ಗೋತ್ರಾಸದಿಗೀಕ್ಷಣೈಃ ।
ಸ್ರೋತಾಂಸ್ಯಂಗಾನಿ ಸನ್ಧೀಂಶ್ಚ ಪಶ್ಯೇದ್ಯತ್ನಾನ್ಮುಹುರ್ಮುಹುಃ ॥೨೩॥

(ಸು|ಶಾ|ಅ|೧೦)—
ಅಙ್ಗಪ್ರತ್ಯಂಗದೇಶೇ ತು ರುಜಾ ಯತ್ರಾಸ್ಯ ಜಾಯತೇ ।
ಮುಹುರ್ಮುಹುಃ ಸ್ಪೃಶತಿ ತಂ ಸ್ಪೃಶ್ಯಮಾನೇ ಚ ರೋದಿತಿ ॥೨೪॥
ನಿಮೀಲಿತಾಕ್ಷೋ ಮೂರ್ಧಸ್ಥೇ ಶಿರೋ ರೋಗೇ ನ ಧಾರಯೇತ್ ।
ಬಸ್ತಿಸ್ಥೇ ಮೂತ್ರಸಂಗಾರ್ತೋ ರುಜಾ ತೃಷ್ಯತಿ ಮೂರ್ಛತಿ ॥೨೫॥
ವಿಣ್ಮೂತ್ರಸಂಗವೈವರ್ಣ್ಯಛರ್ದ್ಯಾಧ್ಮಾನಾನ್ತ್ರಕೂಜನೈಃ ।
ಕೋಷ್ಠೇ ದೋಷಾನ್ ವಿಜಾನೀಯಾತ್ ಸರ್ವತ್ರಸ್ಥಾಂಶ್ಚ ರೋದನೈಃ ॥೨೬॥

(ಕಾ|ಸಂ|ಅ|೨೫)--

ಬಾಲಕಾನಾಮವಚಸಾಂ ವಿವಿಧಾ ದೇಹವೇದನಾಃ ।
ಪ್ರಾದುರ್ಭೂತಾಃ ಕಥಂ ವೈದ್ಯೋ ಜಾನೀಯಾಲ್ಲಕ್ಷಣಾರ್ಥತಃ ॥೨೭॥

ಇತಿ ಪೃಷ್ಟೋ ಮಹಾಭಾಗಃ ಕಶ್ಯಪೋ ಲೋಕವೃದ್ಧಪಃ ।
ಪ್ರೋವಾಚ ದಾರುವಾಹಾಯ ಕಾರಣೈರ್ಬಾಹುದೇಹಜಾಃ ॥೨೮॥

ಭೃಶಂ ಶಿರಃ ಸ್ಪನ್ದಯತಿ ನಿಮೀಲಯತಿ ಚಕ್ಷುಷೀ ।
ಅವಕೂಜತ್ಯರತಿಮಾನಸ್ವಪ್ನಶ್ಚ ಶಿರೋರುಜಿ ॥೨೯॥

ಕರ್ಣೌ ಸ್ಪೃಶತಿ ಹಸ್ತಾಭ್ಯಾಂ ಶಿರೋ ಭ್ರಾಮಯತೇ ಭೃಶಮ್ ।
ಅರತ್ಯರೋಚಕಾಸ್ವಪ್ನೈರ್ಜಾನೀಯಾತ್ಕರ್ಣವೇದನಾಮ್ ॥೩೦॥

ಲಾಲಾಸ್ರವಣಮತ್ಯರ್ಥಂ ಸ್ತನದ್ವೇಷಾರತಿರ್ವ್ಯಥಾಃ ।
ಪೀತಮುದ್ಗಿರತಿ ಕ್ಷೀರಂ ನಾಸಾಶ್ವಾಸೀ ಮುಖಾಮಯೇ ॥೩೧॥

ಪೀತಮುದ್ಗಿರತಿ ಸ್ತನ್ಯಂ ವಿಷ್ಟಬ್ಧಿ ಶ್ಲೇಷ್ಮಸೇವನಮ್ ।
ಈಷಜ್ಜ್ವರೋಽರುಚಿಗ್ಲಾನಿಃ ಕಣ್ಠವೇದನಯಾರ್ದಿತೇ ॥೩೨॥

ಲಾಲಾಸ್ರಾವೋಽರುಚಿಗ್ಲಾನಿಃ ಕಪೋಲೇ ಶ್ವಯಥುರ್ವ್ಯಥಾ ।
ಮುಖಸ್ಯ ವಿವೃತತ್ವಂ ಚ ಜಾನೀಯಾದಧಿಜಿಹ್ವಿಕಾಮ್ ॥೩೩॥

ಜ್ವರಾರುಚಿಮುಖಸ್ರಾವಾ ನಿಷ್ಠನೇಚ್ಛ ಗಳಗ್ರಹೇ ।
ಕಣ್ಡೂಕೇ ಶ್ವಯಥುಃ ಕಣ್ಠೇ ಜ್ವರಾರುಚಿಶಿರೋರುಜಃ ॥೩೪॥

ಮುಹುರ್ನಮಯತೇಽಂಗಾನಿ ಜೃಮ್ಭತೇ ಕಾಸತೇ ಮುಹುಃ ।
ಧಾತ್ರೀಮಾಲೀಯತೇಽಕಸ್ಮಾತ್ಸ್ತನ್ಯಂ ನಾತ್ಯಭಿನನ್ದತಿ ॥೩೫॥

ಪ್ರಸ್ರಾವೋಷ್ಣತ್ವವೈವರ್ಣ್ಯೇ ಲಲಾಟಸ್ಯಾತಿತಪ್ತತಾ ।
ಅರುಚಿಃ ಪಾದಯೋಃ ಶೈತ್ಯಂ ಜ್ವರೇ ಸ್ಯುಃ ಪೂರ್ವವೇದನಾಃ ॥೩೬॥

ದೇಹವೈವರ್ಣ್ಯಮರತಿರ್ಮುಖಗ್ಲಾನಿರನಿದ್ರತಾ ।
ವಾತಕರ್ಮನಿವೃತ್ತಿಶ್ಚೇತ್ಯತೀಸಾರಾಗ್ರವೇದನಾಃ ॥೩೭॥

ಸ್ತನ್ಯಂ ವ್ಯುದಸ್ಯತೇ ರೌತಿ ಚೋತ್ತಾನಶ್ಚಾವಭಜ್ಯತೇ ।
ಉದರಸ್ತಬ್ಧತಾ ಶೈತ್ಯಂ ಮುಖಸ್ವೇದಶ್ಚ ಶೂಲಿನಃ ॥೩೮॥

ಅನಿಮಿತ್ತಮಭೀಕ್ಷ್ಣಂ ಚ ಯಸ್ಯೋದ್ಗಾರಃ ಪ್ರವರ್ತತೇ ।
ನಿದ್ರಾಜೃಮ್ಭಾಪರೀತಸ್ಯ ಛರ್ದಿಸ್ತಸ್ಯೋಪಜಾಯತೇ ॥೩೯॥

ನಿಷ್ಠನತ್ಯುರಸಾತ್ಯುಷ್ಣಂ ಶ್ವಾಸಸ್ತಸ್ಯೋಪಜಾಯತೇ ।
ಅಕಸ್ಮಾನ್ಮಾರುತೋದ್ಗಾರಃ ಕೃಶೇ ಹಿಕ್ಕಾ ಪ್ರವರ್ತತೇ ॥೪೦॥

ಸ್ತನಂ ಪಿಬತಿ ಚಾತ್ಯರ್ಥಂ ನ ಚ ತೃಪ್ಯತಿ ರೋದಿತಿ ।
ಶುಷ್ಕೋಷ್ಠತಾಲುಸ್ತೋಯೇಪ್ಸುರ್ದುರ್ಬಲಸ್ತೃಷ್ಣಯಾರ್ದಿತಃ ॥೪೧॥

ವಿಶಾಲಸ್ತಬ್ಧನಯನಃ ಪರ್ವಭೇದಾರತಿಕ್ಲಮೀ ।
ಸಂರುದ್ಧಮೂತ್ರಾನಿಲವಿಟ್ಛೂರಾನಾಹವೇದನೀ ॥೪೨॥

ಅಕಸ್ಮಾದಟ್ಟಹಸನಮಪಸ್ಮಾರಾಯ ಕಲ್ಪತೇ ।
ಪ್ರಲಾಪಾರತಿವೈಚಿತ್ತ್ಯೈರುನ್ಮಾದಂ ಚೋಪಲಕ್ಷಯೇತ್ ॥೪೩॥

ರೋಮಹರ್ಷೋಽಙ್ಗಹರ್ಷಶ್ಚ ಮೂತ್ರಕಾಲೇ ಚ ವೇದನಾ ।
ಮೂತ್ರಕೃಚ್ಛ್ರೇ ದಶತ್ಯೋಷ್ಠೌ ಬಸ್ತಿಂ ಸ್ಪೃಶತಿ ಪಾಣಿನಾ ॥೪೪॥

ಗೌರವಂ ಬದ್ಧತಾ ಜಾಡ್ಯಮಕಸ್ಮಾನ್ಮೂತ್ರನಿರ್ಗಮಃ ।
ಪ್ರಮೇಹೇ ಮಕ್ಷಿಕಾಕ್ರಾನ್ತಂ ಮೂತ್ರಂ ಶ್ವೇತಂ ಘನಂ ತಥಾ ॥೪೫॥

ಬದ್ಧಪಕ್ವಪುರೀಷತ್ವಂ ಸರಕ್ತಂ ವಾ ಕೃಶಾತ್ಮನಃ ।
ಗುದನಿಷ್ಪೀಡನಂ ಕಂಡೂಸ್ತೋದಂ ಚಾರ್ಶಸಿ ಲಕ್ಷಯೇತ್ ॥೪೬॥

ಸಶರ್ಕರಾತಿಮೂತ್ರತ್ವಂ ಮೂತ್ರಕಾಲೇ ಚ ವೇದನಾ ।
ಪ್ರತತಂ ರೋದಿತಿ ಕ್ಷಾಮಸ್ತಂ ಬ್ರೂಯಾದಶ್ಮರೀಗದಮ್ ॥೪೭॥

ರಕ್ತಮಣ್ಡಲಕೋತ್ಪತ್ತಿಸ್ತೃಷ್ಣಾದಾಹೋ ಜ್ವರೋಽರತಿಃ ।
ಸ್ವಾದುಶೀತೋಪಶಾಯಿತ್ವಂ ವಿಸರ್ಪಸ್ಯಾಗ್ರವೇದನಾಃ ॥೪೮॥

ದಹ್ಯನ್ತೇಽಙ್ಗಾನಿ ಸೂಚ್ಯನ್ತೇ ಭಜ್ಯನ್ತೇ ನಿಷ್ಟನತ್ಯತಿ ।
ವಿಷೂಚಿಕಾಯಾಂ ಬಾಲಾನಾಂ ಹೃದಿ ಶೂಲಂ ಚ ವರ್ಧತೇ ॥೪೯॥

ಶಿರೋ ನ ಧಾರಯತಿ ಯೋ ಭಿದ್ಯತೇ ಜೃಮ್ಭತೇ ಮುಹುಃ ।
ಸ್ತನಂ ಪಿಬತಿ ನಾತ್ಯರ್ಥಂ ಗ್ರಥಿತಂ ಛರ್ದಯತ್ಯಪಿ ॥೫೦॥

ವಿಷಾದಾಧ್ಮಾನಾರುಚಿಭಿರ್ವಿದ್ಯಾದಲಸಕಂ ಶಿಶೋಃ ।
ವಿಷೂಚಿಕಾಲಸಕಯೋರ್ದುರ್ಜ್ಞಾನೇ ಲಕ್ಷಣೌಷಧೇ ॥೫೧॥

ದೃಷ್ಟಿವ್ಯಾಕುಲತಾತೋದಶೋಥಶೂಲಾಶ್ರುರಕ್ತತಾಃ ।
ಸುಪ್ತಸ್ಯ ಚೋಪಲಿಪ್ಯನ್ತೇ ಚಕ್ಷುಷೀ ಚಕ್ಷುರಾಮಯೇ ॥೫೨॥

ಘರ್ಷತ್ಯಙ್ಗಾನಿ ಶಯನೇ ರೋದಿತೀಚ್ಛತಿ ಮರ್ದನಮ್ ।
ಶುಷ್ಕಕಣ್ಡ್ವರ್ದಿತಂ ವಿದ್ಯಾತ್ ತತಶ್ಚಾರ್ದ್ರಾ ಪ್ರವರ್ತತೇ ॥೫೩॥

ಸುಖಾಯೇತೇ ಮೃದ್ಯಮಾನಂ ಮೃದ್ಯಮಾನಂ ಚ ಶೂಯತೇ ।
ಶೂನಂ ಸ್ರವತಿ ಸಸ್ಯೋಢಾ ? ಮಾರ್ದ್ರಾಯಾಂ ಶೂಲದಾಹವತ್ ॥೫೪॥

ಸ್ತೈಮಿತ್ಯಮರತಿರ್ನಿದ್ರಾ ಗಾತ್ರಪಾಣ್ಡುಕತಾರತಿಃ ।
ರಮಣಾಸನಶಯ್ಯಾದೀನ್ ಧಾತ್ರೀಂ ಚ ದ್ವೇಷ್ಟಿ ನಿತ್ಯಶಃ ॥೫೫॥

ಅಸ್ನಾತಃ ಸ್ನಾತರೂಪಶ್ಚ ಸ್ನಾತಶ್ಚಾಸ್ನಾತದರ್ಶನಃ ।
ಆಮಸ್ಯೈತಾನಿ ರೂಪಾಣಿ ವಿದ್ಯಾದ್ವೈದ್ಯೋ ಭವಿಷ್ಯತಃ ॥೫೬॥

ನಾಭ್ಯಾಂ ಸಮನ್ತತಃ ಶೋಥಃ ಶ್ವೇತಾಕ್ಷಿನಖವಕ್ತ್ರತಾ ।
ಪಾಣ್ಡುರೋಗೇಽಗ್ನಿಸಾದಶ್ಚ ಶ್ವಯಥುಶ್ಚಾಕ್ಷಿಕೂಟಯೋಃ ॥೫೭॥

ಪೀತಚಕ್ಷುರ್ನಖಮುಖವಿಣ್ಮೂತ್ರಃ ಕಾಮಲಾರ್ದಿತಃ ।
ಉಭಯತ್ರ ನಿರುತ್ಸಾಹೋ ನಷ್ಟಾಗ್ನೀ ರುಧಿರಸ್ಪೃಹಃ ॥೫೮॥

ಮೂರ್ಛಾಪ್ರಜಾಗರಚ್ಛರ್ದಿಧಾತ್ರೀದ್ವೇಷಾರತಿಭ್ರಮೈಃ ।
ವಿತ್ರಾಸೋದ್ವೇಗತೃಷ್ಣಾಭಿರ್ವಿದ್ಯಾದ್ಬಾಲೇ ಮದಾತ್ಯಯಮ್ ॥೫೯॥

ಮುಹುರ್ಮುರ್ಖೇನೋಚ್ಛ್ವಸಿತಿ ಪೀತ್ವಾ ಪೀತ್ವಾ ಸ್ತನಂ ತು ಯಃ।
ಸ್ರವತೋ ನಾಸಿಕೇ ಚಾಸ್ಯ ಲಲಾಟಂ ಚಾಭಿತಪ್ಯತೇ ॥೬೦॥
ಸ್ರೋತಾಂಸ್ಯಭೀಕ್ಷ್ಣಂ ಸ್ಪೃಶತಿ ಪೀನಸೇ ಕ್ಷೌತಿ ಕಾಸತೇ।
ಉರೋಘಾತೇ ತಥೈವ ಸ್ಯಾನ್ನಿಷ್ಟನತ್ಯುರಸಾಧಿಕಮ್ ॥೬೧॥
ಸ್ವಸ್ಥವೃತ್ತಿಪರೋ ಬಾಲೋ ನ ಶೇತೇ ತು ಯದಾ ನಿಶಿ।
ರಕ್ತಬಿನ್ದುಚಿತಾಙ್ಗಶ್ಚ ವಿದ್ಯಾತ್ತಂ ಜನ್ತುಕಾರ್ದಿತಮ್ ॥೬೨॥
ಯದಾ ತು ಲೀಲಯಾ ಧಾತ್ರೀ ಸುಖಿನೀ ಸರ್ವಭೋಗಿನೀ।
ಪಶ್ಯತ್ಯಭೀಕ್ಷ್ಣಂ ದುಃಸ್ವಪ್ನಂ ಸ್ವಯಂ ಕ್ಷೀರಂ ಪ್ರವರ್ತತೇ ॥೬೩॥
ಬಾಲೋ ವಿಸ್ಮರತೇ ಚಾಸ್ಯಾಃ ಸಹಸಾಙ್ಕಾತ್ಪತತ್ಯಪಿ।
ಅಸಜ್ಜನೇನ ಸಂಸರ್ಗಂ ಯಾತಿ ಸಂಭೋಜನಂ ತಥಾ ॥೬೪॥
ಮೃತಾಪತ್ಯವಿಕೀರ್ಣೀಭಿಃ ಪರವೃದ್ಧ್ಯಸಹಿಷ್ಣುಭಿಃ।
ಅಮಙ್ಗಳಾನಿ ಘೋರಾಣಿ ಪಶ್ಯತ್ಯಾಚರತೇಽಪಿ ಚ ॥೬೫॥
ಸೇವತೇ ವಿಪರೀತಾನಿ ಮೃತ್ಯುಂ ಚೋದಯತೇ ಶಿಶೋಃ।

ದೀಪಿಕೆ—(ಅ।ಹೃ।ಉ।ಅ। ೨)—ಅಜ್ಞರಾದ ಬಾಲಕರ ವ್ಯಾಧಿಸ್ವರೂಪವನ್ನು ತಿಳಿಯುವ ಉಪಾಯ—

ಮಕ್ಕಳು ಅಳುವುದರ ಹೆಚ್ಚು ಕಡಮೆಯ ಸ್ಥಿತಿಯಿಂದ ವ್ಯಾಧಿಯು ಚುರುಕಾಗಿದೆಯೆಂದೂ ಮಂದವಾಗಿದೆಯೆಂದೂ ತಿಳಿಯಬಹುದು. ಮಗುವು ತನ್ನ ಯಾವ ಅಂಗವನ್ನು ಪದೇಪದೇ ಮುಟ್ಟುತ್ತಾ ಇರುತ್ತದೋ ಇತರರು ಯಾವ ಅಂಗವನ್ನು ಮುಟ್ಟಲು ಹೋದರೆ ಕೈಕಾಲು ಬಡಿದು ಅಳುತ್ತಾ ಅಡ್ಡಿ ಪಡಿಸಿ ಮುಟ್ಟುಗೊಡುವುದಿಲ್ಲವೋ ಆ ಸ್ಥಳದಲ್ಲಿ ಮಗುವಿಗೆ ನೋವಿರುತ್ತೆಂದು ತಿಳಿಯಬೇಕು. ಕಣ್ಣುಗಳನ್ನು ಮುಚ್ಚಿಕೊಂಡು ಅಳುತ್ತಿದ್ದರೆ ತಲೆಯಲ್ಲಿ ನೋವಿರುತ್ತದೆಂದೂ, ನಾಲಿಗೆ ತುಟಿಗಳನ್ನು ಕಚ್ಚುತ್ತಲೂ ಬೇಗಬೇಗ ಉಸಿರು ಬಿಡುತ್ತಲೂ ಕೈಕೈಮುಷ್ಟಿ ಹಿಡಿಯುತ್ತಲೂ ಇದ್ದರೆ ಎದೆಯಲ್ಲಿ ನೋವಿರುತ್ತದೆಂದೂ; ಮಲಬಂಧ, ವಮನ, ದಾದಿಯ ಸ್ತನವನ್ನು ಕಚ್ಚುವುದು, ಕರುಳಿನಲ್ಲಿ ಶಬ್ದವಾಗುತ್ತಿರುವುದು, ಹೊಟ್ಟೆಯುಬ್ಬರಿಸಿರುವುದು, ಬೆನ್ನು ಬಗ್ಗಿಸೋಣ, ಹೊಟ್ಟೆಯನ್ನು ಎತ್ತೆತ್ತಿ ಮುಂದೆ ಚಾಚುವುದು, ಈ ಚಿಹ್ನೆಗಳಿದ್ದರೆ ಕೋಷ್ಠದಲ್ಲಿ (ಗಂಟಲಿನಿಂದ ಗುದದ ವರೆಗಿರುವ ಮಹಾಸ್ರೋತಸ್ಸು) ನೋವಿದೆಯೆಂದೂ; ಮಲಮೂತ್ರಗಳು ತಡೆದಿರುವುದು, ನೈಕೈ ನಡುಕ, ದಿಕ್ಕುದಿಕ್ಕುಗಳಲ್ಲಿ ದೃಷ್ಟಿಯಿಟ್ಟು ನೋಡುವುದಾದರೆ ಗುದ, ಶಿಶ್ನಗಳಲ್ಲಿ ನೋವಿರುತ್ತದೆಂದೂ ತಿಳಿಯಬೇಕು ॥೨೦–೨೩॥

(ಸು।ಶಾ।ಅ। ೧೦)—

ಯಾವ ಅಙ್ಗ ಪ್ರತ್ಯಙ್ಗಗಳಲ್ಲಿ ಬಾಧೆಯಿರುತ್ತದೆಯೋ ಆ ಭಾಗವನ್ನು ಪದೇಪದೇ ಮುಟ್ಟಿಕೊಳ್ಳುತ್ತದೆ. ಇತರರು ಆ ಭಾಗವನ್ನು ಮುಟ್ಟಿದರೆ ಅಳುತ್ತದೆ.

ತಲೆಯಲ್ಲಿ ಬಾಧೆಯುಂಟಾದರೆ ಕಣ್ಣುಗಳನ್ನು ಮುಚ್ಚಿಕೊಳ್ಳುತ್ತದೆ; ತಲೆಯನ್ನು ಮೇಲಕ್ಕೆ ಎತ್ತಿಕೊಳ್ಳಲು ಆಗುವುದಿಲ್ಲ; ಬಸ್ತಿಯಲ್ಲಿ ನೋವಿದ್ದರೆ ಮೂತ್ರದ ತಡೆಯುಂಟಾಗುತ್ತದೆ; ನೋವಿನಿಂದ ಮೂರ್ಛೆಯುಂಟಾಗುತ್ತದೆ, ಬಾಯಾರುತ್ತದೆ, ಜ್ಞಾನ ತಪ್ಪುತ್ತದೆ, ಮಲಮೂತ್ರಗಳು ತಡೆದುಬಿಡುವುದು, ಶರೀರದ ಬಣ್ಣವು ಬದಲಾಗುವುದು, ವಮನ, ಹೊಟ್ಟೆಯುಬ್ಬರ, ಕರುಳುಗಳಲ್ಲಿ ಶಬ್ದ ಕೇಳಿಸುವುದು ಈ ಲಕ್ಷಣಗಳಿಂದ ಕೋಷ್ಠದಲ್ಲಿ ನೋವಿದೆಯೆಂದೂ, ಸದಾ ಅಳುತ್ತಿದ್ದರೆ ಶರೀರದ ಎಲ್ಲಾ ಭಾಗಗಳಲ್ಲೂ ನೋವಿರುತ್ತದೆಯೆಂದೂ ಊಹಿಸಬೇಕು ॥೨೪–೨೬॥

(ಕಾ।ಸಂ।ಅ।೨೫)—

ಮಾತು ಬಾರದಿರುವ ಸಣ್ಣ ಮಕ್ಕಳ ರೋಗಗಳನ್ನು ತಿಳಿದುಕೊಳ್ಳುವ ಉಪಾಯಗಳು——ಕಶ್ಯಪರು ವೃದ್ಧಜೀವಕ ಅಥವಾ ದಾರುವಾಹನೆಂಬ ಶಿಷ್ಯನಿಗೆ ಮಕ್ಕಳ ಬಾಹುದೇಹಗಳಲ್ಲಿ ಹುಟ್ಟುವ ರೋಗಗಳ ಕಾರಣಗಳನ್ನೂ ಚಿಕಿತ್ಸೆಯನ್ನೂ ಉಪದೇಶಮಾಡುವ ಕ್ರಮವೇನೆಂದರೆ——ಅತಿಯಾಗಿ ತಲೆಯನ್ನು ಅಲ್ಲಾಡಿಸುವುದು, ಕಣ್ಣುಗಳನ್ನು ಮುಚ್ಚಿಕೊಳ್ಳುವುದು, ಕೂ ಎಂದು ಕೀರಲುಧ್ವನಿ ಮಾಡುವುದು, ವ್ಯಥೆಪಡುವುದು, ನಿದ್ರೆಮಾಡದೆ ಎಚ್ಚರವಾಗಿರುವುದು ಈ ಲಕ್ಷಣಗಳಿಂದ ಮಗುವಿಗೆ **ತಲೆನೋವಿ**ರುತ್ತೆಂದು ತಿಳಿಯಬೇಕು ॥೨೭–೨೯॥

ಕೈಗಳಿಂದ ಕಿವಿಗಳನ್ನು ಮುಟ್ಟುತ್ತಲೂ, ತಲೆಯನ್ನು ಹೊರಳಾಡಿಸುತ್ತಲೂ ವ್ಯಥೆಪಡುತ್ತಲೂ, ಅರುಚಿಯಿಂದಲೂ, ನಿದ್ರೆಯಿಲ್ಲದೆಯೂ ಇದ್ದರೆ **ಕಿವಿನೋವಿ**ರುತ್ತೆಂಧು ತಿಳಿಯಬೇಕು ॥೩೦॥

ಬಾಯಿಯಲ್ಲಿ ಹುಣ್ಣುಗಳಿದ್ದರೆ ಹೆಚ್ಚಾಗಿ ಜೊಲ್ಲು ಸುರಿಯುವುದು, ಸ್ತನ್ಯಪಾನ ಮಾಡದಿರುವುದು, ದುಃಖಪಡುವುದು, ಹಳದಿ ಬಣ್ಣದ ಹಾಲನ್ನು ಕಕ್ಕುವುದು, ಮೂಗಿನಲ್ಲೇ ಉಸಿರಾಡುವುದು ಈ ಲಕ್ಷಣಗಳಿರುತ್ತವೆ ॥೩೧॥

ಕತ್ತಿನೊಳಗೆ ನೋವಿದ್ದರೆ ಹಳದಿ ಬಣ್ಣದ ಹಾಲನ್ನು ಕಕ್ಕುತ್ತಲೂ, ಮಲಬಂಧವುಳ್ಳದ್ದಾಗಿಯೂ, ಕಫವನ್ನೇ ನುಂಗುತ್ತಲೂ, ಸ್ವಲ್ಪ ಜ್ವರ, ಅರುಚಿ, ಆಯಾಸಗಳಿಂದಲೂ ನರಳುತ್ತದೆ ॥೩೨॥

ಅಧಿಜಿಹ್ವಿಕಾ ರೋಗದಲ್ಲಿ ಮಗುವು ಜೊಲ್ಲು ಸುರಿಸುತ್ತದೆ; ಅರುಚಿ, ಬಳಲಿಕೆ, ಕೆನ್ನೆ ದಪ್ಪನಾಗುವುದು, ಬಾಯಿ ತೆರೆದುಕೊಂಡು ನರಳುವುದು. ಈ ಲಕ್ಷಣಗಳಿರುತ್ತವೆ ॥೩೩॥

ಮಗುವಿಗೆ ಗಂಟಲಿನಲ್ಲಿ ನೋವಿದ್ದರೆ (**ಗಳಗ್ರಹದಲ್ಲಿ**) ಜ್ವರ, ಅರುಚಿ, ಜೊಲ್ಲು ಸುರಿಯುವುದು, ನರಳುವುದು ಈ ಲಕ್ಷಣಗಳೂ; ಕತ್ತಿನಲ್ಲಿ ನೋವಿದ್ದರೆ ನವೆಯಾಗುವುದು, ಊದಿರುವುದು, ಜ್ವರ, ಅರುಚಿ, ತಲೆನೋವು ಈ ಲಕ್ಷಣಗಳೂ ಇರುತ್ತವೆ ॥೩೪॥

ಜ್ವರವಿದ್ದರೆ ಪದೇಪದೇ ಮೈಯ್ಯನ್ನು ಬಗ್ಗಿಸುತ್ತದೆ, ಮೈಮುರಿಯುತ್ತದೆ, ಆಕಳಿಸುತ್ತದೆ, ಆಗಾಗ್ಗೆ ಕೆಮ್ಮುವುದು, ದಾದಿಯನ್ನು ತಬ್ಬಿಕೊಳ್ಳುವುದು, ಹಾಲು ಕುಡಿಯದಿರುವುದು, ಬಾಯಿ ಮೂಗುಗಳಲ್ಲಿ ದ್ರವಸ್ರಾವವಾಗುವುದು, ಮೈ ಬಿಸಿಯಾಗಿ ಬಣ್ಣ ಬದಲಾಗುವುದು, ಹಣೆಯು ಅತಿಯಾಗಿ ಬಿಸಿಯಾಗಿರುವುದು, ಅರುಚಿ, ಕಾಲುಗಳು ತಣ್ಣಗಾಗುವುದು ಈ ಲಕ್ಷಣಗಳಿರುತ್ತವೆ ‖೩೫–೩೬‖

ಅತಿಸಾರದ ಮೊದಲಲ್ಲಿ ಮಗುವಿಗೆ ದೇಹದ ಬಣ್ಣ ಬದಲಾಗುತ್ತದೆ, ವ್ಯಥೆಪಡುತ್ತದೆ, ಮುಖ ಬಾಡುತ್ತದೆ, ನಿದ್ರೆಮಾಡುವುದಿಲ್ಲ, ಹೂಸಿಕೊಳ್ಳುತ್ತದೆ ‖೩೭‖

ಹೊಟ್ಟೆನೋವಿದ್ದರೆ ಹಾಲು ಕುಡಿಯುವುದಿಲ್ಲ, ಅಳುತ್ತದೆ, ಅಂಗತ್ತಲಾಗಿ ಮಲಗಿಕೊಂಡು ಮೈಮುರಿಯುತ್ತದೆ, ಹೊಟ್ಟೆ ಗಟ್ಟಿಯಾಗಿರುತ್ತದೆ, ಮೈ ತಣ್ಣಗಿರುತ್ತದೆ, ಮುಖದಲ್ಲಿ ಬೆವರು ಬರುತ್ತದೆ ‖೩೮‖

ಛರ್ದಿಯಲ್ಲಿ ಸುಮ್ಮಸುಮ್ಮನೆ ಹೆಚ್ಚಾಗಿ ತೇಗುತ್ತದೆ, ನಿದ್ರೆ, ಆಕಳಿಕೆಗಳಿರುತ್ತವೆ ‖೩೯‖

ಶ್ವಾಸದಲ್ಲಿ ಗಟ್ಟಿಯಾಗಿ ನರಳುತ್ತದೆ, ಎದೆ ಬಿಸಿಯಾಗಿರುತ್ತದೆ, ಬರತೇಗು, ದೇಹಕ್ಷೀಣತೆ, ಬಿಕ್ಕಳಿಕೆಗಳಿರುತ್ತವೆ ‖೪೦‖

ತೃಷ್ಣೆಯಲ್ಲಿ ಹೆಚ್ಚಾಗಿ ಹಾಲು ಕುಡಿಯುತ್ತದೆ, ತೃಪ್ತಿಯಾಗುವುದಿಲ್ಲ, ಅತಿಯಾಗಿ ಅಳುತ್ತದೆ, ಅಂಗಗಳು ತುಟಿಗಳು ಒಣಗುತ್ತವೆ, ನೀರಿನಲ್ಲಿ ಅಪೇಕ್ಷೆಯುಂಟಾಗುತ್ತದೆ ‖೪೧‖

ಅನಾಹದಲ್ಲಿ ಕಣ್ಣು ಅಗಲವಾಗಿ ಬಿಗಿಹಿಡಿದುಕೊಂಡಿರುತ್ತದೆ. ಬೆರಳುಗಿಣ್ಣುಗಳಲ್ಲಿ ನೋವು, ಬಳಲಿಕೆ, ವ್ಯಥೆ, ವಾತಮೂತ್ರಪುರೀಷಗಳು ತಡೆದಿರುತ್ತವೆ. ಥಟ್ಟನೆ ಕೇಕೆ ಹಾಕಿ ನಕ್ಕರೆ **ಅಪಸ್ಮಾರ**ವೆಂದೂ, ಅಧಿಕವಾಗಿ ಕೂಗುತ್ತಲೂ, ವ್ಯಥೆಪಡುತ್ತಲೂ, ಜ್ಞಾನವಿಲ್ಲದೆಯೂ ಇದ್ದರೆ **ಉನ್ಮಾದ**ವೆಂದೂ ತಿಳಿಯಬೇಕು ‖೪೨–೪೩‖

ಮೂತ್ರಕೃಚ್ಛ್ರದಲ್ಲಿ ಮೈಮೇಲೆ ರೋಮಗಳೆದ್ದು ನಿಲ್ಲುತ್ತವೆ, ಮೈ ಜುಮುಗುಟ್ಟುತ್ತದೆ, ಮೂತ್ರಮಾಡುವಾಗ ನೋವು ಇರುತ್ತದೆ, ತುಟಿಗಳನ್ನು ಕಚ್ಚುತ್ತದೆ, ಬಸ್ತಿಪ್ರದೇಶ (ಕಿಬ್ಬೊಟ್ಟೆ) ವನ್ನು ಕೈಯಿಂದ ಮುಟ್ಟಿಕೊಳ್ಳುತ್ತವೆ ‖೪೪‖

ಪ್ರಮೇಹದಲ್ಲಿ ಮೈಭಾರ, ಮಲಬಂಧ, ಆಲಸ್ಯ, ಅಕಸ್ಮಾತ್ತಾಗಿ ಮೂತ್ರಸ್ರಾವವಾಗುವುದು, ಮೂತ್ರಕ್ಕೆ ನೊಣಗಳು ಮುತ್ತುವುದು, ಮೂತ್ರವು ಬೆಳ್ಳಗೂ (ದಪ್ಪಗಟ್ಟಿ) ಮಂದವಾಗಿಯೂ ಸ್ರಾವವಾಗುವುದು ಈ ಲಕ್ಷಣಗಳಿರುತ್ತದೆ ‖೪೫‖

ಅರ್ಶಸ್ಸಿನಲ್ಲಿ ಗಟ್ಟಿಯಾಗಿ ಮಲಪ್ರವರ್ತಿಯಾಗುವುದು, ರಕ್ತಮಿಶ್ರವಾಗಿರುವುದು, ದೇಹ ಕೃಶವಾಗಿರುವುದು, ಮುಲುಕಿ ಮಲವಿಸರ್ಜನೆ ಮಾಡುವುದು ಗುದದಲ್ಲಿ ನವೆ, ಚುಚ್ಚುವಿಕೆಗಳಿರುತ್ತವೆ ‖೪೬‖

ಅಶ್ಮರಿಯಲ್ಲಿ ಮರಳುಮರಳಾಗಿ ಅತಿಯಾದ ಮೂತ್ರವು ಸ್ರವಿಸುವುದು, ಮೂತ್ರಿಸುವಾಗ ನೋವಿರುವುದು, ಸದಾ ಅಳುತ್ತಿರುವುದು, ದೇಹ ಕೃಶವಾಗಿರುವುದು ॥೪೭॥

ವಿಸರ್ಪದಲ್ಲಿ ಮೈಮೇಲೆ ಕೆಂಪು ಗಂಧೆಗಳೆದ್ದಿರುವುದು, ಬಾಯಾರಿಕೆ, ಮೈಯುರಿ, ಜ್ವರ, ನರಳಾಟ, ಸಿಹಿ, ತಣ್ಣಗಿರುವ ವಸ್ತುಗಳಿಂದ ಸಮಾಧಾನವಾಗುತ್ತದೆ ॥೪೮॥

ವಿಸೂಚಿಕೆಯಲ್ಲಿ ಅಂಗಗಳು ಸೂಜಿಯ ತುದಿಯಿಂದ ಚುಚ್ಚಿದಂತೆ ನೋಯುತ್ತವೆ, ಮುರಿದಂತಾಗುತ್ತವೆ, ಅತಿಯಾಗಿ ಕ್ಯಾಕರಿಸುತ್ತದೆ, ಎದೆಯಲ್ಲಿ ನೋವು ಹೆಚ್ಚುತ್ತದೆ ॥೪೯॥

ಅಲಸಕದಲ್ಲಿ ತಲೆಯನ್ನು ಎತ್ತಿಕೊಂಡಿರಲಾಗುವುದಿಲ್ಲ, ಮಲಸ್ರಾವ, ಆಕಳಿಕೆ, ಹಾಲು ಕುಡಿಯುವುದಿಲ್ಲ, ಗರಣೆಗರಣೆಯಾಗಿ ವಾಂತಿ ಮಾಡುತ್ತದೆ; ವ್ಯಥೆಪಡುತ್ತದೆ, ಅರುಚಿ, ಹೊಟ್ಟೆಯುಬ್ಬರಗಳಿರುತ್ತವೆ. ವಿಸೂಚಿ, ಅಲಸಕಗಳನ್ನು ತಿಳಿದುಕೊಳ್ಳುವುದೂ, ಚಿಕಿತ್ಸೆ ಮಾಡುವುದೂ ಬಲು ಕಷ್ಟವಾಗುತ್ತದೆ ॥೫೦-೫೧॥

ನೇತ್ರರೋಗದಲ್ಲಿ ಕಣ್ಣು ಕಾಣಿಸುವುದಿಲ್ಲ, ಚುಚ್ಚುತ್ತದೆ, ಊದಿರುತ್ತದೆ, ನೋಯುತ್ತದೆ, ಕೆಂಪಗೆ ನೀರು ಸೋರುತ್ತದೆ, ಮಲಗಿಕೊಂಡರೆ ರೆಪ್ಪೆಗಳು ಅಂಟಿಕೊಳ್ಳುತ್ತವೆ ॥೫೨॥

ಶುಷ್ಕಕಣ್ಡುವಿನಲ್ಲಿ (ಬರಿಯ ನವೆಯಲ್ಲಿ) ಮಗುವು ಹಾಸಿಗೆಯಲ್ಲಿದ್ದು ಮೈ ಕೊಡುವುತ್ತಾ ಅಳುತ್ತಿರುತ್ತದೆ. ಮೈ ಹಿಸುಕಿದರೆ ಹಿತವಾಗುತ್ತದೆ. ಅನಂತರ ನೀರು ಸೇರಿಕೊಂಡು ನುಚ್ಚುನುಚ್ಚಾಗಿ ಬೊಕ್ಕೆಗಳೆದ್ದು ಹಸಿಯ ನವೆ (ಆರ್ದ್ರಕಣ್ಡು) ಯುಂಟಾಗುತ್ತದೆ. ಮೈ ಹಿಸುಕಿದರೆ ಹಿತವಾಗುತ್ತದೆ, ಹಿಸುಕಿದರೆ ಮೈ ಊದುತ್ತದೆ, ನೀರು ಸೋರುತ್ತದೆ, ಚುಚ್ಚುತ್ತದೆ, ಉರಿಯುತ್ತದೆ ॥೫೩॥

ಆಮದೋಷದಲ್ಲಿ ಮಗುವು ಭಾರವಾಗಿರುತ್ತದೆ, ಅರುಚಿ, ನಿದ್ರೆ, ಮೈ ಬಿಳಿಚಿಕೊಂಡು ವ್ಯಥೆಯುಳ್ಳದ್ದಾಗಿರುತ್ತದೆ; ಆಟಪಾಟಗಳಲ್ಲಿ, ಆಸನ, ಹಾಸಿಗೆ, ದಾದಿಯನ್ನು ಕಂಡರೆ ಸದಾ ದ್ವೇಷಬುದ್ಧಿಯುಂಟಾಗುತ್ತದೆ, ಸ್ನಾನ ಮಾಡದಿದ್ದರೂ ಸ್ನಾನ ಮಾಡಿದವನಂತೆಯೂ, ಸ್ನಾನ ಮಾಡಿದರೂ ಸ್ನಾನ ಮಾಡದಿರುವಂತೆಯೂ ಕಾಣುತ್ತದೆ ॥೫೪-೫೬॥

ಪಾಣ್ಡುರೋಗದಲ್ಲಿ ಅಗ್ನಿಮಾಂದ್ಯ, ಕಣ್ಣಿನ ಕುಣಿಕೆಗಳು ಊದಿರುವುದು. ॥೫೭॥

ಕಾಮಾಲೆಯಲ್ಲಿ ಕಣ್ಣು, ಉಗರು, ಮುಖಗಳು, ಮಲಮೂತ್ರಗಳು ಹಳದಿ ಬಣ್ಣವುಳ್ಳವಾಗಿರುತ್ತವೆ. ಇವೆರಡು ರೋಗಗಳಲ್ಲೂ ಉತ್ಸಾಹವಿಲ್ಲದೆ ಅಗ್ನಿಮಾಂದ್ಯವಿರುತ್ತದೆ. ರಕ್ತಪಾನದಲ್ಲಿ ಅಭಿಲಾಷೆಯುಂಟಾಗುತ್ತದೆ ॥೫೮॥

ಮದಾತ್ಯಯದಲ್ಲಿ ಮೂರ್ಛೆ, ಎಚ್ಚರಿಕೆ, ವಮನ, ದಾದಿಯನ್ನು ದ್ವೇಷಿಸುವುದು, ವ್ಯಥೆ, ತಲೆತಿರುಗು, ಬೆಚ್ಚಿಬೀಳುವುದು, ದಿಗಲುಪಡುವುದು, ನೀರಡಿಕೆ ಈ ಲಕ್ಷಣಗಳಿರುತ್ತವೆ ॥೫೯॥

ಪೀನಸ ರೋಗದಲ್ಲಿ ಆಗಾಗ್ಯೆ ಬಾಯಿಯಿಂದಲೇ ಉಸರು ಬಿಡುತ್ತದೆ, ಹಾಲನ್ನು ಕುಡಿದು ಮೂಗಿನಿಂದ ಹೊರಕ್ಕೆ ಸುರಿಸುತ್ತದೆ; ಹಣೆ ಬಿಸಿಯಾಗಿರುತ್ತದೆ. ಆಗಾಗ್ಯೆ ಮೂಗಿನ ಹೊಳ್ಳೆಗಳನ್ನು ಮುಚ್ಚಿಕೊಳ್ಳುತ್ತದೆ, ಶೀನುತ್ತದೆ, ಕೆಮ್ಮುತ್ತದೆ ॥೬೦॥

ಉರೋಘಾತದಲ್ಲಿಯೂ ಮೇಲಿನ ಲಕ್ಷಣಗಳಿರುತ್ತವೆ. ಹೆಚ್ಚಾಗಿ ಕ್ಯಾಕರಿಸುತ್ತದೆ ॥೬೧॥

ಜನ್ತುಗಳು ಹೆಚ್ಚಿದ್ದರೆ ಸ್ವಸ್ಥನಾಗಿದ್ದರೂ ರಾತ್ರಿಯಲ್ಲಿ ಮಲಗದೆ ಮೈ ಮೇಲೆ ಕೆಂಪಿನ ಗುಳ್ಳೆಗಳೆದ್ದಿರುತ್ತವೆ ॥೬೨॥

ಮರಣ ಚಿಹ್ನೆಗಳು—ಆರೋಗ್ಯಳಾದ ಧಾತ್ರಿಯು ಸರ್ವಭೋಗಗಳನ್ನು ಪಡೆದು ಲೀಲೆಯಿಂದಿರುವಾಗ ಅತಿ ದುಸ್ವಪ್ನಗಳನ್ನು ಕಾಣುವುದೂ, ತನಗೆತಾನೇ ಹಾಲು ಸುರಿಯುತ್ತಿರುವುದೂ, ಮಗುವು ದಾದಿಯನ್ನೇ ಮರೆತುಬಿಟ್ಟು ಅವಳ ತೊಡೆಯಿಂದ ಕೆಳಕ್ಕೆ ಬೀಳುವುದೂ, ದಾದಿಗೆ ಸ್ವಪ್ನದಲ್ಲಿ ದುಷ್ಟರೊಡನೆ ಸೇರಿದಂತೆಯೂ, ಒಳ್ಳೆಯ ಊಟವನ್ನು ಮಾಡಿದಂತೆಯೂ, ಸತ್ತ ಮಕ್ಕಳನ್ನೂ, ವಿವಿಧ ಜಾತಿ ಜನರನ್ನೂ, ಪರರ ಏಳಿಗೆಯನ್ನು ಸಹಿಸದವರನ್ನೂ, ಘೋರವಾದ ಅಮಂಗಳಗಳನ್ನೂ ಕಂಡರೆ ಮಗುವಿಗೆ ಮರಣವುಂಟಾಗುತ್ತೆಂದು ತಿಳಿಯಬೇಕು ॥೬೩–೬೫॥

ಮೂಲ—(ಸು। ಶಾ। ಅ। ೧೦)—ಅಥೌಷಧಪ್ರಮಾಣಮ್—

ತೇಷು ಚ ಯಥಾಭಿಹಿತಂ ಮೃದ್ವಚ್ಛೇದನೀಯಮೌಷಧಂ ಮಾತ್ರಯಾ ಕ್ಷೀರಪಸ್ಯ ಕ್ಷೀರಸರ್ಪಿಷಾ ಧಾತ್ರ್ಯಾಶ್ಚ ವಿದಧ್ಯಾತ್ । ಕ್ಷೀರಾನ್ನಾದಸ್ಯಾತ್ಮನಿ ಧಾತ್ರ್ಯಾಶ್ಚ । ಅನ್ನಾದಸ್ಯ ಕಷಾಯಾದೀನಾತ್ಮನ್ಯೇವ ನ ಧಾತ್ರ್ಯಾಃ ॥೬೬॥

ತತ್ರ ಮಾಸಾದೂರ್ಧ್ವಂ ಕ್ಷೀರಪಾಯಾಙ್ಗುಳಿಪರ್ವದ್ವಯಗ್ರಹಸಮ್ಮಿತಾಮೌಷಧಿಮಾತ್ರಾಂ ವಿದಧ್ಯಾತ್। ಕೋಲಾಸ್ಥಿಸಮ್ಮಿತಾಂ ಕಲ್ಕಮಾತ್ರಾಂ ಕ್ಷೀರಾನ್ನಾದಾಯ ಕೋಲಸಮ್ಮಿತಾಮನ್ನಾದಾಯೇತಿ ॥೪೭॥

(ಅ। ಹೃ। ಉ। ಅ। ೨)—

ಪ್ರಥಮೇ ಮಾಸಿ ಬಾಲಸ್ಯ ದೇಯಾ ಭೇಷಜರಕ್ತಿಕಾ।
ಅವಲೇಹ್ಯಾ ತು ಕರ್ತವ್ಯಾ ಮಧುಕ್ಷೀರಸಿತಾಘೃತೈಃ ॥೬೮॥
ಏಕೈಕಾಂ ವರ್ಧಯೇತ್ತಾವದ್ಯಾವತ್ಸಂವತ್ಸರೋ ಭವೇತ್।
ತದೂರ್ಧ್ವಂ ಮಾಷವೃದ್ಧಿಃ ಸ್ಯಾದ್ಯಾವತ್ಷೋಡಶವತ್ಸರಾಃ ॥೬೯॥
ತತಃ ಸ್ಥಿರಾ ಭವೇತ್ತಾವದ್ಯಾವದ್ವರ್ಷಾಣಿ ಸಪ್ತತಿಃ।
ತತೋ ಬಾಲಕವನ್ಮಾತ್ರಾ ಹ್ರಾಸನೀಯಾ ಶನೈಃ ಶನೈಃ ॥೭೦॥

ಚೂರ್ಣಕಲ್ಕಾವಲೇಹಾನಾಮಿಯಂ ಮಾತ್ರಾ ಪ್ರಕೀರ್ತಿತಾ।
ಕಷಾಯಸ್ಯ ಪುನಸ್ಸೈವ ವಿಜ್ಞಾತವ್ಯಾ ಚತುರ್ಗುಣಾ ೭೧॥
ಕ್ಷೀರಂ ಯಸ್ಯ ಶಿಶೋರ್ದೇಯಮೌಷಧಂ ಕ್ಷೀರಸರ್ಪಿಷಾ।
ಧಾತ್ರ್ಯಾಸ್ತು ಕೇವಲಂ ದೇಯಂ ನ ಕ್ಷೀರೇಣಾಪಿ ಸರ್ಪಿಷಾ ॥೭೨॥
ರಸಲೋಹಾದಿ ಭೈಷಜ್ಯಂ ಮಹತಾಂ ಯಜ್ಜ್ವರಾದಿಷು।
ಯುಂಜ್ಯಾತ್ತದೇವ ಬಾಲಾನಾಂ ತತ್ರ ಮಾತ್ರಾ ಕನೀಯಸೀ ॥೭೩॥
ಸರ್ವಂ ನಿವಾರ್ಯತೇ ಬಾಲೇ ಸ್ತನ್ಯಂ ನೈವ ನಿವಾರ್ಯತೇ।
ಮಾತ್ರಯಾ ಲಙ್ಘಯೇದ್ಧಾತ್ರೀಂ ಶಿಶೋರೇತದ್ಧಿ ಲಙ್ಘನಮ್ ॥೭೪॥

ದೀಪಿಕೆ—(ಸು।ಶಾ।ಅ। ೧೦) ಔಷಧಗಳ ಪ್ರಮಾಣ—

ಮಕ್ಕಳರೋಗಗಳಲ್ಲಿ ರೋಗನಿವಾರಣೆಗಾಗಿ ಮೃದುವಾದ ಕಫ ಮೇದಸ್ಸುಗಳನ್ನು ಕಮ್ಮಿಮಾಡದ ಔಷಧಗಳನ್ನು ನಿರ್ದಿಷ್ಟ ಪ್ರಮಾಣದಿಂದ ಹಾಲು ಕುಡಿಯುವ ಮಗುವಿಗೂ ದಾದಿಗೂ ಹಾಲು ತುಪ್ಪಗಳೊಡನೆ ಕೊಡಬೇಕು. ಇದೇ ರೀತಿಯಲ್ಲಿ ಹಾಲು ಕುಡಿಯುವ ಮತ್ತು ಅನ್ನವನ್ನೂ ತಿನ್ನುವ ಮಕ್ಕಳುಗಳಿಗೂ ದಾದಿಗೂ ಕೊಡಬೇಕು. ಬರಿಯ ಅನ್ನವನ್ನು ತಿನ್ನುವ ಮಗುವಿಗೆ ಕಷಾಯ ಚೂರ್ಣಗಳನ್ನು ಕೊಡಬೇಕು. ದಾದಿಗೆ ಔಷಧವೇ ಬೇಕಿರುವುದಿಲ್ಲ. ಔಷಧ ಪ್ರಮಾಣ ವಿಚಾರದಲ್ಲಿ ಕೇವಲ ಸ್ತನಪಾನ ಮಾಡುವ ಮಕ್ಕಳಿಗೆ ಒಂದನೆಯ ತಿಂಗಳಿನಲ್ಲಿ ಹಾಲುತುಪ್ಪಗಳೊಡನೆ ಮಿಶ್ರಮಾಡಿದ ಔಷಧವನ್ನು ತರ್ಜನಿ (ಎರಡನೇ ಬೆರಳು) ಬೆಟ್ಟನ್ನು ಎರಡು ಗಿಣ್ಣುಗಳವರೆಗೆ ಮುಳುಗಿಸಿ ಮೇಲೆತ್ತಿದರೆ ಕೆಳಕ್ಕೆ ಬೀಳುವಷ್ಟು ತೊಟ್ಟುಗಳನ್ನು ಮಾತ್ರವೇ ನೆಕ್ಕಿಸಬೇಕು. ಹಾಲನ್ನೂ, ಅನ್ನವನ್ನೂ, ಸಹ ಸೇವಿಸುವ ಮಗುವಿಗೆ ಎಲಚೀ ಬೀಜದಷ್ಟು ಗಾತ್ರದ ಔಷಧ ಕಲ್ಕವನ್ನೂ, ಬರಿಯ ಅನ್ನವನ್ನೇ ತಿನ್ನುವ ಮಗುವಿಗೆ ಎಲಚಿಯ ಕಾಯಿನಷ್ಟು ಗಾತ್ರದ ಔಷದ ಕಲ್ಕವನ್ನೂ ನೆಕ್ಕಿಸಬೇಕು ॥೬೬–೬೭॥

(ಅ।ಹೃ।ಉ।ಅ। ೨)—

ಹುಟ್ಟಿದ ಮಗುವಿಗೆ ಮೊದಲನೆಯ ತಿಂಗಳಲ್ಲಿ ಗುಲಗಂಜಿಯಷ್ಟು ಗಾತ್ರದ ಔಷಧವನ್ನು ಹಾಲು, ತುಪ್ಪ, ಜೇನುತುಪ್ಪ, ಸಕ್ಕರೆಗಳೊಡನೆ ಸೇರಿಸಿ ನೆಕ್ಕಿಸಬೇಕು. ಅನಂತರ ಪ್ರತಿ ತಿಂಗಳಲ್ಲೂ ಒಂದೊಂದು ಗುಂಜದಷ್ಟು ಹೆಚ್ಚುವಂತೆ ಹನ್ನೆರಡು ತಿಂಗಳ ಪೂರ್ತ ಉಪಯೋಗಿಸಬೇಕು. ಅನಂತರ ಪ್ರತಿವರ್ಷವೂ ಒಂದೊಂದು ಮಾಷ ಪ್ರಮಾಣದಂತೆ ಹದಿನಾರು ವರ್ಷಗಳವರೆಗೂ ಹೆಚ್ಚಿಸಿ ನಿಲ್ಲಿಸಬೇಕು. ಅನಂತರ ಈ ಪ್ರಮಾಣವೇ ಎಪ್ಪತ್ತು ವರ್ಷ ವಯಸ್ಸಿನವರೆಗೂ ಸ್ಥಿರವಾಗಿರುತ್ತದೆ. ಆಮೇಲೆ ಮಕ್ಕಳ ಮಾತ್ರೆಯನ್ನು ಹೆಚ್ಚಿಸುವ ಪ್ರಮಾಣದಂತೆಯೇ ಔಷಧದ ಪ್ರಮಾಣವನ್ನು ಕ್ರಮಕ್ರಮವಾಗಿ ಕಡಮೆ ಮಾಡಬೇಕು. (ಒಂದೇ ಸಾರಿಗೆ ಕಡಮೆ ಪ್ರಮಾಣಕ್ಕೆ ಇಳಿಸಬಾರದು) ಚೂರ್ಣಕಲ್ಕಲೇಹಗಳಿಗೆ ಈ ಪ್ರಮಾಣವೆಂದರಿಯಬೇಕು. ಕಷಾಯಗಳನ್ನು ಇವುಗಳ ನಾಲ್ಕರಷ್ಟು ಪ್ರಮಾಣದಂತೆ ಹೆಚ್ಚಿಸಬೇಕು. ಹಾಲು ಕುಡಿಯುವ ಮಕ್ಕಳಿಗೆ ಹಾಲು ತುಪ್ಪದೊಡನೆ ಔಷದ

ವನ್ನು ಮಿಶ್ರಮಾಡಿ ನೆಕ್ಕಿಸಬೇಕು. ದಾದಿಗೆ ಬರಿಯ ಔಷಧವೇ ಸಾಕು. ಹಾಲು, ತುಪ್ಪಗಳೊಡನೆ ಅವಶ್ಯಕವಿಲ್ಲ. ದೊಡ್ಡವರಿಗೆ ಜ್ವರ ಮೊದಲಾದ ರೋಗಗಳಲ್ಲಿ ಕೊಡುವ ಔಷಧಗಳೇ ಮಕ್ಕಳಿಗೂ ಕೊಡತಕ್ಕವು. ಆದರೆ ಅತಿ ಸ್ವಲ್ಪ ಪ್ರಮಾಣದಿಂದ ಅವುಗಳನ್ನು ಪ್ರಯೋಗಿಸಬೇಕು. ಎಳೆಯ ಮಕ್ಕಳಿಗೆ ಎಲ್ಲವನ್ನೂ ಬಿಡಿಸಬಹುದು ಆದರೆ ಹಾಲನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ವ್ಯಾಧಿಗೆ ತಕ್ಕಂತೆ ದಾದಿಗೆ ಲಂಘನಮಾಡಿಸಿದರೆ ಮಗುವಿಗೂ ಲಙ್ಘನ ಮಾಡಿಸಿದಂತೆಯೆ ಆಗುತ್ತದೆ ||೬೮–೭೨||

(ಕಾ|ಸಂ|)—

ಹುಟ್ಟಿದ ಕೂಡಲೇ ಮಗುವಿಗೆ ವಾಯುವಿಡಂಗದ ಕಾಳಿನಷ್ಟು ಪ್ರಮಾಣದ ಔಷಧವನ್ನು ತುಪ್ಪ ಜೇನುತುಪ್ಪಗಳಲ್ಲಿ ರಂಗಳಿಸಿ ನೆಕ್ಕಿಸಬೇಕು. ಮತ್ತು ತಿಂಗಳು ತಿಂಗಳಿಗೆ ತಕ್ಕಂತೆ ಬೆಳೆಯುವ ಮಗುವಿಗೆ ಔಷಧ ಪ್ರಮಾಣವನ್ನೂ ಹೆಚ್ಚಿಸಬೇಕು. ಆದರೆ ಬುದ್ಧಿವಂತನಾದ ವೈದ್ಯನು ನೆಲ್ಲಿಕಾಯಿಗಿಂತಲೂ ಹೆಚ್ಚಾದ ಪ್ರಮಾಣದಿಂದ ಔಷಧವನ್ನು ಪ್ರಯೋಗಿಸಬಾರದು ||೭೩–೭೪||

ಮೂಲ—(ಕಾ|ಸಂ|ಅ| ೨೫) ಧಾತ್ರೀಚಿಕಿತ್ಸಾ—

ಸುಖಂ ದುಖಂ ಹಿ ಬಾಲಾನಾಂ ಧಾತ್ರೀಮೂಲಮಸಂಶಯಮ್ ।
ಮಂದಾಗ್ನಿಃ ಪುಷ್ಪಿಕೀ ಧಾತ್ರೀ ತೀಕ್ಷ್ಣಾಗ್ನಿರ್ವಾತಪೈತ್ತಿಕೀ ||೭೫||
ಸಮಧಾತುಃ ಸಮಾಗ್ನಿಸ್ತು ವಿಷಮೈರ್ವಿಷಮಾಗ್ನಿಕೀ
ಆಯುರಾರೋಗ್ಯಯೋರ್ಮೂಲಂ ಪ್ರಜಾನಾಂ ಚ ಸಮಾಗ್ನಿತಾ ||೭೬||
ವಿಷಮಃ ಸರ್ವರೋಗಾಣಾಂ ಮೂಲಂ ಹ್ರಾಸನಮಿಷ್ಯತೇ ।
ತೀಕ್ಷ್ಣಸ್ಯ ಬೃಂಹಣಂ ನಿತ್ಯಂ ಮನ್ದಾಗ್ನೇರ್ದೀಪನಕ್ರಿಯಾ ||೭೭||
ಪಥ್ಯಾಶನಂ ತು ಸತತಂ ವಿಷಮಾಗ್ನೇಃ ಸುಖಾವಹಮ್ ।
ಕಲ್ಯಾಣಕಂ ಷಟ್ಪಲಂ ವಾ ಪ್ರಯೋಗೇಣೈವ ಯುಜ್ಯತೇ ||೭೮||
ನ ತೂಪಯೋಜಯೇತ್ ಕ್ಷಾರಂ ಕ್ಷಾರಪ್ರಾಯೌಷಧಾನಿ ವಾ
ಪ್ರಜಾವಿನಾಶನಃ ಕ್ಷಾರಃ ಧಾತ್ರೀಣಾಂ ಸ ನ ಶಸ್ಯತೇ ||೭೯||
ಮೃಜ್ಯಾಣೋದ್ವರ್ತನಸ್ನಾನಂ ಶುಕ್ಲಾಂಬರನಿಷೇವಣಮ್ ।
ಮೃಷ್ಟಮನ್ನಂ ಸುಖಾ ಶಯ್ಯಾ ಧಾತ್ರೀಣಾಂ ಸುಖಹೇತವಃ ||೮೦||
ಮೇದಸ್ವಿನೀನಾಂ ಧಾತ್ರೀಣಾಂ ಸಿರಾಕರ್ಮ ಪ್ರಶಸ್ಯತೇ
ಸ್ನೇಹಸ್ವೇದೋಪಪನ್ನಾನಾಮೂರ್ಧ್ವಂ ಚಾಧಶ್ಚ ಶೋಧನಮ್ ||೮೧||
ತತಃ ಸಾ ಮೇದಸಿ ಕ್ಷೀಣೇ ಸ್ರೋತಸ್ಸು ವಿವೃತೇಷು ಚ ।
ಕೃಶಾಂ ಚ ನಷ್ಟಪುಷ್ಪಾಂ ಚ ಬೃಂಹಯೇತ್ತೇನ ಸಿಧ್ಯತಿ ||೮೨||
ಕಷಾಯೇ ಮಧುಮಾಂಸಸ್ಯ ದದ್ಯಾತ್ತ್ರಿಂಶತ್ಪಲಾನಿ ತು ।
ಕಪಿತ್ಥಾನಾಂ ತು ಪಕ್ವಾನಾಂ ತುಲಾಂ ದದ್ಯಾತ್ ಸ (ದಾ ಬಃಧಃ ?) ||೮೩||
ಕಪಿತ್ಥತೈಲಸ್ಯ ವಿಧಿಃ ಸ ಏವ ಪರಿಕೀರ್ತಿತಃ ।
ಕೇವಲಂ ಸ್ವರಸಸ್ಯಾತ್ರ ದದ್ಯಾತ್ತೈಲಂ ಚತುರ್ಗುಣಮ್ ||೮೪||
ಮೀನತೈಲಂ ಚ ಮೀನಾನಾಂ ಕಷಾಯೇಣ ರಸೇನ ಚ ।
ಪಕ್ವಂ ಬಲಾತೈಲಮಿವ ವಾತವ್ಯಾಧಿಷು ಶಸ್ಯತೇ ||೮೫||

ಬಲಾಕಾಹಂಸವಲ್ಗೂನಾಂ ಕ್ರೌಂಚಸಾರಸಯೋರಪಿ ।
ಅಟೀಶಕುನಕಾನಾಂ ಚ ತೈರಿರಾನ್ಯಾಹುಃ ಸ್ವನಾಮಭಿಃ ॥೮೭॥
ವಿಧಾನಂ ಕೀರ್ತಿತಂ ಪುಣ್ಯಂ ಷಣ್ಡವನ್ಧ್ಯಪ್ರಜಾಕರಮ್ ।
ಯೋನಿನಾಸಾಮುಖಶ್ರೋತ್ರದೌರ್ಗನ್ಧ್ಯೇ ಪಿಚ್ಛಿಲೇಷು ಚ ॥೮೭॥
ಕಪಿತ್ಥತೈಲಂ ಪಿಚುಭಿರ್ಧಾರಯೇಯುಃ ಸದಾ ಸ್ತ್ರಿಯಃ ।
ಸಹಕಾರರಸೇನಾಪಿ ತದ್ವತ್ತೈಲಂ ಪ್ರಶಸ್ಯತೇ ॥೮೮॥
ಅಜೀರ್ಣಂ ಚಾಪಿ ಧಾತ್ರೀಣಾಂ ನಿತ್ಯಮೇವ ನ ಶಸ್ಯತೇ
ಅಜೀರ್ಣದೂಷಿತಾ ದೋಷಾಃ ಧಾತ್ರೀಣಾಂ ಜನಯನ್ತಿ ಹಿ ॥೮೯॥
ಛರ್ದಿಮೂರ್ಧಾರುಚಿಗ್ಲಾನಿಮದಮೋಹವಿಚರ್ಚಿಕಾಃ ।
ಪಾಮಾಕುಷ್ಠಾಲಜೀಗುಲ್ಮಹೃದ್ರೋಗಶ್ವಾಸಕಾಸಕಾಃ ॥೯೦॥
ಹಿಕ್ಕಾತನ್ದ್ರಾಶ್ರಮಶ್ವಾಸಛರ್ದ್ಯಪಸ್ಮಾರವಿಡ್ಗ್ರಹಾಃ ।
ರಕ್ತಪಿತ್ತಭ್ರಮೋನ್ಮಾದಶೂಲಶೋಷಗಳಗ್ರಹಾಃ ॥೯೧॥
ಊರುಸ್ತಮ್ಭಸ್ಸಸನ್ನ್ಯಾಸಸ್ತಥಾನ್ಯೇ ಚ ಮಹಾಗದಾಃ ।
ಮಿತಪಥ್ಯಾಶನಾನ್ಮಾತುಃ ಪುತ್ರೇ ತೇಷಾಮಸಮ್ಭವಃ ॥೯೨॥
ಧಾತ್ರೀ ಪುತ್ರಶರೀರಾರ್ಥಂ ಸ್ವಶರೀರೋಪಶೋಷಣಮ್ ।
ಸ್ನೇಹಾತ್ಪ್ರಾಪ್ನೋತಿ ಸುಬಹೂನ್ ಕ್ಲೇಶಾಂಶ್ಚಾನ್ಯಾನ್ ಸುದಾರುಣಾನ್ ॥೯೩॥
ಆಶಾಸ್ನೇಹಕೃಪಾಧರ್ಮಾದ್ರಕ್ಷಣಾರ್ಥಂ ಚ ಮಾತರಃ ।
ಸಹನ್ತೇ ಚಾತಿದುಃಖಾನಿ ಮಾನಿನೀ ಚಾತ್ರ ಕೀರ್ತ್ಯತೇ ॥೯೪॥
ತಸ್ಮಾಚ್ಚ ಧಾತ್ರೀ ಸತತಂ ಶುಭಚೇಷ್ಟಾಶನಸ್ಥಿತಿಃ ।
ಮಾತಾ ಭವತಿ ಪುತ್ರಾಣಾಂ ಭುಙ್ಕ್ತೇ ಪುತ್ರಫಲಾನಿ ಚ ॥೯೫॥

ದೀಪಿಕೆ—(ಕಾ।ಸಂ।ಅ। ೨೫)—ಧಾತ್ರಿಗೆ ಮಾಡಬೇಕಾದ ಚಿಕಿತ್ಸೆ—

ಮಕ್ಕಳ ಸುಖದುಃಖಗಳಿಗೆ ದಾದಿಯೇ ಮುಖ್ಯಕಾರಣಭೂತಳು. ಇದಕ್ಕೆ ಸಂದೇಹವೇ ಇಲ್ಲ. ಮಂದಾಗ್ನಿಯವಳಿಗೆ ಪುಷ್ಪಿಕಿಯೆಂದೂ, ತೀಕ್ಷ್ಣಾಗ್ನಿಯವಳು ವಾತಪಿತ್ತಪ್ರಕೃತಿಯವಳೆಂದೂ, ಸಮಧಾತುವುಳ್ಳವಳು ಸಮಾಗ್ನಿಯುಳ್ಳವಳೆಂದೂ ವಿಷಮಾಗ್ನಿಯುಳ್ಳವಳು ವಿಷಮಪ್ರಕೃತಿಯವಳೆಂದೂ ವ್ಯವಹಾರವು. ಸಮಾಗ್ನಿಯು ಆಯುಸ್ಸು ಆರೋಗ್ಯಗಳಿಗೆ ಮೂಲಭೂತವಾದದ್ದು ಮತ್ತು ಪ್ರಜೋತ್ಪಾದನೆಗೂ ಸಾಧಕವಾಗುತ್ತದೆ; ವಿಷಮಾಗ್ನಿಯು ಸಕಲ ರೋಗಗಳ ಉತ್ಪತ್ತಿಗೆ ಕಾರಣ ವಾಗುತ್ತಾದ್ದರಿಂದ ಅದನ್ನು ಸಮಮಾಡಬೇಕು; ತೀಕ್ಷ್ಣಾಗ್ನಿಯುಳ್ಳವರಿಗೆ ಬೃಂಹಣ ಕ್ರಿಯೆಯನ್ನೂ, ಮಂದಾಗ್ನಿಯುಳ್ಳವರಿಗೆ ಅಗ್ನಿದೀಪನಕ್ರಿಯೆಯನ್ನೂ ಮಾಡಿಸಬೇಕು. ವಿಷಮಾಗ್ನಿಯುಳ್ಳವರು ಸರ್ವಕಾಲದಲ್ಲೂ ಹಿತಾಹಾರಮಾಡುತ್ತಾ ಬಂದರೆ ಸುಖಿಗಳಾಗುತ್ತಾರೆ. ಅವರು ಕಲ್ಯಾಣಕಘೃತವನ್ನಾಗಲೀ ಷಟ್ಪಲ ಘೃತವನ್ನಾಗಲೀ ಉಪಯೋಗಿಸಬೇಕು; ಕ್ಷಾರಗಳನ್ನಾಗಲೀ ಕ್ಷಾರೌಷಧಿಗಳನ್ನಾಗಲೀ ಉಪಯೋಗಿಸಬಾರದು. ಸಂತಾನವನ್ನು ನಾಶಗೊಳಿಸುವ ಕಾರಣ ದಾದಿಯರು ಕ್ಷಾರವನ್ನು ಉಪಯೋಗಿಸಬಾರದು; ಅದು ಅವರಿಗೆ ಹಿತಕರವಲ್ಲ. ತೈಲವನ್ನು ಮೈಗೆ ತಿಕ್ಕಿಕೊಂಡು, ಚೂರ್ಣಗಳಿಂದ ಮೈಯನ್ನು ಉಜ್ಜಿ, ಸ್ನಾನಮಾಡುವುದು, ಬಿಳಿಯ ಬಟ್ಟೆಗಳನ್ನುಡುವುದು; ಮಧುರವಾದ ಆಹಾರವನ್ನು ತಿನ್ನುವುದು

ಸುಖವಾದ ಹಾಸಿಗೆಯಲ್ಲಿ ಮಲಗುವುದು ಇವು ದಾದಿಯರಿಗೆ ಹಿತಕರಗಳು. ಮೇದಸ್ಸು ಹೆಚ್ಚಾಗಿರುವ ದಾದಿಯರಿಗೆ ಸಿರಾವ್ಯಧವನ್ನು ಮಾಡಿಸುವುದು ಉತ್ತಮವಾದದ್ದು. ಸ್ನೇಹ, ಸ್ವೇದ, ವಮನ, ವಿರೇಚನ, ಕರ್ಮಗಳನ್ನು ಮಾಡಿಸಿದಮೇಲೆ ಮೇದಸ್ಸು ಕಡಮೆಯಾಗಿ ಸ್ರೋತೋಮಾರ್ಗಗಳು ಅಗಲವಾಗಿ ಕೃಶರಾದ ಆ ದಾದಿಯರಿಗೆ ರಜಸ್ಸ್ರಾವವು ನಿಂತಮೇಲೆ ಬೃಂಹಣ ಕ್ರಿಯೆಯನ್ನು ಮಾಡಿಸಿದರೆ ಆರೋಗ್ಯವುಂಟಾಗುತ್ತದೆ. ಜೇನುತುಪ್ಪ ಮಾಂಸರಸಗಳು ಮುವ್ವತ್ತು ಪಲಗಳಿಗೆ ಪಕ್ವವಾದ ಬೇಲದ ಹಣ್ಣಿನ ತಿರಳು, ನೂರು ಪಲಗಳನ್ನು ಸೇರಿಸಿ ತೈಲಪಾಕ ವಿಧಾನದಿಂದ ತಯಾರಿಸಿದ ಕಪಿತ್ಥತೈಲವು ಶ್ರೇಷ್ಠವಾದದ್ದು. ಬರಿಯ ಸ್ವರಸವಾದರೆ ಅದರ ನಾಲ್ಕನೆಯ ಒಂದು ಭಾಗ ತೈಲವನ್ನು ಸೇರಿಸಬೇಕು. ಮೀನಿನ ಕಷಾಯದಲ್ಲಿ ತೈಲವನ್ನು ಸೇರಿಸಿ ಬಲಾ ತೈಲವನ್ನು ಮಾಡತಕ್ಕ ರೀತಿಯಂತೆ ಪಾಕಮಾಡಿದರೆ ಈ ತೈಲವು ವಾತರೋಗಗಳಲ್ಲಿ ಉಪಯೋಗಕರವು. ಬಕಪಕ್ಷಿ, ಹಂಸ, ನೀರುಕಾಗೆ, ಕೀಚಕ್ಕಿ, ನೀರುಬಾತು, ಆಟೀ (ಬಕಪಕ್ಷಿಯಭೇದ) ಶಕುನಪಕ್ಷಿಗಳ ಮಾಂಸದಿಂದ ತಯಾರಿಸಿದ ತೈಲಗಳನ್ನು ಆಯಾಯ ಪಕ್ಷಿಗಳ ಹೆಸರಿನಿಂದಲೇ ವ್ಯವಹರಿಸುತ್ತಾರೆ. ಸ್ತ್ರೀಯರು ಯೋನಿ, ನಾಸಿಕ, ಬಾಯಿ, ಕಿವಿಗಳಲ್ಲಿ ದುರ್ವಾಸನೆ ಪರಿಹಾರವಾಗಲು ಮತ್ತು ಪಿಚ್ಛಿಲದ್ರವವು ನಿಲ್ಲುವುದಕ್ಕಾಗಿ ಕಪಿತ್ಥ ತೈಲದಲ್ಲಿ ಅದ್ದಿರುವ ಹತ್ತಿಯ ಮುದ್ದೆಯನ್ನು ಧರಿಸುತ್ತಾರೆ. ಸಿಹಿಮಾವಿನ ಹಣ್ಣಿನ ರಸದಿಂದ ತಯಾರಿಸಿದ ತೈಲವನ್ನೂ ಅದೇ ರೀತಿಯಿಂದ ಉಪಯೋಗಿಸುತ್ತಾರೆ. ಆದರೆ ಈ ತೈಲಗಳು ಪ್ರತಿದಿನವೂ ಅಜೀರ್ಣದೋಷದಿಂದ ನರಳುವ ಸ್ತ್ರೀಯರಿಗೆ ಯೋಗ್ಯವಾದುದಲ್ಲ. ಏಕೆಂದರೆ ಅಜೀರ್ಣ ದೋಷದಿಂದ ಕೆಡಿಸಲ್ಪಟ್ಟ ದೋಷಗಳು ಸ್ತ್ರೀಯರಿಗೆ ವಮನ, ಮೂರ್ಛೆ, ಅರುಚಿ, ಬಳಲಿಕೆ, ಮತ್ತು ಅಜ್ಞಾನ, ಚರ್ಮರೋಗ, ಕಜ್ಜಿ, ಇಸಬು ದುರ್ಮಾಂಸದಗಂಟು, ಗುಲ್ಮ, ಹೃದ್ರೋಗ, ಉಬ್ಬಸ, ಕಾಸ, ಬಿಕ್ಕಳಿಕೆ, ತೂಕಡಿಕೆ, ಅಪಸ್ಮಾರ, ಮಲಬಂಧ, ರಕ್ತಪಿತ್ತ, ಭ್ರಮೆ, ಉನ್ಮಾದ, ಹೊಟ್ಟೆನೋವು, ಕ್ಷಯ, ಗಳಗ್ರಹ, ಊರುಸ್ತಮ್ಭ, ಮೊದಲಾದ ಮಹಾರೋಗಗಳನ್ನುಂಟುಮಾಡುತ್ತವೆ. ತಾಯಿಯರು ಮಿತಪ್ರಮಾಣದಿಂದ ಹಿತವಾದ ಆಹಾರಗಳನ್ನು ಭೋಜನ ಮಾಡಿದರೆ ಮೇಲಿನ ಯಾವ ರೋಗವೂ ಅವರ ಮಕ್ಕಳಿಗೆ ಬರುವುದಿಲ್ಲ. ಉತ್ತಮರಾದ ದಾದಿಯರು ಮಕ್ಕಳ ಶರೀರವನ್ನು ಪೋಷಿಸುವುದಕ್ಕಾಗಿ ತಮ್ಮ ಶರೀರ ಶೋಷಣೆಯನ್ನೂ ಮಾಡುತ್ತಾರೆ. ಮಕ್ಕಳ ಮೇಲಿನ ಪ್ರೀತಿಯಿಂದ ಅನೇಕ ಕಷ್ಟಕೆಲಸಗಳನ್ನೂ ಮಾಡುತ್ತಾರೆ ಮತ್ತು ಶಾರೀರಕ ಆಯಾಸವನ್ನೂ ಪಡುತ್ತಾರೆ. ಆಶೆಯನ್ನು ತೊರೆದು ಸ್ನೇಹ, ಕರುಣೆ, ಧರ್ಮಗಳಿಂದ ಮಕ್ಕಳನ್ನು ಕಾಪಾಡಿ ಅತಿಕಷ್ಟಗಳನ್ನು ಸಹಿಸಿ ಮಾನಿನೀ ಎನ್ನಿಸಿಕೊಳ್ಳುತ್ತಾರೆ. ಆದಕಾರಣ ಶುಭಚೇಷ್ಟೆ, ಆಹಾರ, ಆಚಾರಗಳಿಂದ ಸದಾ ವರ್ತಿಸುತ್ತಾ ಸ್ತ್ರೀಯರು ಮಕ್ಕಳಿಗೆ ತಾಯಿಯರಾಗಿದ್ದು ಪುತ್ರಲಾಭದ ಫಲವನ್ನು ಅನುಭವಿಸಬೇಕು ||೭೫-೯೫||

ಮೂಲ--(ಅ|ಹೃ|ಉ|ಅ| ೨) ವಾತಾದಿದೋಷದುಷ್ಟಸ್ತನ್ಯಚಿಕಿತ್ಸಾ—

೧. ವಾತದುಷ್ಟಸ್ತನ್ಯಚಿಕಿತ್ಸಾ—

ತತ್ರ ವಾತಾತ್ಮಕೇ ಸ್ತನ್ಯೇ ದಶಮೂಲಂ ತ್ರ್ಯಹಂ ಪಿಬೇತ್।
ಅಥವಾಗ್ನಿವಚಾಪಾಠಾಕಟುಕಾಕುಷ್ಠದೀಪ್ಯಕಮ್ ॥೯೬॥
ಸಭಾರ್ಗೀದಾರುಸರಳವೃಶ್ಚಿಕಾಳೀಕಣೋಷಣಮ್।
ತತಃ ಪಿಬೇದನ್ಯತಮಂ ವಾತವ್ಯಾಧಿಹರಂ ಘೃತಮ್ ॥೯೭॥
ಅನು ಚಾಚ್ಛಸುರಾಮೇವಂ ಸ್ನಿಗ್ಧಾಂ ಮೃದುವಿರೇಚಯೇತ್।
ಬಸ್ತಿಕರ್ಮ ತತಃ ಕುರ್ಯಾತ್ಸ್ವೇದಾದೀಂಶ್ಚಾನಿಲಾಪಹಾನ್ ॥೯೮॥
ರಾಸ್ನಾಜಮೋದಾಸರಳದೇವದಾರುರಜೋನ್ವಿತಮ್।
ಬಾಲೋ ಲಿಹ್ಯಾದ್ಘೃತಂ ತೈರ್ವಾ ವಿಪಕ್ವಂ ಸಸಿತೋಪಲಮ್ ॥೯೯॥

೨. ಪಿತ್ತದುಷ್ಟಸ್ತನ್ಯಚಿಕಿತ್ಸಾ—

ಪಿತ್ತದುಷ್ಟೇಽಮೃತಾಭೀರುಪಟೋಲೀನಿಮ್ಬಚನ್ದನಮ್।
ಧಾತ್ರೀ ಕುಮಾರಶ್ಚ ಪಿಬೇತ್ಕ್ವಥಯಿತ್ವಾ ಸಸಾರಿವಮ್ ॥೧೦೦॥
ಅಥವಾ ತ್ರಿಫಲಾ ಮುಸ್ತಾ ಭೂನಿಮ್ಬ ಕಟುರೋಹಿಣೀಃ।
ಸಾರಿವಾದಿಂ ಪಟೋಲಾದಿಂ ಪದ್ಮಕಾದಿಂ ತಥಾ ಗಣಮ್ ॥೧೦೧॥
ಘೃತಾನ್ಯೇಭಿಶ್ಚ ಸಿದ್ಧಾನಿ ಪಿತ್ತಘ್ನಂ ಚ ವಿರೇಚನಮ್
ಶೀತಾಂಶ್ಚಾಭ್ಯಙ್ಗಲೇಪಾದೀನ್ಯುಂಜ್ಯಾತ್ ....

೩. ಶ್ಲೇಷ್ಮದುಷ್ಟಸ್ತನ್ಯಚಿಕಿತ್ಸಾ—

.....................ಶ್ಲೇಷಾತ್ಮಕೇ ಪುನಃ। ॥೧೦೨॥
ಯಷ್ಟ್ಯಾಹ್ವಸೈನ್ಧವಯುತಂ ಕುಮಾರಂ ಪ್ರಾಶಯೇದ್ಘೃತಮ್।
ಸಿನ್ಧೂತ್ಥಪಿಪ್ಪಲೀಮದ್ಯಾ ಪಿಷ್ಟೈಃ ಕ್ಷೌದ್ರಯುತೈರಥ ॥೧೦೩॥
ರಾಠಪುಷ್ಪೈಃ ಸ್ತನಂ ಲಿಪ್ತ್ವೇಟಿಶೋಷ್ಚ ದಶನಚ್ಛದಾ।
ಸುಖಮೇವಂ ವಮೇದ್ಬಾಲಸ್ತೀಕ್ಷ್ಣೈರ್ಧಾತ್ರೀಂ ತು ವಾಮಯೇತ್ ॥೧೦೪॥
ಅಥಾಚರಿತಸಂಸರ್ಗೀ ಮುಸ್ತಾದಿಕ್ವಥಿತಂ ಪಿಬೇತ್
ತದ್ವತ್ತಗರಪೃಥ್ವೀಕಾಸುರದಾರುಕಳಿಂಗಕಾನ್ ॥೧೦೫॥
ಅಥವಾತಿವಿಷಾಮುಸ್ತಾಷಡ್ಗ್ರನ್ಥಾ ಪಂಚಕೋಲಕಮ್

ದೀಪಿಕೆ--(ಅ|ಹೃ|ಉ|ಅ|೨) ವಾತಾದಿ ದೋಷಗಳಿಂದ ಕೆಡಿಸಲ್ಪಟ್ಟ ಸ್ತನ್ಯಶುದ್ಧಿ ವಿಧಾನವು--

೧. ವಾತದುಷ್ಟಸ್ತನ್ಯಶುದ್ಧಿ ಕ್ರಮ—

ದಾದಿಯು ಮೂರು ದಿನಗಳವರೆಗೆ ದಶಮೂಲದ ಕಷಾಯವನ್ನಾಗಲೀ ಅಥವಾ ಚಿತ್ರಮೂಲ, ಬಜೆ, ಅಗಲುಶುಂಠಿ, ಕಟುಕರೋಹಿಣಿ, ಚಂಗಲ್ಕೋಷ್ಠ, ವಾದಕ್ಕಿ, ಗಂಟುಭಾರಂಗೀ, ದೇವದಾರು, ಚೇಳುಬಾಲ, ಹಿಪ್ಪಲಿ, ಮೆಣಸು ಇವುಗಳ ಕಷಾಯವನ್ನಾಗಲೀ ಕುಡಿಯಬೇಕು. ಅನಂತರ ವಾತವ್ಯಾಧಿಹರಗಳಾದ ಸಹಚರಾದಿಘೃತಗಳನ್ನೂ ತಿಳಿಯಾದ ಸುರೆಯನ್ನೂ ಪಾನಮಾಡಿ ಸ್ನಿಗ್ಧಳಾದ ಮೇಲೆ ಮೃದುವಿರೇಚನ, ಬಸ್ತಿಕರ್ಮಗಳನ್ನೂ ವಾತಹರಗಳಾದ ಸ್ನೇಹನಸ್ವೇದ ಅಭ್ಯಂಗಗಳನ್ನೂ ಆಚರಿಸಬೇಕು. ರಾಸ್ನೆ, ಅಜಮೋದ, ಸರಳದೇವದಾರುಗಳ

ಚೂರ್ಣವನ್ನು ತುಪ್ಪದಲ್ಲಿ ಕಲಸಿಯಾಗಲೀ ಅಥವಾ ಇವುಗಳನ್ನು ಸೇರಿಸಿ ತಯಾರಿಸಿದ ಘೃತಕ್ಕೆ ಸಕ್ಕರೆಯನ್ನು ಬೆರಸಿಯಾಗಲೀ ಮಗುವಿಗೆ ನೆಕ್ಕಿಸಬೇಕು ॥೯೭–೯೯॥

೨. ಪಿತ್ತದುಷ್ಟಸ್ತನ್ಯದೋಷದಲ್ಲಿ ಅಮೃತಬಳ್ಳಿ, ಆಷಾಢಿ, ಕಹಿಪಡವಲ, ಬೇವು, ಶ್ರೀಗಂಧ, ಸೊಗದೆಬೇರುಗಳ ಕಷಾಯವನ್ನಾಗಲೀ, ತ್ರಿಫಲೆ, ಕೊನ್ನಾರಿ ಗೆಡ್ಡೆ, ನೆಲಬೇವು, ಕಟುಕರೋಹಿಣಿಗಳ ಕಷಾಯವನ್ನಾಗಲೀ, ಸಾರಿವಾದಿ, ಪಟೋಲಾದಿ, ಪದ್ಮಕಾದಿ ಗಣದ್ರವ್ಯಗಳ ಪೈಕಿ ಯಾವುದಾದರೊಂದು ಗಣದ್ರವ್ಯ ಗಳ ಕಷಾಯವನ್ನಾಗಲೀ ದಾದಿಯು ಕುಡಿಯಬೇಕು. ಈ ಗಣದ್ರವ್ಯಗಳ ಲ್ಲೊಂದು ದ್ರವ್ಯದಿಂದ ತಯಾರಿಸಿದ ಘೃತವನ್ನು ದಾದಿಗೆ ಪಾನಮಾಡಿಸಿ ಪಿತ್ತಹರ ದ್ರವ್ಯಗಳಿಂದ ವಿರೇಚನವನ್ನೂ ಶೀತಳದ್ರವ್ಯಗಳಿಂದ ತಯಾರಿಸಿದ ತೈಲದಿಂದ ಅಭ್ಯಂಗವನ್ನೂ ಲೇಪಸೇಕಾದಿಗಳನ್ನೂ ಮಾಡಿಸಬೇಕು ॥೧೦೦–೧೦೧॥

೩. ಶ್ಲೇಷ್ಮದೋಷದಿಂದ ದುಷ್ಟವಾದ ಸ್ತನ್ಯಕ್ಕೆ ಅತಿಮಧುರ, ಸೈಂಧವ ಲವಣಗಳ ಚೂರ್ಣವನ್ನು ತುಪ್ಪದಲ್ಲಿ ಮಿಶ್ರಮಾಡಿಯಾಗಲೀ, ಹಿಪ್ಪಲಿ, ಸೈಂಧವ ಲವಣಗಳ ಚೂರ್ಣಕ್ಕೆ ತುಪ್ಪವನ್ನು ಮಿಶ್ರಮಾಡಿಯಾಗಲೀ ಮಗುವಿಗೆ ನೆಕ್ಕಿಸ ಬೇಕು. ಮಗ್ಗಾರೆಹೂವಿನ ಪುಡಿಯನ್ನು ಜೇನುತುಪ್ಪದಲ್ಲಿ ಕಲಸಿ ದಾದಿಯ ಸ್ತನಗಳಿಗೂ ಮಗುವಿನ ತುಟಿಗಳಿಗೂ ಲೇಪಮಾಡಿ ಹಾಲು (ಸ್ತನ್ಯ) ಕುಡಿಸಿದರೆ ಮಗುವು ಸುಖವಾಗಿ ವಮನಮಾಡುತ್ತದೆ. ತೀಕ್ಷ್ಣ ದ್ರವ್ಯಗಳಿಂದ ದಾದಿಗೆ ವಮನಮಾಡಿಸಿ ಪೇಯಾದಿ ಕ್ರಮಗಳಿಂದ ಉಪಚರಿಸಿದಮೇಲೆ ಮುಸ್ತಾದಿಗಳ ಕಷಾಯವನ್ನಾಗಲೀ, ತಗರ, ಏಲಕ್ಕಿ, ದೇವದಾರು, ಕೊಡಶಿಗೆಗಳ ಅಥವಾ ಅತಿಬಜೆ, ಕೊನ್ನಾರಿಗೆಡ್ಡೆ, ಬಜೆ, ಪಂಚಕೋಲಗಳ ಕಷಾಯವನ್ನಾಗಲೀ ಪಾನ ಮಾಡಿಸಬೇಕು ॥೧೦೨–೧೦೫॥

ಮೂಲ—೪. (ಅ।ಹೃ।ಉ।ಅ।೨)—ತ್ರಿದೋಷದುಷ್ಟಸ್ತನ್ಯ (ಕ್ಷೀರಾಲಸಕ) ಚಿಕಿತ್ಸಾ—

ಸ್ತನ್ಯೇ ತ್ರಿದೋಷಮಲನೇ ದುರ್ಗನ್ಧ್ಯಾಮಂ ಜಲೋಪಮಮ್ ॥೧೦೬॥
ವಿಬದ್ಧಮಚ್ಛಂ ವಿಚ್ಛಿನ್ನಂ ಫೇನಿಲಂ ಚೋಪವೇಶ್ಯತೇ।
ಶಕೃನ್ಮೂತ್ರಂ ನಾನಾವ್ಯಥಾವರ್ಣಂ ಮೂತ್ರಂ ಪೀತಂ ಸಿತಂ ಘನಮ್ ॥೧೦೭॥
ಜ್ವರಾರೋಚಕತೃಚ್ಛರ್ದಿಶುಷ್ಕೋದ್ಗಾರವಿಜೃಮ್ಭಿಕಾಃ।
ಅಙ್ಗಭಙ್ಗೋಽಙ್ಗವಿಕ್ಷೇಪಃ ಕೂಜನಂ ವೇಪಥುರ್ಭ್ರಮಃ ॥೧೦೮॥
ಘ್ರಾಣಾಕ್ಷಿಮುಖಪಾಕಾದ್ಯಾ ಜಾಯನ್ತೇಽನ್ಯೇಽಪಿ ತಂ ಗದಮ್।
ಕ್ಷೀರಾಲಸಕಮಿತ್ಯಾಹುರತ್ಯಯಂ ಚಾತಿದಾರುಣಮ್ ॥೧೦೯॥

ತಚ್ಚಿಕಿತ್ಸಾ—

ತತ್ರಾಶು ಧಾತ್ರೀಂ ಬಾಲಂ ಚ ವಮನೇನೋಪಪಾದಯೇತ್।
ವಿಹಿತಾಯಾಂ ಚ ಸಂಸರ್ಗ್ಯಾಂ ವಚಾದಿಂ ಯೋಜಯೇದ್ಗಣಮ್ ॥೧೧೦॥
ನಿಶಾದಿಂ ವಾಥವಾ ಮಾದ್ರೀಪಾಠಾತಿಕ್ತಾಘನಾಮಯಾನ್।
ಪಾಠಾಶುಣ್ಠ್ಯಮೃತಾತಿಕ್ತಾತಿಕ್ತಾದೇವಾಹ್ವಸಾರಿಬಾಃ ॥೧೧೧॥

ಸಮುಸ್ತಮೂರ್ವೇನ್ದ್ರಯವಾಃ ಸ್ತನ್ಯದೋಷಹರಾಃ ಪರಮ್ ।
ಅನುಬನ್ಧೇ ಯಥಾವ್ಯಾಧಿ ಪ್ರತಿಕುರ್ವೀತ ಕಾಲವಿತ್ ॥೧೧೨॥

ದೀಪಿಕೆ—(ಅ।ಹೃ।ಉ।ಅ।೨)—೪. ತ್ರಿದೋಷಗಳಿಂದ ದೂಷಿಸಲ್ಪಟ್ಟ ಸ್ತನ್ಯ ಚಿಕಿತ್ಸೆ—

ತ್ರಿದೋಷದುಷ್ಟಸ್ತನ್ಯಪಾನಮಾಡಿದ ಮಗುವಿನ ಮಲವು ದುರ್ವಾಸನೆಯುಳ್ಳದ್ದಾಗಿ ಪಾಕವಾಗದೆ, ದ್ರವವಾಗಿಯೂ, ಕೆಲವು ವೇಳೆ ಮಲಬದ್ಧವಾಗಿಯೂ, ನೀರಾಗಿ (ಒಡಕಲು ದದ್ದುಮಿಶ್ರವಾಗಿ) ನೊರೆನೊರೆಯಾಗಿಯೂ ಹೊರಕ್ಕೆ ಸ್ರವಿಸುತ್ತದೆ. ಇದನ್ನು ನೀರಿನಲ್ಲಿ ಹಾಕಿದರೆ ಮುಳುಗಿ ಬುಡದಲ್ಲಿ ಕೂತುಬಿಡುತ್ತದೆ. ಮಲ ಸ್ರವಿಸುವಾಗ ಮಗುವಿಗೆ ಅನೇಕ ವಿಧದ ವ್ಯಥೆಗಳುಂಟಾಗುತ್ತವೆ. ಮಲವು ನಾನಾಬಣ್ಣವುಳ್ಳದ್ದಾಗಿರುತ್ತದೆ. ಮೂತ್ರವು ಗಟ್ಟಿಯಾಗಿ ಹಳದಿ ಅಥವಾ ಬಿಳಿಯ ಬಣ್ಣವುಳ್ಳದ್ದಾಗಿರುತ್ತದೆ. ಮಗುವಿಗೆ ಜ್ವರ, ಅರೋಚಕ, ಬಾಯಾರಿಕೆ, ವಮನ, ಬರತೇಗು, ಆಕಳಿಕೆ, ಮೈಮುರಿತ, ಶರೀರದ ಅವಯವಗಳು ಅದರುವುದು, ಕೂ ಕೂ ಎಂಬದಾಗಿ ಕೀರಲು ಧ್ವನಿಮಾಡಿ ನರಳುವುದು, ಮೈನಡುಕ, ಶಿರೋಭ್ರಮಣ (ತಲೆಯನ್ನು ಹೊರಳಿಸುತ್ತದೆ), ಮೂಗು, ಕಣ್ಣು, ಬಾಯಿಗಳಲ್ಲಿ ಹುಣ್ಣು ಇವೇ ಮೊದಲಾದ ರೋಗಗಳುಂಟಾಗುತ್ತವೆ. ಈ ಲಕ್ಷಣಗಳಿದ್ದರೆ ಆ ವ್ಯಾಧಿಯನ್ನು ಕ್ಷೀರಾಲಸಕವೆನ್ನುತ್ತಾರೆ. ಅತಿಭಯಂಕರವಾದ ಈ ವ್ಯಾಧಿಯು ಪ್ರಾಣವನ್ನು ಅಪಹರಿಸುತ್ತದೆ ॥ ೧೦೬–೧೦೯ ॥

ಅದಕ್ಕೆ ಪ್ರತೀಕಾರವು—

ಕೂಡಲೇ ದಾದಿಗೂ ಮಗುವಿಗೂ ವಮನಮಾಡಿಸಬೇಕು. ಅನಂತರ ವಮನಮಾಡಿದವರಿಗೆ ನಡೆಸಬೇಕಾದ ಪೇಯಾ, ವಿಲೇಪಿಗಳ ಪಾನದಿಂದ ಉಪಚರಿಸಿ ಅಗ್ನಿವೃದ್ಧಿಯಾದಮೇಲೆ ವಚಾದಿ ದ್ರವ್ಯಗಳ ಅಥವಾ ನಿಶಾದಿ ದ್ರವ್ಯಗಳ ಚೂರ್ಣವನ್ನಾಗಲೀ ಕಷಾಯವನ್ನಾಗಲೀ ದಾದಿಗೆ ಕುಡಿಸಬೇಕು. ಅಗಳುಶುಂಠಿ, ಶುಂಠಿ, ಅಮೃತವಳ್ಳಿ, ನೆಲಬೇವು, ಕಟುಕರೋಹಿಣಿ, ದೇವದಾರು, ಸೊಗದೆಬೇರು, ಕೊರಟಿಗೆ ಹುಂಬು, ಕೊನ್ನಾರಿಗೆಡ್ಡೆ, ಕೊಡಶಿಗೆಬೀಜ ಇವುಗಳು ಸ್ತನ್ಯದೋಷನಿವಾರಣೆ ಮಾಡತಕ್ಕವು. ಆಮದೋಷವು ಸಂಬಂಧಿಸಿಕೊಂಡೇ ಇದ್ದರೆ ರೋಗಗಳಿಗೆ ತಕ್ಕಂತೆ ಚಿಕಿತ್ಸೆ ನಡೆಸಬೇಕು ॥೧೧೦–೧೧೨॥

ಮೂಲ—೫. (ಅ।ಹೃ।ಉ।ಅ।೨)—ದನ್ತೋದ್ಭೇದಃ—

ದನ್ತೋದ್ಭೇದಶ್ಚ ರೋಗಾಣಾಂ ಸರ್ವೇಷಾಮಪಿ ಕಾರಣಮ್ ।
ವಿಶೇಷಾಜ್ಜ್ವರವಿಡ್ಭೇದಕಾಸಚ್ಛರ್ದಿ ಶಿರೋರುಜಾಮ್ ॥೧೧೩॥
ಅತಿಸ್ಪನ್ದಸ್ಯ ಪೋಥಕ್ಯಾ ವಿಸರ್ಪಸ್ಯ ಚ ಜಾಯತೇ ।
ಪೃಷ್ಠಭಂಗೇ ಬಿಡಾಲಾನಾಂ ಬರ್ಹಿಣಾಂ ಚ ಶಿಖೋದ್ಗಮೇ ॥೧೧೪॥
ದನ್ತೋದ್ಭವೇ ಚ ಬಾಲಾನಾಂ ನ ಹಿ ಕಿಂಚಿನ್ನ ದೂಯತೇ ।
ಯಥಾ ದೋಷಂ ಯಥಾ ರೋಗಂ ಯಥೋದ್ರೇಕಂ ಯಥಾಶಯಮ್ ॥೧೧೫॥

ವಿಭಜ್ಯ ದೇಶಕಾಲಾದೀಂಸ್ತತ್ರ ಯೋಜ್ಯಂ ಭಿಷಗ್ಜಿತಮ್।
ತ ಏವ ದೋಷಾ ದೂಷ್ಯಾಶ್ಚ ಜ್ವರಾದ್ಯಾ ವ್ಯಾಧಯಶ್ಚ ಯತ್ ॥೧೧೬॥
ಅತಸ್ತದೇವ ಭೈಷಜ್ಯಂ ಮಾತ್ರಾ ತ್ವಸ್ಯ ಕನೀಯಸೀ ।
ಸೌಕುಮಾರ್ಯಾಲ್ಪಕಾಯತ್ವಾತ್ ಸರ್ವಾನ್ನಾನುಪಸೇವನಾತ್ ॥೧೧೭॥
ಸ್ನಿಗ್ಧಾ ಏವ ಸದಾ ಬಾಲಾ ಘೃತಕ್ಷೀರನಿಷೇವಣಾತ್।
ಸದ್ಯಸ್ತಾನ್ ವಮನಂ ತಸ್ಮಾತ್ಪಾಯಯೇನ್ಮತಿಮಾನ್ ಮೃದು ॥೧೧೮॥
ಸ್ತನ್ಯಸ್ಯ ತೃಪ್ತಂ ವಮಯೇತ್ಕ್ಷೀರಕ್ಷೀರಾನ್ನಸೇವಿನಮ್।
ಪೀತವನ್ತಂ ತನುಂ ಪೇಯಾಮನ್ನಾದಂ ಘೃತಸಂಯುತಾಮ್ ॥೧೧೯॥
ಬಸ್ತಿಂ ಸಾಧ್ಯೇ ವಿರೇಕೇಣ ಮರ್ಶೇನ ಪ್ರತಿಮರ್ಶನಮ್।
ಯುಂಜ್ಯಾದ್ವಿರೇಚನಾದೀಂಸ್ತು ಧಾತ್ರ್ಯಾ ಏವ ಯಥೋದಿತಾನ್ ॥೧೨೦॥
ಮೂರ್ವಾವ್ಯೋಷವರಾಕೋಲಜಮ್ಬೂತ್ವಗ್ದಾರುಸರ್ಷಪಾಃ।
ಸಪಾಠಾ ಮಧುನಾಲೀಢಾಃ ಸ್ತನ್ಯದೋಷಹರಾಃ ಪರಮ್ ॥೧೨೧॥
ದನ್ತಪಾಳೀಂ ಸಮಧುನಾ ಚೂರ್ಣೇನ ಪ್ರತಿಸಾರಯೇತ್।
ಪಿಪ್ಪಲ್ಯಾ ಧಾತಕೀಪುಷ್ಪಧಾತ್ರೀಫಲಕೃತೇನ ವಾ ॥೧೨೨॥
ಲಾವತಿತ್ತಿರಿವಲ್ಲೂರರಜಃ ಪುಷ್ಪರಸಃ ಪ್ಲುತಮ್।
ದ್ರುತಂ ಕರೋತಿ ಬಾಲಾನಾಂ ದನ್ತಕೇಸರವನ್ಮುಖಮ್ ॥೧೨೩॥
ವಚಾದ್ವಿಬೃಹತೀಪಾಠಾಕಟುಕಾತಿವಿಷಾಘನೈಃ।
ಮಧುರೈಶ್ಚ ಘೃತಂ ಸಿದ್ಧಂ ಸಿದ್ಧಂ ದಶನಜನ್ಮನಿ ॥೧೨೪॥
ರಜನೀದಾರುಸರಳಃ ಶ್ರೇಯಸೀ ಬೃಹತೀದ್ವಯಮ್।
ಪೃಶ್ನಿಪರ್ಣೀ ಶತಾಹ್ವಾ ಚ ಲೀಢಂ ಮಾಕ್ಷಿಕಸರ್ಪಿಷಾ ॥೧೨೫॥
ಗ್ರಹಣೀದೀಪನಂ ಶ್ರೇಷ್ಠಂ ಮಾರುತಸ್ಯಾನುಲೋಮನಮ್।
ಅತೀಸಾರಜ್ವರಶ್ವಾಸಕಾಮಲಾಪಾಣ್ಡುಕಾಸನುತ್ ॥೧೨೬॥
ಬಾಲಸ್ಯ ಸರ್ವರೋಗೇಷು ಪೂಜಿತಂ ಬಲವರ್ಣದಮ್।
ಸಮಙ್ಗಾಧಾತಕೀರೋಧ್ರಕುಟನ್ನಟಬಲಾಹ್ವಯೈಃ ॥೧೨೭॥
ಮಹಾಸಹಾಕ್ಷುದ್ರಸಹಾಕ್ಷುದ್ರಬಿಲ್ವಶಲಾಟುಭಿಃ।
ಸಕಾರ್ಪಾಸೀಫಲೈಸ್ತೋಯೇ ಸಾಧಿತೈಃ ಸಾಧಿತಂ ಘೃತಮ್ ॥೧೨೮॥
ಕ್ಷೀರಮಸ್ತುಯುತಂ ಹನ್ತಿ ಶೀಘ್ರಂ ದನ್ತೋದ್ಭವೋದ್ಭವಾನ್।
ವಿವಿಧಾನಾಮಯಾನೇತದ್ವೃದ್ಧಕಾಶ್ಯಪನಿರ್ಮಿತಮ್ ॥೧೨೯॥
ದನ್ತೋದ್ಭವೇಷು ರೋಗೇಷು ನ ಬಾಲಮತಿಯನ್ತ್ರಯೇತ್।
ಸ್ವಯಮಪ್ಯುಪಶಾಮ್ಯನ್ತಿ ಜಾತದನ್ತಸ್ಯ ಯದ್ಗದಾಃ ॥೧೩೦॥

ದೀಪಿಕೆ—೫. ದನ್ತೋದ್ಭೇದ—

ಮಕ್ಕಳಿಗೆ ಹಲ್ಲು ಹುಟ್ಟುವ ಕಾಲದಲ್ಲಿ ಜ್ವರ, ಅತಿಸಾರ, ಕೆಮ್ಮು, ವಮನ, ತಲೆನೋವು, ಮೈ ಅದರುವುದು, ಪೋಥಕಿಯೆಂಬ ರೋಗ (ಇದರಲ್ಲಿ ಕಫದೋಷದಿಂದ ಸಾಸಿವೆಕಾಳಿನ ಗಾತ್ರದ ಗಟ್ಟಿಯಾದ ಬಿಳಿಗುಳ್ಳೆಗಳು ಕಣ್ಣಿನಲ್ಲಿ ಏಳುತ್ತವೆ; ಗುಡ್ಡೆಗಳು ಊದುತ್ತವೆ. ರೆಪ್ಪೆಗಳು ಗುಡ್ಡೆಗಳಿಗೆ ಮೆತ್ತಿಕೊಂಡು ನವೆಯನ್ನುಂಟುಮಾಡುತ್ತವೆ; ಜಿಬರು ಮಿಶ್ರವಾಗಿ ಕಣ್ಣೀರು ಸೋರುತ್ತದೆ.) ವಿಸರ್ಪ ರೋಗ ಇವುಗಳುಂಟಾಗುತ್ತವೆ. ಬೆಕ್ಕಿನಮರಿಗೆ ಬೆನ್ನಿನಮೂಳೆ ಬಗ್ಗುವಾಗಲೂ, ನವಿಲುಪಕ್ಷಿಗೆ ತಲೆಯಲ್ಲಿ ಶಿಖೆಯು ಹುಟ್ಟುವಾಗಲೂ, ಎಳೆಮಕ್ಕಳಿಗೆ ಹಲ್ಲು ಬರು

ವಾಗಲೂ ಅವುಗಳ ಸಕಲ ಅವಯುವಗಳಲ್ಲೂ ಸಹಿಸಲಾರದಷ್ಟು ಬಾಧೆಯುಂಟಾಗುತ್ತದೆ. ಉಲ್ಬಣವಾದ ದೋಷಗಳಿಗೂ ಆಶಯಗಳಿಗೂ ತಕ್ಕಹಾಗೆ ದೇಶ, ಕಾಲ, ಸತ್ವ (ಮನಸ್ಸು) ಸಾತ್ಮ್ಯ (ಒಗ್ಗಿದ ಆಹಾರ ವಿಹಾರ), ಪ್ರಕೃತಿಗಳನ್ನು ವಿಂಗಡಿಸಿ ಔಷಧ ಪ್ರಮಾಣವನ್ನು ನಿರ್ಧರಿಸಬೇಕು. ವಾತಾದಿದೋಷಗಳೂ ರಸಾದಿಧಾತುಗಳೂ, ಜ್ವರಾದಿರೋಗಗಳೂ ದೊಡ್ಡವರಂತೆಯೇ ಮಕ್ಕಳಿಗೂ ಉಂಟಾಗುತ್ತವೆ. ರೋಗನಿವಾರಣೆಗಾಗಿ ದೊಡ್ಡವರಿಗೆ ಕೊಡತಕ್ಕ ಔಷಧಗಳನ್ನೇ ಮಕ್ಕಳಿಗೂ ಕೊಡಬೇಕಾಗುತ್ತದೆ. ಆದರೂ ಔಷಧವನ್ನು ಅತಿಸ್ವಲ್ಪ ಪ್ರಮಾಣದಿಂದ ಕೊಡಬೇಕು. ಏಕೆಂದರೆ ಮಕ್ಕಳ ಶರೀರವು ಅತಿಚಿಕ್ಕದಾಗಿಯೂ ಅತ್ಯಂತ ಮೃದುವಾಗಿಯೂ ಇರುತ್ತದೆ. ದೊಡ್ಡವರಂತೆ ಎಲ್ಲಾ ವಿಧದ ಆಹಾರಗಳನ್ನೂ ಉಪಯೋಗಿಸಲರಿಯವು. ಬರಿಯಹಾಲನ್ನೇ ಕುಡಿಯುತ್ತವೆ. ಸರ್ವದಾ ಹಾಲುತುಪ್ಪಗಳನ್ನು ಸೇವಿಸುವುದರಿಂದ ಮಕ್ಕಳು ಸದಾ ಸ್ನಿಗ್ಧರಾಗಿಯೇ ಇರುತ್ತಾರೆ. ಆದಕಾರಣ ಬುದ್ಧಿವಂತನಾದ ವೈದ್ಯನು ಮಕ್ಕಳಿಗೆ ರೋಗ ಬಂದ ಕೂಡಲೇ ಮೃದುವಾದ ವಮನೌಷಧವನ್ನು ಪ್ರಯೋಗಿಸಬೇಕು. ದೊಡ್ಡವರಂತೆ ಸ್ನೇಹ ಸ್ವೇದ ಕರ್ಮಗಳನ್ನು ಮಾಡಿಸಿದಮೇಲೆ ವಮನಮಾಡಿಸಬೇಕೆಂಬ ಅವಶ್ಯಕತೆಯಿರುವುದಿಲ್ಲ. ಹಾಲು ಕುಡಿಯುವ ಮಗುವಿಗೂ ಹಾಲು, ಅನ್ನಗಳನ್ನುಪಯೋಗಿಸುವ ಮಗುವಿಗೂ ಹಾಲು ಕುಡಿಸಿದಮೇಲೆ ವಮನೌಷಧವನ್ನು ಕುಡಿಸಬೇಕು; ಅನ್ನವನ್ನು ಮಾತ್ರವೇ ತಿನ್ನುವ ಮಗುವಿಗೆ ತಿಳಿಯಾದ ಗಂಜಿಗೆ ತುಪ್ಪವನ್ನು ಸೇರಿಸಿ ಕುಡಿಸಿದಮೇಲೆ ವಮನೌಷಧವನ್ನು ಕುಡಿಸಬೇಕು. ಮಕ್ಕಳಿಗೆ ವಿರೇಚನೌಷಧದಿಂದ ಗುಣವಾಗುವ ರೋಗಗಳಲ್ಲಿ ಬಸ್ತಿಕರ್ಮವನ್ನು ಮಾಡಿಸಬೇಕು; ಮರ್ಶನಸ್ಯದಿಂದ ಗುಣವಾಗುವ ರೋಗಗಳಲ್ಲಿ ಪ್ರತಿ ಮರ್ಶನಸ್ಯವನ್ನು ಪ್ರಯೋಗಿಸಬೇಕು. ರೋಗಗಳಿಗೆ ತಕ್ಕಂತೆ ವಿರೇಚನಾದಿ ಕರ್ಮಗಳನ್ನು ದಾದಿಗೆ ಮಾಡಿಸಬೇಕು. ಮಕ್ಕಳಿಗೆ ಮಾಡಿಸಬಾರದು. ಕೊರಟಿಗೆಹಂಬು, ತ್ರಿಕಟು, ತ್ರಿಫಲೆ, ಎಲಚಿಹಣ್ಣು, ನೇರಳೆಚೆಕ್ಕೆ, ದೇವದಾರು, ಸಾಸಿವೆ, ಅಗಳುಶುಂಠಿ, ಇವುಗಳ ಪುಡಿಯನ್ನು ಜೇನುತುಪ್ಪದಲ್ಲಿ ರಂಗಳಿಸಿ ನೆಕ್ಕಿಸಿದರೆ ಬಾಲಕರ ಸ್ತನ್ಯದೋಷಗಳು ಗುಣವಾಗುತ್ತವೆ. ಹಿಪ್ಪಲಿಯ ಚೂರ್ಣವನ್ನಾಗಲೀ ಅಥವಾ ಧಾತಕೀಕುಸುಮ ನೆಲ್ಲಿಕಾಯಿಗಳ ಚೂರ್ಣವನ್ನಾಗಲೀ ಜೇನುತುಪ್ಪದಲ್ಲಿ ರಂಗಳಿಸಿ ಮಗುವಿನ ಒಸಡು (ದನ್ತವೇಷ್ಟ) ಗಳಿಗೆ ಮೆಲ್ಲಗೆ ತಿಕ್ಕಬೇಕು. ಲಾವನಹಕ್ಕಿ, ತಿತ್ತಿರಿ ಪಕ್ಷಿಗಳ ಮಾಂಸವನ್ನೊಣಗಿಸಿ ಪುಡಿಮಾಡಿ ಜೇನುತುಪ್ಪವನ್ನು ಮಿಶ್ರಮಾಡಿ ಮಕ್ಕಳ ಒಸಡುಗಳಿಗೆ ತಿಕ್ಕಿದರೆ ತಾವರೆಕುಸುಮಗಳಂತೆ ಸುಂದರವಾದ ಹಲ್ಲುಗಳು ಹುಟ್ಟುತ್ತವೆ. ಬಜೆ, ಹೆಗ್ಗುಳ್ಳ, ನೆಲಗುಳ್ಳ, ಅಗಳುಶುಂಠಿ, ಕಟುಕರೋಹಿಣಿ, ಅತಿಬಜೆ, ಕೊನ್ನಾರಿಗೆಡ್ಡೆ, ಮತ್ತು ಕಾಕೋಲ್ಯಾದಿ ಮಧುರಗಣ ದ್ರವ್ಯಗಳನ್ನು ಸೇರಿಸಿ ತಯಾರಿಸಿದ ಘೃತವನ್ನು ಹಲ್ಲುಹುಟ್ಟುವ ಕಾಲದಲ್ಲಿ ಮಗುವಿಗೆ ಪಾನಮಾಡಿಸಬೇಕು. ಅರಶಿನ, ಸರಳದೇವದಾರು, ಗಜಹಿಪ್ಪಲಿ, ಹೆಗ್ಗುಳ್ಳ, ನೆಲಗುಳ್ಳ, ಒಂದೆಲೆ ಹೊನ್ನೆ, ಸಬ್ಬಶಿಗೆ, ಇವುಗಳ ಚೂರ್ಣವನ್ನು ಜೇನುತುಪ್ಪವನ್ನು ಮಿಶ್ರಮಾಡಿ

ನೆಕ್ಕಿಸಿದರೆ ಮಕ್ಕಳ ಗ್ರಹಣಿಯೆಂಬ ಅವಯವವು ದೀಪನಗೊಳ್ಳುತ್ತದೆ. (ಪಾಚಕ ರಸವನ್ನು ಸರಿಯಾಗಿ ತಯಾರಿಸುತ್ತದೆ.) ವಾತ ದೋಷವು ಸ್ವಮಾರ್ಗದಿಂದ ಸಂಚರಿಸುತ್ತದೆ. ಅತಿಸಾರ, ಜ್ವರ, ಶ್ವಾಸ, ಕಾಮಾಲೆ, ಪಾಂಡು, ಕೆಮ್ಮು ಮೊದಲಾದ ಮಕ್ಕಳ ಸಕಲ ರೋಗಗಳೂ ಗುಣವಾಗುತ್ತವೆ ಮತ್ತು ಮಕ್ಕಳಿಗೆ ಬಲವೂ ಕಾಂತಿಯೂ ಉಂಟಾಗುತ್ತದೆ. ಮಂಜಿಷ್ಠೆ, ಧಾತಕೀಕುಸುಮ, ಲೋಧ್ರ, ಜಲಮುಸ್ತೆ, ಕಳ್ಳಂಗಡಲೆ, ಕಾಡುದ್ದು, ಕಾಡುಹೆಸರು, ನೆಲಗುಳ್ಳ, ಬಿಲ್ವಪತ್ರೆ ಹೀಚು, ಹತ್ತಿಕಾಯಿಗಳನ್ನು ಜೆಜ್ಜಿ ನೀರಿನಿಂದ ಕಷಾಯವನ್ನು ತಯಾರಿಸಿ ಹಾಲು, ಮೊಸರಿನಕಟ್ಟು ತುಪ್ಪಗಳನ್ನು ಸೇರಿಸಿ ತಯಾರಿಸಿದ ಘೃತವನ್ನು ಹಲ್ಲು ಹುಟ್ಟುವಾಗ ಮಕ್ಕಳಿಗೆ ಕುಡಿಸಿದರೆ ಮಕ್ಕಳ ಸಕಲ ರೋಗಗಳೂ ಗುಣವಾಗುತ್ತವೆ. ಇದು ವೃದ್ಧಕಾಶ್ಯಪರಿಂದ ಹೇಳಲ್ಪಟ್ಟ ಯೋಗವು. ದನ್ತೋತ್ಪತ್ತಿಯಾಗುವಾಗ ಮಕ್ಕಳಿಗೆ ಉಂಟಾಗುವ ರೋಗಗಳಲ್ಲಿ ಪಥ್ಯ, ಭೋಜನಗಳಲ್ಲಿ, ನಿರ್ಬಂಧಮಾಡಬಾರದು. ಏಕೆಂದರೆ ಮಕ್ಕಳಿಗೆ ಹಲ್ಲು ಹುಟ್ಟಿದಮೇಲೆ ಎಲ್ಲಾ ರೋಗಗಳೂ ತಾವಾಗಿಯೇ ಶಾಂತವಾಗುತ್ತವೆ (ನಿವಾರಣೆಯಾಗುತ್ತವೆ) ॥೧೧೩–೧೩೦॥

ಮೂಲ—೬. ಬಾಲಶೋಷಃ—

ಅತ್ಯಹಃಸ್ವಪ್ನಶೀತಾಮ್ಬುಶ್ಲೈಷ್ಮಿಕಸ್ತನ್ಯಸೇವಿನಃ ।
ಶಿಶೋಃ ಕಫೇನ ರುದ್ಧೇಷು ಸ್ರೋತಸ್ಸು ರಸವಾಹಿಷು ॥೧೩೧॥
ಅರೋಚಕಃ ಪ್ರತಿಶ್ಯಾಯೋ ಜ್ವರಃ ಕಾಸಶ್ಚ ಜಾಯತೇ ।
ಕುಮಾರಃ ಶುಷ್ಯತಿ ತತೋ ಸ್ನಿಗ್ಧಶುಕ್ಲಮುಖೇಕ್ಷಣಃ ॥೧೩೨॥

ಚಿಕಿತ್ಸಾ—

ಸ್ತೈನ್ಧವವ್ಯೋಷಶಾರ್ಙ್ಗೇಷ್ಠಾಪಾಠಾಗಿರಿಕದಮ್ಬುಕಾರ್ ।
ಶುಷ್ಯತೋ ಮಧುಸರ್ಪಿರ್ಭ್ಯಾಮರುಚ್ಯಾದಿಷು ಯೋಜಯೇತ್ ॥೧೩೩॥
ಅಶೋಕರೋಹಿಣೀಯುಕ್ತಂ ಪಂಚಕೋಲಂ ಚ ಚೂರ್ಣಿತಮ್ ।
ಬದರೀಧಾತಕೀಧಾತ್ರೀಚೂರ್ಣಂ ವಾ ಸರ್ಪಿಷಾ ದ್ರುತಮ್ ॥೧೩೪॥
ಸ್ಥಿರಾವಚಾದ್ವಿಬೃಹತೀಕಾಕೋಳೀಪಿಪ್ಪಲೀನತೈಃ ।
ನಿಚುಲೋತ್ಪಲವರ್ಷಾಭೂಭಾರ್ಗೀಮುಸ್ತೈಶ್ಚ ಕಾರ್ಷಿಕೈಃ ॥೧೩೫॥
ಸಿದ್ಧಂ ಪ್ರಸ್ಥಾರ್ಧಮಾಜ್ಯಸ್ಯ ಸ್ರೋತಸಾಂ ಶೋಧನಂ ಪರಮ್ ।
ಸಿಂಹ್ಯಶ್ವಗನ್ಧಾಸುರಸಾಕಣಾಗರ್ಭಂ ಚ ತದ್ಗುಣಮ್ ॥೧೩೬॥
ಯಷ್ಟ್ಯಾಹ್ವಪಿಪ್ಪಲೀರೋಧ್ರಪದ್ಮಕೋತ್ಪಲಚನ್ದನೈಃ ।
ತಾಳೀಸಸಾರಿವಾಭ್ಯಾಂ ಚ ಸಾಧಿತಂ ಶೋಷಜಿದ್ಘೃತಮ್ ॥೧೩೭॥
ಶೃಙ್ಗೀಮಧೂಲಿಕಾಭಾರ್ಗೀಪಿಪ್ಪಲೀದೇವದಾರುಭಿಃ ।
ಅಶ್ವಗನ್ಧಾದ್ವಿಕಾಕೋಳೀರಾಸ್ನರ್ಷಭಕಜೀವಕೈಃ ॥೧೩೮॥
ಶೂರ್ಪಪರ್ಣೀವಿಡಙ್ಗೈಶ್ಚ ಕಲ್ಕಿತೈಃ ಸಾಧಿತಂ ಘೃತಮ್ ।
ಶಶೋತ್ತಮಾಙ್ಗನಿರ್ಯೂಹೇ ಶುಷ್ಯತಃ ಪುಷ್ಟಿಕೃತ್ಪರಮ್ ॥೧೩೯॥
ವಚಾವಯಸ್ಥಾತಗರಕಾಯಸ್ಥಾಚೋರಕೈಃ ಶೃತಮ್ ।
ಬಸ್ತಮೂತ್ರಸುರಾಭ್ಯಾಂ ಚ ತೈಲಮಭ್ಯಂಜನೇ ಹಿತಮ್ ॥೧೪೦॥

ಲಾಕ್ಷಾರಸಸಮಂ ತೈಲಪ್ರಸ್ಥಂ ಮಸ್ತುಚತುರ್ಗುಣಮ್ ।
ಅಶ್ವಗನ್ಧಾನಿಶಾದಾರುಕೌನ್ತೀಕುಷ್ಠಾಬ್ದಚನ್ದನೈಃ ॥೧೪೧॥
ಸಮೂರ್ವಾರೋಹಿಣೀರಾಸ್ನಾಶತಾಹ್ವಾಮಧುಕೈಃ ಸಮೈಃ ।
ಸಿದ್ಧಂ ಲಾಕ್ಷಾದಿಕಂ ನಾಮ ತೈಲಮಭ್ಯಂಜನಾದಿದಮ್ ॥೧೪೨॥
ಬಲ್ಯಂ ಜ್ವರಕ್ಷಯೋನ್ಮಾದಶ್ವಾಸಾಪಸ್ಮಾರವಾತನುತ್ ।
ಯಕ್ಷರಾಕ್ಷಸಭೂತಘ್ನಂ ಗರ್ಭಿಣೀನಾಂ ಚ ಶಸ್ಯತೇ ॥೧೪೩॥
ಮಧುನಾತಿವಿಷಾಶೃಙ್ಗೀಪಿಪ್ಪಲೀರ್ಲೇಹಯೇಚ್ಛಿಶುಮ್ ।
ಏಕಾಂ ವಾಽತಿವಿಷಾಂ ಕಾಸಜ್ವರಚ್ಛರ್ದಿರುಪದ್ರುತಮ್ ॥೧೪೪॥

ದೀಪಿಕೆ—೬. ಬಾಲಕ್ಷಯ—

ಅತಿಯಾಗಿ ಹಗಲು ನಿದ್ರೆಮಾಡುವ, ತಣ್ಣೀರನ್ನೂ, ಶ್ಲೇಷ್ಮದೂಷಿತವಾದ ಸ್ತನ್ಯವನ್ನೂ ಕುಡಿಯುವ ಮಗುವಿನ ರಸವಾಹಿಸ್ರೋತಸ್ಸುಗಳು ಕಫದಿಂದ ತಡೆಯಲ್ಪಡುವ ಕಾರಣ ಅರುಚಿ, ನೆಗಡಿ, ಜ್ವರ, ಕೆಮ್ಮುಗಳುಂಟಾಗಿ ಮಗುವು ದಿನದಿನಕ್ಕೆ ಕೃಶವಾಗಿ ಮುಖವು ಬಿಳುಪೇರಿ ಜಿಡ್ಡು ಬಳಿದಂತೆ ಕಾಣುತ್ತದೆ. ಈ ವ್ಯಾಧಿಗೆ ಬಾಲಶೋಷವೆನ್ನುತ್ತಾರೆ ॥೧೩೧–೧೩೨॥

ಚಿಕಿತ್ಸೆ—

ಸೈನ್ಧವಲವಣ, ತ್ರಿಕಟು, ತವಸದತೊಗಟೆ, ಅಗಳುಶುಂಠಿ, ಬೆಟ್ಟದ ಈಚಲು ಇವುಗಳ ಚೂರ್ಣವನ್ನು ತುಪ್ಪ ಜೇನುತುಪ್ಪಗಳೊಡನೆ ಮಿಶ್ರಮಾಡಿ ಬಾಲಶೋಷ, ಅರುಚಿ ಮೊದಲಾದ ರೋಗಗಳಲ್ಲಿ ನೆಕ್ಕಿಸಬೇಕು ॥೧೩೩॥

ಕಟುಕರೋಹಿಣಿ ಮತ್ತು ಪಂಚಕೋಲಗಳ ಚೂರ್ಣವನ್ನಾಗಲೀ ಅಥವಾ ಎಲಚಿಹಣ್ಣು ನೆಲ್ಲಿಕಾಯಿಗಳ ಚೂರ್ಣವನ್ನಾಗಲೀ ತುಪ್ಪದಲ್ಲಿ ಕಲಸಿ ನೆಕ್ಕಿಸಬೇಕು ॥೧೩೪॥

ಮೂರೆಲೆಹೊನ್ನೆ, ಬಜೆ, ಹೆಗ್ಗುಳ್ಳ, ನೆಲಗುಳ್ಳ, ಕಾಕೋಳಿ, ಹಿಪ್ಪಲಿ, ಗ್ರಂಥಿಕತಗರ, ಹಬ್ಬೆ, ಕರಿನೈದಿಲೆ, ಕೊಮ್ಮೆ, ಗಂಟುಭಾರಂಗಿ, ಕೊನ್ನಾರೆ, ಇವು ಪ್ರತಿಯೊಂದನ್ನೂ ಒಂದೊಂದು ಕರ್ಷಪ್ರಮಾಣದಂತೆ ಸೇರಿಸಿ ಚೂರ್ಣಮಾಡಿ ಅದಕ್ಕೆ ಅರ್ಧಪ್ರಸ್ಥ ತುಪ್ಪವನ್ನೂ ಸೇರಿಸಿ ಶಾಸ್ತ್ರೋಕ್ತರೀತಿಯಲ್ಲಿ ತಯಾರಿಸಿದ ಘೃತವನ್ನು ಪಾನಮಾಡಿಸಿದರೆ ಸ್ರೋತೋಮಾರ್ಗಗಳು ತುಂಬಾ ಶುದ್ಧಿಯಾಗುತ್ತವೆ. ಹೆಗ್ಗುಳ್ಳ, ಹಿರಿಮದ್ದು (ಅಶ್ವಗಂಧ), ತುಳಸಿ, ಹಿಪ್ಪಲಿಗಳನ್ನು ಸೇರಿಸಿ ತಯಾರಿಸಿದ ಘೃತವೂ ಅದೇ ಗುಣವುಳ್ಳದ್ದು ॥೧೩೫–೧೩೬॥

ಅತಿಮಧುರ, ಹಿಪ್ಪಲಿ, ಲೋಧ್ರ, ಪದ್ಮಕ, ಕರಿನೈದಿಲೆ, ಶ್ರೀಗಂಧ, ತಾಳೀಸಪತ್ರೆ, ಸೊಗದೆಬೇರು ಇವುಗಳನ್ನು ಸೇರಿಸಿ ತಯಾರಿಸಿದ ಘೃತವು ಬಾಲಶೋಷಹರವು ॥೧೩೭॥

ಕರ್ಕಾಟಕಶೃಂಗಿ, ನೀರಿನಲ್ಲಿ ಬೆಳೆಯುವ ಅತಿಮಧುರ, ಗಂಟುಭಾರಂಗಿ, ಹಿಪ್ಪಲಿ, ದೇವದಾರು, ಅಶ್ವಗಂಧ, ಕ್ಷೀರಕಾಕೋಳಿ, ರಾಸ್ನೆ, ಋಷಭಕ, ಜೀವಕ, ಕಾಡುದ್ದು, ವಾಯುವಿಳಂಗ, ಇವುಗಳ ಚೂರ್ಣವನ್ನು ಮೊಲದ ತಲೆಯೊಳಗಿರುವ

ಮೊದಳಿನ ಕಷಾಯದಲ್ಲಿ ತುಪ್ಪದೊಡನೆ ಸೇರಿಸಿ ತಯಾರಿಸಿದ ಘೃತಪಾನಮಾಡಿಸಿದರೆ ಬಾಲಕರು ಅತಿಯಾಗಿ ಪುಷ್ಟಿಗೊಳ್ಳುತ್ತಾರೆ ॥೧೩೮–೧೩೯॥

ಬಜೆ, ನೆಲ್ಲಿಕಾಯಿ, ತಗರ, ಏಲಕ್ಕಿ, ಕಚೋರಗಳ ಚೂರ್ಣವನ್ನು ಆಡಿನ ಮೂತ್ರ, ಸುರೆಯೆಂಬ ಮದ್ಯದೊಡನೆ ಸೇರಿಸಿ ಎಳ್ಳೆಣ್ಣೆಯನ್ನು ಕೂಡಿಸಿ ತಯಾರಿಸಿದ ತೈಲವು ಬಾಲಶೋಷದಲ್ಲಿ ಅಭ್ಯಂಗಕ್ಕೆ ಉತ್ತಮವಾದದ್ದು ॥೧೪೦॥

ಅರಗಿನ ಕಷಾಯ ಒಂದು ಪ್ರಸ್ಥ, ಎಳ್ಳೆಣ್ಣೆ ಒಂದುಪ್ರಸ್ಥ, ಮೊಸರಿನ ಕಟ್ಟು ನಾಲ್ಕು ಪ್ರಸ್ಥ, ಇವನ್ನು ದೊಡ್ಡ ಗುಡಾಣದಲ್ಲಿ ಹಾಕಿ ಒಲೆಯಮೇಲಿಟ್ಟು ಕಾಯಿಸಬೇಕು ; ಅಶ್ವಗಂಧ, ಅರಶಿನ, ದೇವದಾರು, ರೇಣುಕೆಬೀಜ, ಚಂಗಲ್ಕೋಷ್ಠ, ಕೊನ್ನಾರಿಗಡ್ಡೆ, ಶ್ರೀಗಂಧ, ಹಾಲುಕೊರಟೆಗೆಹಂಬು, ಕಟುಕರೋಹಿಣೀ ರಾಶ್ಮೆ, ಸಬ್ಬಸಿಗೆಬೀಜ, ಅತಿಮಧುರ ಇವುಗಳನ್ನು ಸಮಪ್ರಮಾಣದಲ್ಲಿ ಸೇರಿಸಿದ ಚೂರ್ಣ ನಾಲ್ಕು ಪಲಗಳನ್ನು ಸೇರಿಸಿ ಮಧ್ಯಮಪ್ರಮಾಣದ ಅಗ್ನಿಯಿಂದ ಪಾಕ ಮಾಡಿದ ಲಾಕ್ಷಾತೈಲವು ಅಭ್ಯಂಗಕ್ಕೆ ಉತ್ತಮವಾದದ್ದು. ಇದರ ಉಪಯೋಗದಿಂದ ಬಲವುಂಟಾಗಿ ಜ್ವರ, ಕ್ಷಯ, ಉನ್ಮಾದ, ಅಪಸ್ಮಾರ, ಶ್ವಾಸ, ವಾತರೋಗಗಳು ನಿವಾರಣೆಯಾಗುತ್ತವೆ. ಯಕ್ಷ, ರಾಕ್ಷಸ, ಭೂತ ಇವುಗಳ ಪೀಡೆಯು ನಿವಾರಣೆಯಾಗುತ್ತದೆ. ಗರ್ಭಿಣಿಯರಿಗೂ ಹಿತಕರವಾದದ್ದು ॥೧೪೧–೧೪೩॥

ಅತಿಬಜೆ, ಕರ್ಕಾಟಕಶೃಙ್ಗಿ, ಹಿಪ್ಪಲಿಗಳ ಚೂರ್ಣವನ್ನಾಗಲೀ ಅಥವಾ ಕೇವಲ ಅತಿಬಜೆಯ ಚೂರ್ಣವನ್ನಾಗಲೀ ಜೇನುತುಪ್ಪಗಳೊಡನೆ ರಂಗಳಿಸಿ ನೆಕ್ಕಿಸಿದರೆ ಮಕ್ಕಳ ಕೆಮ್ಮು, ವಾಂತಿ, ಜ್ವರಗಳು ನಿವಾರಣೆಯಾಗುತ್ತವೆ ॥೧೪೪॥

ಮೂಲ—೭. ಸ್ತನ್ಯವಮನಮ್—

ಪೀತಂ ಪೀತಂ ವಮತಿ ಯಃ ಸ್ತನ್ಯಂ ತಂ ಮಧುಸರ್ಪಿಷಾ ।
ದ್ವಿವಾರ್ತಾಕೀಫಲರಸಂ ಪಂಚಕೋಲಂ ಚ ಲೇಹಯೇತ್ ॥೧೪೫॥
ಪಿಪ್ಪಲೀಂ ಪಂಚಲವಣಂ ಕ್ರಿಮಿಜಿತ್ಪಾರಿಭದ್ರಕಮ್
ತದ್ವಲ್ಲಿಹ್ಯಾತ್ತಥಾ ವ್ಯೋಷಂ ಮಷೀಂ ವಾ ರೋಮಚರ್ಮಣಾಮ್ ॥೧೪೬॥
ಲಾಭತಃ ಶಲ್ಯಕಶ್ವಾವಿದ್ಗೋಧರ್ಕ್ಷಶಿಖಿಜನ್ಮನಾಮ್ ।
ಖದಿರಾರ್ಜುನತಾಲೀಸಕುಷ್ಠಚನ್ದನಜೇ ರಸೇ ॥೧೪೭॥
ಸಕ್ಷೀರಂ ಸಾಧಿತಂ ಸರ್ಪಿರ್ವಮಥುಂ ವಿನಿಯಚ್ಛತಿ ।
ಸದನ್ತೋ ಜಾಯತೇ ಯಸ್ತು ದನ್ತಾಃ ಪ್ರಾಗ್ಯಸ್ಯ ಚೋತ್ತರಾಃ ॥೧೪೮॥
ಕುರ್ವೀತ ತಸ್ಮಿನ್ನುತ್ಪಾತೇ ಶಾನ್ತಿಕಂ ಚ ದ್ವಿಜಾತಯೇ ।
ದದ್ಯಾದ್ವತ್ಸದಕ್ಷಿಣಂ ಬಾಲಂ ನೈಗಮೇಷಂ ಚ ಪೂಜಯೇತ್ ॥೧೪೯॥

ಕ್ಷೇಪಕಾವತ್ರ—

ಹನುಮೂಲಗತೋ ವಾಯುರ್ದನ್ತದೇಶೇಽಸ್ಥಿಗೋಚರಃ ।
ಯದಾ ಶಿಶೋಃ ಪ್ರಕುಪಿತೋ ನೋತ್ತಿಷ್ಠನ್ತಿ ತದಾ ದ್ವಿಜಾಃ ॥೧೫೦॥
ರೂಕ್ಷಾಶಿನೋ ವಾತಿಕಸ್ಯ ಚಾಲಯತ್ಯನಿಲಃ ಸಿರಾಃ ।
ಹನ್ವಾಶ್ರಯಾಃ ಪ್ರಸುಪ್ತಸ್ಯ ದನ್ತೈಃ ಶಬ್ದಂ ಕರೋತ್ಯತಃ ॥೧೫೧॥

ದೀಪಿಕೆ—೭. ಸ್ತನ್ಯವಮನ (ಕಕ್ಕಲುರೋಗ)—

ಕುಡಿದ ಹಾಲನ್ನು ಕಕ್ಕುವ ಮಕ್ಕಳಿಗೆ ಹೆಗ್ಗುಳ್ಳ; ನೆಲಗುಳ್ಳಗಳ ರಸಕ್ಕೆ ಪಂಚಕೋಲದ ಚೂರ್ಣ, ತುಪ್ಪ, ಜೇನುತುಪ್ಪಗಳನ್ನು ಮಿಶ್ರಮಾಡಿ ನೆಕ್ಕಿಸಬೇಕು. ಅಥವಾ ಹಿಪ್ಪಲಿ, ಪಂಚಲವಣ, ವಿಡಂಗ, ಬೇವಿನತೊಗಟೆಗಳ ಚೂರ್ಣವನ್ನಾಗಲೀ ಮುಳ್ಳುಹಂದಿ, ಕಾಡುಹಂದಿ, ಉಡ, ಕರಡಿ, ನವಿಲುಗಳ ಚರ್ಮ, ಕೂದಲುಗಳನ್ನು ಸುಟ್ಟು ಅನಂತರ ಬರುವ ಮಸಿಯನ್ನಾಗಲೀ ತುಪ್ಪ ಜೇನುತುಪ್ಪಗಳೊಡನೆ ನೆಕ್ಕಿಸಬೇಕು ಕಗ್ಗಲಿತೊಗಟೆ, ಮತ್ತಿತೊಗಟೆ, ತಾಳೀಸಪತ್ರೆ, ಚಂಗಲ್ಕೋಷ್ಠ ಶ್ರೀಗಂಧ, ಇವುಗಳ ಕಷಾಯ, ಹಾಲು ತುಪ್ಪಗಳನ್ನು ಸೇರಿಸಿ ತಯಾರಿಸಿದ ಘೃತವನ್ನು ತಿನ್ನಿಸಿದರೆ ವಮನಹರವು ॥೧೪೫–೧೪೭॥

ಕ್ಷೇಪಕ—

ಹಲ್ಲುಹುಟ್ಟಿದ ಮಗುವು ಜನನವಾದರೂ ಅಥವಾ ಮೇಲಿನ ಸಾಲಿನಲ್ಲಿ ಮೊದಲು ಹಲ್ಲು ಹುಟ್ಟಿದರೂ ಅದು ತಂದೆತಾಯಿಗಳಿಗೆ ಹಾನಿಕರವಾದ ಉತ್ಪಾತ ಲಕ್ಷಣವಾದ್ದರಿಂದ ಶಾನ್ತಿಕರ್ಮವನ್ನು ಮಾಡಿಸಿ ಅಪಮೃತ್ಯು ಪರಿಹಾರವಾಗಲೆಂದು ನೈಗಮೇಷಗ್ರಹವನ್ನುದ್ದೇಶಿಸಿ ದಕ್ಷಿಣೆಸಮೇತವಾಗಿ ಆ ಮಗುವನ್ನು ಬ್ರಾಹ್ಮಣನಿಗೆ ದಾನಮಾಡಿಕೊಡಬೇಕು. ಮಗುವಿನ ದವಡೆಗಳಲ್ಲಿ ವಾತವು ಪ್ರಕುಪಿತವಾಗಿ ಮೂಳೆಗಳನ್ನು ಸೇರಿ ಹಲ್ಲು ಹುಟ್ಟದಂತೆ ತಡೆಗಟ್ಟಿ ಹನ್ವಾಶ್ರಿತಗಳಾದ ಸಿರೆಗಳನ್ನು ಚಲಿಸುವಂತೆ ಮಾಡುತ್ತದೆ. ಹಲ್ಲುಗಳು ಒಂದಕ್ಕೊಂದು ತಿಕ್ಕುವುದರಿಂದ " ಕರಕರ " ವೆಂದು ಶಬ್ದವಾಗುತ್ತದೆ ॥೧೫೦–೧೫೧॥

ಮೂಲ—(ಅ।ಹೃ।ಉ।ಅ।೨)—೮. ತಾಲುಕಣ್ಟಕಃ—

ತಾಲುಮಾಂಸೇ ಕಫಃ ಕ್ರುದ್ಧಃ ಕುರುತೇ ತಾಲುಕಣ್ಟಕಮ್।
ತೇನ ತಾಲುಪ್ರದೇಶಸ್ಯ ನಿಮ್ನತಾ ಮೂರ್ಧ್ನಿ ಜಾಯತೇ ॥೧೫೨॥
ತಾಲುಪಾತಃ ಸ್ತನದ್ವೇಷಃ ಕೃಚ್ಛ್ರಾತ್ಪಾನಂ ಶಕೃದ್ದ್ರವಮ್।
ತೃಡಾಸ್ಯಕಣ್ಠಾಕ್ಷಿರುಜಾ ಗ್ರೀವಾದುರ್ಧರತಾ ವಮಿಃ ॥೧೫೩॥

ಚಿಕಿತ್ಸಾ—

ತತ್ಪ್ರೋತ್ಕ್ಷಿಪ್ಯ ಯಕ್ಷಾರಕ್ಷೌದ್ರಾಭ್ಯಾಂ ಪ್ರತಿಸಾರಯೇತ್।
ತಾಲು ತದ್ವತ್ಕಣಾಶುಣ್ಠೀಗೋಶಕೃದ್ರಸಸೈನ್ಧವೈಃ ॥೧೫೪॥
ಶೃಙ್ಗವೇರನಿಶಾಭೃಙ್ಗಂ ಕಲ್ಕಿತಂ ವಟಪಲ್ಲವೈಃ।
ಬದ್ಧ್ವಾ ಗೋಶಕೃತಾಲಿಪ್ತಂ ಕುಕೂಲೇ ಸ್ವೇದಯೇತ್ತತಃ ॥೧೫೫॥
ರಸೇನ ಲಿಮ್ಪೇತ್ತಾಲ್ವಾಸ್ಯಂ ನೇತ್ರಂ ಚ ಪ್ರತಿಸಾರಯೇತ್ ।
ಹರೀತಕೀವಚಾಕುಷ್ಠಕಲ್ಕಂ ಮಾಕ್ಷಿಕಸಂಯುತಮ್ ॥೧೫೬॥
ಪೀತ್ವಾ ಕುಮಾರಸ್ತನ್ಯೇನ ಮುಚ್ಯತೇ ತಾಲುಕಣ್ಟಕಾತ್।

(ಸು।ಶಾ।ಅ।೧೦)—

ಮಸ್ತುಲುಙ್ಗಕ್ಷಯಾದ್ಯಸ್ಯ ವಾಯುಸ್ತಾಲ್ವಸ್ಥಿ ನಾಮಯೇತ್ ॥೧೫೭॥
ತಸ್ಯ ತೃಡ್ದೈನ್ಯಯುಕ್ತಸ್ಯ ಸರ್ಪಿರ್ಮಧುರಕೈಃ ಶೃತಮ್ ।
ಪಾನಾಭ್ಯಂಜನಯೋರ್ಯೋಜ್ಯಂ ಶೀತಾಮ್ಬೂದ್ವೇಜನಂ ತಥಾ ॥೧೫೮॥

ದೀಪಿಕೆ—೮. ತಾಲುಕಣ್ಟಕರೋಗ—

ಮಗುವಿನ ತಾಲುಪ್ರದೇಶ (ಅಂಗಳಿನ) ದ ಮಾಂಸವು ಕಫಪ್ರಕೋಪ ದಿಂದ ದಪ್ಪವಾಗಿ ಕೆಳಕ್ಕೆ ಜಾರಿ ಇಳಿಬೀಳುತ್ತದೆ. ತಾಲುಪಾತ, ಸ್ತನದ್ವೇಷ (ಮೊಲೆಯುಣ್ಣುವುದಿಲ್ಲ) ಅಥವಾ ಬಲುಕಷ್ಟದಿಂದ ಸ್ತನಪಾನಮಾಡುತ್ತದೆ; ನೀರಾಗಿ ಮಲಸ್ರಾವವಾಗುತ್ತದೆ, ನೀರಡಿಕೆ, ಬಾಯಿಯಲ್ಲಿನವೆಯಾಗುವುದು, ಕಣ್ಣು ನೋವು, ತಲೆಭಾರ, ಕತ್ತನ್ನು ಬಗ್ಗಿಸಿಕೊಂಡಿರುವುದು, ವಮನ ಈ ಲಕ್ಷಣಗಳುಳ್ಳ ವ್ಯಾಧಿಗೆ ತಾಲುಕಣ್ಟಕವೆಂದು ಹೆಸರು. ಇದಕ್ಕೆ ಚಿಕಿತ್ಸೆ—ಕೆಳಕ್ಕೆ ಇಳಿಬಿದ್ದಿರುವ ಮಾಂಸವನ್ನು ಬೆರಳಿನಿಂದ ಮೇಲಕ್ಕೆ ಎತ್ತಿ ಯವಕ್ಷಾರವನ್ನು ಜೇನುತುಪ್ಪದಲ್ಲಿ ರಂಗಳಿಸಿ ತಾಲುವಿಗೆ ಲೇಪಿಸಿದರೆ ಕಫವು ಕರಗಿ ನೀರಾಗಿ ಸುರಿದುಬಿಡುತ್ತದೆ. ತಾಲುಮಾಂಸವು ಸ್ವಸ್ಥಾನದಲ್ಲಿ ನಿಂತುಬಿಡುತ್ತದೆ. ಹಿಪ್ಪಲಿ, ಶುಂಠಿ, ಸೈಂಧವಲವಣ ಇವುಗಳ ಚೂರ್ಣವನ್ನು ಜೇನುತುಪ್ಪದಲ್ಲಿ ರಂಗಳಿಸಿ ಅಂಗಳಿಗೆ ಲೇಪಮಾಡಬೇಕು. ತಾಲುಮಾಂಸವು ಸಣ್ಣದಾಗಿ ಸ್ವಸ್ಥಾನದಲ್ಲಿ ನಿಲ್ಲುತ್ತದೆ. ಶುಂಠಿ, ಅರಿಶಿನ, ಗರುಗದಸೊಪ್ಪು ಇವುಗಳನ್ನರೆದು ಕಲ್ಕಮಾಡಿ ಆಲದಯೆಲೆ ಯಲ್ಲಿಟ್ಟು ಮುಚ್ಚಿ ದಾರಕಟ್ಟಿ ಸಗಣಿ ಬಳಿದು ಓಡಿನಲ್ಲಿಟ್ಟು ಬೆಂಕಿಯಿಂದ ಬೇಯಿಸ ಬೇಕು. ಆರಿದಮೇಲೆ ಅದರ ರಸವನ್ನು ಹಿಂಡಿ ತಾಲುವಿಗೂ ಮುಖಕ್ಕೂ ಲೇಪ ಮಾಡಬೇಕು, ಕಣ್ಣುಗಳನ್ನು ತೊಳೆದುಬಿಡಬೇಕು ॥೧೫೨–೧೫೫॥

ಅಣಿಲೆಶಿಪ್ಪೆ, ಬಜೆ, ಚಂಗಲ್ಕೋಷ್ಠಗಳ ಕಲ್ಕವನ್ನು ಸ್ತನ್ಯದಲ್ಲಿ ಕದರಿ ಕುಡಿಸಿದರೆ ಮಗುವಿನ ತಾಲುಕಣ್ಟಕರೋಗವು ನಿವಾರಣೆಯಾಗುತ್ತದೆ ॥೧೫೬॥

(ಸು।ಶಾ।ಅ। ೧೦)—

ತಲೆಬುರುಡೆಯೊಳಗೆ ಹೆತ್ತ ತುಪ್ಪದಂತೆ ಅಡಗಿರುವ ಮಜ್ಜಾಧಾತುವನ್ನು "ಮಸ್ತುಲುಙ್ಗ" ವೆಂದು (ಲೋಕದಲ್ಲಿ "ಮೆದಳು" ಎಂದು) ವ್ಯವಹರಿಸು ತ್ತಾರೆ. ವಾತಪ್ರಕೋಪದಿಂದ ಈ ಮಜ್ಜಾಧಾತುವು ಕ್ಷೀಣವಾದರೆ ತಾಲು ಪ್ರದೇಶದ ಮೂಳೆಯು ಬಗ್ಗುತ್ತದೆ. ಆಗ ಮಗುವಿಗೆ ನೀರಡಿಕೆ ದೀನತೆಗಳುಂ ಟಾಗುತ್ತವೆ. ಈ ಸಂದರ್ಭದಲ್ಲಿ ಕಾಕೋಲ್ಯಾದಿಗಣದ್ರವ್ಯಗಳಿಂದ ತಯಾರಿಸಿದ ಘೃತದಿಂದ ಪಾನವನ್ನೂ, ಅಭ್ಯಂಗವನ್ನೂ ಮಾಡಿಸಿ ತಣ್ಣೀರನ್ನು ಮಗುವಿನ ಮುಖ, ದೇಹದ ಮೇಲೆ ಎರಚಿ ಬೆಚ್ಚುಬೀಳುವಂತೆ ಮಾಡಿದರೆ ಮಗುವು ದಿಗಲಿನಿಂದ ಉಸಿರನ್ನು ಕಟ್ಟಿಬಿಡುವುದರಿಂದ ಬಗ್ಗಿರುವ ತಾಲುಪ್ರದೇಶದ ಮೂಳೆಯು ಮೇಲಕ್ಕೆ ಉಬ್ಬಿ ಸ್ವಸ್ಥಾನಕ್ಕೆ ಬರುತ್ತದೆ ॥೧೫೭–೧೫೮॥

ಮೂಲ—೯. (ಅ।ಹೃ।ಉ।ಅ। ೨) ಗುದಕುಟ್ಟಃ (ಗುದಕುನ್ದಃ)—

ಮಲೋಪಲೇಪಾತ್ಸ್ವೇದಾದ್ವಾ ಗುದೇ ರಕ್ತಕಫೋದ್ಭವಃ।
ತಾಮ್ರೋ ವ್ರಣೋಽನ್ತಃ ಕಣ್ಡೂಮಾರ್ಣ ಜಾಯತೇ ಭೂರ್ಯುಪದ್ರವಃ ॥೧೫೯॥
ಕೇಚಿತ್ತಂ ಮಾತೃಕಾದೋಷಂ ವದನ್ತ್ಯನ್ಯೇಽಹಿಪೂತನಮ್।
ಪ್ರಷ್ಠಾರುರ್ಗುದಕುನ್ದಂ ಚ ಕೇಚಿಚ್ಚ ತಮನಾಮಿಕಮ್ ॥೧೬೦॥

ಚಿಕಿತ್ಸಾ—

ತತ್ರ ಧಾತ್ರ್ಯಾಃ ಪಯಃ ಶೋಧ್ಯಂ ಪಿತ್ತಶ್ಲೇಷ್ಮಹರೌಷಧೈಃ।
ಶೃತಶೀತಂ ಚ ಶೀತಾಮ್ಬು ಯುಕ್ತಮನ್ತರಪಾನಕಮ್ ॥೧೬೧॥
ಸಕ್ಷೌದ್ರತಾರ್ಕ್ಷ್ಯಶೈಲೇನ ವ್ರಣಂ ತೇನ ಚ ಲೇಪಯೇತ್।
ತ್ರಿಫಲಾಬದರೀಪ್ಲಕ್ಷತ್ವಕ್ಕ್ವಾಥಪರಿಷೇಚಿತಮ್ ॥೧೬೨॥
ಕಾಸೀಸರೋಚನಾತುತ್ಥಮನೋಹ್ವಾಲರಸಾಂಜನೈಃ।
ಲೇಪಯೇದಮ್ಲಪಿಷ್ಟೈರ್ವಾ ಚೂರ್ಣಿತೈರ್ವಾವಚೂರ್ಣಯೇತ್ ॥೧೬೩॥
ಸುಶ್ಲಕ್ಷ್ಣೈರಥವಾ ಯಷ್ಟೀಶಙ್ಖಸೌವೀರಕಾಂಜನೈಃ।
ಸಾರಿವಾ ಶಙ್ಖನಾಭಿಭ್ಯಾಮಸನಸ್ಯ ತ್ವಚಾಽಥವಾ ॥೧೬೪॥
ರಾಗಕಣ್ಡೂತ್ಕಟೇ ಕುರ್ಯಾದ್ರಕ್ತಸ್ರಾವಂ ಜಲೌಕಸಾ।
ಸರ್ವಂ ಚ ಪಿತ್ತವ್ರಣಜಿಚ್ಛಸ್ಯತೇ ಗುದಕುಟ್ಟಕೇ ॥೧೬೫॥

(ಸು।ಶಾ।ಅ। ೧೦)—

ಗುದಪಾಕೇ ತು ಬಾಲಾನಾಂ ಪಿತ್ತಘ್ನೀಂ ಕಾರಯೇತ್ ಕ್ರಿಯಾಮ್।
ರಸಾಂಜನಂ ವಿಶೇಷೇಣ ಪಾನಾಲೇಪನಯೋರ್ಹಿತಮ್ ॥೧೬೬॥

ದೀಪಿಕೆ—೯. (ಅ।ಹೃ।ಉ।ಅ।೨)—ಗುದಕುಟ್ಟ—

ಮಕ್ಕಳ ಗುದಭಾಗದಲ್ಲಿ ಮಲವು ಬಳಿದುಕೊಂಡಾಗಲೀ ಬೆವರಿನಿಂದಾಗಲೀ ರಕ್ತ ಕಫಗಳು ಪ್ರಕೋಪಗೊಂಡು ಕೆಂಪಗೆ ವ್ರಣವುಂಟಾಗಿ ವ್ರಣದ ಒಳಗಡೆ ನವೆಯಾಗುತ್ತದೆ. ಅನೇಕ ವಿಧಗಳಾದ ಉಪದ್ರವಗಳುಂಟಾಗುತ್ತವೆ. ಈ ರೋಗಕ್ಕೆ ಮಾತೃಕಾದೋಷವೆಂದೂ, ಅಹಿಪೂತನವೆಂದೂ, ಪ್ರಷ್ಠಾರುವೆಂದೂ, ಗುದಕುಟ್ಟ, ಗುದಕುಂದವೆಂದೂ, ಅನಾಮಿಕವೆಂದೂ ಬೇರೆ ಬೇರೆ ಹೆಸರು ಗಳುಂಟು ॥೧೫೯–೧೬೦॥

ಚಿಕಿತ್ಸೆ—

ಪಿತ್ತಶ್ಲೇಷ್ಮಹರಗಳಾದ ಔಷಧಪ್ರಯೋಗದಿಂದ ದಾದಿಯ ಸ್ತನ್ಯವನ್ನು ಶುದ್ಧಿಮಾಡಿಕೊಳ್ಳಬೇಕು. ಕಾದಾರಿದ ನೀರಿಗೆ ರಸಾಂಜನವನ್ನೂ, ಜೇನುತುಪ್ಪ ವನ್ನೂ ಬೆರಿಶಿ ಮಗುವಿಗೆ ಆಗಾಗ್ಯೆ ಕುಡಿಸಬೇಕು. ತ್ರಿಫಲೆ, ಎಲಚಿತೊಗಟೆ, ಗೋಣಿ ಅಥವಾ ಬಸರಿಮರದ ತೊಗಟೆಗಳ ಕಷಾಯದಿಂದ ವ್ರಣವನ್ನು ತೊಳೆದು ನೀರಿನಿಂದ ರಸಾಂಜನವನ್ನು ತೇದು ಜೇನುತುಪ್ಪ ಮಿಶ್ರಮಾಡಿ ವ್ರಣಕ್ಕೆ ಲೇಪಿಸ ಬೇಕು. ಅನ್ನಭೇದಿ, ಗೋರೋಜನ, ಮೈಲ್‌ತುತ್ಥ, ಮಣಶಿಲೆ, ಅರಿದಳ, ರಸಾಂಜನ ಇವುಗಳನ್ನು ಹುಳಿ ಕಲಗಚ್ಚಿನಲ್ಲಿ ಅರೆದು ವ್ರಣಕ್ಕೆ ಲೇಪಿಸಬೇಕು. ಅಥವಾ ಅವುಗಳ ಚೂರ್ಣವನ್ನು ವ್ರಣದ ಮೇಲೆ ಉದುರಿಸಬೇಕು ; ಅಥವಾ ಅತಿ ಮಧುರ, ಶಂಖ, ಸೌವೀರಾಂಜನಗಳನ್ನು ನುಣ್ಣಗೆ ಪುಡಿಮಾಡಿಯಾಗಲೀ, ಸೊಗದೇ ಬೇರು, ಶಂಖನಾಭಿಗಳನ್ನು ನುಣುಪಾಗಿ ಪುಡಿಮಾಡಿಯಾಗಲೀ, ಕೆಂಪು ಹೊನ್ನೇತೊಗಟೆಯ ಪುಡಿಯನ್ನಾಗಲೀ ವ್ರಣದ ಮೇಲೆ ಉದುರಿಸಬೇಕು. ವ್ರಣವು ಕೆಂಪಾಗಿದ್ದು ನವೆಯು ಹೆಚ್ಚಾಗಿದ್ದರೆ ವ್ರಣಸ್ಥಾನದಲ್ಲಿ ಜಿಗುಳೆಯನ್ನು ಕಚ್ಚಿಸಿ ರಕ್ತಸ್ರಾವವನ್ನು ಮಾಡಿಸಬೇಕು. ಈ ಗುದಕುಟ್ಟ ರೋಗದಲ್ಲಿ ವಿಶೇಷ ವಾಗಿ ಪಿತ್ತವ್ರಣಹರವಾದ ಚಿಕಿತ್ಸೆಯು ಶ್ರೇಷ್ಠವಾದದ್ದು ॥೧೬೧–೧೬೫॥

(ಸು।ಸಂ।ಶಾ।೧೦)—

ಬಾಲಕರ ಗುದಪಾಕರೋಗದಲ್ಲಿ ಪಿತ್ತಹರ ಚಿಕಿತ್ಸೆಯನ್ನು ಮಾಡಬೇಕು. ಪಾನಲೇಪನಗಳಿಗೆ ರಸಾಂಜನವೇ ಶ್ರೇಷ್ಠವಾದದ್ದು ॥೧೬೬॥

ಮೂಲ—೧೦. ತುಣ್ಡೀ, ತುಣ್ಡಿಕೇರೀ—

ವಾತೇನಾಧ್ಮಾಪಿತಾಂ ನಾಭಿಂ ಸರುಜಾಂ ತುಣ್ಡಿಸಂಜ್ಞಿತಾಮ್।
ಮಾರುತಘ್ನೈಃ ಪ್ರಶಮಯೇತ್ಸ್ನೇಹಸ್ವೇದೋಪನಾಹನೈಃ ॥೧೬೭॥

ದೀಪಿಕೆ—೧೦—

ವಾತಪ್ರಕೋಪದಿಂದ ಮಕ್ಕಳ ಹೊಕ್ಕಳು ಉಬ್ಬಿ ನೋವಿನಿಂದ ಪೀಡಿಸಿದರೆ "ತುಂಡಿ" (ಮೊಳೆ) ಎಂಬ ರೋಗವೆಂದು ಹೇಳುತ್ತಾರೆ. ಈ ರೋಗದಲ್ಲಿ ವಾತಪ್ರಕೋಪವುಂಟಾಗುವ ಕಾರಣ ವಾತಹರಗಳಾದ ಸ್ನೇಹನ, ಸ್ವೇದನ, ಉಪನಾಹಗಳನ್ನು ಮಾಡಿಸಿ ನಿವಾರಣೆ ಮಾಡಬೇಕು ॥೧೬೭॥

ಮೂಲ—೧೧. (ಅ।ಸಂ।) ಮೃತ್ತಿಕೋದ್ಭವರೋಗಃ—

ನಿತ್ಯಂ ಮೃದ್ಭಕ್ಷಣಾದ್ರಕ್ಷೇತ್ ತಯಾ ಸ್ಯುರ್ನಿಯತಂ ಗದಾಃ।
ಪಾಣ್ಡುತ್ವಶ್ವಯಥುಶ್ವಾಸಕಾಸಾತೀಸಾರಜನ್ತವಃ ॥೧೬೮॥
ಛರ್ದಿಮೂರ್ಛಾಗ್ನಿಸದನಸ್ತನ್ಯದೋಷಾಙ್ಗರುಗ್ಭ್ರಮಾಃ।

ಚಿಕಿತ್ಸಾ—

ಮೂರ್ವಾಧಾತ್ರೀನಿಶಾಚೂರ್ಣಂ ಮೂತ್ರೇಣ ಮಧುಮತ್ಪಿಬೇತ್ ॥೧೬೯॥
ಪಾಣ್ಡುರೋಗೀ ಶೃತಂ ಸರ್ಪಿರ್ವರಾಭೃಙ್ಗರಸೇನ ವಾ।

(ಅ।ಹೃ।ಉ।ಅ।೨)—

ಪಾಠಾವೇಲ್ಲದ್ವಿರಜನೀಮುಸ್ತಭಾರ್ಗೀಪುನರ್ನವೈಃ ॥೧೭೦॥
ಸಬಿಲ್ವತ್ರ್ಯೂಷಣೈಸ್ಸರ್ಪಿರ್ವೃಶ್ಚಿಕಾಳೀಯುತೈಃ ಶೃತಮ್।
ಲಿಹಾನೋ ಮಾತ್ರಯಾ ರೋಗೈರ್ಮುಚ್ಯತೇ ಮೃತ್ತಿಕೋದ್ಭವೈಃ ॥೧೭೧॥

ದೀಪಿಕೆ—೧೧. (ಅ।ಸಂ।) ಮೃದ್ಭಕ್ಷಣದೋಷ—

ಮಕ್ಕಳು ಮಣ್ಣನ್ನು ತಿನ್ನದಂತೆ ನಿತ್ಯವೂ ಜಾಗರೂಕತೆಯಿಂದ ನೋಡಿ ಕೊಳ್ಳುತ್ತಿರಬೇಕು. ಮಣ್ಣು ತಿಂದರೆ ಪಾಣ್ಡು, ಶೋಭೆ, ಶ್ವಾಸ, ಕಾಸ, ಅತಿಸಾರ, ಜಂತುಹುಳುಗಳು ಹೆಚ್ಚುವಿಕೆ, ವಮನ, ಮೂರ್ಛೆ, ಅಗ್ನಿಮಾಂದ್ಯ, ಸ್ತನ್ಯದೋಷ, ಮೈಕೈನೋವು, ಶಿರೋಭ್ರಮಣ ಇವುಗಳುಂಟಾಗುತ್ತವೆ ॥೧೬೮॥

ಚಿಕಿತ್ಸೆ—

ಕೊರಟಿಗೆಹಂಬು, ನೆಲ್ಲಿಚೆಟ್ಟು, ಅರಶಿನದಪುಡಿ ಇವುಗಳನ್ನು ಗೋಮೂತ್ರ ದಲ್ಲಿ ಕದರಿ ಜೇನುತುಪ್ಪವನ್ನು ಬೆಗಿಶಿ ಕುಡಿಸಬೇಕು. ತ್ರಿಫಲೆ, ಗರುಗದಸೊಪ್ಪು ಗಳನ್ನು ಸೇರಿಸಿ ತಯಾರಿಸಿದ ಘೃತವನ್ನು ಕುಡಿಸಬೇಕು. ಅಥವಾ ಅಗಳುಶುಂಠಿ, ವಾಯುವಿಳಂಗ, ಅರಿಶಿನ, ಮರದರಿಶಿನ, ಕೊನ್ನಾರಿಗೆಡ್ಡೆ, ಗಂಟುಭಾರಂಗಿ,

ಬಿಳಿಕೊಮ್ಮೆ, ಬಿಲ್ವಪತ್ರೆತೊಗಟೆ, ತ್ರಿಕಟು, ಜೇಳುಬಾಲಗಳನ್ನು ಸೇರಿಸಿ ತಯಾರಿಸಿದ ಘೃತವನ್ನು ಪಾನಮಾಡಿಸಿದರೆ ಮಕ್ಕಳು ಮಣ್ಣು ತಿನ್ನುವುದರಿಂದುಂಟಾಗುವ ರೋಗಗಳು ಗುಣವಾಗುತ್ತವೆ ॥೧೬೯-೧೭೦॥

ಮೂಲ—(ಅ।ಹೃ।ಉ।ಅ। ೨)—

ವ್ಯಾಧೇರ್ಯದ್ಯಸ್ಯ ಭೈಷಜ್ಯಂ ಸ್ತನಸ್ತೇನ ಪ್ರಲೇಪಿತಃ।
ಸ್ಥಿತೋ ಮುಹೂರ್ತಂ ಧೌತೋ ನು ಪೀತಸ್ತಂ ತಂ ಜಯೇದ್ಗದಮ್ ॥೧೭೨॥

(ಸು।ಶಾ।ಅ। ೧೦)—

ಯೇಷಾಂ ಗದಾನಾಂ ಯೇ ಯೋಗಾಃ ಪ್ರವಕ್ಷ್ಯನ್ತೇಽಗದಂಕರಾಃ।
ತೇಷು ತತ್ಕಲ್ಕಸಂಲಿಪ್ತೌ ಪಾಯಯೇತ ಶಿಶುಂ ಸ್ತನೌ ॥೧೭೩॥

ದೀಪಿಕೆ—(ಅ।ಹೃ।ಉ।ಅ।೨) ಮತ್ತು (ಸು।ಶಾ।ಅ। ೧೦)—

ಯಾವ ಯಾವ ರೋಗಕ್ಕೆ ಯಾವುದು ನಿವಾರಕೌಷಧವೋ ಅದರ ಕಲ್ಕವನ್ನು ದಾದಿಯ ಸ್ತನಗಳಿಗೆ ಲೇಪಿಸಿ ಮುಹೂರ್ತ ಕಾಲವಾದ ಮೇಲೆ ಆ ಲೇಪವನ್ನು ತೊಳೆದು ಮಕ್ಕಳಿಗೆ ಸ್ತನಪಾನ ಮಾಡಿಸಿದರೆ ಆಯಾಯ ರೋಗಗಳು ಗುಣವಾಗುತ್ತವೆ ॥೧೭೨-೧೭೩॥

ಮೂಲ—೧೨. (ಶಾ।ಸಂ।)—ಉಪಶೀರ್ಷಕಃ—

ಕಪಾಲರೋಗೇ ವ್ರಣವಿಶೇಷೇ ಉಪಶೀರ್ಷಕಶಬ್ದವಾಚ್ಯಃ।

೧೩. (ಯೋ।ರ।)—ಮುಖಪಾಕಃ—

ಸ ತು ದೋಷವಿಶೇಷಾದ್ಭವತಿ।ಬಾಲಕೇಷ್ವತೀವ ಪ್ರಸಿದ್ಧತ್ವಾತ್ ॥೧೭೪॥

ಚಿಕಿತ್ಸಾ—

ಮುಖಪಾಕೇ ತು ಬಾಲಾನಾಮಾಮ್ರಸಾರಮಯೋ ರಜಃ।
ಗೈರಿಕಂ ಕ್ಷೌದ್ರಸಂಯುಕ್ತಂ ಭೇಷಜಂ ಸರಸಾಂಜನಮ್ ॥೧೭೫॥

೧೪. (ಯೋ।ರ।)—ಮುಖಸ್ರಾವಃ ಲಾಲಾಸ್ರಾವ ಇತ್ಯರ್ಥಃ।

ಚಿಕಿತ್ಸಾ—

ಸಾರಿವಾತಿಲಲೋಧ್ರಾಣಾಂ ಕಷಾಯೋ ಮಧುಕಸ್ಯ ಚ।
ಸಂಸ್ರಾವಿಣಿ ಮುಖೇ ಶಸ್ತೋ ಧಾವನಾರ್ಥಂ ಶಿಶೋಃ ಸದಾ ॥೧೭೬॥

ದೀಪಿಕೆ—

೧೨. ತಲೆಕೋವೆ– ತಲೆಯ ಕಪಾಲಾಸ್ಥಿಗಳ ಮೇಲೆ ಹುಟ್ಟುವ ವ್ರಣವಿಶೇಷವು ॥೧೭೪॥

೧೩. ಬಾಯಿಹುಣ್ಣು—ದೋಷಗಳು ಪ್ರಕೋಪಿಸಿ ಬಾಯೊಳಗಿನ ಬಿಳಿಪೊರೆಯ ಮೇಲೆ ಹುಣ್ಣುಗಳುಂಟಾಗುತ್ತವೆ. ಇವಕ್ಕೆ ಆಸ್ಯಪಾಕವೆನ್ನುತ್ತಾರೆ. ಮಾವಿನಬೀಜ, ಕಬ್ಬಿಣದ ಅರಪುಡಿ, ರಸಾಂಜನಗಳನ್ನು ನುಣ್ಣಗೆ ಪುಡಿಮಾಡಿ

ಜೇನುತುಪ್ಪದಲ್ಲಿ ರಂಗಳಿಸಿ ಬಾಯಿನ ವ್ರಣದ ಮೇಲೆ ಲೇಪಿಸಿದರೆ ಗುಣವಾಗುತ್ತದೆ ॥೧೭೫॥

೧೪. ಮುಖಸ್ರಾವ—ಬಾಯಿಯಿಂದ ಜೊಲ್ಲು ಸುರಿಯುತ್ತದೆ. ಸೊಗದೆಹಂಬು, ಎಳ್ಳು, ಲೋಧ್ರ, ಅತಿಮಧುರ ಇವುಗಳ ಕಷಾಯದಿಂದ ಮಗುವಿನ ಬಾಯನ್ನು ತೊಳೆದರೆ ಜೊಲ್ಲು ಸುರಿಯುವುದು ಕಡಮೆಯಾಗುತ್ತದೆ ॥೧೭೬॥

ಮೂಲ—೧೫. (ಯೋ।ರ।) ಕುರಣ್ಡಃ—ಅಣ್ಡವೃದ್ಧಿಃ—

ಯಃ ಪಿತ್ತದೋಷೇಣ ಕುರಣ್ಡರೋಗೋ ಭವೇಚ್ಛಿಶೋರ್ದಕ್ಷಿಣಮುಷ್ಕಭಾಗೇ।
ತಸ್ಯೋರ್ಧ್ವಭಾಗಂ ಶ್ರವಣಸ್ಯ ವಿಧ್ಯೇದ್ವಾಮಸ್ಯ ವಾಮಪ್ರಭವೇಽಪರಸ್ಯ ॥೧೭೭॥

ಏರಣ್ಡತೈಲಸಂಮಿಶ್ರಂ ಕಾಸೀಸಂ ಸೈನ್ಧವಂ ಪಿಬೇತ್।
ವಸ್ತ್ರೇಣ ವೃಷಣಂ ಬದ್ಧಂ ಕುರುಣ್ಡಜ್ವರನಾಶನಮ್ ॥೧೭೮॥

ಇನ್ದ್ರವಾರುಣಿಕಾಮೂಲಂ ತೈಲಂ ಪುಷ್ಕರಜಂ ತಥಾ।
ಸಮ್ಮರ್ದ್ಯ ಚ ಸಗೋದುಗ್ಧಂ ಪಿಬೇಜ್ಜನ್ತುಃ ಕುರಣ್ಡಜೇ ॥೧೭೯॥

ಪ್ರಾಚೀಗತಂ ಪಾಣ್ಡುರಸಿನ್ಧುವಾರಮೂಲಂ ಶಿಶೂನಾಂ ಗಳಕೇ ನಿಬದ್ಧಮ್।
ಹಿನೋತಿ ದನ್ತೋದ್ಭವವೇದನಾಂ ಚ ನಿಶ್ಶೇಷಮೇಕಾಣ್ಡಕುರಣ್ಡ ಏವ ॥೧೮೦॥

ದೀಪಿಕೆ—೧೫. ಅಂಡವೃದ್ಧಿ—

ಪಿತ್ತ ದೋಷಪ್ರಕೋಪದಿಂದ ಮಗುವಿನ ಅಂಡದ ಬಲಗಡೆಯ ಬೀಜವು ದಪ್ಪನಾಗಿ ಊದಿದರೆ ಎಡಕಿವಿಯ ಮಧ್ಯೆ ಚುಚ್ಚಿ ರಂದ್ರಮಾಡಬೇಕು; ಎಡಗಡೆಯ ಬೀಜ ಊದಿದರೆ ಮಗುವಿನ ಬಲಕಡೆಯ ಕಿವಿಯ ಮಧ್ಯೆ ಚುಚ್ಚಿ ರಂಧ್ರ ಮಾಡಬೇಕು. ಹರಳೆಣ್ಣೆಗೆ ಸ್ವಲ್ಪ ಅನ್ನಭೇದಿ, ಸೈಂಧವಲವಣಗಳ ಪುಡಿಯನ್ನು ಸೇರಿಸಿ ಪಾನಮಾಡಿಸಬೇಕು. ಹಾವುಮೆಕ್ಕೆಯ ಬೇರು, ಪುಷ್ಕರಮೂಲಗಳನ್ನು ಎಳ್ಳೆಣ್ಣೆಯಲ್ಲಿ ಅರೆದು ಹಸುವಿನ ಹಾಲಿನೊಡನೆ ಕುಡಿಸಿದರೆ ಕುರಣ್ಡರೋಗವು ಪರಿಹಾರವಾಗುತ್ತದೆ. ಪೂರ್ವದಿಕ್ಕಿಗೆ ಹೊರಟಿರುವ ಬಿಳಿಯ ಲಕ್ಕಿಯ ಗಿಡದ ಬೇರನ್ನು ದಾರದಲ್ಲಿ ಕಟ್ಟಿ ಮಕ್ಕಳ ಕತ್ತಿನಲ್ಲಿ ನೇತುಹಾಕಿದರೆ ಹಲ್ಲು ನೋವನ್ನೂ ಒಂದೇ ಅಂಡದಲ್ಲಿನ ಊದನ್ನೂ ನಾಶಮಾಡುತ್ತದೆ ॥೧೭೭–೧೮೦॥

ಮೂಲ—೧೬. (ಸು।ಶಾ।ಅ।೧೦) ಅಜಗಲ್ಲಿಕಾ—

ಸ್ನಿಗ್ಧಾಃ ಸವರ್ಣಾ ಗ್ರಥಿತಾ ನೀರುಜಾ ಮುದ್ಗ (ಗ್ರನ್ಥಿ) ಸನ್ನಿಭಾಃ।
ಕಫವಾತೋತ್ಥಿತಾ ಜ್ಞೇಯಾ ಬಾಲಾನಾಮಜಗಲ್ಲಿಕಾ ॥೧೮೧॥

(ಅ।ಹೃ।)—ಚಿಕಿತ್ಸಾ—

ವಿಸ್ರಾವಯೇಜ್ಜಲೌಕೋಭಿರಪಕ್ವಾಮಜಗಲ್ಲಕಾಮ್।

೧೭. (ಮಾ।ನಿ।) ವಿಸರ್ಪಃ—
ಪದ್ಮಾರುಣಃ ಪಾರ್ಶ್ವಾರುಣಃ ಮಹಾಪದ್ಮಾ ಏಕಾರ್ಥಕಾಃ।
ವಿಸರ್ಪಸ್ತು ಶಿಶೋಃ ಪ್ರಾಣನಾಶನೋ ಬಸ್ತಿಶೀರ್ಷಜಃ ॥೧೮೨॥
ಪದ್ಮವರ್ಣೋ ಮಹಾಪದ್ಮನಾಮಾ ದೋಷತ್ರಯೋದ್ಭವಃ।
ಶಙ್ಖಾಭ್ಯಾಂ ಹೃದಯಂ ಯಾತಿ ಹೃದಯಾದ್ವಾ ಗುದಂ ವ್ರಜೇತ್ ॥೧೮೩॥
ಪಾರ್ಶ್ವಾರುಣೋ ಮಹಾಪದ್ಮಭೇದಃ ತತ್ರ ಲೋಹಿತಪದ್ಮವರ್ಣಃ ಪದ್ಮವರ್ಣತಾ ಮುಖತಾಲುನಿ ಬಹಿರ್ದೇಶೇ ವೇತಿ ವದನ್ತಿ ಕೇಚಿತ್ ॥೧೮೪॥

ದೀಪಿಕೆ--೧೬. ಅಜಗಲ್ಲಿಕೆ--ಮುಖಪಿಡಿಕೆ--

ಕಫವಾತ ಪ್ರಕೋಪದಿಂದ ಮಕ್ಕಳ ಮುಖದಲ್ಲಿ ಜಿಡ್ಡುಜಿಡ್ಡಾಗಿ ಚರ್ಮದ ಬಣ್ಣವುಳ್ಳ ನೋವಿಲ್ಲದ ಹೆಸರುಕಾಳಿನಷ್ಟು ದಪ್ಪದ ಪಿಡಿಕೆಗಳುಂಟಾಗುತ್ತವೆ. ಅವುಗಳಿಗೆ ಅಜಗಲ್ಲಿಕೆಗಳೆಂದು ಹೇಳುತ್ತಾರೆ. ಪಾಕವಿಲ್ಲದ ಅಜಗಲ್ಲಿಕೆಗಳೆಂಬ ಪಿಡಿಕೆಗಳಿಗೆ ಜಿಗುಳೆಗಳನ್ನು ಕಚ್ಚಿಸಿ ದುಷ್ಟರಕ್ತಸ್ರಾವ ಮಾಡಿಸಿದರೆ ಗುಣವಾಗುತ್ತದೆ ॥೧೮೧॥

೧೭. ಹವಳಹಸ್ತಿ, ವಿಸರ್ಪ, ಕೆಂಜೇಳು, ಹರಿಬಾವೆಂದೂ ರೂಢಿಯಾಗಿರುವ ಬಸ್ತಿಯ ಮೇಲ್ಭಾಗದಲ್ಲುಂಟಾಗುವ ಈ ರೋಗವು ತ್ರಿದೋಷಗಳ ಪ್ರಕೋಪದಿಂದ ಹುಟ್ಟುತ್ತದೆ. ಕೆನ್ನೆ (ಶಂಖ) ಯಿಂದ ಹೃದಯದವರೆಗೂ ಹಬ್ಬುತ್ತದೆ. ಪಾರ್ಶ್ವಾರುಣವೆಂಬ ಮಹಾಪದ್ಮ ಭೇದವು ತ್ರಿದೋಷಗಳ ಪ್ರಕೋಪದಿಂದ ಹುಟ್ಟುತ್ತದೆ. ಕೆಂಪುತಾವರೆಯ ಹೂವಿನ ಬಣ್ಣದಂತಿರುವುದು. ಮುಖ, ಕಾಲುಗಳಲ್ಲೂ ಶರೀರದ ಮೇಲೂ ಉಂಟಾಗುತ್ತೆಂದು ಕೆಲವರ ಅಭಿಪ್ರಾಯವು ॥೧೮೨-೧೮೪॥

ಮೂಲ—(ಚ।ಚಿ।ಅ।೨೧) – ವಿಸರ್ಪಚಿಕಿತ್ಸಾ—

ಮದನಂ ಮಧುಕಂ ನಿಮ್ಬಂ ವತ್ಸಕಸ್ಯ ಫಲಾನಿ ಚ।
ವಮನಂ ಸಂಪ್ರದಾತವ್ಯಂ ವಿಸರ್ಪೇ ಕಫಪಿತ್ತಜೇ ॥೧೮೫॥
ದ್ರಾಕ್ಷಾಂ ಪರ್ಪಟಕಂ ಶುಣ್ಠೀಂ ಗುಡೂಚೀಂ ಧನ್ವಯಾಸಕಮ್।
ನಿಶಾಪರ್ಯುಷಿತಂ ದದ್ಯಾತ್ತೃಷ್ಣಾವೀಸರ್ಪಶಾನ್ತಯೇ ॥೧೮೬॥
ಯವಚೂರ್ಣಂ ಸಮಧುಕಂ ಸಘೃತಂ ಚ ಪ್ರಲೇಪನಮ್।
ನ್ಯಗ್ರೋಧಪಾದಾಸ್ತರುಣಾಃ ಕದಲೀಗರ್ಭಸಂಯುತಾಃ ॥೧೮೭॥
ಬಿಸಗ್ರನ್ಥಿಶ್ಚ ಲೇಪಃ ಸ್ಯಾಚ್ಛತಧೌತಘೃತಾಪ್ಲುತಃ।

ದೀಪಿಕೆ--(ಚ।ಚಿ।ಅ।೨೧) ವಿಸರ್ಪಚಿಕಿತ್ಸಾ--

ಕಫ ಪಿತ್ತವಿಸರ್ಪದಲ್ಲಿ ಮಂಗ್ಗಾರೆಕಾಯಿ, ಅತಿಮಧುರ, ಬೇವು, ಕೊಡಶಿಗೆ ಬೀಜಗಳನ್ನು ಕಲ್ಕಮಾಡಿ ಬಿಸಿನೀರಿನಲ್ಲಿ ಕದರಿ ಕುಡಿಸಿದರೆ ವಮನವಾಗುತ್ತದೆ. ದ್ರಾಕ್ಷಿ, ಪರ್ಪಾಟಕ, ಶುಂಠಿ, ಅಮೃತವಳ್ಳಿ, ತುರುಚದಬೇರು ಇವುಗಳನ್ನು ನೀರಿನಲ್ಲಿ ನೆನೆಹಾಕಿಟ್ಟು ಬೆಳಗ್ಗೆ ಕುಡಿಸಿದರೆ ಬಾಯಾರಿಕೆ ವಿಸರ್ಪಗಳು ನಿವಾರಣೆಯಾಗುತ್ತವೆ. ಯವೆಯ ಹಿಟ್ಟು, ಅತಿ ಮಧುರದ ಪುಡಿಗಳನ್ನು ತುಪ್ಪಮಿಶ್ರ

ಮಾಡಿ ಲೇಪಹಾಕಬೇಕು; ಅಥವಾ ಆಲದ ಬಿಳಲಿನ ತುದಿಯ ಅಂಕುರಗಳು, ಬಾಳೆಗೆಡ್ಡೆ, ತಾವರೆಗೆಡ್ಡೆಗಳನ್ನು ಅರೆದು ಶತಧೌತಘೃತಮಿಶ್ರಮಾಡಿ ಲೇಪಿಸಿದರೆ ವಿಸರ್ಪ ಶಮನವಾಗುತ್ತದೆ ॥೧೮೫–೧೮೭॥

ಮೂಲ—೧೮. (ಅ।ಹೃ।ಉ।ಅ।೨) ಕುಕೂಣಕಃ—

ಕುಕೂಣಕಃ ಶಿಶೋರೇವ ದನ್ತೋತ್ಪತ್ತಿನಿಮಿತ್ತಜಃ। ॥೧೮೮॥
ಸ್ಯಾತ್ತೇನ ಶಿಶುರುಚ್ಛೂನತಾಮ್ರಾಕ್ಷೋ ವೀಕ್ಷಣಾಕ್ಷಮಃ।
ಸವರ್ತ್ಮಶೂಲಪೈಚ್ಛಿಲ್ಯಕರ್ಣನಾಸಾಕ್ಷಿಮರ್ದನಃ ॥೧೮೯॥

ಧಾತ್ರೀಚಿಕಿತ್ಸಾ—

ಕುಕೂಣೇ ಖದಿರಶ್ರೇಷ್ಠಾನಿಮ್ಬಪತ್ರೈಃ ಶೃತಂ ಘೃತಮ್।
ಪೀತ್ವಾ ಧಾತ್ರೀ ವಮೇತ್ಕೃಷ್ಣಾಯಷ್ಟೀಸರ್ಷಪಸೈನ್ಧವೈಃ ॥೧೯೦॥
ಅಭಯಾಪಿಪ್ಪಲೀದ್ರಾಕ್ಷಾಕ್ವಾಥೇನೈನಾಂ ವಿರೇಚಯೇತ್।
ಮುಸ್ತಾದ್ವಿರಜನೀಕೃಷ್ಣಾಕಲ್ಕೇನಾಲೇಪಯೇತ್ಸ್ತನೌ ॥೧೯೧॥
ಧೂಪಯೇತ್ಸರ್ಷಪೈಃ ಸಾಜ್ಯೈಃ ಶುದ್ಧಾಂ ಕ್ವಾಥಂ ತು ಪಾಯಯೇತ್।
ಪಟೋಲಮುಸ್ತಮೃದ್ವೀಕಾಗುಡೂಚೀತ್ರಿಫಲೋದ್ಭವಮ್ ॥೧೯೨॥

ದೀಪಿಕೆ—೧೮. ಕುಕೂಣಕ (ಅರಿಗಣ್ಣು) ಚಿಕಿತ್ಸೆ—

ಹಲ್ಲು ಹುಟ್ಟುವಾಗ ಮಗುವಿನ ಕಣ್ಣುಗುಡ್ಡೆಗಳು ಊದಿಕೊಂಡು ಬಿಳಿಗುಡ್ಡೆಯು ಕೆಂಪು ಬಣ್ಣಕ್ಕೆ ತಿರುಗುತ್ತದೆ. ಮಗುವಿಗೆ ರೆಪ್ಪೆ ತೆರೆದು ನೋಡುವುದಕ್ಕೆ ಆಗುವುದಿಲ್ಲ. ರೆಪ್ಪೆಗಳಲ್ಲಿ ನೋವೂ, ಕಣ್ಣುಗಳಲ್ಲಿ ಜಿಬರೂ ಕಟ್ಟುತ್ತಾ ಮಗುವು ಕಿವಿ, ಮೂಗು, ಕಣ್ಣುಗಳನ್ನು ಕೈಯ್ಯಿನಿಂದ ಉಜ್ಜಿಕೊಳ್ಳುತ್ತದೆ. ಈ ರೋಗಕ್ಕೆ ಕುಕೂಣಕವೆಂದು ಹೆಸರು. ಇದು ಮಕ್ಕಳಿಗೆ ಮಾತ್ರ ಬರುತ್ತದೆ. ದೊಡ್ಡವರಿಗೆ ಬರುವುದಿಲ್ಲ ॥೧೮೮–೧೮೯॥

ಧಾತ್ರಿಗೆ ಚಿಕಿತ್ಸೆ—

ಕಗ್ಗಲಿತೊಗಟೆ, ತ್ರಿಫಲೆ, ಬೇವಿನ ಎಲೆಗಳಿಂದ ತಯಾರಿಸಿದ ಘೃತವನ್ನು ಧಾತ್ರಿಗೆ ಕುಡಿಸಿ ಅನಂತರ ಹಿಪ್ಪಲಿ, ಅತಿಮಧುರ, ಸಾಸಿವೆ, ಸೈಂಧವಲವಣಗಳನ್ನು ಕೊಟ್ಟು ವಮನಮಾಡಿಸಬೇಕು ಅಣಿಲೆಶಿಪ್ಪೆ, ಹಿಪ್ಪಲಿಗಳ ಕಷಾಯವನ್ನು ಕುಡಿಸಿ ವಿರೇಚನಮಾಡಿಸಬೇಕು. ಕೊನ್ನಾರಿಗೆಡ್ಡೆ, ಅರಿಶಿನ, ಮರದರಿಶಿನ, ಹಿಪ್ಪಲಿ ಕಲ್ಕಗಳನ್ನು ಸ್ತನಗಳಿಗೆ ಲೇಪಿಸಿ ತುಪ್ಪಸಾಸಿವೆಯ ಪುಡಿಯನ್ನು ಬೆಂಕಿಯ ಕೆಂಡದ ಮೇಲೆ ಹಾಕಿ ಬಂದ ಧೂಪದ ಹೊಗೆ ಕೊಡಬೇಕು. ಹೀಗೆ ಶುದ್ಧಳಾದ ದಾದಿಗೆ ಕಹಿಪಡವಲ, ಕೊನ್ನಾರಿ, ದ್ರಾಕ್ಷಿ, ಅಮೃತವಳ್ಳಿ, ತ್ರಿಫಲೆಗಳ ಕಷಾಯವನ್ನು ಕುಡಿಸಬೇಕು ॥೧೯೦–೧೯೨॥

ಮೂಲ—ಶಿಶುಚಿಕಿತ್ಸಾ—

ಪ್ರಾಯಃ ಕ್ಷೀರಘೃತಾಶಿತ್ವಾದ್ಬಾಲಾನಾಂ ಶ್ಲೇಷ್ಮಜಾ ಗದಾಃ।
ತಸ್ಮಾದ್ವಮನಮೇವಾಗ್ರೇ ಸರ್ವವ್ಯಾಧಿಷು ಪೂಜಿತಮ್ ॥೧೯೩॥

ಸಿನ್ಧೂತ್ಥಕೃಷ್ಣಾಪಾಮಾರ್ಗಬೀಜಾಜ್ಯಸ್ತನ್ಯಮಾಕ್ಷಿಕಮ್ ।
ಚೂರ್ಣೋ ವಚಾಯಾಸ್ಸಕ್ಷೌದ್ರೋ ವಮನಂ ಮಧುಕಾನ್ವಿತಮ್ ॥೧೯೪॥
ಕ್ಷೀರಂ ಕ್ಷೀರಾನ್ನಮನ್ನಂ ಚ ಭಜತಃ ಕ್ರಮಶಃ ಶಿಶೋಃ ।
ವಮನಂ ಸರ್ವರೋಗೇಷು ವಿಶೇಷೇಣ ಕುಕೂಣಕೇ ॥೧೯೫॥
ಸಪ್ತಲಾರಸಸಿದ್ಧಾಜ್ಯಂ ಯೋಜ್ಯಂ ಚೋಭಯಶೋಧನಮ್ ।
ದ್ವಿನಿಶಾರೋಧ್ರಯಷ್ಟ್ಯಾಹ್ವರೋಹಿಣೀನಿಮ್ಬಪಲ್ಲವೈಃ ॥೧೯೬॥
ಕುಕೂಣಕೇ ಹಿತಾ ವರ್ತಿಃ ಪಿಷ್ಟೈಸ್ತಾಮ್ರರಜೋನ್ವಿತೈಃ ।
ಕ್ಷೀರಕ್ಷೌದ್ರಘೃತೋಪೇತಂ ದಗ್ಧಂ ವಾ ಲೋಹಜಂ ರಜಃ ॥೧೯೭॥
ಏಲಾರಸೋನಕತಕಶಂಖೋಷಣಫಣಿಜ್ಝಕೈಃ ।
ವರ್ತಿಃ ಕುಕೂಣಪೋಥಕ್ಯೋಃ ಸುರಾಪಿಷ್ಟೈಸ್ಸಕಟ್ಫಲೈಃ ॥೧೯೭॥

ದೀಪಿಕೆ—ಶಿಶುಚಿಕಿತ್ಸೆ—

ಬಾಲಕರಿಗೆ ಅಧಿಕಪ್ರಮಾಣದಿಂದ ಹಾಲುತುಪ್ಪಗಳನ್ನು ಕುಡಿಸುವ ಕಾರಣ ಶ್ಲೇಷ್ಮರೋಗಗಳೇ ಅವರಿಗೆ ಹೆಚ್ಚು ಪೀಡಾಕರಗಳು ; ಆದಕಾರಣ ಬಾಲಕರ ಸಕಲ ರೋಗಗಳಲ್ಲೂ ಮೊದಲು ವಮನೌಷಧವೇ ಹಿತಕರವಾದದ್ದು. ಸೈಂಧವಲವಣ, ಹಿಪ್ಪಲಿ, ಉತ್ತರಣೆಬೀಜಗಳ ಪುಡಿಯನ್ನು ಸ್ತನ್ಯಕ್ಕೆ ಸೇರಿಸಿ ತುಪ್ಪ, ಜೇನುತುಪ್ಪಗಳನ್ನು ಮಿಶ್ರಮಾಡಿ ಹಾಲು ಕುಡಿಯುವ ಮತ್ತು ಹಾಲು, ಅನ್ನ ಎರಡನ್ನೂ ಸೇವಿಸುವ ಮಕ್ಕಳಿಗೂ; ಬಜೆ, ಮಗ್ಗಾರೆಕಾಯಿ, ಅತಿಮಧುರಗಳ ಚೂರ್ಣವನ್ನು ಜೇನುತುಪ್ಪ ಮಿಶ್ರಮಾಡಿ ಬರಿಯ ಅನ್ನವನ್ನು ತಿನ್ನುವ ಮಕ್ಕಳಿಗೂ ತಿನ್ನಿಸಿದರೆ ಸುಖವಾಗಿ ವಮನವಾಗಿ ಸಕಲ ರೋಗಗಳೂ, ಮುಖ್ಯವಾಗಿ ಕುಕೂಣಕರೋಗವೂ ನಿವಾರಣೆಯಾಗುತ್ತವೆ. ಅರಿಸಿನಬಣ್ಣದ ಹಾಲಿರುವ ಮುಂಡುಗಳ್ಳಿಯ ರಸದೊಡನೆ ತಯಾರಿಸಿದ ಘೃತವನ್ನು ಕುಡಿಸಿದರೆ ವಮನ ವಿರೇಚನಗಳೆರಡೂ ಸುಖವಾಗಿ ಆಗುತ್ತವೆ. ಅರಿಶಿನ, ಮರದರಿಶಿನ, ಲೋಧ್ರದ ತೊಗಟೆ, ಅತಿಮಧುರ, ಕಟುಕರೋಹಿಣಿ, ಬೇವಿನ ಚಿಗುರೆಲೆ ಇವುಗಳನ್ನು ನೀರಿನಲ್ಲಿ ನುಣ್ಣಗೆ ಅರೆದು ಮಾಡಿದ ಬತ್ತಿಯನ್ನಾಗಲೀ, ಸುಟ್ಟ ಕಬ್ಬಿಣದ ಪುಡಿಯನ್ನು ಹಾಲು, ಜೇನುತುಪ್ಪ, ತುಪ್ಪಗಳೊಡನೆ ರಂಗಳಿಸಿಯಾಗಲೀ ಕಣ್ಣಿಗೆ ಅಂಜನ ಹಾಕಿದರೆ ಅರಿಗಣ್ಣು (ಕುಕೂಣಕವು) ನಿವಾರಣೆಯಾಗುತ್ತದೆ ॥೧೯೩–೧೯೮॥

ಮೂಲ—೧೯. (ಸು।ನಿ।) ಅಶ್ಮರೀ—

ಪ್ರಾಯೇಣ್ಯೈತಾಸ್ತಿಸ್ರೋಽಶ್ಮರ್ಯೋ ದಿವಾಸ್ವಪ್ನಸಮಶನಾಧ್ಯಶನಶೀತಸ್ನಿಗ್ಧ-ಗುರುಮಧುರಾಹಾರಪ್ರಿಯತ್ವಾದ್ವಿಶೇಷೇಣ ಬಾಲಾನಾಂ ಭವನ್ತಿ । ತೇಷಾಮೋ-ವಾಲ್ಪಬಸ್ತಿಕಾಯತ್ವಾದನುಪಚಿತಮಾಂಸತ್ವಾಚ್ಚ ಬಸ್ತೇಃ ಸುಖಗ್ರಹಣಾಹರಣಾ ಭವನ್ತಿ । ಮಹತಾನ್ತು ಶುಕ್ರಾಶ್ಮರೀ ಶುಕ್ರನಿಮಿತ್ತಾ ಭವತಿ ॥೧೯॥

ದೀಪಿಕೆ—೧೯. ಮೂತ್ರದ ಕಲ್ಲುಶಿಕ್ಕು—

ಹಗಲುನಿದ್ರೆ, ಹಿತಾಹಿತಮಿಶ್ರಗಳಾದ ಆಹಾರ ಮತ್ತು ಅಧ್ಯಶನ (ಊಟವಾದಕೂಡಲೇ ಪುನಃ ಊಟಮಾಡುವುದು) ಗಳು, ಶೀತವೀರ್ಯದ, ಜಿಡ್ಡುಳ್ಳ

ಗುರುಮಧುರಗಳಾದ ಆಹಾರಗಳಲ್ಲಿ ಅಭಿಲಾಷೆಯುಳ್ಳವರಿಗೆ ವಿಶೇಷವಾಗಿ ಮಕ್ಕಳಿಗೆ ಮೂತ್ರದಲ್ಲಿ ಕಲ್ಲು ಶಿಕ್ಕುಂಟಾಗುತ್ತದೆ. ಮಕ್ಕಳ ಮೂತ್ರಕೋಶವೂ ಶರೀರವೂ ಬಲು ಸಣ್ಣವಾದ್ದರಿಂದಲೂ ಮಾಂಸವೃದ್ಧಿಯಿಲ್ಲದ ಕಾರಣವೂ ಈ ವಿಧದ ಮೂತ್ರಶಿಕ್ಕುಗಳನ್ನು ಸುಲಭವಾಗಿ ಹಿಡಿದು ಹೊರಕ್ಕೆ ತೆಗೆಯಬಹುದು. ಶುಕ್ರ ದೋಷದಿಂದ ದೊಡ್ಡವರಿಗೆ ಶುಕ್ರಾಶ್ಮರಿಯುಂಟಾಗುತ್ತದೆ. ಇದು ಬಲು ಕಷ್ಟ ಸಾಧ್ಯವಾದದ್ದು.

ಮೂಲ—೨೦. (ಅ|ಹೃ|) ಮೃಗೀರೋಗಃ (ಅಪಸ್ಮಾರಃ)—

ನಿರುಕ್ತಿಃ—

ಸ್ಮೃತಿರ್ಭೂತಾತ್ಮವಿಜ್ಞಾನಮಪಸ್ತತ್ಪರಿವರ್ಜನೇ।
ಅಪಸ್ಮಾರ ಇತಿ ಪ್ರೋಕ್ತಸ್ತತೋಽಯಂ ವ್ಯಾಧಿರನ್ತಕೃತ್ ॥೨೦೦॥

ನಿದಾನಮ್—

ಮಿಥ್ಯಾತಿಯೋಗೀನ್ದ್ರಿಯಾರ್ಥಕರ್ಮಣಾಮಭಿಸೇವನಾತ್।
ವಿರುದ್ಧಮಲಿನಾಹಾರವಿಹಾರಕುಪಿತೈರ್ಮಲೈಃ ॥೨೦೧॥

ಸಂಪ್ರಾಪ್ತಿಃ—

ಸಂಜ್ಞಾವಹೇಷು ಸ್ರೋತಸ್ಸು ದೋಷವ್ಯಾಪ್ತೇಷು ಮಾನವಃ।
ರಜಸ್ತಮಪರೀತೇಷು ಮೂಢೋ ಭ್ರಾನ್ತೇನ ಚೇತಸಾ ॥೨೦೨॥
ವಿಕ್ಷಿಪನ್ ಹಸ್ತಪಾದೌ ಚ ವಿಜಿಹ್ಮಭ್ರೂರ್ವಿಲೋಚನಃ।
ದನ್ತಾನ್ ಖಾದನ್ ವಮನ್ಫೇನಂ ವಿವೃತಾಕ್ಷಃ ಪತೇತ್ ಕ್ಷಿತೌ ॥೨೦೩॥
ಅಲ್ಪಕಾಲಾನ್ತರಂ ಚಾಪಿ ಪುನಃ ಸಂಜ್ಞಾಂ ಲಭೇತ ಸಃ।

ಭೇದಃ—

ಸೋಽಪಸ್ಮಾರ ಇತಿ ಪ್ರೋಕ್ತಃ ಸ ಚ ದೃಷ್ಟಶ್ಚತುರ್ವಿಧಃ ॥೨೦೪॥

(ಹಾರೀತೇ) ಚಿಕಿತ್ಸಾ—

ಅಪಸ್ಮಾರೇ ತು ಬಾಲಸ್ಯ ಶೀತಲಾನಿ ಪ್ರಯೋಜಯೇತ್।
ವಚಾಸೈನ್ಧವಪಿಪ್ಪಲ್ಯೌ ನಸ್ಯಂ ಹಿ ಗುಡನಾಗರಃ ॥೨೦೫॥
ರಸಂ ಚಾಗಸ್ತಿಪತ್ರಸ್ಯ ಮರಿಚೈಃ ಪ್ರತಿಯೋಜಿತಮ್।
ಏತೇನ ಪ್ರತಿಸೌಖ್ಯಂ ಸ್ಯಾತ್ತದಾ ಚಾನ್ದೋಳನಂ ಹಿತಮ್ ॥೨೦೬॥
ಮಸ್ತಕಾಗ್ರೇ ಲಲಾಟೇ ಚ ದಹೇಲ್ಲೋಹಶಲಾಕಯಾ।

ದೀಪಿಕೆ—೨೦. ಅಪಸ್ಮಾರ ರೋಗ—

ಅಪಸ್ಮಾರರೋಗಕ್ಕೆ, ಮೂರ್ಛೆಜಾಡ್ಯ, ಬೆರಗು, ಮೃಗೀರೋಗ, ಬೀಳುವ ರೋಗ ಎಂದು ಅನೇಕ ಹೆಸರುಗಳುಂಟು. ಹಿಂದೆ ಕಳೆದ ವಿಷಯಗಳನ್ನು ಜ್ಞಾಪಿಸಿಕೊಳ್ಳುವ ಶಕ್ತಿಗೆ ಸ್ಮೃತಿಯೆಂದು ಹೇಳುತ್ತಾರೆ. ಆ ಶಕ್ತಿ ನಾಶ ವಾದರೆ ಅಪಸ್ಮೃತಿಯೆಂದು ಹೆಸರು. ಈ ರೋಗವು ಮರಣವನ್ನುಂಟು ಮಾಡುತ್ತದೆ ॥೨೦೦॥

ಕಾರಣ—

ಮಿಥ್ಯಾಯೋಗ, ಅತಿಯೋಗಗಳಿಂದ ಇಂದ್ರಿಯಾರ್ಥಗಳನ್ನು ಸೇವಿಸುವುದು, ವಿರುದ್ಧ ಮತ್ತು ಮಲಿನಗಳಾದ ಆಹಾರಗಳನ್ನು ಸೇವಿಸುವುದು, ವಿರುದ್ಧ ಕಾರ್ಯಗಳನ್ನು ಮಾಡುವುದು ॥೨೦೦॥

ರೋಗವು ದೇಹದಲ್ಲಿ ಹಬ್ಬುವ ರೀತಿ, ಲಕ್ಷಣ ಮತ್ತು ಭೇದಗಳು—

ಮೇಲಿನ ಕಾರಣಗಳಿಂದ ಪ್ರಕುಪಿತಗಳಾದ ದೋಷಗಳು ಸಂಜ್ಞಾವಹಸ್ರೋತಸ್ಸುಗಳಲ್ಲಿ ಪ್ರಸರಿಸಿದರೆ ರಜಸ್ತಮೋಗುಣಗಳಿಂದ ಮನಸ್ಸು ಕಲುಷಿತವಾಗಿ ಭ್ರಾನ್ತಿಯುಂಟಾಗುತ್ತದೆ. ಅಂದರೆ ಇದನ್ನು ಮಾಡಬೇಕು ಇದನ್ನು ಮಾಡಕೂಡದು ಎಂಬ ವಿವೇಚನಾಶಕ್ತಿಯು ನಾಶವಾಗುತ್ತದೆ. ಕೈ ಕಾಲುಗಳನ್ನು ಮೇಲಕ್ಕೆ ಎತ್ತೆತ್ತಿ ಹಾಕುತ್ತಾನೆ; ಹುಬ್ಬುಗಳನ್ನೂ ಕಣ್ಣುಗುಡ್ಡೆಗಳನ್ನೂ ಸೊಟ್ಟುಮಾಡಿಕೊಂಡು ಹಲ್ಲುಗಳನ್ನು ಕಡಿಯುತ್ತಲೂ ನೊರೆಯನ್ನು ಉಗುಳುತ್ತಲೂ ಕಣ್ಣುಗಳನ್ನು ಅಗಲಿಸಿ ನೆಲದಮೇಲೆ ಬೀಳುತ್ತಾನೆ; ಸ್ವಲ್ಪ ಹೊತ್ತಿನಮೇಲೆ ಎಚ್ಚರಗೊಳ್ಳುತ್ತಾನೆ. ಈ ಅಪಸ್ಮಾರವು ನಾಲ್ಕು ವಿಧಗಳಾಗಿವೆ ॥೨೦೨–೨೦೪॥

ಚಿಕಿತ್ಸೆ—

ಮಕ್ಕಳ ಮೂರ್ಛೆಯ ರೋಗದಲ್ಲಿ ಶೀತ ಚಿಕಿತ್ಸೆಯನ್ನು ಮಾಡಬೇಕು. ಬಜೆ, ಸೈಂಧವಲವಣ, ಹಿಪ್ಪಲಿಗಳ ಚೂರ್ಣದಿಂದಾಗಲೀ, ಬೆಲ್ಲ, ಶುಂಠಿಪುಡಿಯಿಂದಲಾಗಲೀ ನಸ್ಯವನ್ನು ಮಾಡಿಸಬೇಕು. ಅಗಸೆ ಎಲೆಯ ರಸಕ್ಕೆ ಮೆಣಸಿನ ಪುಡಿಯನ್ನು ಸೇರಿಸಿ ನಸ್ಯಮಾಡಿದರೆ ಸೌಖ್ಯವಾಗುತ್ತದೆ. ಅನಂತರ ತೊಟ್ಟಿಲಲ್ಲಿ ಮಲಗಿಸಿ ತೂಗಬೇಕು. ಕಾದ ಸಲಾಕಿಯಿಂದ ತಲೆಯ ಹಿಂಭಾಗದ ಮತ್ತು ಹಣೆಯಮೇಲಿನ ನರಗಳನ್ನು ಸುಡಬೇಕು ॥೨೦೫–೨೦೬॥

ಮೂಲ—೨೧. (ಹಾರೀತೇ) ಉತ್ಫುಲ್ಲರೋಗಃ—

ಆಧ್ಮಾನಾತ್ಫುಲ್ಲಕುಕ್ಷಿಶ್ಚ ಶ್ವಾಸದೋಷಾದಿಪೀಡಿತಃ ॥೨೦೭॥
ಉತ್ಫುಲ್ಲಿಕಾ ಚ ವಿಜ್ಞೇಯಾ ಬಾಲಾನಾಂ ದುಃಖಕಾರಿಣೀ ।

ಚಿಕಿತ್ಸಾ—

ಉದರೇ ಚ ಜಲೌಕಾಭಿಶ್ಚಾದೌ ರಕ್ತಂ ವಿಮೋಕ್ಷಯೇತ್ ॥೨೦೮॥
ಉತ್ಫುಲ್ಲದೋಷೇ ದಾತವ್ಯಂ ಕ್ಷೀರದೋಷನಿವಾರಣಮ್ ।
ಅಗ್ನಿನಾ ಪ್ರಬಲಃ ಸ್ವೇದೋ ದಹೇಚ್ಚಾಪಿ ಶಲಾಕಯಾ ॥೨೦೯॥
ಜಠರೇ ಬಿನ್ದುಕಾಕಾರಾ ಜಾಯನ್ತೇ ಭಿಷಗುತ್ತಮ ।
ಬಿಲ್ವಮೂಲಫಲಂ ಪಾಠಾ ತ್ರಿಕಟುರ್ಬೃಹತೀದ್ವಯಮ್ ॥೨೧೦॥
ಕ್ವಾಥಶ್ಚ ಗುಡಯುಕ್ತಶ್ಚ ಬಾಲಾನಾಂ ಚ ಜ್ವರೇ ಹಿತಃ ।
ಸ್ತ್ರೀಣಾಂ ಸ್ಯಾತ್ಪಾನಮೇತೇಷಾಂ ಬಾಲಾನಾಂ ಜ್ವರನಾಶನಮ್ ॥೨೧೧॥

ದೀಪಿಕೆ--೨೧. ಉತ್ಫುಲ್ಲರೋಗ--

ಹೊಟ್ಟೆಯುಬ್ಬರಿಸಿಕೊಂಡು ಉಬ್ಬಸವನ್ನುಂಟುಮಾಡಿ ಮುಖದಮೇಲೆ ಎಣ್ಣೆ ಬಳಿದಂತೆ ಮಿಂಚುವುದು, ಉಬ್ಬಸ, ಕಟ್ಟುಸುರು ಬಿಡೋಣ ಈ ಲಕ್ಷಣಗಳು ಇರುತ್ತವೆ. ಈ ರೋಗದಲ್ಲಿ ಮಕ್ಕಳು ತುಂಬಾ ನರಳುತ್ತವೆ ॥೨೦೭॥

ಚಿಕಿತ್ಸೆ--

ಉದರದಲ್ಲಿ ಜಿಗಣೆಯನ್ನು ಕಚ್ಚಿಸಿ ರಕ್ತಸ್ರಾವಮಾಡಿಸಬೇಕು. ಕ್ಷೀರ ದೋಷಹರವಾದ ಚಿಕಿತ್ಸೆಯನ್ನು ಮಾಡಬೇಕು. ಕಬ್ಬಿಣದ ಸಲಾಕಿಯನ್ನು ಕೆಂಪಗೆ ಕಾಯಿಸಿ ಹೊಟ್ಟೆಯಮೇಲೆ ಬರೆಹಾಕಿಸಬೇಕು. ಹೊಟ್ಟೆಯಮೇಲೆ ಬಿನ್ದು ಬಿನ್ದುಗಳಂತೆ ಬೊಕ್ಕೆಗಳೆದ್ದಿರುತ್ತವೆ. ಬಿಲ್ವಪತ್ರೆಯ ಬೇರು, ಹಣ್ಣು, ಅಗಳು ಶುಂಠಿ, ತ್ರಿಕಟು, ಹೆಗ್ಗುಳ್ಳ, ನೆಲಗುಳ್ಳ ಇವುಗಳ ಕಷಾಯಕ್ಕೆ ಬೆಲ್ಲವನ್ನು ಸೇರಿಸಿ ಕುಡಿಸಿದರೆ ಜ್ವರಹರವು. ದಾದಿಯರೂ ಮಕ್ಕಳೂ ಈ ಕಷಾಯವನ್ನು ಪಾನ ಮಾಡಿದರೆ ಜ್ವರನಾಶವಾಗುತ್ತದೆ ॥೨೦೮-೨೧೧॥

ಮೂಲ—೨೨. (ಮಾ।ನಿ।) ಪಾರಿಗರ್ಭಿಕಃ—

ಮಾತುಃ ಕುಮಾರೋ ಗರ್ಭಿಣ್ಯಾಃ ಸ್ತನ್ಯಂ ಪ್ರಾಯಃ ಪಿಬನ್ನಪಿ।
ಕಾಸಾಗ್ನಿಸಾದವಮಥುತನ್ದ್ರಾಕಾರ್ಶ್ಯಾರುಚಿಭ್ರಮೈಃ ॥೨೧೨॥
ಯುಜ್ಯೇತ ಕೋಷ್ಠವೃದ್ಧ್ಯಾ ಚ ತಮಾಹುಃ ಪಾರಿಗರ್ಭಿಕಮ್।
ರೋಗಂ ಪರಿಭವಾಖ್ಯಂ ಚ ಯುಂಜ್ಯಾತ್ತತ್ರಾಗ್ನಿದೀಪನಮ್ ॥೨೧೩॥

೨೩. (ಶಾ।ಸಂ।) ಶಯ್ಯಾಮೂತ್ರಃ—

ರಾತ್ರೌ ಸ್ವಪ್ನಾವಸ್ಥಾಯಾಂ ಶಯ್ಯಾಗತೋ ಬಾಲೋಽಕ್ಷೀಣಪೂರ್ವಕಂ ಮೂತ್ರಯತಿ ದೋಷಪ್ರಭಾವಾತ್ ॥೨೧೪॥

ಬಾಲಾತಙ್ಕಹಾರೀ–ಚಿಕಿತ್ಸಾ—

ಕೃತಮೂತ್ರಾರ್ದ್ರಭೂಭಾಗಮೃದಂ ದಗ್ಧ್ವಾ ತು ಖೋಲಕೇ।
ಸಂಚೂರ್ಣ್ಯ ಮಧುಸರ್ಪಿರ್ಭ್ಯಾಂ ಲೀಢ್ವಾ ಸ್ವಪ್ನೇ ನ ಮೂತ್ರಯೇತ್ ॥೨೧೫॥
ಬಿಮ್ಬುಮೂಲರಸಃ ಪೀತಃ ಶಯ್ಯಾಮೂತ್ರಂ ನಿವಾರಯೇತ್ ॥೨೧೬॥

ದೀಪಿಕೆ--೨೨. ಪಾರಿಗರ್ಭಿಕರೋಗ (ಎಣೆಗೊಂಡ ಮಗು)--

ಗರ್ಭಿಣಿಯ ಸ್ತನ್ಯವನ್ನು ಕುಡಿಯುವುದರಿಂದ ಮಕ್ಕಳಿಗೆ ಕೆಮ್ಮು, ಅಗ್ನಿ ಮಾಂದ್ಯ, ವಮನ, ತೂಕಡಿಕೆ, ಮೈಕೃಶತ್ವ, ಅರುಚಿ, ಭ್ರಮಣ, ಹೊಟ್ಟೆ ದಪ್ಪ ವಾಗುವುದು, ಈ ಲಕ್ಷಣಗಳುಂಟಾಗುತ್ತವೆ. ಇದಕ್ಕೆ ಪಾರಿಗರ್ಭಿಕ ರೋಗ ವೆನ್ನುತ್ತಾರೆ ॥೨೧೨॥

ಚಿಕಿತ್ಸೆ—

ಅಗ್ನಿವೃದ್ಧಿಯಾಗುವಂತೆಯೂ ಆಮದೋಷಪಾಕವಾಗುವಂತೆಯೂ ತ್ರಿಕಟು, ಪಂಚಕೋಲ ಚೂರ್ಣಗಳನ್ನು ಜೇನುತುಪ್ಪದಲ್ಲಿ ಕಲಸಿ ನೆಕ್ಕಿಸಬೇಕು ಮತ್ತು ಚಿತ್ರಕಾದಿಘೃತ, ಷಟ್ಫಲಘೃತಗಳನ್ನು ಕುಡಿಸಬೇಕು ॥೨೧೩॥

೨೩. ಶಯ್ಯಾಮೂತ್ರ—

ದೋಷವೃದ್ಧಿಯಿಂದ ಮಗುವು ರಾತ್ರಿಯ ಕಾಲದಲ್ಲಿ ಮಲಗಿ ನಿದ್ರಿಸುತ್ತಿರುವಾಗ ಹಾಸಿಗೆಯಲ್ಲೇ ಅತಿಯಾಗಿ ಮೂತ್ರವನ್ನು ಹುಯ್ಯುತ್ತದೆ ॥೨೧೪॥

ಚಿಕಿತ್ಸೆ—

ಮಗುವು ಮೂತ್ರವನ್ನು ಹುಯ್ದ ಮೇಲೆ ನೆನೆದಿರುವ ಆ ಮಣ್ಣನ್ನು ಸುಟ್ಟು ಪುಡಿಮಾಡಿ ತುಪ್ಪ ಜೇನುತುಪ್ಪಗಳೊಡನೆ ರಂಗಳಿಸಿ ನೆಕ್ಕಿಸಿದರೆ ಹಾಸಿಗೆಯಲ್ಲಿ ಮಲಗಿ ನಿದ್ರಿಸುತ್ತಿರುವಾಗ ಮೂತ್ರವನ್ನು ಹುಯ್ಯುವುದು ನಿಂತುಹೋಗುತ್ತದೆ. ತೊಂಡೆಗಿಡದ ಬೇರನ್ನು ಜಜ್ಜಿ ರಸವನ್ನು ಹಿಂಡಿ ಮಗುವಿಗೆ ಕುಡಿಸಿದರೆ ಮೂತ್ರಿಸುವುದಿಲ್ಲ ॥೨೧೫॥

೨೪. (ವಾ।ಸಿ।) ರೋದನಃ—

ಶಿಶೋಸ್ತೀವ್ರಾಮತೀವ್ರಾಂ ಚ ರೋದನಾಲ್ಲಕ್ಷಯೇದ್ರುಜಮ್ ॥೨೧೬॥
ಸ್ರೋತಾಂಸ್ಯಂಗಾನಿ ಸನ್ಧೀಂಶ್ಚ ಪಶ್ಯೇದ್ಯತ್ನಾನ್ಮುಹುರ್ಮುಹುಃ।

(ಯೋ।ರ।) ಚಿಕಿತ್ಸಾ—

ಪಿಪ್ಪಲೀತ್ರಿಫಲಾಚೂರ್ಣಂ ಘೃತಕ್ಷೌದ್ರಪರಿಪ್ಲುತಮ್ ।
ಬಾಲೋ ರೋದಿತಿ ಯಸ್ತಸ್ಮೈ ಲೇಢುಂ ದದ್ಯಾತ್ಸುಖಾವಹಮ್ ॥೨೧೭॥

ದೀಪಿಕೆ——೨೪. ರಗಳೆ, ಚಂಡಿಹಿಡಿಯುವುದು——

ಮಗುವು ಗಟ್ಟಿಯಾಗಿಯೂ, ಮೆಲ್ಲಗೂ ಅಳುವುದನ್ನು ಕಂಡು ಅದರ ಬಾಧೆಯು ಹೆಚ್ಚಾಗಿದೆಯೆಂದೂ ಅಥವಾ ಸ್ವಲ್ಪವಾಗಿದೆಯೆಂದೂ ಊಹಿಸಬೇಕು. ಮಗುವು ಆಗಾಗ್ಯೆ ನೋಯುತ್ತಿರುವ ತನ್ನ ಅಂಗಗಳನ್ನೂ, ಸ್ರೋತಸ್ಸುಗಳನ್ನೂ, ಮೂಳೆಗಳ ಸಂಧಿಗಳನ್ನೂ ಬಲವಂತವಾಗಿ ಮುಟ್ಟಿ ನೋಡಿಕೊಳ್ಳುತ್ತದೆ. ಇಂಥಾ ಮಕ್ಕಳಿಗೆ ಹಿಪ್ಪಲಿ, ತ್ರಿಫಲೆಗಳ ಪುಡಿಯನ್ನು ತುಪ್ಪ, ಜೇನುತುಪ್ಪಗಳೊಡನೆ ರಂಗಳಿಸಿ ನೆಕ್ಕಿಸಿದರೆ ಅನುಕೂಲವಾಗುತ್ತದೆ ॥೨೧೬—೨೧೭॥

ಮೂಲ—೨೫. (ಚೋರಕರೋಗಃ)—

ಹೃತ್ವೈಕದಾಽತಿಶರಣಂ ವಮನಂ ತಥೈವ ಅಧ್ಮಾನಘೂರ್ಣನರುಜಂ ಚ ಶಿಶೋರ್ವಿಧಾಯ। ಯಃ ಶ್ವಾಸಮೂತ್ರಪರಿರಕ್ಷಿತಜೀವಯೋಗಾ ರೋಗೋ ವಧೂಭಿರುದಿತಃ ಸ ಹಿ ಚೋರನಾಮಾ ॥೨೧೮॥

* ಶೀರ್ಷಾಙ್ಘ್ರಿಹಸ್ತತಲಯೋಃ ಸಿತಕುಕ್ಕುಟಾಣ್ಡಮಜ್ಜಾವೃತೋ ಹರತಿ ಚೋರಕಮಾಶು ರೋಗಮ್। ಏವಂ ನ ಶಾಮ್ಯತಿ ಶಿಶುಂ ಪರಿಪಾಲಯೇತ್ತಂ ಪೂತಾತ್ಮನಾ ಕಿಲ ವಿಧೇಯಮಿದಂ ಜಲೇನ ॥೨೧೯॥

ಭದ್ರಮುಸ್ತಾಭಯಾನಿಮ್ಬಪಟೋಲಾಮಲಕೈಃ ಕೃತಃ।
ಕ್ವಾಥಃ ಸೋಷ್ಣಸ್ತು ಬಾಲಾನಾಮಶೇಷಜ್ವರನಾಶನಃ ॥೨೨೦॥

ದೀಪಿಕೆ——೨೫. ಚೋರಕರೋಗ——

ವಮನ, ಹೊಟ್ಟೆಯುಬ್ಬರ, ಹೊಟ್ಟೆನೋವುಗಳು ಹೆಚ್ಚಾಗುತ್ತಾಬಂದು ಮಗುವು ಬರಿಯ ಉಸಿರಾಡುತ್ತಾ ಜೀವಿಸಿದ್ದರೆ **ಚೋರಕ** ರೋಗವೆಂದು ಹೇಳುತ್ತಾರೆ ॥೨೧೮॥

ಇದಕ್ಕೆ ಚಿಕಿತ್ಸೆ——

ಕೋಳಿಮೊಟ್ಟೆಯನ್ನು ಕೊರೆದು ಅದರಲ್ಲಿರುವ ಬಿಳಿಯ ರಸವನ್ನು ತಲೆ, ಕೈ, ಕಾಲುಗಳಿಗೆ ಲೇಪಿಸಬೇಕು. ಇದರಿಂದ ಗುಣವಾಗದಿದ್ದರೆ ಕೊನ್ನಾರಿಗಡ್ಡೆ, ಅಣಿಲೆಶಿಪ್ಪೆ, ಬೇವಿನತೊಗಟೆ, ಕಹಿಪಡವಲ, ನೆಲ್ಲಿ ಚೆಟ್ಟು ಇವುಗಳ ಕಷಾಯವನ್ನು ಸುಖೋಷ್ಣವಾಗಿ ಕುಡಿಸಿದರೆ ಮಕ್ಕಳ ಸಕಲ ಜ್ವರಗಳೂ ನಿವಾರಿಸಲ್ಪಡುತ್ತವೆ ॥೨೧೯-೨೨೦॥

ಮೂಲ——೨೬. ಸಿಧ್ಮ——

ಗೃಹಧೂಮನಿಶಾಕುಷ್ಠರಾಜಿಕೇನ್ದ್ರಯವೈಶ್ಶಿಶೋಃ।
ಲೇಪಸ್ತಕ್ರೇಣ ಹನ್ತ್ಯಾಶು ಸಿಧ್ಮಪಾಮಾವಿಚರ್ಚಿಕಾಃ ॥೨೨೧॥

೨೭. ದನ್ತಖಾದೇ——

ಕೃಷ್ಣವರ್ಣಾಶ್ವಪುಚ್ಛಸ್ಯ ಸಪ್ತಕೇಶೇನ ವೇಣಿಕಾ।
ತಾಂ ಬಧ್ವಾ ಚ ಗಳೇ ದನ್ತಖಣ್ಡಮತೀಂ ಹನ್ತಿ ಮಾನವಃ ॥೨೨೨॥

೨೮. ದೇವೀ——ಶೀತಲಾ——

ಗರ್ದಭೀದುಗ್ಧಪಾನೇನ ತುಲಸೀಪತ್ರಭಕ್ಷಣಾತ್ ।
ಶೀತಲಾ ತೋಯಪಾನೇನ ಪರಿಷೇಕಃ ಪ್ರಶಸ್ಯತೇ ॥೨೨೩॥

ಭಸ್ಮನಾ ಕೇಚಿದಿಚ್ಛನ್ತಿ ಕೇಚಿದ್ಗೋಮಯರೇಣುನಾ ।
ಕ್ರಿಮಿಪಾತಭಯಾಚ್ಚಾಪಿ ಧೂಪಯೇತ್ಸುರಸಾದಿಭಿಃ ॥೨೨೪॥

ಚನ್ದನಂ ವಾಸಕಂ ಮುಸ್ತಾಂ ಗುಡೂಚೀಂ ದ್ರಾಕ್ಷಯಾ ಯುತಾಮ್
ಏತಚ್ಛೀತಃ ಕಷಾಯಸ್ತು ಶೀತಲಾಜ್ವರನಾಶನಃ ॥೨೨೫॥

೨೯. ಪೂತಿಕರ್ಣೇ——

ವಿಭೀತಕಂ ಫಲಂ ಕುಷ್ಠಂ ಹರಿತಾಳಂ ಮನಃಶಿಲಾ ।
ಏಭಿಸ್ತೈಲಂ ವಿಪಕ್ತವ್ಯಂ ಬಾಲಾನಾಂ ಪೂತಿಕರ್ಣಕೇ ॥೨೨೬॥

೩೦. ಕರ್ಣಶೂಲೇ——

ಕಪಿಲಾಮಸ್ತುಲುಙ್ಗಾಮ್ಲಶೃಙ್ಗಿವೇರರಸಃ ಶುಭಃ।
ಸುಖೋಷ್ಣಃ ಪೂರಯೇತ್ಕರ್ಣೇ ಕರ್ಣಶೂಲೋಪಶಾನ್ತಯೇ ॥೨೨೭॥

ದೀಪಿಕೆ——೨೬. ಸಿಧ್ಮರೋಗ——

ಇಲ್ಲಣ, ಅರಿಶಿನ, ಚಂಗಲ್ಕೋಷ್ಠ, ಸಾಸಿವೆ, ಕೊಡಶಿಗೆಬೀಜ ಇವುಗಳನ್ನು ಮಜ್ಜಿಗೆಯುಲ್ಲರೆದು ಲೇಪಿಸಿದರೆ ಬಿಳಿತೊನ್ನು, ಕುಷ್ಠಗಳು ನಿವಾರಣೆಯಾಗುತ್ತವೆ ॥೨೨೧॥

೨೭. ಹಲ್ಲುಕಡಿಯುವುದು--

ಕರಿಬಣ್ಣದ ಕುದುರೆಯ ಬಾಲದಿಂದ ಏಳು ಕೂದಲನ್ನು ಕಿತ್ತು ಜಡೆ ಹೆಣೆದು ಮಗುವಿನ ಕತ್ತಿಗೆ ಕಟ್ಟಿದರೆ ಹಲ್ಲುಕಡಿಯುವುದು ನಿಲ್ಲುತ್ತದೆ ॥೨೨೨॥

೨೮. ಶೀತಾಲೆ—ಶಿಡುಬು--

ಕತ್ತೆಯ ಹಾಲನ್ನು ಕುಡಿಸುವುದರಿಂದಾಗಲೀ ತುಳಸಿಯ ಎಲೆಯನ್ನು ತಿನ್ನಿಸುವುದರಿಂದಾಗಲೀ ಶಿಡಬು ನಿವಾರಣೆಯಾಗುತ್ತದೆ. ತಣ್ಣೀರಿನಿಂದ ಸ್ನಾನಮಾಡಿಸಿದರೆ ಹಿತವಾಗುತ್ತದೆ. ಬೂದಿಯನ್ನಾಗಲೀ ಬೆರಣಿಯ ಪುಡಿಯನ್ನಾಗಲೀ ಹುಣ್ಣಿನಮೇಲೆ ಉದುರಿಸಬೇಕು. ತುಳಸಿ ಮೊದಲಾದ ಕ್ರಿಮಿಹರ ದ್ರವ್ಯಗಳ ಧೂಪವನ್ನು ಹಾಕಿ ಕಾಯಿಸಬೇಕು. ಶ್ರೀಗಂಧ, ಆಡುಸೋಗೆಯ ಎಲೆ, ಕೊನ್ನಾರಿಗೆಡ್ಡೆ, ಅಮೃತಬಳ್ಳಿ, ದ್ರಾಕ್ಷಿ ಇವುಗಳ ಶೀತಕಷಾಯಪಾನದಿಂದ ಜ್ವರ ನಿವಾರಣೆಯಾಗುತ್ತದೆ ॥೨೨೩-೨೨೫॥

೨೯. ಲಾಳುಕಿವಿ--(ಕಿವಿಪೋಟು)—

ತಾರೆಕಾಯಿ, ಮಗ್ಗಾರೆಕಾಯಿ, ಚಂಗಲ್ಕೋಷ್ಠ, ಅರಿದಳ, ಮಣಶಿಲೆಗಳನ್ನು ಸೇರಿಸಿ ತೈಲಪಾಕಮಾಡಿ ಕಿವಿಗೆ ಹಾಕಿದರೆ ಮಕ್ಕಳ ಕಿವಿಯಿಂದ ಕೀವು ಸುರಿಯುವುದಿಲ್ಲ.

೩೦. ಕರ್ಣಶೂಲ—

ಕಪಿಲೆಹಿಟ್ಟು, ಮಾದಲದ ಹುಳಿರಸ, ಹಶಿಶುಂಠಿರಸ ಇವನ್ನು ಬಿಸಿಮಾಡಿ ಸುಖೋಷ್ಣವಾಗಿ ಕಿವಿಗೆ ತುಂಬಿದರೆ ಕಿವಿನೋವು ಗುಣವಾಗುತ್ತದೆ ॥೨೨೭॥

ಮೂಲ—(ಕಾ।ಸಂ।) ಫಕ್ಕರೋಗಚಿಕಿತ್ಸಾ—

ಬಾಲಃ ಸಂವತ್ಸರಾಪನ್ನಃ ಪಾದಾಭ್ಯಾಂ ಯೋ ನ ಗಚ್ಛತಿ।
ಸ ಫಕ್ಕ ಇತಿ ವಿಜ್ಞೇಯಸ್ತಸ್ಯ ವಕ್ಷ್ಯಾಮಿ ಲಕ್ಷಣಮ್ ॥೨೨೮॥
ಧಾತ್ರೀ ಶ್ಲೈಷ್ಮಿಕದುಗ್ಧಾ ತು ಫಕ್ಕದುಗ್ಧೇತಿ ಸಂಜ್ಞಿತಾ
ತತ್ಕ್ಷೀರಪೋ ಬಹುವ್ಯಾಧಿಃ ಕಾರ್ಶ್ಯಾತ್ಫಕ್ಕತ್ವಮಾಪ್ನುಯಾತ್ ॥೨೨೯॥
ಪಿತ್ತಾನಿಲಪ್ರಕೃತಿಕಾ ಪಟುಕ್ಷೀರಾ ಪಟುಪ್ರಜಾ।
ಕುತಃ ಪಙ್ಗುಜಡಾ ಮೂಕಾ ತ್ರಿದೋಷಕ್ಷೀರಭೋಜಿನಃ ॥೨೩೦॥
ಹೃದಯಾತ್ಸಂಪ್ರವರ್ತನ್ತೇ ಮನಃಪೂರ್ವಾಣಿ ದೇಹಿನಾಮ್।
ಇನ್ದ್ರಿಯಾಣೀನ್ದ್ರಿಯಾವಶ್ಯಾ ದ್ವಾ ....ಹಿ ತಮ್ ॥೨೩೧॥
ತತ್ರ ವಾಗಿನ್ದ್ರಿಯಂ ತ್ವೇಕಂ ದ್ವಿಧಾ ಭಿನ್ನಂ ಯಥಾ ಕರೌ ।
ಅರ್ಥೇನ ಶಬ್ದಂ ವದತಿ ಗೃಹ್ಣಾತ್ಯರ್ಥೇನ ತತ್ಪುನಃ ॥೨೩೨॥
ತಸ್ಮಾಚ್ಚ ಮೂಕಾ ಭೂಯಿಷ್ಠಂ ಭವನ್ತಿ ಬಧಿರಾ ನರಾಃ ॥
ವಾಙ್ಮೂಲಂ ಹಿ ಶ್ರುತಂ ಶ್ರೋತ್ರಂ ವಾಗ್ಭ್ರಂಶೇ ಭ್ರಶ್ಯತೇ ಹಿ ತತ್ ॥೨೩೩॥
ಕ್ಷೀರಜಂ ಗರ್ಭಜಂ ಚೈವ ತೃತೀಯಂ ವ್ಯಾಧಿಸಂಭವಮ್
ಫಕ್ಕತ್ವಂ ತ್ರಿವಿಧಂ ಪ್ರೋಕ್ತಂ ಕ್ಷೀರಜಂ ತತ್ರ ವರ್ಣಿತಮ್ ॥೨೩೪॥
ಗರ್ಭಿಣೀಮಾತೃಕಂ ಕ್ಷಿಪ್ರಂ ಸ್ತನ್ಯಸ್ಯ ವಿನಿವರ್ತನಾತ್।
ಕ್ಷೀಯತೇ ಮ್ರಿಯತೇ ವಾಪಿ ಸಫಕ್ಕೋ ಗರ್ಭಪೀಡಿತಃ ॥೨೩೫॥

ಅನಾಥಃ ಕ್ಲಿಶ್ಯತೇ ಬಾಲಃ ಕ್ಷೀಣಮಾಂಸಬಲದ್ಯುತಿಃ ।
ಸಂಶುಷ್ಕಸ್ಫಿಚಬಾಹೂರುರ್ಮಹೋದರಶಿರೋಮುಖಃ ॥೨೩೬॥
ಪೀತಾಜ್ಗೋ ಹೃಷಿತಾಙ್ಗಶ್ಚ ದೃಶ್ಯಮಾನಾಸ್ಥಿಪಂಜರಃ।
ಪ್ರಮ್ಲಾನಾಧರಕಾಯಶ್ಚ ನಿತ್ಯಮೂತ್ರಪುರೀಷಕೃತ್ ॥೨೩೭॥
ನಿಶ್ಚೇಷ್ಟಾಧರಕಾಯೋ ವಾ ಪಾಣಿಚಾನುಗವೋಽಪಿ ವಾ।
ದೌರ್ಬಲ್ಯಾನ್ಮನ್ದಚೇಷ್ಟಶ್ಚ ಮನ್ದತ್ವಾತ್ಪರಿಭೂತಕಃ ॥೨೩೮॥
ಮಕ್ಷಿಕಾಕ್ರಿಮಿಕೀಟಾನಾಂ ಗಮ್ಯಶ್ಚಾಸನ್ನಮೃತ್ಯುರುಕ್ ।
ವಿಶೀರ್ಣಹೃಷ್ಟರೋಮಾ ಚ ಸ್ತಬ್ಧರೋಮಾ ಮಹಾನಖಃ ॥೨೩೯॥
ದುರ್ಗನ್ಧೀ ಮಲಿನಃ ಕ್ರೋಧೀ ಪಕ್ಕಃ ಶ್ವಸಿತಿ ತಾಮ್ಯತಿ ।
ಅತಿವಿಣ್ಮೂತ್ರದೂಷೀಕಾಶಿಂಘಾಣಕಮಲೋದ್ಭವಃ ॥೨೪೦॥
ಇತ್ಯೇತೈಃ ಕಾರಣೈರ್ವಿದ್ಯಾದ್ವ್ಯಾಧಿಜಾಂ ಫಕ್ಕತಾಂ ಶಿಶೋಃ ।
ಗರ್ಭಿಣೀಮಾತೃಕಾಶ್ಚೈವಮನಾಥಾಶ್ಚ ವಿಶೇಷತಃ ॥೨೪೧॥
ಪ್ರದುಷ್ಟಗ್ರಹಣೀಕಾಶ್ಚ ಪ್ರಾಯಶೋ ಬಹುಭೋಜಿನಃ ।
ಫಕ್ಕಾ ಭವನ್ತಿ ತಸ್ಮಾಚ್ಚ ಭುಕ್ತಂ ತೇಷಾಮಪಾರ್ಥಕಮ್ ॥೨೪೨॥
ಮನ್ದಾಗ್ನಿತ್ವಾದ್ವ್ರಪೋತ್ಸರ್ಗಾದ್ಬಹುಮೂತ್ರಪುರೀಷಿಣಃ।
(ತೇಷಾವ.ಗ್ನಿವಿವೃದ್ಧ್ಯರ್ಥಂ ವಿಧಿಜ್ಞಃ) ಕಾರಯೇತ್ಕ್ರಿಯಾಮ್ ॥೨೪೩॥
ಕಲ್ಯಾಣಕಂ ಪಿಬೇತ್ಫಕ್ಕಃ ಷಟ್ಪಲಂ ವಾ ಯಥಾಮೃತಮ್ ।
ಸಪ್ತರಾತ್ರಾತ್ಪರಂ ಚೈನಂ ತ್ರಿವೃತ್ಕ್ಷೀರೇಣ ಶೋಧಯೇತ್ ॥೨೪೪॥
ಪುನರ್ನವೈಕಪರ್ಣೀಭ್ಯಾಮೇರಣ್ಡಶತಪತ್ರಯೋಃ ।
ದ್ರಾಕ್ಷಾಪೀಲುತ್ರಿವೃದ್ಭಿರ್ವಾ ಶೃತಂ ಕ್ಷೀರಂ ಪ್ರಯೋಜಯೇತ್ ॥೨೪೫॥
ಶಾಲ್ಯನ್ನೇನ ಸಹಾಶ್ನೀಯಾತ್ಪಿಬೇತ್ತಂ ಚಾಪಿ ನಿತ್ಯಶಃ ।
ತೇನ ಪ್ರಾಣಂ ಚ ಲಭತೇ ಯಾತಿ ರೋಗೈಶ್ಚ ಮುಚ್ಯತೇ ॥೨೪೬॥
ತೇನೈವ ತೈಲಂ ವಿಪಚೇತ್ಫಕ್ಕಾನಾಂ ಸರ್ವಥೋದಿತಮ್ ।
ರಾಸ್ನಾಘೃತಂ ವಾ ತೈಲಂ ವಾ ಕ್ಷೀರಂ ಯೂಷಮಥೋ ರಸಮ್ ॥೨೪೭॥
ದ್ವಿಃ ಸಂಸ್ಕೃತಂ ಪ್ರಯುಂಜೀತ ಸರ್ವರೋಗೈಃ ಪ್ರಮುಚ್ಯತೇ।
ಕಫಾಧಿಕಂ ಚೇನ್ಮನ್ಯೇತ ಮೂತ್ರಮಿಶ್ರಂ ಪಯಃ ಪಿಬೇತ್ ॥೨೪೮॥
ಪ್ರಯೋಗೇಣ ಹಿತಾಶೀ ಚ ಪಕ್ಕರೋಗೈರ್ವಿಮುಚ್ಯತೇ।
ತ್ರಿಚಕ್ರಂ ಫಕ್ಕರಥಕಂ ಪ್ರಾಜ್ಞಃ ಶಿಲ್ಪಿಕನಿರ್ಮಿತಮ್ ॥೨೪೯॥
ವಿದಧ್ಯಾತ್ತೇನ ಶನಕೈರ್ಗೃಹೀತೋ ಗತಿಮಭ್ಯಸೇತ್।
ಬಸ್ತಯಃ ಸ್ನೇಹಪಾನಾನಿ ಸ್ವೇದಾಶ್ಚೋದ್ವರ್ತನಾನಿ ಚ ॥೨೫೦॥
ವಾತರೋಗೇಷು ಬಾಲಾನಾಂ ಸಂಸೃಷ್ಟೇಷು ವಿಶೇಷತಃ ।

ದೀಪಿಕೆ--(ಕಾ।ಸಂ।) ಫಕ್ಕರೋಗ ಚಿಕಿತ್ಸೆ—ಹೆಳವುತನ--

ಒಂದು ವರ್ಷ ಪೂರೈಸಿದರೂ ಮಗುವು ಕಾಲಿನಿಂದ ನಡೆಯಲಾರದೆ ನಿಶ್ಶಕ್ತಿಯುಳ್ಳದ್ದಾದರೆ ಅದಕ್ಕೆ ಫಕ್ಕ (ಹೆಳವ) ರೋಗವುಂಟಾಗಿರುತ್ತೆಂದು ತಿಳಿಯಬೇಕು. ಈ ರೋಗವುಂಟಾಗಲು ಕಾರಣವೇನೆಂದರೆ--ಶ್ಲೇಷ್ಮ ದೋಷದಿಂದ ಕೆಡಿಸಲ್ಪಟ್ಟ ಹಾಲಿರುವ ದಾದಿಗೆ ಫಕ್ಕದುಗ್ಧಳೆನ್ನುತ್ತಾರೆ. ಆ ಹಾಲನ್ನು ಕುಡಿಯುವ ಮಗುವು ಅನೇಕ ರೋಗಗಳಿಂದ ಪೀಡಿತವಾಗಿ ಕೃಶವಾಗುವುದರಿಂದ ಫಕ್ಕರೋಗವುಳ್ಳದ್ದೆಂದು ಹೇಳುತ್ತಾರೆ. ಪಿತ್ತಾನಿಲಪ್ರಕೃತಿಯ ದಾದಿಯು ಚುರುಕಾದ

ಹಾಲುಳ್ಳವಳಾದ ಕಾರಣ ಅವಳ ಮಕ್ಕಳೂ ಚುರುಕುಬುದ್ಧಿಯುಳ್ಳವರಾಗುತ್ತಾರೆ. ಆದರೆ ತ್ರಿದೋಷದುಷ್ಟಕ್ಷೀರಪಾನಮಾಡಿದ ಮಕ್ಕಳು ಹೆಳವರಾಗಿಯೂ, ಜಡರಾಗಿಯೂ, ಮೂಗರಾಗಿಯೂ ಆಗುವುದೇಕೆ? ಪ್ರಾಣಿಗಳಿಗೆ ಮನಸ್ಸಿನೊಡನೆ ಕೂಡಿದ ಇಂದ್ರಿಯಗಳು ಹೃದಯದಿಂದ ಹೊರಡುತ್ತವೆ. ಗಾಡಿಯನ್ನು ಎಳೆಯಲು ಎರಡು ಕುದುರೆಗಳನ್ನು ಗಾಡಿಗೆ ಕಟ್ಟಿರುವಂತೆಯೇ ವಾಗಿನ್ದ್ರಿಯವು (ಎರಡು ಕೈಗಳೂ ಗ್ರಹಣಾಹರಣ ಕಾರ್ಯಗಳಿಗೆ ಉಪಯೋಗಮಾಡಲು ಸಹಾಯಕಗಳಾಗುವಂತೆಯೇ) ಶಬ್ದಗ್ರಹಣಮಾಡುವುದಕ್ಕೂ ಮಾತನಾಡುವುದಕ್ಕೂ ಸಹಾಯಕವಾಗಿದೆ. ಈ ಕಾರಣದಿಂದಲೇ ಅನೇಕ ಜನ ಮೂಗರು ಕಿವುಡರಾಗಿಯೇ ಇರುತ್ತಾರೆ. ಶಬ್ದಶ್ರವಣಮಾಡುವುದಕ್ಕೆ ವಾಗಿನ್ದ್ರಿಯವೇ ಮೂಲವಾದ್ದರಿಂದ ವಾಗ್ಭ್ರಂಶ (ವಾಗಿನ್ದ್ರಿಯವು ನಷ್ಟ) ವಾದರೆ ಕಿವಿಯೂ ಕೇಳಿಸುವುದಿಲ್ಲ.

ಫಕ್ಕರೋಗವು ಕ್ಷೀರದೋಷ, ಗರ್ಭದೋಷ ಮತ್ತು ವ್ಯಾಧಿಗಳಿಂದ ಉತ್ಪತ್ತಿಯಾಗುವಕಾರಣ ಮೂರು ವಿಧಗಳಾಗಿರುತ್ತದೆ. ಕ್ಷೀರದೋಷದಿಂದುಂಟಾಗುವ ಫಕ್ಕರೋಗವನ್ನು ವಿವರಿಸಲಾಗಿದೆ. ಎರಡನೆಯ ವಿಧದ ಫಕ್ಕರೋಗದಲ್ಲಿ ಮಗುವು ಗರ್ಭಿಣಿಯಾದ ತಾಯಿ (ದಾದಿ)ಯ ಹಾಲನ್ನು ಕುಡಿಯದಂತೆ ಹಠಾತ್ತಾಗಿ ನಿಲ್ಲಿಸುವುದರಿಂದ ಕೃಶವಾಗುತ್ತದೆ; ಇಲ್ಲದಿದ್ದರೆ ಸತ್ತು ಹೋಗುತ್ತದೆ. ಇದು ಗರ್ಭದೋಷದಿಂದುಂಟಾದ ಫಕ್ಕರೋಗವು. ಮೂರನೆಯದಾದ ವ್ಯಾಧಿಜನ್ಯವಾದ ಫಕ್ಕರೋಗದಲ್ಲಿ ಮಾಂಸ, ಬಲ ಕಾಂತಿಗಳು ನಾಶವಾಗಿ ಫಿರ್ರೆಗಳೂ, ತೋಳುಗಳೂ, ತೊಡೆಗಳೂ ಬತ್ತಿಹೋಗಿ ಹೊಟ್ಟೆ, ತಲೆ, ಮುಖಗಳು ಊದಿಕೊಂಡು, ಹಳದಿ ಬಣ್ಣದ ಮೈಯ್ಯಿಂದಲೂ ಅಂಗಗಳು ಬಿಗಿಹಿಡಿಯಲ್ಪಟ್ಟು ಮೈರೋಮಗಳು ಮೇಲಕ್ಕೆ ಎದ್ದುನಿಲ್ಲುವುದರಿಂದ ಬರಿಯ ಮೂಳೆಗಳೇ ಕಾಣಬರುತ್ತವೆ. ತೊಡೆ ಬತ್ತಿಹೋಗಿ ಸರ್ವದಾ ಮಲಮೂತ್ರಗಳನ್ನು ವಿಸರ್ಜಿಸುತ್ತಾ ಸೊಂಟದಿಂದ ಕೆಳಗೆ ಚಲನೆಯಾಗದೆ ನಿಂತುಬಿಡುತ್ತದೆ. ಕೈಕಾಲುಗಳನ್ನು ನೆಲಕ್ಕೆ ಊರಿಕೊಂಡು ಹರಿದಾಡುತ್ತಲೂ ನಿಶ್ಶಕ್ತಿಯಿಂದ ಚಲಿಸುವುದಕ್ಕೂ ಆಗದೆ ನೊಣಗಳೂ ಕ್ರಿಮಿಕೀಟಗಳೂ ಮೈಮೇಲೆ ಹರಿದಾಡುತ್ತಲೂ ಮರಣೋನ್ಮುಖವಾಗಿಯೂ, ಕೂದಲೂ, ರೋಮಗಳೂ ಕಿತ್ತುಬಿದ್ದು ಉಗುರುಗಳು ಉದ್ದವಾಗಿ ಬೆಳೆದು ದುರ್ವಾಸನೆಯುಳ್ಳದ್ದಾಗಿಯೂ ಕೊಳಕಾಗಿಯೂ ರೋಷವುಳ್ಳದ್ದಾಗಿಯೂ ಮೇಲೆಮೇಲೆ ಉಸಿರುಬಿಡುತ್ತಾ ಬಳಲುತ್ತಾ ಪದೇಪದೇ ಅತಿಯಾಗಿ ಮಲಮೂತ್ರಗಳನ್ನು ವಿಸರ್ಜಿಸುತ್ತಲೂ ಕಣ್ಣುಜಿಬರು, ಮೂಗಿನ ಗೊಣ್ಣೆಗಳಿಂದ ಕೂಡಿದ್ದಾಗಿಯೂ ಇರುತ್ತದೆ. ಈ ರೀತಿಯಾಗಿ ಫಕ್ಕ ರೋಗದ ಲಕ್ಷಣಗಳನ್ನು ವಿವರಿಸಲಾಗಿದೆ. ಇದೇ ರೀತಿಯಲ್ಲಿ ಗರ್ಭಿಣಿಯ ಕ್ಷೀರಪಾನಮಾಡಿದ್ದರಿಂದುಂಟಾದ ಫಕ್ಕರೋಗದವರೂ ಹೆಚ್ಚಾಗಿ ಬಾಧೆಪಡುತ್ತಾರೆ. ಇವರಿಗೆ ಅಗ್ನ್ಯಾಶಯವು (ಗ್ರಹಣಿಯು) ಕೆಟ್ಟುಹೋಗುವುದರಿಂದ ಬಹುಭೋಜನವನ್ನು ಮಾಡುತ್ತಾರಾದರೂ ಉಪಯೋಗವಾಗುವುದಿಲ್ಲ.

ಅಗ್ನಿಮಾಂದ್ಯ, ನೀರುನೀರಾಗಿ ಮಲಮೂತ್ರಗಳನ್ನು ವಿಸರ್ಜನೆಮಾಡುತ್ತಾರಾದ ಕಾರಣ ಅಗ್ನಿವರ್ಧನೆಯಾಗುವಂತೆ ಚಿಕಿತ್ಸೆ ಮಾಡಬೇಕು. ಕಲ್ಯಾಣಕ ಘೃತ ಮತ್ತು ಷಟ್ಪಲಘೃತಗಳನ್ನು ಕುಡಿಸಿದರೆ ಅಮೃತಸಮಾನವಾಗಿ ಪ್ರಯೋಜನಕಾರಿಗಳಾಗುತ್ತವೆ. ಏಳು ದಿನಗಳು ಕಳೆದಮೇಲೆ ತ್ರಿವೃತ್‌ಕ್ಷೀರವನ್ನು ಕುಡಿಸಿ ದೇಹಶೋಧನೆ ಮಾಡಿಸಬೇಕು. ಕೊಮ್ಮೆಬೇರು, ಒಂದೆಲೆಹೊನ್ನೆ, ಹರಳುಬೇರು, ಸಬ್ಬಸಿಗೆಸೊಪ್ಪು, ದ್ರಾಕ್ಷಿ, ಬಗಿನಿ, ತಿಗಡೆ, ಇವುಗಳಿಂದ ತಯಾರಿಸಿದ ಹಾಲನ್ನು ಕುಡಿಸಬೇಕು. ಈ ಹಾಲಿನೊಡನೆ ಶಾಲ್ಯನ್ನವನ್ನು ತಿನ್ನಿಸಬೇಕು. ಈ ರೀತಿಯಲ್ಲಿ ಉಪಚರಿಸಿದರೆ ದೇಹಶಕ್ತಿಯೂ, ಪುಷ್ಟಿಯೂ ಉಂಟಾಗಿ ರೋಗನಿವಾರಣೆಯಾಗುತ್ತದೆ. ಮೇಲೆ ಹೇಳಿದ ದ್ರವ್ಯಗಳಿಂದ ತೈಲವನ್ನು ತಯಾರಿಸಿ ಅಭ್ಯಂಗಮಾಡಿಸಬೇಕು. ರಾಸ್ನಾಘೃತ, ರಾಸ್ನಾತೈಲ, ಕ್ಷೀರ, ಯೂಷ, ಮಾಂಸರಸ, ಇವುಗಳೆರಡನ್ನೂ ಸೇರಿಸಿ ಆವರ್ತಿತ ಕ್ಷೀರವನ್ನು ತಯಾರಿಸಿ ಕುಡಿಸಿ ಹಿತಾಹಾರಮಾಡುವ ಮಕ್ಕಳಿಗೆ ಸಕಲ ವಿಧ ಫಕ್ಕ ರೋಗಗಳೂ ನಿವಾರಣೆಯಾಗುತ್ತವೆ. ಬುದ್ಧಿವಂತನಾದ ಶಿಲ್ಪಿಯಿಂದ ಮೂರು ಚಕ್ರವುಳ್ಳ ಚಿಕ್ಕ ಗಾಡಿಯನ್ನು ತಯಾರಿಸಿಕೊಟ್ಟು ಮಗುವು ಆ ಗಾಡಿಯನ್ನು ನೂಕುತ್ತಾ ನಡಿಗೆಯನ್ನು ಕಲಿತುಕೊಳ್ಳುವಂತೆ ಮಾಡಬೇಕು. ವಾತರೋಗಪೀಡಿತರಾದ ಬಾಲಕರಿಗೆ ವಿಶೇಷವಾಗಿ ಬಸ್ತಿಕರ್ಮ, ಸ್ನೇಹಪಾನ, ಸ್ವೇದಕರ್ಮ, ಉದ್ವರ್ತನ ಕ್ರಿಯೆಗಳನ್ನು ಮಾಡಿಸಬೇಕು.

ತೃತೀಯೋಽಧ್ಯಾಯಃ

ಬಾಲಗ್ರಹಪ್ರತಿಷೇಧಃ

ಮೂಲ—(ಅ।ಹೃ।ಉ।ಅ।೩)—ಗ್ರಹಾಣಾಮುತ್ಪತ್ತಿಕ್ರಮಃ—

ಪುರಾ ಗುಹಸ್ಯ ರಕ್ಷಾರ್ಥಂ ನಿರ್ಮಿತಾಃ ಶೂಲಪಾಣಿನಾ।
ಮನುಷ್ಯವಿಗ್ರಹಾಃ ಪಂಚ ಸಪ್ತ ಸ್ತ್ರೀವಿಗ್ರಹಾ ಗ್ರಹಾಃ ॥೧॥
ಸ್ಕನ್ದೋ ವಿಶಾಖೋ ಮೇಷಾಖ್ಯಃ ಶ್ವಗ್ರಹಃ ಪಿತೃಸಂಜ್ಞಿತಃ।
ಶಕುನಿಃ ಪೂತನಾ ಶೀತಪೂತನಾ ದೃಷ್ಟಿಪೂತನಾ ॥೨॥
ಮುಖಮಂಡತಿ (ಲಿ) ಕಾ ತದ್ವದ್ರೇವತೀ ಶುಷ್ಕರೇವತೀ।

ತೇಷಾಂ ರೂಪಾಣಿ—

ತೇಷಾಂ ಗ್ರಹೀಷ್ಯತಾಂ ರೂಪಂ ಪ್ರತತಂ ರೋದನಂ ಜ್ವರಃ ॥೩॥
ಸಾಮಾನ್ಯಂ ರೂಪಮುತ್ತ್ರಾಸಜೃಮ್ಭಾಭ್ರೂಕ್ಷೇಪದೀನತಾಃ।
ಫೇನಸ್ರಾವೋರ್ಧ್ವದೃಷ್ಟ್ಯೋಷ್ಠದನ್ತದಂಶಪ್ರಜಾಗರಾಃ ॥೪॥
ರೋದನಂ ಕೂಜನಂ ಸ್ತನ್ಯವಿದ್ವೇಷಃ ಸ್ವರವೈಕೃತಮ್।
ನಖೈರಕಸ್ಮಾತ್ಪರಿತಃ ಸ್ವಧಾತ್ರ್ಯಙ್ಗವಿಲೇಖನಮ್ ॥೫॥

೩ನೆಯ ಅಧ್ಯಾಯ

ಬಾಲಗ್ರಹಗಳ ಉತ್ಪತ್ತಿಕ್ರಮ

ದೀಪಿಕೆ—(ಅ|ಹೃ|ಉ|ಅ|೩)—

ಪೂರ್ವಕಾಲದಲ್ಲಿ ಪರಮೇಶ್ವರನು ತಾರಕಾಸುರನನ್ನು ವಧೆಮಾಡಲು ಅವತರಿಸಿದ ಷಣ್ಮುಖ (ಗುಹ)ನ ಕಾವಲಿಗೆಂದು ಮನುಷ್ಯದೇಹಗಳನ್ನು ಧರಿಸಿದ ಸ್ಕಂದ, ವಿಶಾಖ, ಮೇಷ, ಶ್ವಗ್ರಹ, ಪಿತೃಗ್ರಹಗಳೆಂಬ ಐದು ಗಂಡು ಗ್ರಹಗಳನ್ನೂ ಶಕುನೀ, ಪೂತನಾ, ಶೀತಪೂತನಾ, ದೃಷ್ಟಿ (ಅನ್ಧ) ಪೂತನಾ, ಮುಖಮಣ್ಡಿತಿಕಾ, ರೇವತೀ, ಶುಷ್ಕರೇವತಿಗಳೆಂಬ ಏಳು ಸ್ತ್ರೀ ಗ್ರಹಗಳನ್ನೂ ಸೃಷ್ಟಿಸಿದನು. ಗ್ರಹಗಳು ಬಾಲಕರನ್ನು ಹಿಡಿಯುವುದಕ್ಕೆ ಮುಂಚೆ ಮಕ್ಕಳು ಸದಾ ಅತ್ತು ರೊಚ್ಚೆ ಮಾಡುವುದು, ಜ್ವರಪೀಡಿತರಾಗಿರುವುದು, ಕಂಡುಬರುತ್ತದೆ. ಹಿಡಿದಮೇಲೆ ಮಕ್ಕಳು ಗಡಗಡನೆ ನಡುಗುವುದು, ಮೇಲ್ಗಡೆಗೆ ನೋಡುವುದು, ತುಟಿಗಳನ್ನೂ ಹಲ್ಲುಗಳನ್ನೂ ಕಡಿಯುವುದು, ಸದಾ ಎಚ್ಚರವಾಗಿಯೇ ಇರುವುದು, ಅಳುವುದು, ಕೂ ಎಂದು ಕೀರಧ್ವನಿಮಾಡುವುದು, ಸ್ತನಪಾನಮಾಡದಿರುವುದು, ವಿಕಾರ ಸ್ವರದಿಂದ ಕೂಗುವುದು, ಸುಮ್ಮಸುಮ್ಮನೆ ತಮ್ಮ ದೇಹವನ್ನೂ ದಾದಿಯನ್ನೂ ಪರಚುವುದು ಇವು ಕಂಡುಬರುತ್ತವೆ ||೧—೫||

ಮೂಲ—(ಅ|ಹೃ|ಉ|ಅ|೩)—ಸ್ಕನ್ದಗ್ರಹಗ್ರಸ್ತಶಿಶೋರ್ಲಕ್ಷಣಾನಿ—

ತತ್ರೈಕನಯನಸ್ರಾವೀ ಶಿರೋ ವಿಕ್ಷಿಪತೇ ಮುಹುಃ।
ಹತೈಕಪಕ್ಷಃ ಸ್ತಬ್ಧಾಙ್ಗಃ ಸಸ್ವೇದೋ ನತಕನ್ಧರಃ ||೬||
ದನ್ತಖಾದೀ ಸ್ತನದ್ವೇಷೀ ತ್ರಸ್ಯನ್ ರೋದಿತಿ ವಿಸ್ವರಃ।
ವಕ್ರವಕ್ತ್ರೋ ವಮೇಲ್ಲಾಲಾಂ ಭೃಶಮೂರ್ಧ್ವಂ ನಿರೀಕ್ಷತೇ ||೭||
ವಸಾಸೃಗ್ಗನ್ಧಿರುದ್ವಿಗ್ನೋ ಬದ್ಧಮುಷ್ಟಿಶಕೃಚ್ಛಿಶುಃ।
ಚಲಿತೈಕಾಕ್ಷಿಗಣ್ಡಭ್ರೂಃ ಸಂರಕ್ತೋಭಯಲೋಚನಃ ||೮||
ಸ್ಕನ್ದಾರ್ತಸ್ತೇನ ವೈಕಲ್ಯಂ ಮರಣಂ ವಾ ಭವೇದ್ಧ್ರುವಮ್।
(ಬಾಲಾ)—ತತ್ಪ್ರತೀಕಾರಾಃ—
ಸೋಮವಲ್ಲೀಮಿನ್ದ್ರವೃಕ್ಷಂ ಬೃಹತೀಂ ಬಿಲ್ವಜಂ ಶಮೀಮ್ ||೯||
ಮೃಗಾದನ್ಯಾಶ್ಚ ಮೂಲಾನಿ ಗ್ರಥಿತಾನಿ ವಿಧಾರಯೇತ್।
ಸ್ಕನ್ದಗ್ರಹೋಪಸೃಷ್ಟಸ್ಯ ಕುಮಾರಸ್ಯ ಪ್ರಶಸ್ಯತೇ ||೧೦||
ವಾತಘ್ನದ್ರುಮಪತ್ರಾಣಾಂ ಕ್ವಾಥೇನ ಪರಿಷೇಚನಮ್

ದೀಪಿಕೆ—(ಅ|ಹೃ|ಉ|ಅ|೩)—ಸ್ಕನ್ದಗ್ರಹಪೀಡಿತ ಬಾಲಕನ ಲಕ್ಷಣಗಳು—

ಒಂದೇ ಕಣ್ಣಿನಿಂದ ನೀರು ಸೋರುವುದು, ಆಗಾಗ್ಗೆ ತಲೆಹೊರಳಿಸುವುದು, ಶರೀರದ ಒಂದು ಪಾರ್ಶ್ವದಲ್ಲಿ ಚಲನೆಯಿಲ್ಲದಿರುವುದು, ಶರೀರವು ಬಿಗಿದು ಹಿಡಿದಂತಿರುವುದು, ಸದಾ ಬೆವರು ಹರಿಯುತ್ತಿರುವುದು, ಕತ್ತನ್ನು ಬಗ್ಗಿಸಿಕೊಂಡು

ಹಲ್ಲುಕಡಿಯುತ್ತಿರುವುದು, ಸ್ತನಪಾನ ಮಾಡದೆಯೂ, ನಡುಗುತ್ತಲೂ ವಿಕಾರ ಸ್ವರದಿಂದ ಅಳುತ್ತಲೂ ಬಾಯಿಯನ್ನು ಸೊಟ್ಟುಮಾಡಿ ಜೊಲ್ಲು ಸುರಿಸುತ್ತಲೂ ಮೇಲ್ಗಡೆಯಲ್ಲೇ ನೋಡುತ್ತಿರುತ್ತದೆ. ರಕ್ತದ ಮತ್ತು ಕೊಬ್ಬಿನ ವಾಸನೆಯಂತೆ ಮೈಗಂಧವಿರುತ್ತದೆ. ಗಾಭರಿಪಡುತ್ತಾ ಅತ್ತಿತ್ತಕಡೆ ನೋಡುತ್ತದೆ; ಬಿಗಿಯಾಗಿ ಕೈ ಮುಷ್ಟಿಹಿಡಿದಿರುತ್ತದೆ; ಮಲಬಂಧವಿರುತ್ತದೆ; ಒಂದು ಪಾರ್ಶ್ವದ ಕಣ್ಣು, ಕೆನ್ನೆ, ಹುಬ್ಬುಗಳು ಅದುರುತ್ತವೆ; ಎರಡು ಕಣ್ಣುಗುಡ್ಡೆಗಳೂ ಕೆಂಪಾಗಿರುತ್ತವೆ; ಈ ಲಕ್ಷಣಗಳುಳ್ಳ ಮಗುವಿಗೆ ಸ್ಕನ್ದಗ್ರಹವು ಪೀಡಿಸುತ್ತಿದೆಯೆಂದು ತಿಳಿಯಬೇಕು. ಈ ಮಗುವಿಗೆ ಕುರುಡುತನ ಕಿವಿ ಕಿವುಡಾಗುವುದು ಮೊದಲಾದ ಅಂಗವಿಕಾರ ಗಳುಂಟಾಗುತ್ತವೆ. ಮರಣವೂ ಸಂಭವಿಸುತ್ತದೆ ॥೬–೮॥

(ಬಾಲಾತಙ್ಕಹಾರೀ)—ಇದಕ್ಕೆ ಪ್ರತಿಕಾರಗಳು—

ಅಮೃತಬಳ್ಳಿ, ಕೊಡಶಿಗೆ, ಹೆಗ್ಗುಳ್ಳ, ಬಿಲ್ವಪತ್ರೆ, ಬನ್ನಿ, ದಾಸಮೆಕ್ಕೆ ಇವುಗಳಲ್ಲೊಂದರ ಬೇರನ್ನು ತುಂಡುತುಂಡಾಗಿ ಕತ್ತರಿಸಿ ದಾರದಿಂದ ಬಿಗಿದು ಸರದಂತೆ ಕಟ್ಟಿ ಸ್ಕನ್ದಗ್ರಹಪೀಡಿತವಾದ ಮಗುವಿನ ಕತ್ತಿಗೆ ತಗಲುಹಾಕಬೇಕು. ವಾತಹರಗಳಾದ ಕಾಕೋಳ್ಯಾದಿಗಣದ ಅಥವಾ ಶಿರೀಷ (ಬಾಗೆ) ಪಂಚಾಂಗ ಅಥವಾ ಲಕ್ಕಿ, ಹೆರಳೆ, ನಿಂಬೆ, ಬೇವು, ಮಾವು ಇವುಗಳ ಸೊಪ್ಪನ್ನು ಕಷಾಯ ಮಾಡಿ ಮಗುವಿಗೆ ಸ್ನಾನಮಾಡಿಸಿದರೆ ಆರೋಗ್ಯವಾಗುತ್ತದೆ ॥೯–೧೦॥

ಮೂಲ—ಸ್ಕನ್ದಾಪಸ್ಮಾರ (ವಿಶಾಖ) ಗ್ರಹಗ್ರಸ್ತಶಿಶೋರ್ಲಕ್ಷಣಾನಿ—

ಸಂಜ್ಞಾನಾಶೋ ಮುಹುಃ ಕೇಶಲುಂಚನಂ ಕನ್ಧರಾನತಿಃ ॥೧೧॥
ವಿನಮ್ಯ ಜೃಮ್ಭಮಾಣಸ್ಯ ಶಕೃನ್ಮೂತ್ರಪ್ರವರ್ತನಮ್।
ಫೇನೋದ್ವಮನಮೂರ್ಧ್ವಾಕ್ಷ ಹಸ್ತಭ್ರೂಪಾದನರ್ತನಮ್ ॥೧೨॥
ಸ್ತನಸ್ವಜಿಹ್ವಾಸಂದಂಶಸಂರಮ್ಭಜ್ವರಜಾಗರಾಃ।
ಪೂಯಶೋಣಿತಗನ್ಧಶ್ಚ ಸ್ಕನ್ದಾಪಸ್ಮಾರಲಕ್ಷಣಮ್ ॥೧೩॥

(ಬಾಲಾತಙ್ಕಹಾರೀ)—ತತ್ಪ್ರತೀಕಾರಾಃ—

ಬಿಲ್ವಂ ಶಿರೀಷಗೋಲೋಮೀ ಸುರಸಾದಿಶ್ಚ ಯೋ ಗಣಃ।
ಪರಿಷೇಕೇ ಪ್ರಯೋಕ್ತವ್ಯಃ ಸ್ಕನ್ದಾಪಸ್ಮಾರಶಾನ್ತಯೇ ॥೧೪॥
ಅನನ್ತಾಕುಕ್ಕುಟೀಬಿಮ್ಬೀಮರ್ಕಟೀ ಚಾಪಿ ಧಾರಯೇತ್।
ಉತ್ಸಾದನಂ ವಸಾಹಿಙ್ಗುಯುಕ್ತಮತ್ರ ಪ್ರಕೀರ್ತಿತಮ್ ॥೧೫॥

ಧೂಪಃ—

ಗೃಧ್ರೋಲೂಕಪುರೀಷಾಣಿ ಕೇಶಾಸ್ಥಿ ಸನಖಂ ಘೃತಮ್।
ವೃಷಭಸ್ಯ ಚ ರೋಮಾಣಿ ಸದಾ ಯೋಜ್ಯಾನಿ ಧೂಪನೇ ॥೧೬॥

ದೀಪಿಕೆ—(ಅ।ಹೃ।ಉ।ಅ।೩)—ಸ್ಕನ್ದಾಪಸ್ಮಾರಗ್ರಹಗ್ರಸ್ತಶಿಶುವಿನ ಲಕ್ಷಣಗಳು—

ವಿಶಾಖ ಗ್ರಹಕ್ಕೆ ಸ್ಕನ್ದಾಪಸ್ಮಾರವೆಂದೂ ಹೆಸರುಂಟು. ಆ ಗ್ರಹದಿಂದ ಪೀಡಿಸಲ್ಪಟ್ಟ ಶಿಶುವಿಗೆ ಪದೇಪದೇ ಜ್ಞಾನ ತಪ್ಪುತ್ತದೆ, ತನ್ನ ತಲೆಯ ಕೂದ ಲನ್ನು ಕೀಳುತ್ತದೆ, ಕತ್ತನ್ನೂ ದೇಹವನ್ನೂ ಬಗ್ಗಿಸಿಕೊಂಡಿರುತ್ತದೆ, ಆಕಳಿಸು

ವಾಗ ಮಲಮೂತ್ರಗಳು ವಿಸರ್ಜನೆಯಾಗುತ್ತವೆ; ನೊರೆನೊರೆಯಾಗಿ ವಮನ ಮಾಡುತ್ತದೆ, ತಲೆ, ಕಣ್ಣು, ಕೈ, ಹುಬ್ಬು, ಕಾಲುಗಳು ಅದುರುತ್ತವೆ ; ಧಾತ್ರಿಯ ಸ್ತನವನ್ನೂ ತನ್ನ ನಾಲಿಗೆಯನ್ನೂ ಕಡಿದುಬಿಡುತ್ತದೆ; ಕೋಪವು ಹೆಚ್ಚಾಗಿರುತ್ತದೆ, ಜ್ವರವಿರುತ್ತದೆ, ಸದಾ ಎಚ್ಚರವಾಗಿರುತ್ತದೆ; ಶರೀರವು ಕೀವು ಮತ್ತು ರಕ್ತಗಳ ವಾಸನೆಯುಳ್ಳದ್ದಾಗಿರುತ್ತದೆ ॥೧೧–೧೩॥

(ಬಾಲಾ)—ಇದಕ್ಕೆ ಪ್ರತೀಕಾರ—

ಬಿಲ್ವಪತ್ರೆ, ಬಾಗೆ, ಬಜೆ, ಸುರಸಾದಿಗಣದ್ರವ್ಯಗಳು, ಇವುಗಳ ಕಷಾಯ ದಿಂದ ಮಗುವಿಗೆ ಸ್ನಾನಮಾಡಿಸಬೇಕು. ತುರುಚನಬೇರು, ಕೋಳಿಕುಟುಮನ ಗೆಡ್ಡೆ, ತೊಂಡೆಬೇರು, ನಸುಗುನ್ನಿಬೇರು ಇವುಗಳನ್ನು ಕಿತ್ತು, ತೋಳುಗಳಲ್ಲಿ ಧರಿಸಿರಬೇಕು. ಇಂಗನ್ನು ಪುಡಿಮಾಡಿ ಕೊಬ್ಬಿಗೆ ಸೇರಿಸಿ ಮಗುವಿನ ದೇಹದ ಮೇಲೆ ಉಜ್ಜಿಸಬೇಕು. ಹದ್ದು, ಗೂಬೆಗಳ ಹಿಕ್ಕೆಗಳು, ಕೂದಲು, ಉಗುರು, ಮೂಳೆ, ತುಪ್ಪ, ಎತ್ತಿನ ಚರ್ಮಗಳನ್ನು ಕೆಂಡದಮೇಲೆ ಹಾಕಿ ಧೂಪನ ಮಾಡಿಸಿದರೆ ನಿವಾರಣೆಯಾಗುತ್ತದೆ ॥೧೪–೧೬॥

ಮೂಲ – (ಅ।ಹೃ।ಉ।ಅ।೩)— ಮೇಷಗ್ರಹಗ್ರಸ್ತಶಿಶೋರ್ಲಕ್ಷಣಾನಿ –

ಆಧ್ಮಾನಂ ಪಾಣಿಪಾದಾಸ್ಯಸ್ಪನ್ದನಂ ಫೇನನಿರ್ವಮಃ।
ತೃಣ್ಮುಷ್ಟಿಬನ್ಧಾತೀಸಾರಸ್ವರದೈನ್ಯವಿವರ್ಣತಾಃ ॥೧೭॥
ಕೂಜನಂ ಸ್ತನನಂ ಛರ್ದಿಃ ಕಾಸಹಿಧ್ಮಾಪ್ರಜಾಗರಃ।
ಓಷ್ಠದಂಶಾಙ್ಗಸಂಕೋಚಸ್ತಮ್ಭಬಸ್ತಾಮಗನ್ಧತಾಃ ॥೧೮॥
ಊರ್ಧ್ವಂ ನಿರೀಕ್ಷ್ಯ ಹಸನಂ ಮಧ್ಯೇ ವಿನಮನಂ ಜ್ವರಃ।
ಮೂರ್ಛೈಕನೇತ್ರಶೋಫಶ್ಚ ನೈಗಮೇಷಗ್ರಹಾಕೃತಿಃ ॥೧೯॥

(ಬಾಲಾ)—ತತ್ಪ್ರತೀಕಾರಾಃ—

ಬಿಲ್ವಾಗ್ನಿಮನ್ಥಪೂತೀಕೈಃ ಕಾರ್ಯಂ ಸ್ಯಾತ್ಪರಿಷೇಚನೇ।
ವಚಾಂ ವಯಸ್ಥಾಂ ಜಟಿಲಾಂ ಗೋಲೋಮೀಂ ಚಾಪಿ ಧಾರಯೇತ್ ॥೨೦॥
ಉತ್ಸಾದನಂ ಹಿತಂ ಚಾತ್ರ ಧೂಪಃ ಸುಜ್ಜಜನ್ಯೈಃ ಕೃತಃ।
ಮರ್ಕಟೋಲೂಕಗೃಧ್ರಾಣಾಂ ಪುರೀಷೈಸ್ತು ಪಿತೃಗ್ರಹೇ ॥೨೧॥

ದೀಪಿಕೆ— ಮೇಷ ಗ್ರಹಪೀಡಿತ ಶಿಶುವಿನ ಲಕ್ಷಣಗಳು—

ಮೇಷಗ್ರಹಕ್ಕೆ ನೈಗಮೇಷವೆಂದೂ ಹೆಸರು. ಈ ಗ್ರಹದಿಂದ ಪೀಡಿಸ ಲ್ಪಟ್ಟ ಮಗುವಿಗೆ ಹೊಟ್ಟೆಯುಬ್ಬರ, ಕೈಕಾಲು ಮುಖಗಳು ಅದರುವುದು, ನೊರೆನೊರೆಯಾಗಿ ವಮನವಾಗುವುದು, ಬಾಯಾರಿಕೆ, ಕೈಮುಷ್ಟಿ ಹಿಡಿದಿರು ವುದು, ಅತಿಸಾರ, ದೀನಸ್ವರ, ಮೈಬಣ್ಣ ಬದಲಾಗುವುದು, ಕೂ ಎಂದು ವಿಕಾರ ಧ್ವನಿಯಿಂದ ಕೂಗುವುದು, ಗುಡುಗುವಂತೆ ಶಬ್ದಮಾಡುವುದು, ಕೆಮ್ಮು, ಬಿಕ್ಕಳಿಕೆ, ಸದಾ ಎಚ್ಚರಗೊಂಡಿರುವುದು, ತುಟಿಗಳನ್ನು ಕಚ್ಚುವುದು, ಮೈ ಸೆಳೆತ, ಮೈ ಬಿಗಿಹಿಡಿಯುವುದು, ಆಡಿನ ಮೈವಾಸನೆಯಂತೆ ಸೊಗಡುನಾತವಿರುವುದು, ಮುಖವನ್ನು ಮೇಲಕ್ಕೆಮಾಡಿ ನಗುವುದು, ಬೆನ್ನು ಬಗ್ಗಿಸುವುದು, ಜ್ವರವಿರುವುದು,

ಜ್ಞಾನ ತಪ್ಪುವುದು, ಒಂದು ಕಣ್ಣು ಊದುವುದು, ಈ ಲಕ್ಷಣಗಳಿರುತ್ತವೆ ॥೧೩–೧೯॥

(ಬಾಲಾ)——ಇದಕ್ಕೆ ಪ್ರತೀಕಾರಗಳು——

ಬಿಲ್ವಪತ್ರೆ, ತಗ್ಗಿ, ಹೊಂಗೆ ತೊಗಟೆಗಳ ಕಷಾಯದಿಂದ ನೈಗಮೇಷ ಗ್ರಹಪೀಡಿತ ಮಗುವಿಗೆ ಸ್ನಾನಮಾಡಿಸಿ ಬಜೆ, ನೆಲ್ಲಿ, ಜಟಾಮಾಂಸೀ, ಆಕಾಶ ಮಾಂಸಿಗಳನ್ನು ಕೈ ಕತ್ತುಗಳಿಗೆ ಕಟ್ಟುವುದು, ಮೈ ತಿಕ್ಕುವುದು, ಕೋತಿ, ಗೂಬೆ, ಹದ್ದುಗಳ ಹಿಕ್ಕೆ (ಪುರೀಷ) ಇವುಗಳನ್ನು ಬೆಂಕಿಗೆ ಹಾಕಿ ಹೊಗೆಯನ್ನು ಕಾಯಿಸುವುದು (ಧೂಫಹಾಕುವುದು) ॥೨೦–೨೧॥

ಮೂಲ—(ಅ।ಹೃ।ಉ।ಅ।೩) ಶ್ವಗ್ರಹಗ್ರಸ್ತಶಿಶೋರ್ಲಕ್ಷಣಾನಿ—

ಕಮ್ಪೋ ಹೃಷಿತರೋಮತ್ವಂ ಸ್ವೇದಶ್ಚಕ್ಷುರ್ನಿಮೀಲನಮ್ ।
ಬಹಿರಾಯಮನಂ ಜಿಹ್ವಾದಂಶೋಽನ್ತಃ ಕಣ್ಠಕೂಜನಮ್ ॥೨೨॥
ಧಾವನಂ ವಿಟ್ಸಗನ್ಧತ್ವಂ ಕ್ರೋಶನಂ ಶ್ವಾನವಚ್ಛುನಿ ।

ಪಿತೃಗ್ರಹಗ್ರಸ್ತಶಿಶುಲಕ್ಷಣಮ್—

ರೋಮಹರ್ಷೋ ಮುಹುಸ್ತ್ರಾಸೋ ರೋದನಂ ಸಹಸಾ ಜ್ವರಃ ॥೨೩॥
ಕಾಸಾತೀಸಾರವಮಥುಜೃಮ್ಭಾತೃಟ್ಛವಗನ್ಧತಾಃ ।
ಅಂಗೇಷ್ವಾಕ್ಷೇಪವಿಕ್ಷೇಪಃ ಶೋಷಸ್ತಮ್ಭೋ ವಿವರ್ಣತಾಃ ॥೨೪॥
ಮುಷ್ಟಿಬನ್ಧಃ ಸ್ರುತಿಶ್ಚಾಕ್ಷ್ಣೋರ್ಬಾಲಸ್ಯ ಸ್ಯುಃ ಪಿತೃಗ್ರಹೇ ।

ಮೇಷಗ್ರಹವತ್ಪ್ರತೀಕಾರಾಃ ।

(ಅ।ಹೃ।ಉ।ಅ।೩) —ಶಕುನಿಗ್ರಹಗ್ರಸ್ತಶಿಶೋರ್ಲಕ್ಷಣಾನಿ—

ಸ್ರಸ್ತಾಙ್ಗತ್ವಮತೀಸಾರೋ ಜಿಹ್ವಾತಾಲುಗಳೇ ವ್ರಣಾಃ ॥೨೫॥
ಸ್ಫೋಟಾಃ ಸದಾಹರುಕ್ಪಾಕಾ ಸನ್ಧಿಷು ಸ್ಯುಃ ಪುನಃ ಪುನಃ ।
ನಿಶ್ಯಹ್ನಿ ಪ್ರವಿಲೀಯನ್ತೇ ಪಾಕೋ ವಕ್ತ್ರೇ ಗುದೇಽಪಿ ವಾ ॥೨೬॥
ಭಯಂ ಶಕುನಿಗನ್ಧತ್ವಂ ಜ್ವರಶ್ಚ ಶಕುನಿಗ್ರಹೇ ।

(ಬಾಲಾ)—ತತ್ಪ್ರತೀಕಾರಾಃ—

ಸ್ಕನ್ದಗ್ರಹೋಕ್ತಧೂಮಶ್ಚ ಹಿತೋ ಹ್ಯತ್ರ ಭವನ್ತಿ ಹಿ ॥೨೭॥
ಸ್ಕನ್ದಾಪಸ್ಮಾರಶಮನಂ ಘೃತಮತ್ರಾಪಿ ಪೂಜಿತಮ್ ।
ಶತಾವರೀ ಮೃಗೈರ್ವಾರುನಾಗದನ್ತೀನಿದಿಗ್ಧಿಕಾ ॥೨೮॥
ಲಕ್ಷ್ಮಣಾಂ ಸಹದೇವಾಂ ಚ ಬೃಹತೀಂ ಚಾಪಿ ಧಾರಯೇತ್ ।
ಶಕುನಿಗ್ರಹಜುಷ್ಟಸ್ಯ ಕಾರ್ಯಂ ವೈದ್ಯೇನ ಜಾನತಾ ॥೨೯॥
ವೇತಸಾಮ್ರಕಪಿತ್ಥಾನಾಂ ಕ್ವಾಥೇನ ಪರಿಷೇಚನಮ್ ।
ಹ್ರೀವೇರಮಧುಕೋಶೀರಸಾರಿವೋತ್ಪಲಪದ್ಮಕೈಃ ॥೩೦॥
ಲೋಧ್ರಪ್ರಿಯಙ್ಗುಮಂಜಿಷ್ಠಾಗೈರಿಕೈಃ ಸಂಲಿಪೇಚ್ಛಿಶುಮ್ ।

ದೀಪಿಕೆ—ಶ್ವಾನ, ಪಿತೃ, ಶಕುನಿ ಗ್ರಹಗಳಿಂದ ಪೀಡಿತರಾದ ಶಿಶುಗಳ ಲಕ್ಷಣ ಪ್ರತೀಕಾರಗಳು—

ಶ್ವಗ್ರಹಪೀಡಿತವಾದ ಮಗುವಿಗೆ ಮೈನಡುಕ, ರೋಮಾಂಚ, ಮೈ ಬೆವರುವುದು, ಕಣ್ಣು ಮುಚ್ಚಿಕೊಂಡಿರುವುದು, ಮೈಯ್ಯನ್ನು ಹಿಂದಕ್ಕೆ ಬಗ್ಗಿಸುವುದು,

ನಾಲಿಗೆಯನ್ನು ಕಚ್ಚುವುದು, ಗಂಟಲೊಳಗೇ ಕೂಗುವುದು, ಓಡಿಯೋಡಿಹೋಗುವುದು, ಮೈವಾಸನೆಯು ಮೊಲದ ಶರೀರದ ವಾಸನೆಯಂತಿರುವುದು (ಕುದುರೆಯ ಲದ್ದಿಯಂತೆ ವಾಸನೆಯಿರುವುದೆಂದು ಕೆಲವರ ಅಭಿಪ್ರಾಯ) ನಾಯಿ ಬೊಗಳುವಂತೆ ಕೂಗುವುದು. ಮೇಷಗ್ರಹದ ಚಿಕಿತ್ಸೆಯಂತೆಯೇ ಇವುಗಳಿಗೂ ಚಿಕಿತ್ಸೆ ನಡೆಸಬೇಕು. ಪಿತೃಗ್ರಹಪೀಡಿತವಾದ ಶಿಶುವಿಗೆ ಮೈಮೇಲೆ ರೋಮಗಳೆದ್ದಿರುವುದು, ಮೈನಡುಕ, (ಅನೇಕವಿಧಗಳಾದ ಭಯಂಕರಗಳಾದ ಆಕಾರಗಳನ್ನು ಕಾಣುವುದರಿಂದ) ಮಗುವು ಕಿಟ್ಟನೆ ಕಿರಿಚಿಕೊಳ್ಳುತ್ತದೆ; ಜ್ವರ, ಕೆಮ್ಮು, ವಮನ, ಭೇದಿ, ಆಕಳಿಕೆ, ಬಾಯಾರಿಕೆ ಇವುಗಳುಂಟಾಗುತ್ತವೆ ; ಮೈ ಹೆಣದ ವಾಸನೆಯುಳ್ಳುದಾಗಿ ಶರೀರವು ಶೆಳೆದುಕೊಂಡಂತೆಯೂ ಕೈಕಾಲುಗಳು ನೀಡಿರುವಂತೆಯೂ ಕಾಣುತ್ತವೆ; ದೇಹವು ಕೃಶವಾಗಿ ಬಿಗಿತದಿಂದ ಕೂಡಿರುತ್ತದೆ. ಮೈಬಣ್ಣವು ಬದಲಾಗುತ್ತದೆ; ಮುಷ್ಟಿಯನ್ನು ಬಿಗಿಯಾಗಿ ಹಿಡಿದುಕೊಳ್ಳುತ್ತದೆ; ಕಣ್ಣಿನಲ್ಲಿ ನೀರು ಸೋರುತ್ತದೆ; ಶಕುನಿಗ್ರಹ ಪೀಡಿತವಾದ ಮಗುವಿನ ಅಂಗಗಳು ಜಾರಿ ನಾಲಿಗೆ ಗಂಟಲು; ಅಂಗಳುಗಳಲ್ಲಿ ಹುಣ್ಣು ಉಂಟಾಗುತ್ತದೆ; ರಾತ್ರಿಯಹೊತ್ತು ಮೂಳೆಗಳ ಸಂಧಿಗಳಲ್ಲಿ ಸಣ್ಣಸಣ್ಣ ಬೊಕ್ಕೆಗಳುಂಟಾಗುತ್ತವೆ; ಉರಿ, ನೋವು ಪಾಕಗಳೂ ಆಗುತ್ತವೆ. ಹಗಲು ಹೊತ್ತಿನಲ್ಲಿ ಇವು ಕರಗಿರುತ್ತವೆ. ಬಾಯಿ ಗುದಗಳಲ್ಲಿ ವ್ರಣಗಳುಂಟಾಗಿ ಪಾಕವಾಗುತ್ತವೆ. ಮಗುವು ಸದಾ ಬೆಚ್ಚುಬೀಳುತ್ತದೆ ; ಹಕ್ಕಿಯ ಮೈವಾಸನೆಯಂತೆ ಮಗುವಿನ ಶರೀರದ ವಾಸನೆಯೂ ಜ್ವರವೂ ಇರುತ್ತವೆ ॥೨೨-೩೦॥

ಮೂಲ—(ಅ।ಹೃ।ಉ।ಅ।೩) ಪೂತನಾಗ್ರಹಗ್ರಸ್ತಶಿಶೋರ್ಲಕ್ಷಣಾನಿ--

ಪೂತನಾಯಾಂ ವಮಿಸ್ತನ್ದ್ರಾ ಕಪ್ಯೋ ರಾತ್ರೌ ಪ್ರಜಾಗರಃ ॥೩೧॥
ಹಿಧ್ಮಾಧ್ಮಾನಂ ಶಕೃದ್ಭೇದಃ ಪಿಪಾಸಾ ಮೂತ್ರನಿಗ್ರಹಃ ।
ಸ್ರಸ್ತಹೃಷ್ಟಾಙ್ಗರೋಮತ್ವಂ ಕಾಕವತ್ಪೂತಿಗನ್ಧತಾ ॥೩೨॥

(ಬಾಲಾ)—

ಅತೀಸಾರೋ ಜ್ವರಸ್ತೃಷ್ಣಾ ತಿರ್ಯಕ್ಪ್ರೇಕ್ಷಣರೋದನಮ್ ।
ನಷ್ಟನಿದ್ರಸ್ತಥೋದ್ವಿಗ್ನಃ ಗ್ರಸ್ತಃ ಪೂತನಯಾ ಶಿಶುಃ ॥೩೩॥

ತತ್ಪ್ರತೀಕಾರಾಃ—

ಕಪೋತವಙ್ಕಸ್ಯೋನಾಕೋ ವರಣಃ ಪಾರಿಭದ್ರಕಃ ।
ಆಸ್ಫೋತಾ ಚೈವ ಯೋಜ್ಯಾಶು ಬಾಲಾನಾಂ ಪರಿಷೇಚನೇ ॥೩೪॥
ನವಾ ಪಯಸ್ಯಾ ಗೋಲೋಮೀ ಹರಿತಾಳಂ ಮನಃಶಿಲಾ ।
ಕುಷ್ಠಂ ಸರ್ಜರಸಶ್ಚೈವ ತೈಲಾರ್ಥಂ ಕಲ್ಕ ಇಷ್ಯತೇ ॥೩೫॥
ಹಿತಂ ಘೃತಂ ತುಗಾಕ್ಷೀರ್ಯಾ ಸಂಸಿದ್ಧಂ ಮಧುನಾಪಿ ಚ ।
ಕುಷ್ಠತಾಳೀಸಖದಿರಂ ಚಂದನಂ ಸ್ಯನ್ದನಂ ತಥಾ ॥೩೬॥
ದೇವದಾರು ವಚಾ ಹಿಙ್ಗು ಕುಷ್ಠಂ ಗಿರಿಕದಮ್ಬಕಮ್ ।
ಏಲಾಹರೇಣವಶ್ಚಾಪಿ ಯೋಜ್ಯಾ ಉದ್ಧೂಪನೇ ಸದಾ ॥೩೭॥

ದೀಪಿಕೆ —

ಪೂತನಾಗ್ರಹಪೀಡಿತ ಶಿಶುವು ವಮನ, ಮೈನಡುಕ, ತೂಕಡಿಕೆ, ರಾತ್ರಿಯ ಹೊತ್ತು ಎಚ್ಚರಗೊಂಡಿರುವುದು, ಬಿಕ್ಕಳಿಕೆ, ಹೊಟ್ಟೆಯುಬ್ಬರ, ಮಲವೊಡೆದು ನೀರುನೀರಾಗಿ ಭೇದಿಯಾಗುವುದು, ಬಾಯಾರಿಕೆ, ಮೂತ್ರದ ತಡೆ, ಅಸ್ಥಿಸಂಧಿಗಳು ಸಡಿಲವಾಗುವುದು, ಮೈರೋಮಗಳು ಎದ್ದುನಿಲ್ಲುವುದು, ಕಾಗೆಯ ವಾಸನೆಯಂತೆ ಮೈ ದುರ್ವಾಸನೆಯಾಗಿರುವುದು, ಜ್ವರ, ಬೆಚ್ಚುಬೀಳುವುದು, ವಕ್ರದೃಷ್ಟಿ ಈ ಲಕ್ಷಣಗಳುಳ್ಳದ್ದಾಗಿರುತ್ತದೆ. ಇದಕ್ಕೆ ಪ್ರತೀಕಾರವೇನೆಂದರೆ—ನಾಯಿಬೇಲ, ಹೆಮ್ಮರ, ಮುಟ್ಟಮಾವು, ಬೇವು ಇವುಗಳ ತೊಗಟೆ, ಗಿರಿಕರ್ಣಿಕೆಯಬೇರು ಇವುಗಳ ಕಷಾಯದಿಂದ ಮಗುವಿಗೆ ಸ್ನಾನಮಾಡಿಸಬೇಕು. ಅಷಾಢಿ, ಬಜೆ, ಅರಿದಳ, ಮಣಶಿಲೆ, ಚಂಗಲ್ಕೋಷ್ಠ, ರಾಳ ಇವುಗಳನ್ನು ಸೇರಿಸಿ ತೈಲವನ್ನು ತಯಾರಿಸಿ ಮೈಗೆ ತಿಕ್ಕಬೇಕು. ಬಿದರುಪ್ಪು, ಜೇನುತುಪ್ಪಗಳನ್ನು ಸೇರಿಸಿ ತಯಾರಿಸಿದ ಘೃತವನ್ನು ಕುಡಿಸಬೇಕು. ಚಂಗಲ್ಕೋಷ್ಠ, ತಾಳೀಸಪತ್ರೆ, ಕಗ್ಗಲಿ, ಶ್ರೀಗಂಧ, ಲೋಧ್ರ, ದೇವದಾರು, ಬಜೆ, ಹಿಙ್ಗು, ಬೆಟ್ಟದ ಈಚಲು, ಏಲಕ್ಕಿ, ರೇಣುಕಬೀಜ, ಇವುಗಳ ಪುಡಿಯನ್ನು ಕೆಂಡದ ಮೇಲೆ ಉದುರಿಸಿ ಧೂಪವನ್ನು ಶಿಶುವಿನ ಮೈಗೆ ತಗುಲಿಸಬೇಕು ॥೩೧–೩೭॥

ಮೂಲ—(ಅ।ಹೃ।ಉ।ಅ।೩) ಶೀತಪೂತನಾಪೀಡಿತಶಿಶೋರ್ಲಕ್ಷಣಾನಿ—

ಶೀತಪೂತನಯಾ ಕಮ್ಪೋ ರೋದನಂ ತಿರ್ಯಗೀಕ್ಷಣಮ್ ।
ತೃಷ್ಣಾನ್ತ್ರಕೂಜೋಽತೀಸಾರೋ ವಸಾವದ್ವಿಸ್ರಗನ್ಧತಾ ॥೩೮॥
ಪಾರ್ಶ್ವಸ್ಯೈಕಸ್ಯ ಶೀತತ್ವಮುಷ್ಣತ್ವಮಪರಸ್ಯ ಚ ।

(ಬಾಲಾ)—

ವೇಪತೇ ಕಾಸತೇ ಕ್ಷೀಣೋ ನೇತ್ರರೋಗೋ ವಿಗನ್ಧಿತಾ।
ಛರ್ದ್ಯತೀಸಾರಯುಕ್ತಶ್ಚ ಶೀತಪೂತನಯಾ ಶಿಶುಃ ॥೩೯॥

ಪ್ರತಿಕ್ರಿಯಾ—

ಗೃಧ್ರೋಲೂಕಪುರೀಷಾಣಿ ಬಸ್ತಗನ್ಧಮಹಿತ್ವಚಮ್ ॥೪೦॥
ನಿಮ್ಬಪತ್ರಾಣಿ ಚ ತಥಾ ಧೂಪನಾರ್ಥಂ ಸಮಾಹರೇತ್ ।

ದೀಪಕೆ—ಶೀತಪೂತನಾ ಗ್ರಹಪೀಡಿತ ಶಿಶುವಿನ ಲಕ್ಷಣಗಳು—

ಶೀತಪೂತನಾಗ್ರಹಪೀಡಿತನಾದ ಶಿಶುವಿಗೆ ಮೈನಡುಕ, ಅಳುವುದು, ಅಡ್ಡಡ್ಡಲಾದ ನೋಟ, ಬಾಯರಿಕೆ ಕರುಳಿನಲ್ಲಿ ಶಬ್ದವಾಗುವುದು, ಅತಿಸಾರ, ಕೊಬ್ಬಿನಂತೆ ಮೈವಾಸನೆ, ಶರೀರದ ಒಂದು ಪಕ್ಕ ತಣ್ಣಗೂ ಇನ್ನೊಂದು ಪಕ್ಕವು ಬಿಸಿಯಾಗಿಯೂ ಇರುವುದು, ಮೈ ನಡುಕ, ಕೆಮ್ಮು, ದೇಹಕ್ಷೀಣತೆ, ಕಣ್ಣುನೋವು, ವಮನ, ಭೇದಿ, ಈ ಲಕ್ಷಣಗಳಿರುತ್ತವೆ. ಇದಕ್ಕೆ ಪ್ರತಿಕ್ರಿಯೆಯೇನೆಂದರೆ—ಹದ್ದು ಗೂಬೆಗಳ ಹಿಕ್ಕೆ, ನಾರಂಬೇಳೆ, ಹಾವಿನಪೊರೆ, ಬೇವಿನಸೊಪ್ಪು ಇವುಗಳನ್ನು ಕೆಂಡದಮೇಲೆ ಉದುರಿಸಿದರೆ ಬರುವ ಹೊಗೆಯು ಮಗುವಿನ ಮೈಗೆ ತಗಲುವಂತೆ ಮಾಡಬೇಕು ॥೩೮–೪೦॥

ಮೂಲ—(ಅ।ಹೃ।ಉ।ಅ।೩) ಅನ್ಧಪೂತನಾಗ್ರಹಪೀಡಿತಶಿಶೋರ್ಲಕ್ಷಣಾನಿ—

ಅನ್ಧಪೂತನಯಾ ಛರ್ದಿರ್ಜ್ವರಃ ಕಾಸೋಽಲ್ಪವಹ್ನಿತಾ ॥೪೧॥
ವರ್ಚಸೋ ಭೇದವೈವರ್ಣ್ಯದೌರ್ಗನ್ಧ್ಯಾನ್ಯಙ್ಗಶೋಷಣಮ್ ।
ದೃಷ್ಟಿಸಾದೋಽತಿರುಕ್ಕಣ್ಡೂಃ ಪೋಥಕೀಜನ್ಮ ಶೂನ್ಯತಾಃ ॥೪೨॥
ಹಿಧ್ಮೋದ್ವೇಗಸ್ತನದ್ವೇಷವೈವರ್ಣ್ಯಂ ಸ್ವರತೀಕ್ಷ್ಣತಾ।
ವೇಪಥುರ್ಮತ್ಸ್ಯಗನ್ಧತ್ವಮಥವಾ ಸಾಮ್ಲಗನ್ಧಿತಾ ॥೪೩॥

(ಬಾಲಾ)—ತತ್ಪ್ರತಿಕ್ರಿಯಾ—

ತಿಕ್ತದ್ರುಮಾಣಾಂ ಪತ್ರೈಸ್ತು ಕ್ವಾಥಃ ಕಾರ್ಯೋಽಭಿಷೇಚನೇ ।
ಪುರೀಷಂ ಕೌಕ್ಕುಟಂ ಕೇಶಾಃ ಚರ್ಮ ಸರ್ಪಭವಂ ತಥಾ ॥೪೪॥
ಜೀರ್ಣಂ ಚ ಭಿಕ್ಷ್ವಾ ಯೌವಾಸ್ಯೋ ಧೂಪನಾಯೋಪಕಲ್ಪಯೇತ್ ।

ದೀಪಿಕೆ—ಅನ್ಧಪೂತನಾ ಗ್ರಹಪೀಡಿತ ಶಿಶುವಿನ ಲಕ್ಷಣಗಳು—

ದೃಷ್ಟಿಪೂತನಾಗ್ರಹಕ್ಕೆ ಅನ್ಧಪೂತನಾ ಎಂದೂ ಹೆಸರು. ಇದರಿಂದ ಪೀಡಿತನಾದ ಶಿಶುವಿಗೆ ವಮನ, ಜ್ವರ, ಕಾಸ, ಅಗ್ನಿಮಾಂದ್ಯ, (ಅಲ್ಪನಿದ್ರೆ ಎಂದು ಪಾಠಾನ್ತರ) ಮಲವು ಒಡಕೊಡಕಾಗಿಯೂ ದುರ್ವಾಸನೆಯುಳ್ಳದ್ದಾಗಿಯೂ ಅನೇಕ ಬಣ್ಣಗಳುಳ್ಳದ್ದಾಗಿಯೂ ವಿಸರ್ಜಿಸಲ್ಪಡುತ್ತದೆ; ಮೈ ಕೃಶವಾಗಿಯೂ, ದೃಷ್ಟಿಮಾಂದ್ಯ, ಅತಿಯಾಗಿ ನೋವು ಕಡಿತ (ನವೆ) ಇವುಗಳಿಂದ ಕೂಡಿ ರೆಪ್ಪೆಗಳು ಊದಿರುತ್ತವೆ; ಬೊಕ್ಕೆಗಳೆದ್ದಿರುತ್ತವೆ; ಇದಕ್ಕೆ ಪೋಥಕೀ ಎಂದು ಹೆಸರು. ಈ ಶಿಶುವಿಗೆ ಬಿಕ್ಕಳಿಕೆ, ಕೋಪ, ಸ್ತನದ್ವೇಷ, ಮೈಬಣ್ಣವು ಬದಲಾಗುವುದು, ಧ್ವನಿ ಚುರುಕಾಗಿರುತ್ತದೆ, ಮೈನಡುಗುತ್ತದೆ, ಮೈ ಮೀನಿನ ವಾಸನೆ ಅಥವಾ ಹುಳಿ ನಾತದಿಂದಿರುತ್ತದೆ. ಈ ಗ್ರಹಕ್ಕೆ ಪ್ರತಿಕ್ರಿಯೆಯೇನೆಂದರೆ—ಬೇವು, ಆಡುಸೋಗೆ ಮೊದಲಾದ ಕಹಿಗಿಡಗಳ ಎಲೆಗಳ ಕಷಾಯದಿಂದ ಮಗುವಿಗೆ ಸ್ನಾನಮಾಡಿಸಿ ಕೋಳಿಹಿಕ್ಕೆ, ತಲೆಕೂದಲು, ಹಾವಿನಪೊರೆ, ಚಿಂದಿಬಟ್ಟೆ ಇವುಗಳಿಂದ ಧೂಪನ ಮಾಡಿಸಬೇಕು ॥೪೧–೪೪॥

ಮೂಲ—(ಅ ಹೃ।ಉ।ಅ।೩) ಮುಖಮಣ್ಡಿತಯಾ ಗೃಹೀತಬಾಲಸ್ಯ ಲಕ್ಷಣಾನಿ—

ಮುಖಮಣ್ಡಿತಯಾ ಪಾಣಿಪಾದಾಸ್ಯರಮಣೀಯತಾ ॥೪೫॥
ಸಿರಾಭಿರಸಿತಾಭಾಭಿರಾಚಿತೋದರತಾ ಜ್ವರಃ।
ಅರೋಚಕೋಽಙ್ಗಗ್ಲಪನಂ ಗೋಮೂತ್ರಸಮಗನ್ಧತಾ ॥೪೬॥

ಪ್ರತಿಕ್ರಿಯಾ—(ಬಾಲಾ)—

ಕಪಿತ್ಥಬಿಲ್ವತರ್ಕಾರೀವಾಸಾಗನ್ಧರ್ವಹಸ್ತಕಃ ।
ಕುಬೇರಾಕ್ಷೀ ಚ ಯೋಜ್ಯಾ ಸ್ಯುರ್ಬಾಲಾನಾಂ ಪರಿಷೇಚನೇ ॥೪೭॥
ಸ್ವರಸಂ ಭೃಙ್ಗಪತ್ರಾಣಾಂ ತಥೈವ ಹಯಗನ್ಧಿಕಾ ।
ತೈಲಂ ವಸಾಂ ಚ ಸಂಯೋಜ್ಯ ಪಚೇದಭ್ಯಂಜನೇ ಶಿಶೋಃ ॥೪೮॥
ವಚಾ ಸರ್ಜರಸಂ ಕುಷ್ಠಂ ಸರ್ಪಿಶ್ಚೋದ್ಧೂಪನೇ ಹಿತಮ್ ।

ದೀಪಿಕೆ—

ಮುಖಮಣ್ಡಿತಿಕಗ್ರಹದಿಂದ ಪೀಡಿತನಾದ ಬಾಲಕನ ಲಕ್ಷಣಗಳು—ಕೈ, ಕಾಲು, ಮುಖಗಳು ಸುಂದರವಾಗಿರುತ್ತವೆ; ಹೊಟ್ಟೆಯ ಮೇಲೆ ನೀಲಬಣ್ಣದ ಸಿರೆಗಳು ಹರಡಿರುತ್ತವೆ; ಜ್ವರ, ಅರುಚಿ, ದೇಹಕ್ಷೀಣತೆಗಳಿರುತ್ತವೆ; ಮೈವಾಸನೆಯು ಹಸುವಿನ ಗಂಜಳದ ವಾಸನೆಯಂತಿರುತ್ತದೆ. ಮುಖಮಂಡಿತಿಕಾಗ್ರಹದ ನಿವಾರಣೋಪಾಯ (ಬಾಲಾ)—ಬೇಲ, ಬಿಲ್ವಪತ್ರೆ, ತಗ್ಗಿ, ಆಡುಸೋಗೆ, ಹರಳು, ಗಜ್ಜುಗ ಈ ಸೊಪ್ಪುಗಳ ಕಷಾಯದಿಂದ ಸ್ನಾನ ಮಾಡಿಸಬೇಕು. ಗರುಗ, ಹಿರಿಯಮದ್ದು (ಅಶ್ವಗಂಧ) ಗಳ ಸ್ವರಸ, ತೈಲ, ವಸಾ (ಕೊಬ್ಬು)ಗಳನ್ನು ಸೇರಿಸಿ ತೈಲಪಾಕವಿಧಾನದಿಂದ ತಯಾರಿಸಿದ ತೈಲವು ಅಭ್ಯಂಗಕ್ಕೆ ಹಿತವಾದದ್ದು; ಬಜೆ, ರಾಳು, ಚಂಗಲ್ಕೋಷ್ಠ, ತುಪ್ಪ ಇವುಗಳನ್ನು ಸೇರಿಸಿ ಧೂಪನಮಾಡಿಸಬೇಕು ॥೪೫–೪೮॥

ಮೂಲ—(ಅ|ಹೃ|ಉ|ಅ|೩)—ರೇವತೀಗ್ರಹಗ್ರಸ್ತಶಿಶೋರ್ಲಕ್ಷಣಾನಿ—

ರೇವತ್ಯಾಂ ಶ್ಯಾವನೀಲತ್ವಂ ಕರ್ಣನಾಸಾಕ್ಷಿಮರ್ದನಮ್ ॥೪೯॥
ಕಾಸಹಿಧ್ಮಾಕ್ಷಿವಿಕ್ಷೇಪವಕ್ರವಕ್ತ್ರತ್ವರಕ್ತತಾಃ।
ಬಸ್ತಗನ್ಧೋ ಜ್ವರಃ ಶೋಷಃ ಪುರೀಷಂ ಹರಿತಂ ದ್ರವಮ್ ॥೫೦॥
ಜಾಯತೇ ಶುಷ್ಕರೇವತ್ಯಾಂ ಕ್ರಮಾತ್ಸರ್ವಾಙ್ಗಸಂಕ್ಷಯಃ।
ಕೇಶಶಾತೋಽನ್ನವಿದ್ವೇಷಃ ಸ್ವರದೈನ್ಯಂ ವಿವರ್ಣತಾ ॥೫೧॥
ರೋದನಂ ಗೃಧ್ರಗಂಧಿತ್ವಂ ದೀರ್ಘಕಾಲಾನುವರ್ತನಮ್।
ಉದರೇ ಗ್ರನ್ಥಯೋ ವೃತ್ತಾ ಯಸ್ಯ ನಾನಾವಿಧಂ ಶಕೃತ್ ॥೫೨॥
ಜಿಹ್ವಯಾ ನಿಮ್ನತಾ ಮಧ್ಯೇ ಶ್ಯಾವಂ ತಾಲು ಚ ತಂ ತ್ಯಜೇತ್।

ಅಸಾಧ್ಯಲಕ್ಷಣಮ್—

ಭುಂಜಾನೋಽನ್ನಂ ಬಹುವಿಧಂ ಯೋ ಬಾಲಃ ಪರಿಹೀಯತೇ ॥೫೩॥
ತೃಷ್ಣಾಗೃಹೀತಃ ಕ್ಷಾಮಾಕ್ಷೋ ಹನ್ತಿ ತಂ ಶುಷ್ಕರೇವತೀ।

(ಬಾಲಾ)—ತತ್ಪ್ರತೀಕಾರಃ—

ಅಜಗನ್ಧಾಜಶೃಙ್ಗೀ ಚ ಸಾರಿವಾಥ ಪುನರ್ನವಾ ॥೫೪॥
ಸಹಾ ವಿದಾರೀ ಹ್ಯೇತೇಷಾಂ ಕ್ವಾಥೇನ ಪರಿಷೇಚನಮ್।
ತೈಲಮಭ್ಯಂಜನೇ ಕಾರ್ಯಂ ಕುಷ್ಠೇ ಸರ್ಜರಸೇ ತಥಾ ॥೫೫॥
ಪಲಙ್ಕಷಾಯಾಂ ನಳದೇ ತಥಾ ಗೌರಕದಮ್ಬಕೇ।
ಧವಾಶ್ವಕರ್ಣಕಕುಭಶಲ್ಲಕೀತಿನ್ದುಕೇಷು ಚ ॥೫೬॥
ಕಾಕೋಲ್ಯಾದಿಗಣೈರ್ವಾಪಿ ಸಿದ್ಧಂ ಸರ್ಪಿಃ ಪಿಬೇಚ್ಛಿಶುಃ।

ದೀಪಿಕೆ—ರೇವತೀ ಗ್ರಹಪೀಡಿತ·ಬಾಲಕನ ಲಕ್ಷಣಗಳು—ರೇವತೀ ಗ್ರಹಪೀಡಿತನಾದ ಬಾಲಕನಿಗೆ ಮೈಬಣ್ಣವು ಕೆಲವು ಕಡೆ ಕಪ್ಪಾಗಿಯೂ, ಕೆಲವು ಕಡೆ ನೀಲಬಣ್ಣವಾಗಿಯೂ ಇರುತ್ತದೆ; ಕೈಯಿಂದ ಕಿವಿ, ಕಣ್ಣು, ಮೂಗುಗಳನ್ನು ಉಜ್ಜುತ್ತಾನೆ; ಕೆಮ್ಮು, ಬಿಕ್ಕಳಿಕೆ, ಕಣ್ಣು ಅದುರುವುದು, ಬಾಯಿ ಸೊಟ್ಟಾಗುವುದು ಮತ್ತು ಕೆಂಪಾಗುವುದು, ಮೈ ಬೆವರು ಆಡಿನ ವಾಸನೆಯುಳ್ಳದ್ದಾಗಿರು

ತ್ತದೆ, ಜ್ವರ, ದೇಹಕ್ಷೀಣತೆ, ಹಸುರಾಗಿ ನೀರಾಗಿ ಮಲಭೇದಿಯಾಗುತ್ತದೆ; ಶುಷ್ಕ ರೇವತಿ ಗ್ರಹಪೀಡಿತನಾದ ಬಾಲಕನಿಗೆ ಕ್ರಮವಾಗಿ ಸಕಲ ಅಂಗಗಳೂ ಕ್ಷೀಣಿಸುತ್ತಾ ಬರುತ್ತವೆ. ಅಸಾಧ್ಯ ಲಕ್ಷಣಗಳು—ಗ್ರಹಗ್ರಸ್ತ ಬಾಲಕನಿಗೆ ತಲೆಕೂದಲು ಉದುರುವುದು, ಅನ್ನ ದ್ವೇಷ, ಸ್ವರದೈನ್ಯತೆ, ಮೈಬಣ್ಣ ಬದಲಾಗುವುದು ; ಸದಾ ಅಳುತ್ತಿರುವುದು, ಹದ್ದಿನ ವಾಸನೆಯಂತೆ ಮೈ ಬೆವರಿನ ವಾಸನೆಯಿರುವುದು, ಬಹುಕಾಲದವರೆಗೆ ಪೀಡಿಸುವುದು ; ಮೈಮೇಲೆ ಗುಂಡುಗುಂಡಾಗಿ ಸಿರೆಗಳ ಗಂಟುಬ್ಬಿರುವುದು, ನಾನಾಬಣ್ಣದ ಮಲವು ಸೋರುತ್ತಿರುವುದು ; ನಾಲಿಗೆಯ ಮಧ್ಯದಲ್ಲಿ ಹಳ್ಳ ಬಿದ್ದಂತೆ ಇರುವುದು, ಮಲವು ಭೇದಿಯಾಗುತ್ತಿರುವುದು, ಅಂಗಗಳು ಕಪ್ಪಾಗುವುದು ಈ ಲಕ್ಷಣಗಳಿದ್ದರೆ ಅಸಾಧ್ಯವೆಂದು ತಿಳಿದು ಚಿಕಿತ್ಸೆ ಮಾಡಬಾರದು. ಅನ್ನ, ಕಡುಬು ಮೊದಲಾದ ವಿವಿಧ ಆಹಾರಗಳನ್ನು ತಿಂದರೂ ದೇಹವು ಕ್ಷೀಣವಾಗುತ್ತಿರುವುದು, ನೀರಡಿಕೆ, ಕಣ್ಣು ಕಾಣಿಸದಿರುವುದು, ಇಂದ್ರಿಯ ಗ್ರಹಣಶಕ್ತಿ ಕಡಮೆಯಾಗುವುದು ಈ ಲಕ್ಷಣಗಳಿದ್ದರೆ ಯಾವ ಚಿಕಿತ್ಸೆ ಮಾಡಿದರೂ ಆ ಮಗುವು ಬದುಕುವುದಿಲ್ಲ ‖ ೪೯–೫೬ ‖

ಮೂಲ—

ಹಿಂಸಾರತ್ಯರ್ಚನಾಕಾಙ್ಕ್ಷಾ ಗ್ರಹಗ್ರಹಣಕಾರಣಮ್ ‖೫೭‖
ತತ್ರ ಹಿಂಸಾತ್ಮಕೇ ಬಾಲೋ ಮಹಾನ್ಸ್ರಾವ್ಯ ಸ್ರುತನಾಸಿಕಃ।
ಕ್ಷತಜಿಹ್ವಃ ಕ್ವಣೇದ್ಬಾಢಮಸುಖೀ ಸ್ರುತಲೋಚನಃ ‖೫೮‖
ದುರ್ವರ್ಣೋ ಹೀನವಚನಃ ಪೂತಿಗನ್ಧಶ್ಚ ಜಾಯತೇ।
ಕ್ಷಾಮೋ ಮೂತ್ರಪುರೀಷಂ ಸ್ವಂ ಮೃದ್ನಾತಿ ನ ಜುಗುಪ್ಸತೇ ‖೫೯‖
ಹಸ್ತೌ ಚೋದ್ಯಮ್ಯ ಸಂರಬ್ಧೋ ಹನ್ತ್ಯಾತ್ಮಾನಂ ತಥಾ ಪರಮ್।
ತದ್ವಚ್ಚ ಶಸ್ತ್ರಕಾಷ್ಠಾದ್ಯೈರಗ್ನಿಂ ವಾ ದೀಪ್ತಮಾವಿಶೇತ್ ‖೬೦‖
ಅಪ್ಸು ಮಜ್ಜೇತ್ಪತೇತ್ಕೂಪೇ ಕುರ್ಯಾದನ್ಯಚ್ಚ ತದ್ವಿಧಮ್।
ತೃಡ್ದಾಹಮೋಹಾನ್ಪೂಯಸ್ಯ ಛರ್ದನಂ ಚ ಪ್ರವರ್ತಯೇತ್ ‖೬೧‖
ರಕ್ತಂ ಚ ಸರ್ವಮಾರ್ಗೇಭ್ಯೋ ರಿಷ್ಟೋತ್ಪತ್ತಿಶ್ಚ ತಂ ತ್ಯಜೇತ್ ।
ರಹಃ ಸ್ತ್ರೀರತಿಸಂಲಾಪಗನ್ಧಸ್ರಗ್ಭೂಷಣಪ್ರಿಯಃ ‖೬೨‖
ಹೃಷ್ಟಃ ಶಾನ್ತಶ್ಚ ದುಃಸಾಧ್ಯೋ ರತಿಕಾಮೇನ ಪೀಡಿತಃ।
ದೀನಃ ಪರಿಮೃಶೇದ್ವಕ್ತ್ರಂ ಶುಷ್ಕೋಷ್ಠಗಳತಾಲುಕಃ ‖೬೩‖
ಶಙ್ಕಿತಂ ವೀಕ್ಷತೇ ರೌತಿ ಧ್ಯಾಯತ್ಯಾಯಾತಿ ದೀನತಾಮ್।
ಅನ್ನಮನ್ನಾಭಿಲಾಷೇಽಪಿ ದತ್ತಂ ನಾತಿಬುಭುಕ್ಷತೇ ‖೬೪‖
ಗೃಹೀತಂ ಬಲಿಕಾಮೇನ ತಂ ವಿದ್ಯಾತ್ಸುಖಸಾಧನಮ್।

ದೀಪಿಕೆ—ಹಿಂಸೆ ಮಾಡುವುದು (ಕೊಲ್ಲುವುದು), ಸುಖಪಡುವುದು, ಬಲಿಪೂಜೆಗಳನ್ನು ಪಡೆಯುವುದು ಈ ಮೂರು ಉದ್ದೇಶಗಳಿಂದಲೇ ಸ್ಕಂದಾದಿ ಗ್ರಹಗಳು ಬಾಲಕರನ್ನು ಪೀಡಿಸುತ್ತವೆ. ಈ ಮೂರರಲ್ಲಿ ಹಿಂಸಾತ್ಮಕ ಗ್ರಹ ಪೀಡಿತನು ಸರ್ವದಾ ಮೂಗಿನಲ್ಲಿ ಸಿಂಬಳವನ್ನು ಸುರಿಸುತ್ತಲೂ, ನಾಲಿಗೆಯನ್ನು ಕಚ್ಚಿ ಗಾಯಮಾಡಿಕೊಳ್ಳುತ್ತಲೂ, ದೈನ್ಯದಿಂದ ನರಳುತ್ತಾ, ದುಃಖಪಡುತ್ತಾ

ಕಣ್ಣೀರು ಸುರಿಸುತ್ತಾ, ಕಷ್ಟದಿಂದ ಓಕರಿಸುತ್ತಾ ಮೆಲ್ಲಗೆ ಮಾತನಾಡುತ್ತಾ, ಇರುತ್ತಾನೆ. ಇವನ ಮೈ ದುರ್ವಾಸನೆಯುಳ್ಳದ್ದಾಗಿ ಕೃಶವಾಗಿರುತ್ತದೆ. ತನ್ನ ಮಲ ಮೂತ್ರಗಳನ್ನು ಕೈಯಿಂದ ಕಿವುಚುತ್ತಾನೆ, ಅಸಹ್ಯಪಡುವುದಿಲ್ಲ. ಕೋಪದಿಂದ ಕೈ ಎತ್ತಿಕೊಂಡಾಗಲೀ, ಕಡ್ಡಿಯಿಂದಾಗಲೀ, ಆಯುಧಗಳಿಂದಾಗಲೀ ತನ್ನನ್ನೂ ಅಥವಾ ಇತರರನ್ನೂ ಹೊಡೆಯುತ್ತಾನೆ; ಉರಿಯುವ ಬೆಂಕಿಯಲ್ಲಿ ಬೀಳುತ್ತಾನೆ, ನೀರಿನಲ್ಲಿ ಮುಳುಗುತ್ತಾನೆ, ಬಾವಿಯಲ್ಲಿ ಬೀಳುತ್ತಾನೆ ಈ ರೀತಿಯಾದ ಪ್ರಾಣಹರವಾದ ಸಾಹಸಕಾರ್ಯಗಳನ್ನು ಮಾಡುತ್ತಾನೆ. ಅವನು ನೀರಡಿಕೆ, ಮೈಯ್ಯುರಿ, ಬುದ್ಧಿನಾಶ ಇವುಗಳಿಂದ ಪೀಡಿತನಾಗಿರುತ್ತಾನೆ; ಕೀವನ್ನು ವಮನ ಮಾಡುತ್ತಾನೆ; ಅವನ ನವದ್ವಾರಗಳಲ್ಲೂ ರಕ್ತ ಸುರಿಯುತ್ತದೆ. ಇವು ಮರಣಸೂಚಕಗಳಾದ ಅಸಾಧ್ಯ ಲಕ್ಷಣಗಳೆಂದು ತಿಳಿದು ಚಿಕಿತ್ಸೆ ಮಾಡಬಾರದು. ರತಿ ಕಾಮಗ್ರಹಪೀಡಿತನು ರಹಸ್ಯವಾಗಿ ಸ್ತ್ರೀಯರೊಡನೆ ಭೋಗಪಡಲಪೇಕ್ಷಿಸುತ್ತಾನೆ, ಪ್ರೇಮದ ಮಾತುಗಳನ್ನಾಡುತ್ತಾನೆ; ಗಂಧ, ಹೂವಿನ ಮಾಲೆಗಳನ್ನು ಧರಿಸಲು ಆಶೆಪಡುತ್ತಾನೆ, ಸಂತೋಷದಿಂದಲೂ ಶಾಂತಚಿತ್ತದಿಂದಲೂ ಇರುತ್ತಾನೆ. ಕಷ್ಟಪಟ್ಟು ಚಿಕಿತ್ಸೆ ಮಾಡಿಸಿದರೆ ಈ ಗ್ರಹದ ಬಾಧೆ ನಿವಾರಣೆಯಾಗುತ್ತದೆ. ಬಲಿದಾನವನ್ನೂ, ಪೂಜೆಯನ್ನೂ ಕೋರುವ ಗ್ರಹಗಳಿಂದ ಪೀಡಿತನಾದ ಮಗುವು ದೈನ್ಯದಿಂದಿರುತ್ತಾನೆ; ಕೈಯ್ಯಿಂದ ಮುಖವನ್ನು ಸವರಿಕೊಳ್ಳುತ್ತಾನೆ; ಅವನಿಗೆ ತುಟಿಗಳೂ, ಗಂಟಲೂ, ಅಂಗಗಳೂ ಒಣಗಿಬಿಡುತ್ತವೆ, ದಿಗಲುಪಡುತ್ತಾ ಅತ್ತಿತ್ತ ನೋಡುತ್ತಾನೆ; ಅಳುತ್ತಾ ಯೋಚನೆ ಮಾಡುತ್ತಾನೆ; ಹೆದರುತ್ತಾನೆ; ಹಸಿವಿದ್ದರೂ ಅನ್ನ ಹಾಕಿದರೆ ಹೆಚ್ಚಾಗಿ ತಿನ್ನುವುದಿಲ್ಲ; ಇವನಿಗೆ ಚಿಕಿತ್ಸೆ ಮಾಡಿ ಸುಲಭವಾಗಿ ಗುಣಪಡಿಸಬಹುದು || ೫೭–೬೪ ||

ಮೂಲ—

ಹನ್ತುಕಾಮಂ ಜಯೇದ್ಧೋಮೈಃ ಸಿದ್ಧಮನ್ತ್ರಪ್ರವರ್ತಿತೈಃ ||೬೫||
ಇತರೌ ತು ಯಥಾಕಾಮಂ ರತಿಬಲ್ಯಾದಿದಾನತಃ|

ದೀಪಿಕೆ—ಸಿದ್ಧಮನ್ತ್ರಗಳನ್ನುಚ್ಚರಿಸಿ ಹೋಮಮಾಡಿ ಹಿಂಸಾತ್ಮಕ ಗ್ರಹವನ್ನು ನಿವಾರಣೆ ಮಾಡಬೇಕು. (ಮಹಾಸಿದ್ಧಮನ್ತ್ರಗಳ ಪ್ರಭಾವವನ್ನು ಊಹಿಸುವುದಕ್ಕಾಗುವುದಿಲ್ಲ.) ರತಿಕಾಮ ಬಲಿಕಾಮ ಗ್ರಹಗಳನ್ನು ಅವರಿಗೆ ಬೇಕಾದ ಬಯಕೆಗಳನ್ನು ಸಲ್ಲಿಸಿ ಪೂಜೆ ಮಾಡಿ, ಬಲಿದಾನ ಮಾಡಿ ನಿವಾರಿಸಬಹುದು || ೬೫ ||

ಅಥ ನನ್ದಿನ್ಯಾದಿದಶವಿಧಗ್ರಹಾಣಾಂ ಲಕ್ಷಣಚಿಕಿತ್ಸಾ |

ಮೂಲ—(ಬಾಲಾತನ್ತ್ರೇಹಾರೀತಃ) ೧. ನನ್ದಿನೀ—

ಪ್ರಥಮೇ ದಿವಸೇ ನಾಮ್ನಾ ನನ್ದಿನೀ ಕ್ರಮತೇ ಶಿಶುಮ್ ||೬೬||
ದದ್ರುರ್ಹಿ ತಸ್ಯ ಬಾಲಸ್ಯ ಜ್ವರಃ ಸ್ಯಾತ್ಪ್ರಥಮಂ ತತಃ|
ಗಾತ್ರಶೋಫಸ್ತಥಾ ಸ್ವೇದೋ ನಾಹಾರೇಚ್ಛಾ ಭೃಶಂ ಭವೇತ್ ||೬೭||

ಛರ್ದಿರ್ಮೂರ್ಛಾ ಚ ಕಮ್ಪಶ್ಚ ಶೋಷೋ ದೀನಸ್ವರಸ್ತಥಾ।

ಉಪಚಾರಃ—

ರಸೋನಸಿದ್ಧಾರ್ಥಕಮೇಷಶೃಙ್ಗನಿಮ್ಬಪತ್ರಶಿವನಿರ್ಮಾಲ್ಯೈರ್ಬಾಲಕಂ ಧೂಪಯೇತ್ ॥೬೮॥

ಇನ್ನು ಮೇಲೆ ನನ್ದಿನೀ ಮೊದಲಾದ ಹತ್ತು ವಿಧ ಗ್ರಹಗಳ ಲಕ್ಷಣ ಮತ್ತು ಪರಿಹಾರ ವಿಧಾನಗಳನ್ನು ತಿಳಿಸುತ್ತಾರೆ.

ಬಾಲಾತಙ್ಕಹಾರೀ—

ಮೊದಲನೆಯ ದಿವಸ "ನನ್ದಿನೀ" ಎಂಬ ಗ್ರಹವು ಬಾಲಕನನ್ನು ಆವರಿಸುತ್ತದೆ. ಅದರಿಂದ ಮಗುವಿನ ಮೈಮೇಲೆ ಗನ್ಧಿಗಳೇಳುತ್ತವೆ, ಜ್ವರ, ಮೈ ಊದುವುದು, ಬೆವರುವುದು, ಆಹಾರದಲ್ಲಿ ಇಚ್ಛೆಯಾಗದಿರುವುದು, ವಮನ, ಮೂರ್ಛೆ, ಮೈನಡುಕ, ದೇಹಕ್ಷೀಣತೆ, ದೀನತೆ ಇವುಗಳುಂಟಾಗುತ್ತವೆ. ನಿವಾರಣೋಪಾಯ—ಬೆಳ್ಳುಳ್ಳಿ, ಸಾಸಿವೆ, ಮಧುನಾಶಿನಿ (ಗೆರ್ಶೆ ಹಂಬು), ಬೇವು, ಬಿಲ್ವಪತ್ರೆಗಳ ಧೂಪವನ್ನು ಮಗುವಿನ ದೇಹಕ್ಕೆ ತಾಕಿಸಬೇಕು ॥ ೬೬—೬೮ ॥

ಮೂಲ—೨. ಸುನನ್ದನಃ—

ದ್ವಿತೀಯೇ ದಿವಸೇ ಬಾಲಂ ಗೃಹ್ಣಾತಿ ಚ ಸುನನ್ದನಃ।
ತತೋ ಭವೇಜ್ಜ್ವರಃ ಪೂರ್ವಂ ಸಂಕೋಚೋ ಹಸ್ತಪಾದಯೋಃ ॥೬೯॥
ದನ್ತಾನ್ಖಾದೇ ಶ್ವಸಂಶ್ಚಾಪಿ ನಿಮೀಲಯತಿ ಚಕ್ಷುಷೀ।
ಆಹಾರಂ ಚ ನ ಗೃಹ್ಣಾತಿ ದಿವಾರಾತ್ರೌ ಚ ರೋದಿತಿ ॥೭೦॥
ಅಕ್ಷಿರೋಗಂ ಛರ್ದನಂ ಚ ಭವೇದಿತಿ ಪುನಃಪುನಃ।
ಕೃಶತ್ವಂ ಜಾಯತೇಽತ್ಯರ್ಥಂ ಚಿಹ್ನಮೇತತ್ಪ್ರಕೀರ್ತಿತಮ್ ॥೭೧॥

ಉಪಚಾರಃ—

ಶಿವನಿರ್ಮಾಲ್ಯಸಿದ್ಧಾರ್ಥಕಮಾರ್ಜಾರಲೋಮೋಶೀರವಾಸಕಘೃತೈರ್ಧೂಪಂ ದದ್ಯಾತ್ ॥೭೨॥

ದೀಪಿಕೆ—೨. ಸುನನ್ದನ—

ಎರಡನೆಯ ದಿವಸ ಸುನನ್ದನನೆಂಬ ಗ್ರಹವು ಬಾಲಕನನ್ನು ಹಿಡಿಯುತ್ತದೆ. ಆಗ ಮೊದಲು ಜ್ವರ ಬರುತ್ತದೆ, ಅನಂತರ ಕೈಕಾಲು ಸೆಳೆಯುತ್ತವೆ, ಹಲ್ಲುಗಳನ್ನು ಕಡಿಯುತ್ತಾನೆ, ಕಟ್ಟುಸುರು ಬಿಡುತ್ತಾನೆ, ಕಣ್ಣುಗಳನ್ನು ಮುಚ್ಚಿಕೊಳ್ಳುತ್ತಾನೆ, ಆಹಾರವನ್ನು ತೆಗೆದುಕೊಳ್ಳುವುದಿಲ್ಲ, ರಾತ್ರಿ ಹಗಲೂ ಅಳುತ್ತಿರುತ್ತಾನೆ, ಕಣ್ಣುನೋವು, ವಮನ ಇವು ಇರುತ್ತವೆ, ಅತಿಯಾಗಿ ಕೃಶನಾಗುತ್ತಾನೆ. ಇವಕ್ಕೆ ಪ್ರತೀಕಾರ—ಬಿಲ್ವಪತ್ರೆ, ಸಾಸಿವೆ, ಬೆಕ್ಕಿನ ಕೂದಲು, ಲಾಮಂಚ, ಆಡುಸೋಗೆ ಸೊಪ್ಪು, ತುಪ್ಪ ಇವುಗಳಿಂದ ಧೂಪನವನ್ನು ಮಾಡಿಸಬೇಕು ॥೬೯—೭೧॥

ಮೂಲ—೩. ತೃತೀಯೇ ದಿವಸೇ ಪುಣ್ಯಾಲೀ—

ತೃತೀಯೇಽಹ್ನಿ ಚ ಗೃಹ್ಣಾತಿ ಪುಣ್ಯಾಲೀ ಬಾಲಕಂ ಗ್ರಹೀ।
ತಚ್ಚೇಷ್ಟಯಾಽರೋಚಕೋದ್ವೇಗೋ ಕಾಸಶ್ವಾಸಶ್ಚ ಶೋಷಣಮ್ ॥೭೨॥

ಉಪಚಾರಃ—

ಗಜದನ್ತಾಶ್ಚ ಗೋದನ್ತಾಸ್ತಥಾ ಕೇಶಾಸ್ತು ಚಾಂಜನೀ।
ಅಜಾಕ್ಷೀರೇಣ ಸಂಪಿಷ್ಯ ತತೋ ಬಾಲಂ ಪ್ರಲೇಪಯೇತ್ ॥೭೩॥
ಧೂಪಯೇನ್ನಿಮ್ಬಪತ್ರಾಣಿ ನಖಸರ್ಷಪರಾಜಿಕಾಃ।
ಲೇಪಿತೋದ್ಧೂಪಿತೋ ಬಾಲಃ ಸುಖಮಾಪ್ನೋತಿ ನಿಶ್ಚಿತಮ್ ॥೭೪॥

ಶಿವನಿರ್ಮಾಲ್ಯಗುಗ್ಗುಳುಸರ್ಷಪನಿಮ್ಬಪತ್ರಮೇಷಶೃಂಗ್ಯೈರ್ದಿನತ್ರಯಂ ಧೂಪಯೇತ್ ॥೭೫॥

ದೀಪಿಕೆ—೩. ಘಂಟಾಲೀ—

ಮೂರನೆಯ ದಿವಸ ಹಗಲು ಹೊತ್ತಿನಲ್ಲಿ ಘಂಟಾಲೀಯೆಂಬ ಗ್ರಹವು ಮಗುವನ್ನು ಆಕ್ರಮಿಸುತ್ತದೆ; ಮಗುವಿಗೆ ಅರುಚಿ, ದಿಗಲು, ಕೆಮ್ಮು, ಉಬ್ಬಸ, ಕ್ಷಯಗಳುಂಟಾಗುತ್ತವೆ ॥ ೭೨ ॥

ಪ್ರತಿಕ್ರಿಯಾವಿಧಾನ—

ಆನೆಯಹಲ್ಲು, ಹಸುವಿನಹಲ್ಲು, ತಲೆಕೂದಲು, ಕರಿಯಹತ್ತಿ ಇವುಗಳನ್ನು ಆಡಿನ ಹಾಲಿನಲ್ಲರೆದು ಮಗುವಿನ ದೇಹಕ್ಕೆ ಬಳಿಯಬೇಕು. ಬೇವಿನಎಲೆ, ನಖವೆಂಬ ಗಂಧದ್ರವ್ಯ, ಬಿಳಿಸಾಸಿವೆ, ಕೆಂಪುಸಾಸಿವೆ, ಇವುಗಳನ್ನರೆದು ಮೈಗೆ ಲೇಪಿಸಿದರೂ, ಧೂಪವನ್ನು ಮೈಗೆ ಸೋಕಿಸಿದರೂ ಮಗುವಿಗೆ ಸುಖವಾಗುತ್ತದೆ. ಬಿಲ್ವಪತ್ರೆ, ಗುಗ್ಗುಳ, ಸಾಸಿವೆ, ಬೇವಿನಸೊಪ್ಪು, ಗೆರೆಶೆಹಂಬು (ಆಡಿನಕೊಂಬೆಂದು ಕೆಲವರ ಮತ) ಇವುಗಳ ಧೂಪವನ್ನು ಮೂರು ದಿನಗಳು ಕೊಡಬೇಕು ॥೭೩–೭೫॥

ಮೂಲ—೪. ಕಣ್ಟಕಾಳೀ—

ಚತುರ್ಥೇಽಹ್ನಿ ಚ ಗೃಹ್ಣಾತಿ ಕಣ್ಟಕಾಳೀ ಗ್ರಹೀ ಶಿಶುಮ್।
ತಚ್ಚೇಷ್ಟಾಽರೋಚಕೋದ್ವೇಗಃ ಫೇನೋದ್ಗಾರೀ ದಿಗೀಕ್ಷಣಃ ॥೭೬॥

ಉಪಚಾರಃ—

ಗಜದಂತಾಹಿನಿರ್ಮೋಕಂ ರಾಜೀಮೂಲಂ ಚ ಲೇಪಯೇತ್।
ಧೂಪಯೇತ್ಸರ್ಷಪಾರಿಷ್ಟಕೇಶೈರ್ಮುಂಚತಿ ಸಗ್ರಹೈಃ ॥೭೭॥

ಉಪಚಾರಃ (ಪ್ರತಿಕ್ರಿಯಾವಿಧಾನ)—

ಆನೆಯಹಲ್ಲು, ಹಾವಿನಪೊರೆ, ಸಾಸಿವೆಯ ಬೇರು ಇವುಗಳ ಕಲ್ಕವನ್ನು ಮಗುವಿನ ದೇಹಕ್ಕೆ ಬಳಿಯಬೇಕು; ಸಾಸಿವೆ, ಬೇವಿನಎಲೆ, ಕೂದಲು ಇವುಗಳ ಧೂಪನವನ್ನು ಮೈಗೆ ತಗುಲಿಸಿದರೆ ಗ್ರಹ ಬಿಡುತ್ತದೆ ॥೭೬–೭೭॥

ಮೂಲ—೫. ಅಹಙ್ಕಾರೀ—

ಪಂಚಮೇಽಹ್ನಿ ತ್ವಹಙ್ಕಾರೀ ಗ್ರಹೀ ಗೃಹ್ಣಾತಿ ಬಾಲಕಮ್।
ತಚ್ಚೇಷ್ಟಾ ಜೃಮ್ಭಣಂ ಶ್ವಾಸಃ ಮುಷ್ಟಿಬನ್ಧೋರ್ಧ್ವವೀಕ್ಷಣಮ್ ॥೭೮॥

ಉಪಚಾರಃ—
ಸಿತತಾಳವಚಾಲೋಧ್ರಮೇಷಶೃಙ್ಗೀಃ ಪ್ರಯೋಜಯೇತ್।
ಲಶುನಂ ನಿಮ್ಬಪತ್ರಾಣಿ ಸಿದ್ಧಾರ್ಥೈರ್ಧೂಪಯೇತ್ತತಃ ॥೭೯॥
ಏವಂ ಮುಂಚತಿ ಸಾ ಬಾಲಂ ನಾತ್ರ ಕಾರ್ಯಾ ವಿಚಾರಣಾ ।
ಶಿವನಿರ್ಮಾಲ್ಯಸರ್ಪನಿರ್ಮೋಕಗುಗ್ಗುಳುನಿಮ್ಬಪತ್ರವಾಲಕಘೃತೈರ್ಧೂಪಯೇತ್ ॥೮೦॥

ದೀಪಿಕೆ--೫. ಅಹಙ್ಕಾರೀ—

ಐದನೆಯ ದಿವಸ ಅಹಙ್ಕಾರೀ ಎಂಬ ಗ್ರಹವು ಬಾಲಕನನ್ನು ಆವರಿಸುತ್ತದೆ. ಬಾಲಕನು ಆಕಳಿಕೆ, ಉಬ್ಬಸ, ಮುಷ್ಟಿಯನ್ನು ಬಿಗಿ ಹಿಡಿಯುವುದು, ಅರೆಗಣ್ಣುನೋಟ ಇವುಗಳಿಂದ ನರಳುತ್ತಾನೆ ॥೭೮॥

ಉಪಚಾರ--

ಬಿಳಿತಾಳೆಯಗರಿ, ಬಜೆ, ಲೋಧ್ರ, ಗೆರೆಶೆಹಂಬು ಇವುಗಳ ಕಲ್ಕದಿಂದ ಮಗುವಿನ ಶರೀರದ ಮೇಲೆ ಲೇಪಿಸಿ ಬೆಳ್ಳುಳ್ಳಿ, ಬೇವಿನಸೊಪ್ಪು, ಸಾಸಿವೆಗಳಿಂದ ಹೊಗೆ ತಗುಲಿಸಿದರೆ ಗ್ರಹಬಾಧೆ ನಿವಾರಣೆಯಾಗುತ್ತದೆ. ಇದಕ್ಕೆ ಸಂದೇಹವಿಲ್ಲ. ಬಿಲ್ವಪತ್ರೆ, ಹಾವಿನಪೊರೆ, ಗುಗ್ಗುಳ, ಬೇವಿನಸೊಪ್ಪು, ಮುಡಿವಾಳ, ತುಪ್ಪ ಇವುಗಳನ್ನು ಬೆಂಕಿಯಲ್ಲಿ ಹಾಕಿ ಬರುವ ಹೊಗೆಯನ್ನು ಮಗುವಿನ ದೇಹಕ್ಕೆ ತಗಲುವಂತೆ ಮಾಡಬೇಕು ॥೭೯-೮೦॥

ಮೂಲ—೬. ಷಷ್ಠಿಕಾ—
ಷಷ್ಠ್ಯೇಽಹನಿ ತು ಬಾಲಂ ತು ಗ್ರಹೀ ಗೃಹ್ಣಾತಿ ಷಷ್ಠಿಕಾ।
ತಚ್ಚೇಷ್ಟಾ ಗಾತ್ರವಿಕ್ಷೇಪೋ ಹಾಸ್ಯರೋದನಮೋಹನಮ್ ॥೮೧॥
ಉಪಚಾರಃ—
ಕುಷ್ಠಗುಗ್ಗುಳುಸಿದ್ಧಾರ್ಥಗಜದನ್ತೈರ್ಘೃತಾನ್ವಿತೈಃ।
ಧೂಪಯೇಲ್ಲೇಪಯೇಚ್ಚಾಪಿ ತತೋ ಮುಂಚತಿ ಸಾ ಗ್ರಹೀ ॥೮೨॥
ಶಿವನಿರ್ಮಾಲ್ಯರಸೋನಗುಗ್ಗುಳುಸರ್ಪನಿರ್ಮೋಕನಿಮ್ಬಪತ್ರಘೃತೈರ್ಧೂಪಂ ದದ್ಯಾತ್ ॥೮೩॥

ದೀಪಿಕೆ--೬. ಷಷ್ಠಿಕಾ--

ಆರನೆಯ ದಿನ ಷಷ್ಠಿಕಾ ಎಂಬ ಗ್ರಹವು ಮಗುವನ್ನು ಆವರಿಸುತ್ತದೆ. ಮಗುವಿನ ಮೈ ಅದರುತ್ತದೆ, ನಗುವುದು, ಅಳುವುದು, ಪ್ರಜ್ಞೆತಪ್ಪುವುದು ಈ ಲಕ್ಷಣಗಳಿರುತ್ತವೆ ॥೮೧॥

ಉಪಚಾರ--

ಚಂಗಲ್ಕೋಷ್ಠ, ಗುಗ್ಗುಳ, ಸಾಸಿವೆ, ಆನೆಯಹಲ್ಲು, ತುಪ್ಪ ಇವುಗಳ ಕಲ್ಕವನ್ನು ಮಗುವಿನ ದೇಹಕ್ಕೆ ಬಳಿದು ಇವುಗಳನ್ನು ಕೆಂಡದಮೇಲೆ ಹಾಕಿ ಹೊಗೆಯನ್ನು ಮಗುವಿನ ದೇಹಕ್ಕೆ ತಾಕಿಸಿದರೆ ಗ್ರಹದ ಭಾಧೆ ನಿವಾರಣೆಯಾಗು

ತ್ತದೆ. ಬಿಲ್ವಪತ್ರೆ, ಬೆಳ್ಳುಳ್ಳಿ, ಗುಗ್ಗುಳ, ಹಾವಿನಪೊರೆ, ಬೇವಿನಸೊಪ್ಪು ತುಪ್ಪಗಳಿಂದ ಧೂಪಹಾಕಿಸಿ ಹೊಗೆಯು ಮಗುವಿನ ದೇಹಕ್ಕೆ ತಗಲುವಂತೆ ಮಾಡಬೇಕು ॥೮೨–೮೩॥

ಮೂಲ—೭. ಸಿಂಹಿಕಾ—

ಸಪ್ತಮೇ ದಿವಸೇ ನಾಮ್ನಾ ಸಿಂಹಿಕಾ ಕ್ರಮತೇ ಶಿಶುಮ್ ।
ತಚ್ಚೇಷ್ಟಾ ಜೃಮ್ಭಣಂ ಶ್ವಾಸೋ ಮುಷ್ಟಿಬನ್ಧಸ್ತಥೈವ ಚ ॥೮೪॥

ಉಪಚಾರಃ—

ಮೇಷಶೃಙ್ಗೀವಚಾಲೋಧ್ರಹರಿತಾಳಂ ಮನಃಶಿಲಾ ।
ಏಕತ್ರ ಪಿಷ್ಟ್ವಾ ತತ್ಸರ್ವಂ ತತೋ ಬಾಲಂ ಪ್ರಲೇಪಯೇತ್ ॥೮೫॥
ಗುಗ್ಗುಳುಮೇಷಶೃಙ್ಗೀಸರ್ಷಪೋಶೀರವಾಸಕಘೃತೈರ್ಧೂಪಯೇತ್ ॥೮೬॥

ದೀಪಿಕೆ—೭. ಸಿಂಹಿಕಾ—

ಏಳನೆಯ ದಿನ ಸಿಂಹಿಕಾಗ್ರಹವು ಮಗುವನ್ನು ಆವರಿಸುತ್ತದೆ; ಆಗ ಮಗುವು ಆಕಳಿಸುತ್ತದೆ; ಉಬ್ಬಸ; ಮುಷ್ಟಿಯನ್ನು ಬಿಗಿಹಿಡಿಯುವುದು ಈ ಲಕ್ಷಣಗಳಿರುತ್ತವೆ ॥೮೪॥

ಉಪಚಾರ—

ಗೆರಸೆಹಂಬು, ಬಜೆ, ಲೋಧ್ರ, ಅರಿದಳ, ಮಣಿಶಿಲೆಗಳನ್ನು ಸೇರಿಸಿ ಕಲ್ಕಮಾಡಿ ಮಗುವಿನ ಮೈಗೆ ಲೇಪಿಸಿ ಗುಗ್ಗುಳ, ಗೆರ್ಸೆಹಂಬು, ಸಾಸಿವೆ, ಲಾಮಂಚ, ಆಡುಸೋಗೆಸೊಪ್ಪು, ತುಪ್ಪ ಇವುಗಳಿಂದ ಧೂಪನ ಮಾಡಿಸಬೇಕು ॥೮೫–೮೬॥

ಮೂಲ—೮.—

ಅಷ್ಟಮೇ ಶ್ವಾಸಕಾಸಶ್ಚ ಗಾತ್ರಸಂಕೋಚನಂ ಭೃಶಮ್ ।

ಉಪಾಯಃ—

ಅಪಾಮಾರ್ಗಮುಶೀರಂ ಚ ಚಿತ್ರಕಂ ಪಿಪ್ಪಲೀ ತಥಾ ॥೮೭॥
ಅಜಾಮೂತ್ರೇಣ ಸಮ್ಪಿಷ್ಯ ತತೋ ಬಾಲಂ ಪ್ರಲೇಪಯೇತ್ ।

ಮೂಲ—೯. ಮೇಷೀ—

ನವಮೇ ದಿವಸೇ ಬಾಲಂ ಮೇಷೀ ಗೃಹ್ಣಾತಿ ನಿಶ್ಚಿತಮ್ ॥೮೮॥
ತಚ್ಚೇಷ್ಟಾ ತ್ರಾಸನೋದ್ವೇಗಃ ಸಮುಷ್ಟಿದ್ವಯಖಾದನಮ್ ।

ಉಪಾಯಃ—

ವಚಾಚನ್ದನಕುಷ್ಠೋಗ್ರಾಸರ್ಷಪಾಸ್ತತ್ರ ಲೇಪಯೇತ್ ॥೮೯॥
ನಖವಾನರರೋಮಾಭ್ಯಾಂ ಧೂಪನಾನ್ಮುಚ್ಯತೇ ಗ್ರಹೀ ।
ಗುಗ್ಗುಳುನಿಮ್ಬಪತ್ರಗೋಶೃಙ್ಗಶ್ವೇತಸರ್ಷಪಘೃತೈರ್ಧೂಪಯೇತ್ ॥೯೦॥

ಮೂಲ—೧೦. ರೋದನೀ—

ದಶಮೇ ದಿವಸೇ ನಾಮ್ನಾ ರೋದನೀ ಮುಷ್ಟಿಬನ್ಧನಮ್।

ಉಪಾಯಃ—

ಕುಷ್ಠೋಗ್ರಾಭೂರ್ಜಸಿದ್ಧಾರ್ಥೈರ್ಲಿಪ್ತ್ವೋಲ್ಲಿಪ್ಯ್ವೇನ ಧೂಪಯೇತ್ ॥೯೧॥

ಕಾಕವಿಷ್ಠಾಗೋಮಾಂಸಗೋಶೃಙ್ಗರಸೋನಮಾರ್ಜಾರರೋಮನಿಮ್ಬಪತ್ರ-ಘೃತೈರ್ಧೂಪಯೇತ್ ॥೯೨॥

ದೀಪಿಕೆ—೮.—

ಎಂಟನೆಯ ದಿವಸ ಮಗುವಿಗೆ ಉಬ್ಬಸ, ಕೆಮ್ಮು, ಶರೀರವು ಸಂಕುಚಿಸುವುದು ಈ ಲಕ್ಷಣಗಳು ಅಧಿಕವಾಗಿರುತ್ತವೆ. ಉತ್ತರಣಿ, ಲಾವಂಚ, ಚಿತ್ರಮೂಲ, ಹಿಪ್ಪಲಿಗಳನ್ನು ಆಡಿನ ಗಂಜಳದಲ್ಲರೆದು ಮಗುವಿನ ಮೈಮೇಲೆಲ್ಲಾ ಬಳಿಯಬೇಕು ॥೮೭॥

೯. ಮೇಷೀ——

ಒಂಭತ್ತನೆಯ ದಿವಸ "ಮೇಷೀ" ಎಂಬ ಗ್ರಹವು ಮಗುವನ್ನು ಆಕ್ರಮಿಸುತ್ತದೆ. ಆಗ ಮಗು ನಡುಗುತ್ತದೆ, ಗಾಭರಿಪಡು (ಯಾಗು)ತ್ತದೆ, ಎರಡು ಮುಷ್ಟಿಗಳನ್ನು ಕಡಿಯುತ್ತದೆ ॥೮೮॥

ನಿವಾರಣೋಪಾಯ——

ಬಜೆ, ಶ್ರೀಗಂಧ, ಚಂಗಲ್ಕೋಷ್ಠ, ಬಿಳಿಬಜೆ, ಸಾಸಿವೆಗಳನ್ನರೆದು ಮಗುವಿನ ಮೈಗೆ ಲೇಪಿಸಿ ನಖವೆಂಬ ಗಂಧದ್ರವ್ಯ, ಕಪಿಯ ಮೈಮೇಲಿನ ರೋಮಗಳನ್ನು ಬೆಂಕಿಗೆ ಹಾಕಿ ಬಂದ ಹೊಗೆಯನ್ನು ಮಗುವಿನ ದೇಹಕ್ಕೆ ತಗುಲಿಸಬೇಕು ॥೮೯–೯೦॥

೧೦. ರೊದನೀ—

ಹತ್ತನೆಯ ದಿವಸ ರೊದನಿಯೆಂಬ ಗ್ರಹವು ಮಗುವನ್ನು ಆಕ್ರಮಿಸಿ ಭಯಪಡಿಸುತ್ತದೆ. (ಮಗುವು ಬೆಚ್ಚುಬೀಳುತ್ತದೆ) ಆಗ ಮಗುವು ಕೆಮ್ಮುತ್ತದೆ, ಅಳುತ್ತದೆ, ಮುಷ್ಟಿಯನ್ನು ಬಿಗಿಹಿಡಿಯುತ್ತದೆ ॥೯೧॥

ನಿವಾರಣೋಪಾಯ—

ಚಂಗಲ್ಕೋಷ್ಠ, ರಾಳು, ಬಜೆ, ಸಾಸಿವೆಗಳನ್ನು ನಿಂಬೆಹಣ್ಣಿನಲ್ಲಿ ಅರೆದು ಮಗುವಿನ ಮೈಗೆ ಲೇಪಿಸಿ ಅವುಗಳ ಚೂರ್ಣವನ್ನು ಕೆಂಡದಮೇಲೆ ಉದುರಿಸಿ ಬರುವ ಹೊಗೆಯನ್ನು ಮೈಗೆ ತಗುಲಿಸಬೇಕು. ಕಾಗೆಯ ಮಲ, ಹಸುವಿನ ಮಾಂಸ, ಹಸುವಿನ ಕೊಂಬು, ಬೆಳ್ಳುಳ್ಳಿ, ಕಪಿಯ ರೋಮ, ಬೇವಿನಸೊಪ್ಪು, ತುಪ್ಪಗಳನ್ನು ಕೆಂಡದಮೇಲೆ ಸುರಿದು ಬರುವ ಹೊಗೆಯನ್ನು ಮಗುವಿನ ದೇಹಕ್ಕೆ ತಗಲುವಂತೆ ಮಾಡಬೇಕು ॥೯೨॥

ಮೂಲ—(ಅ|ಹೃ|ಉ|ಅ| ೩) ಗ್ರಹಾಣಾಂ ಸಾಮಾನ್ಯಪ್ರತಿಕ್ರಿಯಾವಿಧಾನಮ್—

ಅಥ ಸಾಧ್ಯಗ್ರಹಂ ಬಾಲಂ ವಿವಿಕ್ತೇ ಶರಣೇ ಸ್ಥಿತಮ್।
ತ್ರಿರಹ್ನಸ್ಸಿಕ್ತಸಂಸೃಷ್ಟೇ ಸದಾ ಸನ್ನಿಹಿತಾನಲೇ ॥೯೩॥

ವಿಕೀರ್ಣಭೂತಿಕುಸುಮಪತ್ರಬೀಜಾನ್ನಸರ್ಷಪೇ ।
ರಕ್ಷೋಘ್ನತೈಲಜ್ವಲಿತಪ್ರದೀಪಹತಪಾಪ್ಮನಿ ॥೯೪॥

ವ್ಯವಾಯಮದ್ಯಪಿಶಿತನಿವೃತ್ತಪರಿಚಾರಕೇ।
ಪುರಾಣಸರ್ಪಿಷಾಭ್ಯಕ್ತಂ ಪರಿಷಿಕ್ತಂ ಸುಖಾಮ್ಬುನಾ ॥೯೫॥

ಸಾಧಿತೇನ ಬಲಾನಿಮ್ಬವೈಜಯನ್ತೀನೃಪದ್ರುಮೈಃ।
ಪಾರಿಭದ್ರಕಕಟ್ವಙ್ಗಜಮ್ಬೂವರುಣಕಟ್ತೃಣೈಃ ॥ ॥೯೬॥

ಕಪೋತವಂಕಾಪಾಮಾರ್ಗಪಾಟಲಾಮಧುಶಿಗ್ರುಭಿಃ।
ಕಾಕಜಂಘಾಮಹಾಶ್ವೇತಾಕಪಿತ್ಥಕ್ಷೀರಪಾದಪೈಃ ॥೯೭॥

ಸಕದಮ್ಬಕರಂಜೈಶ್ಚ ಧೂಪಂ ಸ್ನಾತಸ್ಯ ಚಾಚರೇತ್।
ದ್ವೀಪಿವ್ಯಾಘ್ರಾಹಿಸಿಂಹರ್ಕ್ಷಚರ್ಮಭಿರ್ಘೃತಮಿಶ್ರಿತೈಃ ॥೯೮॥

ದೀಪಿಕೆ—(ಅ|ಹೃ|ಉ|ಅ|೩) ಗ್ರಹಗಳಿಗೆ ಸಾಮಾನ್ಯ ಪ್ರತಿಕ್ರಿಯಾವಿಧಾನವು—

ರತಿಕಾಮ ಬಲಿಕಾಮಗ್ರಹಗಳಿಂದ ಪೀಡಿತರಾದ ಬಾಲಕರನ್ನು ಮೂರು ಸಾರಿ ಶುದ್ಧಿಮಾಡಿದ ನಿರ್ಜನವಾದ ಕೊಠಡಿಯಲ್ಲಿ ಹಗಲುಹೊತ್ತು ಮಲಗಿಸಿ ಆ ಕೊಠಡಿಯಲ್ಲಿ ವಿಭೂತಿ, ಹೂವು, ತಗ್ಗಿಎಲೆ, ಅವರೆ, ಹುರುಳಿ, ಮೊದಲಾದ ಕಾಳುಗಳನ್ನೂ ಪಾಯಸ, ಅನ್ನ, ಸಾಸಿವೆಗಳನ್ನೂ ಅಲ್ಲಲ್ಲಿ ಸುರಿದು ಹರಡಿ ಅರಗಿನ ತೈಲದಲ್ಲಿ ಬತ್ತಿಯನ್ನು ಅದ್ದಿ ದೀಪವನ್ನು ಉರಿಯುವಂತೆ ಮಾಡಿ ಕೊಳೆಯಿಲ್ಲದಂತೆ ಮಾಡಬೇಕು. ಪರಿಚಾರಕರು ಸ್ತ್ರೀಸಂಗ, ಮದ್ಯಪಾನ, ಮಾಂಸಾಹಾರಗಳನ್ನು ಬಿಟ್ಟು ಮಗುವಿಗೆ ಉಪಚಾರ ಮಾಡಬೇಕು. ಆ ಮಗುವಿನ ಶರೀರವನ್ನು ಹಳೇತುಪ್ಪದಿಂದ ಲೇಪಮಾಡಿ ಕಳ್ಳಂಗಡಲೆ, ಬೇವು, ತಗ್ಗಿ, ಕಕ್ಕೆ, ಹೆಬ್ಬೇವು, ಹೆಮ್ಮರ, ನೇರಳೆ, ಮುಟ್ಟಮಾವು, ಗಂಜಣಿಹುಲ್ಲು, ನಾಯಿಬೇಲ, ಉತ್ತರಣೆ, ಪಾದರಿ, ಕೆಂಪುನುಗ್ಗೆ, ಎಲವುಸಂಧಿ, ಗಿರಿಕರ್ಣಿಕೆ, ಬೇಲ, ಆಲ, ಅರಳಿ, ಅತ್ತಿ, ಹೂವರಶಿ, ನೀರಂಜಿ, ಈಚಲು, ಹೊಂಗೆ ಮೊದಲಾದುವುಗಳಲ್ಲಿ ಯಥಾಲಭ್ಯವಾಗುವ ತೊಗಟೆ, ಎಲೆ, ಬೇರುಗಳನ್ನು ಸೇರಿಸಿ ಕಷಾಯಮಾಡಿ ಆ ಕಷಾಯವು ಸುಖೋಷ್ಣವಾಗಿರುವಾಗ ಅದರಿಂದ ಸ್ನಾನಮಾಡಿಸಿ ಶುಚಿಯಾದ ಒಣಗಿದ ಬಟ್ಟೆಯಿಂದ ಮೈಯ್ಯನ್ನೊರಸಿ ಅನಂತರ ಹುಲಿ, ಕಿರುಬಗಳಚರ್ಮ, ಹಾವಿನಪೊರೆ, ಕರಡಿಯಚರ್ಮ, ತುಪ್ಪ ಇವುಗಳನ್ನು ಬೆಂಕಿಗೆ ಹಾಕಿ ಬರುವ ಹೊಗೆಯಿಂದ ಮಗುವಿನ ಶರೀರವನ್ನು ಕಾಯಿಸಬೇಕು ॥೯೩–೯೮॥

ಮೂಲ—(ಬಾಲಾ) ಸರ್ವಗ್ರಹಪೀಡಾಹರಪ್ರಯೋಗಃ—

ನಾರಿಕೇಳಸ್ಯ ದುಗ್ಧಂ ಚ ತಥಾ ಸರ್ಪಿರ್ಮನಃಶಿಲಾ।
ಏತದುದ್ವರ್ತನಂ ಸರ್ವಂ ಗ್ರಹಶಾನ್ತಿಕರಂ ಪರಮ್ ॥೯೯॥

ಯಸ್ತಾಮ್ರಚೂಡವಿಹಗೋಭಯಪಾರ್ಶ್ವಪಕ್ಷ-
ಪುಚ್ಛೈರ್ಗವಾಜ್ಯಸಹಿತೈಃ ಕೃತಧೂಪನೋಽಙ್ಗೇ।
ಆರಭ್ಯ ಜನ್ಮದಿವಸಾದ್ದಿನಪಂಚಕಂ ಹಿ
ಬಾಲಸ್ಯ ತಸ್ಯ ನ ಕುತಶ್ಚನ ಭೀತಿರಸ್ತಿ ॥೧೦೦॥
ಮೃಗಾದನ್ಯಾಶ್ಚ ಮೂಲಾನಿ ಗ್ರಥಿತಾನಿ ವಿಧಾರಯೇತ್।

(ಅ।ಹೃ।ಉ।ಅ।೩) ಸರ್ವಗ್ರಹಹರಧೂಪಃ—
ಪೂತೀದಶಾಙ್ಗೀಸಿದ್ಧಾರ್ಥವಚಾಭಲ್ಲಾತದೀಪ್ಯಕೈಃ।
ಸಕುಷ್ಠೈಸ್ಸಘೃತೈರ್ಧೂಪಃ ಸರ್ವಗ್ರಹವಿಮೋಕ್ಷಣಃ ॥೧೦೧॥

ದೀಪಿಕೆ—(ಬಾಲಾ) ಎಲ್ಲಾ ಗ್ರಹಗಳ ಬಾಧೆಯನ್ನೂ ನಿವಾರಿಸುವ ಪ್ರಯೋಗ–

ತೆಂಗಿನಕಾಯಿಯ ಹಾಲು, ತುಪ್ಪ, ಮಣಶಿಲೆಗಳನ್ನು ನುಣ್ಣಗೆ ಅರೆದು ಮಕ್ಕಳ ದೇಹಕ್ಕೆ ಲೇಪಿಸಿದರೆ ಗ್ರಹಬಾಧೆಗಳು ನಿವಾರಣೆಯಾಗುತ್ತವೆ; ಉತ್ತಮವಾದ ಪ್ರಯೋಗವು ॥೯೯॥

ಕೋಳಿಪುಕ್ಕ, ಹಸುವಿನ ತುಪ್ಪಗಳನ್ನು ಕೆಂಡದಮೇಲೆ ಹಾಕಿ ಬರುವ ಹೊಗೆಯನ್ನು ಮಗುವಿಗೆ ಹುಟ್ಟಿದ ದಿನದಿಂದ ಐದು ದಿನಗಳವರೆಗೆ ಧೂಪನ ಮಾಡಿಸಿದರೆ (ಮಗುವಿನ ದೇಹವನ್ನು ಈ ಹೊಗೆಯಿಂದ ಕಾಯಿಸಿದರೆ) ಆ ಮಗುವಿಗೆ ಯಾವ ಗ್ರಹದ ಬಾಧೆಯೂ ಉಂಟಾಗುವುದಿಲ್ಲ ॥೧೦೦॥

ಹಾವುಮೆಕ್ಕೆ ಗಿಡದ ಬೇರುಗಳನ್ನು ತುಂಡುತುಂಡಾಗಿ ಕತ್ತರಿಸಿ ಮಾಲಿಕೆ (ಸರ) ಯಂತೆ ಕಟ್ಟಿ ಮಗುವಿನ ಕತ್ತಿಗೆ ಹಾಕಿದರೆ ಗ್ರಹಬಾಧೆಯಿರುವುದಿಲ್ಲ.

(ಅ।ಹೃ।ಉ।ಅ।೩) ಸರ್ವಗ್ರಹಹರ ಧೂಪವು—

ಹೊಂಗೆತೊಗಟೆ, ದಶಾಙ್ಗ, ಸಾಸಿವೆ, ಬಜೆ, ಗೇರುಬೀಜ, ಜೀರಿಗೆ, ಚಂಗಲ್ಕೋಷ್ಠಗಳನ್ನು ಚೂರ್ಣಮಾಡಿ ತುಪ್ಪ ಮಿಶ್ರಮಾಡಿ ಧೂಪನಮಾಡಿಸಿದರೆ ಸಕಲಗ್ರಹಗಳ ಬಾಧೆಗಳೂ ನಿವಾರಣೆಯಾಗುತ್ತವೆ ॥೧೦೧॥

ಮೂಲ—(ಅ।ಹೃ।ಉ।ಅ।೩) ದಶಾಂಗಾನಿ—
ವಚಾಹಿಙ್ಗುವಿಡಂಗಾನಿ ಸೈನ್ಧವಂ ಗಜಪಿಪ್ಪಲೀ।
ಪಾಠಾಪ್ರತಿವಿಷಾವ್ಯೋಷಂ ದಶಾಙ್ಗಃ ಕಶ್ಯಪೋದಿತಃ ॥೧೦೨॥

ದೀಪಿಕೆ—(ಅ।ಹೃ।ಉ।ಅ।೩) ದಶಾಙ್ಗಗಳು—

ಬಜೆ, ಹಿಙ್ಗು, ವಾಯುವಿಡಂಗ, ಸೈನ್ಧವಲವಣ, ಗಜಹಿಪ್ಪಲಿ, ಅಗಳು ಶುಂಠಿ, ಅತಿಬಜೆ, ತ್ರಿಕಟು ಇವು ಹತ್ತು ಪದಾರ್ಥಗಳನ್ನೂ ಒಟ್ಟು ಸೇರಿಸಿದರೆ ದಶಾಙ್ಗಧೂಪವಾಗುತ್ತದೆಂದು ಕಶ್ಯಪರು ಹೇಳಿದ್ದಾರೆ ॥೧೦೨॥

ಮೂಲ—(ಅ।ಹೃ।ಉ।ಅ।೩) ಗ್ರಹಹರಯೋಗಾಃ—
ಸರ್ಪಪಾನಿಮ್ಬಪತ್ರಾಣಿ ಮೂಲಮಶ್ವಖುರಾ ವಚಾ।
ಭೂರ್ಜಪತ್ರಂ ಘೃತಂ ಧೂಪಃ ಸರ್ವಗ್ರಹನಿವಾರಣಃ ॥೧೦೩॥

ಸೃಗಾಲವಿನ್ನಾವ್ಯಸ್ತಾ ಚ ಕಲ್ಕಿತೈಸ್ತೈರ್ಘೃತಂ ಪಚೇತ್ ।
ದಶಮೂಲರಸಕ್ಷೀರಪಕ್ವಂ ತದ್ಗ್ರಹಜಿತ್ಪರಮ್ ॥೧೦೪॥
ರಾಸ್ನಾದ್ವ್ಯಂಶುಮತೀವೃದ್ಧಪಂಚಮೂಲವಚಾಘನಾತ್ ।
ಕ್ವಾಥೇ ಸರ್ಪಿಃ ಪಚೇತ್ಪಿಷ್ಟೈಃ ಸಾರಿವಾವ್ಯೋಷಚಿತ್ರಕೈಃ ॥೧೦೫॥
ಪಾಠಾವಿಡಙ್ಗಮಧುಕಪಯಸ್ಯಾಹಿಙ್ಗುದಾರುಭಿಃ ।
ಸಗ್ರನ್ಥಿಕೈಸ್ಸೇನ್ದ್ರಯವೈಃ ಶಿಶೋಸ್ತತ್ಸತತಂ ಹಿತಮ್ ॥೧೦೬॥
ಸರ್ವರೋಗಗ್ರಹಹರಂ ದೀಪನಂ ಬಲವರ್ಣದಮ್ ।
ಸಾರಿವಾಸುರಭೀಬ್ರಾಹ್ಮೀಶಙ್ಖನೀಕೃಷ್ಣಸರ್ಷಪೈಃ ॥೧೦೭॥
ವಚಾಶ್ವಗನ್ಧಾಸುರಸಾಯುಕ್ತೈಃ ಸರ್ಪಿರ್ವಿಪಾಚಯೇತ್ ।
ತನ್ನಾಶಯೇದ್ಗ್ರಹಾನ್ ಸರ್ವಾನ್ ಪಾನೇನಾಭ್ಯಂಜನೇನ ಚ ॥೧೦೮॥
ಗೋಶೃಙ್ಗಲೋಮವಾಲಾಹಿನಿರ್ಮೋಕಪೃಷದಂಶವಿಟ್ ।
ನಿಮ್ಬಪತ್ರಾಜ್ಯಕಟುಕಾಮದನಂ ಬೃಹತೀದ್ವಯಮ್ ॥೧೦೯॥
ಕಾರ್ಪಾಸಾಸ್ಥಿಯವಚ್ಛಾಗರೋಮದೇವಾಹ್ವಸರ್ಷಪಮ್ ।
ಮಯೂರಪಿಚ್ಛಶ್ರೀವಾಸಂ ತುಷಕೇಶಂ ಸರಾಮಠಮ್ ॥೧೧೦॥
ಮೃದ್ಭಾಣ್ಡೇ ಬಸ್ತಮೂತ್ರೇಣ ಭಾವಿತಂ ಶ್ಲಕ್ಷ್ಣಚೂರ್ಣಿತಮ್ ।
ಧೂಪನಾರ್ಥಂ ಹಿತಂ ಸರ್ವಭೂತೇಷು ವಿಷಮೇ ಜ್ವರೇ ॥೧೧೧॥
ಘೃತಾನಿ ಭೂತವಿದ್ಯಾಯಾಂ ವಕ್ಷ್ಯನ್ತೇ ಯಾನಿ ತಾನಿ ಚ ।
ಯುಂಜ್ಯಾತ್ತಥಾ ಬಲಿಂ ಹೋಮಂ ಸ್ನಪನಂ ಮನ್ತ್ರತನ್ತ್ರವಿತ್ ॥೧೧೨॥
ಪೂತೀಕರಂಜತ್ವಕ್ಪತ್ರಂ ಕ್ಷೀರಿಭ್ಯೋ ಬರ್ಬರಾದಪಿ ।
ತುಮ್ಬೀವಿಶಾಲಾರಳುಕಾಶಮೀಬಿಲ್ವಕಪಿತ್ಥಕಾಃ ॥೧೧೩॥
ಉತ್ಕ್ವಾಥ್ಯ ತೋಯಂ ತದ್ರಾತ್ರೌ ಬಾಲಾನಾಂ ಸ್ನಪನಂ ಶಿವಮ್ ।
ಅನುಬನ್ಧಾನ್ಯಥಾ ಕೃಚ್ಛ್ರಂ ಗ್ರಹಾಪಾಯೇಪ್ಯುಪದ್ರವಾನ್ ॥೧೧೪॥
ಬಾಲಾಮಯನಿಷೇಧೋಕ್ತಭೇಷಜೈಃ ಸಮುಪಾಚರೇತ್ ॥೧೧೫॥

ಇತಿ ಕೌಮಾರತನ್ತ್ರಂ ಸಮಾಪ್ತಮ್

ದೀಪಿಕೆ—(ಅ।ಹೃ।ಉ।ಅ।೩) ಗ್ರಹಹರಯೋಗಗಳು—

ಸಾಸಿವೆ, ಬೇವಿನಸೊಪ್ಪು, ಗಿರಿಕರ್ಣಿಕೆಯ ಬೇರು, ಬಜೆ, ಭುಜಪತ್ರೆ, ಇವುಗಳ ಚೂರ್ಣಕ್ಕೆ ತುಪ್ಪ ಮಿಶ್ರಮಾಡಿ ಧೂಪನ ಮಾಡಿಸಿದರೆ ಸರ್ವಗ್ರಹಹರವು ॥೧೦೩॥

ತುರುಚದ ಬೇರು, ಮಾವಿನಬೀಜ, ಗ್ರಂಥಿಕತಗರ, ಮೆಣಸು, ಕಾಕೋಳ್ಯಾದಿಮಧುರಗಣ ದ್ರವ್ಯಗಳು, ಒಂದೆಲೆಹೊನ್ನೆ, ಕೊನ್ನಾರಿಗೆಡ್ಡೆ ಇವುಗಳ ಕಲ್ಕ, ದಶಮೂಲದ ಕಷಾಯ, ಹಾಲು, ತುಪ್ಪಗಳನ್ನು ಸೇರಿಸಿ ಘೃತವನ್ನು ತಯಾರಿಸಿ ಮಗುವಿಗೆ ಕುಡಿಸಿದರೆ ಸರ್ವಗ್ರಹಗಳೂ ನಿವಾರಣೆಯಾಗುತ್ತವೆ. (ತುಪ್ಪ, ಚಿನ್ನ, ಬೆಲ್ಲ ಮೊದಲಾದುವು ಮಧುರವರ್ಗವೆಂದು ಕೆಲವರ ಮತ) ॥೧೦೪॥

ದುಂಪರಾಶ್ಮೆ, ಮೂರೆಲೆಹೊನ್ನೆ, ಒಂದೆಲೆಹೊನ್ನೆ, ಬಿಲ್ವಪತ್ರೆ, ತಗ್ಗಿ, ಹೆಮ್ಮರ, ಶಿವನಿ, ಪಾದರಿಬೇರು, ಬಜೆ, ಕೊನ್ನಾರಿಗೆಡ್ಡೆಗಳ ಕಷಾಯಕ್ಕೆ ತುಪ್ಪ ವನ್ನು ಸೇರಿಸಿ ಸೊಗದೆಬೇರು, ತ್ರಿಕಟು, ಚಿತ್ರಮೂಲ, ಅಗಳುಶುಂಠಿ, ವಾಯು ವಿಡಂಗ, ಅತಿಮಧುರ, ಆಷಾಡಿಬೇರು, ಇಂಗು, ದೇವದಾರು, ಗ್ರಂಥಿಕತಗರ, ಕೊಡಶಿಗೆಬೀಜ, ಇವುಗಳ ಕಲ್ಕವನ್ನು ಮಿಶ್ರಮಾಡಿ ತಯಾರಿಸಿದ ಘೃತವನ್ನು ಗ್ರಹಗ್ರಸ್ತ ಬಾಲಕರಿಗೆ ಕುಡಿಸಿದರೆ ಸಕಲ ಗ್ರಹಬಾಧೆಯನ್ನೂ, ಬಾಲಕರ ಸಕಲ ರೋಗಗಳನ್ನೂ ನಿವಾರಣೆ ಮಾಡುತ್ತದೆ. ಜೀರ್ಣಶಕ್ತಿಯನ್ನು ಹೆಚ್ಚಿಸಿ ಬಲವರ್ಣ ಗಳನ್ನುಂಟುಮಾಡುತ್ತದೆ ॥೧೦೫–೧೦೬॥

ಸೊಗದೆಬೇರು, ಕರಿಯತುಳಸಿ, ಒಂದೆಲಗ, ಗಿರಿಕರ್ಣಿಕೆ, ಕರಿಸಾಸಿವೆ, ಬಜೆ, ಅಶ್ವಗಂಧಿಬೇರು, ಬಿಳಿತುಳಸಿ (ಶ್ರೀತೊಳಸಿ) ಗಳ ಕಲ್ಕವನ್ನು ಸೇರಿಸಿ ತಯಾರ್ಮಾಡಿದ ಘೃತವನ್ನು ಮಕ್ಕಳಿಗೆ ಕುಡಿಸಿದರೆ ಸಕಲ ಗ್ರಹಗಳೂ ನಿವಾರಿಸ ಲ್ಪಡುತ್ತವೆ ॥೧೦೭–೧೦೮॥

ಹಸುವಿನ ಕೊಂಬು, ಚರ್ಮದ ಮೇಲಿನ ಮತ್ತು ಬಾಲದ ಕೂದಲು, ಹಾವಿನಪೊರೆ, ಬೆಕ್ಕಿನಮಲ, ಬೇವಿನಸೊಪ್ಪು, ತುಪ್ಪ, ಕಟುಕರೋಹಿಣಿ, ಮಗ್ಗಾರೆ ಕಾಯಿ, ಹೆಗ್ಗುಳ, ನೆಲಗುಳ್ಳ, ಹತ್ತಿಯಬೀಜ, ಯವೆ, ಆಡಿನ ತುಬಟ, ದೇವದಾರು, ಸಾಸಿವೆ, ನವಿಲಗರಿ, ಸಾಂಬ್ರಾಣಿ, ಹೊಟ್ಟು, ಕೂದಲು, ಹಿಪ್ಪು ಇವನ್ನೆಲ್ಲಾ ಮಡಕೆಗೆ ಹಾಕಿ ಆಡಿನ ಮೂತ್ರದಲ್ಲಿ ನೆನೆಶಿ ಒಣಗಿಸಿ ನುಣ್ಣಗೆ ಪುಡಿಮಾಡಿಟ್ಟು ಕೊಂಡಿದ್ದು ಹೊಗೆಯನ್ನು ಕುಡಿಸಿದರೆ ಸಕಲ ಗ್ರಹಬಾಧೆಗಳೂ ನಿವಾರಿಸಲ್ಪಡು ತ್ತವೆ. ವಿಷಮಜ್ವರವೂ ಬಿಡಲ್ಪಡುತ್ತದೆ ॥೧೦೯–೧೧೧॥

ಭೂತಗ್ರಹ ಚಿಕಿತ್ಸೆಯಲ್ಲಿ ಹೇಳಿರುವ ಘೃತಗಳನ್ನೂ, ಮನ್ತ್ರತನ್ತ್ರಗಳನ್ನೂ ಪ್ರಯೋಗಿಸಿ ಯಥಾವಿಧಿಯಾಗಿ ಬಲಿದಾನ, ಹೋಮ, ಸ್ನಾನಗಳನ್ನು ಮಾಡಿಸ ಬೇಕು ॥೧೧೨॥

ತವಸದತೊಗಟೆ, ಮತ್ತು ಎಲೆ, ಆಲ ಮೊದಲಾದ ಕ್ಷೀರವೃಕ್ಷಗಳ ಮತ್ತು ಮತ್ತಿ ಇವುಗಳ ತೊಗಟೆ, ಗಂಟುಭಾರಂಗಿ, ಸೋರೆ, ದಾಸಮೆಕ್ಕೆ, ಹೆಮ್ಮರ, ಬನ್ನಿ, ಬಿಲ್ವಪತ್ರೆ, ಬೇಲ, ಇವುಗಳ ಬೇರು, ಇವೆಲ್ಲವನ್ನೂ ಸೇರಿಸಿ ಕಷಾಯಮಾಡಿ ಗ್ರಹಪೀಡಿತರಾದ ಬಾಲಕರಿಗೆ ರಾತ್ರಿಯ ಹೊತ್ತು ಸ್ನಾನಮಾಡಿಸಿದರೆ ಗ್ರಹಗಳು ನಿವಾರಣೆಯಾಗಿ ಬಾಲಕರು ಪುಷ್ಟಿಯಾಗಿ ಬೆಳೆಯುತ್ತಾರೆ ॥೧೧೩–೧೧೪॥

"ಗ್ರಹೋಪಸೃಷ್ಟಾ ಬಾಲಾಸ್ತು ದುಶ್ಚಿಕಿತ್ಸ್ಯತಮಾ ಮತಾಃ" ಎಂದು ಧನ್ವಂತರಿಯು ಹೇಳಿರುವುದರಿಂದ ಗ್ರಹಾವೇಶಕಾಲದಲ್ಲಿ ಪ್ರಕೋಪಗೊಂಡ ದೋಷ ಗಳನ್ನು ಸಮಸ್ಥಿತಿಗೆ ತರತಕ್ಕ ಔಷಧಿಗಳನ್ನು ಪ್ರಯೋಗಿಸಿದರೆ ಗ್ರಹಪೀಡೆಯ ಕಾಲದಲ್ಲಿ ಮಕ್ಕಳಿಗೆ ಬರುವ ಉಪರೋಗಗಳೆಲ್ಲಾ ನಿವಾರಣೆಯಾಗುತ್ತವೆ ॥೧೧೫॥

ಇಲ್ಲಿಗೆ ಕೌಮಾರತನ್ತ್ರವು ಸಮಾಪ್ತಿಯಾಗಿರುತ್ತದೆ.

प्रसूतितन्त्रम्, स्त्रीरोगाः, कौमारभृत्यञ्च

॥ ओं नमो धन्वन्तरये ॥

प्रसूतितन्त्रम्

मङ्गलम्

धन्वन्तरिं नमस्कृत्य वेदाचार्यान्गुरूंस्तथा।
प्रसूतितन्त्रं वक्ष्यामि यथागमपरिस्फुटम् ॥ ॥ १ ॥

प्रसूतितन्त्रदीपिका

श्रीकण्ठं गिरिजापतिं सुरवरं नत्वाश्विनावत्रिजं
वेदाचार्यबहुश्रुतं च चरकं भक्त्या मया सद्गुरून्।
ग्रन्थस्य प्रसवाभिधस्य विवृतिः कर्णाटलोकप्रिया
दीपाख्या ललितैर्वचोभिरधुना शास्त्रानुगा कथ्यते ॥ २ ॥
त्रिमकूटे (श्रीत्रिकूटे) पुरेऽवात्सीद्विप्रो नञ्जुण्डदीक्षितः।
भारद्वाजान्वयस्सामवेदज्योतिषयोर्बुधः ॥ ३ ॥
तत्पुत्रः श्रीनृसिंह्माख्यो भट्टाचार्योपनामकः।
समवाप्तसुशास्त्रार्थो गुरुपादकृपावशात् ॥ ४ ॥
महीशूरपुरीयायां पूर्णायां कृपया प्रभोः।
आयुर्वेदीयशालायां छात्राणां पाठकश्चिरात् ॥ ५ ॥
प्रसूतितन्त्रविवृतिं कुरुते तन्त्रदीपिकाम्।

अवतरणिका—तन्त्रस्योद्देशः

अथ खलु प्रसूतितन्त्रं नाम—

गर्भोत्पत्तिकराणां शुक्रशोणितादीनां भावविशेषाणां प्राकृत-वैकृतलक्षणानि, वैकृतानां प्रकृत्यवस्थापनार्थं साधनप्रकाराणि, शरीरावयवादीनां ज्ञानोपायाः, ऋतुनिरूपणम्, ऋतुमत्या नियमाः, नियमानपालने दोषाः, गर्भाधाने योग्यस्त्रीपुरुषलक्षणानि, निषिद्धकालः, स्त्रीपुंसामवस्थानं, विकृतगर्भोत्पत्तौ हेतुः, गर्भोत्पत्तिकथनं, गर्भोत्पत्तेराप्रसूतिपर्यन्तं स्त्रीणां यथाकालमासेव्यमानान्याहारविहारनियमविशेषाणि, तत्र मिथ्याप्रयुक्त-

जातानां व्याधीनां लक्षणपूर्वकचिकित्सितानि, गर्भस्रावपातयोर्निर्णयस्तच्चिकित्सितं, मूढगर्भविवेचनपुरस्सरं शल्यतन्त्रशस्त्रविचारणकथनं, सुखप्रसवविचाराः, सूतिकागारनिर्माणकथनं, प्रसूतिसामग्र्युपकरणसंभाराः, गर्भविकारास्तच्चिकित्सितानि, सूतिकोपचारकथनं, तज्जन्यव्याधीनां निवारणोपायाश्च, यस्मिन्व्याख्यास्यन्ते तत्प्रसूतितन्त्रम् ॥ २ ॥

मूलम्—आयुर्वेदे प्रसूतितन्त्रस्य स्थानम्—

अष्टाङ्गायुर्वेदस्यैकाङ्गभूतबालतन्त्रवर्णनावसरे प्रसूत्यनन्तरमेव बालोपचारतद्व्याधीनाञ्च विवरणस्यावश्यकत्वात् प्रथमं तावत्प्रसूतिविचारो व्याख्यातुं युज्यत एव। प्रसूतेर्गर्भाधानमूलत्वात् गर्भाधानमूलभूतशुक्रशोणितादीनां भावविशेषाणामधुना विचारः क्रियते ॥ ३ ॥

यथा—

प्रथमोऽध्यायः

शुक्रशोणितादीनां विचाराः

शुक्रशोणितादीनां प्राकृतवैकृतलक्षणानि—

(सु। शा।)—शुद्धशुक्रलक्षणम्—

स्फटिकाभं द्रवं स्निग्धं मधुरं मधुगन्धि च।
शुक्रमिच्छन्ति केचित्तु तैलक्षौद्रोपमं तथा ॥ ४ ॥

अन्यच्च—

शुक्लं शुक्रं गुरु स्निग्धं मधुरं बहुलं बहु।
घृतमाक्षिकतैलाभं सद्गर्भाय प्रवर्तते ॥ ५ ॥

(अ। हृ।)—शुद्धरक्तलक्षणम्—

मधुरं लवणं किञ्चिदशीतोष्णमसंहतम्।
पद्मेन्द्रगोपहेमाविशशलोहितलोहितम्।
लोहितं प्रवदेच्छुद्धं तनोस्तेनैव च स्थितिः ॥ ६ ॥

(सु। शा।)—शुद्धार्तवलक्षणम्—

शशासृक्प्रतिमं यत्तु यद्वा लाक्षारसोपमम् ॥ ७ ॥

तदार्तवं प्रशंसन्ति यद्वासो न विरञ्जयेत् ।

अन्यच्च—

मासान्निष्पिच्छदाहार्तिं त्रयोरात्रानुबन्धि यत् ॥ ८ ॥
नैवातिबहुळात्यल्पमार्तवं शुद्धमादिशेत् ।

(सु। शा।)—जीवरक्तशुद्धार्तवयोर्विशेषाः—

जीवतुल्यं रक्तं जीवरक्तं जीवच्छरीरे रक्तदर्शनान्मृतशरीरे चादर्शनात् । स खलु आप्यो रसधातुः यकृत्प्लीहानौ प्राप्य रागमुपैति लोहितत्वं च गच्छति ॥ ९ ॥

उक्तञ्च—

रञ्जितास्तेजसात्वापश्शरीरस्थेन देहिनाम् ।
अव्यापन्नाः प्रसन्नेन रक्तमित्यभिधीयते ॥ १० ॥

पाञ्चभौतिकमपरे जीवरक्तमाहुराचार्याः । यथा—

विस्रता द्रवता रागः स्पन्दनं लघुता तथा ।
भूम्यादीनां गुणा ह्येते दृश्यन्ते चात्र शोणिते ॥ ११ ॥

व्याख्या—

आमगन्धिता, द्रवभावः, रक्तवर्णता, किञ्चिचलनं, अगुरुत्वञ्चेति भूम्यादिपञ्चभूतानां गुणा यस्माच्छोणिते दृश्यन्ते तस्माद्रक्तं पाञ्चभौतिकम् ॥

(सु। शा।)—आर्तवस्वरूपम्—

आप्यो रसधातुः मासेन शुक्रं भवति पुंसां स्त्रीणाञ्चार्तवम् । रसादेव स्त्रिया रक्तं रजस्संज्ञं प्रपद्यते । आप्यो रसधातू रागमुपैति लोहितत्वं च गच्छति । एतच्च रजोरूपं रक्तं रसजन्यमपि धातुशोणितवन्न शीघ्रं जायते । किन्तु शुक्रवन्मासेनैव । सोमगुणभूयिष्ठरससंभवादपि आर्तवशोणितं त्वाग्नेयम् । जीवरक्तं तु समशीतोष्णगुणम् । रक्तलक्षणमार्तवं गर्भकृच्च ॥ १२ ॥

(पि। एस्। वारियर्)—शोणितगर्भबीजविज्ञानम्—

आर्तवम्—ऋतुकालजं शोणितम् । रजोदर्शनं—ऋतुसंज्ञा, अपत्यजननकालः । केचित्तु आर्तवं स्त्रीणां वृषणयोर्मासि-

मास्युपचीयमानो द्रवविशेष इति ब्रुवते । शुक्रं अन्त्यधातोः परिपक्कांश इति । शुक्रबीजं पौरुषम् । आर्तवबीजं यौवतमिति । कैश्चित्तु शुक्रं चार्तवं च शुक्रार्तवमिति समासः क्रियते । तत्पक्षे आर्तवं द्विविधं—शुक्रार्तवं, रक्तार्तवमिति । शुक्रार्तवं पूर्वोक्तम् । रक्तार्तवं रजस्वलारक्तमिति भेदः । उभयोरपि ऋतुकालोत्पन्नत्वात् इयं संज्ञा अनुगतार्था । अत्र तु आर्तवशब्देन शुक्रार्तवमेव व्यवह्रियते । रक्तार्तवं तु रजश्शब्देन कदाचित्पुष्पशब्देन चेति न क्वचिदपि भ्रमावकाशः ॥ १३ ॥

(सु । शा ।)—रक्तार्तवयोः स्वभावभेदः—

रक्तार्तवयोः सौम्यरसभूतयोरपि आर्तवशोणितमाग्नेयम् । कुतः ? अग्नीषोमीयत्वाद्गर्भस्य । सौम्यं शुक्रमार्तवमाग्नेयम् । ताभ्यामग्नीषोमीयो गर्भो भवति । यदि अग्नीषोमीयत्वात् गर्भस्येत्यत्र आर्तवशोणितयोः स्वभावभेदः तदा अर्तवस्य आग्नेयत्वे उक्ते शोणितस्यापि आग्नेयत्वमुक्तमेवेति ॥ १४ ॥

(सु । शा । अ । २)—अशुद्धशुक्रशोणितयोर्लक्षणचिकित्सिते—

वातपित्तश्लेष्मशोणितकुणपग्रन्थिपूतिपूयक्षीणमूत्रपुरीषरेतसः प्रजोत्पादने न समर्था भवन्ति ॥ १५ ॥

तेषु वातवर्णवेदनं वातेन, पित्तवर्णवेदनं पित्तेन, श्लेष्मवर्णवेदनं श्लेष्मणा, शोणितवर्णवेदनं कुणपगन्ध्यनल्पं च रक्तेन, ग्रन्थिभूतं श्लेष्मवाताभ्यां, पूतिपूयनिभं पित्तश्लेष्मभ्यां, क्षीणं प्रागुक्तं पित्तमारुताभ्यां मूत्रपुरीषगन्धि सन्निपातेनेति । तेषु कुणपग्रन्थिपूतिपूयक्षीणरेतसः कृच्छ्रसाध्याः, मूत्रपुरीषरेतसस्त्वसाध्याः साध्यमन्यच्चेति ॥ १६ ॥

आर्तवमपि त्रिभिर्दोषैश्शोणितचतुर्थैः पृथग्द्वन्द्वैः समस्तैश्चोपसृष्टमबीजं भवति । तदपि दोषवर्णवेदनादिभिर्विज्ञेयम् । तेषु कुणपग्रन्थिपूतिपूयक्षीणमूत्रपुरीषप्रकाशमसाध्यं साध्यमन्यच्चेति ॥ १७ ॥

तत्र वातदोषेण दूषितयोश्शुक्रशोणितयोररुणकृष्णौ वर्णौ तोदभेदादिवातवेदनाश्च । पित्तेन दूषितयोः पीतनीले वर्णौ

